
ಸಮಗ್ರ ದಾಸ ಸಾಹಿತ್ಯ

ಸಂಪುಟ : ೩೫ - ಭಾಗ ೨



ಆಸೂರಿ ರಾಮಸ್ವಾಮಿದಾಸರು
ಮತ್ತು
ಇತರ ಶ್ರೀ ವೈಷ್ಣವ ಹರಿದಾಸರ ಕೀರ್ತನೆಗಳು

ಸಮಗ್ರ ದಾಸ ಸಾಹಿತ್ಯ

ಸಂಪುಟ : ೩೫, ಭಾಗ -೨

ಆಸೂರಿ ರಾಮಸ್ವಾಮಿದಾಸರು ಮತ್ತು ಇತರ ಶ್ರೀವೈಷ್ಣವ ಹರಿದಾಸರ ಕೀರ್ತನೆಗಳು

ಸಂಪಾದಕರು

ಪ್ರೊ॥ ನಾ. ಗೀತಾಚಾರ್ಯ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಬೆಂಗಳೂರು

SAMAGRA DASA SAHITYA SAMPUTA - 35 Part 2 :
Asoori Ramaswamy Dasaru Mattu Ithara Shri Vaishnava Haridasara Keerthanegalu, Edited by Prof. N. Geethacharya. Published by Sri. Y. K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 147 + ೪೧೮

ಪ್ರಥಮ ಮುದ್ರಣ : ೨೦೦೩
ಪ್ರತಿ : ೧೨೫೦.

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು – ೫೬೦ ೦೫೨.

ಮುದ್ರಕರು :

ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩.

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ

ಡಾ. ಟಿ. ಎನ್. ನಾಗರತ್ನ

ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಮಂದಾಕಿನಿ

ಪ್ರೊ. ಸುಧಾಕರ

ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಆವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್
ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸ ಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮೂವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ–ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' - ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೇ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ-ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ-ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು–ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

೧. ಪ್ರವೇಶಿಕೆ

ಈ ಸಮಗ್ರ ದಾಸ ಸಾಹಿತ್ಯ ಸಂಪುಟ ೩೫ರಲ್ಲಿ ಎರಡು ಭಾಗಗಳಿವೆ. ಈ ಎರಡೂ ಭಾಗಗಳಲ್ಲಿ ಶ್ರೀವೈಷ್ಣವ ಕೀರ್ತನೆಗಳಿವೆ. ಸಂಪುಟದ ೧೮ ಭಾಗ–೪ರಲ್ಲಿ ಮಹಿಳಾ ಶ್ರೀವೈಷ್ಣವ ಕೀರ್ತನೆಗಳಿವೆ ಕನ್ನಡ ಹರಿದಾಸ ಸಾಹಿತ್ಯ ಚರಿತ್ರೆಯಲ್ಲಿ ಶ್ರೀ ವೈಷ್ಣವ ಕೀರ್ತನೆಗಳು ಎನ್ನುವುದೇ ಹೊಸ ಮಾತು. ಕನ್ನಡದಲ್ಲಿ ಶ್ರೀವೈಷ್ಣವ ಸಾಹಿತ್ಯವೇ ಇಲ್ಲ ಎಂಬ ಅಭಿಪ್ರಾಯದಲ್ಲಿದ್ದ ಸಾಹಿತ್ಯ ಚರಿತ್ರಕಾರರಿಗೆ ಇದು ಹೊಸ ವಿಚಾರ. ಈ ಅಭಿಪ್ರಾಯದ ಹಿನ್ನೆಲೆಯಲ್ಲಿಯೇ ಸಾಹಿತ್ಯ ಚರಿತ್ರೆಯಲ್ಲಿ ಅಲ್ಲಲ್ಲಿ ಕೆಲವು ಮಾತುಗಳು ಕಾಣಿಸಿಕೊಂಡಿರುವುದನ್ನು ಬಿಟ್ಟರೆ ಶ್ರೀವೈಷ್ಣವ ಸಾಹಿತ್ಯದ ಅಸ್ತಿತ್ವವನ್ನು ಗುರುತಿಸುವ ಅಥವಾ ಹುಡುಕುವ ಪ್ರಯತ್ನವೇ ಈವರೆಗೆ ಆಗಿರಲಿಲ್ಲ. ಈಚೆಗೆ ೧೯೯೦ರ ದಶಕದಿಂದ ಈ ಬಗೆಯ ಪ್ರಯತ್ನಗಳು ಕಾಣಿಸಿಕೊಂಡು ಕನ್ನಡ ಸಾಹಿತ್ಯದಲ್ಲಿ ಶ್ರೀವೈಷ್ಣವ ಹರಿದಾಸಸಾಹಿತ್ಯವೂ ಇದೆ ಎಂಬುದನ್ನು ಪ್ರತಿಪಾದಿಸಿರುವುದು ಕಂಡುಬಂದಿದೆ. ಈ ನಿಟ್ಟಿನಲ್ಲಿ ಹಲವು ಲೇಖನಗಳು, ಪ್ರಕಟನೆಗಳು ಬಂದಿವೆಯಾದರೂ ಎಲ್ಲ ಕೀರ್ತನೆಗಳನ್ನು ಸಂಗ್ರಹಿಸಿ ಸಮಗ್ರ ಸಂಪುಟವಾಗಿ ಕಾಣಿಸಿಕೊಳ್ಳುತ್ತಿರುವುದಕ್ಕೆ ಈ ಸಂಪುಟವೇ ನಾಂದಿಯಾಗಿದೆ. ಈ ಮೂಲಕ ೮೦ರ ದಶಕದಲ್ಲಿ ಬೆಳಕಿಗೆ ಬಂದ ಅದ್ವೈತ ಹರಿದಾಸ ಸಾಹಿತ್ಯದೊಂದಿಗೆ ವಿಶಿಷ್ಟಾದ್ವೈತವೂ ಸೇರಿಕೊಂಡು ಕನ್ನಡ ಹರಿದಾಸ ಸಾಹಿತ್ಯ ಎಂದರೆ ವೈದಿಕಧರ್ಮದ ಮುಖ್ಯ ತತ್ವಗಳಾದ ಈ ಮೂರೂ ಧರ್ಮದ ಸಮಾನ ಪ್ರತಿಪಾದನೆ ಎಂಬ ಹೊಸ ಚಿಂತನೆಗೂ ಈ ಸಂಪುಟ ನಾಂದಿಯಾಗಲಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟಾದ್ವೈತ ತತ್ವದ ಕೀರ್ತನೆಗಳ ಪ್ರಕಟನೆ ಒಂದು ಮಹತ್ವದ ಹೆಜ್ಜೆ. ಈ ಯೋಜನೆಯಲ್ಲಿ ಮೂರು ಸಂಪುಟಗಳಲ್ಲಿ ಹೊರ ಬಂದಿರುವ ಈ ಶ್ರೀವೈಷ್ಣವ ಕೀರ್ತನೆಗಳ ಸಂಖ್ಯಾಬಾಹುಳ್ಯವೇ ಇದರ

ಪ್ರಾಮುಖ್ಯತೆಯನ್ನು ಹೇಳಬಹುದಾದರೂ ಇದರ ಒಳಹೊಕ್ಕು ನೋಡಿದಾಗ ಸಂಖ್ಯೆಯಷ್ಟೇ ಅಲ್ಲ ಈ ಕೀರ್ತನೆಗಳ ಗುಣವಿಶಿಷ್ಟತೆಗಳೂ ಈ ಸಾಹಿತ್ಯದ ಪ್ರಾಮುಖ್ಯತೆಯ ಕುರುಹುಗಳಾಗಿವೆ ಎಂದು ಯಾರಿಗಾದರೂ ಅನ್ನಿಸದಿರದು. ಕನ್ನಡ ಕೀರ್ತನ ಸಾಹಿತ್ಯಕ್ಕೇ ಈ ಶ್ರೀವೈಷ್ಣವ ಕೀರ್ತನೆಗಳು ಹೊಸ ಭಾಷ್ಯವನ್ನು ಬರೆಯಬಲ್ಲಷ್ಟು ಮೌಲಿಕವಾಗಿವೆ. ಅಷ್ಟೇ ಏಕೆ ಕನ್ನಡಸಾಹಿತ್ಯಕ್ಕೇ ಹೊಸ ವ್ಯಾಖ್ಯಾನವನ್ನು ಇವು ನೀಡಬಲ್ಲವಾಗಿವೆ. ಕೀರ್ತನ ಸಾಹಿತ್ಯದ ಎಲ್ಲ ವೈವಿಧ್ಯತೆಗಳ ಲಕ್ಷಣಗಳು ಇದರಲ್ಲೂ ಇರುವುದರ ಜೊತೆಗೆ ವಿಶಿಷ್ಟಾದ್ವೈತದ ಕೆಲವು ವಿಶಿಷ್ಟ ಲಕ್ಷಣಗಳು ಮೊದಲಬಾರಿಗೆ ಕನ್ನಡ ಸಾಹಿತ್ಯಕ್ಕೆ ಪರಿಚಯವಾಗುತ್ತಿವೆ. ವಿಶಿಷ್ಟಾದ್ವೈತದ ತತ್ವಗಳು ಅತ್ಯಂತ ಸರಳವಾಗಿ ಮತ್ತು ಅಷ್ಟೇ ಸಮರ್ಥವಾಗಿ ಈ ಕೀರ್ತನೆಗಳಲ್ಲಿ ಕಾಣಿಸಿಕೊಳ್ಳುವ ಮೂಲಕ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ ಇಲ್ಲ ಎಂಬ ಈವರೆಗಿದ್ದ ಸಿದ್ಧ ಹೇಳಿಕೆಯನ್ನು ಈ ಸಂಪುಟಗಳು ಬದಲಾಯಿಸಿವೆ. ಬೇಲೂರು ವೈಕುಂಠದಾಸರ ತತ್ವ ಇಲ್ಲಿ ಖಚಿತತೆಯನ್ನು ಪಡೆದುಕೊಳ್ಳುತ್ತದೆ. ಲಕ್ಷ್ಮೀಶನು ಕೀರ್ತನಕಾರನಾಗಿ ಸ್ಥಾನ ಪಡೆಯುವುದರ ಜೊತೆಗೆ ಅವನ ಮತ–ಧರ್ಮವೂ ನಿಶ್ಚಿತವಾಗುತ್ತದೆ. ವಿಮರ್ಶಕರು ಗುರುತಿಸಿರುವ ಆಧುನಿಕ ಮಹಿಳಾ ಲೇಖಕಿ ತಿರುಮಲಾಂಬ ಇಲ್ಲಿ ಕೀರ್ತನಕಾರಳಾಗಿಯೂ ಅಸ್ತಿತ್ವ ಪಡೆದುಕೊಳ್ಳುತ್ತಾಳೆ. ಉಳಿದ ಎಲ್ಲ ಕೀರ್ತನಕಾರರೂ ಕನ್ನಡ ಸಾಹಿತ್ಯಕ್ಕೆ ಹೊಸ ಪರಿಚಯವಾಗಿದ್ದಾರೆ. ಇವರಲ್ಲಿ ಕನಕ ಪುರಂದರರಷ್ಟೇ ಸಮರ್ಥರಾದ ಕೀರ್ತನಕಾರರೂ ಇದ್ದಾರೆ.

ಈ ಶ್ರೀವೈಷ್ಣವ ಕೀರ್ತನ ಸಂಪುಟಗಳು ಕನ್ನಡ ಸಾಹಿತ್ಯದ ಮುಖ್ಯ ಕವಿಗಳಾದ ಕನಕದಾಸ, ಲಕ್ಷ್ಮೀಶ ಮತ್ತು ಕುಮಾರವ್ಯಾಸರನ್ನು ಪುನರ್‌ಮೌಲ್ಯವಿವೇಚನೆಗೆ ಒಳಪಡಿಸಬಲ್ಲವಾಗಿವೆ. ನನ್ನ ಈವರೆಗಿನ ಅಧ್ಯಯನ ಕನಕದಾಸನನ್ನು ವಿಶಿಷ್ಟಾದ್ವೈತ ತತ್ವ ಪ್ರತಿಪಾದಕ ಎಂಬುದನ್ನೇ ಸಮರ್ಥಿಸಬಲ್ಲುವಾಗಿವೆ. ಈಗಾಗಲೇ ವಿಮರ್ಶಕರು ಸೂಚಿಸಿರುವ ಈ ಅಂಶ ಈ ವಿಶಿಷ್ಟಾದ್ವೈತ ತತ್ವಗಳ ಹಿನ್ನೆಲೆಯಲ್ಲಿ ಇನ್ನಷ್ಟು ಹೆಚ್ಚು ಖಚಿತಗೊಳ್ಳುತ್ತದೆ. ಪುರಂದರದಾಸ ಮತ್ತು ಕನಕದಾಸರ ಕೀರ್ತನೆಗಳಲ್ಲಿ ಏಕೆ ಭಿನ್ನತೆಯಿದೆ ಎಂಬುದಕ್ಕೆ ಈ ಚಿಂತನೆ ಸ್ಪಷ್ಟ ಉತ್ತರವನ್ನು ನೀಡುತ್ತದೆ. ಹಾಗೆಯೇ ಕುಮಾರವ್ಯಾಸನ ತತ್ವ ಪ್ರತಿಪಾದನೆಯನ್ನೂ ಈ ತತ್ವದ ಹಿನ್ನೆಲೆಯಲ್ಲಿಯೇ

ಸುಲಭವಾಗಿ ಗುರುತಿಸಬಹುದಾಗಿದೆ. ಹೀಗೆ ಹಲವು ದೃಷ್ಟಿಗಳಲ್ಲಿ ಕನ್ನಡ ಸಾಹಿತ್ಯವನ್ನು ಒರೆಗೆ ಹಚ್ಚಲು ಈ ಸಂಪುಟಗಳು ಆಕರಗಳಾಗಬಲ್ಲವಾಗಿವೆ.

ಈ ಎರಡೂ ಶ್ರೀವೈಷ್ಣವ ಸಂಪುಟಗಳಲ್ಲಿ ಒಟ್ಟು ೧೦೧೮ ಕೀರ್ತನೆಗಳು ಸಂಗ್ರಹವಾಗಿವೆ. ಇದರೊಂದಿಗೆ ಮಹಿಳಾ ಕೀರ್ತನಕಾರರ ಕೃತಿಗಳು ಸುಮಾರು ೩೦೦ ಇವೆ. ಬೇರೆ ಬೇರೆ ಕಾರಣಗಳಿಗಾಗಿ ಈ ಸಂಪುಟದಲ್ಲಿ ಸೇರಿಲ್ಲದ ಇನ್ನೂ ೫೦ –೬೦ ಕೀರ್ತನೆಗಳೂ ಇವೆ. ಸಂಗ್ರಹಕಾಲದಲ್ಲಿ ತೋರಿಬಂದ ಹಲವು ಗ್ರಂಥಶೀರ್ಷಿಕೆಗಳು ಮತ್ತು ಮಾಹಿತಿಗಳು ಇನ್ನೂ ಇದ್ದಿರಬಹುದಾದ ಶ್ರೀವೈಷ್ಣವ ಕೀರ್ತನೆಗಳತ್ತ ಬೆಳಕು ಚೆಲ್ಲುತ್ತಿದ್ದರೂ ಖಚಿತ ಮಾಹಿತಿದಾರರು ಮತ್ತು ಗ್ರಂಥ ಪ್ರತಿಗಳು ಲಭ್ಯವಾಗುತ್ತಿಲ್ಲ. ಸದ್ಯಕ್ಕೆ ಈ ಯೋಜನೆಗಾಗಿ ಒಟ್ಟು ೧೩೧೮ ಕೀರ್ತನೆಗಳನ್ನು ಮಾತ್ರ ಮೂರು ಸಂಪುಟಗಳಲ್ಲಿ ಸಿದ್ಧಪಡಿಸಲಾಗಿದೆ.

ಈ ಸಂಪುಟದ ಮೊದಲನೆಯ ಭಾಗದಲ್ಲಿ ೫೩೪ ಕೀರ್ತನೆಗಳಿದ್ದು ಬೇಲೂರು ವೈಕುಂಠದಾಸರು ಮತ್ತು ಇತರ ಎಂಟು ಜನ ಕೀರ್ತನಕಾರರ ಕೀರ್ತನೆಗಳಿವೆ. ಎರಡನೆಯ ಭಾಗದಲ್ಲಿ ಮುಖ್ಯವಾಗಿ ಆಸೂರಿರಾಮಸ್ವಾಮಿ ದಾಸರ ಕೀರ್ತನೆಗಳು (೪೫೭) ಮತ್ತು ಹೆಸರು ಕಾಲ ಗೊತ್ತಿಲ್ಲದ ಇನ್ನಿಬ್ಬರ ೧೭ ಕೀರ್ತನೆಗಳೂ ಇವೆ. ಮಹಿಳಾ ಕೀರ್ತನಕಾರರ ಸಂಪುಟ ೧೮ ಭಾಗ ೪ರಲ್ಲಿ ಶ್ರೀವೈಷ್ಣವ ಮಹಿಳಾ ಕೀರ್ತನಕಾರರಾದ ಯದುಗಿರಿಯಮ್ಮ ಮತ್ತು ನಂಜನಗೂಡು ತಿರುಮಲಾಂಬ ಅವರ ಸುಮಾರು ೩೦೦ ಕೀರ್ತನೆಗಳೂ ಇವೆ.

ಯೋಜನೆಗೆ ಸೂಚಿಸಿರುವ ಸೂಚನೆಗಳಂತೆಯೇ ಇಲ್ಲಿಯ ಕೀರ್ತನೆಗಳನ್ನು ವಿಂಗಡಿಸಲಾಗಿದ್ದರೂ ವಿಶಿಷ್ಟಾದ್ವೈತ ತತ್ವದ ಹಿನ್ನೆಲೆಯಲ್ಲಿ ದೇವತಾ ತಾರತಮ್ಯವನ್ನು ಸ್ವಲ್ಪ ವ್ಯತ್ಯಾಸ ಮಾಡಿಕೊಳ್ಳಲಾಗಿದೆ. ಹಾಗೆ ನೋಡಿದರೆ ಶ್ರೀವೈಷ್ಣವ ಧರ್ಮದಲ್ಲಿ ದೇವತಾ ತಾರತಮ್ಯವೇ ಇಲ್ಲ. ಏಕೆಂದರೆ ಇಲ್ಲಿಯ ದೇವತೆ ಶ್ರೀಹರಿಯೊಬ್ಬನೇ. ಆದರೂ ಈ ತತ್ವದಲ್ಲಿ ಶ್ರೀಹರಿಯ ರೂಪಭೇದಗಳನ್ನು ಕಲ್ಪಿಸಿಕೊಳ್ಳಲಾಗಿದ್ದು ಸಂಪ್ರದಾಯದಲ್ಲಿ ಅದಕ್ಕೊಂದು ಕ್ರಮವನ್ನು ಹೇಳಲಾಗಿದೆ. ಆ ಕ್ರಮದಂತೆಯೇ

ಇಲ್ಲಿ ದೇವತಾಸ್ತುತಿಗಳನ್ನು ಜೋಡಿಸಲಾಗಿದೆ. ಶ್ರೀಹರಿಯ ಈ ವ್ಯೂಹರಚನೆಯ ಕ್ರಮ ಈ ರೀತಿ ಇದೆ : ಪರ–ವ್ಯೂಹ–ವಿಭವ–ಅಂತರ್ಯಾಮಿ–ಅರ್ಚಾ

೧. ಶ್ರೀ ಮಹಾವಿಷ್ಣು

೨. ಪರವಾಸುದೇವ

೩. ಸಂಕರ್ಷಣ – ಪ್ರದ್ಯುಮ್ನ – ಅನಿರುದ್ಧ

೪. ದ್ವಾದಶ ನಾಮಗಳು (ಕೇಶವ, ನಾರಾಯಣ, ಮಾಧವ, ಗೋವಿಂದ ಅಚ್ಯುತ ಇತ್ಯಾದಿ) (ವ್ಯೂಹ)

೫. ದಶಾವತಾರಗಳು (ಬುದ್ಧನ ಬದಲಿಗೆ ಬಲರಾಮನನ್ನು ಕಲ್ಪಿಸಿಕೊಂಡು) ಮತ್ತು ಇತರ ಅವತಾರಗಳು

೬. ಅರ್ಚಾವತಾರಗಳು (ರಂಗನಾಥ, ಶ್ರೀನಿವಾಸ, ವೆಂಕಟೇಶ, ಚನ್ನಕೇಶವ ಇತ್ಯಾದಿ)

ಶ್ರೀಹರಿಯ ಈ ಎಲ್ಲ ರೂಪಗಳ ಸ್ತುತಿಗಳ ನಂತರ

೭. ಮಹಾಲಕ್ಷ್ಮೀ ಸ್ತುತಿ ಬರುತ್ತದೆ. ಇದಾದ ನಂತರ

೮. ವಿಶ್ವಕ್ಸೇನ ಸ್ತುತಿ. ನಂತರ

೯. ಆಳ್ವಾರರ–ಆಚಾರ್ಯರ ಸ್ತುತಿ ಬರುತ್ತದೆ. ಶ್ರೀವೇಷ್ಣವ ಸಂಪ್ರದಾಯದ ಗುರುಪರಂಪರೆಯು ಹೇಳುವ ಈ ದೇವತಾಕ್ರಮವನ್ನು ಬಿಟ್ಟರೆ ಬೇರೆ ಯಾವ ದೇವತೆಗಳ ಸ್ತುತಿಯನ್ನು ಈ ಧರ್ಮ ಹೇಳುವುದಿಲ್ಲ. ಆದರೆ ಕೆಲವು ಕೀರ್ತನಕಾರರು ಸರ್ವದೈವಗಳನ್ನು ಸ್ತುತಿಸಿದ್ದು ಅವುಗಳನ್ನೂ ಈ ಪಾರಂಪರಿಕ ದೇವತಾಸ್ತುತಿ–ಯನಂತರ ಅವನ್ನು ಸೇರಿಸಿದೆ. ಉಳಿದಂತೆ ಯೋಜಿತ ಸೂಚನೆಗಳನ್ನೇ ಅನುಸರಿಸಲಾಗಿದೆ.

ಪ್ರಸ್ತುತ ಪ್ರಸ್ತಾವನೆ ೪ ಭಾಗಗಳಲ್ಲದೆ. ಮೊದಲ ಭಾಗ ಪ್ರವೇಶಿಕೆ 'ಎರಡನೆಯ ಭಾಗದಲ್ಲಿ ಶ್ರೀವೈಷ್ಣವ ದಾಸಸಾಹಿತ್ಯದ ಬಗ್ಗೆ ಈವರೆಗೆ ನಡೆದಿರುವ ಸಂಶೋಧನೆಯನ್ನು, ಶ್ರೀವೈಷ್ಣವ ಧರ್ಮ–ತತ್ವದ ಬಗ್ಗೆ ಸ್ಥೂಲ ವಿವರಣೆಯನ್ನು,

ಶ್ರೀವೈಷ್ಣವ ಕೀರ್ತನೆಗಳ ಸಾಮಾನ್ಯ ಲಕ್ಷಣಗಳನ್ನು ಹೇಳಲಾಗಿದೆ. ಎರಡನೇ ಮೂರನೇ ಭಾಗದಲ್ಲಿ ಆಯಾ ಸಂಪುಟದಲ್ಲಿ ಬರುವ ಕೀರ್ತನಕಾರರ ಜೀವನ ವಿವರ, ದಾಸರ ಇತರ ಗ್ರಂಥಗಳ ಪರಿಚಯ ಮತ್ತು ಕೀರ್ತನೆಗಳ ಪರಿಚಯ ಹಾಗೂ ಹಸ್ತಪ್ರತಿ ವಿವರವನ್ನು ನೀಡಿದೆ. ನಾಲ್ಕನೆಯ ಭಾಗ ಉಪಕಾರಸ್ಮರಣೆಯಾಗಿರುತ್ತದೆ. ಪರಿಶಿಷ್ಟದಲ್ಲಿ ದಾಸರ ಬಗ್ಗೆ ಬೇರೆ ದಾಸರು ರಚಿಸಿರುವ ಕೀರ್ತನೆಗಳನ್ನು ಮತ್ತು ದಾಸರ ಅಪ್ರಕಟಿತವಾದ ಕೆಲವು ಸಣ್ಣ ಕೃತಿಗಳನ್ನು ನೀಡಲಾಗಿದೆ. ಅವು ಅನ್ಯಭಾಷೆಯಲ್ಲಿದ್ದರೂ ದಾಸರಿಗಿದ್ದ ಬಹುಭಾಷಾ ಜ್ಞಾನವು ಇದರಿಂದ ವ್ಯಕ್ತವಾಗುತ್ತದೆ ಎಂಬ ಕಾರಣಕ್ಕಾಗಿ ಮಾದರಿಗಾಗಿ ನೀಡಲಾಗಿದೆ. ಒಂದು ಸಂಪುಟದಲ್ಲಿರುವ ದಾಸರು ಅದೇ ಸಂಪುಟದಲ್ಲಿರುವ ಇನ್ನೊಬ್ಬ ದಾಸರನ್ನು ಸ್ತುತಿಸಿರುವ ಕೀರ್ತನೆಗಳು ಮಾತ್ರ ಮೂಲದಾಸರ ಕೀರ್ತನೆಗಳ ಜೊತೆಯಲ್ಲೇ ಇದ್ದು ಅಡಿಟಿಪ್ಪಣಿಯಲ್ಲಿ ಯಾವ ದಾಸರನ್ನು ಕುರಿತದ್ದು ಎಂಬ ಸೂಚನೆ ನೀಡಲಾಗಿದೆ. ಅನುಬಂಧಗಳಾದ ಪುರಾಣಪ್ರತಿಮೆಗಳು, ವಿಶಿಷ್ಟ ಪದಸೂಚಿ ಮತ್ತು ಸಂಖ್ಯಾಪದ ಸೂಚಿಗಳಲ್ಲಿ ಶ್ರೀವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಅನೇಕ ವಿಚಾರಗಳು ಮೊದಲಬಾರಿಗೆ ಕನ್ನಡ ಸಾಹಿತ್ಯಕ್ಕೆ ಪರಿಚಿತವಾಗುತ್ತವೆ.

೨. ಕನ್ನಡದಲ್ಲಿ ಶ್ರೀವೈಷ್ಣವ ಕೀರ್ತನಸಾಹಿತ್ಯ

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅತ್ಯಂತ ಪ್ರಮುಖ ಪ್ರಕಾರವಾಗಿರುವ ಹರಿದಾಸ ಅಥವಾ ಕೀರ್ತನ ಸಾಹಿತ್ಯ ಪರಂಪರೆ ನಾಲ್ಕು ಘಟ್ಟಗಳಲ್ಲಿ ಬೆಳೆದಿದೆಯೆಂಬುದು ಸರ್ವವಿದಿತ. ನರಹರಿತೀರ್ಥರು, ಶ್ರೀಪಾದರಾಜರಿಂದ ಇದರ ಆರಂಭಕಾಲವನ್ನೂ ವ್ಯಾಸರಾಯರು ಪುರಂದರ ದಾಸರು, ಕನಕದಾಸರು, ವಾದಿರಾಜರು, ವೈಕುಂಠದಾಸರ ಕಾಲವನ್ನು ಎರಡನೆಯ ಘಟ್ಟ ಅಥವಾ ಉನ್ನತಿಯ ಕಾಲವೆಂದೂ ವಿಜಯದಾಸರು, ಗೋಪಾಲದಾಸರು, ರಾಘವೇಂದ್ರ ತೀರ್ಥರು, ಜಗನ್ನಾಥದಾಸರು ಮುಂತಾದವರ ಕಾಲವನ್ನೂ ಮೂರನೇ ಘಟ್ಟ ಅಥವಾ ವಿಸ್ತಾರಕಾಲವೆಂದೂ ವೇಣುಗೋಪಾಲದಾಸರು, ಪ್ರಾಣೇಶವಿಠಲರು ಮುಂತಾದವರ ಕಾಲವನ್ನು ನಾಲ್ಕನೆಯ ಅಥವಾ ಅವನತಿಯ ಕಾಲವೆಂದೂ ಸಾಮಾನ್ಯವಾಗಿ ಗುರುತಿಸಲಾಗುತ್ತಿದೆ.

ವಿಜಯನಗರ ಸಾಮ್ರಾಜ್ಯದ ಸ್ವರ್ಣಯುಗದ ಜೊತೆ ಜೊತೆಗೇ ಹರಿದಾಸರ ವಾಙ್ಮಯವೂ ಜನಜನಿತವಾಗಿ ಸಾವಮ್ರಾಜ್ಯದ ಪತನಾನಂತರ ಅದರ ಜನಪ್ರಿಯತೆಯೂ ಕುಗ್ಗಿತು ಎಂಬುದು ಇತಿಹಾಸಕಾರರ ಅಭಿಪ್ರಾಯ. 'ವಿಜಯನಗರ ಸಾಮ್ರಾಜ್ಯದ ಸ್ವರ್ಣಯುಗದಲ್ಲಿ ಪುರಂದರ ಕನಕದಾಸರು ನಾಡಿನಾದ್ಯಂತ.... ವಾದಿರಾಜರು ದಕ್ಷಿಣ ಕನ್ನಡದಾದ್ಯಂತ, ವೈಕುಂಠದಾಸರು ಬೇಲೂರಿನ ಸುತ್ತ ಮುತ್ತ ಬೆಳೆಸುವುದರ ಮೂಲಕ ೧೬೦೦ರವರೆಗೆ ಹರಿದಾಸ ಸಾಹಿತ್ಯ ಪ್ರಸರಿಸಿತ್ತು...... ಅನಂತರ ಕಾರಣಾಂತರದಿಂದ ಹರಿದಾಸ ಪರಂಪರೆ ಅಷ್ಟಾಗಿ ಸ್ಪಷ್ಟವಾಗಿ ಮುಂದುವರಿಯಲಿಲ್ಲ. ಪುರಂದರದಾಸರ ಶಿಷ್ಯರೂ, ವೈಕುಂಠದಾಸರ ಶಿಷ್ಯರೂ ಏನು ಕಾರಣದಿಂದಲೋ ಹೊರಗೆ ಬರಲಿಲ್ಲ. ಹೆಸರು ಪಡೆಯಲಿಲ್ಲ, ಪದಗಳನ್ನು ರಚಿಸಿದಂತೆ ಕಾಣಲಿಲ್ಲ, (ಎಸ್.ಕೆ.ರಾಮಚಂದ್ರ ರಾವ್, ದಾಸಸಾಹಿತ್ಯ, ಐ.ಬಿ.ಹೆಚ್.ಪು.೮೯) ಸಾಹಿತ್ಯ ಚರಿತ್ರಕಾರರಿಂದ ಹಿಡಿದು ಹೆಚ್ಚು ಕಡಿಮೆ ಎಲ್ಲ ವಿದ್ವಾಂಸರೂ ಈ ಅಭಿಪ್ರಾಯವನ್ನು ಹೊಂದಿದ್ದಾರೆ. ಈ ಕಾಲದಲ್ಲಿ ನಡೆದ ರಾಜಕೀಯ ಸ್ಥಿತ್ಯಂತರಗಳು, ಆ ಮೂಲಕ ಸಮಾಜಜೀವನ ಮತ್ತು ಧರ್ಮದ ಮೇಲಾದ ಆಘಾತಗಳು ಇದಕ್ಕೆ ಕಾರಣವೆಂದೂ ಊಹಿಸುತ್ತಾರೆ.

ಮಾಧ್ವಮತ ತತ್ವಗಳ ಮುಖ್ಯವಾಹಿನಿಯಾಗಿ ಕೀರ್ತನ ಸಾಹಿತ್ಯವನ್ನು ಗುರುತಿಸಲಾಗುತ್ತದೆ. ಈ ಬಗೆಗಿನ ಈವರೆಗಿನ ಅಧ್ಯಯನವೂ ಇದರ ಹಿನ್ನೆಲೆಯಲ್ಲಿಯೇ ನಡೆದುಬಂದಿದೆ. ೭೦ರ ದಶಕದಲ್ಲಿ ಸ್ಮಾರ್ತ ಸಂಪ್ರದಾಯದ ಕೀರ್ತನಕಾರರೂ ಇರುವುದನ್ನು ಪ್ರೊ: ಎಂ.ವಿ. ಸೀತಾರಾಮಯ್ಯ ಮುಂತಾದವರು ಬೆಳಕಿಗೆ ತಂದಿದ್ದಾರೆ. ಚಿದಾನಂದವಧೂತ, ತಿಮ್ಮಪ್ಪದಾಸರು ಮತ್ತು ಅವರ ಶಿಷ್ಯರು ಪರಮದೇವ, ವೇದಾಂತ ಶಿವರಾಮ ಶಾಸ್ತ್ರಿಗಳು ಮುಂತಾದವರನ್ನು ಇಲ್ಲಿ ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಕನ್ನಡ ಹರಿದಾಸ ಸಾಹಿತ್ಯದಲ್ಲಿ ದ್ವೈತಕೀರ್ತನ ಪರಂಪರೆಯ ಜೊತೆಗೆ ಅದ್ವೈತಕೀರ್ತನ ಪರಂಪರೆಯನ್ನು ವಿದ್ವಾಂಸರು ಸ್ಪಷ್ಟವಾಗಿ ಗುರುತಿಸುತ್ತಿದ್ದಾರೆ.

ವೈಧಿಕ ಧರ್ಮದ ಇನ್ನೊಂದು ಪ್ರಮುಖ ಶಾಖೆಯಾದ ವಿಶಿಷ್ಟಾದ್ವೈತ ಸಂಪ್ರದಾಯದಲ್ಲಿಯೂ ಇರುವ ಕೀರ್ತನ ಸಾಹಿತ್ಯವನ್ನು ಈಚೆಗೆ ೯೦ರ ದಶಕದಲ್ಲಿ ಶ್ರೀ. ನಾ. ಗೀತಾಚಾರ್ಯ ಅವರು ಶೋಧಿಸಿ ದಾಖಲಿಸಿದ್ದಾರೆ. ೧೯೯೩ ಮತ್ತು ೧೯೯೪ ರಲ್ಲಿ ಸಂಪಾದಿಸಿ ಪ್ರಕಟಿಸಿರುವ ನಾರಾಯಣಶರ್ಮರ ಕೀರ್ತನೆಗಳು, ಮತ್ತು ರಂಗದಾಸರ ಕೀರ್ತನೆಗಳು ಎಂಬ ಎರಡು ಪುಸ್ತಕಗಳು; ೧೯೯೫ ರಲ್ಲಿ (ಡಿಸೆಂಬರ್ ನಂ ೮–೨) 'ಕರ್ನಾಟಕ ಲೋಚನ" ದಲ್ಲಿ ಬಂದಿರುವ 'ಮೂವರು ಶ್ರೀವೈಷ್ಣವ ಹರಿದಾಸರು' ಎಂಬ ಒಂದು ಲೇಖನ; ೧೯೯೮ರಲ್ಲಿ ಪ್ರಕಟವಾದ ತುಮಕೂರು ಜಿಲ್ಲೆಯ ಮೂವರು ಕೀರ್ತನಕಾರರು ಎಂಬ ಪುಸ್ತಕ; ಶ್ರೀವೈಷ್ಣವ ಹರಿದಾಸಸಾಹಿತ್ಯ–ಹೊಸ ಶೋಧ (ಇತಿಹಾಸ ದರ್ಶನ ಪು.೧೦) ಎಂಬ ಲೇಖನ ಹಾಗೂ ೧೯೯೯ರಲ್ಲಿ ಪ್ರಕಟವಾದ (ಶ್ರೀ ವೈಷ್ಣವ ಹರಿದಾಸ ಸಾಹಿತ್ಯ–ಒಂದು ಪರಿಚಯ (ಭೂಷಣ ಪು. ೬೩೪) ಲೇಖನ ಮತ್ತು ನಾರಾಯಣಶರ್ಮಾ ಸಂಸ್ಕೃತಿ ಕೇಂದ್ರ ಪ್ರಕಟಿಸಿರುವ ಮೂವರು ಶ್ರೀ ವೈಷ್ಣವ ಹರಿದಾಸರ ಕೀರ್ತನೆಗಳು ಎಂಬ ಪುಸ್ತಕವನ್ನು ಉಲ್ಲೇಖಿಸಬಹುದು. ಈ ಮೂಲಕ ಕೀರ್ತನ ಸಾಹಿತ್ಯದ ಅಧ್ಯಯನದ ಇತಿಹಾಸದಲ್ಲಿ ಮಧ್ವ ಸಂಪ್ರದಾಯದ ಜೊತೆಗೆ ಅದ್ವೈತ ಸಂಪ್ರದಾಯದ ಕಿರ್ತನಕಾರರು ಸೇರ್ಪಡೆಯಾದ ನಂತರ ವಿಶಿಷ್ಟಾದ್ವೈತ–ಸಂಪ್ರದಾಯದ ಕೀರ್ತನಕಾರರೂ ಸೇರ್ಪಡೆಯಾಗಿರುವುದನ್ನು ಕಾಣಬಹುದಾಗಿದೆ.

ಕರ್ನಾಟಕದಲ್ಲಿ ವಿಶಿಷ್ಟಾದ್ವೈತದ ಇತಿಹಾಸ ದ್ವೈತಕ್ಕಿಂತ ಹಿಂದಿನಿಂದ ಇದ್ದರೂ ೧೨ನೇ ಶತಮಾನದಲ್ಲೇ ಹೊಯ್ಸಳರ ರಾಜಧರ್ಮವಾಗಿ ಬೆಳೆದುಬಂದಿದ್ದರೂ ಇದು ಜನಸಾಮಾನ್ಯರ ನಡುವೆ ಬೆಳೆದುಬರಲಿಲ್ಲ. ಇದಕ್ಕೆ ಕಾರಣವಾಗಿ ಇದರ ಧಾರ್ಮಿಕ ಆಚರಣೆಗಳು ತಮಿಳು ಭಾಷೆಯಲ್ಲಿದ್ದುದು ಮತ್ತು ಮತೀಯ ಗ್ರಂಥಗಳು ಸಂಸ್ಕೃತ ಹಾಗೂ ದ್ರಾವಿಡ (ತಮಿಳು) ಪ್ರಬಂಧಗಳಾಗಿದ್ದುದು ಎಂಬ ಸಾಮಾನ್ಯ ಅಭಿಪ್ರಾಯವೊಂದಿದೆ. 'ರಾಮಾನುಜಾಚಾರ್ಯರು ಈ ಧರ್ಮದ ತಿರುಳನ್ನು ಎಲ್ಲರಿಗೂ ತಿಳಿಯುವಂತೆ ಸಾರ್ವಜನಿಕವಾಗಿ ಪ್ರಕಟಿಸುವುದರ ಮೂಲಕ ಸಾಮಾನ್ಯ ಜನರನ್ನು ಈ ಧರ್ಮದತ್ತ ಸೆಳೆದು ಭಕ್ತರನ್ನಾಗಿ, ಅನುಯಾಯಿಗಳನ್ನಾಗಿ ಮಾಡಿದರೇ ವಿನಾ

ಮತೀಯ ಆಚರಣೆಯ ವಿಧಿವಿಧಾನಗಳಲ್ಲಿ ನೆಲೆಗೊಳಿಸಲಿಲ್ಲ. ಆದ್ದರಿಂದ ಅನ್ಯಮತೀಯರು ಶ್ರೀವೈಷ್ಣವ ಮತಾನುಯಾಯಿಗಳಾದರೇ ವಿನಾ ಶ್ರೀವೈಷ್ಣವ ಬ್ರಾಹ್ಮಣರಾಗಲಿಲ್ಲ ಎಂಬುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಆದ್ದರಿಂದಲೇ ವಿಶಿಷ್ಟಾದ್ವೈತವನ್ನು ಪ್ರತಿಪಾದಿಸುವ ಗ್ರಂಥಗಳು ಕನ್ನಡದಲ್ಲಿ ಪ್ರಸಾರಗೊಳ್ಳಲೂ ಇಲ್ಲ ಮತ್ತು ಸೃಷ್ಟಿಯಾಗಲೂ ಇಲ್ಲ. 'ಮೂವರು ವೈಷ್ಣವ ಹರಿದಾಸರು ೧೯೯೯ ಎಂಬ ಮಾತು ಹೆಚ್ಚು ಸಮರ್ಥವಾಗಿರುವಂತೆ ತೋರುತ್ತದೆ. ಆದರೂ ಶ್ರೀವೈಷ್ಣವರೇ ಆದ ಬೇಲೂರು ವೈಕುಂಠದಾಸರ ಮತ್ತು ಪೂರ್ವದಲ್ಲಿ ಶ್ರೀವೈಷ್ಣವ ಅನುಯಾಯಿಗಳಾಗಿದ್ದ ಕನಕದಾಸರ ಕೀರ್ತನೆಗಳಲ್ಲಿ (ವಿಶೇಷವಾಗಿ ಮೋಹನ ತರಂಗಿಣಿ ಕೃತಿಯಲ್ಲಿ)ವಿಶಿಷ್ಟಾದ್ವೈತ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದಾದರೂ ಈವರೆಗೆ ಇವು ಮಧ್ವಪರಂಪರೆಯ ಮುಖ್ಯವಾಹಿನಿ ಯೊಳಗೇ ಸೇರಿ ಹೋಗಿವೆ. (ಇನ್ನು ಮುಂದೆ ಇವರಿಬ್ಬರನ್ನು ಶ್ರೀವೈಷ್ಣವ ಪರಂಪರೆಯಲ್ಲಿ ಗುರುತಿಸಬೇಕಾಗುತ್ತದೆ.) ಹಾಗೆಯೇ ಚರಿತ್ರಕಾರರು ಇದಮಿತ್ಥಂ ಎಂದು ಹೇಳಲಾಗದ, ಕುಮಾರವ್ಯಾಸ, ಲಕ್ಷ್ಮೀಶರ ಕೃತಿಗಳನ್ನು ಶ್ರೀವೈಷ್ಣವತತ್ವದ ಹಿನ್ನೆಲೆಯಲ್ಲಿ ಪುನರಾಲೋಚಿಸಬಹುದಾಗಿದೆ. ಲಕ್ಷ್ಮೀಶನಂತು ಸ್ಪಷ್ಟವಾಗಿ ಶ್ರೀವೈಷ್ಣವ ಮತೀಯನೇ ಆಗಿದ್ದು ವಿದ್ವಾಂಸರು ಅವನನ್ನು ಲಕ್ಷ್ಮೀಕಾಂತ ಹೆಬ್ಬಾರ್ ಎಂದು ಹೆಸರಿಸಿದ್ದಾರೆ. ಅವನ ಹೆಸರಿನಲ್ಲಿ ಹತ್ತಾರು ಕೀರ್ತನೆಗಳೂ ಇವೆ. ಈ ಹಿನ್ನೆಲೆಯಲ್ಲಿ ಇಲ್ಲಿ ವೈಕುಂಠದಾಸರು ಮತ್ತು ಲಕ್ಷ್ಮೀಶರನ್ನು ಶ್ರೀವೈಷ್ಣವ ಕೀರ್ತನಕಾರರನ್ನಾಗಿ ಸ್ವೀಕರಿಸಿದೆ. ಹೀಗೆ ಹರಿದಾಸ ಸಾಹಿತ್ಯದ ಉನ್ನತಿಯ ಕಾಲದಲ್ಲೆ ಶ್ರೀವೈಷ್ಣವ ಕೀರ್ತನಸಾಹಿತ್ಯ ಕಾಣಿಸಿಕೊಂಡಿರುವುದನ್ನು ಕಾಣಬಹುದು.

ಚಿಕ್ಕದೇವರಾಯ ಒಡೆಯರ ಕಾಲದಲ್ಲಿ ಇದು ರಾಜಧರ್ಮವಾಗಿ ಪ್ರವರ್ಧಮಾನಕ್ಕೆ ಬಂದ ನಂತರವೇ ಮತ್ತೆ ನೇರವಾಗಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ ಕಾಣಿಸಿಕೊಂಡಿದ್ದು ಈ ಕಾಲದ ಚಿಕ್ಕದೇವ. ರಾಜನ ಚಿಕ್ಕದೇವ-ರಾಜಬಿನ್ನಪ, ತಿರುಮಲಾರ್ಯನ ಗೀತಗೋಪಾಲ, ಚಿಕ್ಕುಪಾಧ್ಯಾಯನ ದಿವ್ಯಸೂರಿಚರಿತ, ಸಂಚಿಹೊನ್ನಮ್ಮನ ಹದಿಬದೆಯ ಧರ್ಮ ಮುಂತಾದವು ವಿಶಿಷ್ಟಾದ್ವೈತ ತತ್ವವನ್ನು ಪ್ರತಿಪಾದಿಸುವ ಕನ್ನಡ ಕೃತಿಗಳಾಗಿವೆ. ೪ನೇ ಘಟ್ಟದ ಕೀರ್ತನ ಸಾಹಿತ್ಯ ಪರಂಪರೆಯ

ಸೃಷ್ಟಿಗೆ ಗೀತಗೋಪಾಲವೇ (ಸು.೧೭೦೦) ಮೂಲವಾಗಿದೆ ಎಂಬುದು ಎಲ್ಲ ವಿದ್ವಾಂಸರ ಮತ. 'ಹರಿದಾಸ ಸಾಹಿತ್ಯದ ಕೀರ್ತನ ಪ್ರಕಾರವನ್ನು ಶ್ರೀವೈಷ್ಣವ ಕವಿಗಳು ಬಳಸಿಕೊಂಡರು.' (ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪು. ೩೦) 'ಹರಿಸಂಕೀರ್ತನೆಗಳ ಭಂಡಾರಕ್ಕೆ ಗೀತ ಗೋಪಾಲವು ಉನ್ನತವಾದ ಅಲ್ಲದಿದ್ದರೂ ತುಂಬ ಮೆಚ್ಚುವಂಥ ಗೀತ ನಿಧಿಯನ್ನು ನೀಡಿರುತ್ತದೆ.' (ಅದೇ ಪು. ೩೦.೩೧) 'ಶ್ರೀವೈಷ್ಣವ ಸಂಪ್ರದಾಯದ ಗೀತೆಗಳಲ್ಲಿಯಂತು ಕನ್ನಡದಲ್ಲಿ ಇದೇ ಮೊದಲನೆಯದು' (ಎಂ.ವಿ.ಸೀ. ಹರಿದಾಸರು ಮತ್ತು ಅನುಭಾವ ಕವಿಗಳು. ಪು.೫) ಎಂಬ ಹೆಗ್ಗಳಿಕೆಗೆ ಈ ಕೃತಿ ಪಾತ್ರವಾಗಿದೆ. ಆದರೆ ಇದು ಶುದ್ಧ ಕೀರ್ತನಸಾಹಿತ್ಯವಲ್ಲ ಅಂದರೆ ಪುರಂದರ – ಕನಕದಾಸರುಗಳಂತಹ ಭಿನ್ನವಸ್ತು – ವಿಷಯವಿರುವ ಬಿಡಿಬಿಡಿ ಕೀರ್ತನೆಗಳಲ್ಲ. ಒಂದು ನಿರ್ದಿಷ್ಟಕಾವ್ಯದ ಸ್ವರೂಪದ್ದಾಗಿದ್ದು ಜಯದೇವನ ಗೀತಗೋವಿಂದದ ಅನುವಾದವಾಗಿದೆ. ಇದರೊಂದಿಗೆ ಸಿಂಗಿರಾರ್ಯನ ಗೀತರಂಗೇಶ್ವರ, ಚಿಕ್ಕುಪಾಧ್ಯಾಯನ ಚಿಕ್ಕದೇವರಾಯ ಶೃಂಗಾರ ಪದಗಳು, ರಂಗನಾಥನ ಲಾಲೀ ಪದಗಳು ಅನಂತರದ ಕಳಲೆ ಕಾಂತರಾಜನ ಮಗಳಾದ ದೊಡ್ಡಒಡೆಯರ ಪಟ್ಟಮಹಿಷಿ (೧೭೨೫) ಚೆಲುವಾಂಬೆಯ ವೆಂಕಟಾಚಲ ಮತ್ತು ಅಲಮೇಲುಮಂಗಮ್ಮ ಲಾಲೀಪದಗಳು, ವರನಂದಿ ಕಲ್ಯಾಣ ಮುಂತಾದವು ಶ್ರೀವೈಷ್ಣವ ಕೀರ್ತನಸಾಹಿತ್ಯದಲ್ಲಿ ಬರಬಲ್ಲವೆನಿಸಿದರೂ ಇವೂ ಸಹ ನಿರ್ದಿಷ್ಟ ವಸ್ತು–ವಿಷಯಕ್ಕೆ ಸಂಬಂಧಿಸಿದ ಕೀರ್ತನಪ್ರಕಾರದ ಕಾವ್ಯಕೃತಿಗಳಾಗಿ ನಿಲ್ಲುತ್ತವೆಂಬ ಕಾರಣದಿಂದ ಈ ಯೋಜನೆಯಲ್ಲಿ ಅಳವಡಿಸಿಕೊಂಡಿಲ್ಲ. ತತ್ವ ಪ್ರತಿಪಾದನೆಯನ್ನು ಒಳಗೊಂಡಿರುವ ಶುದ್ಧ–ಸಾಹಿತ್ಯಕೃತಿಯಾದ ಗೀತಗೋಪಾಲದ ಪ್ರಭಾವದಿಂದಲೂ ಈ ಕಾಲದಲ್ಲಿ ಸೃಷ್ಟಿಯಾಗಬಹುದಾಗಿದ್ದ ಕೀರ್ತನ ಸಾಹಿತ್ಯ ಹತ್ತೊಂಬತ್ತನೆಯ ಶತಮಾನದವರೆಗೆ ಕಾಣಸಿಗುವುದಿಲ್ಲ ಎಂದೇ ಹೇಳಬೇಕು.

೧೯–೨೦ನೇ ಶತಮಾನ ಶ್ರೀವೈಷ್ಣವ ಹರಿದಾಸಸಾಹಿತ್ಯದ ಸಮೃದ್ಧಿಯ ಕಾಲವಾಗಿದೆ. ಕ್ರಿ.ಶ. ೧೮೪೭ರ ಸುಮಾರಿನಲ್ಲಿದ್ದ ತುಳಸೀರಾಮದಾಸರು ಹಾಗೂ ೧೮೩೦ರ ಅವಧಿಯಲ್ಲಿ ಕಾಣಿಸಿಕೊಂಡ ರಂಗದಾಸರು, ವೆಂಕಟವರದಾರ್ಯರು

ಮತ್ತು ಯದುಗಿರಿಯಮ್ಮ ಅವರುಗಳು ೧೯ನೇ ಶತಮಾನದ ವಿಶಿಷ್ಟಾದ್ವೈತ ಹರಿದಾಸಪರಂಪರೆಯ ಆರಂಭದ ಕೀರ್ತನಕಾರರಾಗಿ ಕಂಡುಬರುತ್ತಾರೆ. ಯದುಗಿರಿಯಮ್ಮ ಶ್ರೀವೈಷ್ಣವ ಮಹಿಳಾಕೀರ್ತನಕಾರರಲ್ಲಿ ಪ್ರಥಮರೆನಿಸಿದ್ದಾರೆ. ಇವರನಂತರ ಇನ್ನೂ ಹತ್ತಾರು ಜನರು ಗಮನಕ್ಕೆ ಬಂದಿದ್ದು, ಈವರೆಗಿನ ಪರಿವೀಕ್ಷಣೆಯ ಹಿನ್ನೆಲೆಯಲ್ಲಿ ಶ್ರೀವೈಷ್ಣವ ಹರಿದಾಸರನ್ನು ಈ ರೀತಿ ಪಟ್ಟಿ ಮಾಡಬಹುದು.

೧. ಬೇಲೂರು ವೈಕುಂಠದಾಸರು ಬೇಲೂರು (ಕ್ರಿ.ಶ.ಸು ೧೪೫೦)
೨. ಕವಿ ಲಕ್ಷ್ಮೀಶ (ಲಕ್ಷ್ಮೀಕಾಂತ ಹೆಬ್ಬಾರ) ದೇವನೂರು (ಸು.೧೬೦೦)
೩. ತುಳಸೀರಾಮದಾಸರು ಕ್ರಿ.ಶ. ೧೮೪೭ (ಬೆಂಗಳೂರು)
೪. ಯದುಗಿರಿಯಮ್ಮ, ಬೆಂಗಳೂರು (ಕ್ರಿ.ಶ.ಸು. ೧೮೨೦)
೫. ರಂಗದಾಸರು, ಕ್ರಿ.ಶ. ೧೮೩೦ (ತುಮಕೂರು ಜಿಲ್ಲೆ)
೬. ವೆಂಕಟವರದಾರ್ಯ ಕ್ರಿ.ಶ. ಸು. ೧೮೩೦ (ಸರಗೂರು, ಚಾಮರಾಜನಗರ)
೭. ಮಳಿಗೆ ರಂಗಸ್ವಾಮಿದಾಸರು (೧೯೬೮ – ಮುಳಬಾಗಿಲು)
೮. ಚನ್ನಪಟ್ಟಣದ ಅಹೋಬಲದಾಸರು, ಕ್ರಿ.ಶ. ೧೮೭೦ (ಚನ್ನಪಟ್ಟಣ)
೯. ಆಸೂರಿ ರಾಮಸ್ವಾಮಿ ಅಯ್ಯಂಗಾರ್ ಕ್ರಿ.ಶ. ೧೮೮೮ (ಬೆಂಗಳೂರು)
೧೦. ನಂಜನಗೂಡು ತಿರುಮಲಾಂಬ (ಕ್ರಿ.ಶ. ಸು ೧೮೯೦)
೧೧. ಶಾಮಶರ್ಮದಾಸರು ಕ್ರಿ.ಶ. ೧೮೯೧ (ಬೆಂಗಳೂರು ಜಿಲ್ಲೆ)
೧೨. ಎಸ್. ಸಂಪತ್ತ್ಯೆಯಂಗಾರ್. ಕ್ರಿ.ಶ. ೧೯೦೦ (ಬೆಂಗಳೂರು)
೧೩. ನಾರಾಯಣಶರ್ಮರು ಕ್ರಿ.ಶ. ಸು. ೧೯೧೧ (ಬೆಂಗಳೂರು ಜಿಲ್ಲೆ)
೧೪. ಕೋಸಲಪುರಿವಾಸ ಅಂಕಿತದ ಒಬ್ಬ ಕೀರ್ತನಕಾರರು (ಹೆಸರು – ಕಾಲ – ಸ್ಥಳ ಗೊತ್ತಿಲ್ಲ)
೧೫. ಬಡ್ಡಣ್ಣಯ್ಯಾಚಾರ್ (ಅಣ್ಣಾವಧೂತರು) (ಹೆಸರು – ಸ್ಥಳ –ಕಾಲ ಗೊತ್ತಿಲ್ಲ)

ಸರಿಯಾಗಿ ಸರ್ವೇಕ್ಷಣೆಮಾಡಿದಲ್ಲಿ ಈ ಸಂಪ್ರದಾಯದಲ್ಲಿ ಇನ್ನೂ ಹೆಚ್ಚಿನ ಕೀರ್ತನಕಾರರು ಲಭ್ಯವಾಗುವ ಸಾಧ್ಯತೆಯಿದೆ. ಈವರೆಗೆ ಲಭ್ಯವಾಗಿರುವುದನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ. ಲಭ್ಯವಾಗಬೇಕಾದ ಕೀರ್ತನಕಾರರ ಮತ್ತು ಕೀರ್ತನೆಗಳ ಸಂಖ್ಯೆ ಅಪಾರವಾಗಿಯೇ ಇದೆ. ಈವರೆಗಿನ ದಾಖಲೆಯಲ್ಲೇ ಸಾವಿರವನ್ನು ದಾಟುವ ಇವರ ಕೀರ್ತನೆಗಳ ಸಂಖ್ಯೆ ಸಮಗ್ರ ಸರ್ವೇಕ್ಷಣೆಯ ನಂತರ ಎರಡು ಸಾವಿರಕ್ಕೂ ಮಿಗಿಲಾಗುತ್ತದೆ.

ಶ್ರೀವೈಷ್ಣವ ಕೀರ್ತನಕಾರರು ಎಂದರೆ ಶ್ರೀವೈಷ್ಣವ ಸಂಪ್ರದಾಯದಲ್ಲಿ ಅಂದರೆ ವಿಶಿಷ್ಟಾದ್ವೈತ ತತ್ವದ ತಳಹದಿಯ ಮೇಲೆ ಕೃತಿಗಳನ್ನು ರಚಿಸುವವರು ಎಂದು ಗ್ರಹಿಸಲಾಗಿದೆ. ಸಾಮಾನ್ಯವಾಗಿ ಶ್ರೀವೈಷ್ಣವ ಮತೀಯರಷ್ಟೇ ಈ ತತ್ವ ಪ್ರತಿಪಾದನೆ ಮಾಡಿರುವರಾದರೂ ಒಂದಿಬ್ಬರು ಅನ್ಯಮತೀಯರೂ ಈ ತತ್ವಪ್ರತಿಪಾದನೆಯಲ್ಲಿ ಕಾಣಸಿಗುತ್ತಾರೆ. (ಮಳಿಗೆ ರಂಗಸ್ವಾಮಿದಾಸರು, ಚನ್ನಪಟ್ಟಣದ ಅಹೋಬಲದಾಸರು) ಆದ್ದರಿಂದ ಕೀರ್ತನೆಗಳಲ್ಲಿ ಕಂಡುಬರುವ ಶ್ರೀವೈಷ್ಣವ ತತ್ವದ ಲಕ್ಷಣಗಳ ದೃಷ್ಟಿಯಿಂದ ಇಲ್ಲಿ ಕೀರ್ತನಕಾರರನ್ನು ಪಟ್ಟಿ ಮಾಡಲಾಗಿದೆ.

೩. ಶ್ರೀವೈಷ್ಣವ ತತ್ವ

ಕೀರ್ತನೆಗಳಲ್ಲಿ ಕಂಡುಬರುವ ಈ ಧರ್ಮ–ತತ್ವದ ಪ್ರತಿಪಾದನೆಯನ್ನು ಅರ್ಥಮಾಡಿಕೊಳ್ಳುವ ಉದ್ದೇಶಕ್ಕಾಗಿ ಇಲ್ಲಿ ಶ್ರೀವೈಷ್ಣವ ಧರ್ಮದ ಮುಖ್ಯ ತತ್ವಗಳನ್ನು ಸ್ಥೂಲವಾಗಿ ವಿವರಿಸಲಾಗಿದೆ.

ಶ್ರೀವೈಷ್ಣವ ಧರ್ಮ: ಶ್ರೀವೈಷ್ಣವ ಧರ್ಮವು 'ಶ್ರೀವೈಷ್ಣವ ಮತ' 'ಪ್ರಪತ್ತಿ ಧರ್ಮ' 'ಶ್ರೀವೈಷ್ಣವ ಸಿದ್ಧಾಂತ' 'ರಾಮಾನುಜ ದರ್ಶನ' 'ಭಗವದ್ರಾಮಾನುಜೀಯ' 'ಉಭಯವೇದಾಂತ' 'ಸವಿಶೇಷಾದ್ವೈತ' 'ವಿಶಿಷ್ಟಾದ್ವೈತ' 'ವೀರವೈಷ್ಣವ' ಮುಂತಾದ ಹೆಸರುಗಳಿಂದ ಪ್ರಚಲಿತವಾಗಿರುವ ವಿಷ್ಣುಪಾರಮ್ಯದಿಂದ ಕೂಡಿದ ಧರ್ಮ. ದಕ್ಷಿಣಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಬಹುಸಂಖ್ಯಾತರ

ಧರ್ಮ. ವೈದಿಕ ಜನಾಂಗದಲ್ಲಿರುವ ಒಂದು ಮುಖ್ಯ ಪಂಗಡ. ತ್ರಿಮತಸ್ಥ ಬ್ರಾಹಣರಲ್ಲಿ ಒಂದು ಗುಂಪು.

ವೇದಕಾಲದಿಂದಲೂ ರೂಢಿಯಲ್ಲಿದ್ದ ವಾಸುದೇವ ಅಥವ ಕೃಷ್ಣಪೂಜೆಯ ಭಕ್ತಿಪಂಥ ಅಥವ ಭಾಗವತ ಸಂಪ್ರದಾಯವು ಹಲವು ಮಾರ್ಪಾಟುಗಳನ್ನು ಹೊಂದುತ್ತ ಮಹಾಭಾರತದಲ್ಲಿ ಒಂದು ಖಚಿತವಾದ ರೂಪವನ್ನು ಪಡೆಯಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ರಾಮಾಯಣ, ಮಹಾಭಾರತ, ಭಗವದ್ಗೀತೆಗಳ ಮೂಲಕ ವಿಷ್ಣುವಿನ ರಾಮ-ಕೃಷ್ಣ-ಅವತಾರದ ಕಥೆಗಳು ಜನಪ್ರಿಯವಾಗಿ ವೇದ-ಆಗಮ-ಉಪನಿಷತ್ತುಗಳ ಸಾರವೆಲ್ಲ ಇವುಗಳಲ್ಲಿ ಮೈಗೂಡಿಕೊಂಡು ಹಲವು ರೂಪಗಳಲ್ಲಿ ಆಚರಣೆಯಲ್ಲಿದ್ದ ವೈದಿಕ ಸಂಸ್ಕೃತಿಯೊಂದು ಪ್ರಬಲವಾಗಿ ಈ ನೆಲದಲ್ಲಿ ಬೇರೂರಿತು. ಪದೇ ಪದೇ ಅನ್ಯಸಂಸ್ಕೃತಿಗಳು ಇದರ ಮೇಲೆ ದಾಳಿ ಮಾಡಿ – ಪ್ರಭಾವಬೀರಿ ಭಿನ್ನಾಪ್ರಾಯಗಳಿಗೆ ಭಿನ್ನಪಂಥಗಳಿಗೆ ಕಾರಣವಾಗಿರುವುದನ್ನು ಇತಿಹಾಸ ಹೇಳುತ್ತದೆ. ಅಂತಹ ಸಂದರ್ಭದಲ್ಲೆಲ್ಲ ಒಬ್ಬೊಬ್ಬ ಸಮಾಜಸುಧಾರಕರು, ಧರ್ಮಗುರುಗಳು ಆಚಾರ್ಯ ಪುರುಷರು ಹುಟ್ಟಿಕೊಂಡು ವೈದಿಕ ಧರ್ಮ – ಸಂಸ್ಕೃತಿಯನ್ನು ಇನ್ನಷ್ಟು ಭದ್ರಪಡಿಸಿರುವುದನ್ನು ಕಾಣುತ್ತೇವೆ. ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ಬಸವಣ್ಣ, ವಿವೇಕಾನಂದ, ಗಾಂಧೀಜಿ ಇವರೆಲ್ಲ ಆ ಸಾಲಿನಲ್ಲಿ ನಿಲ್ಲುವವರೇ.

ತತ್ವತ್ರಯ: ಪ್ರಪಂಚದ ಮೂರು ತತ್ವಗಳಾದ ಪುರುಷ-ಪ್ರಕೃತಿ-ಪರಮಾತ್ಮ ಅಥವಾ ಜೀವ-ಜಗತ್ತು-ಜಗನ್ನಿಯಾಮಕ ಅಥವ ಚೇತನ – ಅಚೇತನ ಬ್ರಹ್ಮ ಅಥವಾ ಚಿತ್ – ಅಚಿತ್ – ಈಶ್ವರ ಈ ಮೂರನ್ನು ವಿವರಿಸಿ ಪರಸ್ಪರ ಸಂಬಂಧ – ಅರ್ಥಗಳನ್ನು ತಿಳಿಸುವುದೇ ಎಲ್ಲ ಧರ್ಮಗಳ ಗುರಿ. ಇದರ ಜಿಜ್ಞಾಸೆಯೇ ಅನೇಕ ಪಂಥಗಳಿಗೆ, ಸಿದ್ಧಾಂತಗಳಿಗೆ, ಮತಗಳಹುಟ್ಟಿಗೆ ಕಾರಣವಾಗಿದೆ. ಅದ್ವೈತ-ವಿಶಿಷ್ಟಾದ್ವೈತ-ದ್ವೈತಗಳೂ ಇದರ ಫಲವೇ ಆಗಿದೆ. ಜಗತ್ ಸ್ವರೂಪಿಯಾದ ದೇವರನ್ನು ಪುರುಷ ಬ್ರಹ್ಮ ಈಶ್ವರ ಎಂದೆಲ್ಲ ಕರೆದು ಅವನಿಗೂ

ಈ ಜಗತ್ತಿನಲ್ಲಿ ಕಾಣುವ ಜಡ – ಚೇತನಗಳು ಅಥವ ಚಿತ್ – ಅಚಿತ್‌ಗಳಿಗೂ ಇರುವ ಪರಸ್ಪರ ಸಂಬಂಧದ ಸ್ವರೂಪವನ್ನು ಈ ಮೂರು ಮತಗಳು ಮೂರು ಬೇರೆ ಬೇರೆ ರೀತಿಯಲ್ಲಿ ಚರ್ಚಿಸುವುದರ ಮೂಲಕ ಭಿನ್ನಮತಗಳಾಗಿ ಬೇರ್ಪಟ್ಟಿವೆ.

ಜೀವ ಮತ್ತು ಜಗತ್ತುಗಳು ಜಗದೀಶ್ವರನಿಂದಲೇ ಪ್ರೇರಿತವಾದವುಗಳು, ಇವೆರಡೂ ಒಂದೇ, ಇವುಗಳಲ್ಲಿ ಭೇದವಿಲ್ಲ, ಪರಮಾತ್ಮನಿಂದಲೇ ನಡೆಯತಕ್ಕವುಗಳು, ಪರಮಾತ್ಮನ ವಿನಾ ಬೇರೆ ವಸ್ತುವಿಲ್ಲ, ಪರಮಾತ್ಮನೊಬ್ಬನೇ ಎಂದು ಅಭೇದವನ್ನು ಹೇಳುವ ತತ್ವವೇ ಅದ್ವೈತ. ಇವೆರಡೂ ಬೇರೆ ಬೇರೆ ಎಂದು ಭೇದವನ್ನು ಕಲ್ಪಿಸುವ ತತ್ವ ದ್ವೈತ. ವಿಶಿಷ್ಟಾದ್ವೈತ ಈ ಎರಡು ತತ್ವಗಳನ್ನೂ ಬೆಸೆಯುವ ಕೆಲಸಮಾಡಿರುವಂತಿದೆ. ಚಿತ್ – ಅಚಿತ್‌ಗಳು ಈಶ್ವರನಿಂದ ಬೇರೆಯಾದರೂ ಅವನಿಗೆ ಶರೀರವಾಗಿರತಕ್ಕವು, ಅವನ ವಿಶೇಷಣಗಳು, ಆದ್ದರಿಂದ ಅವನಿಲ್ಲದೆ ಇವಕ್ಕೆ ಅಸ್ತಿತ್ವವಿಲ್ಲ. ಹಾಗಾಗಿ ಈ ವಿಶೇಷಣಗಳಿಂದ ಕೂಡಿದ ಪರಮಾತ್ಮನೊಬ್ಬನೇ ದೈವ. ಜೀವ, ಜಗತ್ತುಗಳು ಜಗದೀಶ್ವರನ ಶರೀರ, ವಿಶೇಷಣ ಎಂಬ ವೈಶಿಷ್ಟ್ಯವನ್ನು ಹೇಳುವ ಮೂಲಕ ವಿಶಿಷ್ಟಾದ್ವೈತವೆನಿಸಿದೆ.

ಈ ತತ್ವಗಳು ಮತ – ಪಂಥಗಳಾಗಿ ಬಳಕೆಗೆ ಬರುವ ಕಾಲದಲ್ಲಿ ವೈದಿಕ ಸಂಸ್ಕೃತಿಯಲ್ಲಿ ಪೂಜೆಗೊಳ್ಳುತ್ತಿದ್ದ ಈಶ್ವರ ಸ್ವರೂಪಕ್ಕೆ ಎರಡು ರೂಪಗಳಿದ್ದವು. ಶಿವ – ಕೇಶವ ಅಥವಾ ಹರಿ –ಹರ. ವೇದಗಳ ಕಾಲದಲ್ಲಿ ಇವುಗಳ ಜೊತೆಗೆ ಇಂದ್ರ, ವರುಣ, ಅಗ್ನಿ, ಸೂರ್ಯ, ಬ್ರಹ್ಮ ಇನ್ನೂ ಮುಂತಾದ ಅನೇಕ ದೇವತೆಗಳೂ ಪೂಜಾರ್ಹವಾಗಿದ್ದವು. ಕಾಲಕ್ರಮೇಣ ಅವುಗಳೆಲ್ಲ ಹಿಂದೆ ಸರಿದು ಈ ಎರಡು ದೈವಗಳೇ ಪ್ರಾಬಲ್ಯ ಸಾಧಿಸಿದ್ದವು. ಅದ್ವೈತತತ್ವವು ಹರಿ–ಹರ ಇಬ್ಬರನ್ನೂ ಸಮಾನವಾಗಿ ಕಂಡು ಈಶ್ವರರೂಪವನ್ನು ಬ್ರಹ್ಮ ಎಂದು ಕರೆದು ಅಬೇಧ ಕಲ್ಪಿಸಿದರೆ ದ್ವೈತದಲ್ಲಿ ಹರನನ್ನು ಒಪ್ಪಿಕೊಂಡು ಈಶ್ವರಸ್ವರೂಪವನ್ನು ಹರಿ ಎಂದು ಕರೆದು ಹರಿಪಾರಮ್ಯವನ್ನು ಸಾಧಿಸಿರುವುದನ್ನು ಕಾಣುತ್ತೇವೆ. ವಿಶಿಷ್ಟಾದ್ವೈತ ಹರನನ್ನು ನಿರಾಕರಿಸಿ ಹರಿಸರ್ವೋತ್ತಮತ್ವವನ್ನು ಮಾತ್ರ ಸ್ವೀಕರಿಸಿ ಹರಿಏಕನಿಷ್ಠೆಯನ್ನು ಸಾಧಿಸಿದೆ. ಇದನ್ನು ಈ ಕೆಳಕಂಡ ವಿಶೇಷ ಲಕ್ಷಣಗಳಿಂದ ಗುರುತಿಸಬಹುದಾಗಿದೆ.

೧. ಶ್ರೀಹರಿ ಏಕನಿಷ್ಠೆ: ಈ ಭೂಲೋಕ, ಇದರೊಂದಿಗಿರುವ ಇನ್ನೂ ಹಲವು ಲೋಕಗಳನ್ನು ಹೊಂದಿರುವ, ಬ್ರಹ್ಮಾಂಡವನ್ನೇ ವ್ಯಾಪಿಸಿರುವ, ಈ ಜಗತ್ತನ್ನೇ ದೇಹವನ್ನಾಗಿಸಿಕೊಂಡಿರುವ, ಸರ್ವಶಕ್ತಿ ಸ್ವಾತಂತ್ರ್ಯಗಳಿಂದ ಕೂಡಿರುವ ಪುರುಷನೊಬ್ಬನಿರುವನು. ಅವನು ಊಹಿಸಲಸಾಧ್ಯವಾದ ವಿಶ್ವರೂಪಿ-ಯಾಗಿರುವನಾದರೂ ಬೇರೆ ಬೇರೆ ರೂಪಗಳನ್ನೂ ಧರಿಸುವ ಶಕ್ತಿಯುಳ್ಳವನು. ಸರ್ವೇಶ್ವರನೂ ಪರಮಪುರುಷನೂ ಸರ್ವಶಕ್ತನೂ ಪರಮಾತ್ಮನೂ ಆದ ಈತನು 'ನಾರಾಯಣ' ರೂಪದಿಂದ ವೈಕುಂಠದಲ್ಲಿರುವನು. ವೈಕುಂಠ ಲೋಕವನ್ನು 'ಪರಮಪದ' ಎಂದು ಕರೆದಿದ್ದು ನಾರಾಯಣನನ್ನು 'ಪರವಾಸುದೇವ ರೂಪದಲ್ಲೂ ಗುರುತಿಸಲಾಗಿದೆ. ಇವನು ಸಮಸ್ತಕಲ್ಯಾಣಗುಣಾನ್ವಿತ, ದಿವ್ಯಮಂಗಳಕರ ವಿಗ್ರಹ, ಸಮಸ್ತ ಸಂಪತ್ತುಳ್ಳವನು, ಪರಮಕಾರುಣ್ಯಮೂರ್ತಿ. ಇವನಿಗೆ ಸಮಾನರೂ ಅಧಿಕರೂ ಈ ಬ್ರಹ್ಮಾಂಡದಲ್ಲಿ ಮತ್ತೊಬ್ಬರಿಲ್ಲ. ಇವನು 'ಶ್ರೀ' ಅಥವ 'ಲಕ್ಷ್ಮೀ' ಹೆಸರಿನ ಪತ್ನೀ ಸಮೇತನಾಗಿರುತ್ತಾನೆ. ಶ್ರೀಮನ್ನಾರಾಯಣನಂತೆ ಶ್ರೀದೇವಿಯೂ ಈಶ್ವರ ಸ್ವರೂಪಳಾದರೂ ನಾರಾಯಣನಿಗೆ ಅಧೀನ ಸ್ವಾತಂತ್ರ್ಯವುಳ್ಳವಳು. ವೈಕುಂಠದಲ್ಲಿ ಲಕ್ಷ್ಮೀನಾರಾಯಣನೊಂದಿಗೆ ಅನಂತ (ಆದಿಶೇಷ) ಗರುಡ, ವಿಶ್ವಕ್ಸೇನರೂ ಇದ್ದು ಇವರೆಲ್ಲ ನಿತ್ಯರು ಮತ್ತು ನಾರಾಯಣನ ಸೇವಕರು. ಹೀಗೆ ಸರ್ವೋತ್ತಮ-ವಾಗಿರುವ ಶ್ರೀಮನ್ನಾರಾಯಣನೇ 'ಪರತತ್ವ' ಎಂದು ನಂಬುವುದೇ ಶ್ರೀವೈಷ್ಣವ ಧರ್ಮದ ಸಿದ್ಧಾಂತ. ಈ ಸಿದ್ಧಾಂತಜ್ಞಾನವು ಜೀವನ ಆತ್ಮ ಶ್ರೇಯಸ್ಸಿಗೆ ಕಾರಣವಾಗಿ ಆ ಶ್ರೇಯಸ್ಸೇ ಮುಕ್ತಿ ಎನಿಸಿಕೊಳ್ಳುತ್ತದೆ. ಇತರ ಮತಗಳು ದುಃಖವನ್ನು ದೂರಮಾಡಿ ಸುಖಾಪೇಕ್ಷೆಗಾಗಿ 'ತತ್ವ'ವನ್ನು, ಅದನ್ನು ಪಡೆಯುವ ಫಲವಾದ 'ಪುರುಷಾರ್ಥ'ವನ್ನು, ಅದಕ್ಕಾಗಿ ಕ್ರಮಿಸುವ ಮಾರ್ಗವಾದ 'ಹಿತ'ವನ್ನು ವಿವಿಧ ಸಾಧನೋಪಾಯಗಳಿಂದ ಕಂಡುಕೊಂಡಿವೆಯಾದರೆ ವಿಶಿಷ್ಟಾದ್ವೈತ ಈ ಒಂದೊಂದಕ್ಕೂ ಪ್ರತ್ಯೇಕವಾಗಿ ಸಾಧನೆ ಮಾಡಬೇಕಾದ ಅಗತ್ಯವಿಲ್ಲವೆಂದೂ ಎಲ್ಲಕ್ಕೂ ಶ್ರೀಮನ್ನಾರಾಯಣ ನೊಬ್ಬನನ್ನೇ ಆಶ್ರಯಿಸಿದರೆ ಸಾಕೆಂದೂ ಎಲ್ಲವನ್ನೂ ಅವನೇ ಕರುಣಿಸುತ್ತಾನೆಂದೂ ಏಕನಿಷ್ಠ ದೇವೋಪಾಸನೆಯನ್ನು ವಿಶಿಷ್ಟವಾಗಿ ಪ್ರತಿಪಾದಿಸಿದೆ. ಮೋಕ್ಷಕ್ಕೆ ಅತ್ಯಂತ ಸರಳ – ಸುಲಭ ಉಪಾಯವಾಗಿ 'ಪ್ರಪತ್ತಿ' ಅಥವಾ 'ಧ್ಯಾನ'ದ ಮಾರ್ಗವನ್ನು ಹೇಳುತ್ತದೆ. ಇದರ ಸಾಧನೆಗೆ ಹರಿನಾಮಸ್ಮರಣೆಯಷ್ಟೇ ಸಾಕೆನ್ನುತ್ತದೆ.

೨. **ಪ್ರಪತ್ತಿ–ಶರಣಾಗತಿ:** ಇತರ ಧರ್ಮಗಳಲ್ಲಿ ಮೋಕ್ಷಪಡೆಯಲು ಹಲವು ಜನ್ಮಗಳನ್ನು ಅನುಭವಿಸಬೇಕಾಗುತ್ತದೆ. ಪಾಪಶೇಷಗಳು ಕಳೆಯುವವರೆಗೂ ಜೀವಕ್ಕೆ ಮುಕ್ತಿಯಿಲ್ಲ. ಅಲ್ಲಿಯವರೆಗೆ ಸಾಧನೆ ಮಾಡುತ್ತಲೇ ಇರಬೇಕಾಗುತ್ತದೆ. ಆದರೆ ಶ್ರೀವೈಷ್ಣವ ಧರ್ಮದಲ್ಲಿ ಮನುಷ್ಯಜನ್ಮವೇ ಸರ್ವಶ್ರೇಷ್ಠ ಮತ್ತು ಜನ್ಮಾಂತರ ವಿಕಾಸದಲ್ಲಿ ತುಟ್ಟತುದಿಯುದು. ಇಲ್ಲಿಂದ ಎಂದಿಗೂನಾಶವಿಲ್ಲದ, ಶಾಶ್ವತವಾದ, ಜ್ಞಾನಾನಂದಮಯವಾದ ವೈಕುಂಠ ಸೇರುವುದೇ ಮೋಕ್ಷದ ಸ್ಥಿತಿ. ಅದಕ್ಕಾಗಿ ಕ್ಲಿಷ್ಟಕರವಾದ ಹಲವು 'ಯೋಗ'ಗಳನ್ನು ಅನುಸರಿಸಬೇಕಾಗಿಲ್ಲ. ಶ್ರೀಮ–ನ್ನಾರಾಯಣನಲ್ಲಿ ಪ್ರಪತ್ತಿ ಅಥವಾ ಶರಣಾಗತಿ ಅಥವ ಭರನ್ಯಾಸ ಮಾಡುವುದು ಅತ್ಯಂತ ಸುಲಭ ಉಪಾಯ. ಜೀವನು ಸಂಪೂರ್ಣವಾಗಿ ಪರಮಾತ್ಮನಲ್ಲಿ ಶರಣಾದರೆ ಅವನ ಹೊಣೆ ಆ ಪರಮಾತ್ಮನಿಗೆ ಸೇರುವುದು. ಅವನು ಮೋಕ್ಷವನ್ನು ಕರುಣಿಸುತ್ತಾನೆ. ಜಗತ್ತಿಗೇ ಮಾತಾ ಪಿತೃಗಳಾದ ಲಕ್ಷ್ಮೀ ನಾರಾಯಣರು ಅಭಯ ನೀಡುತ್ತಾರೆ, ಕರುಣೆತೋರುತ್ತಾರೆ. ವೈಕುಂಠದಲ್ಲಿ ಸೇರಿಸುತ್ತಾರೆ ಎಂದು ನಂಬುವುದೇ ಶ್ರೀವೈಷ್ಣವ ಧರ್ಮ. ಈ ಪ್ರಪತ್ತಿ ಧರ್ಮವನ್ನು ಈ ಎರಡು ಶ್ಲೋಕಗಳು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ.

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚಯಾಚತೆ
ಅಭಯಂ ಸರ್ವಭೂತೇಭ್ಯೋ ಪರಮ್ಯೇತದ್ವತಂಮಮ

– ಶ್ರೀರಾಮ, ರಾಮಾಯಣ

(ಒಂದು ಬಾರಿ ನನ್ನಲ್ಲಿ ಪ್ರಪತ್ತಿಯನ್ನು ಮಾಡಿದರೆ, ಎನ್ನವನೆಂದು ಯೋಚಿಸುವ ಸರ್ವಭೂತಗಳಿಗೂ ಅಭಯವನ್ನು ಕೊಡುತ್ತೇನೆ.)

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ
ಅಹಂ ತ್ವಾಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ

– ಶ್ರೀ ಕೃಷ್ಣ, ಭಗವದ್ಗೀತೆ.

(ಸಮಸ್ತ ಉಪಾಯಗಳನ್ನು (ಅನ್ಯ ಧರ್ಮ, ದೈವಗಳನ್ನು) ಬಿಟ್ಟು ನನ್ನೊಬ್ಬನಲ್ಲಿಯೇ ಶರಣಾದರೆ ನಾನು ನಿನ್ನನ್ನು ಸಮಸ್ತ ಪಾಪಗಳಿಂದಲೂ ಮುಕ್ತನನ್ನಾಗಿಸುತ್ತೇನೆ.)

ಪ್ರಪತ್ತಿಯೋಗ ಶ್ರೀವೈಷ್ಣವ ಧರ್ಮದ ಏಕೈಕ ಸಾಧನ ಕ್ರಮ. ಜ್ಞಾನ, ಭಕ್ತಿ, ಯಜ್ಞ, ಕರ್ಮ ಯೋಗಗಳಿಗಿಂತ ಈ ಶರಣಾಗತಿಯೋಗವನ್ನೇ ಇದು ಸುಲಭೋಪಾಯವಾಗಿ ಸ್ವೀಕರಿಸಿದೆ. ಮೋಕ್ಷವನ್ನು ಬಯಸುವ ಜೀವನಾದ ಮುಮುಕ್ಷು ಭಗವಂತನಲ್ಲಿ ಸಂಪೂರ್ಣ ಶರಣಾಗಿ ನಾಮಸ್ಮರಣೆ ಮಾಡಿದರೂ ಸಾಕು ಅವನು ಕೃಪೆದೋರುತ್ತಾನೆನ್ನುವ ಈ ಉಪಾಯವು ದೇವರನ್ನು ಬಯಸುವ ಜಗತ್ತಿನಲ್ಲಿರುವ ವಿಧಾನಗಳಲ್ಲೆಲ್ಲ ಅತಿಸುಲಭ ವಿಧಾನವೆನಿಸಿದೆ ಎಂದು ಚಿಂತಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ಧ್ಯಾನ ಧಾರಣನಾಗಬೇಕಂತೆ ಪ್ರಪಂಚದೊಳಗೆ ದೀನ ನಾನಾದೊಡೆ ಮುಖ್ಯಸಾಕಂತೆ' ಎಂಬಷ್ಟು ಸರಳವಾಗಿ ಇದು ಜನಪ್ರಿಯವಾಗಿದೆ.

೩. **ಮಹಾಲಕ್ಷ್ಮೀ ಪ್ರಾಧಾನ್ಯತೆ ಮತ್ತು ವಿಶ್ವಕ್ಸೇನ ಕಲ್ಪನೆ:** ವಿಶಿಷ್ಟಾದ್ವೈತ ತತ್ವವನ್ನು ಶ್ರೀಮನ್ನಾರಾಯಣನಿಂದ ಉಪದೇಶ ರೂಪದಲ್ಲಿ ತಿಳಿದುಕೊಂಡು ಶ್ರೀಮಹಾಲಕ್ಷ್ಮಿ ವಿಶ್ವಕ್ಸೇನರಿಗೆ ಉಪದೇಶ ಮಾಡಿದಳೆಂದೂ ವಿಶ್ವಕ್ಸೇನರಿಂದ ನಾರದಾದಿ ಭಗವದ್ಭಕ್ತರ ಮೂಲಕ ಜಗತ್ತಿಗೆ ಉಪದೇಶವಾಯಿತೆಂದೂ ಶ್ರೀವೈಷ್ಣವ ತತ್ವ ನಂಬುವುದರಿಂದಲೇ ಶ್ರೀಮಹಾಲಕ್ಷ್ಮೀ ಸಮೇತನಾದ ಶ್ರೀಮನ್ನಾರಾಯಣನನ್ನು ಅನುಸಂಧಾನ ಮಾಡುತ್ತದೆ. ಈ ಧರ್ಮದಲ್ಲಿ ನಾರಾಯಣನ ನಂತರ ಲಕ್ಷ್ಮಿಗೆ ಎರಡನೇ ಸ್ಥಾನ. ನಾರಾಯಣನ ಕೃಪೆ ದೊರಕಬೇಕಾದರೆ ಲಕ್ಷ್ಮಿಯನ್ನೇ ಮೊರೆಹೋಗಬೇಕು. ಲಕ್ಷ್ಮಿಯಿಲ್ಲದೆ ನಾರಾಯಣನಿಲ್ಲ. (ಇದು ಪುರುಷ ಪ್ರಾಧಾನ್ಯತೆಯನ್ನು ಹೊಂದಿರುವ ಆರ್ಯಸಂಸ್ಕೃತಿಗಿಂತ ಭಿನ್ನವಾದ ಸ್ತ್ರೀ ಸಮಾನತೆ, ಸ್ತ್ರೀ ಪ್ರಾಧಾನ್ಯತೆಯನ್ನು ಸಾರುವ ದ್ರಾವಿಡಸಂಸ್ಕೃತಿಯೂ ಆಗಿರುವಂತಿದೆ.) ಆದ್ದರಿಂದಲೇ ಹರಿಯನ್ನು 'ಶ್ರೀಹರಿ' ಎಂದು ಕರೆದಿರುವುದು ಮತ್ತು ಹರಿಯ ಎಲ್ಲ ರೂಪಗಳನ್ನು ಲಕ್ಷ್ಮೀ ಅಥವಾ ಶ್ರೀ ಸಮೇತವಾಗಿಯೇ ಕಲ್ಪಿಸಿರುವುದು. (ಲಕ್ಷ್ಮೀನಾರಾಯಣ, ಲಕ್ಷ್ಮೀವೆಂಕಟೇಶ್ವರ, ಲಕ್ಷ್ಮಿನರಸಿಂಹ, ಶ್ರೀರಾಮ, ಶ್ರೀಕೃಷ್ಣ,

ಶ್ರೀನಿವಾಸ ಇತ್ಯಾದಿ). ಶ್ರೀವೈಷ್ಣವ ಭಕ್ತರು ಲಕ್ಷ್ಮಿಯನ್ನು ತಾಯಿಯ ರೂಪದಲ್ಲೂ ವಿಷ್ಣುವನ್ನು ತಂದೆಯ ರೂಪದಲ್ಲೂ ಸ್ವೀಕರಿಸಿದ್ದಾರೆ. ತಾಯಿಯ ಮೂಲಕ ತಂದೆಯಿಂದ ತಮಗೆ ಬೇಕಾದ ಅಗತ್ಯಗಳನ್ನು ಪೂರೈಸಿಕೊಳ್ಳುವ ಮಗನಂತಹ ಅತ್ಯಂತ ಸಹಜವಾದ ವಾತ್ಸಲ್ಯಮಯಭಾವ ಈ ಧರ್ಮದ ಜೀವ–ದೇವರ ನಡುವೆ ಕಂಡುಬರುತ್ತದೆ. ಹೀಗೆ ಲಕ್ಷ್ಮೀ ಸಮೇತ ಧರ್ಮವಾದ್ದರಿಂದ ಇದು 'ಶ್ರೀವೈಷ್ಣವ'ವಾಗುತ್ತದೆ.

ವಿಶ್ವಕ್ಸೇನರೇ ಜಗತ್ತಿನ ಜೀವಕೋಟಿಗೆ ಧರ್ಮದ ಮೂಲವಾಗಿರುವುದರಿಂದ ವಿಶ್ವಕ್ಸೇನರ ಆರಾಧನೆಗೆ ಈ ಧರ್ಮ ಮಹತ್ವ ಕೊಡುತ್ತದೆ. ವಿಶ್ವಕ್ಸೇನರನ್ನು 'ಕುಮುದಗಣೇಶ' ಎಂದೂ ಕರೆಯಲಾಗಿದೆ. ವೈಕುಂಠದಲ್ಲಿ ಸೇನಾಧಿಪತಿಯಾಗಿರುವ ಈ ವಿಶ್ವಕ್ಸೇನರನ್ನು ಒಲಿಸಿಕೊಂಡರೆ ಲಕ್ಷ್ಮಿನಾರಾಯಣರ ದರ್ಶನ ಸುಲಭವೆಂದು ಭಾವಿಸಲಾಗಿದೆ. ಆದ್ದರಿಂದಲೇ ಶ್ರೀವೈಷ್ಣವಧರ್ಮದಲ್ಲಿ ಗಣೇಶ (ಗೌರೀಪುತ್ರ, ವಿಘ್ನವಿನಾಶಕ)ನ ಪೂಜೆಯಿರುವುದಿಲ್ಲ. ಬದಲಿಗೆ ಈ ವಿಶ್ವಕ್ಸೇನರನ್ನೇ ವಿಘ್ನವಿನಾಶಕರನನ್ನಾಗಿ ಭಾವಿಸಿ ಪ್ರತಿಯೊಂದು ಕಾರ್ಯದಲ್ಲಿಯೂ ಮೊದಲು ಪ್ರಾರ್ಥಿಸಲಾಗುತ್ತದೆ. ಈ ವಿಶ್ವಕ್ಸೇನರಿಗೆ ಮೂರ್ತಿ ಪೂಜೆ ರೂಢಿಯಲ್ಲಿಲ್ಲ. ಮಂತ್ರಪೂಜೆ ಮಾತ್ರವಿದೆ. 'ಶುಕ್ಲಾಂಬರಧರಂ ವಿಷ್ಣುಂ....' ಎಂಬ ಪ್ರಸಿದ್ಧ ಶ್ಲೋಕ ವಾಸ್ತವವಾಗಿ ಈ ವಿಶ್ವಕ್ಸೇನರ ಪ್ರಾರ್ಥನೆಯೇ ಆಗಿದೆ. ಈಗ ನಂಬಿರುವಂತೆ ಗೌರಿಪುತ್ರ ಗಣೇಶನದಲ್ಲ. ಈ ಶ್ಲೋಕದಲ್ಲಿ ಗಜಮುಖಗಣೇಶನ ವರ್ಣನೆ ಬರುವುದಿಲ್ಲ. ವಿಷ್ಣುದೇವಾಲಯಗಳಲ್ಲಿರುವ ದ್ವಾರಪಾಲಕರ ರೂಪದಂತಿರುವ ಸುಂದರವದನದ ಈ ವಿಶ್ವಕ್ಸೇನರ ಸಂಕೇತವಾದ ವಿಘ್ನವಿನಾಶಕನವರ್ಣನೆಯಿದೆ.

೪. **ಶ್ರೀಹರಿಯರೂಪಭೇದಗಳು** : ಕೈವಲ್ಯ ಪದವಿಗಾಗಿ ಶ್ರೀಹರಿಯೊಬ್ಬನನ್ನೇ ಈ ಧರ್ಮ ಸ್ವೀಕರಿಸಿದ್ದರೂ ಸಹ ಅವನಲ್ಲೇ ಸ್ವರೂಪಭೇದವನ್ನು ಕಲ್ಪಿಸಿದೆ, ಪರಾತ್ಪರನಾಗಿರುವ ಶ್ರೀಮನ್ನಾರಾಯಣನ ಸ್ವರೂಪ ಐದು ಬಗೆಯಾಗಿದ್ದು ಅವನ್ನು 'ಪರ', ವ್ಯೂಹ, ವಿಭವ, ಅಂತರ್ಯಾಮಿ ಮತ್ತು ಅರ್ಚಾ ಎಂದು ಹೇಳಲಾಗಿದೆ. (ಪರ)ದಲ್ಲಿ ನಿತ್ಯ, ನಿರ್ವಿಕಾರ, ಲೋಕಾತೀತನಾದ ವಾಸುದೇವನನ್ನು ಮಾತ್ರ

ಕಲ್ಪಿಸಲಾಗಿದೆ. 'ವ್ಯೂಹ'ದಲ್ಲಿ ಸಂಕರ್ಷಣ, ಅನಿರುದ್ಧ, ಪ್ರದ್ಯುಮ್ನರನ್ನು ಇವರುಗಳ ಮೂಲಕ ದ್ವಾದಶನಾಮಗಳ ರೂಪವನ್ನು ಭಗವಂತನಿಗೆ ಹೆಸರಿಸಲಾಗಿದೆ. 'ವಿಭವ'ದಲ್ಲಿ ಭಗವಂತನ ದಶಾವತಾರಗಳನ್ನು ಒಳಗೊಂಡು ೩೯ ಅವತಾರಗಳನ್ನು ಕಲ್ಪಿಸಲಾಗಿದೆ. ದಶಾವತಾರದಲ್ಲಿ ಪ್ರಚಲಿತವಿರುವ ಬುದ್ಧನನ್ನು ಶ್ರೀ ವೈಷ್ಣವಧರ್ಮ ತನ್ನ ತತ್ವಕ್ಕೆ ಅನುಗುಣವಾಗಿ ಸ್ವೀಕರಿಸಿಲ್ಲ. ಬದಲಿಗೆ ಬಲರಾಮ ಅಥವಾ ತ್ರಿಪುರಾಂತಕಹರಿ ರೂಪಗಳನ್ನು ಅನುಸಂಧಾನ ಮಾಡುತ್ತದೆ. 'ಅಂತರ್ಯಾಮಿ' ರೂಪವು ಅಗೋಚರವಾದ ಯೋಗಸಿದ್ಧಿಯ ದಾರ್ಶನಿಕರಿಗೆ ಮಾತ್ರ ಕಾಣಸಿಗುವ ದರ್ಶನರೂಪ. ಇದು ಆಕಾರ ಬಣ್ಣ ಹೆಸರಿಲ್ಲದ ಇಡೀ ಜಗತ್ತನ್ನು ನಡೆಸುತ್ತಿರುವ ಒಂದು ಶಕ್ತಿ ವಿಶೇಷ. 'ಅರ್ಚ' ರೂಪ ಸಾಮಾನ್ಯ ಭಕ್ತರ ಕಲ್ಪನೆಗೆ ಒಳಪಟ್ಟು ಆಲಯ – ಮನೆಗಳಲ್ಲಿ ಅರ್ಚಿಸಲ್ಪಡುವ ವಿಗ್ರಹರೂಪ. ಈ ಅರ್ಚಾರೂಪದ ಭಗವಂತ ಮಾತ್ರ ಭಕ್ತರ ಕೈಗೆ ಎಟುಕುವಂತಹುದು.

ಹೀಗೆ ಅನೇಕ ರೂಪಗಳಲ್ಲಿರುವ ಭಗವಂತ ಸಕಲ ಜೀವಕೋಟಿಗಳಲ್ಲಿ ಜೀವಾತ್ಮನ ರೂಪದಲ್ಲೂ ಇದ್ದಾನೆ. ಈ ಜೀವಿಗಳ ವ್ಯಾಪಾರ ಈ ಆತ್ಮ ಇರುವವರೆಗೆ ಮಾತ್ರ. ಶ್ರೀಮನ್ನಾರಾಯಣನೇ ಜಗತ್ತನ್ನು ನಡೆಸುವ ಸೂತ್ರಧಾರ. ಶ್ರೀಹರಿಯು ತನ್ನ ಸಂಕಲ್ಪದಿಂದ ಬ್ರಹ್ಮನನ್ನೂ ಅವನಿಂದ ರುದ್ರನನ್ನೂ ಇಂದ್ರಾದಿ ಸಕಲ ದೇವತೆಗಳನ್ನೂ ಸೃಷ್ಟಿಸಿ ಅವರವರಿಗೆ ನಿರ್ದಿಷ್ಟವಾದ ಲೋಕಕಲ್ಯಾಣ ಕಾರ್ಯವನ್ನು ನಿಯಮಿಸುತ್ತಾನೆ. ಈ ಒಬ್ಬೊಬ್ಬ ದೇವ – ದೇವತೆಗಳಿಗೂ ನಾರಾಯಣನು ನೇಮಿಸಿರುವ ಕಾರ್ಯಗಳಲ್ಲಿ ಮಾತ್ರ ಅಧಿಕಾರವಿರುತ್ತದೆ. ನಾರಾಯಣನ ಜಗತ್ತಿನ ಈ ರಕ್ಷಣಾಕಾರ್ಯ ಒಂದು ರೀತಿಯಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಂತಿದೆ. ಪ್ರಧಾನಮಂತ್ರಿ ಮತ್ತು ಅವನ ಮಂತ್ರಿ ಮಂಡಲ; ಅವರಿಂದ ನೇಮಿಸಲ್ಪಡುವ ಅಥವಾ ಅವರಿಗೆ ಅಧೀನರಾದ ರಾಜ್ಯಗಳ ಮುಖ್ಯಮಂತ್ರಿ ಮತ್ತು ಸಚಿವ ಮಂಡಲವಿದ್ದಂತೆ. ಎಲ್ಲ ಅಧಿಕಾರವೂ ಸರ್ವಶಕ್ತನಾದ ಶ್ರೀಮನ್ನಾರಾಯಣನ ಕೈಯಲ್ಲಿರುತ್ತದೆ. ಹೀಗೆ ಇಡೀ ಜೀವ–ಜಗತ್ತನ್ನು ನಾರಾಯಣಮಯವನ್ನಾಗಿ ಮಾಡಿ ಹರಿಸರ್ವೋತ್ತಮತ್ವವನ್ನು ಸಾಧಿಸಿರುವುದು ಈ ಧರ್ಮದ ವೈಶಿಷ್ಟ್ಯ. ಅದಕ್ಕಾಗಿಯೇ ಇದು ಹರಿಏಕನಿಷ್ಠೆಯನ್ನು ಅನುಸರಿಸುವುದು.

೫. ಪಂಚಸಂಸ್ಕಾರ: ಈ ಧರ್ಮೀಯರು ಲೋಕದಲ್ಲಿ ಧರ್ಮಾನು ಸರಣೆಯನ್ನು ಪಂಚಸಂಸ್ಕಾರಭೂತವಾಗಿ ಸ್ವೀಕರಿಸಿರುತ್ತಾರೆ. ತಮ್ಮ ಭುಜಗಳ ಮೇಲೆ ಭಗವಂತನ ಚಿನ್ಹೆಗಳಾದ ಶಂಖಚಕ್ರಗಳನ್ನು ಧಾರಣಮಾಡಿಕೊಳ್ಳುವ 'ತಾಪ'. ಹಣೆಯ ಮೇಲೆ ಮತ್ತು ದೇಹದ ೧೨ ಭಾಗಗಳಲ್ಲಿ ಎರಡು ಬಿಳಿಯ ನಾಮಗಳು ನಡುವೆ ಒಂದು ಶ್ರೀಚೂರ್ಣದ ನಾಮವನ್ನು ಧರಿಸುವ 'ಪುಂಡ್ರ', ಆಚಾರ್ಯರ ಮೂಲಕ 'ದಾಸ' ಎಂಬ ಅಂಕಿತವನ್ನು ಪಡೆಯುವ ಮೂಲಕ ಪ್ರಪತ್ತಿ ಅಥವಾ ಶರಣಾಗತಿಮಾರ್ಗದ ಸ್ವೀಕಾರದ 'ನಾಮ' ತತ್ವ–ಹಿತ ಪುರುಷಾರ್ಥಸಾಧಕಗಳ ರೂಪವೆನಿಸಿದ ರಹಸ್ಯತ್ರಯದ ಉಪದೇಶವಾದ 'ಮಂತ್ರ' ಮತ್ತು ಮಾನಸಿಕ ಮನಃಶುದ್ಧಿಯ ಇಂದ್ರಿಯನಿಗ್ರಹ ಹಾಗೂ ಬಾಹ್ಯಮನಃ ಶುದ್ಧಿಯ 'ಅರ್ಚಾ' ಪೂಜಾ ವಿಧಿಗಳನ್ನು ಸ್ವೀಕರಿಸುವ 'ಯಾಗ' ಎಂಬ ಐದು ಸಂಸ್ಕಾರಗಳು ಶ್ರೀವೈಷ್ಣವ ಧರ್ಮೀಯನಿಗೆ ಉಪನಯನ ಕಾಲದಲ್ಲೇ ಆಚಾರ್ಯಾಭಿಮುಖದಲ್ಲಿ ನಡೆಯುವುದರ ಮೂಲಕ ಪ್ರತಿಯೊಬ್ಬ ಶ್ರೀವೈಷ್ಣವನೂ ಸಂಸ್ಕಾರದ ಮೂಲಕ ದಾಸನೇ ಆಗಿರುತ್ತಾನೆ. ಅವರವರ ಪ್ರವರ ಹೇಳುವ ಕಾಲದಲ್ಲಿ ಪ್ರತಿಯೊಬ್ಬರೂ ತಮ್ಮ ಹೆಸರಿನ ಮುಂದೆ ದಾಸನ್ ಎಂದು ಸೇರಿಸಿಕೊಳ್ಳುವುದು ಈ ಕಾರಣಕ್ಕಾಗಿಯೇ.

೬. ಮಂತ್ರ ರಹಸ್ಯ: ಈ ಪ್ರಪತ್ತಿಧರ್ಮದ ಸಾಧನೆಗಾಗಿ ಮುಮುಕ್ಷುವು ಆಚಾರ್ಯಾಭಿದಾನವಾಗಿರುವ 'ರಹಸ್ಯತ್ರಯ ಮಂತ್ರ'ವನ್ನು ಸದಾ ಅನುಸಂಧಾನ ಮಾಡಬೇಕೆಂಬ ನಿಯಮವಿದೆ. ಈ ರಹಸ್ಯತ್ರಯದಲ್ಲಿ ಮೂರು ಮಂತ್ರಗಳಿವೆ. (೧) ಮಂತ್ರರಾಜವೆನಿಸಿರುವ ಮೂಲಮಂತ್ರವಾದ ಅಷ್ಟಾಕ್ಷರಿಮಂತ್ರ : 'ಓಂ ನಮೋ ನಾರಾಯಣಾಯಃ' (೨) ದ್ವಯಮಂತ್ರವಾದ 'ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೇ ಶ್ರೀಮತೇ ನಾರಾಯಣಾಯ' ಹಾಗೂ (೩) ಚರಮಶ್ಲೋಕವೆನಿಸಿರುವ 'ಸರ್ವ ಧರ್ಮಾನ್ ಪರಿತ್ಯಜ್ಯ.........' ಎಂಬ ಶ್ಲೋಕ. ಇವುಗಳನ್ನು ಪ್ರತಿನಿತ್ಯ, ಪ್ರತಿಕ್ಷಣ ಅನುಸಂಧಾನ ಮಾಡಬೇಕೆಂದೂ ಇವು ಅತ್ಯಂತ ರಹಸ್ಯಮಂತ್ರಗಳಾಗಿರುವುದರಿಂದ ಇತರರಿಗೆ ಮತ್ತು ಗಟ್ಟಿಯಾಗಿ ಹೇಳಬಾರದೆಂದೂ ವಿಧಿಯಿದೆ. (ಈ ಮಂತ್ರಗಳನ್ನೇ ರಾಮಾನುಜರು ಗಿರಿಯಮೇಲೆ ನಿಂತು ಜನಕ್ಕೆಲ್ಲ

ತಿಳಿಯುವಂತೆ ಉದ್ಘೋಷ ಮಾಡಿ ಇದರ ಪ್ರಯೋಜನ ಸಾಮಾನ್ಯ ಜನರಿಗೂ ಸಿಗಲೆಂದು ಪ್ರಚಾರಮಾಡಿದ್ದು) ಈ ಮಂತ್ರಗಳ ಬಗ್ಗೆ ಶ್ರೀವೈಷ್ಣವ ಧರ್ಮಗ್ರಂಥಗಳಲ್ಲಿ ವಿಶೇಷವಾದ ವ್ಯಾಖ್ಯಾನಗಳಿವೆ. ರಾಮಾನುಜರೇ 'ರಹಸ್ಯತ್ರಯಸಾರ' ಎಂಬ ಗ್ರಂಥವನ್ನು ಬರೆದಿದ್ದಾರೆ. ಶ್ರೀವೈಷ್ಣವ ಧರ್ಮದ ತಿರುಳೇ ಇದರಲ್ಲಿದೆ.

೭. **ಆಳ್ವಾರರ ಪ್ರಬಂಧಗಳು:** ಶ್ರೀ ವೈಷ್ಣವಧರ್ಮದ ಈ ಸಿದ್ಧಾಂತಗಳಿಗೆ ಆಧಾರ, ಇತರ ಧರ್ಮಗಳಿಗೆ ಆಧಾರವಾಗಿರುವ ಪ್ರಸ್ಥಾನತ್ರಯಗಳೇ ಆದರೂ (ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ) ವಿಶಿಷ್ಟಾದ್ವೈತಕ್ಕೆ ಆಳ್ವಾರರ ಪ್ರಬಂಧಗಳೂ ಒಂದು ಆಧಾರವಾಗಿರುವುದರಿಂದ ಇದು 'ಪ್ರಸ್ಥಾನಚತುಷ್ಟಯ' ವೆನಿಸಿದೆ. ಕ್ರಿ.ಶ. ೭ನೇ ಶತಮಾನದಿಂದ ೯ನೇ ಶತಮಾನದ ಅವಧಿಯವರೆಂದು ಇತಿಹಾಸಕಾರರು ಗುರುತಿಸಿರುವ ೧೨ ಜನ ಆಳ್ವಾರರು ಶರಣಾಗತಿಯ ಮೂಲಕ ಭಗವಂತನನ್ನು ವಿವಿಧ ರೀತಿಯಲ್ಲಿ ಭಾವನಾತ್ಮಕವಾಗಿ ಸ್ತುತಿಸಿರುವ ಹಾಡುಗಳ ನಾಲ್ಕು ಸಾವಿರ ಪಾಶುರ (ಶ್ಲೋಕ) ಗಳನ್ನು ರಚಿಸಿದ್ದು ಇವುಗಳನ್ನು 'ನಾಲಾಯಿರ ದಿವ್ಯಪ್ರಬಂಧಗಳು' ಎಂದು ಕರೆಯಲಾಗಿದೆ. ಈ ಪ್ರಬಂಧಗಳಲ್ಲೂ ವೇದ – ಉಪನಿಷತ್ತು – ರಾಮಾಯಣ – ಮಹಾಭಾರತ – ಭಾಗವತ ವಿಶೇಷವಾಗಿ ಭಗವದ್ಗೀತೆಯ ಸಾರ ಅಡಗಿರುವುದರಿಂದ ಈ ಮತವನ್ನು ಸ್ಥಾಪಿಸಿದ ರಾಮಾನುಜಾಚಾರ್ಯರು ಇದನ್ನು ಒಂದು ಪ್ರಮಾಣವಾಗಿ ಸ್ವೀಕರಿಸಿ ಇದನ್ನು ವೇದಸಮಾನಗೊಳಿಸಿದ್ದಾರೆ. ಅನೇಕ ವಿಮರ್ಶಕರು ಈ ಪ್ರಬಂಧಗಳಲ್ಲಿ ವೈದಿಕ ಸಾಹಿತ್ಯದಲ್ಲಿಲ್ಲದ ಎಷ್ಟೋ ಹೊಸ ವಿಚಾರಗಳು ಇವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಭಾರತದಾದ್ಯಂತ ಧರ್ಮದ ಮೂಲವಾಗಿರುವ ವೈದಿಕ ಸಾಹಿತ್ಯಕ್ಕೆ ಸರಿಸಮನಾಗಿ, ಸ್ಥಳೀಯ ಭಾಷೆಯಲ್ಲಿರುವ ದ್ರಾವಿಡ ಪ್ರಬಂಧಗಳು ಧರ್ಮಸ್ಥಾಪನೆಗೆ ಮತ್ತು ದರ್ಶನ ವ್ಯಾಖ್ಯಾನಕ್ಕೆ ಆಕರವಾಗಿ ನಿಂತಿರುವುದು ಬಹುಶಃ ಇಲ್ಲೊಂದೇ ಕಡೆ ಎನಿಸುತ್ತದೆ. ಆರ್ಯಸಂಸ್ಕೃತಿಗಿಂತ ಭಿನ್ನವಾದ ದ್ರಾವಿಡ ಸಂಸ್ಕೃತಿಯೊಂದು ಈ ದೇಶದಲ್ಲಿ ಅತ್ಯಂತ ಶಕ್ತಿಯುತವಾಗಿ ಮತ್ತು ಗಟ್ಟಿಯಾಗಿ ಬೇರೂರಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಆಳ್ವಾರರುಗಳೆಲ್ಲ ಸಾಮಾನ್ಯ ಜನವರ್ಗದ ಪ್ರತಿನಿಧಿಗಳಾಗಿದ್ದು ಇವರಲ್ಲಿ ವೈದಿಕರಲ್ಲದೆ ಇತರ ಜಾತಿಯವರೂ – ಅಂತ್ಯಜರೂ ಕ್ಷತ್ರಿಯರೂ ಮಹಿಳೆಯರೂ – ಇರುವುದು ವಿಶೇಷ, ಧರ್ಮೋಪದೇಶ ಮತ್ತು ದೈವಸಾಕ್ಷಾತ್ಕಾರ ಕೇವಲ ವೇದಪಾರಂಗತರಿಗೆ ಮಾತ್ರ ಎಂಬ ಆರ್ಯಮತದ ಸಿದ್ಧಹೇಳಿಕೆಯನ್ನು ಬದಲಾಯಿಸಿದ ಸ್ಥಿತಿಗೆ ಮತ್ತು ಹೊಸ ವ್ಯಾಖ್ಯಾನಕ್ಕೆ ಇದು ದಾರಿ ಮಾಡಿಕೊಟ್ಟಿದೆ. ಈ ಆಳ್ವಾರರುಗಳ ಸಾಧನೆಯಾದ ಅತ್ಯಂತ ಸರಳ ಮತ್ತು ಸುಲಭವಾದ ಶರಣಾಗತಿಯ ತತ್ವ ಶ್ರೀವೈಷ್ಣವಧರ್ಮದ ಮುಖ್ಯ ತಿರುಳಾಗುವ ಮೂಲಕ ಇತರ ಧರ್ಮಗಳಿಂದ ಇದು ಸಹಜವಾಗಿ ಭಿನ್ನವಾಗಿ ಮತ್ತು ವಿಶಿಷ್ಟವಾಗಿ ನಿಲ್ಲುವಂತಾಗಿದೆ. ಈ ಧರ್ಮದಲ್ಲಿ ಬರುವ ೧೨ ಜನ ಆಳ್ವಾರರನ್ನು ಬೇರೆ ಬೇರೆ ಧರ್ಮಗ್ರಂಥಗಳಲ್ಲಿ ಬೇರೆ ಬೇರೆ ಕ್ರಮದಲ್ಲಿ ಗುರುತಿಸಿರುವುದು ಕಂಡು ಬರುತ್ತದಾದರೂ ಶ್ರೀವೈಷ್ಣವ ಸಂಪ್ರದಾಯದ ಮುಖ್ಯ ಗ್ರಂಥವಾದ ಗುರುಪರಂಪರಾ ಪ್ರಭಾವ 'ಹೇಳುವ ಕ್ರಮವನ್ನೇ ಎಲ್ಲರೂ ಒಪ್ಪಿದ್ದು ಆ ಕ್ರಮ ಈ ರೀತಿ ಇದೆ.

೧. ಪೊಯ್‌ಗೈಯಾಳ್ವಾರ್

೨. ಪೂದತ್ತಾಳ್ವಾರ್

೩. ಪೇಯಾಳ್ವಾರ್

ಇವರನ್ನು ಮೊದಲಾಳ್ವಾರರೆಂದು ಕರೆಯಲಾಗಿದೆ. ಇತಿವೃತ್ತ, ಜಾತಿ, ಊರು ಇತ್ಯಾದಿಗಳೇನೂ ತಿಳಿದಿಲ್ಲ, ಇವರು ಮೂವರು ಒಂದೆಡೆ ಸಂಧಿಸಿದ್ದರೆಂದೂ ಮತ್ತು ಒಂದೇ ತೆರವಾದ ಜೀವನಕ್ರಮ, ಭಕ್ತಿಮಾರ್ಗ–ಹೊಂದಿದ್ದರೆಂದೂ ಹೇಳಲಾಗಿದ್ದು ಇವರನ್ನು 'ಪುಷ್ಪಜಾತರು' ಎಂದೇ ಗ್ರಹಿಸಲಾಗಿದೆ.

೪. ತಿರುಮಳಿಶೈಯಾಳ್ವಾರ್ (ತಿರುವಳ್ಳೈ ಊರಿನವರು, ಜಾತಿ ಗೊತ್ತಿಲ್ಲ)

೫. ಕುಲಶೇಖರಾಳ್ವಾರ್ (ಕ್ಷತ್ರಿಯರು ಕೇರಳದ ತಿರುವಾಂಕೂರಿನ ರಾಜ)

೬. ಪೆರಿಯಾಳ್ವಾರ್ (ಭಟ್ಟನಾಥ ಎಂಬ ಪರ್ಯಾಯ ನಾಮವಿರುವ ಶ್ರೀವಿಲ್ಲಿಪುತ್ತೂರಿನ ಬ್ರಾಹ್ಮಣರು)

೭. ಆಂಡಾಳ್ (ಗೋದಾದೇವಿ, ಪೆರಿಯಾಳ್ವಾರರ ಸಾಕುಮಗಳು)

೮. ತೊಂಡರಡಿಪ್ಪೊಡಿಯಾಳ್ವಾರ್ (ಭಕ್ತಾಂಘಿರೇಣು, ವಿಪ್ರನಾರಾಯಣ ಎಂದು ಹೆಸರುಗಳೂ ಇರುವ ಮಂಡಂಗುಡಿಯ ಬ್ರಾಹ್ಮಣರು)

೯. ತಿರುಪ್ಪಾಣಾಳ್ವಾರ್ (ತಿರುಪ್ಪಾಣಿ, ಯೋಗಿವಾಹನ ಹೆಸರುಗಳೂ ಉಂಟು. – ಉರೈಯೂರಿನ ಅಂತ್ಯಜರು)

೧೦. ತಿರುಮಂಗೈ ಆಳ್ವಾರ್ (ನೀಲ ಹೆಸರೂ ಇದೆ. ತಿರುಮಂಗೈ ಊರಿನ ಕಳ್ಳರ ಜಾತಿ ಶೂದ್ರರು)

೧೧. ಮಧುರಕವಿಯಾಳ್ವಾರ್ (ತಿರುಕ್ಕೋಳೂರಿನ ಬ್ರಾಹ್ಮಣರು)

೧೨. ನಮ್ಮಾಳ್ವಾರ್ (ಷಡಗೋಪನ್, ಶೂದ್ರ ಹೆಸರೂ ಇದೆ. ತಿರುಕ್ಕುರುಗೂರಿನ ವೆಳ್ಳಾಳ ಜಾತಿಯರು)

ಈ ೧೨ ಜನ ಆಳ್ವಾರರಲ್ಲಿ ಯೋಗಿಗಳಾಗಿರುವ ನಮ್ಮಾಳ್ವಾರರು ಪ್ರಧಾನ ಆಳ್ವಾರರಾಗಿ ಸ್ತುತಿಸಲ್ಪಟ್ಟಿದ್ದಾರೆ. (ಈ ಆಳ್ವಾರರ ಜೀವನ ವಿವರಗಳಿಗೆ ಟಿಪ್ಪಣಿ ಭಾಗ ನೋಡಿ)

೮. ಆಚಾರ್ಯ ಪರಂಪರೆ: ಶ್ರೀವೈಷ್ಣವ ಮತವನ್ನು ಸ್ಥಾಪಿಸಿದವರು ರಾಮಾನುಜಾಚಾರ್ಯರಾದರೂ ಅವರೇ ಈ ಧರ್ಮದ ಮೊದಲ ಆಚಾರ್ಯರಲ್ಲ. ಅವರಿಗಿಂತ ಮೊದಲು ಹಲವು ಆಚಾರ್ಯರು ಆಗಿಹೋಗಿದ್ದಾರೆ. ಅವರಲ್ಲಿ ಮುಖ್ಯವಾಗಿ ಸ್ತುತಿಸುವ ಆಚಾರ್ಯರೆಂದರೆ ನಾಥಮುನಿಗಳು ಮತ್ತು ಯಾಮುನಾಚಾರ್ಯರು. ಆಳ್ವಾರರ ಪ್ರಬಂಧಗಳನ್ನೆಲ್ಲ ಸಂಗ್ರಹಿಸಿ ನಾಲಾಯಿರ ದಿವ್ಯಪ್ರಬಂಧ ರೂಪಕ್ಕೆ ತಂದವರು ನಾಥಮುನಿಗಳು. ಇವರು ಈ ಪ್ರಬಂಧಗಳನ್ನು ನಿತ್ಯಪಾರಾಯಣದಲ್ಲಿ, ಭಗವದಾರಾಧನೆಯಲ್ಲಿ ಬಳಕೆಗೆ ತರುವುದರ ಮೂಲಕ ಶ್ರೀವೈಷ್ಣವ ಧರ್ಮಕ್ಕೆ (ಉಭಯವೇದಾಂತ) ಎಂಬ ಹೆಸರನ್ನು ತಂದರು. ಉಭಯವೇದಗಳೆಂದರೆ ಚತುರ್‌ವೇದಗಳು ಮತ್ತು ವೇದಸಮಾನವಾದ ಪ್ರಬಂಧಗಳು. ಇವರ ನಂತರ ಯಾಮುನಾಚಾರ್ಯರು ಈ ಧರ್ಮದ ಸಿದ್ಧಾಂತ

ಸ್ಥಾಪನೆಗೆ ರಾಮಾನುಜರನ್ನು ನೇಮಿಸುವುದರ ಜೊತೆಗೆ ವಿಶಿಷ್ಟಾದ್ವೈತ ತತ್ವವನ್ನು ಎಲ್ಲಡೆ ಹರಡಿ ಕಂಚಿ, ಶ್ರೀರಂಗಗಳಂಥ ಪ್ರಮುಖ ಕೇಂದ್ರಗಳನ್ನು ರೂಪಿಸಿದ್ದರು. ಅನಂತರ ಬಂದ ರಾಮಾನುಜಾಚಾರ್ಯರು ಈ ಧರ್ಮವನ್ನು ಜನಮತವನ್ನಾಗಿ ಪರಿವರ್ತಿಸಿ ಸಮರ್ಥವಾದ ವ್ಯಾಖ್ಯಾನಗಳನ್ನು ರಚಿಸಿ ವೇದಾಂತದ, ಶಾಸ್ತ್ರ ಜ್ಞಾನದ ಸಂಪ್ರದಾಯದ ಜೊತೆಗೆ ಆಳ್ವಾರರ ಭಕ್ತಿ ಸಂಪ್ರದಾಯವನ್ನು ಸೇರಿಸಿ ದೇವ-ಜೀವರನ್ನು ಒಂದುಗೂಡಿಸಿ ವಿಶಿಷ್ಟಾದ್ವೈತ ಸಿದ್ಧಾಂತವಾಗಿ ಸ್ಥಾಪಿಸಿದರಲ್ಲದೆ ಅದನ್ನು ಜನಪ್ರಿಯಗೊಳಿಸಿದರು. ದಕ್ಷಿಣ ಭಾರತದಾದ್ಯಂತ ಪ್ರಚಾರ ಮಾಡಿ ತಿರುಪತಿ-ಮೇಲುಕೋಟೆಗಳನ್ನೂ ಕೇಂದ್ರಗಳನ್ನಾಗಿ ಮಾಡಿ ತಮಿಳುನಾಡಿನಲ್ಲಿ ಮಾತ್ರ ಇದ್ದ ಈ ಧರ್ಮವನ್ನು ಆಂಧ್ರ-ಕರ್ನಾಟಕಗಳಿಗೂ ವಿಸ್ತರಿಸಿ ಭಾರತದ ಪ್ರಮುಖ ವೈದಿಕಮತತ್ರಯಗಳಲ್ಲಿ ಒಂದನ್ನಾಗಿಸಿದರು. ಆದ್ದರಿಂದಲೇ ಈ ವಿಶಿಷ್ಟಾದ್ವೈತವನ್ನು 'ರಾಮಾನುಜದರ್ಶನ' ಎಂದೇ ಕರೆಯುವ ಸಂಪ್ರದಾಯವೂ ಇದೆ.

ಇವರ ನಂತರವೂ ಈ ಧರ್ಮ ಅನೂಚಾನವಾಗಿ ಬೆಳೆಯಲು ರಾಮಾನುಜರು ೭೪ ಪೀಠಗಳನ್ನು ನೇಮಿಸಿ ಅಸಂಖ್ಯಾತ ಶಿಷ್ಯಕೋಟಿಯನ್ನು ಸೃಷ್ಟಿಸಿದ್ದಾರೆ. ಈ ಆಚಾರ್ಯಪೀಠಗಳು ಈ ಧರ್ಮವನ್ನು ಇನ್ನಷ್ಟು ಜಿಜ್ಞಾಸೆಗೆ ಒಳಪಡಿಸಿ ಕನ್ನಡ ಹರಿದಾಸ ಸಾಹಿತ್ಯದಲ್ಲಿ ಕಂಡುಬರುವ ದಾಸಕೂಟ - ವ್ಯಾಸಕೂಟದಂತೆ ಇಲ್ಲೂ ವೇದಪ್ರಮಾಣವನ್ನೇ ಮುಖ್ಯವಾಗಿ ಪರಿಗಣಿಸುವ 'ತೇಂಗಲೆ' ವಡಗಲೆ ಸಂಪ್ರದಾಯಗಳು ಬೆಳೆದುನಿಂತಿವೆ. ಇಂದು ಈ ಎರಡೂ ಸಂಪ್ರದಾಯಗಳಲ್ಲಿ ನೂರಾರು ಪೀಠಗಳ ಆಶ್ರಯದಲ್ಲಿ ಈ ಧರ್ಮೀಯರು ವಿಶಿಷ್ಟಾದ್ವೈತವನ್ನು ಆಚರಿಸುತ್ತ ಶ್ರೀವೈಷ್ಣವ ಧರ್ಮವನ್ನು ಪಾಲಿಸುತ್ತ ರಾಮಾನುಜ ದರ್ಶನವನ್ನು ಪ್ರಚಾರ ಮಾಡುತ್ತಾ ಆಳ್ವಾರರ ಭಕ್ತಿಮಾರ್ಗದಲ್ಲಿ ಮುನ್ನಡೆಯುತ್ತಿದ್ದಾರೆ. ಇದರ ಸುಲಭೋಪಾಯವನ್ನು ಸ್ವೀಕರಿಸಿ ಸಮಾಜದ ಇತರ ಮತೀಯರು ಈ ಧರ್ಮಾನುಯಾಯಿಗಳಾಗಿ ಇದರ ತತ್ವಗಳನ್ನನುಸರಿಸುವ ಮೂಲಕ ಇದನ್ನು 'ಜನಮತ'ವನ್ನಾಗಿಸಿದ್ದಾರೆ.

೪. ಶ್ರೀ ವೈಷ್ಣವ ಕೀರ್ತನಸಾಹಿತ್ಯದ ಲಕ್ಷಣಗಳು

ಸದ್ಯಕ್ಕೆ ಲಭ್ಯವಿರುವ ಶ್ರೀವೈಷ್ಣವಕೀರ್ತನೆಗಳನ್ನು ಪರಿಶೀಲಿಸಿದಾಗ ಇವು ದ್ವೈತ ಮತ್ತು ಅದ್ವೈತಕ್ಕಿಂತ ಭಿನ್ನವಾದ ಪರಿಭಾಷೆಯಲ್ಲಿಯೇ ರಚನೆಯಾಗಿರುವುದು ಕಂಡುಬರುತ್ತದೆ. ಶ್ರೀವೈಷ್ಣವ ತತ್ವವಾದ ಶರಣಾಗತಿ ಮಾರ್ಗ ಅಥವಾ ಪ್ರಪತ್ತಿ ಧರ್ಮ ಈ ಕೀರ್ತನೆಗಳ ಮುಖ್ಯ ಭಾವ. ಸಾಮಾನ್ಯವಾಗಿ ದ್ವೈತವೆಂದರೆ ಹರನನ್ನು ಒಪ್ಪಿಕೊಂಡು ಹರಿಸರ್ವೋತ್ತಮತ್ವವನ್ನು ಹೇಳುವುದೆಂದೂ ಅದ್ವೈತವೆಂದರೆ ಹರಿ ಹರ ಅಭೇದವನ್ನು ಪ್ರತಿಪಾದಿಸುವುದೆಂದೂ ವಿಶಿಷ್ಟಾದ್ವೈತವೆಂದರೆ ಹರನಿರಾಕರಣೆಯೊಂದಿಗೆ ಹರಿಏಕನಿಷ್ಠೆಯನ್ನು ಸಾರುವುದೆಂದೂ ಗ್ರಹಿಸಬಹುದು. ಈ ತತ್ವಕ್ಕೆ ಅನುಗುಣವಾಗಿಯೇ ಶ್ರೀವೈಷ್ಣವ ಕೀರ್ತನೆಗಳಿವೆ. ಇಲ್ಲಿಯ ಗುರುಸ್ತುತಿ ಕೀರ್ತನೆಗಳೆಲ್ಲ ಶ್ರೀವೈಷ್ಣವ ಆಳ್ವಾರರು ಮತ್ತು ಆಚಾರ್ಯರ ಸ್ತುತಿಗಳಾಗಿ ಕನ್ನಡಸಾಹಿತ್ಯಕ್ಕೆ ಹೊಸ ಪರಿಭಾಷೆಯನ್ನು ನೀಡಿರುವುದನ್ನು ನೋಡಬಹುದು. ಶ್ರೀವೈಷ್ಣವ ಧರ್ಮದ ಮುಖ್ಯ ಸಾಹಿತ್ಯವಿರುವುದು ತಮಿಳಿನಲ್ಲಾದ್ದರಿಂದ ಆ ಧಾರ್ಮಿಕಕೃತಿಗಳ ಉಲ್ಲೇಖ ಅಲ್ಲಿಯ ಭಕ್ತರಾದ ಆಳ್ವಾರ್ – ಆಚಾರ್ಯರ ಜೀವನದ ರಸಮಯ ಸಂಗತಿಗಳ ಸೂಚನೆ ಈ ಕೀರ್ತನೆಗಳಲ್ಲಿ ಧಾರಾಳವಾಗಿ ಕಂಡುಬರುತ್ತದೆ. ಹರಿಯ ಅದರಲ್ಲೂ ವಿಶೇಷವಾಗಿ ಕೇಶವಾದಿ ದ್ವಾದಶನಾಮಗಳ ಸ್ತುತಿ ಇಲ್ಲಿ ಎದ್ದು ಕಾಣುವ ಸಂಗತಿಯಾಗಿದೆ. ಪ್ರಪತ್ತಿಧರ್ಮದ ತಿರುಳಾದ ನಾಮಸ್ಮರಣೆ, ಮಂತ್ರಮಹಿಮೆ, ಆತ್ಮಸಮರ್ಪಣೆ, ವಿರಕ್ತಿ, ಲೋಕಸುಖನಿರಾಕರಣೆ, ದೀನತೆ, ದಾಸ್ಯಮನೋಭಾವ, ಗುರುಮುಖೇನ ಹರಿದರ್ಶನ, ಹರಿಪಾದ ಸೇರುವ ಏಕೈಕ ಹಂಬಲ ಇತ್ಯಾದಿ ಭಾವಗಳು ಈ ದಾಸರ ಕೃತಿಗಳಲ್ಲಿ ಮಡುಗಟ್ಟಿ ನಿಂತಿರುವುದನ್ನು ಯಾರಾದರೂ ಸುಲಭವಾಗಿ ಗುರುತಿಸಬಹುದು.

ಶ್ರೀವೈಷ್ಣವ ಕೀರ್ತನಕಾರರು ಹರಿದಾಸವೃತ್ತಿಯನ್ನು ವೃತ್ತಿಯನ್ನಾಗಿ ಸ್ವೀಕರಿಸಿದವರಲ್ಲ. ಪ್ರಪತ್ತಿಯ ಮಾರ್ಗವಾಗಿ ಕಂಡುಕೊಂಡವರು. ಯಾವುದೇ ಗುರುವಿನ ಮೂಲಕ ಅಂಕಿತವನ್ನಾಗಲೀ ದೀಕ್ಷೆಯನ್ನಾಗಲೀ ಪಡೆದಿಲ್ಲ. ಅರ್ಚಾ ಮೂರ್ತಿಯನ್ನೇ ಅಂಕಿತವಾಗಿಟ್ಟುಕೊಂಡು ಮೋಕ್ಷ ಸಾಧನೆಯ ರೂಪವಾದ

ಭಗವನ್ನಾಮ ಸ್ಮರಣೆಯನ್ನು ಆತ್ಮ ನಿವೇದನೆಯ, ಆತ್ಮ ಸಮರ್ಪಣೆಯ ಮೂಲಕ ಮಾಡುವ ಅಂತರಂಗಭಕ್ತಿ ಈ ಕೀರ್ತನೆಗಳಲ್ಲಿ ಹೊರಹೊಮ್ಮಿದೆ. ಇವರಿಗೆ ಶ್ರೀಹರಿಯೇ ಗುರು, ತಂದೆ, ಅಂಕಿತ, ಆರಾಧ್ಯದೈವ, ಸರ್ವಸ್ವ. ಆದ್ದರಿಂದಲೇ ಇದರಲ್ಲಿ ಗುರುಮುಖೇನ ಅಂಕಿತ ಹರಿದಾಸವೃತ್ತಿಯನ್ನು, ದೀಕ್ಷೆಯನ್ನು ಸ್ವೀಕರಿಸಿರುವ ನಿದರ್ಶನಗಳು ಕಂಡು ಬರುವುದಿಲ್ಲ. ಅದ್ವೈತ ಕೀರ್ತನಕಾರರಿಗೂ ಈ ಮಾತು ಅನ್ವಯವಾಗುವುದಲ್ಲದೆ ದ್ವೈತ ಕೀರ್ತನಕಾರರಲ್ಲೂ ಕೆಲವರಿಗೆ ಅನ್ವಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಹರಿದಾಸರು ಎಂಬ ಪದದ ಅರ್ಥವ್ಯಾಪ್ತಿಯನ್ನು ಪುನರ್‌ವ್ಯಾಖ್ಯಾನಿಸಬೇಕಾದ ಅಗತ್ಯವಿದೆ.

ಈವರೆಗಿನ ಕೀರ್ತನಕಾರರ ಬಗೆಗಿನ ಅಧ್ಯಯನಗಳೆಲ್ಲ ಮಧ್ವ ಸಂಪ್ರದಾಯದ ಕೀರ್ತನೆಯ ಹಿನ್ನೆಲೆಯಲ್ಲೇ ನಡೆದಿರುವುದರಿಂದ ಕನ್ನಡ ಸಾಹಿತ್ಯದಲ್ಲಿ ಮಧ್ವೇತರ ಸಂಪ್ರದಾಯಗಳೂ ಹೆಚ್ಚುಹೆಚ್ಚಾಗಿ ಕೂಡಿಕೊಳ್ಳುತ್ತಿರುವುದರಿಂದ ಹರಿದಾಸರನ್ನು ಗುರುತಿಸುವ ದೃಷ್ಟಿಕೋನವೇ ಬದಲಾಗಬೇಕಾಗಿದೆ. 'ಕ್ರಮಬದ್ಧವಾಗಿ ಗುರುವಿನಿಂದ ದಾಸದೀಕ್ಷೆಯನ್ನು ಅಂಕಿತವನ್ನು ವಿಠಲ ನಾಮವನ್ನು ಸ್ವೀಕರಿಸಿದವರಷ್ಟೇ ಹರಿದಾಸರು. ಉಳಿದವರು ತಮ್ಮ ನಾಮದ ಮುಂದೆ ದಾಸ ಎಂಬ ಪದವನ್ನು ಕೂಡಿಸಿಕೊಂಡವರಾದರೂ ಕೃತಿರಚನೆ ಮಾಡಿದ ಹರಿದಾಸರ ಶ್ರೇಣಿಗೆ ಸೇರುವುದಿಲ್ಲ.' (ಜಿ. ವರದರಾಜರಾವ್, ಶ್ರೀಪಾದರಾಜರ ಕೃತಿಗಳು ಪೀಠಿಕೆ) ಎಂಬಂತಹ ಭಿನ್ನತೆಯನ್ನು ತರುವ ಮನೋಭಾವದಿಂದ ದೂರಾಗಿ ಸಮಷ್ಟಿ ದೃಷ್ಟಿಯಿಂದ ದ್ವೈತ ಅದ್ವೈತ ವಿಶಿಷ್ಟಾದ್ವೈತ ಭೇದವಿವಕ್ಷೆಯಿಲ್ಲದೆ ಸಮನಾಗಿ ನೋಡಬೇಕಾಗುತ್ತದೆ. ದೀಕ್ಷಾಬದ್ಧರಾದವರ ರಚನೆಗಳು ಮಾತ್ರ 'ಕೃತಿಗಳು'. ಉಳಿದವರವು 'ಪದಗಳು' ಎಂಬ ಭೇದ ತೋರದೆ ಕೀರ್ತನೆಗಳ ರಚನೆ ಮಾಡಿರುವವರೆಲ್ಲರೂ ಕೀರ್ತನಕಾರರೇ, ಹರಿದಾಸರೇ ಅವರ ರಚನೆಗಳೆಲ್ಲವೂ ಕೃತಿಗಳೇ, ಕೀರ್ತನೆಗಳೇ, ಹರಿದಾಸರ ಹಾಡುಗಳೇ ಎಂಬ ಧೋರಣೆಗೆ ಬರಬೇಕಾಗುತ್ತದೆ. ಇತ್ತೀಚೆಗೆ ವಿದ್ವಾಂಸರು ಇಂಥ ಪ್ರಯತ್ನ ಮಾಡುತ್ತಿರುವುದು ಆರೋಗ್ಯಕರ ಲಕ್ಷಣವಾಗಿದೆ.

'ಹರಿದಾಸ ಸಾಹಿತ್ಯ ಪ್ರಧಾನವಾಗಿ' ಭಕ್ತಿಪರವಾದದ್ದು. ಭಗವದ್ಭಕ್ತನು ತನ್ನ ಆತ್ಮಶೋಧನೆಯನ್ನು ಮಾಡಿಕೊಂಡು ಭಗವಂತನ ಅನುಗ್ರಹಕ್ಕಾಗಿ ಹಗಲಿರುಳೂ ಹಂಬಲಿಸುತ್ತ, ಇಷ್ಟಾರ್ಥ ಸಿದ್ಧಿಯಾದಮೇಲೆ ತನ್ನ ದಿವ್ಯಾನುಭವವನ್ನು ಇತರರಿಗೂ ತಿಳಿಯಹೇಳಿ ಸಮಸ್ತರನ್ನೂ ಸಮಷ್ಟಿದೃಷ್ಟಿಯಿಂದ ಸಮೀಕ್ಷಿಸಿದಾಗ ಅಲ್ಲಿ ಆಯಾ ಹರಿದಾಸರ ಆತ್ಮಶೋಧನೆ ಅಪರೋಕ್ಷಾನುಭವ, ಭಗವಂತನನ್ನು ಅವರು ಆರಾಧಿಸುವ ನಾನಾ ವಿಧಾನಗಳು ಮೊದಲು ನಮ್ಮ ಮನಸ್ಸನ್ನು ಸೆಳೆಯುತ್ತವೆ. (ಜಿ. ವರದರಾಜರಾವ್ ಶ್ರೀಪಾದರಾಜರ ಕೃತಿಗಳು ಪು.೨೦) ಎಂಬ ಹರಿದಾಸಸಾಹಿತ್ಯದಬಗೆಗಿನ ಸಾಮಾನ್ಯವಾದ ಅಭಿಪ್ರಾಯಕ್ಕೆ ಈ ಕೀರ್ತನೆಗಳೂ ಸಹಜವಾಗಿ ಸ್ಪಂದಿಸುತ್ತವೆ.

ಈ ಕೀರ್ತನೆಗಳಲ್ಲಿ ಆತ್ಮನಿವೇದನೆ, ಭಕ್ತಿಭಾವನೆಗಳು ಬೇರೆ ಯಾವ ಕೀರ್ತನೆಗಳಿಗೂ ಕಡಿಮೆಯಿಲ್ಲದಂತೆ ಅಭಿವ್ಯಕ್ತವಾಗಿರುವುದನ್ನು ಕಾಣಬಹುದು. (ತತ್ವಪ್ರತಿಪಾದನೆ, ದಾರ್ಶನಿಕ ಕೃತಿಗಳೂ ಇಲ್ಲದಿಲ್ಲ). ಭಗವಂತನ ಸ್ತುತಿಯನ್ನು ವಿವಿಧರೂಪದಲ್ಲಿ ಅದರಲ್ಲೂ ವಿಶೇಷವಾಗಿ ದ್ವಾದಶ ನಾಮ ಮತ್ತು ದಶಾವತಾರ ರೂಪದಲ್ಲಿ ಭಕ್ತಿ ಪರವಶತೆಯಿಂದ ಮಾಡಿರುವುದು ಈ ಕೀರ್ತನಕಾರರ ವೈಶಿಷ್ಟ್ಯ. ಇವರಿಗೆ ಹರಿ, ನಾರಾಯಣ, ರಾಮ, ಕೃಷ್ಣ ಅತ್ಯಂತ ಪ್ರಿಯವಾದ ಭಗವನ್ನಾಮ. ಭಗವಂತನನ್ನು ಸದಾ ಧ್ಯಾನಿಸುತ್ತಾ ಆರಾಧಿಸುತ್ತ, ಗೀತೆ, ಸ್ತುತಿ, ಪ್ರಬಂಧಗಳನ್ನು ಅಧ್ಯಯನ ಮಾಡುತ್ತ ಹಗಲಿರುಳೂ ಅವನ ನಾಮಸ್ಮರಣೆಯಲ್ಲೇ ತಲ್ಲೀನರಾಗಿರುವ ಈ ಕೀರ್ತನಕಾರರು ಒಂದಲ್ಲ ಹಲವು ಬಾರಿ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡು ಧನ್ಯರಾಗಿದ್ದಾರೆ. ಆ ವಿಶೇಷ ದರ್ಶನವನ್ನು-ಕನಸನ್ನು- ತಮ್ಮ ಕೀರ್ತನೆಗಳಲ್ಲಿ ಹಿಡಿದಿಟ್ಟಿದ್ದಾರೆ.

ಇವರ ಕೀರ್ತನೆಗಳಲ್ಲಿ ಸಮಾಜದರ್ಶನ, ಬದುಕಿನಬವಣೆಯ ಚಿತ್ರಣ ಇತರರಿಗಿಂತ ಸ್ವಲ್ಪ ಕಡಿಮೆಯೇ ಆದರೂ ಲೋಕನೀತಿಯನ್ನು ಹೇಳುವಲ್ಲಿ, ಸಾಮಾಜಿಕ ವಿಡಂಬನೆ ಮಾಡುವಲ್ಲಿ ಹಿಂದೆ ಬಿದ್ದಿಲ್ಲ. ಅತ್ಯಂತ ಸೂಕ್ಷ್ಮಜ್ಞರಾಗಿ ಹಲವಾರು ಅಪರೂಪದ ಮತ್ತು ನೂತನ ಪ್ರತಿಮೆಗಳ ಮೂಲಕ ಸಮಕಾಲೀನ

ಸಮಾಜವನ್ನು ಸಾಮಾಜಿಕ ಸ್ವರೂಪವನ್ನು ಹಿಡಿದಿಡುತ್ತಾರೆ. ಪುರಂದರ ದಾಸರಷ್ಟೇ ಸಮರ್ಥವಾಗಿ ಆದರೆ ಅವರಿಗಿಂತ ಭಿನ್ನವಾಗಿ 'ರಾಗಿ' ಪ್ರತಿಮೆಯನ್ನು ದುಡಿಸಬಲ್ಲವರಾಗಿದ್ದಾರೆ. ಕುದುರೆ, ಯೋಗ, ಮಾತ್ರೆ, ತಾಳ, ರಸಾಯನ, ಸುರಾಪಾನ, ವೃಕ್ಷ, ಮುತ್ತು–ರತ್ನಗಳು, ಅಳು, ನಗು, ನಂಬಿಕೆ, ಹೀಗೆ ಹಲವು ಪ್ರತಿಮೆಗಳನ್ನು ಚಮತ್ಕಾರವಾಗಿ, ತಾತ್ವಿಕವಾಗಿ, ದಾರ್ಶನಿಕವಾಗಿ ಕಲ್ಪಿಸಿ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಪ್ರಪತ್ತಿಯ ಮೂಲಕ ದೇವನಲ್ಲಿ ಸಂಪೂರ್ಣ ಶರಣಾಗತರಾಗಿ ಸಮಸ್ತವೂ – ತನ್ನ ರಕ್ಷಣೆಯೂ–ಭಗವಂತನದೆಂಬ ದಾಸ್ಯ ಭಾವದಲ್ಲಿದ್ದರೂ ಬದುಕಿನ ಜಂಜಾಟಗಳನ್ನು, ಸಮಾಜದ ದುಷ್ಕೃತ್ಯಗಳನ್ನು, ಮೌಲ್ಯಗಳ ಅಧಃಪತನಗಳನ್ನು ತಮ್ಮ ಕೃತಿಗಳಲ್ಲಿ ದಾಖಲಿಸುವ ಮೂಲಕ ಸಾಮಾಜಿಕ ಸ್ಪಂದನದಲ್ಲೂ ಇವರು ಹಿಂದೆ ಬಿದ್ದಿಲ್ಲ. ಆಚಾರ – ವಿಚಾರಗಳು, ನಡೆ – ನುಡಿ, ಕೌಟುಂಬಿಕ ವ್ಯವಸ್ಥೆ, ಮೇಲು – ಕೀಳು, ಜಾತಿ – ಕುಲ, ಮಾನವ ಸಂಬಂಧ ಹೀಗೆ ಹಲವು ಸಾಮಾಜಿಕ ದೃಷ್ಟಿಗಳು ಇವರ ಕೀರ್ತನೆಗಳಲ್ಲಿವೆ.

ಕೀರ್ತನ ಸಾಹಿತ್ಯದಲ್ಲಿ ಬರುವ ಸುಳಾದಿ, ಉಗಾಭೋಗ, ಮುಂಡಿಗೆ ದಂಡಕ, ಮೂರ್ತಿಧ್ಯಾನ ಅಥವ ಚೂರ್ಣಿಕೆ, ಜಾವಳಿ, ಜಾನಪದ ಧಾಟಿ, ತತ್ವಪದ ಹೀಗೆ ಎಲ್ಲ ಸ್ವರೂಪದ ಕೃತಿಗಳನ್ನು ಈ ಕೀರ್ತನಕಾರರೂ ರಚಿಸಿದ್ದಾರೆ. ಸರಳ ಶೈಲಿಯ ಕೀರ್ತನೆಗಳಿಂದ ಹಿಡಿದು ರಾಗ – ತಾಳ – ಪ್ರಾಸಬದ್ಧ ಶಾಸ್ತ್ರನಿಷ್ಠ, ಸಂಗೀತ – ನಾಟ್ಯಪ್ರಧಾನಕೃತಿಗಳವರೆಗೆ ಕೀರ್ತನೆಗಳಿವೆ. ಜಾನಪದ ಶೈಲಿ, ಭಾವನಾತ್ಮಕ, ಭೋದಪ್ರದ, ವರ್ಣನಾಪ್ರಧಾನ, ಭಾವಗೀತಾತ್ಮಕ, ಪ್ರಕೃತಿಚಿತ್ರಣ ಹೀಗೆ ಎಲ್ಲ ವಿಧದ ರಚನೆಗಳನ್ನೂ ಕಾಣಬಹುದು. ಹಾಗೆಯೇ ಭಾಷಿಕವಾಗಿ ದೇಸೀ ಕನ್ನಡ – ಸಂಸ್ಕೃತಭೂಯಿಷ್ಟವಾದ ಕೃತಿಗಳ ಜೊತೆಗೆ ಭಿನ್ನ ಭಾಷೆಗಳ ಸಮ್ಮಿಶ್ರಣದಲ್ಲಿ ರಚನೆಯಾಗಿರುವ ಅತ್ಯಂತ ವಿಶಿಷ್ಟವಾದ ಕೀರ್ತನೆಗಳಿವೆ. ಇದರಿಂದ ಈವರೆಗಿನ ಕೀರ್ತನ ಸಾಹಿತ್ಯಕ್ಕೆ ಯಾವ ರೀತಿಯಲ್ಲೂ ಕಡಿಮೆಯಿಲ್ಲದಂತೆ, ಸರಿಸಾಟಿ ಯಾಗುವಂತೆ ಶ್ರೀವೈಷ್ಣವ ಹರಿದಾಸ ಸಾಹಿತ್ಯವೂ ಇದೆ ಎಂಬುದನ್ನು ಸುಲಭವಾಗಿ ಗ್ರಹಿಸಬಹುದಾಗಿದೆ. ಕೀರ್ತನ ಸಾಹಿತ್ಯವನ್ನು ಸಾಮಾನ್ಯವಾಗಿ ವಿಭಾಗಿಸಬಹುದಾದ ಅ) ಆತ್ಮನಿವೇದನೆ ಆ) ತತ್ವಪ್ರತಿಪಾದನೆ ಇ) ಉಪದೇಶಾತ್ಮಕ – ಈ

ಮೂರು ಮುಖ್ಯ ವಿಭಾಗಗಳಲ್ಲಿ ಈ ಕೀರ್ತನೆಗಳೂ ವಿಭಾಗಗೊಳ್ಳುತ್ತವೆಯಲ್ಲದೆ ಉಳಿದವುಗಳಿಗಿಂತ ಭಿನ್ನವಾಗಿ ಹರಿಏಕ ನಿಷ್ಠೆ, ಆಳ್ವಾರ್–ಆಚಾರ್ಯ ಸ್ತುತಿ, ಶರಣಾಗತಿ–ಮಂತ್ರಮಹಿಮೆ, ನಾಮಸ್ಮರಣೆ, ಧ್ಯಾನಧಾರಣೆ, ದೈನ್ಯತೆ–ಗಳ ಮೂಲಕ ತಮ್ಮ ವಿಶಿಷ್ಟತೆಯನ್ನು ಕಾಯ್ದು ಕೊಳ್ಳುತ್ತವೆ.

ಶ್ರೀವೈಷ್ಣವ ಹರಿದಾಸರ ಎಲ್ಲ ಕೀರ್ತನೆಗಳೂ ಶರಣಾಗತಿ ತತ್ವದ ಲಕ್ಷಣವಾದ ಆತ್ಮಶೋಧನೆ, ದೈನ್ಯತೆ, ಆತ್ಮಸಮರ್ಪಣೆ, ಹರಿ–ಗುರುಪಾದ ಸೇವನೆಯ, ಭಾವದಿಂದ ತುಂಬಿವೆ. ಈ ಶರಣಾಗತಿಭಕ್ತಿಯ ಮೂಲಕ ದೈವಸಾನ್ನಿಧ್ಯ ಸೇರಿರುವ ಪುರಾಣ ಪ್ರತಿಮೆಗಳನ್ನು ವಿವಿಧ ರೀತಿಯಲ್ಲಿ ಹೋಲಿಸಿಕೊಂಡು ಹರಿಧ್ಯಾನವೊಂದನ್ನೇ ಧಾರಣ ಮಾಡಿಕೊಂಡು ತಮ್ಮ ಅಸ್ತಿತ್ವವನ್ನು ನಿರಾಕರಿಸಿ, ಲೋಕಾಸಕ್ತಿಯನ್ನು ತ್ಯಜಿಸಿ, ದೈವದತ್ತ ತುಡಿಯುವುದೇ ಇವರ ಗುರಿ. ಜೀವಸುಖ ಬೇಡದ, ಮರುಜನ್ಮವಿಲ್ಲದ, ಶಾಶ್ವತ ಮುಕ್ತಿಯ ಮಾರ್ಗದ ಸಾಧಕರಾಗಿ ಈ ದಾಸರು ನಿಲ್ಲುತ್ತಾರೆ.

ಈ ಶರಣಾಗತಿ ಧರ್ಮದ ಎಲ್ಲ ತಿರುಳನ್ನು ಅಹೋಬಲದಾಸರು ಈ ಕೃತಿಯಲ್ಲಿ ತತ್ವಪದದ ಧಾಟಿಯಲ್ಲಿ ಸೊಗಸಾಗಿಸಿದ್ದಾರೆ.

ಧ್ಯಾನ ಧಾರಣನಾಗಬೇಕಂತೆ ಪ್ರಪಂಚದೊಳಗೆ
ದೀನನಾನಾದಡೆ ಮುಖ್ಯ ಸಾಕಂತೆ ಪ

ಪ್ರಾಣ ಪಾನ ಸಮಾನ ವ್ಯಾನವು
ದಾನ ಹೀಗೆಂದೆಂಬೊ ಪಂಚಕ
ನೀನೆ ನಿನ್ನೊಳು ಹುಡುಕಿ ದಿವ್ಯ
ಜ್ಞಾನಗುರುಗಳು ತೋರಿಸಿದು ನಿಜ ೧

ಆಗ ನೀನದ ಕಾಣಬಹುದಂತೆ ಆಧ್ಯಾತ್ಮ ಸತ್ಯವು
ಯೋಗವೆ ನಿಜ ತಾನಹುದಂತೆ

ಭಾಗವತಗಿದು ಮುಖ್ಯವೆನ್ನುತ
ಬಾಗಿನಡೆದ ಅವಿಜ್ಞನಿಗೆ ಅದು
ಭೋಗಿಭೂಷಣ ಸರ್ವ ಸಾಕ್ಷಿ ಸ-
ರಾಗ ಮುದ್ರೆ ಸಮಾಧಿ ಹೊಂದುವ ೨

ಸ್ಮರಣೆ ನಿಂತೊಡೆ ಧ್ಯಾನ ಸಾಕಂತೆ ಅಭಯ ಪ್ರಸಿದ್ಧವು
ಕರಣನಿಗ್ರಹ ನಿನಗೆ ಬಹುದಂತೆ
ಧರಣಿ ಮದ್ಗುರು ತುಳಸಿರಾಮ ದಾ
ಸರಪ್ಪಣೆಗೊಳುಹಲಾತನ
ಚರಣ ಸೇವೆಯೊಳಿರುತಿಹುದೆ ನಿಜ
ಪರಮಪದವಿದು ಸತ್ಯನಿತ್ಯವು ೩

ಶ್ರೀನಿವಾಸ ನಿನ್ನ ದಾಸನು ನಾನಲ್ಲವೇ
ಮಾನ ಪ್ರಾಣಗಳಿಗೆ ದೊರೆಯು ನೀನಲ್ಲವೇ

ಎಂದು ಸರ್ವಸ್ವವನ್ನೂ ಭಗವಂತನಿಗರ್ಪಿಸಿ ಅವನ (೮) ಮತ್ತು ಅವನ ಭಕ್ತರ ಪಾದಸೇವನೆಮಾಡುತ್ತ ದೀನನಾಗಿ ನಡೆದುಕೊಳ್ಳುವ ಈ ತತ್ವದ ಭಕ್ತರೆಲ್ಲರ ಲೋಕಸುಖತ್ಯಾಗ ಹೀಗಿರುತ್ತದೆ.

'ಧರೆಯ ರಾಜ್ಯವನೊಲ್ಲೆ ಸಿರಿಯ ಸಂಪದವೊಲ್ಲೆ
ಸುರರು ಭೋಗಿಪ ಸುರಪುರವ ನಾನೊಲ್ಲೆ
ಪರಮೇಷ್ಠಿಪುರದೊಳಗಿರಲು ನಾನೊಲ್ಲೆ ನಿನ್ನ
ಹೊರತಾದ ಕೈವಲ್ಯ ಸ್ಥಿರವೊಲ್ಲೆನಾ' (೮)

ಆವಾವ ಪರಿಯಲಿ ರಾಮನಾಮವನು
ಆವ ಪರಿಯಲಿ ನೆನೆದು ಸುಖಿಯಾಗು ಮನವೆ (೮)

ಶ್ರೀನಿವಾಸನ ಮೂಲನಾಮವ ಸೊಗಸಿನಿಂದ
ಗಾನ ಮಾಳ್ಪ ಧೀರನಾವನೋ (ವೆಂ)

ಓಂ ನಮೋ ನಾರಾಯಣಾಯ
ಎನ್ನುವ ನಾಮದ ಬೀಜವನು ರಾ
ಮಾನುಜ ಬೆಳೆದ ಧರೆಯೊಳಗೆ (ನಾ)

ಮೂಲಮಂತ್ರವ ಜಪಿಸು ಅರ್ಹತೆಯಿರುವಂತೆ (ಇ)

ತಿರುಮಂತ್ರದ್ವಯರ್ಥರ್ದವ ಬೋಧಿಸಿ (ರಂ)

ಮುಂತಾದ ಕೀರ್ತನೆಗಳಲ್ಲಿ ಈ ತತ್ವದ ಶರಣಾಗತಿಗೆ ಸಾಧನವಾದ 'ಮಂತ್ರ ಮಹಿಮೆ', 'ನಾಮ ಸ್ಮರಣೆಗಳು' ಹೇರಳವಾಗಿ ಗೋಚರವಾಗುತ್ತವೆ.

ಸೃಷ್ಟಿನಾಥಪದಯುಕ್ತರ ಭಕ್ತಿಯು
ಕೊಟ್ಟರಭೀಷ್ಟವು ಎನಗಯ್ಯ
ಇಷ್ಟರ ಮೇಲಿನ್ನು ಲಕ್ಷ ಕೊಟ್ಟರು ಎನ
ಗಿಷ್ಟವಿಲ್ಲ ಶ್ರೀಕೃಷ್ಣಯ್ಯ. (ವೆಂ)

ಎಂಬಷ್ಟು ಅಚಲವಾದ ನಿಷ್ಠೆ ಈ ದಾಸರ ಶರಣಾಗತಿಗೆ. ತನ್ನನ್ನು ತಾನು ದೇವನಲ್ಲಿ ಅರ್ಪಿಸಿಕೊಂಡನೆಂದರೆ ಆ ನಿಷ್ಠೆಗೆ ಎಂದೂ ಕುಂದಾಗದಂತೆ ನಡೆದುಕೊಳ್ಳುವ ವ್ರತ ಈ ಪ್ರಪತ್ತಿ. ಅದಕ್ಕಾಗಿಯೇ ಅಸಾಧ್ಯವಾದ ದೈನ್ಯತೆ, ದಾಸ್ಯ ಪ್ರವೃತ್ತಿ, ತನ್ನದೇನೂ ಇಲ್ಲ ಎಂಬ ನಿವೃತ್ತಿ, ಬದುಕಿನ ನಿರಾಸಕ್ತಿ ದೇವ - ದೈವಭಕ್ತರ ಪಾದ ಸೇವನೆಯೊಂದೇ ಮುಕ್ತಿಗೆ ದಾರಿ ಎಂಬ ಅಚಲ ನಂಬಿಕೆ ಈ ದಾಸರಲ್ಲಿ ಎದ್ದು ಕಾಣುವುದು ಈ ತತ್ವ ನಿಷ್ಠೆಯಿಂದಲೇ. (ಕನಕದಾಸರಲ್ಲೂ ಕಾಣುವುದು ಇದನ್ನೇ ಕನಕದಾಸರು ವಿಶಿಷ್ಟಾದ್ವೈತ ತತ್ವಾನುಯಾಯಿಗಳೇ ವಿನಾ ಮಧ್ವ (ದ್ವೈತ) ತತ್ವಾನುಯಾಯಿಗಳಲ್ಲಿ ಅದಕ್ಕಾಗಿಯೇ ಅವರು ಪುರಂದರರಿಗಿಂತ ಭಿನ್ನವಾಗಿ ತೋರುವುದು).

ಇವರ ಆತ್ಮನಿವೇದನೆಯ ಕೃತಿಗಳು ಸಮರ್ಪಣೆಯ ಭಾವದಿಂದ ಸಾರ್ಥಕತೆಯನ್ನು ಪಡೆದಿವೆ. ಅದು ಗರುಡ, ಹನುಮಂತ, ಲಕ್ಷ್ಮಣರಂತೆ ಕಷ್ಟಗಳನ್ನು ಸಂತೋಷವಾಗಿ ಅನುಭವಿಸುತ್ತ, ವಿರಾಮವಿಲ್ಲದೆ ಸೇವೆಗೈಯುತ್ತ ಆನಂದಿಸಬಹುದು. ಕೌಸಲ್ಯೆ, ದೇವಕಿ, ಯಶೋದೆ, ಪೆರಿಯಾಳ್ವಾರರಂತೆ ದೇವರನ್ನು ಮಗುವಾಗಿ ಭಾವಿಸಿ, ಪ್ರೀತಿಸಿ ಮಾತೃವಾತ್ಸಲ್ಯದ ಆರೈಕೆ ಮಾಡಬಹುದು. ಆಂಡಾಳ್, ರಾಧೆ, ನಮ್ಮಾಳ್ವಾರರಂತೆ ಭಗವಂತನನ್ನು ಪತಿ ಎಂದು ಭಾವಿಸಿ ಸತಿ – ಪತಿ ಭಾವದ ಪ್ರೇಮ–ವಿರಹದಲ್ಲಿ ಮುಳುಗಬಹುದು. ಬಲಿ, ತಿರುಪ್ಪಾಣಾಳ್ವಾರ್, ತೊಂಡರ–ಡಿಪ್ಪಡಿಯಾಳ್ವಾರರಂತೆ ಸರ್ವಸ್ವವನ್ನೂ ಸಮರ್ಪಿಸಿ ಅಡಿಯಾಳಾಗಬಹುದು. ಅಂಬರೀಷ, ವಿಭೀಷಣ, ಸುಗ್ರೀವರಂತೆ ಶರಣಾಗತಿ ಮಾಡಬಹುದು. ಅರ್ಜುನನಂತೆ ಸಖನಾಗಿರಬಹುದು. ಪ್ರಹ್ಲಾದ, ಶುಕ, ಧ್ರುವ, ಜನಕರಂತೆ ಏಕಚಿತ್ತದಿಂದ ಸ್ತುತಿಸಿ ಕಾರುಣ್ಯ ಸಂಪಾದಿಸಬಹುದು; ಅಜಾಮಿಳ, ವಾಲ್ಮೀಕಿ, ಗಜೇಂದ್ರ ದ್ರೌಪದಿಯರಂತೆ ನಾಮಸ್ಮರಣೆಯಿಂದಲೇ ಇಚ್ಛಿಸಿದುದನ್ನು ಪಡೆಯಬಹುದು. ಕುಬ್ಜೆ, ಕುಚೇಲ, ವಿದುರ, ಶಬರಿ, ಗೋಪಿಕೆಯರು, ಶಿಬಿ, ಜಟಾಯು, ಅಕ್ರೂರ, ಅಹಲ್ಯೆಯರಂತೆ ಅನನ್ಯವಾಗಿ ಸ್ತುತಿಸುತ್ತಾ ದೈವದರ್ಶನಕ್ಕಾಗಿ ಕಾಯುತ್ತಾ ಮುಕ್ತಿಪಡೆಯಬಹುದು. ಹಿರಣ್ಯಾಕ್ಷ, ಕಶಿಪು, ರಾವಣ, ಶಿಶುಪಾಲ, ದುರ್ಯೋಧನರಂತೆ ದ್ವೇಷಿಸುತ್ತ ನಿಂದಿಸುತ್ತಲೂ ದೇವರನ್ನು ಕಾಣಬಹುದು. ಹೀಗೆ ಎಲ್ಲ ರೀತಿಯ ದಿವ್ಯದರ್ಶನದ ಮಾರ್ಗಗಳನ್ನು ಶರಣಾಗತಿಯ ತಳಹದಿಯ ಮೇಲೆ ಕಲ್ಪಿಸಿಕೊಂಡು ಆತ್ಮವನ್ನು ಪರಿಪರಿಯಾಗಿ ದೇವರಿಗೆ ಸಮರ್ಪಿಸುತ್ತ ನವವಿಧಭಕ್ತಿಯ ಮೂಲಕ ಮೋಕ್ಷಕ್ಕಾಗಿ ಹಾತೊರೆಯುವುದೇ ಈ ಕೀರ್ತನಕಾರರ ಪರಮಗುರಿಯಾಗಿರುತ್ತದೆ. ಪುರಾಣ ಪ್ರತಿಮೆಗಳಿಲ್ಲದ ಕೀರ್ತನೆಗಳೇ ಇಲ್ಲ ಎನ್ನುವಷ್ಟು ಬಾಹುಳ್ಯದಿಂದ ಮೇಲಿನ ಎಲ್ಲ ಭಕ್ತರ, ಆಳ್ವಾರರ ನಿದರ್ಶನಗಳನ್ನು ಯಥೇಚ್ಛವಾಗಿ ತರುತ್ತಾರೆ. ಭಗವಂತನ ಲೀಲಾವಿಲಾಸಗಳನ್ನು – ಅದು ಈ ಭಕ್ತರಿಗೆ ಒಲಿದದ್ದೂ ಆಗಿರಬಹುದು; ಶಿಷ್ಟ ನಿಗ್ರಹವಾಗಿರಬಹುದು – ಕೃಷ್ಣನ ಲೀಲೆಗಳಾಗಿರಬಹುದು–ಮನ ತುಂಬಿ ಸ್ತುತಿಸುವ ಭಾವಪರವಶತೆಯನ್ನು ಈ ಕೀರ್ತನೆಗಳಲ್ಲಿ ಕಾಣಬಹುದು.

ತತ್ವಪ್ರತಿಪಾದನೆಯನ್ನೇ ನೇರವಾಗಿ ಮಾಡಿರುವ ತಾತ್ವಿಕ, ದಾರ್ಶನಿಕ ಕೃತಿಗಳೂ ಪ್ರತ್ಯೇಕವಾಗಿ ಈ ಕೀರ್ತನಕಾರರಲ್ಲಿ ಕಂಡುಬಂದರೂ ಆತ್ಮ ನಿವೇದನೆಯ ಕೃತಿಗಳೆಲ್ಲವೂ ತತ್ವ ಪ್ರತಿಪಾದನೆಯ ಕೃತಿಗಳೂ ಆಗಬಲ್ಲವು. ಏಕೆಂದರೆ ಆತ್ಮ ನಿವೇದನೆಯ ಕೀರ್ತನೆಗಳನ್ನು ಈ ಕೀರ್ತನಕಾರರು ಶ್ರೀವೈಷ್ಣವ ತತ್ವವಾದ ಶರಣಾಗತಿಯ ತಳಹದಿಯ ಮೇಲೆಯೇ ಕಟ್ಟಿರುತ್ತಾರೆ. ಶ್ರೀವೈಷ್ಣವ ಮತಕ್ಕೆ ಈ ಪ್ರಪತ್ತಿಯೇ ಮೂಲಾಧಾರ, ಶರಣಾಗತಿ ಎಂಬುದು ಅತ್ಯಂತ ಸರಳವಾದ ಆದರೆ ಅಷ್ಟೆ ಕಠಿಣವಾದ ಭಕ್ತಿಯ ಮಾರ್ಗ. ಸುಖಾಪೇಕ್ಷೆ ತೊರೆದು ತನ್ನದೇನೂ ಇಲ್ಲವೆನ್ನುವ, ನಾನು ನಾನಲ್ಲವೆಂಬ ಸ್ಥಿತಿ.

ತನ್ನ ರಕ್ಷಣೆಯ ಹೊಣೆಯನ್ನು ಭಗವಂತನ ಮೇಲೆ ಹಾಕಿ ತಾನು ನಿಶ್ಚಿಂತನಾಗಿ (ತನ್ನ ರಕ್ಷಣೆಯಿಂದ ಮತ್ತು ಲೌಕಿಕ ಜೀವನದಿಂದ) ಶ್ರೀಹರಿಯೊಬ್ಬನನ್ನೇ ಧ್ಯಾನಿಸುತ್ತಾ ಭಗವಂತನ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುವುದೇ ಪ್ರಪತ್ತಿಯ ಸಾಧನೆ. ತತ್ವ – ಹಿತ – ಪುರುಷಾರ್ಥಗಳೆಲ್ಲ ನಾರಾಯಣನ ನಾಮೋಚ್ಚಾರಣೆಯೇ. ಅನ್ಯ ಮಾರ್ಗವಿಲ್ಲದೆ, ಅನ್ಯ ದೈವ ಕಲ್ಪನೆಯಿಲ್ಲದೆ ಪರಮಾತ್ಮನೇ ಸರ್ವೋತ್ತಮನೆಂದು ನಂಬಿ, ಅವನ ಪ್ರಾಪ್ತಿಗಾಗಿ ಸರ್ವಸ್ವವನ್ನೂ ತ್ಯಜಿಸಿ ಅವನ ಸಾಕ್ಷಾತ್ಕಾರವೇ ತನ್ನ ಜೀವಿತದ ಪರಮಗುರಿಯಾಗಿಸಿ ಅವನ ಧ್ಯಾನವನ್ನೇ ಸದಾಕಾಲಮಾಡುತ್ತಾ ಇರುವುದೇ ಶರಣಾಗತಿ ಮಾರ್ಗದ ಧರ್ಮ. ಈ ಧರ್ಮದ ಪ್ರತಿಪಾದನೆಯಾಗಿ ಇವರ ಒಂದೊಂದು ಕೃತಿಗಳೂ ನಿಲ್ಲುತ್ತವೆ. ಇದರ ಸಾಧನೆಗಾಗಿ 'ರಹಸ್ಯತ್ರಯ ಮಂತ್ರ'ವನ್ನು ಅನುಸಂಧಾನಮಾಡುವುದೇ ಈ ಭಕ್ತನ ಉಪಾಸನೆ. ಈ ತತ್ವಗಳನ್ನು ಸಾರಿರುವ ಆಳ್ವಾರರ ಆಚಾರ್ಯರ ಸ್ತುತಿ ಮತ್ತು ನಾಮಮಹಿಮೆ ಇವರ ಕೃತಿಗಳಲ್ಲಿ ಮೇಲಿಂದಮೇಲೆ ಬರುತ್ತವೆ.

ಶ್ರೀವೈಷ್ಣವ ತತ್ವಗಳನ್ನು ಅವುಗಳ ಒಳಗುಟ್ಟುಗಳನ್ನು ಅತ್ಯಂತ ಸರಳವಾಗಿ ನೇರವಾಗಿ ಸ್ಪಷ್ಟವಾಗಿ ಕೀರ್ತನಸಾಹಿತ್ಯದಲ್ಲಿ ತರುವುದರ ಮೂಲಕ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಾದ್ವೈತ ತತ್ವವನ್ನು ಸೊಗಸಾಗಿ ಮಾಡಿಸಿರುವ ಪ್ರಮುಖ ದಾಖಲೆಗಳಾಗಿ ಇವು ನಿಲ್ಲುತ್ತವೆ. ಶ್ರೀವೈಷ್ಣವ ತತ್ವದ ಮೂಲ ಎಲ್ಲ ಪ್ರಮೇಯಗಳನ್ನೂ ಇವುಗಳಲ್ಲಿ

ತರಲಾಗಿದೆ. ಆಳ್ವಾರರು - ಆಚಾರ್ಯರು ಈ ಶ್ರೀ ವೈಷ್ಣವ ತತ್ವದ ಮೂಲ ಪ್ರತಿಪಾದಕರು. ಈ ತತ್ವಾನುಯಾಯಿಗಳಿಗೆ ಇವರೇ ಗುರುಗಳು. ಇವರನ್ನು ಹೊರತಾಗಿ ಅನ್ಯಗುರುಗಳ ಸ್ತುತಿ ಇವರಲ್ಲಿ ಕಂಡುಬರುವುದಿಲ್ಲ. ಇಲ್ಲಿಯ ಗುರುಸ್ತುತಿಯ ಇನ್ನೊಂದು ವಿಶೇಷ ಗುರು ಈ ಗುರು ಪರಂಪರೆಯನ್ನು ದೈವಸಮಾನವಾಗಿ ಸ್ವೀಕರಿಸಿರುವುದು, ಇವರ ಪಾದಸೇವನೆಯೇ ಮುಕ್ತಿಗೆ ದಾರಿ ಎಂಬ ಅಚಲನಂಬಿಕೆಯಿರುವುದು. ಈ ಆಳ್ವಾರಾಚಾರ್ಯರ ದಾಸರನ್ನೂ ಗುರುಗಳಾಗಿ ಸ್ವೀಕರಿಸುವವರೆಗೂ ಈ ಭಾವವಿರುತ್ತದೆ. ಈ ಗುರುಸ್ತುತಿಯ ರೂಪದಲ್ಲಿರುವ ಆಳ್ವಾರ್–ಆಚಾರ್ಯರ ಸ್ತುತಿ ಈ ಕೀರ್ತನೆಗಳ ಬಹಳ ಮುಖ್ಯ ವೈಶಿಷ್ಟ್ಯವಾಗಿದ್ದು, ಕನ್ನಡ ಕೀರ್ತನೆಗಳಿಗೆ ಹೊಸ ಓದನ್ನು, ಪರಿಕಲ್ಪನೆಯನ್ನು ಒದಗಿಸುವಲ್ಲಿ ಇದು ಯಶಸ್ವಿಯಾಗಿದೆ.

'ಆಚಾರ್ಯ ಪ್ರಾಚಾರ್ಯ ಪರಮಾಚಾರ್ಯ'
'ಆಳ್ವಾರ್ ತಿರುವಡಿಗಳೆ ಶರಣೆನ್ನುತ
ಬಾಳ್ವರು ಭಜಿಪುದು ಭಕುತಿಯಲಿ'
'ವಕುಳಾಭರಣನೆ ಶರಣೆಂಬೆ'

'ನಾಥವಾನಸ್ಮಿ ವಿಪ್ರನಾರಾಯಣೇನ'
'ಶ್ರೀಗೋದಾದೇವಿ ಶ್ರೀಭೂನೀಳಾ ಆಂಡಾಳ್ ದೇವಿ'
'ರಾಮಾನುಜಾಚಾರ್ಯ ಮೌನಿವರ್ಯ
ನೇಮದಿಂದಲಿ ಗೈದೆ ನಾಂ ಸ್ವಾಮಿಕಾರ್ಯ'

ಮುಂತಾದ ಇನ್ನೂ ಹಲವು ಕೃತಿಗಳಲ್ಲಿ ಈ ಬಗೆಯ ನೂತನ ಗುರುಸ್ತುತಿ ಸ್ವರೂಪವನ್ನು ಕಾಣಬಹುದು. ವಿಶಿಷ್ಟಾದ್ವೈತ ಮತದ ಎಲ್ಲ ಪ್ರಮೇಯಗಳನ್ನೂ ಈ ಕೃತಿ ಯಶಸ್ವಿಯಾಗಿ ಹಿಡಿದಿಟ್ಟಿರುವುದನ್ನು ನೋಡಬಹುದು.

ವಿಶಿಷ್ಟಾದ್ವೈತ ಮತವೇ ಮತವು
ವಿಷ್ಣುಪದವೇ ಶಾಶ್ವತ ಪದವು ಪ.

ವಸಿಷ್ಠ ನಾರದ ಸನಕಾದಿ ವಂದ್ಯನ
ವಿಶಿಷ್ಟ ಪರಿಗ್ರಹ ವೇದಾಂತಸಾರದ ಅ.ಪ.

ಆಸೇತು ಹಿಮಾಚಲ ವಿಶೇಷದ
ವಿಶೇಷ ಪ್ರಮಾಣ ಚತುಷ್ಟಯದ ೧

ಚಿತ್ತು ಅಚಿತ್ತೀಶ್ವರ ತತ್ವವನು
ಪ್ರತ್ಯೇಕವಾಗಿಯೇ ಬೋಧಿಸಿಹ ೨

ಪರ ವ್ಯೂಹ ವಿಭವಾಂತರ್ಯ ಅರ್ಚಾ
ಪರಿಪರಿ ರೂಪದ ಶ್ರೀಹರಿ ಪೂಜನ ೩

ರಹಸ್ಯತ್ರಯ ಮಂತ್ರ ವಿಶಿಷ್ಟದ
ಸಹಮತ ಸುಲಭೋಪಾಯ ವಿಧಾನದ ೪

ಹರ ಅಜ ಸುರರೆಲ್ಲರು ಹರಿಮತ
ಹರಿಯೊಬ್ಬನ ಪಾದವೆ ಮೋಕ್ಷಪಥದ ೫

ಪ್ರಪತ್ತಿಮಾರ್ಗದ ಪ್ರಧಾನ ಧರ್ಮದ
ಉಪವೃತ್ತಿಯ ಬೇಡದ ಶರಣಾಗತಿಯ ೬

ಸತತವು ಹೆಬ್ಬಾಜಿ ಕೇಶವನಾಮ
ನುತಿಸಿದವನ ಭವಬಂಧನ ಬಿಡಿಸುವ ೭

(ನಾರಾಯಣ ಶರ್ಮ – ೪೮೪)

'ನೀನಾರು ನಾನಾರು ನೀನೆನ್ನೊಳಿರಲು'

'ನೀನೆನ್ನೊಳಡಗಿಹೆಯೋ ರಂಗಯ್ಯ ನಾನಿನ್ನೊಳಡಗಿಹೆನೊ,'

ಮುಂತಾದ ಕೀರ್ತನೆಗಳ ಮೂಲಕ ದೇವ –ಜೀವಗಳ ಸಂಬಂಧದ ವಿಶಿಷ್ಟಾದ್ವೈತ ದೃಷ್ಟಿಯಾದ ಜೀವ–ಜಡಗಳೆರಡೂ 'ದೇವನಲ್ಲಿ ಲೀನವಾಗಿವೆ.

ಇವುಗಳನ್ನು ವಿಶೇಷಣವಾಗಿ ಹೊಂದಿರುವ ವಿಶ್ವವ್ಯಾಪಕ ರೂಪ ಶ್ರೀಹರಿ' ಎಂಬುದನ್ನು ಈ ಕೀರ್ತನೆಗಳು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ. ಪುರಂದರ ದಾಸರ–

ಎರಡೂ ಒಂದಾಗದು ರಂಗ ಪ

ಎರಡು ಒಂದಾಗದು ಎಂದೆಂದಿಗು ರಂಗ ಅ.ಪ.

ಒಂದೆ ವೃಕ್ಷದಲಿ ಎರಡು ಪಕ್ಷಿಗಳು
ಒಂದೇ ಗೂಡಿನಲಿ ಇರುತಿಹವು.......

ಎಂದು ಸಾರುವ ದ್ವೈತಪ್ರತಿಪಾದನೆಯಂತೆ ಅಷ್ಟೇ ಸ್ಪಷ್ಟವಾಗಿ ಆಸೂರಿ ರಾಮಸ್ವಾಮಿ ದಾಸರೂ ಈ ತತ್ವವನ್ನು ಒಂದು ಕೃತಿಯಲ್ಲಿ ನಿರೂಪಿಸಿದ್ದಾರೆ.

ಒಂದಿಲ್ಲದಮೇಲೆರಡುಂಟೆ ಭಕ್ತಿ
ಒಂದಲ್ಲದೆ ಹರಿಯೊಲವುಂಟೆ ಪ

ಒಂದಲ್ಲದೆ ರುಚಿ ಔಷಧಿಯುಂಟೆ
ನೊಂದಲ್ಲದೆ ರಂಗಾ ಎಂಬುವುದುಂಟೆ ಅಪ

ಗಿಡ ಮರವಾಗದೆ ಕೃಮಿಯಾಗುವೆನೆ
ಅಡವಿಯೊಳಿರದೆ ಗೋವಾಗುವೆನೆ
ಪಡೆಯದೆ ಪುಣ್ಯವ ನರನಾಗುವೆನೆ
ಮೃಡನ ಪೂಜಿಸದೆ ದ್ವಿಜನಾಗುವೆನೆ ೧

ಸುಗುಣವಿರದೆ ಮಾತಿನಿದಾಗುವುದೆ
ಸೊಗಮಿಲ್ಲದೆ ಬಾಯ್ ನಗೆದೋರುವುದೆ
ಸುಗುಣವಿಲ್ಲದೆ ನಿರ್ಗುಣಬಹುದೆ
ಮುಗಿಲಿಲ್ಲದೆ ಮಳೆಧರೆಗೆ ಬೀಳುವುದೆ ೨

ತಂಗಿದ್ದಲ್ಲದೆ ಭಾವ ಎಂಬೋದುಂಟೋ
ಹಂಗಿಲ್ಲದೆ ಮರೆ ಹಿತಕುಂಟೊ

ತಂಗಿನೋಡಲು ಭಾವ ಮರೆಯಹುದುಂಟೊ
ಮೂರಗಿರಿರಂಗ ನೀನೆನ್ನಯ ನಂಟೊ ೩

ದ್ವೈತ ಅದ್ವೈತಗಳ ಸಗುಣನಿರ್ಗುಣಗಳನ್ನು ಸಮ್ಮಿಳನಗೊಳಿಸಿರುವ ವಿಶಿಷ್ಟಾದ್ವೈತವನ್ನು ಇಲ್ಲಿ ಬಹಳ ಸೊಗಸಾಗಿ ಸಾಧಿಸಿದ್ದಾರೆ.

ಹರಿಏಕನಿಷ್ಠೆ ಈ ಧರ್ಮದ ಇನ್ನೊಂದು ಮುಖ್ಯ ಲಕ್ಷಣ. ಜಗತ್ತೆಲ್ಲವೂ ಹರಿಮಯ, ಅವನೇ ತಂದೆ, ಮಹಾಲಕ್ಷ್ಮಿಯೇ ತಾಯಿ. ಇವರನ್ನು ಹೊರತುಪಡಿಸಿ ಇನ್ನೊಂದು ದೈವವಿಲ್ಲ. ಇದ್ದರೆ ಅವೆಲ್ಲ ಇವನ ಅಧೀನ, ಇವನು ನೇಮಿಸಿದ ಕಾರ್ಯಗಳನ್ನು ಮಾಡಬಲ್ಲವರಷ್ಟೇ. ಆದ್ದರಿಂದ ಅವರನ್ನು ಅನುಸರಿಸುವುದರಿಂದ ಹರಿ ಒಲಿಯುವುದಿಲ್ಲ: ಎಂಬ ಪ್ರಬಲವಾದ ನಂಬಿಕೆ–ಆಚರಣೆ ಈ ಧರ್ಮೀಯರಲ್ಲಿದೆ. ಆಧುನಿಕ ಸಮಾಜದಲ್ಲಿ ಈ ನಿಷ್ಠೆ ಅಷ್ಟಾಗಿ ಆಚರಣೆಯಲ್ಲಿಲ್ಲದಿದ್ದರೂ ಧರ್ಮನಿಷ್ಠರು ಇಂದಿಗೂ ಈ ತತ್ವಕ್ಕೆ ಬದ್ಧರಾಗಿದ್ದಾರೆ. ಶ್ರೀವೈಷ್ಣವಧರ್ಮೀಯರ ಮನೆಗಳಲ್ಲಿ ಇಂದಿಗೂ ಶ್ರೀಹರಿ ಮತ್ತು ಅವನ ಅವತಾರದ ಹಾಗೂ ಅರ್ಚಾರೂಪದ ಫೋಟೋಗಳನ್ನು ಬಿಟ್ಟರೆ ಅನ್ಯದೈವಗಳ ಫೋಟೋಗಳು ಕಂಡುಬರುವುದಿಲ್ಲ, ಗಣೇಶನದೂ ಕೂಡ. ಈ ಗಣೇಶನಿಗೂ ಈ ಧರ್ಮೀಯರಲ್ಲಿ ಬೇರೆಯದೇ ಕಲ್ಪನೆಯಿದೆ.

ಕುಮುದಗಣೇಶ ಎಂಬ ಕಲ್ಪನೆಯಲ್ಲಿ 'ವಿಶ್ವಕ್ಸೇನ'ನನ್ನು ವಿಘ್ನನಾಶಕನನ್ನಾಗಿ ಸ್ತುತಿಸಲಾಗುತ್ತದೆ. ಶಾಮಶರ್ಮದಾಸರು ಈ ಗಣೇಶನ ಬಗ್ಗೆ ಒಂದು ಸ್ವತಂತ್ರ ಕೃತಿಯನ್ನೇ ರಚಿಸಿದ್ದರೆ, ಉಳಿದವರು ಪ್ರತಿಮೆಯನ್ನಾಗಿಸಿದ್ದಾರೆ.

'ಶ್ರೀನಾಥಾಜ್ಞಾಪ್ರಕಾರ ನಡೆಯುವ ಸೂತ್ರವತೀರಮಣ'
ಮಾನಿತಪ್ರಧಾನಿಮಂತ್ರಿ ಪೂಜಿಪೆ ವಿಘ್ನೇಶಾ ನಮಿಪೆ'

ಎಂದು ಆರಂಭವಾಗುವ ಈ ಕೃತಿ ಮೂಲತಃ ಸಂಸ್ಕೃತ ಶ್ಲೋಕಗಳಾದ 'ಶುಕ್ಲಾಂಬರಧರಂ . . . . .'ಗಳನ್ನು ಸ್ವಂತಿಕೆಯೊಂದಿಗೆ ಕನ್ನಡೀಕರಿಸಿರುವುದಾಗಿ, ಅತ್ಯುತ್ತಮವಾಗಿದೆ.

'ಬಿಳಿಯುಡೆ ತುಂಬಿದ ತಿಂಗಳಬೆಳಗಾ
ತೊಳಗುವ ನಾಲಕು ತೋಳುಗಳ

ಬಲು ನಗೆಮೊಗ ವಿಷ್ಣು ನೆನೆವೆ
ಸುಲಭದಿಕಾರ್ಯವ ಗೈಸುವನೇ'

ಲಕ್ಷೀ ಸಮೇತವಾಗಿದ ಶ್ರೀಹರಿಯೊಬ್ಬನನ್ನೇ ಅವಲಂಬಿಸಿರುವುದು ಈ ಶ್ರೀವೈಷ್ಣವ ಕೀರ್ತನೆಗಳಲ್ಲಿ ದಟ್ಟವಾಗಿ ಕಾಣಿಸುತ್ತದೆ. ಸರ್ವದೈವಗಳನ್ನು ಸ್ತುತಿಸಿದರೂ ಅವುಗಳನ್ನೂ ಶ್ರೀಹರಿಯಿಂದ ನಿಯಮಿತರಾದ ದೇವತೆಗಳನ್ನಾಗಿಯೋ ಮತ್ತು ಶ್ರೀಹರಿಯನ್ನೇ ಸ್ತುತಿಸುವ ದೇವತೆಗಳಾಗಿಯೋ ಕಾಣುವುದು ಇಲ್ಲಿಯ ವೈಶಿಷ್ಟ್ಯ.

'ಶಿವಸುತ', 'ಬ್ರಹ್ಮಪೂಜಿತ', 'ಅಜಪಿತ', 'ಶಂಕರಸೇವಿತ' ಎಂದೆಲ್ಲ ಶ್ರೀಹರಿಯನ್ನು ಇಲ್ಲಿ ಹೆಸರಿಸಲಾಗಿದೆ.

'ತಾಯಿಲಕುಮಿ ತಂದೆನಾರಾಯಾಣ ನಿ–
ಮಯ್ಯ ನೆಚ್ಚಿನ ಮ್ಮಗ ನಾನಣ್ಣ'

ಎಂಬುವ ಕೌಟುಂಬಿಕ ಚೌಕಟ್ಟಿನಲ್ಲಿಯೇ ಇಲ್ಲಿಯ ದಾಸರಿಗೆ ದೈವದೊಲವಿದೆ.

'ಆಕಾರವಿಲ್ಲದ ಅನಾಬಿಯೊಳು ಪಂಥ
ಸಾಕಾರವಾಗಿಹನು ಶ್ರೀಲಕ್ಷ್ಮೀಕಾಂತ'

ಎಂಬಂತಹ ಹರಿಏಕನಿಷ್ಠೆ ಎಲ್ಲ ಶ್ರೀವೈಷ್ಣವ ಹರಿದಾಸರಲ್ಲೂ ಕಂಡುಬರುತ್ತದೆ. ಆದರೆ ಬೇಲೂರು ವೈಕುಂಠದಾಸರು (ಶನೇಶ್ವರದಂಡಕ) ಅಹೋಬಲದಾಸರು ಶಾಮಶರ್ಮರು ಹಾಗೂ ಆಸೂರಿ ರಾಮಸ್ವಾಮಿ ದಾಸರಲ್ಲಿ ಮಾತ್ರ ಸರ್ವದೇವತೆಗಳನ್ನು ಕುರಿತ ಸುಂದರವಾದ ಸ್ತುತಿರೂಪದ ಕೆಲವು ಕೀರ್ತನೆಗಳು ಇವೆ. ಅಷ್ಟೇ ಅಲ್ಲ, ಗುರುರಾಯ ರಾಘವೇಂದ್ರರು ಮತ್ತು ಆಧುನಿಕ ಗುರು ಶ್ರೀಸಾಯಿಬಾಬರನ್ನೂ ಕುರಿತು ಆಸೂರಿಯವರು ಕೀರ್ತನೆಗಳನ್ನು ರಚಿಸಿದ್ದಾರೆ.

ಆದರೆ ಇವು ಶ್ರೀ ವೈಷ್ಣವೇತರ ಹರಿದಾಸರಲ್ಲಿ ಕಂಡುಬರುವಂತೆ ಶ್ರೀಹರಿಗೆ ಸಮಾನ ಅಥವ ಪರ್ಯಾಯ ದೇವತಾಸ್ತುತಿಗಳಾಗಿಲ್ಲ. ಬದಲು ಹರಿಏಕನಿಷ್ಠೆಗೇ ಬದ್ಧವಾಗಿ ಅವನ ಅಧೀನ ದೇವತೆಯಾಗಿ, ಅವನದೇ ಭಿನ್ನರೂಪವಾಗಿ ಕಲ್ಪಿಸಿರುವಂತಿದೆ. (ಆಸೂರಿಯವರು ತಮ್ಮ ಆರಾಧ್ಯದೈವವನ್ನೇ ಹರಿಹರ ಅಭೇದದಲ್ಲಿ ಸ್ವೀಕರಿಸಿದ್ದಾರೆ; 'ಮಾಂಗಿರಿರಂಗ' ಹರಿಯೂ ಹೌದು ಹರನೂ ಹೌದು. ಅವನಿಗೆ ಸ್ಥಳಪುರಾಣದಲ್ಲೆ ಈ ಅಭೇದವಿದೆ. ಇದರ ಬಗ್ಗೆ ಇವರು ಹತ್ತಾರು ಕೃತಿಗಳನ್ನು ರಚಿಸಿದ್ದಾರೆ.) ಸರ್ವದೇವೋಪಾಸನೆಯ ಇಂದಿನ ಆಧುನಿಕ ಸಾಮಾಜಿಕ ಸಂದರ್ಭದಲ್ಲಿ ಶ್ರೀವೈಷ್ಣವ ಹರಿದಾಸರ ಹರ ಮತ್ತು ಇತರ ದೇವತೆ–ಗುರುಗಳ ಸ್ತುತಿ ಅತ್ಯಂತ ಸಹಜವಾದುದಾಗಿದೆ. ಇದು ಸಾಮಾಜಿಕ ಬದಲಾವಣೆಗೆ ಸ್ಪಂದಿಸಿರುವ ದಾಸರ ಸಮಕಾಲೀನ ಪ್ರಜ್ಞೆಯೂ ಆಗಿರುತ್ತದೆಯಾದ್ದರಿಂದ ಇದನ್ನು ವಿಶಿಷ್ಟ ಲಕ್ಷಣವಾಗಿಯೇ ಪರಿಭಾವಿಸಿ, ತತ್ವದ ಬಗೆಗಿನ ಬಿಗಿ ನಿಲುವನ್ನು ಸಡಿಲಿಸುವ ಮೂಲಕ ಶ್ರೀವೈಷ್ಣವ ಕೀರ್ತನ ಸಾಹಿತ್ಯದಲ್ಲಿ ಧರ್ಮಸಮಾನತೆಯನ್ನು ಸಾಧಿಸಿದಂತಾಗಿದೆ ಎಂದು ಹೇಳಬಹುದಾಗಿದೆ.

ಏನೋಬಂದಿಹುದು ಕೋಟಿ ಬಾಳುವ ನುಂಗಿಹುದು ಪ

ದೀನನಾಗಿ ಗುರುಧ್ಯಾನವ ಮಾಡಿ ಆದೆಯೊಳೀ ಬಹು
ಮಾನದಿಕಾಣುವುದೇನೋ ಅ.ಪ.

ನಮ್ಮೊಳಿರಬಹುದು ಅದು ನಮ್ಮ ನಮ್ಮೊಳಿರಬಹುದು
ಹಮ್ಮುಗಳೆಂಬುವ ಹೆಮ್ಮೆಯನಳಿಯಲು
ಸುಮ್ಮನೆ ಗಮ್ಮನೆ ಕಾಣಬರುತ್ತಿಹುದೇನೋ ೧

ಅದಕ್ಕಿನ್ನೆಣೆಯಿಲ್ಲ ಅದನು ಗುರುಸೇವಕಬಲ್ಲ
ಮದನಜನಕ ಶ್ರೀತುಳಸೀರಾಮನ
ಪದಭಜನೆಯೊಳು ವುದಯಸಿ ತಾನೇ ೨

(೩೦೪)

ಅಹೋಬಲದಾಸರ ಈ ಕೃತಿ ವಿಶಿಷ್ಟಾದ್ವೈತದ ಸಾಧಕನಿಗೆ ಒದಗುವ ಸಿದ್ಧಿಯನ್ನು ಅತ್ಯಂತ ಆಕರ್ಷಣೀಯವಾಗಿ ತಿಳಿಸುವ ಸರಳ ತತ್ವವಾಗಿ ಹೊರಹೊಮ್ಮಿದೆ.

ಕೇವಲ ತತ್ವದ ದೃಷ್ಟಿಯಿಂದಷ್ಟೇ ಇವು ವಿಶಿಷ್ಟವಾಗುಳಿಯದೆ ಹರಿದಾಸಸಾಹಿತ್ಯ ಲಕ್ಷಣ ದೃಷ್ಟಿಯಿಂದಲೂ ವಿಶಿಷ್ಟತೆಯನ್ನು ಗಳಿಸುತ್ತವೆ. ಸಾಮಾಜಿಕವಾಗಿಯೂ ಸಮರ್ಥವಾಗಿಯೆ ಸ್ಪಂದಿಸುತ್ತವೆ. ಮತ, ಕುಲ, ಲೋಭತನ, ಕಂದಾಚಾರ, ಕಪಟತನ, ಮೋಸ, ಸಂಬಂಧಗಳ ಮೌಲ್ಯಗಳು, ಭಾವನೆಗಳ ಮೌಲ್ಯಗಳು, ಹಣ, ಅಧಿಕಾರ, ಆಸೆ ಇತ್ಯಾದಿ ಎಲ್ಲ ಸಾಮಾಜಿಕ ಸಂಗತಿಗಳಿಗೂ ಇತರ ಹರಿದಾಸರಂತೆ ಇವರೂ ಸಹಜವಾಗಿ ಸ್ಪಂದಿಸಿದ್ದಾರಲ್ಲದೆ, ಜಾತ್ರೆ, ಬರಗಾಲ, ಕ್ಷಾಮ, ಖಾಯಿಲೆ, ಸ್ವಾತಂತ್ರ್ಯಹೋರಾಟ, ಚೀನಾ–ಪಾಕಿಸ್ತಾನದೊಂದಿಗಿನ ಯುದ್ಧ ಹೀಗೆ ಹಲವು ಸಮಕಾಲೀನ ಸಂಗತಿಗಳಿಗೂ ಪ್ರತಿಕ್ರಿಯಿಸಿದ್ದಾರೆ.

ಶ್ರೀವೈಷ್ಣವ ಹರಿದಾಸರು ಇತರ ಹರಿದಾಸರಂತೆ ಕ್ಷೇತ್ರ ದರ್ಶನದ ಸ್ತುತಿಗಳನ್ನೂ ಸಾಂದರ್ಭಿಕ ಸನ್ನಿವೇಶಗಳ–ಸ್ಥಳೀಯ ಘಟನಾವಳಿಗಳ ಚಿತ್ರಣಗಳನ್ನೂ ತತ್ವಪದಗಳ ಧಾಟಿಯ ಕೃತಿಗಳನ್ನೂ ರಚಿಸಿದ್ದಾರೆ. ಒಟ್ಟಾರೆ ಈ ಕೀರ್ತನಕಾರರ ಮುಖ್ಯ ವೈಶಿಷ್ಟ್ಯವಿರುವುದು ಶ್ರೀವೈಷ್ಣವ ತತ್ವಗಳನ್ನು ತಮ್ಮ ಕೀರ್ತನೆಗಳಲ್ಲಿ ಅಳವಡಿಸಿರುವುದರಲ್ಲಿ. 'ಕನ್ನಡ ಸಾಹಿತ್ಯದಲ್ಲಿ ಶ್ರೀವೈಷ್ಣವತತ್ವ ಪ್ರತಿಪಾದಿತವಾಗಿಲ್ಲ 'ಎಂಬ ವಿಮರ್ಶಕರ ಹೇಳಿಕೆಗಳಿಗೆ ಇವು ಉತ್ತರವಾಗಿ ನಿಲ್ಲುವ ಸಾಮರ್ಥ್ಯ ಹೊಂದಿವೆ. 'ರಾಮಾನುಜರು ಕರ್ನಾಟಕಕ್ಕೆ ಬಂದರೂ ಶ್ರೀವೈಷ್ಣವ ಸಂಪ್ರದಾಯದ ಭಕ್ತಿಪಂಥ ಕನ್ನಡ ಭಾಷೆಯಲ್ಲಿ ಆರಂಭವಾಗದುದೊಂದು ಸೋಜಿಗದ ಸಂಗತಿ. ಒಂದು ಪಕ್ಷ ಶ್ರೀವೈಷ್ಣವಭಕ್ತಿಪಂಥ ತನ್ನ ಅಭಿವ್ಯಕ್ತಿ ಮಾಧ್ಯಮವಾಗಿ ಕನ್ನಡವನ್ನು ಬಳಸಿಕೊಂಡಿದ್ದರೆ ಅದು ಯಾವ ಸ್ವರೂಪದಲ್ಲಿರುತ್ತಿತ್ತೋ, ವಚನ ಸಾಹಿತ್ಯಕ್ಕಿಂತ ಹೇಗೆ ಭಿನ್ನವಾಗಿರುತ್ತಿತ್ತೋ ಊಹಿಸುವುದು ಕಷ್ಟ' (ಕನಕದಾಸರ ಕೀರ್ತನೆಗಳು ಲೇಖನದಲ್ಲಿ, ಬೆಂ.ವಿ.ವಿ.ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಭಾಗ ೪–೨,ಪು.೪೯೦)ಎಂಬ ಹೇಳಿಕೆಗಳಿಗೆ ಇನ್ನು ಉತ್ತರ ಸಿಕ್ಕಿದಂತಾಗಿದೆ. ರಾಮಾನುಜರು ಕರ್ನಾಟಕಕ್ಕೆ ಬಂದ ತಕ್ಷಣದಲ್ಲೇ ಇದು ಸಾಧ್ಯವಾಗದೇ ಹೋದರೂ ಆನಂತರ ಬೇಲೂರು–

ವೈಕುಂಠದಾಸರು, ಕನಕದಾಸ, ಕುಮಾರವ್ಯಾಸ, ಲಕ್ಷ್ಮೀಶ ಇವರುಗಳಲ್ಲಿ ಅಲ್ಪಸ್ವಲ್ಪ ಕಾಣಿಸಿಕೊಂಡು ೧೯ನೇ ಶತಮಾನದಲ್ಲಿ ದಟ್ಟವಾಗಿಯೇ ರೂಪುಗೊಂಡಿವೆ. ಕೀರ್ತನ ಸಾಹಿತ್ಯದಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡು ಸಮರ್ಥವಾಗಿ ಸಂಪುಷ್ಟವಾಗಿ ಬೆಳೆದಿದೆ. ಕನ್ನಡ ಕೀರ್ತನ ಪರಂಪರೆಯಲ್ಲಿಯೇ ಒಂದು ವಿಶಿಷ್ಟ ಪರಿಭಾಷೆಯನ್ನು ರೂಢಿಸಿದೆ. ಬೇರೆ ಕೀರ್ತನ ಸಾಹಿತ್ಯದಲ್ಲಿ ಕಾಣಸಿಗದ ಹರಿ ಏಕನಿಷ್ಠೆ, ಪ್ರಪತ್ತಿ ಅಥವಾ ಶರಣಾಗತಿಮನೋಭಾವದ ಸರ್ವಸಮರ್ಪಣಸ್ಥಿತಿ, ಆತ್ಮ ದೈವ ಕಲ್ಪನೆ ಮತ್ತು ಮೋಕ್ಷ ಗಳಿಗೆ ಹೊಸ ವ್ಯಾಖ್ಯಾನ, ಆಳ್ವಾರರು-ಆಚಾರ್ಯಸ್ತುತಿ ಮುಂತಾದ ವಿಶೇಷ ಅಂಶಗಳ ಮೂಲಕ ಕನ್ನಡ ಕೀರ್ತನ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ.

೫. ೧೯ನೇ ಶತಮಾನದ ಹರಿದಾಸರ ಆಂದೋಲನ

೧೯ ನೇ ಶತಮಾನದ ಅಂತ್ಯ ಭಾಗದಲ್ಲಿ ೧೮೭೩ ರಿಂದ ಕರ್ನಾಟಕದಲ್ಲಿ ಬೆಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ಕೋಲಾರದಿಂದ ಮೈಸೂರಿನವರೆಗೆ ಇಡೀ ದಕ್ಷಿಣ ಕರ್ನಾಟಕದಾದ್ಯಂತ ಸದ್ದಿಲ್ಲದೆ ಬಂದು ಹರಿದಾಸ ಆಂದೋಲನವೇ ನಡೆದು ಹೋಗಿರುವುದು ಇತ್ತೀಚೆಗೆ ಬೆಳಕಿಗೆ ಬಂದಿದೆ.

ಈ ಸಂಪುಟದಲ್ಲಿ ಸೇರಿರುವ ತುಳಸಿರಾಮದಾಸರೇ ಇದರ ಮೂಲ ಕೇಂದ್ರ. ಇವರ ಶಿಷ್ಯಪರಂಪರೆ ಬಹಳ ದೊಡ್ಡದಿದೆ. ಇದೇ ಸಂಪುಟದಲ್ಲಿರುವ ಚನ್ನಪಟ್ಟಣದ ಅಹೋಬಲದಾಸರು ಇವರ ಶಿಷ್ಯನೇ ಆಗಿದ್ದಾರೆ. ಶಿಷ್ಯರು ಅವರ ಶಿಷ್ಯ - ಪ್ರಶಿಷ್ಯರೆಲ್ಲ ಸೇರಿ ನೂರಕ್ಕೂ ಅಧಿಕವಾಗುವ ಸಾಧ್ಯತೆಯಿದೆ. ಇನ್ನೊಬ್ಬ ಶಿಷ್ಯ ಮಳಿಗೆ ರಂಗಸ್ವಾಮಿದಾಸರ ಕೆಲವು ಹಾಡುಗಳು ಈಚೆಗೆ ದೊರೆಕಿದ ಹಿನ್ನೆಲೆಯಲ್ಲಿ ಮುಳಬಾಗಿಲ ಮಳಿಗೆ ರಂಗಸ್ವಾಮಿದಾಸರ ಶಿಷ್ಯ ಶೆಡಗೋಪದಾಸರ ಶಿಷ್ಯರಾಗಿರುವ ಚೌಡಯ್ಯನವರೊಂದಿಗೆ ಸ್ವುತ್ತ ಕ್ಷೇತ್ರಕಾರ್ಯಕ್ಕೆ ಹೋಗಿದ್ದಾಗ (೧೬-೫-೦೩) ಆಶ್ಚರ್ಯಕರ ಅನುಭವವಾಗಿದೆ. ಈ ಆಂದೋಲನದ ಸ್ಪಷ್ಟರೂಪ ಗೋಚರವಾಗಿದೆ.

ಸಾಮಾನ್ಯ ಜನವರ್ಗದಲ್ಲಿ ತುಳಸಿರಾಮದಾಸರು, ಪವಾಡ ಸದೃಶ್ಯ ಕ್ರಾಂತಿಯನ್ನುಂಟುಮಾಡಿದ್ದಾರೆ. ಗೌಡ, ಬಣಜಿಗ, ಗಾಣಿಗ, ಉಪ್ಪಾರ, ದರ್ಜಿ,

ಅಕ್ಕಸಾಲಿಗ, ಇತ್ಯಾದಿಗಳ ಮನೆ ಮನೆಗಳಲ್ಲಿ ದಾಸರ ಫೋಟೋ ಇಟ್ಟುಕೊಂಡು ದಾಸರ ಹಾಡು ಹೇಳಿಕೊಂಡು ಇವರಿಂದ ಜೀವನ ಕಂಡಿದ್ದೇವೆ. ಈ ಸ್ವಾಮಿಗಳನ್ನೇ ೨೪ ಗಂಟೆ ಧ್ಯಾನ ಮಾಡುತ್ತಿದ್ದೇವೆ. ಎಂದು ಕೃತ ಜ್ಞತ್ವರಾಗಿರುವುದನ್ನು ಕಂಡು ನಿಬ್ಬೆರವಾಗಿದೆ.

ವ್ಯಾಸರಾಯರ ಕಾಲದಲ್ಲಿನ ಕನಕದಾಸರೊಬ್ಬರನ್ನು ಬಿಟ್ಟರೆ ವೈದಿಕೇತರ ಹಾಗೂ ಇಡೀ ಹರಿದಾಸ ಸಾಹಿತ್ಯದಲ್ಲಿ ಕಂಡು ಬರುವುದಿಲ್ಲ. ಇದು ವೈದಿಕ ಸಮಾಜದಲ್ಲೇ ನಡೆದಿರುವ ಆಂದೋಲನವಾಗಿದೆ. ಆದರೆ ತುಳಸಿರಾಮದಾಸರ ಕಾಲದಲ್ಲಿ ವೈದಿಕೇತರ ಸಮಾಜವನ್ನೇ ಕೇಂದ್ರವಾಗಿಟ್ಟುಕೊಂಡು ಯಶಸ್ವೀ ಆಂದೋಲನ ನಡೆದಿರುವುದು ಕಂಡುಬರುತ್ತದೆ. ತುಳಸಿರಾಮದಾಸರು ದಕ್ಷಿಣ ಕರ್ನಾಟಕದಾದ್ಯಂತ ಸಂಚರಿಸಿ ಎಲ್ಲ ಪ್ರಮುಖ ಸ್ಥಳಗಳಲ್ಲೂ ಶ್ರೀಮಂತ ಭಕ್ತಾದಿಗಳನ್ನು ಸೆಳೆದು ಅವರಲ್ಲಿ ಧಾರ್ಮಿಕ ಚಿಂತನೆಯ ಮೂಲಕ ಸಮಾಜ ಸೇವಾ ಮನೋಭಾವವನ್ನು ಮೂಡಿಸಿ ಭಾರ್ಗವರಾಯ (ಬಾರಾ ಮಾರ್ಗ) ಭಜನ ಮಂದಿರಗಳನ್ನು ಕಟ್ಟಿ ಅನುಬಾನವಾಗಿ ಧಾರ್ಮಿಕ ಕಾರ್ಯಗಳು ನಡೆದು ಕೊಂಡು ಹಾಗುವಂತೆ ಮಾಡಿದ್ದಾರೆ. ಭಜನೆ, ರಾಮೋತ್ಸವ, ಕೃಷ್ಣೋತ್ಸವ, ರಾಮಕೋಟಿ (ಅಖಂಡ ಭಜನೆ) ಹರಿಕಥೆ ಇತ್ಯಾದಿಗಳನ್ನು ರೂಢಿಗೆ ತಂದಿದ್ದು ಇವು ಇಂದಿಗೂ ನಡೆದುಕೊಂಡು ಬರುತ್ತಿವೆ. ಇವರ ಶಿಷ್ಯಕೋಟಿ ಗೌಡ, ಬಣಜಿಗ, ಇತ್ರಾದಿ., ವೈದಿಕೇತರ ವರ್ಗದವರಲ್ಲೇ ಪ್ರದಾನವಾಗಿದ್ದು ಅನೇಕರು ದಾಸರಾಗಿ ಹಾಡುಗಳನ್ನು ರಚಿಸಿದ್ದಾರೆ. ತುಳಸಿರಾಮದಾಸರ ಮೇಲೆ ೩೦ ಕ್ಕೂ ಹೆಚ್ಚು ಜನ ಈ ಶಿಷ್ಯ ದಾಸರು ಕೃತಿ ರಚನೆ ಮಾಡಿದ್ದಾರೆ. ಮಹಾರಾಜರಾದಿಯಾಗಿ ಘರಕಲ ಮಠವನ್ನು ಒಳಗೊಂಡು ವೈದಿಕಗಣ್ಯರನೇಕರೂ ಸ್ತುತಿಸಿದ್ದಾರೆ.

ಕನಕದಾಸರಿಗೆ ಸರಿಸಾಟಿಯಾಗುವ ಶುಶುನಾಳ ಶರೀಫರನ್ನು ಮೀರಿಸುವ ಚನ್ನಪಟ್ಟಣದ ಅಹೋಬಲದಾಸರು ಬಣಜಿಗರು , ಮುಳಬಾಗಿಲಿನ ರಂಗಸ್ವಾಮಿದಾಸರು, ಗಾಣಿಗರು, ಕೋಲಾರದ ಚೆಂಚುದಾಸ ದಲಿತರು, ಶ್ರೀರಂಗಪಟ್ಟಣದ ಸಂಡದದರಿಸಕುಪ್ಪದ ಕೃಷ್ಣದಾಸ ಗೌಡರು, ವೆಂಕಟದಾಸ, ವೈಷ್ಣವರು, ಆಲಂಗೂರಿನ ಲಿಗ್ಗಾಜಿ ದಾಸರು, ರೆಡ್ಡಿಗರು, ಚಿಂತಾಮಣಿಯ ಶ್ರೀನಿವಾಸ ದಾಸ ಉಪ್ಪಾರರು, ಹೀಗೆ ಎಲ್ಲ ಶಂಕರದಾಸ ಅಂಕಿತದಿಂದ ಪ್ರಸಿದ್ಧವಾಗಿರುವ

ಮೈಸೂರಿನ ವೇದಾಂತ ಶಿವರಾಮಶಾಸ್ತ್ರಿಗಳು ಇವರಿಂದ ವೇದಾಂತ ವಿಷಯ ತಿಳಿದವರಾಗಿ ಇವರ ಶಿಷ್ಯರೆನಿಸುತ್ತಾರೆ.

ಹೀಗೆ ಎಲ್ಲಿ ಜನವರ್ಗದಲ್ಲೂ ವಿದ್ಯುತ್ ಸಂಚಾರವನ್ನುಂಟುಮಾಡಿ, ಸ್ವಾತಂತ್ರ್ಯದ ಅಸ್ಥಿರತೆ, ಸಾಮಾಜಿಕ ಅರಾಜಕತೆ, ಕಾಮ ಬರ, ಯುದ್ಧಬೀತಿಗಳಿಂದ ಸಲುಗಿದ್ದ ಜನರಲ್ಲಿ ಮಾನಸಿಕ ಶಾಂತಿಯನ್ನು ಜೀವನದ ನಿರ್ದಿಷ್ಟ ಗುರಿಯನ್ನು ಸಾಮಾಜಿಕ ಬದ್ಧತೆಯನ್ನು ಮೂಡಿಸುವಲ್ಲಿ ತುಳಸಿರಾಮದಾಸರು ಅಪಾರವಾಗಿ ಶ್ರಮಿಸಿದ್ದಾರೆ. ಧನಿಕರಿಂದ ದಾನಧರ್ಮಗಳನ್ನು ಮಾಡಿಸಿ ನೊಂದವರಿಗೆ ಆರೈಕೆ ಮಾಡುವ ಶಿಬಿರಗಳನ್ನು ನಡೆಸಿ ಸಮಾಜದಲ್ಲಿ ಸ್ವಾಸ್ಥ್ಯವನ್ನು ಕಾಪಾಡಿರುವ ನಿಜವಾದ ಭವರೋಗ ವೈದ್ಯರೆನಿಸಿದ್ದಾರೆ. ಅದಕ್ಕಾಗಿಯೇ ಇಂದಿಗೂ ಜನಮನದಲ್ಲಿ ಶಾಶ್ವತವಾಗುಳಿದಿದ್ದಾರೆ. ಇವರ ಶಿಷ್ಯ ಪರಂಪರೆ ಇಂದಿಗೂ ಮುಂದುವರೆದಿದ್ದರೂ ಆಧುನಿಕ ಅಬ್ಬರದಲ್ಲಿ ಗುಪ್ತಗಾಮಿಸಿಯಾಗಿದ್ದಾರೆ, ಮುಳ ಬಾಗಿಲಿನಲ್ಲಿ ಇವರ ದೇವಾಲಯವೇ ಇದೆ.

ಕೇವಲ ನೂರು ವರ್ಷಗಳಹಿಂದೆ ಇವರು ನಡೆಸಿದ ಈ ಸಾಮಾಜಿಕ ಧಾರ್ಮಿಕ ಹರಿದಾಸ ಆಂದೋಲನ ಇತಿಹಾಸದಲ್ಲಿ ಸರಿಯಾದ ರೀತಿಯಲ್ಲಿ ದಾಖಲಾಗಬೇಕಾಗಿದೆ.

೪ನೇ ಘಟ್ಟದವರೆಗೆ ಮಾತ್ರ ಗುರುತಿಸಲ್ಪಟ್ಟಿದ್ದ ಕೀರ್ತನ ಸಾಹಿತ್ಯಚರಿತ್ರೆಗೆ ಇನ್ನುಮುಂದೆ ಅದು ಐದನೇ ಘಟ್ಟವೊಂದನ್ನು ಗುರುತಿಸಿಕೊಂಡಿರುವುದನ್ನು ಮತ್ತು ಈ ಘಟ್ಟದಲ್ಲಿ ದ್ವೈತ-ಅದ್ವೈತ ವಿಶಿಷ್ಟಾದ್ವೈತ ಈ ಮೂರು ತತ್ವಗಳ ಕೀರ್ತನೆಗಳೂ ಸರಿಸಮನಾಗಿ ಬೆಳೆದಿರುವುದನ್ನು ಹಾಗೂ ಒಂದು ಯಶಸ್ವಿ ಹರಿದಾಸ ಆಂದೋಲನವೇ ನಡೆದಿರುವುದನ್ನು ಈ ಮೂಲಕ ವೈದಿಕೇತರವರ್ಗದ-ವರನ್ನೂ ಈ ಹರಿದಾಸ ಸಾಹಿತ್ಯ ಒಳಗೊಂಡಿರುವುದನ್ನು ನೂತನವಾಗಿ ಸೇರಿಸಿ ಕೊಂಡು ಅಧ್ಯಯನಮಾಡಬೇಕಾದ ಅವಶ್ಯಕತೆಯಿದೆ.

೩. ಕೀರ್ತನಕಾರರ ಪರಿಚಯ

(೧) ಆಸೂರಿರಾಮಸ್ವಾಮಿ ದಾಸರು – 'ಮಾಂಗಿರಿರಂಗ'

(ಅ) ಜೀವನ ವಿವರ

ಆಸೂರಿ ಕೆ. ರಾಮಸ್ವಾಮಿ ಅಯ್ಯಂಗಾರ್ ಹೆಸರಿನ ಈ ಕವಿ ಅರಕಲಗೂಡು ತಾಲೂಕು ಕೇರಳಾಪುರದವರು. ಶ್ರೀವೈಷ್ಣವ ಮತದ ತೇಂಗಲೆ ಸಂಪ್ರದಾಯದಲ್ಲಿ ಹಾರೀತ ಗೋತ್ರೋದ್ಭವರಾದ ಕವಿ ಆಸೂರಿ ಮಠ ಪರಂಪರೆಗೆ ಸೇರಿದವರು. ಭಾಗವತ ಭಕ್ತರೂ ಭಗವದಾರಾಧಕರೂ ನಿಷ್ಠಾವಂತ ಸಾತ್ವಿಕ ದಂಪತಿಗಳೂ ಆದ ಶ್ರೀನಿವಾಸಯ್ಯಂಗಾರ್ ಮತ್ತು ವೆಂಕಟಲಕ್ಷಮ್ಮ ಅವರಿಗೆ ಜೇಷ್ಠಪುತ್ರನಾಗಿ ೧೮೮೬ರ ರಾಮನವಮಿ ದಿನದಂದೇ ಜನಿಸಿದ್ದರಿಂದಲೋ ಏನೋ ತಂದೆ ತಾಯಿಗಳು ಇವರಿಗೆ ರಾಮಸ್ವಾಮಿ ಎಂದೇ ನಾಮಕರಣ ಮಾಡಿದ್ದಾರೆ. ಪೂರ್ವಿಕರ ಹೆಸರುಗಳನ್ನೇ ಮಕ್ಕಳಿಗೆ ಇಡುವ ಸಂಪ್ರದಾಯ ಈ ನಾಡಿನಲ್ಲಿದೆ. ಅದರಂತೆ ಈ ಮನೆತನದ ಪೂರ್ವಿಕರೊಬ್ಬರು ಇದೇ ಹೆಸರಿನವರಾಗಿದ್ದು ಸಂಗೀತ ಜ್ಞಾನವುಳ್ಳವರೂ ಕವಿತಾ ರಚನೆ ಮಾಡಿದ್ದವರೂ ಆಗಿದ್ದರೆಂದೂ ಆ ಮಹನೀಯರ ಹೆಸರನ್ನು ತಮ್ಮ ಮಗನಿಗಿಟ್ಟರೆ ಅವನೂ ಅವರಂತೆ ಆಗಬಹುದೆಂಬ ಆಶಯದಿಂದ ತಂದೆ ಶ್ರೀನಿವಾಸಯ್ಯಂಗಾರ್ಯರು ಮಗನಿಗೆ ರಾಮಸ್ವಾಮಿ ಎಂದು ಹೆಸರಿಟ್ಟರು. ಹಿರಿಯರ ಆಶಯವನ್ನು ಮಗ ಸುಳ್ಳು ಮಾಡಲಿಲ್ಲ. ಬದಲು ಮನೆತನದ ಹೆಸರನ್ನು ಹೆಚ್ಚಿಸಿದರು. ಅವರಂತೇ ಕವಿತಾ ಸಾಮರ್ಥ್ಯ ಪಡೆದು ಹಲವು ಪ್ರಸಿದ್ಧ ಕೃತಿಗಳನ್ನೂ ನೂರಾರು ಕೀರ್ತನೆಗಳನ್ನೂ ಬರೆದು 'ಸರಳಕವಿ', 'ಕವಿರತ್ನ' ಬಿರುದುಗಳನ್ನು ಸಂಪಾದಿಸಿ ಪ್ರಖ್ಯಾತಿಯನ್ನು ಪಡೆದರು.

ಈ ಮುಂದಿನ ಭವಿಷ್ಯದ ಸೂಚನೆಯೋ ಎಂಬಂತೆ ಬಾಲ್ಯದಲ್ಲಿಯೇ ದೈವಭಕ್ತಿ, ದೈವಸ್ತುತಿ ಮೈಗೂಡಿಸಿಕೊಂಡಿದ್ದ ರಾಮಸ್ವಾಮಿ ಊರಿನ ದೇವಾಲಯದ ಅರ್ಚಾಮೂರ್ತಿಯಾದ ನರಸಿಂಹನ ಸ್ತುತಿರೂಪಕವಾಗಿ ಹಲವು ದೇವರ

ನಾಮಗಳನ್ನು ಅಕ್ಷರಜ್ಞಾನಕ್ಕೆ ಮೊದಲೇ ಸೃಷ್ಟಿಸುತ್ತ ಇತರರ ಕೈಲಿ ಬರೆಸಿಡುತ್ತಿದ್ದರಂತೆ. ಇವುಗಳನ್ನು ನೋಡಿದ ವೆಂಕಟಾರ್ಯ ಗುರುಗಳು ಮೆಚ್ಚಿ ಪ್ರೋತ್ಸಾಹಿಸಿದ್ದರೆಂದು ಇವರ ಮಗಳು ವೇದವಲ್ಲಿ ನೆನಪಿಸಿಕೊಳ್ಳುತ್ತಾರೆ. ಈ ವೆಂಕಟಾರ್ಯರು ಸರಗೂರಿನ ವೆಂಕಟವರದಾರ್ಯರೆಂಬ ಇನ್ನೊಬ್ಬ ಶ್ರೀವೈಷ್ಣವ ಕೀರ್ತನಕಾರರಿರುವಂತಿದೆ. ಮನೆತನದ ಹಿರಿಯರಿಂದ ಬಂದಿರಬಹುದಾದ ಪಾಂಡಿತ್ಯದ ಬಳುವಳಿ, ಮನೆಯಲ್ಲಿ ನಡೆಯುತ್ತಿದ್ದ ಧಾರ್ಮಿಕ ವಿಧಿ-ವಿಧಾನಗಳ, ಆಚರಣೆಗಳ ಪ್ರಭಾವ, ದೇವತಾರ್ಚನೆಯ ವೃತ್ತಿಯ ಮೂಲಕ ರೂಪುಗೊಳ್ಳುತ್ತಿದ್ದ ಸಹಜ ದೈವ ಶ್ರದ್ಧೆ, ದೇವತಾಸ್ತುತಿ, ನಿಷ್ಠಾವಂತ ಸುಸಂಸ್ಕೃತ ಜೀವನ ಇವುಗಳಿಂದ ಕವಿ ರಾಮಸ್ವಾಮಿ ಅಯ್ಯಂಗಾರ್ ಬಾಲ್ಯದಲ್ಲಿ ಪ್ರೇರಿತರಾಗಿದ್ದಾರೆ. ಇಬ್ಬರು ಸಹೋದರರಾದ ನರಸಿಂಹಯ್ಯಂಗಾರ್ ಮತ್ತು ಶ್ರೀನಿವಾಸಯ್ಯಂಗಾರ್‌ರೊಂದಿಗೆ ಬಾಲ್ಯ ಕಳೆದ ಕವಿ ವಿದ್ಯಾಭ್ಯಾಸಕ್ಕಾಗಿ ತಾಯಿಯ ಊರಾದ ಸಾಲಿಗ್ರಾಮಕ್ಕೆ ಬಂದರು.

ಸಾಲಿಗ್ರಾಮದಲ್ಲಿ ಎಲ್.ಎಸ್.ವರೆಗೆ ವಿದ್ಯಾಭ್ಯಾಸ ಮಾಡಿದರು. ಎಲ್.ಎಸ್. ಎಂಬುದು ಆಗ ಇದ್ದ ಶಿಕ್ಷಣ ಕಲಿಕೆಯ ಒಂದು ಹಂತ (ಲೋಯರ್ ಸೆಕೆಂಡರಿ) ೮ನೇ ತರಗತಿಯ ವರೆಗಿನ ಓದು ಇದರ ನಂತರ ಮೆಟ್ರಿಕ್ಯುಲೇಷನ್) ಎಸ್.ಎಸ್.ಎಲ್.ಸಿ ಹಂತ, ಅನೇಕರು ಈವರೆಗೆ ಮುಂದುವರಿಯುತ್ತಿರಲಿಲ್ಲ, ಎಲ್.ಎಸ್. ಅರ್ಹತೆಗೇ ಕೆಲಸ ಹುಡುಕಿಕೊಂಡು ಬರುತ್ತಿದ್ದುದೂ ಉಂಟು. ರಾಮಸ್ವಾಮಿಯವರಿಗೆ ಕೆಲಸದ ಬದಲು ಮದುವೆಯ ಯೋಗ ಬಂತು. ಬೆಂಗಳೂರಿನ ಕಬ್ಬನ್ ಪೇಟೆಯಲ್ಲಿದ್ದ ಕೃಷ್ಣಗಿರಿಯ ಶ್ರೀವೈಷ್ಣವ ಕುಟುಂಬದ ವೇದವಲ್ಲಿಯವರೊಂದಿಗೆ ವಿವಾಹವಾಯಿತು. ಇದರ ಫಲವಾಗಿ ಇವರ ವಾಸ್ತವ್ಯ ಬೆಂಗಳೂರಿಗೆ ಬದಲಾಯಿತು. ಬೆಂಗಳೂರಿನ ಒಂದು ಶಾಲೆಯಲ್ಲಿ ಉಪಾಧ್ಯಾಯ ವೃತ್ತಿಯೂ ಸುಲಭವಾಗಿ ದೊರೆಯಿತು. ರಾಮಸ್ವಾಮಿಗಳಿಗೆ ಮದುವೆಯಾದಾಗ ಹತ್ತೊಂಬತ್ತು ವರ್ಷ. ಈ ಸಣ್ಣ ವಯಸ್ಸಿನಲ್ಲೇ ಸಂಸಾರದ ಜವಾಬ್ದಾರಿಯನ್ನು ಹೊರಬೇಕಾಯಿತು. ಹೆಂಡತಿಯ ಮನೆಯಲ್ಲೇ ಇದ್ದುದರಿಂದ ಇಡೀ ಕುಟುಂಬವನ್ನು ಪೋಷಿಸುವ ಹೊಣೆಯೂ ಇವರ ಮೇಲೇ ಬಿತ್ತು. ಅತ್ತೆ-ಮಾವಂದಿರು, ನಾದಿನಿ-ಭಾವಮೈದುನರು, ಹೀಗೆ ೮-೧೦ ಜನರ ದೊಡ್ಡ

ಕುಟುಂಬ, ಯಾರಿಂದಲೂ ಸಂಪಾದನೆಯಿಲ್ಲ, ಇವರೊಬ್ಬರೇ ಉದ್ಯೋಗದಾತರು. ಸಂಸಾರ ನಿರ್ವಹಣೆಗೆ ಸಂಬಳ ಎಟುಕದಾದಾಗ ಮಕ್ಕಳಿಗೆ ಪಾಠಹೇಳಿ ಉಪವೃತ್ತಿ ಮಾಡಿ ಸಮರ್ಥವಾಗಿ ನಿಭಾಯಿಸಿದರು. ಆದರೆ ಇದು ಹೆಚ್ಚುದಿನ ನಡೆಯಲಿಲ್ಲ. ಇವರಿಗೆ ಮಗಳು ಸ್ವರ್ಣಲಕ್ಷ್ಮಿ ಜನನವಾದ ಸ್ವಲ್ಪ ಕಾಲದಲ್ಲಿ ಹೆಂಡತಿಯ ವಿಯೋಗವಾಯಿತು. ಇದರಿಂದ ಎದೆಗುಂದಿದರೂ ಅಧೀರರಾಗದೆ ದುಃಖವನ್ನು ನುಂಗಿಕೊಳ್ಳುವ ಸ್ಥೈರ್ಯ ಪಡೆದರು. ಇದು ಇವರಿಗೆ ಸಾಧ್ಯವಾದದ್ದು ಈ ಸಂಸಾರ ತಾಪತ್ರಯದ ನಡುವೆಯೂ ಬಾಲ್ಯದಿಂದ ರೂಢಿಸಿಕೊಂಡಿದ್ದ ಧಾರ್ಮಿಕ ಶ್ರದ್ಧೆಯನ್ನು ಬೆಳೆಸಿಕೊಂಡಿದ್ದರಿಂದ; ದೈವಭಕ್ತಿ; ದೇವತಾರ್ಚನೆ–ಧಾರ್ಮಿಕಸಾಹಿತ್ಯ ಪ್ರಬಂಧಗಳ ಅನುಸಂಧಾನದಲ್ಲಿ ತೊಡಗಿದ್ದರಿಂದ.

ಆಸೂರಿಯವರು ಕೇವಲ ಹೆಂಡತಿ, ಮಕ್ಕಳು, ಸಂಸಾರವೆಂದು ಎಲ್ಲರಂತೆ ಲೌಕಿಕ ಆಸಕ್ತಿಯಷ್ಟರಲ್ಲೆ ತೃಪ್ತರಾಗಲಿಲ್ಲ, ಇವರ ಒಳಗಿದ್ದ ಕವಿಚೇತನ ಅದಕ್ಕೆ ಅಗತ್ಯವಾದ ಜ್ಞಾನಗಳನ್ನು ಹುಡುಕುತ್ತಿತ್ತು. ಬೆಂಗಳೂರಿನಲ್ಲಿದ್ದುದರಿಂದ ಅಲ್ಲಿ ಸಿಗುವ ವಿದ್ಯಾಭ್ಯಾಸದ ಸೌಲಭ್ಯಗಳನ್ನು ಬಳಸಿಕೊಂಡರು. ನ್ಯಾಷನಲ್ ಪ್ರೌಢಶಾಲೆಯಲ್ಲಿ ಪ್ರೌಢವ್ಯಾಸಂಗ ಮಾಡಿ ಇಂಟರ್ ಪರೀಕ್ಷೆಯನ್ನೂ ತೆಗೆದುಕೊಂಡರು. ಪರೀಕ್ಷೆಗಾಗಿ ಮುಂಬೈಗೆ ಹೋಗಿ ಬರೆದು ಬಂದರು. ಇದರ ಫಲವಾಗಿ ಸರ್ಕಾರಿ ಉದ್ಯೋಗ ಇವರನ್ನರಸಿಬಂತು. ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸದೊರೆಯಿತು. ಹೆಂಡತಿ ಇರುವವರೆಗೆ ಹೆಂಡತಿಯ ಮನೆಯ ಅಶ್ರಯವೇನೋ ದೊರಕಿತ್ತು. ಆದರೆ ಆಕೆ ಹೋದ ಮೇಲೆಯೂ ಅದು ಸಾಧ್ಯವೇ? ಆ ವೇಳೆಗೆ ಇವರ ಮುಂದಿನ ಭವಿಷ್ಯಕ್ಕೆ ಮತ್ತು ಮಗಳ ಪಾಲನೆಗಾಗಿ ಇವರಿಗೆ ಇನ್ನೊಂದು ಮದುವೆಯನ್ನೂ ಹಿರಿಯರು ಮಾಡಿದರು. ಮಾಗಡಿ ಕೃಷ್ಣಯ್ಯಂಗಾರ್ಯರ ಮಗಳು ಸೀತಮ್ಮನನ್ನು ತಮ್ಮ ೨೮ನೇ ವರ್ಷದಲ್ಲಿ ವಿವಾಹವಾದರು. ಕಬ್ಬನ್‌ಪೇಟೆಯಲ್ಲೇ ಇನ್ನೊಂದು ಮನೆಮಾಡಿ ನೂತನ ಸಂಸಾರ ಆರಂಭಿಸಿದರು. ಸ್ವಲ್ಪ ಮಟ್ಟಿನ ನೆಮ್ಮದಿಯ ಸಂಸಾರ ಇವರದಾಯಿತು. ಸೀತಮ್ಮನವರಿಗೆ ಹೆಣ್ಣು ಮಗು ಜನನವಾಯಿತು. ಮೊದಲ ಹೆಂಡತಿಯ ನೆನಪಿಗಾಗಿ ಆ ಹೆಸರನ್ನೇ ಇಟ್ಟರು. ಮುಂದೆ ಇಬ್ಬರು ಗಂಡು ಮಕ್ಕಳೂ ಹುಟ್ಟಿದರು, ಗೋಪಾಲಯ್ಯಂಗಾರ್ ಮತ್ತು ನರಸಿಂಹಾಚಾರ್.

ರಾಮಸ್ವಾಮಿ ಅಯ್ಯಂಗಾರ್ಯರಲ್ಲಿ ಹುದುಗಿದ್ದ ಕವಿ-ಹೊರಬರಲು ತವಕಿಸುತ್ತಲೇ ಇದ್ದರು. ಅದಕ್ಕಾಗಿ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳುತ್ತಲೂ ಇದ್ದರು. ಗೋರಖಪುರದಿಂದ' 'ಕಲ್ಯಾಣಕಲ್ಪತರು' ವಿನಂತಹ ಪುಸ್ತಕಗಳನ್ನು ತರಿಸಿಕೊಂಡು ತಮ್ಮ ಅಧ್ಯಯನವನ್ನು ನಡೆಸುತ್ತಲೇ ಇದ್ದರು. ಮೊದಲಿಗೆ ನಾಟಕಕಾರ-ನಟನಾಗಿ ಇವರು ಕಾಣಿಸಿಕೊಂಡರು, ತಾವೆ ಹಲವು ನಾಟಕಗಳನ್ನು ಬರೆದು, ಕೆಲವು ಸ್ನೇಹಿತ-ಆಸಕ್ತರನ್ನು ಸೇರಿಸಿಕೊಂಡು 'ಕಮಲಾಕರ ಡ್ರಮಟಿಕ್ ಕಂಪನಿ' ಎಂಬ ನಾಟಕ ಕಂಪನಿ ಹುಟ್ಟುಹಾಕಿ ವಿಶೇಷವಾಗಿ ಮುಡುಕುತೊರೆ ಜಾತ್ರೆಯಲ್ಲಿ ಪ್ರತಿವರ್ಷ ನಾಟಕ ಆಡುತ್ತಿದ್ದರು. ೮ ವರ್ಷದವರಾಗಿದ್ದ ಅಶ್ವತ್ಥಮ್ಮ ಪ್ರಸಿದ್ಧ ನಾಟಕಕಲಾವಿದೆ. ಅವರೊಬ್ಬರೆ ಇವರ ಕಂಪನಿಯ ಸ್ತ್ರೀ ಪಾತ್ರಧಾರಿಯಾಗಿದ್ದು ಬಾಲಕೃಷ್ಣನ ಪಾತ್ರ ನಿರ್ವಹಿಸುತ್ತಿದ್ದರೆಂದೂ ಸ್ತ್ರೀಪಾತ್ರಗಳನ್ನು ಪುರುಷರೇ ಹಾಕುತ್ತಿದ್ದರೆಂದೂ ಸ್ವತಃ ಆಸೂರಿಯವರೇ ಜನಪ್ರಿಯ ಕೃಷ್ಣಲೀಲಾ ನಾಟಕದಲ್ಲಿ ಕಂಸನಪಾತ್ರ ನಿರ್ವಹಿಸುತ್ತಿದ್ದರೆಂದೂ ಅವರ ಮಗಳು ನೆನಪಿಸಿಕೊಳ್ಳುತ್ತಾರೆ. ಆರಂಭದಲ್ಲಿ ಕಂಪನಿ ಲಾಭದಾಯಕವಾಗಿದ್ದರೂ ಕ್ರಮೇಣ ನಷ್ಟ ಅನುಭವಿಸಿ ಮುಚ್ಚುವ ಸ್ಥಿತಿಗೆ ಬಂದಿತು. ಆ ವೇಳೆಗೆ ನೌಕರಿಯಲ್ಲಿ ಉತ್ತಮ ಅವಕಾಶಗಳಿಗೂ ಅನುಕೂಲಕರ ವಾತಾವರಣ ಮೂಡಿದ್ದರಿಂದ ಅಕೌಂಟ್ಸ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಅಕೌಂಟೆಂಟ್ ಆಗಿ ಬಡ್ತಿ ಪಡೆದರು.

ಆಸೂರಿಯವರಲ್ಲಿದ್ದ ದೈವಶ್ರದ್ಧೆ ಈ ಯಾವ ಬದಲಾವಣೆಗಳಿಂದಲೂ ಕುಗ್ಗಿರಲಿಲ್ಲ. ಉಪನಯನ ಕಾಲದಲ್ಲಿ ಆಚಾರ್ಯ ಗುರುಮುಖೇನ ಉಪದೇಶವಾಗಿದ್ದ ರಹಸ್ಯತ್ರಯದ ಅನುಸಂಧಾನ ನಡೆಯುತ್ತಲೇ ಇತ್ತು. ಪ್ರವರದಲ್ಲಿ ಹೆಸರಿನೊಂದಿಗೆ 'ದಾಸನ್' ಸೇರಿಸಿಕೊಳ್ಳುವ ಮೂಲಕ ಮಾನಸಿಕವಾಗಿ ಮನೆದೈವ ಮಾವಿನಕೆರೆಯ ರಂಗನಾಥನನ್ನು ಅಂಕಿತವಾಗಿಟ್ಟುಕೊಂಡು 'ಮಾಂಗಿರೀಶ' ಮುದ್ರಿಕೆಯಲ್ಲಿ ಆಗಾಗ್ಗೆ ದೇವತಾಸ್ತುತಿಗಳನ್ನು ರಚಿಸುತ್ತಲೇ ಇದ್ದರು ಬಾಲ್ಯದಿಂದಲೂ ಸರಗೂರಿನ ವೆಂಕಟವರದಾರ್ಯರು (ಇವರೂ ಶ್ರೀವೈಷ್ಣವ ಕೀರ್ತನಕಾರರಾಗಿದ್ದು ೧೯೨೪ ರಲ್ಲೆ ನಂಜನಗೂಡಿನ ಸನ್ಮಾರ್ಗದರ್ಶಿಕಾರ್ಯಾಲಯದ ಮೂಲಕ ೧೦೨ ಕೀರ್ತನೆಗಳು

ಪ್ರಕಟವಾಗಿವೆ.) ಇವರ ಕೃತಿಗಳನ್ನು ಮೆಚ್ಚಿ ಪ್ರೋತ್ಸಾಹಿಸುತ್ತಿದ್ದುದರಿಂದ ಅವರ ಒತ್ತಾಸೆಯು ಮೇರೆಗೋ ಏನೊ ೧೯೨೫ರಲ್ಲಿ ಮೈಸೂರಿನ ಕೃಷ್ಣಾ ಮುದ್ರಣಾಲಯದಿಂದ 'ಹರಿಭಜನ ಕುಸುಮವಲ್ಲರಿ' ಎಂಬ ಹೆಸರಿನಲ್ಲಿ ಹರಿಸ್ತುತಿಗಳು ಮತ್ತು ಭಜನಾವಳಿಗಳೆಂದು ಎರಡು ಭಾಗದಲ್ಲಿ ಪ್ರಕಟಿಸಿದರು.

ಭಜನೆ, ಕೀರ್ತನೆ, ಹರಿಕಥೆ, ಕಾವ್ಯವಾಚನಗಳಲ್ಲಿ ಆಸಕ್ತರಾಗಿ ಮನೆಯಲ್ಲಿ ಸದಾ ಒಂದಲ್ಲ ಒಂದು ಇಂಥ ಕಾರ್ಯಕ್ರಮಗಳನ್ನು ನಡೆಸಿ ಧಾರ್ಮಿಕ ಚಟುವಟಿಕೆಗಳಲ್ಲೂ ತೊಡಗಿರುತ್ತಿದ್ದರು. ನಾಟಕ ಕಂಪನಿ ನಡೆಸುತ್ತಿದ್ದುದರಿಂದ ಸಮಯಕ್ಕಿರಲೆಂದು ಸಂಗೀತ ಜ್ಞಾನದಲ್ಲೂ ಪರಿಣತರಾಗಿ ಪಿಟೀಲು ವಾದಕರೂ ಆಗಿದ್ದರು. ಸಂಗೀತದ ಎಲ್ಲ ರಾಗಗಳನ್ನೂ ಬಲ್ಲವರಾಗಿದ್ದರು. ಅನೇಕ ಪ್ರಾಚೀನ ಕಾವ್ಯಗಳನ್ನೂ ಅಭ್ಯಾಸ ಮಾಡುತ್ತಿದ್ದರು. ಇವರು ವಿದ್ಯಾ ಇಲಾಖೆಯಲ್ಲಿದ್ದಾಗ ಅಧಿಕಾರಿಗಳ ಕೋರಿಕೆಯ ಮೇರೆಗೆ ಹಲವಾರು ದೇವರನಾಮಗಳನ್ನು ಬರೆದುಕೊಟ್ಟಿದ್ದರೆಂದು ಇವರ ಸೋದರಮಾವಂದಿರಾದ ಕೃಷ್ಣಯ್ಯಂಗಾರ್ಯರು ಇವರ ಕೀರ್ತನೆಗಳಿಗೆ ತಮ್ಮ ಹೆಸರನ್ನು ಹಾಕಿಕೊಂಡು ತಮ್ಮ ಇಲಾಖೆಯಲ್ಲಿ ತಾವು ಬರೆದದ್ದೆಂದು ಅಧಿಕಾರಿಗಳಿಗೆ ನೀಡುತ್ತಿದ್ದರೆಂದೂ ಇವರಿಗಾಗಿ ನಮ್ಮ ತಂದೆ ರಾಘವೇಂದ್ರರ ಮೇಲೂ ಹಾಡು ಬರೆದಿದ್ದಾರೆಂದೂ ಇವರ ಮಗಳು ನೆನಪಿಸಿಕೊಳ್ಳುತ್ತಾರೆ. ಲೌಕಿಕವಾಗಿ ಏನೇ ಆಗಿದ್ದರೂ ಪಾರಮಾರ್ಥಿಕವಾಗಿ ರಾಮಸ್ವಾಮಿ ಅಯ್ಯಂಗಾರ್ಯರು ಭಕ್ತರಾಗಿದ್ದು ಆಂತರ್ಯದಲ್ಲಿ ಕೀರ್ತನಕಾರರಾಗಿಯೂ ಬೆಳೆಯುತ್ತಿದ್ದರು.

ಲೆಕ್ಕಾಧಿಕಾರಿಗಳಾಗಿ (ಆಡಿಟರ್) ಭಡ್ತಿ ಹೊಂದಿದ ಮೇಲೆ ಶ್ರೀರಂಗಪಟ್ಟಣ, ಮೈಸೂರು, ಕೋಳಗುಂದ ಮುಂತಾದ ಹಲವು ಊರುಗಳಿಗೆ ವರ್ಗಾವಣೆ ಹೊಂದಬೇಕಾಯಿತು. ಶ್ರೀರಂಗಪಟ್ಟಣದಲ್ಲಿ ಸತ್ಯ ಫ್ಯಾಕ್ಟರಿಯಲ್ಲಿ ಆಡಿಟರ್ ಆಗಿ ಮೂರು ವರ್ಷ ಸೇವೆ ಸಲ್ಲಿಸಿದರು. ಆಗ ಇವರಿಗೆ ೨೫ ವರ್ಷ. ಜಯಚಾಮರಾಜ ಒಡೆಯರ ಪಟ್ಟಾಭಿಷೇಕಮಹೋತ್ಸವ ನಡೆಯಿತು. 'ಚಿರವಿರಲಿ ಜಯ-ಚಾಮನೃಪಾಲಂ' ಎಂಬ 'ಶೋಡಶ ನವರತ್ನ ಮಾಲಿಕೆ'ಯಲ್ಲಿ ಷಟ್ಪದಿ

ಪದ್ಯಮಾಲೆಯನ್ನೂ ಸಮರ್ಪಿಸಿದಾಗ ರಾಜರು ಮೆಚ್ಚಿ ಸನ್ಮಾನಿಸಿ 'ಸರಳ ಕವಿ' ಬಿರುದು ನೀಡಿದರು. ಹಾಸನದಲ್ಲಿದ್ದಾಗ ಎಸ್.ಕೆ. ರಾಜಂ ಎಂಬುವರಿಂದ ಶಿರ್ಡಿ ಸಾಯಿ ಮಂದಿರಕ್ಕೆ ಆಹ್ವಾನ ಬಂದು, ಸಾಯಿಬಾಬಾರ ಮೇಲೆ ಕೃತಿ ರಚನೆ ಮಾಡಿಕೊಡಬೇಕೆಂದೂ ಕೇಳಲಾಗಿತ್ತು. ಬಾಬಾರಿಂದಲೇ ಸೂಚನೆ ಬರಲೆಂದು ಕವಿಗಳು ಆಶಿಸಿದರು. ಆ ರಾತ್ರಿಯೇ ಬಾಬಾ ಕನಸಿನಲ್ಲಿ ಬಂದು 'ನನ್ನನ್ನೂ ಸ್ತುತಿಸು, ನಾನು ಬೇರೆ ರಾಘವೇಂದ್ರ ಬೇರೆಯಲ್ಲ' ಎಂದು ಹೇಳಿದಂತಾಯಿತು. ಆ ಅಪ್ಪಣೆಯ ಮೇರೆಗೆ ಸಾಯಿ ಭಜನೆ, ಸ್ತುತಿ, ನಾಮಾವಳಿ, ಸ್ತೋತ್ರಗಳನ್ನೂ ರಚಿಸಿಕೊಟ್ಟಿದ್ದಾರೆ. ರಾಘವೇಂದ್ರ, ಸಾಯಿ, ಶಿವ, ಪಾರ್ವತಿ, ಗಣೇಶ, ಸುಬ್ರಹ್ಮಣ್ಯ ಹೀಗೆ ಎಲ್ಲ ದೇವರನ್ನೂ ಸ್ತುತಿಸುವ ಮೂಲಕ ಹರಿಸರ್ವೋತ್ತಮತ್ವದ ಏಕನಿಷ್ಠೆಯಿಂದ ಹೊರಬಂದು ದೈವ ಸಮಾನತೆಯನ್ನು ಸಾರುವ ಹಲವು ಕೀರ್ತನೆಗಳನ್ನು ರಚಿಸಿದರು. ಇವರ ಇಷ್ಟದೈವ ಮಾಂಗಿರಿನಾಥನೆ ಶಿವ-ಕೇಶವ ರೂಪಿಯಾಗಿರುವುದು ಇವರ ಈ ನಿಲುವಿಗೆ ಬೆನ್ನೆಲುಬಾಯಿತು. ಈ ದೇವರು ಮೊದಲು ಶಿವನಾಗಿದ್ದು ಅನಂತರ ರಂಗನಾಥನಾದನೆಂದು ರಂಜನೀಯ ಐತಿಹ್ಯವನ್ನು ಹೊಂದಿದೆ. ತಮ್ಮ ಹಲವಾರು ಕೀರ್ತನೆಗಳಲ್ಲಿ ಈ ಸಂಗತಿಯನ್ನು ದಾಖಲಿಸುವುದರ ಮೂಲಕ ಹರಿಹರ ಸಮಾನತೆಯನ್ನು ಸಾಧಿಸಿದ್ದಾರೆ.

ಮಹಾರಾಜರಿಗೆ ಶ್ರೀಕಂಠದತ್ತ ಒಡೆಯರ ಜನನವಾದಾಗ ಪುತ್ರೋತ್ಸವ ಸಮಾರಂಭಕ್ಕೂ 'ಚಿರಮಭಿವರ್ಧತಾಂಯದು ಸಂತಾನಶ್ರೀ' ಎಂಬ ಸಪ್ತಷಟ್ಪದಿಗಳ ಮಾಲೆಯನ್ನು ಸಮರ್ಪಿಸಿ ಆಗಲೂ ರಾಜರಿಂದ ಪಾರಿತೋಷಕ, ಮರ್ಯಾದೆ ಪಡೆದು ಅರಮನೆಯ ಫೋಟೋ ಸಂಗ್ರಹಕ್ಕೆ ದಾಖಲಾಗಿದ್ದಾರೆ. (ಅರಮನೆಯಲ್ಲಿ ಸಂಗ್ರಹಿಸುವುದಕ್ಕಾಗಿ ಅತಿಗಣ್ಯರ ಫೋಟೋಗಳನ್ನು ಆಗ ರಾಜರು ತೆಗೆಸುತ್ತಿದ್ದರು.) ಇವರ ಈ ಕವಿತಾರಚನಾ ಮತ್ತು ಕೀರ್ತನೆಗಳ ಯಶಸ್ಸು ಎಲ್ಲಕಡೆಯೂ ಹಬ್ಬಿ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಾರಂಭೋತ್ಸವ ಕಾಲದಲ್ಲಿ, ಬಿ.ಡಿ. ಜತ್ತಿಯವರಿಂದ, ಕೆಂಗಲ್ ಹನುಮಂತಯ್ಯನವರಿಂದ ಹೀಗೆ ಹಲವರಿಂದ ಸನ್ಮಾನಕ್ಕೆ ಪಾತ್ರರಾಗಿದ್ದರು.

ಪ್ರಪತ್ತಿಧರ್ಮವನ್ನು ಅಂತರ್ಯದಲ್ಲಿ ಅನುಸರಿಸುತ್ತ ದೈವಚಿಂತನೆಯಲ್ಲಿ ತೊಡಗಿದ್ದ ಕವಿಗಳ ಮನಸ್ಸು ಆ ವೇಳೆಗೆ ಹಲವು ರಾಮಾಯಣಗಳು, ಭಾಗವತ, ಭಾರತಗಳು, ತಮಿಳು ಪ್ರಬಂಧಗಳು, ಸಂಸ್ಕೃತ ಗ್ರಂಥಗಳನ್ನೆಲ್ಲ ಅಧ್ಯಯನ ಮಾಡಿ ಒಂದು ಉತ್ತಮ ಕಾವ್ಯಕೃತಿಯ ರಚನೆಗಾಗಿ ಹಾತೊರೆಯುತ್ತಿತ್ತು. ಎಲ್ಲ ದೈವಗಳಿಂದಲೂ ಸೂಕ್ತ ಮಾರ್ಗದರ್ಶನ, ಸಂದೇಶ, ದರ್ಶನಗಳನ್ನು ಪಡೆಯುವಂತಹ ಪಕ್ವತೆಯನ್ನು ಮನಸ್ಸು ಪಡೆದಿತ್ತು. ರಾಘವೇಂದ್ರರ ಮಂತ್ರಾಲಯಕ್ಕೆ ಹೋಗಿಲ್ಲದಿದ್ದರೂ ತುಂಗಾ ತೀರದಲ್ಲಿ ರಾಮನು ಕಲ್ಲಿನ ಮೇಲೆ ಕುಳಿತಂತಹ; ಮನೆಯಲ್ಲಿಯೇ ಆಗಾಗ್ಗೆ ರಾಘವೇಂದ್ರರು ಕಾಣಿಸಿಕೊಳ್ಳುವಂತಹ; ಶ್ರೀಹರಿಯ ದಶಾವತಾರದ ಹಲವು ರೂಪಗಳನ್ನು ಕನಸಿನಲ್ಲಿ ಕಾಣುವಂತಹ; ಸಾಯಿಬಾಬಾರ ವರ್ಧಂತಿಯ ಸಮಯದಲ್ಲಿ ಮರೆತು ಕಚೇರಿಗೆ ಹೋಗುತ್ತಿದ್ದಾಗ ಬಾಬಾರೇ ಕಾಣಿಸಿಕೊಂಡು 'ಮರೆತಿದ್ದೀಯ' ಎಂದು ನೆನಪಿಸಿದಂತಹ ಹಲವು ದರ್ಶನಗಳನ್ನು ಅವರು ಕಾಣುವಂತಹವರಾಗಿದ್ದರು. ಭಾಗವತ ಭಕ್ತರುಗಳ, ಶ್ರೀವೈಷ್ಣವ ಆಳ್ವಾರರುಗಳ ದಿವ್ಯಚರಿತ್ರೆಗಳು ಮನಸ್ಸಿನಲ್ಲಿ ನೆಟ್ಟು ಭಕ್ತಿಯ ಅಭಿವ್ಯಕ್ತಿಗಾಗಿ ತವಕಿಸುತ್ತಿದ್ದವು. ಇದೇ ಸಮಯದಲ್ಲಿ ಬಾಬಾರು ಕನಸಿನಲ್ಲಿ ಕಾಣಿಸಿಕೊಂಡು ಭರತನ ಭಕ್ತಿಯನ್ನು ಕಾವ್ಯವಾಗಿಸು ಎಂದು ಸೂಚಿಸಿದ ಹಿನ್ನೆಲೆಯಲ್ಲಿ ಅತ್ಯಂತ ಸೊಗಸಾದ, ಭಕ್ತಿ ಪ್ರಧಾನವಾದ, ಗಮಕಕ್ಕೆ ಹೇಳಿ ಮಾಡಿಸಿದಂತಹ ಸರಳವಾದ ಕೃತಿ 'ಭರತ ಭಕ್ತಿಕಾವ್ಯ' ಸೃಷ್ಟಿಯಾಯಿತು. ಇದಕ್ಕೆ ಪ್ರೇರಣೆಯಾದ ಆ ದಿವ್ಯಾನುಭವವನ್ನು ಲೇಖಕರು ತಮ್ಮ ಕೃತಿಯಲ್ಲಿ ಹೀಗೆ ಹೇಳಿಕೊಳ್ಳುತ್ತಾರೆ.

"ಕ್ರಿ.ಶ. ೧೯೫೫ರ ಜೂನ್ ತಿಂಗಳ ಒಂಬತ್ತನೆಯ ದಿನ ರಾತ್ರಿ ಎಂದಿನಂತೆ ಲೇಖಕನು 'ಕಲ್ಯಾಣಕಲ್ಪತರು' ಎಂಬ ಮಾಸ ಪತ್ರಿಕೆಯನ್ನು ಓದುತ್ತಿದ್ದು ರೆಪ್ಪೆಗಳು ಭಾರವಾದ ಕೂಡಲೆ ಕಣ್ಣುಗಳನ್ನು ಮುಚ್ಚಿ ಮಲಗಿದ ಸ್ವಲ್ಪ ಹೊತ್ತಿನ ಮೇಲೆ ರಾಮ, ಕೃಷ್ಣ, ಶಿವ, ಮಾರುತಿ ಸ್ವರೂಪಗಳನ್ನು ಎಡ ಬಲಗಳಲ್ಲಿ ಒಳಗೊಂಡು ಸಾಯಿ ಬಾಬಾರವರ ಚಿತ್ರವೊಂದು ಎದುರಿಗೆ ನಿಂತಂತಾಯಿತು. ಆದರೆ ಕಣ್ತೆರೆಯಲಾಗಲಿಲ್ಲ. ಅಷ್ಟರಲ್ಲಿ ಶ್ರೀ ಬಾಬಾ ಆಕೃತಿಯ ವ್ಯಕ್ತಿಯು ಮಾತ್ರ ಹತ್ತಿರಕ್ಕೆ ಬಂದು "ಭಕ್ತಿಮುಳುಗುತ್ತಿರುವುದನ್ನು ಅರಿತೂ ಅರಿತೂ ಸುಮ್ಮನಿರುವೆಯೇಕೆ?

ನೀನು ಕೈಗೊಳ್ಳಬೇಕಾದ ಕಾರ್ಯವಿದೆ". ಎನ್ನಲು ಲೇಖಕರು "ಸ್ವಾಮಿ, ನಾನು ಅಲ್ಪ, ಜ್ಞಾನ ಸ್ವಲ್ಪ, ಕೇವಲ ದೇವರ ನಾಮ, ದಾಸರಪದ, ಕೀರ್ತನೆಗಳನ್ನು ಮಾತ್ರ ಬರೆಯುವ ಆಸಕ್ತಿಯುಳ್ಳ ಪಾಮರನಿಂದ ಆಗಬಹುದಾದುದು ಏನು?" ಎನ್ನಲು ಬಾಬಾ ವ್ಯಕ್ತಿಯು "ನಾನಿಲ್ಲವೇ" ನಿನ್ನ ಹಿಂದುಗಡೆ ಯಾರಿರುವರೆಂದು ತಿಳಿದಿರುವೆ? ಸಾಕು ಆ ಮಾತು. 'ಭರತಭಕ್ತಿ' ಎಂಬ ಕಾವ್ಯವನ್ನು ರಚಿಸಲು ಪ್ರಾರಂಭಿಸು, ಕಡೆಗೂಡಿಸುವುದು ನನಗಿರಲಿ" ಎನ್ನಲು ಎಚ್ಚರಗೊಂಡು ಕಣ್ಣುಗಳನ್ನು ಒಸಕಿ ನೋಡಲಾಗಿ ಯಾರೂ ಕಾಣಿಸಲಿಲ್ಲ. ಕಳವಳ ಉಂಟಾಯಿತು. ನಿದ್ದೆ ಹತ್ತಲಿಲ್ಲ, ಹೊರಳಿ, ಉರುಳಿ, ಕಾಲಕಳೆದು ಉಷಃಕಾಲವಾದುದನ್ನರಿತು ಸ್ನಾನ ಸಂಧ್ಯಾದಿಗಳಲ್ಲಿ ತೊಡಗಿದ್ದರೂ ಸ್ತೋತ್ರಗಳು ಬಾಯಲ್ಲಿ ಹೊರಳುತ್ತಿದ್ದರೂ ಮೆದುಳಿನಲ್ಲಿ 'ಭರತಭಕ್ತಿ'. ಅದೊಂದು ಅಸಾಧ್ಯಕಾರ್ಯ' ಎಂಬುದು ಹುಳುವಿನಂತೆ ಹರಿಯುತ್ತಿತ್ತು. ಆಗಾಗ ಇದಾವ ಸ್ವಪ್ನ' ಇದು ಸ್ವಪ್ನವೇ? ಭ್ರಮೆಯೆ? ಎಂಬ ಯೋಚನೆ ಅಂಕುರಿಸಿತು. ಹಾಗೆಯೇ ಮೆದುಳೊಂದು ಕಡೆ ಮನಸ್ಸು ಮತ್ತೊಂದು ಕಡೆ ದೇವತಾರ್ಚನೆಯು ಇನ್ನೊಂದು ಕಡೆ, ಅಂತೂ ಈ ಅವ್ಯವಸ್ಥೆಯಲ್ಲಿ ನಿತ್ಯಕರ್ಮವು ಮುಗಿಯಿತು. ಕೂಡಲೆ ಕೈಹೊತ್ತಗೆಯಲ್ಲಿ ಕಾಣಬರುವ ಪ್ರಾರ್ಥನಾ ಪದ್ಯಗಳು ಯೋಚಿಸದೆಯೆ ನಾಲಗೆಯ ಮೇಲೆ ನಲಿದಾಡಿದವು. ಆಗ ತಾನು ಕಂಡುದು ಸ್ವಪ್ನವಲ್ಲವೆಂದೂ ದೈವೇಚ್ಛೆಯಂತೆ ಕಾವ್ಯ ರಚನೆಯಾಗತಕ್ಕುದಿರುವುದೆಂದೂ ಅರಿತು ಲೇಖಕನು ಬರೆಯ ತೊಡಗಿದನು". (ಭರತಭಕ್ತಿ ಕಾವ್ಯ, ಮುನ್ನುಡಿ)

೧೯೫೭ರ ಏಪ್ರಿಲ್‌ನಲ್ಲಿ ಕಾವ್ಯ ಮುಗಿಸಿ ಮನೆದೈವ ಮಾಂಗಿರಿರಂಗನ ಬೆಟ್ಟದಲ್ಲಿ ಆಮೂಲಾಗ್ರವಾಗಿ ವಾಚನ ಮಾಡಿ ಅರ್ಪಿಸಿ ಮಂಗಳ ಪದ್ಯ ಮತ್ತು ಕಡೆ ನುಡಿಗಳನ್ನು ರಚಿಸಲು ಪ್ರಸಾದ ಸೂಚನೆ ಪಡೆದು ಅವುಗಳನ್ನೂ ರಚಿಸಿ ಕಾವ್ಯ ಸಿದ್ಧವಾದ ಮೇಲೆ ಪ್ರಕಟನೆಯ ಯೋಚನೆ ತಲೆಗೆ ಹತ್ತಿರುವಾಗ ಸಾಯಿಬಾಬಾರಿಂದ ಚಿತ್ರದುರ್ಗದ ವೆಂಕಟೇಶಪುರದ ಸಾಯಿಮಂದಿರಕ್ಕೆ ಬರಲು ಸೂಚನೆ ಬರಲಾಗಿ ಅಲ್ಲಿಯೂ ವಾಚನ ನಡೆದು ಇನ್ನೂ ಅನೇಕ ಕಡೆ ವಾಚನ ಕಾರ್ಯಕ್ರಮ ಮಾಡಿ ಹಣಸಂಗ್ರಹಿಸಿ ಬಾಬಾರಿಂದಲೇ ಹೆಚ್ಚಿನ ನೆರವು ಪಡೆದು ೧೯೫೭ರಲ್ಲಿ ಪ್ರಕಟಿಸಿದರು.

ಈ ವೇಳೆಗೆ ಕವಿಗಳು ಲೌಕಿಕವಾಗಿ ಸುಸ್ಥಿತಿಯನ್ನು ತಲುಪಿದ್ದರು. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಸತ್ಪ್ರಜೆಗಳನ್ನಾಗಿ ರೂಪಿಸಿದ್ದರು. ಒಬ್ಬರನ್ನು ಪೋಲೀಸ್ ಇಲಾಖೆಯಲ್ಲಿ ಅಧಿಕಾರಿಯನ್ನಾಗಿಯೂ ಇನ್ನೊಬ್ಬರನ್ನು ಡಾಕ್ಟರನ್ನಾಗಿಯೂ ಮಾಡಿ ಹೆಣ್ಣು ಮಕ್ಕಳಿಗೂ ಉತ್ತಮ ಸಂಬಂಧಗಳನ್ನು ಹುಡುಕಿ ಎಲ್ಲರನ್ನೂ ಅವರವರ ಸ್ವಸಾಮರ್ಥ್ಯದ ಮೇಲೆ ನಿಲ್ಲಿಸಿ ನಿಶ್ಚಿಂತರಾಗಿದ್ದರು. ಮೊಮ್ಮಕ್ಕಳು ಒಬ್ಬೊಬ್ಬರಾಗಿ ಕಾಣಿಸಿಕೊಳ್ಳುತ್ತಿದ್ದ ಕಾಲ ಅದು. ಹೆಂಡತಿ ಸೀತಮ್ಮ ಸಂಸಾರದ ಭಾರ ಹೊತ್ತಿದ್ದು ತಮ್ಮ ದೇವತಾಕಾರ್ಯಕ್ಕೆ ಅನುವು ಮಾಡಿಕೊಟ್ಟಿದ್ದು ಸಹಭಾಗಿಣಿಯೂ ಆಗಿದ್ದವರು ಕವಿಗಳ ೫೫ನೇ ವಯಸ್ಸಿನಲ್ಲೇ ಇವರನ್ನು ಬಿಟ್ಟು ಅಂತಿಮ ಯಾತ್ರೆ ಕೈಗೊಂಡಿದ್ದರು. ಇದೇ ಸಮಯಕ್ಕೆ ೩೫ವರ್ಷಗಳ ದೀರ್ಘಸೇವೆಯ ನಂತರ ಸರ್ಕಾರಿ ಸೇವೆಯಿಂದ ನಿವೃತ್ತಿಯು ದೊರೆಕಿ ಮನಸ್ಸು ನಿರಾಳವಾಗಿತ್ತು. ಈ ತರುಣದಲ್ಲೇ ಕುಲವೃತ್ತಿಯಾಗಿದ್ದ ಶಾನುಭೋಗಿಕೆಗಾಗಿ ಕೆಲವು ಕಾಲ ಸಾಲಿಗ್ರಾಮದ ಸಮೀಪದ ಬೆಟ್ಟಹಳ್ಳಿಗೆ ಹೋಗಬೇಕಾಗಿ ಬಂದರೂ ದೈವಾನುಕೂಲದಿಂದ ಅದರಿಂದಲೂ ಬಿಡುಗಡೆಯಾಗಿ ಬೆಂಗಳೂರಿಗೆ ಮರಳುವಂತಾಗಿತ್ತು. ಸೊಸೆಯಂದಿರ ಆರೈಕೆ ಮೊಮ್ಮಕ್ಕಳ ಒಡನಾಟದಿಂದ ಲೌಕಿಕ ಜಂಜಡದಿಂದ ದೂರವಾಗಿದ್ದ ಕವಿಮನಸ್ಸು ಸಂಪೂರ್ಣವಾಗಿ ದೈವ ಭಕ್ತಿ, ದೈವ ಧ್ಯಾನ, ದೈವಾನುಸಂಧಾನದಲ್ಲಿ ತೊಡಗಿಕೊಂಡು ಪ್ರಪತ್ತಿ ಧರ್ಮ ಸಾಫಲ್ಯತೆಯನ್ನು ಪಡೆದು ಮನಸ್ಸು ಅನುಭಾವದ ಸ್ಥಿತಿಯಲ್ಲಿದ್ದಾಗ ಈ ಮೇರುಕೃತಿ ಹೊರಹೊಮ್ಮಿದೆ.

ಇದು ಕವಿಗಳಿಗೆ ಒಳ್ಳೆಯ ಹೆಸರನ್ನು ತಂದುಕೊಟ್ಟಿತು. ದೇವರಾಜ ಬಹದ್ದೂರ್ ಪ್ರಶಸ್ತಿ ಲಭಿಸಿತು. ಗಮಕಿಗಳಿಗೆ ಅತ್ಯಂತ ಪ್ರಿಯವಾಗಿ ನಿರಂತರವಾಗಿ ನಾಡಿನಾದ್ಯಂತ ಗಮಕ ವಾಚನಗಳಲ್ಲಿ ಜನಪ್ರಿಯವಾಯಿತು. (ಇಂದಿಗೂ ಗಮಕವಾಚನದಲ್ಲಿ ಈ ಕೃತಿಯ ಭಾಗಗಳನ್ನು ಗಮಕಿಗಳು ಸ್ವಸಂತೋಷದಿಂದ ಆಯ್ದುಕೊಳ್ಳುತ್ತಾರೆ) ಬನ್ನೂರಿನ ಮಹಾಪೌರರು ಕವಿಗಳನ್ನೂ ಗ್ರಂಥವನ್ನೂ ಮೆರವಣಿಗೆ ಮಾಡಿ ಪೌರಸನ್ಮಾನ ಅರ್ಪಿಸಿ "ಕವಿರತ್ನ" ಬಿರುದು ನೀಡಿದರೆ ಬೆಂಗಳೂರಿನ ಕಾವ್ಯಪ್ರಚಾರ ಮಂಡಲಿಯೂ ಸನ್ಮಾನ ಮಾಡಿ ಗಮಕ ವಾಚನ ಮಾಡಿಸಿತು. ವಿಮರ್ಶಕರು

'ಆಧುನಿಕ ಲಕ್ಷ್ಮೀಶ' ಎಂದು ಕರೆದರು. ೧೯೫೬ರ ಸುಮಾರಿನಲ್ಲಿ ೭೦ನೇ ವರ್ಷಕ್ಕೆ ಅಡಿಯಿಟ್ಟ ದಾಸರಿಗೆ ಕಣ್ಣುಗಳು ಮಬ್ಬಾದಾಗ ಕಾವ್ಯಶಕ್ತಿ ಕುಂದಿತೇನೊ ಎಂಬ ಆತಂಕ ಕಾಡಿತಾದರೂ ಸೊಸೆ ಕಮಲಮ್ಮ ಆಸರೆಯಾಗಿ ಅದು ಕುಂದದಂತೆ ನೋಡಿಕೊಂಡರು. ದಾಸರಿಗೆ ಲಿಪಿಗಾರ್ತಿಯಾದರು, ೧೯೬೩ರಲ್ಲಿ 'ಶ್ರೀನಿವಾಸ ಲೀಲಾವಿಲಾಸ'ವನ್ನೂ ೧೯೬೭ರಲ್ಲಿ 'ಮಾರುತಿ ಭಕ್ತಿಸತ್ವ' ವನ್ನೂ ರಚಿಸಿದರು. ಹಲವು ಕ್ಷೇತ್ರಗಳನ್ನು ಸಂದರ್ಶಿಸಿದರು. 'ಗೋಕರ್ಣದಿಂದ ಪ್ರಭಾವಿತರಾಗಿ ಗೋಕರ್ಣ ಮಹಿಮಾದರ್ಶ' ವನ್ನು ರಚಿಸಿದರು. ೧೯೭೯ರಲ್ಲಿ 'ಮಾರುತಿ ಭಕ್ತಿದರ್ಪಣ'ವನ್ನು ರಚಿಸಿದರು. ಪುಟ್ಟಪರ್ತಿಯಲ್ಲಿ ಬಾಬಾರೇ ಬೂದಿ ಪ್ರಸಾದವ ನೀಡಿ 'ಭರತ ಭಕ್ತಿ'ಯನ್ನು ತೆಲುಗಿನಲ್ಲಿ ವಾಡು ಎಂದು ಅಪ್ಪಣೆ ಕೊಡಿಸಿದರೂ ಕೊನೆಗಾಲದವರೆಗೂ ಸಾಧ್ಯವಾಗಲಿಲ್ಲ. ಹರಿದ್ವಾರದಲ್ಲಿ ಶಂಕರಾನಂದ ಸ್ವಾಮೀಜಿಗಳಿಂದ ಸನ್ಮಾನ ಸಭೆ ನಡೆಯಿತು. ಅಲ್ಲೇ ತೀರ್ಥಸ್ನಾನ ಕಾಲದಲ್ಲಿ ಸಾಲಿಗ್ರಾಮವೊಂದು ಇವರ ಎದೆಯನ್ನೇ ಬಡಿದು ಇವರ ಪಾಲಿಗೆ ಬಂತು. ೮೦ನೇ ವಯಸ್ಸಿನಲ್ಲಿ ತಿರುಪತಿ ಯಾತ್ರೆ ಮಾಡಿದಾಗ ದೇವರ ದರ್ಶನ ಸಾಧ್ಯವಾಗದೆ ದೇವರಲ್ಲಿ ಮೊರೆಯಿಡಲು ದಿವ್ಯ ಬೆಳಕಿನಲ್ಲಿ ಸಾಕ್ಷಾತ್ ದರ್ಶನವಾಯಿತು. ಹೀಗೆ ಹಲವು ಅನುಭಾವಿ ಪ್ರಸಂಗಗಳ ಮೂಲಕ ಭಗವಂತನ ಲೀಲಾವಿಲಾಸ ಪಾತ್ರಧಾರಿಗಳಾಗಿ ಸಂಪೂರ್ಣ ಶರಣಾಗತರಾಗಿ ನಿಜವಾದ ಭಗವದ್ ಭಕ್ತರಂತೆ ದಾಸಶ್ರೇಷ್ಠರಂತೆ ಬದುಕಿದರು.

ಈ ಕೃತಿರಚನೆಗಳ ಜೊತೆಜೊತೆಗೇ ಆಂತರ್ಯದಲ್ಲಿದ್ದ ದಿವ್ಯಾನುಭವ ಪಡೆಯುತ್ತಿದ್ದ ಆಸೂರಿದಾಸ 'ಮಾಂಗಿರಿರಂಗ'ನ ಮುದ್ರಿಕೆಯಲ್ಲಿ ಕೀರ್ತನೆಗಳನ್ನು ರಚಿಸುತ್ತಲೇ ಇದ್ದ. ಇದು ಉಸಿರಿರುವವರೆಗೂ ಅವ್ಯಾಹತವಾಗಿ ನಡೆಯುತ್ತಲೇ ಇತ್ತು. ಇಚ್ಛಿಸಿದ ದೇವರು ದರ್ಶನವಿತ್ತಾಗ, ಸಂದೇಶ ನೀಡಿದಾಗ, ಮೊರೆಯಿಟ್ಟಾಗ, ಭರವಸೆ ನೀಡಿದಾಗ, ಕಷ್ಟಬಂದಾಗ, ಸುಖದ ಸಂತೋಷದಲ್ಲಿ ಭಾವಾವೇಶದಲ್ಲಿ, ಬದುಕನ್ನು ಕಂಡಾಗ, ಸಮಾಜದ ಜನರ ರೀತಿ-ನೀತಿಗಳು ಅಣಕಿಸಿದಾಗ ಹೀಗೆ ಹತ್ತುಹಲವು ಸಂದರ್ಭಗಳಲ್ಲಿ ಆಯಾ ಅನುಭವಗಳನ್ನು, ದರ್ಶನಗಳನ್ನು ಕೀರ್ತನೆಗಳಾಗಿ ತತ್ತ್ವಗಳಾಗಿ ಕಂಡರಿಸಿತು. ಎಷ್ಟು ಹಾಡುಗಳು ಹೊರಹೊಮ್ಮಿದವೋ ಲೆಕ್ಕವಿಲ್ಲ.

ಕೇಳಿದವರಿಗೆ ಕೇಳಿದಾಗ ಹೇಳುತ್ತಿದ್ದರು ಬರೆದುಕೊಟ್ಟರು, ಬರೆಸಿಕೊಟ್ಟರು. ಅವೆಲ್ಲ ಒಂದೆಡೆ ನಿಲ್ಲಲಿಲ್ಲ. ನಿಂತವು ಕೆಲವು ಮಾತ್ರ. ಪುಸ್ತಕದಲ್ಲಿ ಅಚ್ಚಾದವು ಮತ್ತು ಸೊಸೆ ಕಮಲಮ್ಮ ಬರೆದಿಟ್ಟವು ಮಾತ್ರ. ಇದರ ಸಂಖ್ಯೆ ಸುಮಾರು ೫೦೦. ಸಾಯಿಭಜನಮಂದಿರದವರು ಇವರ ಸಾಯಿ ಭಜನಾವಳಿಯ ಕೃತಿಗಳಲ್ಲಿ ಅನೇಕವನ್ನು ಹೆಸರು-ಅಂಕಿತ ತೆಗೆದು ತಮ್ಮವಾಗಿ ಮಾಡಿಕೊಂಡಿದ್ದಾರೆ. ಹರೇ ಕೃಷ್ಣ ಪಂಥದವರೂ ಕೆಲವು ಹಾಡುಗಳನ್ನು ಬಳಸಿಕೊಂಡಿದ್ದಾರೆ. ಇವರಿದ್ದಾಗಲೇ ಇವರ ಸೋದರಮಾವ-ಇವರ ಒಪ್ಪಿಗೆ ಪಡೆದೇ- ಎಷ್ಟೋ ಕೃತಿಗಳನ್ನು ತಮ್ಮ ಹೆಸರಿನಲ್ಲಿ ಮಾಡಿಕೊಂಡಿದ್ದಾರೆ. ಹೀಗೆ ಎಷ್ಟೋ ಹಾಡುಗಳು ಇವರ ಅಂಕಿತ ಬದಲಾಗಿ ಚೆದುರಿಹೋಗಿವೆ. ಇವರ ದಾಖಲೆಗಳಲ್ಲಿಲ್ಲವಾಗಿವೆ.

ಸದಾ ಹರಿನಾಮಸಂಕೀರ್ತನೆ, ಸ್ಮರಣೆ, ಅನುಸಂಧಾನದಲ್ಲೇ ತೊಡಗಿಸಿ ಕೊಂಡಿದ್ದ ಈ ಜೀವ ೯೮ ವರ್ಷಗಳ ತುಂಬು ಜೀವನವನ್ನನುಭವಿಸಿದ ಹಿರಿಯ ಜೀವ. ಪ್ರಪತ್ತಿಯ ತಪಸ್ಸಿನಲ್ಲಿ ಪಕ್ವವಾಗಿದ್ದ ಫಲ. ಎಲ್ಲ ದೈವವನ್ನೂ ಒಂದೇ ಎಂದು ಕಂಡು ಕೊಂಡಿದ್ದ ಸಮದರ್ಶಿತ್ವದ ವ್ಯಕ್ತಿತ್ವ. ಸಾಯಿ, ರಾಘವೇಂದ್ರ, ಶಿವ, ಗಣೇಶ, ಪಾರ್ವತಿ ಎಲ್ಲರೂ ಹರಿ ಲಕ್ಷ್ಮಿಯರ ರೂಪಗಳೇ ಎಂದು ನಂಬಿದ್ದ ಶ್ರೀವೈಷ್ಣವ ಯತಿರೂಪ. ತಂದೆಯವರು ಇದ್ದಾಗಲೆ ಆಳ್ವಾರರ ಆಚಾರ್ಯರ ಚರಿತ್ರೆ ಬರೆ ಎಂದಿದ್ದರೂ ಅವರು ಕೊನೆಯುಸಿರಿರುವವರೆಗೂ ಅದು ಸಾಧ್ಯವಾಗದಾದಾಗ ಹೋಗಲಿ ನಿನ್ನ ಜೀವಿತಾವದಿಯಲ್ಲಾದರೂ ಅದನ್ನು ಪೂರೈಸು ಎಂದು ನೆನಪಿಸಿದುದರ ಫಲವಾಗಿ ಶ್ರೀವೈಷ್ಣವ ತತ್ವಪ್ರತಿಪಾದನೆಯ, ಭಕ್ತರ ಚರಿತ್ರೆ ಹೇಳುವ 'ಆಳ್ವಾರರ ಚರಿತ್ರೆ'ಯನ್ನು ಬರೆದು ಅಂತ್ಯಕಾಲದೊಳಗೆ ಪ್ರಕಟವಾದರೂ ಆಚಾರ್ಯರ ಚರಿತ್ರೆ ಬರೆಯಲಾಗಲಿಲ್ಲವೆಂಬ ಕೊರಗು ಉಳಿಯಿತು. ತಂದೆಯವರ ಮಾತು ಪೂರೈಸಲು ಮತ್ತು ನಮ್ಮ ಪೂರ್ವಿಕರ ಹೆಸರುಳಿಸಲು ಮತ್ತೆ ಇದೇ ಹೆಸರಿನಲ್ಲಿ ಇದೇ ವಂಶದಲ್ಲಿ ಹುಟ್ಟಿ ಬರುತ್ತೇನೆಂದು ಹೇಳುತ್ತಿದ್ದರೆಂದು ಮಗಳು ವೇದವಲ್ಲಿ ಸ್ಮರಿಸುತ್ತಾರೆ. ೯.೪.೧೯೮೪ರಂದು ಹುಟ್ಟಿದ ದಿನಕ್ಕೆ ಒಂದು ದಿನ ಮೊದಲು, ರಾಮನವಮಿಯ ಹಿಂದಿನ ದಿನ ಪರಮಪದವನ್ನು ಸೇರಿದ ಆಸೂರಿ ರಾಮಸ್ವಾಮಯ್ಯಂಗಾರ್ಯರ ಬದುಕು ಆಧುನಿಕ ಕಾಲದಲ್ಲೂ ಋಷಿಸದೃಶ,

ಯತಿಸಮಾನ, ಸಾರ್ಥಕಬದುಕು. ಇವರ ಕೃತಿಗಳು ಇವರನ್ನು ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಜೀವಂತವಾಗಿಸುತ್ತವೆ. ಕನ್ನಡ ಹರಿದಾಸ ಸಾಹಿತ್ಯಕ್ಕೆ ಇವರ ಕೀರ್ತನೆಗಳು ಬೆಲೆಬಾಳುವ ಗಟ್ಟಿಗಳು. ಕೀರ್ತನ ಸಾಹಿತ್ಯಕ್ಕೆ ಒಂದು ಹೊಸ ಪರಿಭಾಷೆಯನ್ನು ಸೃಷ್ಟಿಸುವ ಶಿಲ್ಪಿಗಳು.

ಇವರಿಗೆ ಶಿಷ್ಯಪರಂಪರೆಯೂ ಇದೆ. ಆದರೆ ಕೀರ್ತನೆಯ ಪರಂಪರೆಯಲ್ಲಿ ಯಾವ ಶಿಷ್ಯರೂ ಕಾಣಸಿಗದಿದ್ದರೂ ಕಾವ್ಯ ಪರಂಪರೆಯಲ್ಲಿ ಹರಿಕಥೆ, ಗಮಕ ಪರಂಪರೆಯಲ್ಲಿ ಬಿ.ಎಸ್.ಎಸ್. ಕೌಶಿಕ್, ಆರ್. ಶಂಕರನಾರಾಯಣ್, ಕೃಷ್ಣಗಿರಿ ಮುರಳೀಧರ ಮುಂತಾದವರು ಅತ್ಯಂತ ಕೃತಜ್ಞತೆಯಿಂದ ಇವರನ್ನು ಗುರುಸ್ಥಾನದಲ್ಲಿ ಗೌರವಿಸುತ್ತಾರೆ.

(ಆ) ಇತರ ಕೃತಿಗಳು

ಆಸೂರಿಯವರು ಕೇವಲ ಕೀರ್ತನಕಾರರಾಗಿರದೆ ನಾಟಕಕಾರರೂ ಕವಿಗಳೂ ಆಗಿದ್ದಾರೆ. ಒಟ್ಟು ೧೬ ಕೃತಿಗಳು ಇವರ ಹೆಸರಿನಲ್ಲಿವೆ. ೧೯೨೫ಕ್ಕೆ ಮೊದಲೇ ರಚಿಸಿರುವ ಸುಮಾರು ಒಂಬತ್ತು ನಾಟಕಗಳ ಹೆಸರುಗಳು ದೊರಕುತ್ತವೆ. ಅವುಗಳೆಂದರೆ ೧) ಪ್ರಹ್ಲಾದ ಚರಿತೆ ೨) ಕೃಷ್ಣಲೀಲಾ ೩) ಮದಾಲಸಾ ೪) ಸುಪ್ರಭಾವಿಲಾಸ (ಪ್ರಮೀಳಾರ್ಜುನ ನಾಟಕ) ೫) ಕಬೀರದಾಸ ೬) ಬಬ್ರುವಾಹನ ೭) ಹರಿಮಾಯಾ ೮) ಗೀತಕುಸುಮಾಕರ ೯) ಸಂಗೀತಕಲ್ಯಾಣ ಪಾರಿಜಾತ. ಇವುಗಳಲ್ಲಿ ಕೆಲವು ಪ್ರಕಟವಾಗಿದ್ದವೆಂದೂ ಇನ್ನು ಕೆಲವು ಹಸ್ತಪ್ರತಿ ರೂಪದಲ್ಲಿ ಇದ್ದವಾದರೂ ಅಭಿನಯವಾಗಿದ್ದವೆಂದೂ ತಿಳಿದುಬರುತ್ತದೆ. ಇವರೇ ಕಟ್ಟಿದ್ದ 'ಕಮಲಾಕರ ಡ್ರಮಟಿಕ್ ಕಂಪನಿ'ಯ ಮೂಲಕ ಹಲವು ಬಾರಿ ಇವು ಮುಡುಕುತೊರೆ ಜಾತ್ರೆಯಲ್ಲಿ ಪ್ರದರ್ಶಿತವಾಗಿದ್ದವೆಂದು ಹೇಳಲಾಗಿದೆ. ಕೃಷ್ಣಲೀಲಾ ಹೆಚ್ಚು ಜನಪ್ರಿಯವಾದ ನಾಟಕವಾಗಿತ್ತೆಂದೂ ಕಂಸನ ಪಾತ್ರದಲ್ಲಿ ಸ್ವತಃ ಲೇಖಕರೇ ಅಭಿನಯಿಸುತ್ತಿದ್ದರೆಂದೂ ಅಧಿಕೃತ ಮಾಹಿತಿಯಿದೆ. ಈ ಯಾವ ನಾಟಕಗಳೂ ಮೈ ವಿ.ವಿ. ಯ ಕನ್ನಡ ಗ್ರಂಥಸೂಚಿಯಲ್ಲಿ ಕಾಣದೊರೆಯುವುದಿಲ್ಲ.

ಕೀರ್ತನೆಗಳಿಗೆ ಸಂಬಂಧಿಸಿದಂತೆ ಹರಿಭಜನ ಕುಸುಮವಲ್ಲರಿ ಭಾಗ-೧,೨' ಹಾಗೂ 'ಭಜನವಲ್ಲರಿ' ಎಂಬ ಎರಡು ಪ್ರಕಟಿತ ಕೃತಿಗಳು ಮತ್ತು ಸು.೪೫೦ ಬಿಡಿ ಹಾಡುಗಳ ಹಸ್ತಪ್ರತಿ ದೊರಕುತ್ತವೆ.

ಇವುಗಳೊಂದಿಗೆ ಆಸೂರಿಯವರು ಐದು ಷಟ್ಪದಿ ಕಾವ್ಯಗಳನ್ನು ರಚಿಸಿದ್ದಾರೆ. ೧) ಭರತ ಭಕ್ತಿಕಾವ್ಯ ೨) ಶ್ರೀನಿವಾಸ ಲೀಲಾವಿಲಾಸ ೩) ಮಾರುತಿಭಕ್ತಿಸ್ತವ ೪) ಶ್ರೀಗೋಕರ್ಣಮಹಿಮಾದರ್ಶ ಮತ್ತು ೫) ಶ್ರೀ ಆಳ್ವಾರರ ಚರಿತ್ರೆ. ಈ ಷಟ್ಪದಿ ಕೃತಿಗಳು ಮತ್ತು ಕೀರ್ತನೆಗಳು ಭಕ್ತಿಯ ತಳಹದಿಯ ಮೇಲೆ ರಚನೆಯಾಗಿದ್ದು ದಾಸರ ಭಕ್ತಿ, ದೈವ ಪ್ರೇಮ ಮತ್ತು ಕಾವ್ಯ ಪ್ರತಿಭೆಗಳು ಸುಂದರವಾಗಿ ಹೊರಹೊಮ್ಮಿವೆ.

ಭರತ ಭಕ್ತಿ ಕಾವ್ಯವು ದಾಸರಿಗೆ ಹೆಸರು ತಂದುಕೊಟ್ಟಿರುವ ಪ್ರಥಮ ಕೃತಿ. ೯ ಸಂಧಿಗಳಲ್ಲಿ ೬೪೮ ಪದ್ಯಗಳಲ್ಲಿ ವಾರ್ಧಕಷಟ್ಪದಿಯಲ್ಲಿ ಭರತನ ಭಕ್ತಿಯ ಪ್ರತಿಪಾದನೆಯನ್ನು ರಾಮಾಯಣ ಕಥೆಯ ಮೂಲಕ ನಿರೂಪಿಸಲಾಗಿದೆ. "ಇದೊಂದು ಭಕ್ತಿರಸ ಪ್ರಧಾನವಾದ ಕಾವ್ಯ. ಭಾವದ ಸೊಗಸು, ಮೃದುಮಧುರ ಮಾತುಗಳಿಂದ ತುಂಬಿ ಭಕ್ತಿರಸದ ಅಲೆಗಳೇ ಅನೇಕ ಕಡೆ ಕಾಣುತ್ತವೆ. 'ಭಕ್ತಿಯ ಪರಮ ತಪಸ್ಸು' ಎಂಬುದನ್ನು ಸಾರುವುದೇ ಈ ಕಾವ್ಯದ ಗುರಿ" ಎಂಬಂತಹ ಮೆಚ್ಚುಗೆಗಳಿಗೆ ಈ ಕೃತಿ ಪಾತ್ರವಾಗಿ ವಿದ್ವಾಂಸರು, ವಿಮರ್ಶಕರು, ಗಮಕಿಗಳಿಗೆ ಪ್ರಿಯವಾಗಿ ಇವರನ್ನು 'ಆಧುನಿಕ ಲಕ್ಷ್ಮೀಶ' ಎಂದು ಕರೆದಿದ್ದಾರೆ.

ಈ ಕಾವ್ಯ ರಚನೆಗಾಗಿ ಆಸೂರಿಯವರು ಅಗಾಧವಾದ ಪಾಂಡಿತ್ಯವನ್ನು ಹೊಂದಿರುವುದು ಕಂಡುಬರುತ್ತದೆ. ತುಳಸಿ, ಕಂಬ, ಆಧ್ಯಾತ್ಮ, ಜೈನ ಹೀಗೆ ಹಲವು ರಾಮಾಯಣಗಳನ್ನು ಅಧ್ಯಯನ ಮಾಡಿದ್ದಾರೆ. ಕೈಕೆಯವರಕ್ಕೆ ಮಾಯೆಯ ಮೋಹ, ಅಹಲ್ಯೆ ತಾನೇ ಕಲ್ಲಾದದ್ದು, ವಾಲಿ-ಲಕ್ಷ್ಮಣರ ಸಂವಾದ ಹೀಗೆ ಹಲವು ಸೂಕ್ತ, ಭಕ್ತಜನ ಒಪ್ಪಿತ ಬದಲಾವಣೆಗಳನ್ನು ಮಾಡುವ ಮೂಲಕ ತಮ್ಮ ಕಾವ್ಯ ಪ್ರತಿಭೆಯನ್ನು ಬೆಳಗಿದ್ದಾರೆ. ಎಂ.ಪಿ.ಎಲ್.ಶಾಸ್ತ್ರೀ, ಬಿ.ಶಿವಮೂರ್ತಿ ಶಾಸ್ತ್ರಿ, ಎಂ.ಎಸ್.

ರಾಮಸ್ವಾಮಿ ಮುಂತಾದ ಹಲವು ಗಣ್ಯರ ಸಹೃದಯ ವಿಮರ್ಶೆಗಳೂ ಈ ಕೃತಿಯಲ್ಲಿವೆ. ಇದರಲ್ಲಿ ಕಂಬರಾಮಾಯಣ ಮತ್ತು ತುಳಸಿ ರಾಮಾಯಣಗಳ ಪ್ರಭಾವವಿದೆಯೆಂದೂ ಗುರುತಿಸುತ್ತಾರೆ.

ಈ ಕೃತಿ ಸಾಯಿಬಾಬಾರ ಸಂದೇಶದ ಮತ್ತು ಅವರ ಆರ್ಥಿಕ ಸಹಕಾರದ ಫಲವಾಗಿ ಪ್ರಕಟವಾಯಿತೆಂದು ಕವಿಗಳು ಅತ್ಯಂತ ಗೌರವಪೂರ್ವಕವಾಗಿ ಮತ್ತು ಅವರು ನೀಡಿದ ಸಂದೇಶ ದರ್ಶನದ ಅನುಭವ ಚಿತ್ರಣದೊಂದಿಗೆ ಹೇಳಿ ಕೊಂಡಿದ್ದಾರೆ. ಸ್ವತಃ ಕವಿಯೇ ಇದನ್ನು ಪ್ರಕಟಿಸಿದ್ದಾರೆ.

ಶ್ರೀನಿವಾಸ ಲೀಲಾವಿಲಾಸ ೧೯೬೩ರಲ್ಲಿ ಶ್ರೀ ಬಿ.ಎಸ್. ಎಸ್.ಕೌಶಿಕ್ ಅವರಿಂದ ಮೈಸೂರಿನ ವಾಲ್ಮೀಕೀ ಗಮಕ ಪಾಠಶಾಲಾದಿಂದ ಪ್ರಕಟವಾಗಿರುವ ಕೃತಿ. ಇದು ೯ ತರಂಗಗಳಲ್ಲಿ ಪದ್ಯಗಳಾದ ವಾರ್ಧಕ ಷಟ್ಪದಿಯಲ್ಲಿದೆ. ಭವಿಷ್ಯೋತ್ತರ ಪುರಾಣ ಮತ್ತು ಸ್ಕಾಂದ ಪುರಾಣದಲ್ಲಿ ಬರುವ ಶ್ರೀವೆಂಕಟೇಶ್ವರ ಮಹಾತ್ಮೆಯನ್ನು ಆಧರಿಸಿ ಈ ಕೃತಿ ರಚಿಸಲಾಗಿದೆ. ಭಗವಂತನ ಗುಣ, ಮಹಿಮಾಸ್ತುತಿ, ವೆಂಕಟಾದ್ರಿಯ ಸೊಗಸು, ಭಕ್ತಿಭಾವಗಳಿಂದ ಇದೂ ಸಹ ಗಮಕಿಗಳಿಗೆ ಪ್ರಿಯವಾದ ಕಾವ್ಯವಾಗಿದೆ. ಇಲ್ಲಿಯೂ ಸಹ ಲೇಖಕರು ತಮ್ಮ ಪ್ರತಿಭಾ ಸಂಪನ್ನವಾದ ಪಾಂಡಿತ್ಯದಿಂದ ಮೂಲಕಥೆಯಲ್ಲಿ ಬರುವ ಕೆಲವು ಸಂಗತಿಗಳನ್ನು (ಭೃಗು, ಲಕ್ಷ್ಮಿಯರ ಕೋಪ, ತ್ರಿಮೂರ್ತಿಗಳ ಅಲಕ್ಷ್ಯ ಇತ್ಯಾದಿ) ಅಪವಾದ ರಹಿತಗೊಳಿಸುವುದರ ಮೂಲಕ ದೇವತೆಗಳು ಮತ್ತು ಋಷಿಗಳ ಘನತೆ ಗೌರವಗಳನ್ನು ಕಾಯ್ದುಕೊಳ್ಳಲು ಪ್ರಯತ್ನಿಸಿರುವುದು ಕಂಡುಬರುತ್ತದೆ.

ಮಾರುತಿ ಭಕ್ತಿಸ್ತವ ಕೇವಲ ೯ ವಾರ್ಧಕ ಷಟ್ಪದಿಗಳ ಪುಟ್ಟಕೃತಿ. ೧೯೬೭ರಲ್ಲಿ ಬೆಂಗಳೂರಿನ ಕಾವ್ಯ ಪ್ರಚಾರ ಮಂಡಲಿಯ ಮೂಲಕ ಪ್ರಕಟವಾಗಿದೆ. ಭರತಭಕ್ತಿ ಕಾವ್ಯದಲ್ಲಿ ಮಾರುತಿ ಸ್ತುತಿ ಇಲ್ಲದ ಕಾರಣ ಅದರ ಲೋಪನಿವಾರಣೆಗಾಗಿ ಈ ಕೃತಿಯನ್ನು ರಚಿಸಲಾಯಿತೆಂದು ಲೇಖಕರು ಹೇಳಿಕೊಂಡಿದ್ದಾರೆ. ಮಾರುತಿ ಲೇಖಕರಿಗೆ ಅತ್ಯಂತ ಪ್ರಿಯವಾದ ದೇವತೆಗಳಲ್ಲಿ ಒಂದಾಗಿರುವುದಲ್ಲದೆ ಕೀರ್ತನೆಗಳಲ್ಲಿ ಇವನನ್ನು ಮನದುಂಬಿ ಸ್ತುತಿಸಿದ್ದಾರೆ. ಇಲ್ಲಿ ರಾಮಾಯಣಾಂತರ್ಗತವಾದ

ಮಾರುತಿಯ ಭಕ್ತಿಯನ್ನೂ, ಹೃದಯವನ್ನು ಭಕ್ತಿಭಾವ ಪೂರ್ವಕವಾಗಿ ಹಿಡಿದಿಟ್ಟಿದ್ದಾರೆ. ೧೯೭೯ರಲ್ಲಿ ಇದೇ ಸಂಸ್ಥೆಯಿಂದ ಪ್ರಕಟವಾದ 'ಮಾರುತಿಭಕ್ತಿ ದರ್ಪಣ' ಇದೇ ವಸ್ತುವನ್ನೊಳಗೊಂಡು ಇದೇ ಕೃತಿಯಿಂದ ಪ್ರೇರಿತವಾಗಿ ರಚಿಸಲ್ಪಟ್ಟ ೪೪೪ ವಾರ್ಧಕ ಷಟ್ಪದಿಗಳಲ್ಲಿರುವ ದೀರ್ಘಕೃತಿ. ಹಲವು ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ರಾಮಾಯಣದಲ್ಲಿರುವ ಮಾರುತಿಯ ಕಥೆಯನ್ನು ಇಲ್ಲಿ ಪ್ರತ್ಯೇಕ ಕೃತಿರೂಪದಲ್ಲಿ ಭಕ್ತಿಭಾವದಿಂದ ರಚಿಸಿದ್ದಾರೆ.

'ಶ್ರೀ ಗೋಕರ್ಣ ಮಹಿಮಾದರ್ಶ' ಗೋಕರ್ಣ ಪ್ರವಾಸದಿಂದ ಪ್ರೇರಿತವಾಗಿ ಬರೆದಿರುವ ಗೋಕರ್ಣ ಕ್ಷೇತ್ರಮಹಿಮೆಯ ಕೃತಿ. ಆರಂಭದಲ್ಲಿ ಆಳ್ವಾರರ ಆಚಾರ್ಯರ ಸ್ತುತಿಯಿದೆ. ಇದೂ ಸಹ ಗಮಕ ವಾಚನಕ್ಕೆ ಪ್ರಿಯವಾದುದಾಗಿದೆ. ವಾರ್ಧಕಷಟ್ಪದಿಯಲ್ಲಿದೆ.

ಇವರ ಇನ್ನೊಂದು ಕೃತಿ 'ಆಳ್ವಾರರ ಚರಿತ್ರೆ'. ಇದೂ ಸಹ ವಾರ್ಧಕ ಷಟ್ಪದಿಯಲ್ಲಿದೆ. ತಮಿಳುನಾಡಿನ ಶ್ರೀವೈಷ್ಣವಭಕ್ತರಾದ ೧೨ಜನ ಆಳ್ವಾರರ ರಂಜನೀಯವಾದ ಕಥೆಗಳನ್ನು ಈ ಕೃತಿಯಲ್ಲಿ ವಿವರಿಸಿದ್ದಾರೆ. ಪ್ರಪನ್ನಾಮೃತ, ಗುರು ಪರಂಪರಾ ಮುಂತಾದ ಮತೀಯ ಧಾರ್ಮಿಕ ಗ್ರಂಥಗಳನ್ನು ಆಧರಿಸಿ ಈ ಕಥೆಗಳನ್ನು ರಚಿಸಿದ್ದರೂ ಅವರ ಭಕ್ತಿಯನ್ನು ನಿರೂಪಿಸುವಲ್ಲಿ ಹೊಸತನವಿದೆ. ಶರಣಾಗತಿ ತತ್ವವನ್ನು ಅತ್ಯಂತ ಸೊಗಸಾಗಿ ಪ್ರತಿಪಾದಿಸಿದ್ದಾರೆ. ಹರಿಹರನ ೬೩ ಪುರಾತನರ ರಗಳೆಗಳಂತೆ ಇದೂಸಹ ತಮಿಳುನಾಡಿನ ವೈಷ್ಣವ ಭಕ್ತರನ್ನು ಕನ್ನಡಕ್ಕೆ ಪರಿಚಯಿಸಿರುವ ಸ್ವತಂತ್ರ ಕಾವ್ಯಕೃತಿಯಾಗಿ ನಿಲ್ಲುತ್ತದೆ. ಈಎರಡೂ ಕೃತಿಗಳನ್ನು ಶ್ರೀ ಬಿ.ಎಸ್.ಎನ್.ಕೌಶಿಕ್ ಅವರು ಪ್ರಕಟಿಸಿದ್ದಾರೆ.

ಆಸೂರಿಯವರು ಇನ್ನೂ ಕೆಲವು ಬಿಡಿಕೃತಿಗಳನ್ನೂ ರಚಿಸಿದ್ದಾರೆ. ಅವುಗಳಲ್ಲಿ ಶ್ರೀ ವೆಂಕಟೇಶ್ವರ ಸುಪ್ರಭಾತ ಒಂದು. ೪೫ ನುಡಿಗಳಲ್ಲಿ ಚೌಪದಿಗಳಲ್ಲಿ ಬರೆದಿರುವ ಈ ಕೃತಿ ಪ್ರಸಿದ್ಧ ವೆಂಕಟೇಶ್ವರ ಸುಪ್ರಭಾತದ ಭಾವಾನುವಾದದಂತೆ ತೋರುತ್ತದೆ ಯಾದರೂ ಸ್ವಂತಿಕೆಯಿದೆ. ಸರಳವಾದ ಕನ್ನಡದಲ್ಲಿ ಪ್ರಾಸಬದ್ಧವಾಗಿ ಸುಲಲಿತವಾಗಿ ರಚಿಸಿದ್ದಾರೆ. ೨೮ ನುಡಿಗಳು ಸುಪ್ರಭಾತ ರೂಪದಲ್ಲೂ ೯ನುಡಿಗಳು ಶರಣಾಗತಿ

ರೂಪದಲ್ಲೂ ಉಳಿದವು ಮಂಗಳ ರೂಪದಲ್ಲೂ ಇವೆ. ಕೆಲವು ಆಧುನಿಕ ಕವಿತೆಗಳೂ ಇವರ ಕೀರ್ತನೆಗಳ ಹಸ್ತಪ್ರತಿಯಲ್ಲಿದ್ದು ವಿಧಾನಸೌಧ, ಆಧುನಿಕ ಯುವತಿ, ಪ್ರಕೃತಿ ಹೀಗೆ ವಿವಿಧ ವಸ್ತುಗಳನ್ನು ಒಳಗೊಂಡು ಆಕರ್ಷಣೀಯವಾಗಿದೆ. ಶ್ರೀಕಂಠದತ್ತ ಒಡೆಯರ ಜನನಕಾಲದಲ್ಲಿ, ಮಹಾರಾಜರಿಗೆ ಅರ್ಪಿಸಿದ 'ಚಿರಮಭಿವರ್ಧತಾಂ ಯದುಸಂತಾನಶ್ರೀ' ಎಂಬ ೭ ವಾರ್ಧಕ ಷಟ್ಪದಿಗಳ 'ಅಭಿನಂದನಾ ಪದ್ಯರತ್ನಮಾಲಿಕೆ'ಯನ್ನು ಬರೆದಿದ್ದಾರೆ.

(ಇ) ಕೀರ್ತನೆಗಳು

ಆಸೂರಿಯವರು ಮೂಲತಃ ಕೀರ್ತನಕಾರರು. ಕೀರ್ತನೆಗಳ ರಚನೆ ಬಾಲ್ಯದಿಂದಲೂ ಅವ್ಯಾಹತವಾಗಿ ನಡೆಯುತ್ತಲೇ ಬಂದಿದೆ. ಇವುಗಳ ಜೊತೆಗೆ ನಾಟಕ, ಕಾವ್ಯಗಳನ್ನೂ ರಚಿಸಿದ್ದಾರೆ. ಇವರದು ಮುಖ್ಯವಾಗಿ ಹರಿದಾಸ ವ್ಯಕ್ತಿತ್ವ. ಇವರು ರಚಿಸಿರುವ ಕೃತಿಗಳೂ ಇದಕ್ಕೆ ಪೂರಕವಾಗಿಯೇ ಇವೆ. ಕೀರ್ತನೆಗಳಲ್ಲಿ ಅಭಿವ್ಯಕ್ತಿಸುವ ಭಕ್ತಿಯನ್ನೇ ಕೃತಿಗಳ ರೂಪದಲ್ಲಿ ಕಾವ್ಯವಾಗಿ ಹರಿಸಿದ್ದಾರಷ್ಟೇ. ಆದ್ದರಿಂದ ಆಸೂರಿಯವರೂ ಕನಕದಾಸರು, ಜಗನ್ನಾಥದಾಸರುಗಳಂತೆ ದಾಸರಾಗಿ ಕೃತಿ ರಚನೆ ಮಾಡಿದವರಾಗಿದ್ದಾರೆ. ಇತರ ದಾಸರುಗಳು ಗುರುವೊಬ್ಬರಿಂದ ಜೀವಿತದ ಮಧ್ಯಕಾಲದಲ್ಲಿ ಅಧಿಕೃತವಾಗಿ ದಾಸದೀಕ್ಷೆ ಮತ್ತು ಅಂಕಿತ ಪಡೆದು 'ದಾಸವೃತ್ತಿ' ಅನುಸರಿಸಿದರೆ ಶ್ರೀವೈಷ್ಣವದಾಸರು ಸಂಸಾರತಃ ದಾಸರೇ ಆಗಿರುತ್ತಾರೆ. ಉಪನಯನ ಕಾಲದಲ್ಲೇ ದಾಸದೀಕ್ಷೆಯಾಗಿರುತ್ತದೆ. ಗುರೂಪದೇಶವೂ ಆಗಿರುತ್ತದೆ. 'ವೃತ್ತಿ' ಯೊಂದನ್ನು ಬಿಟ್ಟು ಉಳಿದೆಲ್ಲ ಲಕ್ಷಣಗಳಿಗೂ ಇವರು ಬದ್ಧರಾಗಿರುತ್ತಾರೆ. ಕೆಲವು ಶ್ರೀವೈಷ್ಣವ ಹರಿದಾಸರಿಗೆ ಇದು ಅನ್ವಯವಾಗುತ್ತದೆ. ಆಸೂರಿಯವರೂ ಇದೇ ರೀತಿಯ ದಾಸಲಕ್ಷಣದಾತರಾಗಿ ಸಂಸಾರ ಕಾಲದಿಂದಲೂ, ಹರಿದಾಸ ಮನೋಭಾವದಿಂದಲೇ ಬಾಳಿ ಬದುಕಿದವರು. ಶ್ರೀವೈಷ್ಣವ ತತ್ವವಾದ 'ಪ್ರಪತ್ತಿ ಧರ್ಮ' ಇದಕ್ಕೆ ಹೇಳಿಮಾಡಿಸಿದಂತೆಯೇ ಇದೆ. ಇದು ಬೇಲೂರು ವೈಕುಂಠದಾಸರಿಂದ ಹಿಡಿದು ಎಲ್ಲ ಶ್ರೀವೈಷ್ಣವ ಹರಿದಾಸರಿಗೂ ಅನ್ವಯವಾಗುತ್ತದೆ.

ಆಸೂರಿಯವರ ಕೀರ್ತನೆಗಳು ಸಾವಿರಕ್ಕೂ ಅಧಿಕವಾಗಿವೆಯೆಂದು ಸಂಪ್ರದಾಯದವರ, ಶಿಷ್ಯರ ಹೇಳಿಕೆಯಿದ್ದರೂ ದೊರಕಿರುವುದು ಸುಮಾರು ೪೫೫ ಮಾತ್ರ. ೧೯೨೫ರಲ್ಲೇ ಮೈಸೂರಿನ ಕೃಷ್ಣ ಮುದ್ರಣಾಲಯದಿಂದ ಪ್ರಕಟವಾಗಿರುವ 'ಹರಿಭಜನ' ಕುಸುಮವಲ್ಲರಿಯ' ಎರಡೂ ಭಾಗಗಳಲ್ಲಿ ಸುಮಾರು ನೂರು ಕೀರ್ತನೆಗಳಿರಬಹುದು. ಭಾಗ–೧ರಲ್ಲಿ ಹರಿಸ್ತುತಿಗಳಿದ್ದು ೪೧ ಪುಟವಿದ್ದರೆ ಭಾಗ–೨ ರಲ್ಲಿ ಭಜನಕೀರ್ತನೆಗಳಿದ್ದು ೭೧ ಪುಟವಿದೆ. ಆದರೆ ಈ ಕೃತಿ ಲಭ್ಯವಿಲ್ಲ. 'ಭಜನವಲ್ಲರಿ' ಎಂಬ ಇನ್ನೊಂದು ಕೃತಿಯ ಖಿಲಭಾಗ ಲಭ್ಯವಿದ್ದು ಇದರ ಮೊದಲ ಮತ್ತು ಕೊನೆಯ ಪುಟಗಳೊಂದಿಗೆ ಹಲವು ಪುಟಗಳು ನಾಶವಾಗಿದ್ದು ಇರುವ ಕೆಲವೇ ಪುಟಗಳಲ್ಲಿ ೩೭ ಕೀರ್ತನೆಗಳ ಪಟ್ಟಿ ಇದೆ. ಇದರಲ್ಲಿ ಭಜನಾವಳಿ ಹೆಸರಿನಲ್ಲಿ ೨೩ ಬಿಡಿ ಕೀರ್ತನೆಗಳೂ ೧೪ ಕೃತಿರೂಪದ ಕೀರ್ತನೆಗಳೂ ಇವೆ. ಇವುಗಳೆಲ್ಲ ಸಾಯಿ ಭಜನಾ ಮತ್ತು ಸ್ತುತಿ ಪದ್ಯಗಳಾಗಿವೆ. ಈ ಭಜನವಲ್ಲರಿ ಹರಿಭಜನ ಕುಸುಮವಲ್ಲರಿಯ ಭಜನ ಕೀರ್ತನೆಗಳು ಹೆಸರಿನ ೨ನೇ ಭಾಗವೋ ಅಥವ ಪ್ರತ್ಯೇಕ ಪುಸ್ತಕವೋ ತಿಳಿಯುತ್ತಿಲ್ಲ. ಈ ಭಜನವಲ್ಲರಿಯಲ್ಲಿರುವ ಯಾವ ಹಾಡುಗಳೂ ಈ ಸಂಪುಟಕ್ಕೆ ಆಧಾರ ಪ್ರತಿಯಾಗಿರುವ ಹಸ್ತಪ್ರತಿಯಲ್ಲಿಲ್ಲ. ಈ ಹಸ್ತಪ್ರತಿ ಆಸೂರಿಯವರ ಮಗಳು ವೇದವಲ್ಲಿಯವರಲ್ಲಿದ್ದು ಇದನ್ನು ಆಸೂರಿಯವರ ಸೊಸೆ ಕಮಲಮ್ಮ ಬರೆದದ್ದೆಂದೂ ಇದರಲ್ಲಿ ಪ್ರಕಟಿತ ಪುಸ್ತಕಗಳಲ್ಲಿರುವ ಹಾಡುಗಳು ಇಲ್ಲವೆಂದೂ ವೇದವಲ್ಲಿ ಅವರು ಹೇಳುತ್ತಾರೆ ಆದರೆ ಹಸ್ತಪ್ರತಿಯಲ್ಲಿ ಕಮಲಮ್ಮನವರ ಬರಹದ ಜೊತೆಗೆ ಇನ್ನೂ ಒಂದೆರಡು ಭಿನ್ನಬರಹಗಳಿವೆ. ವೇದವಲ್ಲಿಯವರು ಹಾಡಿದ ಹಾಡಿನ ಸಂಪ್ರದಾಯದಲ್ಲಿರುವ, ಹರಿಭಜನ ಕುಸುಮವಲ್ಲರಿಯಲ್ಲಿ ಇಲ್ಲ ಎಂದು ಹೇಳುವ ಹಾಡುಗಳೂ ಈ ಹಸ್ತಪ್ರತಿಯಲ್ಲಿವೆ. ಈ ಹಸ್ತಪ್ರತಿಯಲ್ಲಿ ೪೫೫ ಹಾಡುಗಳಿದ್ದು ಅದರಲ್ಲಿ ವೆಂಕಟೇಶ್ವರ ಸುಪ್ರಭಾತ ಮತ್ತು ಕೆಲವು ಆಧುನಿಕ ಕವಿತೆಗಳೂ ಕೆಲವು ಅಸಮಗ್ರ ಕೀರ್ತನೆಗಳೂ ಇವೆ. ಇವುಗಳನ್ನು ಹೊರತುಪಡಿಸಿದ ೪೪೭ ಕೀರ್ತನೆಗಳನ್ನು ಈ ಸಂಪುಟದಲ್ಲಿ ಬಳಸಿಕೊಂಡಿದೆ. ಪ್ರಕಟಿತ ಗ್ರಂಥಗಳಲ್ಲಿ ಪುನರಾವರ್ತನೆಯಾಗದೆ ಇರಬಹುದಾದ ಇನ್ನೂ ೫೦ ಕೀರ್ತನೆಗಳನ್ನು ಅಂದಾಜಿಸಿದರೆ ಸುಮಾರು ೫೦೦ ಕೀರ್ತನೆಗಳು ಲಭ್ಯ ಎಂದು ಸದ್ಯಕ್ಕೆ ಅಭಿಪ್ರಾಯಪಡಬಹುದು.

ಈ ಸಂಪುಟದಲ್ಲಿ ಸೇರಿಲ್ಲದ ಮೇಲೆ ಹೇಳಿದ 'ಭಜನವಲ್ಲರಿ' ಯಲ್ಲಿರುವ ಹಾಡುಗಳ ಮೊದಲ ಸಾಲುಗಳನ್ನು ಇಲ್ಲಿ ನೀಡಲಾಗಿದೆ. ಪುಸ್ತಕದಲ್ಲಿರುವ ಅನುಕ್ರಮವನ್ನೇ ಅನುಸರಿಸಿದೆ.

೧. ಶ್ಲೋಕ : ಭಕ್ತಿಮುಕ್ತಿದಾಯಕಂ ಪ್ರಶಸ್ತಿ ಚಾರು ವಿಗ್ರಹಂ (೨ ನುಡಿ)

೨. ಸಾಯಿಮಹಿಮಸ್ತೋತ್ರ :
   ಸದಾಸತ್ ಸ್ವರೂಪಂ ಚಿದಾನಂದ ಕಂದಂ (೧೭ ನುಡಿ)

೩. ಶ್ರೀಸಾಯಿನಾಥಾಷ್ಟಕ: ಪತ್ರಿಗ್ರಾಮ ಸಮುದ್ಭೂತಂ (೮ ನುಡಿ)

೪. ಶ್ರೀಕೃಷ್ಣ ದ್ವಾದಶರತ್ನ ಸ್ತೋತ್ರಃ
   ಭಜಶ್ರೀ ಕೃಷ್ಣಂಭಜಶ್ರೀಕೃಷ್ಣಂ (೧೨ ನುಡಿ)

೫. ಶ್ರೀರಾಮ ದ್ವಾದಶರತ್ನಸ್ತೋತ್ರಃ
   ಭಜಶ್ರೀರಾಮಂಭಜಶ್ರೀರಾಮಂ (೧೨ ನುಡಿ)

೬. ಶ್ರೀಶಿವ ದ್ವಾದಶರತ್ನಸ್ತೋತ್ರಃ
   ಭಜಸಾಂಬಶಿವಂಭಜಸಾಂಬಶಿವಂ (೧೨ ನುಡಿ)

೭. ಶ್ರೀಮಾರುತಿ ದ್ವಾದಶರತ್ನ ಸ್ತೋತ್ರಃ
   ಭಜಹನುಮಂತಂ ಭಜಹನುಮಂತಂ (೨ ನುಡಿ)

೮. ಸಾಯಿನಾಮಸ್ತೋತ್ರಃನಾಮಾವಳಿ (೪೦ ನುಡಿ)

೯. ಸಾಯಿ ಅಕ್ಷರಮಾಲಾ (೪೦ ನುಡಿ)

೧೦. ಸಾಯಿನಾಥಾಷ್ಟೋತ್ತರ ಶತನಾಮ ಸ್ತೋತ್ರ
   ಶ್ರೀಸಾಯಿ ನಾಥದೇವೇಶೋ ಲಕ್ಷ್ಮೀನಾರಾಯಣೋಹರಿ (೨೦ ನುಡಿ)

೧೧. ಸಾಯಿ ನಾಮಾವಳಿ

೧೨. ಅಭಿನವಾಕ್ಷರಮಾಲಾ

೧೩. ಶ್ರೀಸಾಯಿನಾಮ ರಹಸ್ಯರತ್ನಮಾಲಾರ ಶ್ರೀಕರ ಶುಭಕರ

೧೪. ಸಾಕ್ಷರದಿ ಪರಮಪಾವನ ಮಾನಸಂ (೩ ನುಡಿ)

ಭಜನಾವಳಿ ಹೆಸರಿನಲ್ಲಿನ ಬಿಡಿಹಾಡುಗಳು.

೧ ಜಯಗಣೇಶ ಜಯಗಣೇಶ ಜಯಗಣೇಶ ಪಾಹಿಮಾಂ

೨ ಜಯಮುರಳೀಧರ ಜಯಗಿರಿಧಾರಿ

೩ ಸರ್ವವಂದಿತ ಕಾಮಿತದಾತಾ ಸಾಯಿನಾಥಾ

೪ ನಮೋಸ್ತು ಸದ್ಗುರು ನಮೋಸ್ತು ಜೈಗುರು

೫ ಬೇಡುವೆ ಗುರುವೇ ವರವನು

೬ ಬಂದು ನೋಡೋ ಬಂದು ನೊಡೋ ಸಾಯಿಬಾಬ

೭ ಸಾಯಿನಾಥ ಎನುಮನವೇ

೮ ಪಾಹಿಮಾಂ ಹರೇಶೌರೇ

೯ ಗೋವಿಂದ ಗೋಪಾಲ ಹರೇ ಮುಕುಂದ

೧೦ ಶ್ರೀರಾಮ ಜಯರಾಮ ಜೈ ಜೈರಾಮ

೧೧ ಸಕಲಾಂಗಗಳು ಸಾಯಿಸೇವೆಗಾಗಿ

೧೨ ಶ್ರೀಸಾಯ್ನಾಥ ತವಶರಣಂ

೧೩ ಸಾಯ್ ರಾಮ ಸಾಯಿ ರಾಮ ಜಾನಕೀಧವಾ

೧೪ ಹರೇರಾಮ ಹರೇರಾಮ ರಾಮರಾಮ ಹರೇಹರೇ

೧೫ ಶ್ರೀಗುರು ಸದ್ಗುರು ಜಯಗುರು ಲೋಕಗುರೂತ್ತಮ ಸಾಯ್

೧೬ ಹರನವೋ ಹರಿಹರನವೋ ಪರಾತ್ಪರನವೋ ಓಂಕಾರ ಸಾಯ್ನಾಥನಮೋ

೧೭ ಜಯ ಮಂಗಳಂ ಸಾಯ್ನಾಥಗೆ

೧೮ ಮಂಗಳಜ್ಞಾನರೂಪ ಸರ್ವ ಸೌಭಾಗ್ಯದಾಯಕನೇ

೧೯ ಸಾಯಿಲಾಲೀ ಶೇಷಸಾಯಿಲಾಲೀ

೨೦ ಸಾಯಿನಾಥ ಧ್ಯಾನಗೈವ ಭಕ್ತಸೇವೆಯ

೨೧ ಎನ್ನ ತಪ್ಪುಗಳನ್ನು ಮನ್ನಿಸೈ ಸಾಯ್ನಾಥ

೨೨ ಶ್ರೀ ರುಕ್ಮಿಣೀನಾಥ ಜನಕಜಾಸುಪ್ರೀತ ಗೌರೀಪತೀ

೨೩ ಸಾಕ್ಷರೀಶ ಸಾಯ್ನಾಥ

'ಹರಿಭಜನಕುಸುಮವಲ್ಲರಿ' ಪುಸ್ತಕ ಲಭ್ಯವಾದಾಗಲಷ್ಟೇ ಈ ಸಂಪುಟದಲ್ಲಿಲ್ಲದ ಪ್ರಕಟಿತ ಕೀರ್ತನೆಗಳು ಎಷ್ಟು ಎಂಬುದನ್ನು ಖಚಿತಪಡಿಸಲು ಸಾಧ್ಯ. ಆಸೂರಿಯವರ ಉಳಿದ ಮೂವರು ಮಕ್ಕಳಾದ ಸ್ವರ್ಣಲಕ್ಷ್ಮೀ, ಗೋಪಾಲಯ್ಯಂಗಾರ್ ಮತ್ತು ನರಸಿಂಹಾಚಾರ್ ಅವರುಗಳಲ್ಲಿ ವೇದವಲ್ಲಿಯವರಲ್ಲಿ ಇರುವ ಮಾಹಿತಿಗಿಂತ ಹೆಚ್ಚಿನ ಮಾಹಿತಿ ಲಭ್ಯವಿಲ್ಲದಿರುವುದರಿಂದ ವೇದವಲ್ಲಿಯವರ ಬಳಿ ದೊರೆತ ಮಾಹಿತಿಗಳನ್ನೇ ಇಲ್ಲಿ ಮುಖ್ಯವಾಗಿ ಆಧರಿಸಲಾಗಿದೆ.

ಇವರ ಕೀರ್ತನೆಗಳಲ್ಲಿ ಎಲ್ಲ ರೀತಿಯ ವೈವಿಧ್ಯತೆಗಳೂ ಇವೆ. ವಸ್ತು ವೈವಿಧ್ಯದಲ್ಲಿ ಸಾಮಾನ್ಯ ಕೀರ್ತನೆಗಳಲ್ಲಿ ಕಂಡು ಬರುವ ಎಲ್ಲ ಲಕ್ಷಣಗಳೂ ಒಳಗೊಳ್ಳುತ್ತವೆ. ರಚನಾ ವೈವಿಧ್ಯತೆಯಲ್ಲಿಯೂ ಪ್ರಚಲಿತವಿರುವ ಎಲ್ಲ ರಚನಾ ವಿಧಾನಗಳನ್ನೂ ಗುರುತಿಸಬಹುದು. ಶಾಸ್ತ್ರನಿಷ್ಠ ಕೃತಿಯಾಗಲಿ, ಸಾಮಾನ್ಯ ಸ್ವರೂಪದ ಹಾಡುಗಳಾಗಲಿ, ಜಾನಪದ ಶೈಲಿಯಾಗಲಿ ಎಲ್ಲ ರೀತಿಯಲ್ಲೂ ರಚಿಸಿದ್ದಾರೆ. ಕ್ಲಿಷ್ಟವಾದ ತತ್ವವನ್ನಾಗಲಿ ಸರಳವಾದ ಬದುಕನ್ನಾಗಲಿ ಎರಡನ್ನೂ ಅತ್ಯಂತ ಸುಲಭವಾದ ಶೈಲಿಯಲ್ಲಿ ನಿರೂಪಿಸುವ ಜಾಣ್ಮೆ ಇವರಿಗಿದೆ. ಕನ್ನಡ ಭಾಷೆ ಅತ್ಯಂತ ಮಧುರವಾಗಿ ಬಳಕೆಯಾಗಿರುವಂತೆಯೇ ಸಂಸ್ಕೃತವೂ ಬಳಕೆಯಾಗಿದೆ. ಇಡಿಯಾಗಿ ಸಂಸ್ಕೃತ ಕೃತಿಯೇ ಎನ್ನಬಹುದಾದ ಸಂಸ್ಕೃತ ಭೂಯಿಷ್ಠ ಕೃತಿಗಳೂ ಸಾಕಷ್ಟಿವೆ. ಎರಡರ ಸಂಯೋಜನೆಯೂ ಹಿತ-ಮಿತವಾಗಿ ಬಂದಿದೆ. ಕೀರ್ತನೆಯ ಲಕ್ಷಣಗಳಾದ ರಾಗ-ತಾಳ-ಪಲ್ಲವಿ-ಅನುಪಲ್ಲವಿ-ನುಡಿಗಳನ್ನು ಲೋಪವಿಲ್ಲದೆ ಬಳಸಿದ್ದಾರೆ. ಸಂಸ್ಕೃತಮಯ ಕೃತಿಗಳನ್ನು ಹೊರತು ಪಡಿಸಿದರೆ ಉಳಿದೆಲ್ಲ ಕಡೆಯೂ ಸಾಮಾನ್ಯವಾಗಿ ಪ್ರಾಸನಿಯಮವನ್ನು ದೋಷ ರಹಿತವಾಗಿ ಅನುಸರಿಸಿರುವುದು ಕಂಡುಬರುತ್ತದೆ. ಒಟ್ಟಾರೆ ಆಸೂರಿಯವರ ಕೀರ್ತನೆಗಳು ಕೀರ್ತನ ಭಂಡಾರಕ್ಕೆ ಬೆಲೆಬಾಳುವ ಗಟ್ಟಿಗಳಾಗಿವೆ.

ಆಸೂರಿಯವರು ತಮ್ಮ ಮನೆದೈವ ಮಾವಿನಕೆರೆ ರಂಗನಾಥನ ಅಂಕಿತದಲ್ಲಿ 'ಮಾಂಗಿರೀಶ', ಮಾಂಗಿರಿರಂಗ' ಎಂಬ ಮುದ್ರಿಕೆಯನ್ನು ಸ್ವೀಕರಿಸಿ ಕೀರ್ತನೆಗಳನ್ನು ರಚಿಸಿದ್ದಾರೆ. ಇವರ ಎಲ್ಲ ಕೃತಿಗಳಲ್ಲೂ ಈ 'ಮಾಂಗಿರಿ'ಯ ಮುದ್ರೆ ಇದ್ದೇ ಇರುತ್ತದೆ. ಆದರೂ ಕೆಲವು ಕೃತಿಗಳಲ್ಲಿ 'ರಾಮದಾಸ' ಅಂಕಿತವನ್ನು ಬಳಸಿದ್ದಾರೆ. 'ರಾಮದಾಸನುತ, 'ರಾಮದಾಸಾರ್ಚಿತ', 'ರಾಮದಾಸಪ್ರೀತ' ಇತ್ಯಾದಿ ಮುದ್ರಿಕೆಗಳನ್ನು ಬಳಸಿದ್ದು ಇದೂ ಸಹ ಆಸೂರಿಯವರದ್ದೇ, ಅವರ ಹೆಸರಿನ ಅಂಕಿತವೇ ಎಂದು ಅವರ ಮಗಳು ಸ್ಪಷ್ಟಪಡಿಸಿರುವುದರಿಂದ ಈ ಅಂಕಿತವನ್ನು ಆಸೂರಿ ರಾಮಸ್ವಾಮಿ ಅಯ್ಯಂಗಾರ್ಯರದ್ದೆಂದು ತೀರ್ಮಾನಿಸಲಾಗಿದೆ. ಇದಕ್ಕೆ ಬೆಂಬಲವಾಗಿ ಹಲವು ಕೃತಿಗಳಲ್ಲಿ ಈ ಎರಡೂ ಮುದ್ರಿಕೆಗಳೂ ಬಳಕೆಯಾಗಿರು ವುದು ಕಂಡುಬರುವುದರಿಂದ ಇದರ ಬಗ್ಗೆ ಅನುಮಾನಕ್ಕೆ ಅವಕಾಶವಿಲ್ಲ. ಆದ್ದರಿಂದ 'ಮಾಂಗಿರೀಶ' ಮತ್ತು 'ರಾಮದಾಸ' ಅಂಕಿತವಿರುವ ಎಲ್ಲ ಕೀರ್ತನೆಗಳೂ ಆಸೂರಿರಾಮಸ್ವಾಮಿ ಅಯ್ಯಂಗಾರ್ಯರ ಕೃತಿಗಳು ಎಂದು ಸ್ವೀಕರಿಸಲಾಗಿದೆ.

(ಈ) ಕೀರ್ತನೆಗಳ ಪರಿಚಯ

ಆಸೂರಿ ರಾಮಸ್ವಾಮಿ ಅಯ್ಯಂಗಾರ್ಯರ ಕೀರ್ತನೆಗಳು ಕನ್ನಡದ ದಾಸಸಾಹಿತ್ಯದಲ್ಲಿಯೇ ಪ್ರಮುಖ ಕೀರ್ತನೆಗಳ ಸಾಲಿನಲ್ಲಿ ನಿಲ್ಲುವಂತಹವು. ಮುಖ್ಯ ಕೀರ್ತನಕಾರರ ಪಟ್ಟಿಯಲ್ಲಿ ಇವರ ಹೆಸರೂ ಬರುವಂತಹುದು. ಶ್ರೀವೈಷ್ಣವ ಕೀರ್ತನ ಸಾಹಿತ್ಯದಲ್ಲಿ ಈವರೆಗಿನ ಶ್ರೀವೈಷ್ಣವ ಕವಿಗಳು ಅಭಿವ್ಯಕ್ತಿಸಿರುವ ಶ್ರೀವೈಷ್ಣವ ತತ್ತ್ವವಾದ ಶರಣಾಗತಿ ತತ್ತ್ವದೊಂದಿಗೆ ವಿಶಿಷ್ಟಾದ್ವೈತದ ಇತರ ತತ್ವಗಳನ್ನು ಅತ್ಯಂತ ಸ್ಪಷ್ಟವಾಗಿ ಕೀರ್ತನೆಗಳ ಮೂಲಕ ದಾಖಲಿಸಿದ್ದಾರೆ. ಆತ್ಮನಿವೇದನೆ ಮತ್ತು ತತ್ತ್ವಪ್ರತಿಪಾದನೆಯ ಕೀರ್ತನೆಗಳು ಕನ್ನಡ ಸಾಹಿತ್ಯದಲ್ಲೇ ಒಂದು ಹೊಸ ಚಿಂತನೆಯನ್ನು ಬೆಳೆಸುವ ಸ್ಥಾನದಲ್ಲಿ ನಿಲ್ಲಬಲ್ಲವಾಗಿವೆ. ಲೋಕನೀತಿಯ ಕೀರ್ತನೆಗಳಲ್ಲಿ ಸಮಕಾಲೀನ ಸಮಾಜವನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸುವ, ಸಾಮಾಜಿಕ ಒಳಿತು ಕೆಡುಕುಗಳನ್ನು ದಾಖಲಿಸುವ, ಸಮಾಜದಲ್ಲಿರಬೇಕಾದ ಮೌಲ್ಯವನ್ನು ಸೂಚಿಸುವ ಮೂಲಕ ಸಮಕಾಲೀನ ಸ್ಪಂದನವನ್ನೂ ಹೊಂದಿವೆ. ಹರಿದಾಸ ಸಾಹಿತ್ಯದ

ಸಾಮಾನ್ಯ ಲಕ್ಷಣಗಳಿಗೂ ಅನ್ವಯವಾಗುವ ಇವರ ಕೃತಿಗಳು ವಿಶಿಷ್ಟಾದ್ವೈತ ತತ್ತ್ವದ ವಿಶಿಷ್ಟ ಲಕ್ಷಣಗಳಾದ ಶ್ರೀಹರಿಏಕನಿಷ್ಠೆ, ಶರಣಾಗತಿ ತತ್ತ್ವ, ಆಳ್ವಾರ್-ಆಚಾರ್ಯ ಸ್ತುತಿ ಮುಂತಾದವುಗಳನ್ನೂ ಮೈಗೂಡಿಸಿಕೊಂಡಿವೆಯಲ್ಲದೆ ಇತರ ಶ್ರೀವೈಷ್ಣವ ಕೀರ್ತನಕಾರರಲ್ಲಿ ಅಷ್ಟಾಗಿ ಕಾಣಸಿಗದ ಸರ್ವದೈವಸ್ತುತಿ ಇವರಲ್ಲಿ ವಿಶೇಷವಾದ ಅಂಶವಾಗಿದೆ. ಸರಳವಾದ, ಸುಂದರವಾದ ಭಾಷಾಬಳಕೆ, ಅನೇಕ ಪುರಾಣಪ್ರತಿಮೆಗಳ ನಿದರ್ಶನ, ವಿಶಿಷ್ಟ ಜೀವನಾದರ್ಶದ ಅಭಿವ್ಯಕ್ತಿ, ಸರ್ವ ಸಮರ್ಪಣ ಭಾವ, ಭಕ್ತಿಪೂರ್ಣವಾದ ದೈವಸ್ತುತಿ, ಬದುಕಿನ ನಿಜವಾದ ತತ್ತ್ವ ಪ್ರತಿಪಾದನೆ ಹೀಗೆ ಹಲವು ಗುಣಗಳಿಂದ ಆಸೂರಿಯವರ ಕೀರ್ತನೆಗಳು ವಿಶೇಷ ಸ್ಥಾನದಲ್ಲಿ ನಿಲ್ಲಬಲ್ಲವಾಗಿದ್ದು, ಕನ್ನಡ ಸಾಹಿತ್ಯಕ್ಕೇ ಒಂದು ಮುಖ್ಯ ಕೊಡುಗೆಯಾಗಿವೆ. ಶಾಸ್ತ್ರನಿಷ್ಠೆ ತತ್ತ್ವಪ್ರತಿಪಾದನೆ ಮಾಡುವುದರಿಂದ ಹಿಡಿದು ಗ್ರಾಮೀಣ ಶೈಲಿಯಲ್ಲಿ ಜಾನಪದ ಧಾಟಿಯಲ್ಲಿ ರಸವತ್ತಾಗಿ ಮನಮುಟ್ಟುವಂತೆ ತಿಳಿಸುವ ಸರಳ ಶೈಲಿಯವರೆಗೆ ಇವರ ಕೃತಿಗಳು ಎಲ್ಲ ಮನೋಭಾವದವರಿಗೂ ಪ್ರಿಯವಾಗುವಂತೆ ಆಪ್ಯಾಯಮಾನವಾಗಿವೆ.

ಆಸೂರಿಯವರ ಕೀರ್ತನೆಗಳು ವೈವಿಧ್ಯಮಯವಾಗಿರುವುದರಿಂದ ಅನುಕೂಲಕ್ಕಾಗಿ ಈ ಸಂಪುಟದಲ್ಲಿ ಇವರ ಕಿರ್ತನೆಗಳನ್ನು ಹತ್ತು ವಿಭಾಗಗಳನ್ನಾಗಿ ಮಾಡಿಕೊಳ್ಳಲಾಗಿದೆ. ೧) ಶ್ರೀಹರಿಸ್ತುತಿ ೨) ಲಕ್ಷ್ಮೀಸ್ತುತಿ ೩) ಆಳ್ವಾರಾಚಾರ್ಯಸ್ತುತಿ ೪) ಆತ್ಮನಿವೇದನೆ ೫) ದೈವಸ್ತುತಿ (೧) ನಿಂದಾಸ್ತುತಿ (೨) ಕೃಷ್ಣಬಾಲಲೀಲೆ ೬)ಲೋಕನೀತಿ ೭) ತಾತ್ವಿಕ-ದಾರ್ಶನಿಕ ಕೃತಿಗಳು ೮) ಕ್ಷೇತ್ರವರ್ಣನೆ ೯) ಸಂಪ್ರದಾಯದ ಹಾಡುಗಳು ೧೦) ವಿಶೇಷ ಸಂದರ್ಭದ ಹಾಡುಗಳು ಈ ಒಂದೊಂದು ವಿಭಾಗದಲ್ಲೂ ಅನೇಕ ಉತ್ತಮ ಕೃತಿಗಳಿದ್ದು ಅವುಗಳ ಗುಣ ವಿಶೇಷಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಸೂಚಿಸಲಾಗಿದೆ.

೧. ದೈವಸ್ತುತಿ-ಶ್ರೀಹರಿಏಕನಿಷ್ಠೆ : ದೈವಸ್ತುತಿ ಎಂದರೆ ಶ್ರೀವೈಷ್ಣವ ಕೀರ್ತನ ಸಾಹಿತ್ಯದಲ್ಲಿ ಶ್ರೀಹರಿನಿಷ್ಠೆಯೊಂದೇ. ಶ್ರೀಮಹಾವಿಷ್ಣು ಮತ್ತು ಅವನ ಅವತಾರಗಳು, ದ್ವಾದಶನಾಮಗಳು ಹಾಗೂ ಅವನ ಪರಿವಾರದ ದೇವ-ದೇವತೆಗಳ ಸ್ತುತಿಯಷ್ಟೇ.

ಅಪವಾದಕ್ಕೂ ಅನ್ಯದೈವಸ್ತುತಿ ಇರುವುದಿಲ್ಲ. ಇದು ವಿಶಿಷ್ಟಾದ್ವೈತದ ಮೂಲತತ್ತ್ವದಲ್ಲೇ ಅಡಗಿರುವ ಅಂಶವಾಗಿದೆ. ಈ ಮತ ಶಿವನನ್ನೂ ಶ್ರೀಹರಿಯ ಅಧೀನ ದೇವತೆ ಎಂದು ಪರಿಗಣಿಸಿರುವುದರಿಂದ ಅನ್ಯದೈವ ಸ್ತುತಿಯಿಂದ ಮೋಕ್ಷ ಪ್ರಾಪ್ತಿಯಾಗುವುದಿಲ್ಲವೆಂಬ ಸಂಪ್ರದಾಯವಿರುವುದರಿಂದ ಶ್ರೀವೈಷ್ಣವ ತತ್ತ್ವಕ್ಕೆ ಅನುಗುಣವಾಗಿ ಅನ್ಯದೈವಸ್ತುತಿ ಕಂಡು ಬರುವುದಿಲ್ಲ. ಶ್ರೀಹರಿಯೊಬ್ಬನೇ ಇಲ್ಲಿ ದೈವವಾಗಿರುವುದರಿಂದ ಸಹಜವಾಗಿ ದೇವತಾ ತಾರತಮ್ಯ ಇಲ್ಲ. ಆದರೆ ಶ್ರೀಹರಿಯಲ್ಲಿಯೇ ರೂಪಭೇದಗಳನ್ನು ಕಲ್ಪಿಸಿ ಅದನ್ನು ಸಾಮಾನ್ಯವಾಗಿ ಮತೀಯ ಗ್ರಂಥಗಳು ಹೀಗೆ ಸ್ಥಾನೀಕರಣ ಮಾಡುತ್ತವೆ. (೧) ಶ್ರೀಮಹಾವಿಷ್ಣು. ಇದರಲ್ಲಿ ಕ್ರಮವಾಗಿ ವಿಷ್ಣುವಿನ 'ಪರ' ರೂಪವಾದ ವಾಸುದೇವ; 'ವ್ಯೂಹ'ರೂಪಗಳಾದ ಸಂಕರ್ಷಣ–ಪ್ರದ್ಯುಮ್ನ–ಅನಿರುದ್ಧ; 'ದ್ವಾದಶ ನಾಮ'ಗಳಾದ ಕೇಶವ–ನಾರಾಯಣ–ಮಾಧವ–ಗೋವಿಂದ–ವಿಷ್ಣು–ಮಧುಸೂದನ–ತ್ರಿವಿಕ್ರಮ–ವಾಮನ–ಶ್ರೀಧರ–ಹೃಷೀಕೇಶ–ಪದ್ಮನಾಭ–ದಾಮೋದರ; 'ವಿಭವ' ರೂಪಗಳಾದ ದಶಾವತಾರಗಳು ಮತ್ತು ಇತರ ಅವತಾರಗಳು ಮತ್ತು ಈ ರೂಪಗಳಲ್ಲಿಲ್ಲದ ಇತರ 'ಅರ್ಚಾ'ರೂಪಗಳು (ರಂಗನಾಥ, ವೆಂಕಟೇಶ್ವರ, ಚನ್ನಕೇಶವ ಇತ್ಯಾದಿ ನಂತರ ಕ್ರಮವಾಗಿ ರೂಪಗಳನ್ನು ಕಲ್ಪಿಸಲಾಗಿದೆ. (೨) ಶ್ರೀಮಹಾಲಕ್ಷ್ಮೀ (೩) ವಿಷ್ವಕ್ಸೇನ (೪) ಶ್ರೀಹರಿಯ ಸಾನ್ನಿಧ್ಯದಲ್ಲಿರುವ ವಾಹಕರೂ, ಭಕ್ತರೂ ಆದ ಶೇಷ, ಗರುಡ, ಆಂಜನೇಯ (೫) ಆಳ್ವಾರರು–ಆಚಾರ್ಯರು. ಹೀಗೆ ಸರ್ವಂ ಹರಿಮಯವಾಗಿ ಈ ಸ್ಥಾನೀಕರಣವಿದೆ.

ಆ ಸೂರಿಯವರ ಕೃತಿಗಳಲ್ಲಿ ಸು ೧೬೧ ಹರಿಸ್ತುತಿಗಳಿದ್ದು ಅವನ್ನು ಈ ಪಾರಂಪರಿಕ ಕ್ರಮದಲ್ಲೇ ಅಳವಡಿಸಲಾಗಿದೆ. ಇವುಗಳಲ್ಲಿ ಶ್ರೀಹರಿ, ರಾಮ, ಕೃಷ್ಣ, ರಂಗ ಇವರಿಗೆ ಅತ್ಯಂತ ಪ್ರಿಯ ನಾಮಗಳು. ರಾಮನನ್ನು ಕುರಿತು ೪೩ ಹಾಡುಗಳನ್ನೂ ಕೃಷ್ಣನನ್ನು ಕುರಿತು ೪೦ ಹಾಡುಗಳನ್ನೂ ರಚಿಸಿದ್ದಾರೆ. (ಕೃಷ್ಣನ ಬಾಲಲೀಲೆಗಳು ಬೇರೆ ಪ್ರತ್ಯೇಕವಾಗಿವೆ) ಇವುಗಳಲ್ಲಿ ಸಂಪೂರ್ಣವಾಗಿ ಸಂಸ್ಕೃತದಲ್ಲೇ ಕೃತಿರಚನೆ ಮಾಡಿರುವ ಹಾಡುಗಳೂ ಸಾಕಷ್ಟಿವೆ.

ಗೋವಿಂದಂ ಭಜರೇ ಮಾನಸ ಪ

ದೇವದೇವೋತ್ತಮ ಭಾವುಕ ಫಲದಂ ಅ.ಪ

ಕರುಣಾಸಾಗರಂ ಶರಧಿಗಂಭೀರಂ
ಪರಮೋದ್ಧಾರಂ ಪುಣ್ಯಶರೀರಂ
ಧರಣಿಪಬಾಲಂ ಮುರಳೀಲೋಲಂ
ಸುರರಿಪುಕಾಲಂ ಗೋಕುಲಬಾಲಂ ೧

ಹಾಗೆಯೇ ಸರಳಸುಂದರ ಕನ್ನಡ ಕೃತಿಗಳೂ ಇವೆ.

ನೆನೆದವಗೆ ಹರಿಯುಂಟು ನೆನೆಯದವಗೆ ಮದವೆಂಟು ಪ

ನೆನೆವ ಮನವಿರ ಉಂಟು ಮುನಿಸುತನ ನಂಟು ಅ.ಪ

ನೆನೆವ ಧ್ರುವನೂಗೆದ್ದ ಶುಕಮಹಾಮುನಿಗೆದ್ದ
ನೆನೆವ ಹನಮನುಗೆದ್ದ ಶರಭಂಗ ಮುನಿಗೆದ್ದ
ನೆನೆವ ಗಜಸರೆಗೆದ್ದ ವಾಲಿತನಯನು ಗೆದ್ದ
ಕನಕದಾಸನು ಗೆದ್ದ ಇದು ಸರ್ವಸಿದ್ಧ ೧

ಈ ರೀತಿ ಕೃತಿಗಳಲ್ಲಿ ಸಾಲುಸಾಲಾಗಿ ಪುರಾಣ ಪ್ರತಿಮೆಗಳನ್ನು ತರುವ ಮೂಲಕ ಶ್ರೀಹರಿಯ ಸ್ತುತಿಯನ್ನು ಕಳೆಕಟ್ಟಿಸುವ ಕೀರ್ತನೆಗಳೇ ಅಧಿಕವಾಗಿವೆ. ಅತ್ಯಂತ ಭಾವಪೂರ್ಣವಾಗಿ ಆರ್ದ್ರಹೃದಯದಿಂದ ಸ್ವಾನುಭವ ದರ್ಶನದಂತೆ ಹರಿದು ಬಂದಿರುವ ಶ್ರೀಹರಿಯ ವಿವಿಧ ರೂಪಗಳಲ್ಲಿ ಕಣ್ಣಿಗೆ ಕಟ್ಟುವಂತಹ ವರ್ಣನಾ ಕೌಶಲ ಈ ಕೃತಿಗಳಲ್ಲಿವೆ. ದಾಸರಿಗೆ ಹಲವು ಬಾರಿ ಒದಗಿ ಬಂದಿರುವ ದಿವ್ಯದರ್ಶನಗಳೂ ಇಲ್ಲಿವೆ. ಶ್ರೀವೈಷ್ಣವ ತತ್ತ್ವ ಪ್ರತಿಪಾದಕರಾದ ಆಂಡಾಳ್ ಮತ್ತು ರಾಮಾನುಜಾಚಾರ್ಯರ ಸ್ತುತಿಗಳೂ ಇಲ್ಲಿವೆ.

೨. ಸರ್ವದೈವ ಸ್ತುತಿ : ಈ ಸರ್ವದೈವ ಸ್ತುತಿ ಶ್ರೀವೈಷ್ಣವ ತತ್ತ್ವದಲ್ಲಿ ಕಂಡು ಬರುವುದಿಲ್ಲವಾದರೂ ಆಸೂರಿಯವರು ಅದಕ್ಕೆ ಅಪವಾದವಾಗಿದ್ದಾರೆ.

ಹರ ಮತ್ತು ಅವನ ಪರಿವಾರದೇವತೆಗಳನ್ನೂ ಈಚಿನ ರಾಘವೇಂದ್ರ ಹಾಗೂ ಸಾಯಿಬಾಬರನ್ನೂ ಸ್ತುತಿಸುವ ಮೂಲಕ ಧರ್ಮ ಸಮನ್ವಯವನ್ನು ಸಾಧಿಸಿದ್ದಾರೆ. ಇದು ಆಸೂರಿಯವರಲ್ಲಷ್ಟೇ ಅಲ್ಲದೆ ಶ್ರೀವೈಷ್ಣವ ಕೀರ್ತನ ಪರಂಪರೆಯಲ್ಲೇ ವಿಶೇಷ ಅಂಶವಾಗಿದೆ. ಇದೇ ರೀತಿ ಬೇಲೂರು ವೈಕುಂಠದಾಸರ ಹೆಸರಿನಲ್ಲಿ ಶನೇಶ್ವರ ದಂಡಕವೂ, ಚನ್ನಪಟ್ಟಣದ ಅಹೋಬಲದಾಸರ ಹೆಸರಿನಲ್ಲಿ ಶೃಂಗೇರಿ ಜಗದ್ಗುರುಗಳ ಸ್ತುತಿಯೂ ಶಾಮಶರ್ಮರ ಹೆಸರಿನಲ್ಲಿ ಒಂದು ಶಿವಸ್ತುತಿಯೂ ಕಂಡು ಬರುತ್ತದೆಯಾದರೂ ಆಸೂರಿಯವರ ಸ್ತುತಿಗಳು ಅವುಗಳಿಗಿಂತ ವೈವಿಧ್ಯವಾಗಿಯೂ ವಿಶಿಷ್ಟವಾಗಿಯೂ ನಿಲ್ಲುತ್ತವೆ. ಇವರು ರಾಘವೇಂದ್ರರನ್ನು ಕುರಿತು ೧೮ ಕೃತಿಗಳನ್ನೂ ಸಾಯಿಬಾಬಾರನ್ನು ಕುರಿತು ೩೦ ಕೃತಿಗಳನ್ನೂ ಒಳಗೊಂಡಂತೆ ಗಣೇಶ, ಶಿವ, ಹರಿಹರ, ಪಾರ್ವತಿ, ವಿಶಾಲಾಕ್ಷಿ, ಕಾತ್ಯಾಯಿನಿ, ಸುಬ್ರಹ್ಮಣ್ಯ ಇವರುಗಳನ್ನು ಕುರಿತು ಒಟ್ಟು ೪೫ ಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ. (ಈ ಸಂಪುಟದಲ್ಲಿ ಸಾಯಿನಾಥರ ಕೇವಲ ಎರಡು ಕೃತಿಗಳಿದ್ದರೂ ಸಾಯಿಬಾಬರನ್ನೇ ಸ್ತುತಿಸಿರುವ ಸುಮಾರು ಮುವತ್ತಕ್ಕೂ ಅಧಿಕವಾಗಿರುವ ಶ್ಲೋಕ, ಭಜನಾವಳಿ, ನಾಮಾವಳಿಗಳುಳ್ಳ ಪ್ರತ್ಯೇಕ ಪುಸ್ತಕವೇ ಇರುವುದನ್ನು ಇಲ್ಲಿ ಗಮನಿಸಬಹುದು). ಉಳಿದ ದೈವಸ್ತುತಿಗಳು ಕೇವಲ ಸ್ತುತಿರೂಪದಲ್ಲಿದ್ದರೆ ರಾಘವೇಂದ್ರ ಮತ್ತು ಸಾಯಿಬಾಬಾರ ಕೃತಿಗಳು ಸ್ತುತಿರೂಪದ ಜೊತೆಗೆ ಆತ್ಮನಿವೇದನೆಯ ರೂಪದಲ್ಲೂ ಇರುವುದನ್ನು ನೊಡಿದರೆ ಇವರುಗಳನ್ನೂ ದಾಸರು ಗುರುಸ್ಥಾನದಲ್ಲೂ ಗೌರವಿಸಿರುವರಲ್ಲದೆ ಶರಣಾಗತಿಯನ್ನೂ ಬಯಸಿರುವುದು ಕಂಡುಬರುತ್ತದೆ. ಈ ಮೂಲಕ ಶ್ರೀವೈಷ್ಣವ ತತ್ತ್ವದಲ್ಲೂ ಸರ್ವದೈವ ಪ್ರವೇಶಕ್ಕೆ ಮಾರ್ಗವನ್ನು ಹಾಕಿಕೊಟ್ಟಿರುವುದನ್ನು ಅಥವ ಶ್ರೀಹರಿನಿಷ್ಠೆಯ ಮಡಿವಂತಿಕೆ ಸಡಿಲಗೊಳ್ಳುತ್ತಿರುವ ಸಾಮಾಜಿಕ ಪರಿವರ್ತನೆಯನ್ನು ಇವರಲ್ಲಿ ಗುರುತಿಸಬಹುದು. ಹಾಗೆಯೇ ಇಂದಿನ ಸಮಾಜದಲ್ಲಿ ವ್ಯಕ್ತವಾಗುತ್ತಿರುವ ಭಿನ್ನ ದೈವಗಳು ಪ್ರಾಬಲ್ಯಗೊಳ್ಳುವ ಮತ್ತು ಜನಮನದಲ್ಲಿರುವ ಸರ್ವದೈವಾವಲಂಬನದ ಸಾಮಾಜಿಕ ವ್ಯವಸ್ಥೆಯನ್ನೂ ಆ ಮೂಲಕ ಧರ್ಮ ಸಮನ್ವಯವನ್ನೂ ಗುರುತಿಸಬಹುದು. ಹಿಂದೂಗಳಲ್ಲೇ

ಪ್ರತ್ಯೇಕತೆಯ ಅಲೆ ಬೀಸುತ್ತಿರುವ ಇಂದಿನ ಸಂದರ್ಭಕ್ಕೆ ಈ ಕೀರ್ತನೆಗಳು ಏಕತೆಯನ್ನು ಸಾರುವ ಸೂತ್ರಗಳೂ ಆಗಬಲ್ಲವು.

ಇದಕ್ಕೆ ಪೂರಕವಾಗಿ ಶಿವ-ಕೇಶವ ಸಮಾನತೆಯ ಕೃತಿಗಳೂ ಇಲ್ಲಿವೆ. ದಾಸರ ಆರಾಧ್ಯದೈವ ಮಾವಿನಕೆರೆ ರಂಗನಾಥನಲ್ಲಿರುವ ಸ್ಥಳೀಯ ಐತಿಹ್ಯ ದಾಸರಲ್ಲಿ ಇಂತಹ ಹಾಡುಗಳ ಬಾಹುಳ್ಯಕ್ಕೆ ಪ್ರೇರಕವಾಗಿಲ್ಲದಿಲ್ಲ. "ಗಂಗೆಯನು ಹೆತ್ತವನು ಗಂಗೆಯನು ಹೊತ್ತವನು ಒಬ್ಬನಣ್ಣ'

ನಾಟ್ಯಕಲಾವಿದ ಶಿವನೋ ಕೇಶವನೋ
ನಾಟ್ಯಕೆ ನಲಿವನು ಭವನೋ ಮಾಧವನೋ ೧೬೨

ಇಂತಹ ಕೃತಿಗಳಲ್ಲಿ ಹರಿ-ಹರರ ಏಕತೆ ಸಾಧಿಸಿದ್ದರೆ

ಜಲರುಹಮೋಹನ ವಿಶಾಲ ನೇತ್ರ ೧೬೬

ದಂತಹ ಕೃತಿಗಳಲ್ಲಿ ರಾಮ, ಕೃಷ್ಣ, ಶಿವ, ರಾಘವೇಂದ್ರ-ಮಾರುತಿ-ಸಾಯಿಬಾಬ ಹೀಗೆ ಎಲ್ಲ ದೈವವನ್ನೂ ಭಾವಪೂರ್ಣವಾಗಿ ಸ್ತುತಿಸುತ್ತಾರೆ. ಗಣೇಶನನ್ನು ಕುರಿತು ನಾಲ್ಕು ಸ್ತುತಿಗಳಿದ್ದು ಇವು ಶ್ರೀವೈಷ್ಣವ ಕಲ್ಪನೆಯಾದ ವಿಶ್ವಕ್ಸೇನ ನಾಗಿರದೆ ಗೌರೀಪುತ್ರನ ಸ್ತುತಿಯಾಗಿವೆ. ಇದರಲ್ಲಿ ಪಾಲಿಸು ಗಣನಾಯಕ ವಿನಾಯಕ' (೧೬೫) ದಂತಹ ಉತ್ತಮ ಕೃತಿಗಳೂ ಇವೆ.

ಈ ಸರ್ವದೈವಗಳನ್ನೂ ಆಸೂರಿಯವರು ಶ್ರೀಹರಿಗೆ ಪರ್ಯಾಯವಾಗಿ ಭಾವಿಸದೆ ಅಂದರೆ ಶ್ರೀಹರಿಯನ್ನು ಹೊರತು ಪಡಿಸಿದ ಭಿನ್ನದೈವವಾಗಿ ಪರಿಗಣಿಸದೆ ಶ್ರೀಹರಿಯ ಇನ್ನೊಂದು ರೂಪವಾಗಿ ಕಂಡಿರುವುದು ಇಲ್ಲಿ ಗಮನಕ್ಕೆ ಬರುವ ವಿಶೇಷವಾದ ಅಂಶ. ಶ್ರೀಹರಿಗಿರುವ ಹಲವು ನಾಮಗಳಲ್ಲಿ-ರೂಪಗಳಲ್ಲಿ ಇವೂ ಒಳಗೊಳ್ಳುವವೇ ವಿನಾ ಬೇರೆಯಾಗಿಲ್ಲ ಎಂಬುದು ಇವರ ದೃಷ್ಟಿಯಾಗಿದೆ. ಮಾಂಗಿರೀಶನಾಮ ಗಂಗಾಧರ', 'ಮಾಂಗಿರೀಶ ಸಹಚರ', 'ಸಾಂಬಶಿವಾ ಭಕ್ತಿಮಾರ್ಗದಿ ನಡೆಸೋ ಅಂಬುಜಾಕ್ಷನ ದಿವ್ಯನಾಮವ ನುಡಿಸೋ' (೧೭೭) ಮುಂತಾದವುಗಳನ್ನು

ಗಮನಿಸಿದಾಗ ದಾಸರು ಈ ಸರ್ವದೈವ ಸ್ತುತಿಯಲ್ಲಿಯೂ ಶ್ರೀಹರಿಏಕನಿಷ್ಠೆಯನ್ನೇ ಪಾಲಿಸಿದ್ದಾರೆ, ಎಂದೇ ಹೇಳಬೇಕಾಗುತ್ತದೆ. ಇದಕ್ಕೆ ಬೆಂಬಲವಾಗಿ ಅನೇಕ ಆತ್ಮನಿವೇದನೆಯ ಕೃತಿಗಳಲ್ಲಿ ಇದನ್ನು ಅಪರಾಧವೆಂಬಂತೆಯೂ ಪರಿಭಾವಿಸಲಾಗಿದೆ.

'ಅನ್ಯರ ಭಜಿಸೆನು ಅನ್ಯರ ನುತಿಸೆನು'
'ಭಿನ್ನಮತವ ಪೇಳ್ವುದಿದು ನನ್ನಮಟ್ಟಿಗೊದಗದು'
'ಸನುಮತವೆಂಬುದಿಲ್ಲ'
'ಹರಿಯೆ ನಿನ್ನ ಭಜನೆ ಎಂಬುದನ್ನು ಮರೆತು ಮೆರೆದೆನೆ'

ಮುಂತಾದ ಕೃತಿಗಳಲ್ಲಿ ಶರಣಾಗತಿಗಾಗಿ ಹರಿಯನ್ನೇ ಪರಿತಪಿಸಿರುವುದನ್ನು ನೋಡಿದರೆ ದಾಸರು ಶ್ರೀವೈಷ್ಣವ ತತ್ವವಾದ ಶ್ರೀಹರಿಏಕನಿಷ್ಠೆಗೆ ಹೊರತಾಗಿಲ್ಲ ಎಂದೇ ಹೇಳಬೇಕಾಗುತ್ತದೆ.

೩. **ಆತ್ಮನಿವೇದನೆ ಅಥವ ಶರಣಾಗತಿಧರ್ಮ:** ಆತ್ಮನಿವೇದನೆಯ ೮೦ ಕೃತಿಗಳನ್ನು ಆಸೂರಿಯವರು ರಚಿಸಿದ್ದಾರೆ. ಶ್ರೀವೈಷ್ಣವ ಕೀರ್ತನಕಾರರಲ್ಲಿ ಆತ್ಮನಿವೇದನೆಯೆಲ್ಲ ಶರಣಾಗತಿತತ್ವವನ್ನೂ ಪ್ರತಿಪಾದಿಸುವ ಕೀರ್ತನೆಗಳೇ ಆಗಿರುತ್ತವೆ. ಏಕೆಂದರೆ ಶರಣಾಗತಿ ಎಂಬುದು ಭಕ್ತನು ಭಗವಂತನಲ್ಲಿ ಸಂಪೂರ್ಣವಾಗಿ ತನ್ನನ್ನು ಒಪ್ಪಿಸಿಕೊಳ್ಳುವ ಸ್ಥಿತಿಯಾಗಿರುವುದರಿಂದ ತನ್ನೆಲ್ಲವನ್ನೂ ಭಗವಂತನಿಗೇ ಸಮರ್ಪಿಸುವುದೇ ಆತ್ಮನಿವೇದನೆಯ ಮುಖ್ಯ ಅಭಿವ್ಯಕ್ತಿ ಯಾಗಿರುತ್ತದೆ. ಮೋಕ್ಷಕ್ಕಾಗಿ ಹಾತೊರೆಯುವುದು, ಕಷ್ಟನಷ್ಟಗಳಿಂದ, ಚಂಚಲ ಮನಸ್ಸಿನಿಂದ, ಲೌಕಿಕ ಆಸಕ್ತಿಗಳಿಂದ ಬಿಡುಗಡೆಗಾಗಿ ಪ್ರಾರ್ಥಿಸುವುದು, ಭಗವದ್‌ಭಕ್ತರ ನಿದರ್ಶನಗಳನ್ನು ಕೊಟ್ಟು ತನ್ನನ್ನೂ ಕರೆದುಕೊಳ್ಳಲು ಆಶಿಸುವುದು ಇದೇ ಆತ್ಮನಿವೇದನೆಯ ಕೀರ್ತನೆಗಳ ವಸ್ತು. ಇದಕ್ಕೆ ಹೊರತಾಗಿ ಇತರರ ದ್ವೈತ, ಅದ್ವೈತ ಕೀರ್ತನೆಗಳಲ್ಲಿ ಕಂಡುಬರುವ ಆತ್ಮಸಂತೋಷ, ಆತ್ಮತೃಪ್ತಿ, ಬದುಕನ್ನು ಹಸನುಗೊಳಿಸಿಕೊಳ್ಳುವ ಹಂಬಲ, ಸುಖಾಪೇಕ್ಷೆ ಇತ್ಯಾದಿ ಲೌಕಿಕ ಆಸಕ್ತಿಗಳು ಇವರಲ್ಲಿ ಕಂಡುಬರುವುದಿಲ್ಲ. ಏಕೆಂದರೆ ಇವರಿಗೆ ಆತ್ಮಬೇರೆ ದೈವಬೇರೆಯಲ್ಲ. ದೈವದಲ್ಲೇ ಆತ್ಮ ಲೀನವಾಗಿರುವಾಗ ಆತ್ಮದ ಪ್ರತ್ಯೇಕ ಅಸ್ತಿತ್ವದ ಕಲ್ಪನೆ ಬರುವುದಿಲ್ಲ. ಹೀಗಾಗಿ ಹರಿಯನ್ನು ಓಲೈಸಿಕೊಂಡು

ತಮ್ಮ ಪಾಪಗಳಿಗೆ ಪ್ರಾಯಶ್ಚಿತ್ತವಾಗಿ ಶರಣಾಗುವುದು ಪುನರ್ಜನ್ಮವಿಲ್ಲದ ಮೋಕ್ಷಕ್ಕಾಗಿ ಪರಿಪರಿಯಾಗಿ ನಿವೇದಿಸಿಕೊಳ್ಳುವುದೇ ಇಲ್ಲಿ ಮುಖ್ಯವಾಗಿರುತ್ತದೆ. ಇದಕ್ಕಾಗಿ ಹಲವು ಭಾವಗಳಲ್ಲಿ ಈ ಆತ್ಮನಿವೇದನೆಯನ್ನು ಮಾಡಿಕೊಂಡಿರುವುದನ್ನು ಆಸೂರಿಯವರಲ್ಲೂ ಕಾಣುತ್ತೇವೆ.

'ವೇದ ಪುರಾಣ ಓದಿ ತಿಳಿಯಲಿಲ್ಲ
ಸಾಧು ಸಂತರ ಸೇವೆ ಸಾಧಿಸಲಿಲ್ಲ
ಮೇದಿನಿದೇವಿಗೆ ಭಾರನಾನಾದೆನಲ್ಲ
ಆದಿಮೂರುತಿ ನಿನ್ನಾರಾಧನೆ ಮಾಡಲಿಲ್ಲ' (೨೦೩)

'ಹಾಡಲು ಅರಿಯೆ ಕೊಂಡಾಡಲು ಅರಿಯೆ
ನೋಡುವೆಯೋ ನದಿಗೆ ದೂಡುವೆಯೋ' (೨೩೫)

'ಸ್ನಾನ ಸಂಧ್ಯೆಜಪ ಧ್ಯಾನ ಪೂಜೆಧೂಪದೀಪ
ದಾನ ಧರ್ಮ ನೇಮವೇನನರಿಯೆ ವಿಶ್ವರೂಪ (೨೪೨)

ಮುಂತಾಗಿ ಏನೂ ಅರಿಯದ ಅಜ್ಞ, ಪಾಮರ ಎಂಬ ಮುಗ್ಧ ಭಾವದಿಂದ ಹರಿಯನ್ನೊಲಿಸಿಕೊಳ್ಳುವುದು ಒಂದು ಪರಿಯಾದರೆ

'ಎಷ್ಟು ಪರೀಕ್ಷಿಸಿ ನೋಡುವೆಯೋ
ಹಣವಿರುವನಕ ಕುಣಿಕುಣಿದು ಮೆರೆದೆ
ಋಣವ ಮಾಡಿ ಎನ್ನ ಬಣಗು ಹೊಟ್ಟೆಯ ಹೊರೆದೆ
ಹೆಣ್ಣು ಹೊನ್ನು ಮಣ್ಣು ಕಣ್ಣಿಗಿಂಪಾಗಲು
ಬೆಣ್ಣೆಯಂತಿದ್ದುದು ಸುಣ್ಣವಾಯಿತೊ ದೇವ (೨೪೨)

ಮನವು ಸ್ಥಿರವಾಗಿಲ್ಲ ಧನದಾಸೆ ಬಿಡಲಿಲ್ಲ' (೨೭೧)
'ಪರರ ತಾಂಬೂಲಕಾಗಿ ಎನ್ನಕರವ ನೀಡಿದೆ'

ಎಂದು ಪರಿಪರಿಯಾಗಿ ಅಪರಾಧ ಕ್ಷಮಾಪಣೆ ಮಾಡಿಕೊಳ್ಳುವ ಹಿಂದಿನ ಲೌಕಿಕ ಬಾಳಿನ ತಪ್ಪುಗಳನ್ನು ಹೀಗಳೆಯುತ್ತ ಹರಿದರುಶನಕ್ಕಾಗಿ ಹಾತೊರೆಯುವುದು ಇನ್ನೊಂದು ಪರಿ.

ಸಖೀಭಾವದಿಂದ ಸಖ್ಯಭಾವದಿಂದ ಸತಿ–ಪತಿಭಾವದಿಂದಲೂ ದೇವರನ್ನು ಒಲಿಸಿಕೊಳ್ಳುವ ಕೀರ್ತನೆಗಳು ಆಸೂರಿಯವರಲ್ಲಿವೆ. ದೈವಧ್ಯಾನದಲ್ಲೆ ತನ್ಮಯರಾಗಿ ಅನುಭಾವ ಪಡೆದಿದ್ದ ದಾಸರು ತಾವು ಕಂಡ ದೈವದರ್ಶನದ ದಿವ್ಯಾನುಭವಗಳನ್ನು ಹಿಡಿದಿಟ್ಟಿದ್ದಾರೆ. ಕರುಣಾಪೂರಿತರಾಗಿ ದೇವರ ದಿವ್ಯಲೀಲಾವಿಲಾಸಗಳ ವರ್ಣಕರಾಗಿ ಹೀಗೆ ಹತ್ತು ಹಲವು ಭಾವಗಳಿಂದ ದೈವಕ್ಕಾಗಿ ಹಂಬಲಿಸುವಂತಹ ಪಕ್ವತೆಯನ್ನು ಶರಣಾಗತಿಯ ತಪಸ್ಸನ್ನು ದಾಸರು ಸಾಧಿಸಿದ್ದಾರೆ. ದೇವರಿಂದ ಇವರು ಬಯಸುವುದು ಒಂದೇ.

> ಬೆಳೆಬೆಳೆದು ಮನದಾಸೆ ಕಳೆದೆನಯ್ಯ
> ಸುಳಿದಿರ್ಪುದೊಂದಾಸೆ ಅದಪೇಳ್ವೆನಯ್ಯ
> ಅದು ನಿನ್ನ ಬಳಿಸಾರ್ದುನಿಲ್ವಪರಿಯಾಸೆ
> ಅದು ನಿನ್ನ ನಾಮಗಳ ಪಾಡಿನುಡಿವಾಸೆ (೨೬೭)

> 'ಸುರೇಶ ಪದವಿಯ ಬೇಡುವುದಿಲ್ಲ
> ನರೇಶ ಭಾಗ್ಯ ಕೇಳುವುದಿಲ್ಲ
> ಗುರೂಪದೇಶ ಮರೆಯುವುದಿಲ್ಲ
> ಪರೇಶ ಸ್ಮರಣೆ ಬಿಡುವುದಿಲ್ಲ' (೨೮೮)

ಇದೇ ಎಲ್ಲ ಶ್ರೀವೈಷ್ಣವ ಹರಿದಾಸರ ಆತ್ಮನಿವೇದನೆಯ ಗುರಿ. ದೈವನಾಮ ಸ್ಮರಣೆ, ದೈವದರ್ಶನ, ದೈವಸಾನ್ನಿಧ್ಯ. ಫಲಾಪೇಕ್ಷೆಯಿಲ್ಲದ ಈ ಕರ್ಮಾನುಷ್ಠಾನವೇ ಶರಣಾಗತಿತತ್ವದ ಮೂಲ ಉದ್ದೇಶ. ಆದ್ದರಿಂದಲೇ ಇದು ಆತ್ಮನಿವೇದನೆಯೂ ಹೌದು ಶರಣಾಗತಿತತ್ವ ಪ್ರತಿಪಾದನೆಯೂ ಹೌದು.

೪. ನಿಂದಾಸ್ತುತಿ: ನಿಂದಾಸ್ತುತಿಗಳೂ ಸಹ ಆತ್ಮನಿವೇದನೆಯ ಒಂದು ವರ್ಗವೇ ಆದರೂ ವಿಶಿಷ್ಟವಾದ ರಚನೆಗಳಾದುದರಿಂದ ಪ್ರತ್ಯೇಕವಾಗಿ ಗುರುತಿಸುವ

ಸಾಮಾನ್ಯ ಕೀರ್ತನಸಾಹಿತ್ಯದ ಲಕ್ಷಣದಂತೆ ಇಲ್ಲಿಯೂ ಪ್ರತ್ಯೇಕವಾಗಿ ಗುರುತಿಸಲಾಗಿದೆ. ಕೀರ್ತನ ಸಾಹಿತ್ಯದ ಎಲ್ಲ ಲಕ್ಷಣಗಳಿಗೂ ಈ ಕೀರ್ತನಕಾರರೂ ಸ್ಪಂದಿಸಿದ್ದಾರಷ್ಟೇ ಅಲ್ಲದೆ ಸಮರ್ಥವಾಗಿ ಕಾಣಿಸಿಕೊಂಡಿದ್ದಾರೆಂಬುದನ್ನು ತೋರಿಸುವುದೂ ಇಲ್ಲಿಯ ಉದ್ದೇಶ. ೧೦ ನಿಂದಾಸ್ತುತಿಗಳನ್ನು ದಾಸರು ರಚಿಸಿದ್ದಾರೆ. ದೈವವನ್ನು ನಿಂದಿಸುವಂತಹ ಸ್ಥಿತಿಯನ್ನು ಒಬ್ಬ ದಾಸರು ತಲುಪಿದ್ದಾರೆಂದರೆ ಅದು ದೈವಸಾಧನೆಯ ಪ್ರೌಢಸ್ಥಿತಿ ಎಂದೇ ಸಾಮಾನ್ಯ ನಂಬಿಕೆ. ದಾಸವೃತ್ತಿಯಿಲ್ಲದೆ ಆಂತರಿಕ ದಾಸತ್ವದ ಮೂಲಕವೂ ಆಧುನಿಕ ಸಾಮಾಜಿಕ ಸಂದರ್ಭದಲ್ಲೂ ಇಂತಹ ಸ್ಥಿತಿ ತಲುಪುವ ದಾಸರಿದ್ದಾರೆ. ಎಂಬುದೇ ವಿಶೇಷವಾದ ಅಂಶ.

'ಎನ್ನಪರಾಧವೇನೋ ಮಾಂಗಿರಿರಂಗ
ಎನ್ನಕೈಬಿಡುವೆಯೇನೋ (೨೮೯)

ನಾನಿನ್ನ ತೆಗಳಿದೆನೆ ರಂಗಯ್ಯ
ನಾನಿನ್ನ ಮಹಿಮೆಯ ಹೊಗಳಿದೆನಲ್ಲದೆ

ಎಂಬ ಕೃತಿಗಳಲ್ಲಿ ಭಾಗವತಭಕ್ತರ ವರ್ತನೆಗಳಲ್ಲಿ ದಶಾವತಾರದಲ್ಲಿ ಕಂಡುಬರುವ ಅಪರಾಧದ ಅಂಶಗಳನ್ನು ಎತ್ತಿಹೇಳುವಪರಿ ಸುಂದರವಾಗಿ ಮೂಡಿಬಂದಿದೆ.

'ದಯವು ನಯವು ನಿನಗಿರದಿದ್ದರೆ ಎನಗೆ ಕೇಳೋ'

ಎಂಬ ಕೃತಿಯ ಧೋರಣೆಯೇ ಆಧ್ಯಾತ್ಮ ಸಾಧನೆಯ ದ್ಯೋತಕವೆನಿಸಿದೆ.

'ನಿನಗೇನು ಕಡಮೆ ಪೇಳೆ ಎನಗೆಲೋ'

ಎಂಬುದರಲ್ಲಿ ಜೀವ ಮತ್ತು ದೈವದ ಹೋಲಿಕೆಯಿದ್ದು ದೈವವು ಜೀವವನ್ನು ಓಲೈಸಲೇಬೇಕೆಂಬ ಒತ್ತಡತಂತ್ರವಿದೆ.

'ನಿನ್ನ ತಂತ್ರಗಳೆಲ್ಲ ಬಯಲಾಯ್ತೊ ರಂಗ'

'ಶಯನವೆಸುಖವೇ ಸುಖವೆ ರಂಗನಾಥ' ೨೯೩

ಎಂಬಲ್ಲಿ ದೈವವನ್ನೇ ನೇರವಾಗಿ ಟೀಕಿಸುವ ಧಾರ್ಷ್ಟ್ಯವಿದ್ದರೂ ಈ ಅನುಭಾವಸ್ಥಿತಿಯಲ್ಲಿ ಅದು ಕ್ಷಮ್ಯವಾಗಬಲ್ಲದು.

'ನಾನೊಂದನಿತ್ತರೆ ನೀನೊಂದನೀಯುವೆ

ನಾನೀಯದಿದ್ದರೆ ನೀನೇನನೀವೆ'

ಎಂಬಂತಹ ಅತ್ಯುತ್ತಮ ಕೃತಿಗಳನ್ನು ನೀಡಿರುವ ಆಸೂರಿಯವರು ಶ್ರೇಷ್ಠ ಹರಿದಾಸರೆಂಬುದಕ್ಕೆ ಇವೆಲ್ಲ ನಿದರ್ಶನಗಳಾಗಿ ನಿಲ್ಲುತ್ತವೆ.

೫. **ಕೃಷ್ಣಲೀಲೆ:** ಪುರಂದರದಾಸರಲ್ಲಿ ಮಾತ್ರ ಅಧಿಕವಾಗಿ ಕಂಡುಬರುವ ಶ್ರೀಕೃಷ್ಣನ ಬಾಲಲೀಲಾ ವಿಲಾಸದ ಕೀರ್ತನೆಗಳು ಬೇರೆ ದಾಸರಲ್ಲಿ ಅಷ್ಟಾಗಿ ಕಂಡು ಬಾರದಿರುವುದು ಜನಜನಿತವಾದ ಸಂಗತಿ. ಈಗ ಈ ದಾಸರ ಕೃಷ್ಣಲೀಲಾ ಕೃತಿಗಳನ್ನು ಗಮನಿಸಿದ ಯಾರಾದರೂ ಪುರಂದರದಾಸರ ನಂತರದ ಸ್ಥಾನದಲ್ಲಿ ಗುರುತಿಸ ಬೇಕಾಗುತ್ತದೆ. ೩೬ ಕೃತಿಗಳಲ್ಲಿ ಶ್ರೀಕೃಷ್ಣನ ವರ್ಣಮಯ ಬಾಲಲೀಲೆಗಳನ್ನು ಕಂಡರಿಸಿದ್ದಾರೆ. ಇದರಲ್ಲಿ ವೈವಿಧ್ಯತೆಯಿದೆ, ಹೊಸತನವಿದೆ. ಆತ್ಮೀಯತೆಯ, ವಾತ್ಸಲ್ಯ ಭಾವದ ಸಹಜತೆ ಅತ್ಯಂತ ನವಿರಾಗಿ ಮೂಡಿಬಂದಿದೆ.

'ಅಕ್ಕಾ ಚಿಕ್ಕಮಕ್ಕಳ ನಡುವೆ ನಕ್ಕು ನಲಿವಬಾಲ ಇವನಾರೆ'

'ಆಡುವಬಾರೋ ಕೃಷ್ಣ ಓಡಿಬಾರೊ'

'ಎತ್ತಣ ಪಯಣವೋ ಕೃಷ್ಣಯ್ಯ ನಿನಗಿತ್ತಏನವಸರ'

'ಏಣಾಕ್ಷಿಯರೇ ವೇಣುಗೋಪಾಲನ ಕಾಣಲಿಲ್ಲವೆಂದೆನ ಬೇಡಿ'

'ಓಡಿಬಾ ಬಾ ರಂಗ ಆಡುಬಾ ನೀಲಾಂಗ'

'ಕೇಳಿದೆ ಏನೇ ಕೊಳಲದನಿಯ'

'ಗೋಪಿಯ ಕಂದ ಇಗೊ ಬಂದ'

'ದೂರ ತರುವಿರೇನೇ ಕೃಷ್ಣನಮೇಲೆ'

'ಮನೆಯೊಳಗಾಡೋ ನೆನೆವರ ನೋಡೊ'
'ಸಿಕ್ಕದೆ ಪೋಪೆಯೇತಕೆ ಮಾಂಗಿರಿರಂಗ'
'ಹೊಂಗೊಳಲೂದುತ ಬರುವರಂಗ'

ಮುಂತಾದ ಹಲವು ಕೀರ್ತನೆಗಳಲ್ಲಿ ಮಗುವಿನ ಬಾಲಲೀಲೆಯ ಸಹಜ ಚಿತ್ರಣ ವಿದೆ, ಸಖಿಯರ, ತಾಯಿಯ ಸಹಜ ವರ್ತನೆಯಿದೆ. ಸರಳ ಸುಂದರ ಸುಲಲಿತ ಭಾಷೆ ಪದ ಜೋಡಣೆಗಳ ಮೂಲಕ ಮುದನೀಡುವಂತಹ ಕೀರ್ತನೆಗಳಾಗಿ ಕಂಗೊಳಿಸುವ ಗುಣ ಇವಕ್ಕಿದೆ.

'ಒಡಲೆರಡಂತೆ ಅಸುವೊಂದಂತೆ
ನುಡಿಯಿದು ನಿಜವೇನೇ ಪೇಳೇಗೋಪಮ್ಮ' (೩೦೭)

ಕೃತಿಯಲ್ಲಿ ರಾಧಾ-ಕೃಷ್ಣರ ಪ್ರೇಮಪ್ರಕರಣ ಬೀದಿ ಸುದ್ದಿಯಾಗಿ ಆಡಿಕೊಳ್ಳುವವರ ನಾಲಿಗೆಯಲ್ಲಿ ನಲಿಯುವಂತಹ ಸಹಜ ಚಿತ್ರಣದ ಜೊತೆಗೇ ವಿಶಿಷ್ಟಾದ್ವೈತ ತತ್ತ್ವವಾದ ಜೀವ-ದೈವಗಳ ಏಕತೆಯನ್ನೂ ಇದು ವ್ಯಕ್ತಪಡಿಸುತ್ತದೆ. ಜಗತ್ತೇದೈವ ಮಯವಾಗಿರುವಾಗ ಜೀವವೂ ಅದರ ಒಂದು ಭಾಗ ಎಂಬ ತಾತ್ವಿಕ ಕಲ್ಪನೆಯ ಮೇಲೆ ರಾಧೆ ಕೂಡ ಕೃಷ್ಣನ ಒಂದು ಅಂಶ. ಈ ತತ್ವದ ಪ್ರಚಾರಕ್ಕಾಗಿಯೇ ರಾಧಾ-ಕೃಷ್ಣರ ಕಲ್ಪನೆ ಎಂಬ ಶ್ರೀವೈಷ್ಣವ ಭಾಗವತ ಸಂಗತಿಯನ್ನು ನಿರೂಪಿಸುವ ತಾತ್ತ್ವಿಕ ಕೃತಿಯಾಗಿ ಇದು ಯಶಸ್ವಿಯಾಗಿದೆ.

'ನೋಡಾನ ಬನ್ನಿ ನೋಡಾನ ಬನ್ನಿ
ನೋಡಾನ ಬನ್ನಿ ಮುದ್ದು ಕೃಷ್ಣಯ್ಯನ'

ಕೃತಿ ಜಾನಪದ ಧಾಟಿಯಲ್ಲಿದ್ದು ಕೃಷ್ಣನ ಬಾಲಲೀಲೆಯ ಕಲ್ಪನೆಯಲ್ಲೇ ವಿನೂತನತೆಯನ್ನು ತಂದಿದೆ. ನೇರ ಕೃಷ್ಣನನ್ನೇ ಬಾಲಕನನ್ನಾಗಿ ಕಲ್ಪಿಸುವ ಪ್ರಚಲಿತ ರೀತಿಗೆ ಭಿನ್ನವಾಗಿ ಬಾಲಕೃಷ್ಣ ಪೂಜಾಮೂರ್ತಿಯ ಬಾಲ್ಯತನದ ವರ್ಣನೆಯ ಕಲ್ಪನೆ ಇಲ್ಲಿ ವಿಶೇಷವಾಗಿ ಮೂಡಿಬಂದಿದೆ. ಸಾಮಾನ್ಯವಾಗಿ ಕೃಷ್ಣದೇವಾಲಯಗಳಲ್ಲಿ ಕೃಷ್ಣನ ಬಾಲಲೀಲಾವಿಲಾಸದ ಸಂಕೇತವಾಗಿ ಬಾಲಕೃಷ್ಣನ

ವಿಗ್ರಹದ ತೊಟ್ಟಿಲುಸೇವೆ ನಡೆಯುತ್ತದೆ. ಶ್ರೀವೈಷ್ಣವರಲ್ಲಿ ಅತ್ಯಂತ ಪ್ರಮುಖವಾಗಿರುವ ಕೃಷ್ಣಜಯಂತಿ-ಗೋಕುಲಾಷ್ಟಮಿಯ ದಿನ ಕೃಷ್ಣನನ್ನು ತೊಟ್ಟಿಲಲ್ಲಿಟ್ಟು ಆನಂದಿಸುವ ಪರಿಪಾಠ ಮನೆಮನೆಗಳಲ್ಲೂ ನಡೆಯುತ್ತದೆ. ಈ ವಿಶೇಷ ಸಂದರ್ಭದ ಕೃಷ್ಣಪೂಜೆಯ ಹಿನ್ನೆಲೆಯಲ್ಲಿ ಕೃಷ್ಣನ ಬಾಲಲೀಲೆಗಳನ್ನು ಕಲ್ಪಿಸಿರುವುದು ಬಾಲಲೀಲಾಕೀರ್ತನೆಗಳ ವಸ್ತುವಿನ್ಯಾಸದಲ್ಲಿಯೇ ವಿನೂತನತೆಯನ್ನು ಪಡೆಯುತ್ತದೆ. ಕೇವಲ ಗೋಪಿಕೆಯರು, ರಾಧೆ, ಯಶೋದೆಯರಿಗೇ ಮೀಸಲಾಗಿದ್ದ ಬಾಲಲೀಲಾ ವಿನೋದ ಇಲ್ಲಿ ವಿಸ್ತೃತಗೊಂಡು ಭಕ್ತ ಜನರಿಗೂ, ಸಾಮಾನ್ಯ ಜನರಿಗೂ ಲಭ್ಯವಾಗುವಂತೆ ಮಾಡಿರುವುದು ಇನ್ನೊಂದು ವಿಶೇಷ ಗುಣ.

ಹೀಗೆ ನಾವೀನ್ಯತೆ ಮತ್ತು ವೈವಿಧ್ಯತೆಯಿಂದ ಕೂಡಿರುವ ಕೃಷ್ಣನ ಬಾಲಲೀಲೆಗಳಲ್ಲಿ ಆಸೂರಿಯವರು ಪುರಂದರದಾಸರಿಗೆ ಸರಿಸಮನಾಗಿ ನಿಲ್ಲಬಲ್ಲವರಾಗುತ್ತಾರೆನ್ನಲು ಅಡ್ಡಿಯಿಲ್ಲ.

೬. ಲೋಕನೀತಿ ಅಥವಾ ಸಾಮಾಜಿಕ ಕೃತಿಗಳು: ೩೫ ಕೃತಿಗಳಲ್ಲಿ ಸಾಮಾಜಿಕ ಸಂಗತಿಗಳನ್ನು ದಾಖಲಿಸುವುದರ ಮೂಲಕ ಆಸೂರಿಯವರು ಸಮಕಾಲೀನ ಸಮಾಜಕ್ಕೂ ಸ್ಪಂದಿಸಿದ್ದಾರೆನ್ನಬಹುದು. ಆತ್ಮನಿವೇದನೆ ದೈವಸ್ತುತಿಯ ಕೃತಿಗಳ ಸಂಖ್ಯೆಗೆ ಹೋಲಿಸಿದರೆ ಸಾವಾಜಿಕ ಸ್ಪಂದನದ ಕೃತಿಗಳು ಕಡಿಮೆಯೆನಿಸಿದ್ದರೂ ಸಮಾಜ ಜೀವಿಯಾಗಿ ಸುತ್ತಲಿನ ಸಮಾಜಕ್ಕೆ ಸ್ಪಂದಿಸಿರುವಲ್ಲಿ ಸೂಕ್ಷ್ಮತೆಯಿದೆ ಮತ್ತು ಸಾಮಾಜಿಕ ಜವಾಬ್ದಾರಿಯಿದೆ ಎಂಬುದನ್ನು ಬಹಳ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ವಾಸ್ತವವಾಗಿ ಶ್ರೀವೈಷ್ಣವ ಶರಣಾಗತಿ ಪ್ರಪತ್ತಿ ತತ್ವಕ್ಕೆ ಒಪ್ಪಿಸಿಕೊಂಡವರಿಗೆ ಸಾಮಾಜಿಕ ಸಂಬಂಧದಿಂದ ನಿವೃತ್ತಿಯಿರುತ್ತದೆ. ಲೌಕಿಕ ಬದುಕಿನಿಂದ ಹೊರಬಂದು ತಮ್ಮನ್ನು ತಮ್ಮ ಅಸ್ತಿತ್ವವನ್ನು ಸಂಪೂರ್ಣವಾಗಿ ಭಗವಂತನಲ್ಲೇ ಕಾಣುವ, ಸಮರ್ಪಣ ಭಾವವಿರುವುದರಿಂದ ಸಾಮಾಜಿಕ ಸ್ಪಂದನ ಇರಬೇಕಾಗಿಲ್ಲ. ಸಮಾಜ ಜೀವಿಯಾದರೂ ಸಾಮಾಜಿಕವಾದ ಏರುಪೇರುಗಳಾಗಲಿ ಅದು ಬೀರುವ ಪರಿಣಾಮಗಳಾಗಲಿ ಅದರಿಂದೊದಗುವ ಕಷ್ಟ ನಷ್ಟಗಳಾಗಲಿ ಯಾವುದಕ್ಕೂ ಇವರು ಎದೆಗೊಟ್ಟು ನಿಂತು ಎದುರಿಸುವ ಮುಖಾಮುಖಿ-ಯಾಗುವುದಿಲ್ಲ; ಎಲ್ಲವನ್ನೂ ಅದು ಬಂದಂತೆ ಸ್ವೀಕರಿಸಿ ಅದೂ ಭಗವಂತನ ಲೀಲೆ, ಅವನ ಪರೀಕ್ಷೆ, ಅವನು ಆಡಿಸುವ ನಾಟಕ, ಅವನೇ ಪಾರುಮಾಡುತ್ತಾನೆಂದು

ಅನುಭವಿಸುವವರಾದುದರಿಂದ ಅದಕ್ಕೆ ಸ್ಪಂದಿಸುವ, ಅದನ್ನೂ ವಿಶ್ಲೇಷಿಸುವ ಸ್ವಭಾವದವರಾಗಿರುವುದಿಲ್ಲವೆಂದು ತತ್ವದ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದಾದರೂ, ಅದರಾಚೆಗೂ ನಿಂತು ಶ್ರೀವೈಷ್ಣವ ಹರಿದಾಸರು ಸ್ಪಂದಿಸಿ ಲೋಕನೀತಿಯನ್ನು ಹೇಳುತ್ತಾರೆ. ಆಸೂರಿಯವರು ಅವರಲ್ಲಿ ಪ್ರಮುಖರಾಗಿದ್ದಾರೆ.

'ಕುರಿಕೋಳಿಕೋಣಗಳ ಶಿರವ ತರಿಯಲುಬೇಡಿ
ನರರಂತೆ ಜೀವಿಗಳ ಅವುಗಳಣ'

ಎಂಬಂತಹ ಪ್ರಾಣಿದಯಾ ತತ್ವವನ್ನು ಸಾರುತ್ತಾರೆ.

ಅಳುವವರಿಲ್ಲದ ಜಗವಿಲ್ಲ
ಅಳುವಿಲ್ಲದವಗೆ ನಲಿವಿಲ್ಲ
ಅಳಿವಿಂಗಳುವುದು ಅಸಹಾಯಾರ್ಥ
ಬಳಲಿಕೆಗಳುವುದು ಬಹುವ್ಯರ್ಥ (೩೩೭)

'ನಗುವಿನಿಂದಾರೋಗ್ಯ ಉಂಟೆಂಬರಯ್ಯ
ನಗುವಿಂದ ಸನ್ಮಿತ್ರ ಹಗೆಯಪ್ಪುದುಂಟಯ್ಯ (೩೫೧)

ಕೃತಿಗಳಲ್ಲಿ ಅಳುನಗುಗಳ ಸಾಮರಸ್ಯವನ್ನು ಅವುಗಳ ಅಗತ್ಯ ಮತ್ತು ಸಾರ್ಥಕತೆಯನ್ನು ಸರಳವಾಗಿ ಸೊಗಸಾಗಿ ತಿಳಿಹೇಳುತ್ತಾರೆ.

–'ತನುವ ತೊಳೆದ ಮಾತ್ರದಿಂದ ಮನದ ಶುದ್ಧಿಯಾಗದು '
–ಇದು ಕಲಿಗಾಲದ ಮಹಿಮೆಯ ಗುಟ್ಟು
–ಮುದಿತನ ಬಂದರೆ ಮಾಯದ ಪೆಟ್ಟು
–ವಿಧವೆಯಾದರೆ ತಲೆಯಮೇಲೊಟ್ಟು
–ವಿಧುರನಾದರೆ ದುರ್ನೀತಿಯ ಕಟ್ಟು
–'ಚಿಂತೆಯಿಲ್ಲದನರನು ಧರೆಯೊಳಗಿಹನೆ'
–'ಜಪವ ಮಾಡಿದರೇನು ತಪವ ಮಾಡಿದರೇನು'

–'ಜಾತಿಕುಲಗೋತ್ರಗಳ ಖ್ಯಾತಿ ಹಿರಿದಲ್ಲಯ್ಯ'

–'ದಾಸನಾಗಬೇಕು ಮನದಲಿ ಆಸೆಯಿಂಗಬೇಕು'

–'ಧರ್ಮದ ನೀತಿಯ ಅರಿತೇನು'

–'ಬೇಡಿಕೆಗೆ ಮಿತಿಯಿಲ್ಲ ಬೇಡಿಕೆಗೆ ಕೊನೆಯಿಲ್ಲ'

–'ಧ್ಯಾನಕ್ಕೆ ಮನವಿಲ್ಲ ಸುರಪಾನಕೆ ಕೊನೆಯಿಲ್ಲ'

–'ಸಕ್ಕರೆರುಚಿ ತಾಯಕ್ಕರೆ ಬಲುರುಚಿ'

–'ಹಣವನರಸುವರೆಲ್ಲ ಗುಣವನರಸುವರೆ'

–'ಹಳಿವವನೇ ನಮ್ಮನೆಂಟ'

ಮುಂತಾದ ಅನೇಕ ಕೀರ್ತನೆಗಳಲ್ಲಿ ಸಮಾಜದ ಹತ್ತು ಹಲವು ಸಂಗತಿಗಳನ್ನು ಚಿತ್ರಿಸುತ್ತಾರೆ. ಆಧುನಿಕ ಸಮಾಜದ ರೀತಿ ನೀತಿಗಳನ್ನು ಮುದುಕ–ವಿಧವೆ–ವಿಧುರರ ನೀತಿಗಳ ಮೂಲಕ ತೀಕ್ಷ್ಣವಾಗಿ ಪ್ರತಿಪಾದಿಸುತ್ತಾರೆ. ಸುರಾಪಾನದ ಪ್ರತಿಮೆಯಲ್ಲಿ ಕುಡಿತದ ಅದರಲ್ಲೂ ಸುಸಂಸ್ಕೃತ ಕುಡಿತದ ಸಾಮಾಜಿಕ ಅನೀತಿಯನ್ನು ತಿಳಿಸುತ್ತಾರೆ. 'ಜಾತಿ ಕುಲಗೋತ್ರ ' ಗಳ ಹಿಡಿದು ನಡೆವ ಸಂಪ್ರದಾಯವಾದಿಯ ಬೂಟಾಟಿಕೆಯನ್ನು ಡಂಬಾಚಾರವನ್ನು ಬೆತ್ತಲೆಮಾಡಿ ಗುಣಪ್ರಾಧಾನ್ಯತೆಯ ನೀತಿಯನ್ನು ಸಾರುತ್ತಾರೆ.

'ಹರಿಪಾದ ತೀರ್ಥವನು ಕರದಿಪಿಡಿದವರೆಲ್ಲ
ತಿರುನಾಮದವರೆನಲು ನಂಬಬಹುದೆ; (೩೬೧)

ಕೃತಿಯಲ್ಲಿ ಬ್ರಾಹ್ಮಣ್ಯದ ಅಧಃಪತನವನ್ನೂ ಅರ್ಚನೆಯ ವ್ಯಾಪಾರೀ ಮನೋಭಾವವನ್ನೂ ಆ ಮೂಲಕ ಸಾಮಾಜಿಕ ಮೌಲ್ಯದ ಕುಸಿತವನ್ನೂ ಮನಮುಟ್ಟುವಂತೆ ಮಂಡಿಸಿದ್ದಾರೆ.

'ರಾಗಿ ಬೆಳೆಯುವ ನಿರ್ಮಲರಾಗಿ ಬೆಳೆಯುವ'

ಕೃತಿಯ ಪ್ರತಿಮೆ ಮೇಲ್ನೋಟಕ್ಕೆ ಪುರಂದರ ದಾಸರದ್ದೆನಿಸಬಹುದಾದರೂ ಇದು ಆಸೂರಿಯವರದ್ದೂ ಹೌದು, ಪುರಂದರರ ಇದೇ ಪ್ರತಿಮೆಯ ಕೃತಿಯಿಂದಲೇ ಪ್ರಭಾವಿತರಾಗಿದ್ದಾರೆ. ಅದಕ್ಕಿಂತ ಭಿನ್ನವಾದನೆಲೆಯಲ್ಲಿಯೇ ಚಿಂತಿಸಿ ಪ್ರತ್ಯೇಕತೆಯನ್ನು ಸ್ವಂತಿಕೆಯನ್ನು ಸಾಧಿಸಿದ್ದಾರೆ. ಪುರಂದರದಾಸರು 'ರಾಗೀ ತಂದೀರಾ' ಎಂದರೆ ಇಲ್ಲಿ ಇವರು 'ರಾಗಿ' ಬೆಳೆಯುತ್ತಾರೆ'.

ಹೀಗೆ ಅನೇಕ ಉತ್ತಮ ಲೋಕನೀತಿಯ ಕೃತಿಗಳ ಮೂಲಕ ಆಸೂರಿ ರಾಮಸ್ವಾಮಿ ಅಯ್ಯಂಗಾರ್ಯರು ಒಬ್ಬ ಸತ್ವಶಾಲಿ ಕೀರ್ತನಕಾರರಾಗಿ ಕಂಡುಬರುತ್ತಾರೆ.

೭. ತಾತ್ವಿಕ-ದಾರ್ಶನಿಕ ಕೃತಿಗಳು : ಸುಮಾರು ೪೦ ಕೃತಿಗಳ ಮೂಲಕ ನೇರವಾಗಿ ತತ್ವಪ್ರತಿಪಾದನೆ ಮಾಡಿರುವ ಆಸೂರಿಯವರು ಶ್ರೀವೈಷ್ಣವ ತತ್ವಗಳನ್ನು ಶುದ್ಧಸಾಹಿತ್ಯದ ಮೂಲಕ ಸರಳವಾಗಿ, ನಿಖರವಾಗಿ ಕನ್ನಡಕ್ಕೆ ಪರಿಚಯಿಸಿದ ಪ್ರಮುಖರಾಗುತ್ತಾರೆ. ಅನೇಕ ಪಂಡಿತರು ಶಾಸ್ತ್ರ ನಿಷ್ಠರು ಯತಿಗಳು-ಆಚಾರ್ಯರು-ಟೀಕಾಚಾರ್ಯರು ಈವರೆಗೆ ಈ ತತ್ವಗಳನ್ನು ಜಗ್ಗಾಡಿಸಿ ಇನ್ನಿಲ್ಲದಷ್ಟು ವ್ಯಾಖ್ಯಾನಗಳನ್ನು ಬರೆದಿದ್ದರೂ ಅವೆಲ್ಲ ಮತೀಯ ಗ್ರಂಥಗಳಾಗಿ ಮಾರ್ಪಟ್ಟು ಮಡಿವಂತಿಕೆಯೊಳಗೇ ಮುರುಡಿದ್ದರೆ ಆಸೂರಿಯವರ ಈ ಕೀರ್ತನೆಗಳು ತಮಗೆ ತಾವೇ ತೆರೆದುಕೊಂಡು ಓದುಗರಲ್ಲಿ ಪುಟಗೊಳ್ಳುತ್ತವೆ. ಶ್ರೀವೈಷ್ಣವ ತತ್ವಗಳನ್ನು ಸ್ಪಷ್ಟಪಡಿಸುತ್ತವೆ.

ಈಗಾಗಲೆ 'ಶ್ರೀಹರಿಏಕನಿಷ್ಠೆ' 'ಶರಣಾಗತಿ ತತ್ವಗಳು' ಪರೋಕ್ಷವಾಗಿ ವ್ಯಕ್ತವಾಗಿದ್ದರೂ ನೇರವಾಗಿ-ಅವುಗಳನ್ನು ಒಳಗೊಂಡಂತೆ-ಇನ್ನೂ ಕೆಲವು ತತ್ವಗಳನ್ನು ಈ ಕೀರ್ತನೆಗಳಲ್ಲಿ ಪ್ರತಿಪಾದನೆ ಮಾಡಿದ್ದಾರೆ.

ಆದಿದೇವಾ ನಿನ್ನೊಲುಮೆಯಾದರೆ
ಮೇದಿನಿ ವೈಕುಂಠ ಎನ್ನಿಸದೇ (೩೬೪)

ಕೃತಿ ಸ್ಪಷ್ಟವಾಗಿ ಜೀವ-ಜಗತ್ತು- ದೈವಗಳ ಏಕೋಭಾವವನ್ನು ಸಾರುವ ತತ್ವವಾಗಿದೆ. ಜಗತ್ತೆಲ್ಲವೂ ದೈವಕೃಪೆಯಾಗಿದ್ದು ಜೀವನೂ ದೈವಾಜ್ಞಾಪಿತನಾಗಿದ್ದಾನೆನ್ನುವ ಚಿತ್-ಅಚಿತ್‌ಗಳು ಬೇರೆಯಾದರೂ ಚೈತನ್ಯನಿಗೆ ಶರೀರ ವಾಗಿರುವ

ವಿಶೇಷಣಗಳು ಎಂಬ ವಿಶಿಷ್ಟಾದ್ವೈತವನ್ನು ಹೇಳುತ್ತದೆ. ಹೊನ್ನು-ಹೂವು ಅಡವಿ-ವೃಕ್ಷ, ಯೋಗದಭ್ಯಾಸ, ಔಷಧಿ, ಬಡತನ, ಬೆಳಕು- ಬಾನ್ದಳ, ಮನ-ತುರಗ, ಮಾತ್ರೆ, ರತ್ನ, ಪೂಜೆ, ಶಕ್ತಿ-ಯುಕ್ತಿ: ಹೀಗೆ ಹಲವು ಆಕರ್ಷಣೀಯ ಪ್ರತಿಮೆಗಳ-ಹೋಲಿಕೆಗಳ-ಮೂಲಕ ವಿಶಿಷ್ಟಾದ್ವೈತ ತತ್ವಗಳನ್ನು ಎಳೆಎಳೆಯಾಗಿ ಬಿಡಿಸಿಡುತ್ತಾರೆ.

'ಒಂದಿಲ್ಲದ ಮೇಲೆರಡುಂಟೆ,' ನೀರಾರು ನಾನಾರು ನೀನೆನ್ನೊಳಿರು', 'ನೀನೆನ್ನೊಳಡಗಿಹೆಯೊ ರಂಗಯ್ಯ ನಾನಿನ್ನೊಳಡಗಿಹೆನೊ' ಮುಂತಾದ ಕೃತಿಗಳಲ್ಲಿ ಜೀವನೂ ದೈವನೂ ಒಬ್ಬನೇ ಎಂಬ ಜೀವ-ದೈವ ಸಂಬಂಧವನ್ನ ಸರಳವಾಗಿ ಹೇಳುತ್ತಾರೆ. ಪುರಂದರ ದಾಸರ ಆತ್ಮ-ಪರಮಾತ್ಮಗಳು ಬೇರೆಬೇರೆ ಎಂಬ ಮಧ್ವತತ್ವವನ್ನು 'ಎರಡೂ ಒಂದಾಗದು ರಂಗ' ಕೃತಿಯಲ್ಲಿ ಎಷ್ಟುಸರಳವಾಗಿ ಹೇಳುತ್ತಾರೋ ಅಷ್ಟೇ ಸರಳವಾಗಿ ಆಸೂರಿಯವರೂ ಈ ಕೃತಿಗಳಲ್ಲಿ ಶ್ರೀವೈಷ್ಣವ ತತ್ವವಾದ ಅದೇ ಆತ್ಮ-ಪರಮಾತ್ಮಗಳು ಒಂದೇ, ಎರಡಲ್ಲ; ಪರಮಾತ್ಮನಿಲ್ಲದೆ ಆತ್ಮವಿಲ್ಲ ಎಂಬುದನ್ನು ಹೇಳಿದ್ದಾರೆ.

ಇದೇ ವಿಭಾಗದಲ್ಲಿ ಮಂತ್ರಅಥವ ನಾಮ ಮಹಿಮೆಯನ್ನು ಪ್ರತ್ಯೇಕವಾಗಿ ಗುರುತಿಸಲಾಗಿದೆ. ಈ ತಾತ್ವಿಕಕೀರ್ತನೆಗಳಲ್ಲಿ ಸು.೧೬ ಕೀರ್ತನೆಗಳು ಮಂತ್ರತತ್ವವನ್ನು ಪ್ರತಿಪಾದಿಸುತ್ತವೆ. ಇದನ್ನು ಶ್ರೀವೈಷ್ಣವ ಸಂಪ್ರದಾಯ 'ರಹಸ್ಯತ್ರಯ ತತ್ವ' ಎಂದು ಕರೆಯುತ್ತದೆ. ಇದರಲ್ಲಿ ಬರುವ 'ಮೂಲ ಮಂತ್ರ' 'ದ್ವಯ', 'ಚರಮ ಶ್ಲೋಕ'ಗಳ ಮಹಿಮೆಯನ್ನು ನಾರಾಯಣ ನಾಮಸ್ಮರಣೆಯ ಮಹತ್ವವನ್ನು ಪ್ರತಿಪಾದಿಸಲಾಗಿದೆ. ಆಸೂರಿಯವರು ಈ ನಾಮ ಮಹಿಮೆಯನ್ನು 'ರಾಮತಾರಕ'ವನ್ನೂ ಸೇರಿಸಿ ಅಷ್ಟಾಕ್ಷರಿಯ ಮಹತ್ವವನ್ನು ಇಮ್ಮಡಿಸಿದ್ದಾರೆ.

'ಈ ಮಂತ್ರ ಜಪಗೈದು ಜನುಮವ ಸ್ವಾಮಿಗರ್ಪಿಸೋ ಮಾನವಾ'
'ಔಷಧದ ಬೇರೊಂದ ನಾರದನು ತಂದ'
'ಕೋಟಿನಾಮಗಳಲ್ಲಿ ಹಿರಿಯದಂತ'
'ಚಿಂತಯಾಮಿ ತಾರಕನಾಮಂ'

೬೭.೪

'ನಾರದ ನುತಿಸುವ ನಾಮ ನಾರಾಯಣ ಹರಿನಾಮ'

'ರಾಮತಾರಕವೊಂದೇ ಮೂಲಮಂತ್ರ'

'ಶರಣಾಗತಿಯೇ ಪುರುಷಾರ್ಥ'

'ಹುಚ್ಚು ಹಿಡಿಯಬೇಕು ಭಜನೆಯ ರಚ್ಚೆಗೆ ತೊಡಗಬೇಕು'

ಮುಂತಾದ ಕೀರ್ತನೆಗಳಲ್ಲಿ ನಾಮಸ್ಮರಣೆಯ ಮಂತ್ರಮಹಿಮೆಯ ಸಂದರ್ಭಗಳನ್ನು ಇವುಗಳನ್ನು ಅನುಸಂಧಾನಮಾಡಿ ಪರಮಪದ ಸೇರಿದ ಧ್ರುವ, ನಾರದ, ಪ್ರಹ್ಲಾದ, ಮಾರುತಿ ಮುಂತಾದ ಭಾಗವತ ಭಕ್ತರ ಆಳ್ವಾರರ ಪ್ರಸಂಗಗಳ ಮೂಲಕ ಸುಲಭ ಗ್ರಾಹ್ಯವಾಗಿಸಿದ್ದಾರೆ.

ಯಾವುದೇ ತತ್ವದ ಸಾಧನೆಗೆ ಸಾಧಕಗಳನ್ನಾಗಿ ಕಂಡುಕೊಂಡಿರುವ ಮೂರು ಅಂಶಗಳಾದ ತತ್ವ-ಹಿತ-ಪುರುಷಾರ್ಥ ಈ ಮೂರು 'ಮೂಲತತ್ತ್ವ' ಗಳು ಶ್ರೀವೈಷ್ಣವದಲ್ಲಿ ಬೇರೆಬೇರೆಯಲ್ಲ. 'ಶರಣಾಗತಿ'ಯೊಂದೇ ನಾಮಸ್ಮರಣೆಯೊಂದೇ- ಓಂನಮೋ ನಾರಾಯಣಾಯ' ಎಂಬ ಅಷ್ಟ ರಾಮತಾರಕವೋ-ಮೂಲತತ್ವಗಳಲ್ಲಿ ದೊರಕುವ ಎಲ್ಲ ಫಲಗಳನ್ನೂ ಸಾಧಕನಿಗೆ ಒದಗಿಸುತ್ತದೆ. ಆದ್ದರಿಂದ ಪಾಮರನೂ ಈ ತತ್ವಗಳನ್ನು ಸಾಧನೆ ಮಾಡಬಹುದೆಂಬ ಸರಳತತ್ವವನ್ನು ಅಷ್ಟೇ ಸರಳವಾಗಿ ಈ ನಾಮ ಮಹಿಮೆಯ ಸ್ತುತಿಗಳಿಂದ ತಿಳಿಸಿಕೊಡುತ್ತಾರೆ.

೮. **ಕ್ಷೇತ್ರದರ್ಶನ ಸ್ತುತಿಗಳು:** ಆಸೂರಿಯವರು ಜೀವಿತಾವಧಿಯಲ್ಲಿ ಹೆಚ್ಚು ಪ್ರವಾಸ ಮಾಡಿದವರಲ್ಲ. ಒಮ್ಮೆ ಮಾತ್ರ ಅಖಿಲ ಭಾರತ ಪ್ರವಾಸಯಾತ್ರೆ ಕೈಗೊಂಡು ಹರಿದ್ವಾರದವರೆಗೆ ಹೋಗಿ ಬಂದಿರುವುದು ತಿಳಿದು ಬರುತ್ತದೆ. ತಿರುಪತಿ, ಮೇಲುಕೋಟೆ ಮುಂತಾದ ಕಡೆಗಳಿಗೂ ಹೋಗಿದ್ದರೆಂದೂ ಶ್ರೀರಂಗಪಟ್ಟಣದಲ್ಲೇ ಉದ್ಯೋಗ ನಿಮಿತ್ತ ಕೆಲವು ವರ್ಷ ವಾಸಿಸಿದ್ದರೆಂದೂ ಕಂಡುಬರುತ್ತದೆ. ಆದರೆ ಅವರ ದಾರ್ಶನಿಕ ಮನಸ್ಸು ಇದ್ದಲ್ಲಿಂದಲೇ ಕ್ಷೇತ್ರದೈವಗಳ ದರ್ಶನಗಳನ್ನು ಪಡೆಯುತ್ತಿತ್ತೆಂದು ಅವರ ಬದುಕಿನ ಸಂಗತಿಗಳು ಹೇಳುತ್ತವೆ. ಈ ಹಿನ್ನೆಲೆಯಲ್ಲಿ ಆಸೂರಿಯವರ ಕ್ಷೇತ್ರದರ್ಶನದ ಸ್ತುತಿಗಳು ನಿಲ್ಲುತ್ತವೆ.

'ನೇಮಸಾಧನೆಗಾಗಿ ಪ್ರೇಮಮೊಳೆವುದಕಾಗಿ
ಕಾಮಕ್ರೋಧವ ಸುಡುವ ಸ್ಥೈರ್ಯಕಾಗಿ
(ಯಾತ್ರೆ ಬೇಕು ಕ್ಷೇತ್ರಯಾತ್ರೆಬೇಕು') (೪೦೭)

ಎನ್ನುವ ದಾಸರು ಪ್ರಾಯಶಃ ತಮ್ಮ ೭೦ನೇ ವಯಸ್ಸಿನಲ್ಲೇ ಕಣ್ಣಿನ ದೃಷ್ಟಿಯ ಶಕ್ತಿಯನ್ನು ಕ್ಷೀಣಿಸಿಕೊಂಡಿದ್ದರಿಂದ ಹೆಚ್ಚು ಯಾತ್ರೆ ಮಾಡಲು ಸಾಧ್ಯವಾಗಿಲ್ಲ. ದಶಾವತಾರದ ರೂಪಗಳು, ರಾಘವೇಂದ್ರ, ಸಾಯಿಬಾಬಾ, ಮಾರುತಿ, ಮುಂತಾದ ಹಲವು ದೈವ ದರ್ಶನಗಳನ್ನು ಕುಳಿತಲ್ಲಿಂದಲೇ ಕಾಣುವಂತಹ 'ಕಾಣ್ಕೆ' ಪಡೆದಿದ್ದ ದಾಸರು ಕೆಲವು ಕ್ಷೇತ್ರಾಧಿಪತಿಗಳನ್ನೂ ಇಂತಹ 'ಕಾಣ್ಕೆ' ಯ ಮೂಲಕವೇ ಸಂದರ್ಶಿಸಿರುವಂತೆ ತೋರುತ್ತದೆ. ಮೇಲುಕೋಟೆ, ತಿರುಪತಿ, ಶ್ರೀರಂಗ, ಶ್ರೀರಂಗಪಟ್ಟಣ ಒಂದೇ ಸ್ತುತಿಯಲ್ಲಿ ಹಲವು ಕ್ಷೇತ್ರಗಳ ನರಸಿಂಹ (ಇದರಲ್ಲಿ ಕನ್ನಡ ನಾಡಿನಾದ್ಯಂತ ನೆಲೆಸಿರುವ ಕಂಬದ ನರಸಿಂಹನ ಸ್ತುತಿ ವಿಶೇಷವಾಗಿದೆ– ೪೧೩), ಮಾಹಾಬಲಿ ಪುರ, ತಿರುವಲ್ಲಿಕ್ಕೇಣಿ, ಬೇಲೂರು, ಜಗನ್ನಾಥ, ಕಾಶಿ, ಗೋದಾವರಿ ನದಿ) ಕ್ಷೇತ್ರಗಳ ಅರ್ಚಾಮೂರ್ತಿಗಳನ್ನು ಸ್ತುತಿಸಿದ್ದಾರೆ.

ಈ ಕ್ಷೇತ್ರದರ್ಶನ ಸ್ತುತಿಯಲ್ಲಿ ಗಮನ ಸೆಳೆಯುವುದು ಮಾವಿನಕೆರೆರಂಗನಾಥ ಸ್ತುತಿಗಳು. ಸು.೧೦ ಸ್ತುತಿಗಳಲ್ಲಿ ರಂಗನಾಥನ ವಿವಿಧ ರೂಪ ವರ್ಣನೆಯಿದೆ. ವಿಶೇಷವಾಗಿ ಸ್ಥಳೀಯ ಐತಿಹ್ಯಗಳನ್ನೆಲ್ಲ ದಾಖಲಿಸಿ ಅವುಗಳ ಮೂಲಕವೇ ಹರಿ–ಹರ ಸಮಾನತೆ ಸಾಧಿಸಿರುವುದು. 'ಹರನೆಂದರೂ ಒಂದೆ ಹರಿ ಎಂದರೂ ಒಂದೆ', ಉಮಾಧವನೊ ರಮಾಧವನೊ' ಎಂಬ ರೀತಿಯಲ್ಲಿ ಮೊದಲು ಹರನೆನಿಸಿದ್ದರೂ ನಂತರ ಹರಿಯಾಗಿ ರಂಗನಾಥನ ರೂಪದಲ್ಲಿ ತಿರುಪತಿಯ ಶ್ರೀನಿವಾಸನೇ ಇಲ್ಲಿ ನೆಲೆಸಿದ್ದಾನೆಂದು ಹೇಳುತ್ತಾರೆ.

ಮಾವಿನಕೆರೆ ಹಾಸನ ಜಿಲ್ಲೆ ಹೊಳೆನರಸಿಪುರ ತಾಲೂಕಿನಲ್ಲಿ ಹೇಮಾವತಿ ನದಿ ತೀರದಲ್ಲಿರುವ ಸುಂದರ ಹಳ್ಳಿ, ಪಕ್ಕದ ಬೆಟ್ಟದಮೇಲೆ ಈ ರಂಗನಾಥ ಕ್ಷೇತ್ರವಿದೆ. ಅಲ್ಲಿಯ ಮೂಲವಿಗ್ರಹ ಕೇವಲ ಒಂದು ಗೂಡು, ಹೊರಳು ಕಲ್ಲಿನಲ್ಲಿ ಇರುವ ಗುಂಡಪ್ಪ. ಇದನ್ನೂ ಮೊದಲು ಜನ ಶಿವವೆನ್ನುತ್ತಿದ್ದದ್ದೂ; ನಂತರ

ಪಂದ್ಯವೇರ್ಪಟ್ಟಿದ್ದು ಮಾರುತಿ ಕಾಣಿಸಿಕೊಂಡು ರಂಗನಾಥನಾದದ್ದು; ಭಕ್ತಾದಿಗಳು ಹರಕೆಹೊತ್ತು ಇಷ್ಟಾರ್ಥ ಪಡೆಯುವುದು, ಹರಕೆ ಈಡೇರಿಸದಿದ್ದರೆ ತೊಂದರೆ ಯಾಗುತ್ತಿದ್ದ ಘಟನೆಗಳ ದಂತ ಕಥೆಗಳು ಇವನ್ನೆಲ್ಲ ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ಮಾಂಗಿರಿರಂಗನನ್ನು ಭಕ್ತಿ ಪೂರ್ವಕವಾಗಿ ಮಧುರವಾಗಿ ಸ್ತುತಿಸಿದ್ದಾರೆ.

'ರಂಗಗಿರಿಯನೇರಿಬರುವ ತಂಗಿಬರುವೆಯಾ'
'ಪವಮಾನಾತ್ಮ ಚರಣಂ, ಮಾಂಗಿರಿನಿಲಯ ಹನುಮಂತಂ'
'ನೀನಿಲ್ಲದೆನಗಾರೊ ಮಾಂಗಿರಿಯ ರಂಗ'
'ಏಕೆ ಗಿರಿಯಲ್ಲಿ ನೆಲೆಸಿದೆಯೋ ರಂಗ'
'ಎಲ್ಲಿರುವೆ ಬಾರಂಗ ಬಾ ಮೋಹನಾಂಗ'

ಮುಂತಾದ ಕೀರ್ತನೆಗಳು ಸುಮಧುರವಾಗಿವೆ.

'ನಮ್ಮೂರ ದ್ಯಾವರೆ ಬೊಮ್ಮನಪ್ಪನು ಎಂದು
ಹೊಯ್ಯರೋಡಂಗುರವ'

ಎಂಬ ಕೃತಿಯಲ್ಲಿ ಗ್ರಾಮ್ಯ ಸಾಮೂಹಿಕ ಪ್ರಚಾರ ಕ್ರಿಯೆಯಿಂದ ಡಂಗುರ ಸಾರುವ ಪ್ರತಿಮೆಯನ್ನು ಬಳಸಿಕೊಂಡು ಧರ್ಮ ಸಮನ್ವಯವನ್ನು ಆ ಮೂಲಕ ಏಕದೈವ ನಂಬಿಕೆಯಾದ ಸರಳ ತತ್ವವನ್ನು ಸಾರುವ ರೀತಿಯ ಶೈಲಿ ಸೊಗಸಾಗಿದೆ.

೯. **ಸಂಪ್ರದಾಯದ ಹಾಡುಗಳು:** ಈ ವಿಭಾಗದಲ್ಲಿ ದೇವರನ್ನು ಏಳಿಸುವ ಜೋಜೋ, ಆರತಿಯ, ಮಂಗಳ ಕೋರುವ ೧೫ ಹಾಡುಗಳನ್ನೂ ಸೇರಿಸಲಾಗಿದೆ. ಇವುಗಳೆಲ್ಲ ಹಾಡಲು ಉತ್ತಮ ಸಾಹಿತ್ಯದಿಂದ ಕೂಡಿದ್ದು ಲಯಬದ್ಧವಾಗಿವೆ. ಹಾಡಿನ ಸಂಪ್ರದಾಯವೂ ಇದೆ. ಇದರಲ್ಲಿ 'ಜೋಜೋ ಗುಂಡ ಪರಮ ಪ್ರಚಂಡ' ಎಂಬುದು ಗಮನ ಸೆಳೆಯುವ ಹಾಡಾಗಿದೆ. ಇದು ಮೇಲ್ನೋಟಕ್ಕೆ ಮನೆಗಳಲ್ಲಿ ಬಹೂಪಯೋಗಿ ಬಳಕೆಗೆ ಬಳಸುವ ಗುಂಡು ಕಲ್ಲೊಂದನ್ನು ಕುರಿತದ್ದು ಎನಿಸಿದರೂ ವಾಸ್ತವವಾಗಿ ಮಾಂಗಿರಿರಂಗನನ್ನು ಕುರಿತದ್ದು. ಮಾವಿನಕೆರೆಯ

ರಂಗನಾಥ ಹೊರಳುಕಲ್ಲಿನ ಪೀಠದಲ್ಲಿ ಗುಂಡುಕಲ್ಲಿನ ರೂಪದಲ್ಲಿರುವುದರಿಂದ ಅವನನ್ನು ದಿನಬಳಕೆಯ ಗುಂಡುಕಲ್ಲಿನಲ್ಲಿ ಕಲ್ಪಿಸಿ ಸಂಪ್ರದಾಯದ ಗೀತೆಯನ್ನಾಗಿ ರಚಿಸಲಾಗಿದೆ. ಪಾಮರನಿಗೆ ದೈವಸಹಾಯ, ದೈವದ ಆಸರೆ ಈ ಗುಂಡುಕಲ್ಲಿನಷ್ಟೇ ಆಪ್ತ, ಆಪದ್ಬಾಂಧವ ಮತ್ತು ನಿತ್ಯೋಪಯೋಗಿ ಎಂಬ ಚಿಂತನೆಯನ್ನು ಈ ಕವಿತೆಯಲ್ಲಿ ಬೆಳೆಸಿರುವುದು ವಿಶೇಷ.

೧೦. ವಿಶೇಷ ಸಂದರ್ಭದ ಹಾಡುಗಳು: ಈ ವಿಭಾಗದಲ್ಲಿ ಮಾವಿನಕೆರೆಯ ರಂಗನಾಥನ ಜಾತ್ರೆಯನ್ನು ಕುರಿತ ಎರಡು ಹಾಡುಗಳನ್ನೂ 'ತತ್ವಪದ'ವೆಂದು ಗುರುತಿಸಿರುವ ಒಂದು ಹಾಡನ್ನೂ ಸೇರಿಸಿದೆ. 'ರಂಗನ ತೇರಿಗೆ ಬನ್ನಿರೋ' ಎನ್ನುವುದು ಅದ್ಭುತವಾದ ಜಾತ್ರೆಯ ವರ್ಣನೆಯನ್ನು ಬಿಡಿಸಿಡುವ ಸಾಂದರ್ಭಿಕ ಹಾಡು. ತೇರನ್ನು ಕಣ್ಣಾರೆ ನೋಡಿರುವ ದಾಸರು ತಾವು ಕಂಡಿದ್ದನ್ನು ಜೊತೆಗೆ ಜನ ಹೇಳುತ್ತಿದ್ದುದನ್ನು ಕಣ್ಣಿಗೆ ಕಟ್ಟುವಂತೆ ಸೊಗಸಾದ ಶೈಲಿಯಲ್ಲಿ ಕಡೆದಿಟ್ಟಿದ್ದಾರೆ. ಗ್ರಾಮ್ಯ ಶೈಲಿಯಲ್ಲಿ, ಜಾನಪದ ಹಾಡಿನಂತೆ ಸಾಗುವ ಈ ಹಾಡು ಒಂದು 'ವೀಕ್ಷಕ ವಿವರಣೆ' ಯಂತೆ ಭಾಸವಾಗುತ್ತದೆ. ದ್ವಿಪದಿಯಲ್ಲಿ ಸಾಗುವ ಈ ಕವಿತೆಯನ್ನು ಲಾವಣಿಯ ರೂಪದಲ್ಲೂ ಹಾಡಲು ಅನುಕೂಲವಾಗಿದೆ..

'ತೇರಿನ ಗದ್ದುಗೆ ಬಂಗಾರ ತೋರಗಲ್ಲಪ್ಪ ಅಲಂಕಾರ
ಹಾರುವರ ಬಾಯಲ್ಲಿ ಓಂಕಾರ ರಂಗಪ್ಪಂಗಾಗ್ಯೆತೆ ಸಿಂಗಾರ'
'ಕೊಂಬು ತಮಟೆ ಭೇರಿ ಬಡಿತವ್ರೆ ಇಂಬಾಗಿ ಹರ್ಜಿಯ ಹಿಡಿದವ್ರೆ'
'ಅಕ್ಕೊ ಬಂತು ರಂಗಪ್ಪನ ತೇರು ತಕ್ಕೋ ಹಣ್ಕಾಯಿ ಎಂಬೋರು ಕೆಲರು'

ಮುಂತಾಗಿ ಆಕರ್ಷಣೀಯವಾಗಿ ಲಗುಬಗೆಯಿಂದ ಬೆಳೆಯುವ ಈ ಕೃತಿಯಲ್ಲಿ ಸ್ಥಳೀಯವಾಗಿ ಕರೆಯುವ ತೇರು ಪದದ ಪರ್ಯಾಯ ಶಬ್ದ 'ಕುರ್ಜು' ಎಂಬುದಕ್ಕೆ ದಾಸರು 'ಹೂರ್ಜಿ' ಎಂದೂ ಉತ್ಸವ ಎಂಬುದನ್ನು 'ಉಬ್ಬುವ' ಎಂದೂ ದಾಖಲಿಸಿದ್ದಾರಾದರೂ ಸ್ಥಳ ಪರಿಶೀಲನೆಯಲ್ಲಿ ಸ್ಥಳೀಯರ ಉಚ್ಚಾರಣೆಯಲ್ಲಿ ಈ ರೂಪದ ಪದಗಳು ಬಳಕೆಯಿಲ್ಲದುದು ಕಂಡು ಬಂದಿದೆ.

ಇನ್ನೊಂದು ಕವಿತೆ 'ರಂಗಪ್ಪ ಬಂದವ್ನೆ ಬಾಗಿಲಲ್ಲಿ ನಿಂದವ್ನೆ' ಕೂಡ ಇದೇ ತೆರನ ಸ್ಥಳೀಯ ಘಟನೆಯನ್ನಾಧರಿಸಿದ ಕೃತಿ. ಅದು ತೇರಿನ ವರ್ಣನೆಯಾದರೆ ಇದು ಉತ್ಸವದ ವರ್ಣನೆ. ದೇವರನ್ನು ವಿವಿಧ ಅಲಂಕಾರಗಳಲ್ಲಿ ಅಲಂಕರಿಸಿ ಮನೆಮನೆಗೆ ಬೀದಿಬೀದಿಗಳಿಗೆ ಉತ್ಸವ ಮೂರ್ತಿಯನ್ನು ಹೊತ್ತು ತರುವ ಸಂಪ್ರದಾಯ ಎಲ್ಲ ದೇವಾಲಯಗಳಲ್ಲೂ ಉಂಟು. ಅಂಥದೇ ಒಂದು ಸಂದರ್ಭದ ಉತ್ಸವದೇವರು ಮನೆಬಾಗಿಲಿಗೆ ಬಂದ ಸಂದರ್ಭದ ಸೃಷ್ಟಿಯಾಗಿ ಈ ಕವಿತೆ ನಿಂತಿದೆ.

ಇದೂ ಸಹ ಸುಂದರ ಜಾನಪದ ಶೈಲಿಯಲ್ಲಿದ್ದು ಇಲ್ಲಿಯೂ ದೇವರು ಅವನ ಮೆರವಣಿಗೆ, ಆಕಾಲದ ಸಂಭ್ರಮ, ಚಟುವಟಿಕೆಗಳು ಕಣ್ಣಮುಂದೆ ನಿಂತಂತಹ ನೇರ ನಿರೂಪಣಾ ಶೈಲಿಯ ವಿವರಣೆಯಿದೆ. ಈ ಉತ್ಸವ ಮೂರ್ತಿಯನ್ನು ದಾಸರು ಆಕರ್ಷಣೀಯವಾದ ರೀತಿಯಲ್ಲಿ ದಶಾವತಾರದಲ್ಲಿ ಚಿತ್ರಿಸುತ್ತಾ ಬರುತ್ತಾರೆ.

ಕೊನೆಯ ಕೃತಿ ಒಂದು ತತ್ವಪದದಂತಿದೆ. ಇದರಲ್ಲಿ ಹಿಂಗು, ಹಂಗು ಪದಗಳನ್ನು ಚಮತ್ಕಾರವಾಗಿ ಬಳಸಿ ಅದರಲ್ಲೇ ತಾತ್ವಿಕ ಚಿಂತನೆಯನ್ನು ತುಂಬಿದ್ದಾರೆ.

'ಹಿಂಗಿಪ್ಪವನಿಗೆ ಕೈಲಾಸ ಹಿಂಗಿಲ್ಲದವನಿಗೆ ವನವಾಸ'
'ಸಂಸಾರದೊಳತಿ ಮುಳುಗಬೇಡಣ್ಣ ಹಂಸತಾವರೆಯಂತಿರಬೇಕಣ್ಣ'

ಮುಂತಾದ ಸಾಲುಗಳಲ್ಲಿ ಸರಳವಾಗಿಕಂಡರೂ ಅಗಾಧವಾದ ದಾರ್ಶನಿಕತೆಯನ್ನು ಬೆಳೆಸುತ್ತಾರೆ. ತತ್ತ್ವಪದದ ಧಾಟಿಯಲ್ಲೆ ಆತ್ಮೀಯವಾಗಿ ಹೇಳುವಂತೆ ಸಾಗುವ ಈ ಕೃತಿ ದಾಸರ ಆಧ್ಯಾತ್ಮಸಾಧನೆಗೆ ಸಾಕ್ಷಿಯಾಗಿದೆ.

ಆಸೂರಿಯವರನ್ನು ಕುರಿತು ಎರಡು ಕೃತಿಗಳು ರಚನೆಯಾಗಿವೆ. ಆಸೂರಿಯವರಿಗೆ ಅನೇಕ ಜನ ಶಿಷ್ಯರಿರುವುದೂ ಕಂಡುಬಂದಿದೆ. ಸನಾತನ ಧರ್ಮಸಭಾದ ಸಂಸ್ಥಾಪಕ ಕವಿ, ಗಮಕಿ ಎಸ್. ಕೌಶಿಕ್, ಕಾವ್ಯ ಪ್ರಚಾರ ಮಂಡಲಿಯ

ಸಂಸ್ಥಾಪಕ ಆರ್. ಶಂಕರನಾರಾಯಣ್, ಕೃಷ್ಣಗಿರಿ ಮುರಳೀಧರ (ಹರಿಕಥಾವಿದ್ವಾಂಸ), ಬನ್ನೂರಿನ ಗಮಕಿ ಎಚ್ ಸೂರ್ಯನಾರಾಯಣಪ್ಪ ಮುಂತಾದವರನ್ನು ಹೆಸರಿಸಬಹುದು. ಗಮಕಕ್ಕೆ ಮತ್ತು ಹರಿಕಥೆಗೆ ಅನ್ವಯವಾಗುವ ಭಕ್ತಿ ಕಾವ್ಯಗಳನ್ನು ಬರೆದಿರುವುದು ಮತ್ತು ಅನೇಕ ಶಿಷ್ಯರಿಗೆ ಪ್ರೋತ್ಸಾಹ ನೀಡಿ ಸ್ವತಃ ದಾಸರೇ ಬೆಳೆಸಿರುವುದು ಇದಕ್ಕೆ ಕಾರಣವಾಗಿದೆ. ದಾಸರ ಮಗಳು ವೇದವಲ್ಲಿ ಮತ್ತು ಇನ್ನು ಕೆಲವರು ಬಂಧುಗಳೂ ಇವರ ಶಿಷ್ಯರಾಗಿ ಕೀರ್ತನಸಾಹಿತ್ಯವನ್ನು ಪ್ರಚಾರಮಾಡುತ್ತಿದ್ದಾರೆ. ಇಲ್ಲಿ ಅನುಬಂಧದಲ್ಲಿರುವ ಎಚ್. ಸೂರ್ಯನಾರಣಪ್ಪನವರ 'ಪದ್ಯರತ್ನಮಾಲಿಕಾ' ಮತ್ತು ಆರ್. ಶಂಕರನಾರಾಯಣ್‌ರ 'ಚರಮಪಂಚರತ್ನ ಪದ್ಯಮಾಲಿಕಾ' ಎರಡೂ ಷಟ್ಪದಿ ರೂಪದಲ್ಲಿವೆ. ಈ ಎರಡೂ ಕೃತಿಗಳಲ್ಲೂ ದಾಸರನ್ನು ಅತ್ಯಂತ ಗೌರವದಿಂದ ಧನ್ಯತೆಯ ಭಾವದಿಂದ ಗುರುಸ್ಥಾನದಲ್ಲಿ ಸ್ತುತಿಸಲಾಗಿದೆ. 'ಇವಗೆ ಮಣಿವುದೆ ಬೆಲ್ಲ ಹರಿಚಿಂತನೆಯ ಬಲ್ಲ ದಿವರಾತ್ರಿ ಸಂತೃಪ್ತಿ' 'ಸರಳಕವಿ ಎಂದೆನಿಸಿ ರಂಜಿಪ ಪರಮಭಕ್ತನಿಗಿಂದು ವಂದಿಸಿ ವರಕವಿಗೆ ಕವಿರತ್ನನೆನ್ನುವ ಬಿರುದನೀವೆವು' ಎಂಬಂತಹ ಗೌರವವನ್ನು ಶಿಷ್ಯರ ಮೂಲಕ ಪಡೆಯುವಂತಹ ಪ್ರಮುಖರಾಗಿ ಸರಳಕವಿರತ್ನ ಆಸೂರಿ ರಾಮಸ್ವಾಮಿ ಅಯ್ಯಂಗಾರ್ಯರು ನಿಲ್ಲುತ್ತಾರೆ.

(ಉ) ಕೀರ್ತನಗಳ ಆಕರ

ಈ ಸಂಪುಟದ ಸಂಪಾದನೆಗೆ ಬಳಸಿರುವ ಆಕರ ಸಾಮಾಗ್ರಿ ಎಂದರೆ ಏಕೈಕ ಹಸ್ತಪ್ರತಿ ಕವಿ ಆಸೂರಿ ರಾಮಸ್ವಾಮಿ ಅಯ್ಯಂಗಾರ್ ಅವರ ಮಗಳು ಶ್ರೀಮತಿ ವೇದವಲ್ಲಿ (ಸುಮಾರು ಎಪ್ಪತ್ತು ವರ್ಷ) ಅವರ ಬಳಿಯಿದ್ದ ಕೈಬರಹದ ಕಾಗದದ ಹಸ್ತಪ್ರತಿ. ಇದರಲ್ಲಿ ೪೫೫ ಹಾಡುಗಳಿದ್ದು ಮೂರು ನಾಲ್ಕು ಜನರು ಬರೆದಿರುವ ಬೇರೆ ಬೇರೆ ಬರವಣಿಗೆಯಿದೆ. ಶ್ರೀಮತಿ ವೇದವಲ್ಲಿಯವರ ಹೇಳಿಕೆಯ ಪ್ರಕಾರ ದಾಸರ ಸೊಸೆಯಂದಿರಾದ ಶ್ರೀಮತಿ ಕಮಲಮ್ಮನವರು ಬರೆದಿದ್ದೆಂದೂ ಅವರೇ ಬರೆದಿದ್ದ ಹಳೆಯ ಹಸ್ತಪ್ರತಿ ಸಂಪೂರ್ಣ ಜೀರ್ಣಾವಸ್ಥೆಗಿಳಿದಾಗ ಅದರಿಂದ ಈ

ಹಸ್ತಪ್ರತಿಯನ್ನು ನಕಲುಮಾಡಲಾಯಿತೆಂದೂ ಅಭಿಪ್ರಾಯವಿದೆ. ಹೀಗೆ ನಕಲು ಮಾಡುವಾಗ ಇಬ್ಬರು-ಮೂವರು ಬರೆದಿರುವ ಸಾಧ್ಯತೆಯಿದೆ. ಹಸ್ತಪ್ರತಿ ಸುಸ್ಥಿತಿಯಲ್ಲಿದ್ದರೂ ಅನೇಕ ಕಡೆ ಅಕ್ಷರಗಳು ಅಸ್ಪಷ್ಟವಾಗಿ ಪಠ್ಯ ಸ್ಪಷ್ಟವಾಗುವುದಿಲ್ಲ. ಅನೇಕ ಕೀರ್ತನೆಗಳಲ್ಲಿ ಸಾಲುಗಳನ್ನು, ಪದಗಳನ್ನು ಬಿಟ್ಟು ಪ್ರತಿಮಾಡಿರುವಂತೆ ತೋರುತ್ತದೆ. ಹಸ್ತಪ್ರತಿಯಲ್ಲಿ ಕೀರ್ತನೆಗಳ ಪಾದಗಳನ್ನು ಸರಿಯಾಗಿ ನಿರ್ದೇಶಿಸಿರುವುದಿಲ್ಲ. ಅನೇಕ ಕಡೆ ಕೆಲವು ನುಡಿಗಳು, ಕೆಲವು ಕೀರ್ತನೆಗಳೇ ಅಸಮಗ್ರವಾಗಿವೆ.

ಈ ಹಸ್ತಪ್ರತಿಯೊಂದಿಗೆ ಇದರಲ್ಲಿಲ್ಲದ ಡಾ. ಅನಂತಪದ್ಮನಾಭರಾವ್ ಅವರ ಮೂಲಕ ಬಂದಿರುವ ಮೈಸೂರಿನ ಪ್ರಣತಾರ್ಥಿಹರನ್ ಅವರ ಹಸ್ತಪ್ರತಿ ಯೊಂದರಲ್ಲಿ 'ಬಾರೈ ನಂದನಕಂದನೆ'(೧೩೮) ಎಂಬ ಒಂದೇ ಒಂದು ಕೀರ್ತನೆ ಲಭ್ಯವಾಗಿದೆ.

ದಾಸರ ಜೀವಿತಾವಧಿಯಲ್ಲೇ ಪ್ರಕಟವಾಗಿದ್ದ 'ಹರಿಭಜನ ಕುಸುಮ ವಲ್ಲರಿ' ಭಾಗ-೧, ೨ ಮತ್ತು ಸಾಯಿಭಜನಾವಳಿಗಳ ಪುಸ್ತಕಗಳು ಹಲವು ಪ್ರಯತ್ನಗಳ ನಂತರವೂ ಲಭ್ಯವಾಗಲಿಲ್ಲ. 'ಭಜನವಲ್ಲರಿ' ಎನ್ನಬಹುದಾದ ಕೃತಿಯೊಂದು (ಹೆಸರೂ ಸ್ಪಷ್ಟವಿಲ್ಲ. ಶೀರ್ಷಿಕೆ ಪುಟ, ಮುಖಪುಟ, ಹಲವುಹಾಳೆಗಳು ಇಲ್ಲ) ಈಚೆಗೆ ಶ್ರೀಮತಿ ವೇದವಲ್ಲಿಯವರ ಹಳೆಯ ಪುಸ್ತಕಗಳ ಸಂಗ್ರಹದಲ್ಲೇ ದೊರೆಯಿತಾದರೂ ಅದರಲ್ಲಿರುವ ಕೃತಿಗಳೆಲ್ಲ ಬಹುಮಟ್ಟಿಗೆ ಸಾಯಿಭಜನೆಗಳು, ಸ್ತೋತ್ರ, ನಾಮಾವಳಿಗಳಾಗಿದ್ದು ಈ ಸಂಪುಟದಲ್ಲಿಲ್ಲದ ಹಾಡುಗಳಾಗಿದ್ದರೂ ಈ ಪುಸ್ತಕದ ಹಾಡುಗಳು ಅಸಮಗ್ರವಾಗಿದ್ದದ್ದರಿಂದ ಈ ಸಂಪುಟದಲ್ಲಿ ಸೇರಿಸಲಾಗಿಲ್ಲ. ಆದರೆ ಓದುಗರ ಅನುಕೂಲಕ್ಕಾಗಿ ಅದರಲ್ಲಿರುವ ಹಾಡುಗಳ ಮೊದಲ ಸಾಲುಗಳನ್ನು ನೀಡಲಾಗಿದೆ. ಹರಿಭಜನ ಕುಸುಮವಲ್ಲರಿಯ ಹಾಡುಗಳು ದೊರೆತ ನಂತರ ಈ ಹಾಡುಗಳನ್ನು ಪರಿಷ್ಕರಿಸಬಹುದಾಗಿದೆ.

ವೇದವಲ್ಲಿಯವರ ಮೂಲಕ ಬಂದಿರುವ ಹಸ್ತ ಪ್ರತಿಯಲ್ಲಿರುವ ಅನೇಕ ಹಾಡುಗಳು ಹಾಡಿನ ಸಂಪ್ರದಾಯದಲ್ಲೂ ಇವೆ. ಶ್ರೀಮತಿ ವೇದವಲ್ಲಿ ಅವರೇ ಹಾಡಿದ್ದು ಹಾಡುಗಾರಿಕೆಗೂ ಹಸ್ತಪ್ರತಿ ಸಾಹಿತ್ಯಕ್ಕೂ ಗುರುತರವಾದ ಯಾವ

ವ್ಯತ್ಯಾಸವೂ ಕಂಡು ಬರದಿರುವುದನ್ನು ಗಮನಿಸಿದರೂ ಹಸ್ತಪ್ರತಿಯನ್ನು ಸಿದ್ಧಪಡಿಸುವಾಗ ಈ ಹಾಡಿನ ಸಂಪ್ರದಾಯದ ಧಾಟಿಯನ್ನೂ ಗಮನಿಸಿದೆ.

(೧) **ಪಾಠಪರಿಷ್ಕರಣ:** ಅನ್ಯಪ್ರತಿಗಳು ಇಲ್ಲದ ಕಾರಣ ಪಾಠ ಪರಿಷ್ಕರಣ ಕಾರ್ಯ ಒಂದು ರೀತಿಯಲ್ಲಿ ಸುಲಭವೂ ಇನ್ನೊಂದು ರೀತಿಯಲ್ಲಿ ಕ್ಲಿಷ್ಟವೂ ಆಗಿದೆ. ಪಾಠಾಂತರ ಸೂಚನೆ, ಕವಿಪಾಠ ಆಯ್ಕೆ ಮುಂತಾದ ಪ್ರಕ್ರಿಯೆಗಳಿಲ್ಲದಿರುವುದು ಸುಲಭವಾದರೆ ಕ್ಲಿಷ್ಟತೆ, ಅನುಮಾನಬಂದಕಡೆ ಮತ್ತು ಪಾಠ ಲುಪ್ತವಾಗಿರುವ ಕಡೆ ಕವಿಪಾಠ ನಿಷ್ಕರ್ಷೆಗೆ ತೊಡಕಾಗಿರುವುದು ಕಷ್ಟ. ಸಾಮಾನ್ಯವಾದ ಭಾಷಾ ದೋಷಗಳನ್ನು, ವ್ಯಾಕರಣ ದೋಷಗಳನ್ನು, ಗ್ರಾಮ್ಯ ಶೈಲಿ ಮತ್ತು ತತ್ತ್ವಪದ ರಚನೆಗಳ ಜಾನಪದ ಧಾಟಿಯಿರುವ ಕಡೆ ಬಿಟ್ಟು ಉಳಿದೆಲ್ಲ ಕಡೆ ತಿದ್ದುವ ಸ್ವಾತಂತ್ರ್ಯ ವಹಿಸಲಾಗಿದೆ.

ಸಾಲುಗಳು ಮತ್ತು ಪದಗಳು ಬಿಟ್ಟುಹೋಗಿರುವ ಕಡೆ ಸಾಧ್ಯವಾದೆಡೆಗಳಲ್ಲಿ ಮತ್ತು ಸಂದರ್ಭಾನ್ವಯ – ಮಾಡಬೇಕಾದ ಅಗತ್ಯ ಕಂಡುಬಂದ ಕೆಲವು ಕಡೆ ಸಂಪಾದಕನ ಪರಿಣತಿಯ ಮಿತಿಯಲ್ಲಿ ಊಹಾಪಾಠಗಳನ್ನು ಕೊಡಲಾಗಿದೆ. ಅಂತಹ ಊಹಾಪಾಠಗಳನ್ನೆಲ್ಲ ಚೌಕ ಕಂಸಗಳಲ್ಲಿ ನೀಡಲಾಗಿದೆ. ಕೂಡಿದ ಮಟ್ಟಿಗೂ ಇಂತಹ ಸಂದರ್ಭಗಳಲ್ಲಿ ಹಾಡಿನ ಸಂಪ್ರದಾಯದ ನೆರವನ್ನೂ ವೇದವಲ್ಲಿಯವರು ನೀಡಿದ ತಿದ್ದುಪಡಿಗಳ ನೆರವನ್ನೂ ಬಳಸಿಕೊಳ್ಳಲಾಗಿದೆ.

ಇನ್ನೂ ಕೆಲವುಕಡೆ ಸಂದರ್ಭ ಸನ್ನಿವೇಶಕ್ಕೆ ಅನ್ವಯವಾಗದ ಕವಿಪಾಠಗಳನ್ನು ಸ್ವಾತಂತ್ರ್ಯವಹಿಸಿ ಸಂದರ್ಭಾನ್ವಯದ ಉದ್ದೇಶದಿಂದ ಮಾತ್ರ ಬದಲಾಯಿಸಲಾಗಿದೆ. (ಉದಾ: 'ವೃತ್ರಾಸುರ'ವನ್ನು 'ಭಸ್ಮಾಸುರ' ಎಂದಾಗಿಸಿರುವುದು). ಇಂತಹ ಸಂದರ್ಭಗಳನ್ನೆಲ್ಲ ತಪ್ಪದೆ ಟಿಪ್ಪಣಿಗಳಲ್ಲಿ ವಿವರಿಸಲಾಗಿದೆ.

ಈ ಒಂದೆರಡು ಬದಲಾವಣೆಗಳನ್ನು ಬಿಟ್ಟು ಉಳಿದಂತೆ ಯಾವ ಬದಲಾವಣೆಗೂ ಕೈಹಾಕದೆ ಹಸ್ತಪ್ರತಿಯ ಪಾಠವನ್ನೇ ಕವಿಪಾಠವೆಂದು ಸ್ವೀಕರಿಸಿ ಯಥಾವತ್ತಾಗಿ ನೀಡಲಾಗಿದೆ. ಹರಿಭಜನಕುಸುಮವಲ್ಲರಿಯಲ್ಲಿರುವವೆಂದು ಹಾಡುವ ಹಾಡುಗಳನೇಕವು ಈ ಹಸ್ತಪ್ರತಿಯಲ್ಲೂ ಇರುವುದರಿಂದ ಆ ಗ್ರಂಥದ ಮುದ್ರಿತ

ಪ್ರತಿ ದೊರೆತಾಗ ಕೆಲವು ಕ್ಲಿಷ್ಟ ಮತ್ತು ಊಹಾಪಾಠಗಳು ತಿದ್ದುಪಾಟು ಪಡೆಯುವ ಸಾಧ್ಯತೆಯಿಲ್ಲದಿಲ್ಲ. ನಮ್ಮ ಎಲ್ಲ ಪ್ರಯತ್ನ ಪರಿಹಾರಗಳು ಮೀರಿ ಗೊಂದಲಗಳು ಕ್ಲಿಷ್ಟತೆಗಳು ಉಳಿದ ಒಂದೆರಡು ಕಡೆ ಸಮಸ್ಯೆಯಿದೆ ಎಂದು ಸೂಚಿಸಲು(?) ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿ ಕೈಬಿಡಲಾಗಿದೆ.

ಇದಕ್ಕಿಂತ ಹೆಚ್ಚಿಗೆ ಈ ಹಸ್ತಪ್ರತಿಯನ್ನು ಪರಿಷ್ಕರಿಸುವ ಅಗತ್ಯ ಕಂಡುಬಂದಿಲ್ಲ. ಓದುಗರಿಗೆ ಅಂತಹ ಅಗತ್ಯಸೂಚನೆಗಳು ಗಮನಕ್ಕೆ ಬಂದಲ್ಲಿ, ಮೂಲ ಆಕರ ದೊರೆತಲ್ಲಿ ತಿಳಿಸಿದರೆ ಮುಂದಿನ ಮುದ್ರಣದಲ್ಲಿ ತಿದ್ದಿ ಪರಿಷ್ಕರಿಸಲು ಅನುಕೂಲವಾಗುತ್ತದೆ.

೨. **ಹಸ್ತಪ್ರತಿವಿಚಾರ** : ನಾನು ಶ್ರೀವೈಷ್ಣವ ಕೀರ್ತನೆಗಳನ್ನು ಕೀರ್ತನೆಕಾರರನ್ನು ಶೋಧಿಸುವ ಕಾರ್ಯದಲ್ಲಿರುವಾಗ ನನ್ನ ಪತ್ರಿಕಾ ಪ್ರಕಟನೆಯನ್ನು ಗಮನಿಸಿ ತಕ್ಷಣ ಪ್ರತಿಕ್ರಿಯಿಸಿ ಆಸೂರಿರಾಮಸ್ವಾಮಯ್ಯಂಗಾರ್ಯರ ಬಗೆಗೆ ಹೆಚ್ಚಿನ ಮಾಹಿತಿ ನೀಡಿದ ಅವರ ಮಗಳು ವೇದವಲ್ಲಿಯವರ ಮನೆ ವಿಳಾಸ, ದೂರವಾಣಿ ಸಂಖ್ಯೆಗಳನ್ನು ನೀಡಿ ಉಪಕರಿಸಿದ ಶ್ರೀಕೃಷ್ಣಗಿರಿ ಮುರಳೀಧರ ಅವರನ್ನು ಮೊದಲಿಗೆ ಸ್ಮರಿಸಬೇಕಾಗುತ್ತದೆ. ಅವರ ಸಕಾಲಿಕ ನೆರವು-ಸೂಚನೆ ದೊರೆಯದಿದ್ದರೆ ಇಂತಹ ಒಬ್ಬ ಮುಖ್ಯ ಹರಿದಾಸರ ಮಾಹಿತಿಯೇ ಹೊರಬರುತ್ತಿರಲಿಲ್ಲ, ಈ ಸಂಪುಟ ಸಿದ್ಧವಾಗುತ್ತಿರಲಿಲ್ಲ. ಆದ್ದರಿಂದ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಕೃಷ್ಣಗಿರಿಯವರ ಸೂಚನೆಯ ಎಳೆ ಹಿಡಿದು ವಿಳಾಸ ಪತ್ತೆ ಮಾಡಿ ಮನೆಗೆ ಹೋದಾಗ ಮೊದಮೊದಲು ಅನುಮಾನಿಸಿದರೂ ಅನಂತರ ಅತ್ಯಂತ ವಿಶ್ವಾಸದಿಂದ, ಅಭಿಮಾನದಿಂದ ನನ್ನ ಫೋನ್ ಕರೆ, ಭೇಟಿಯಾದಾಗಲೆಲ್ಲ ಬೇಸರಿಸದೆ ನನಗೆ ಬೇಕಾದ ಎಲ್ಲ ಮಾಹಿತಿಗಳನ್ನೂ ನೀಡಿದ್ದಲ್ಲದೆ, ತಮ್ಮಲ್ಲಿರುವ ಎಲ್ಲ ದಾಖಲೆಗಳನ್ನೂ ಹುಡುಕಿ ಅವುಗಳ ನಕಲುಪ್ರತಿ ನೀಡಿ ಸಹಕರಿಸಿದ ಶ್ರೀಮತಿ ವೇದವಲ್ಲಿಯವರ ಮಗಳು ಶ್ರೀಮತಿಯವರನ್ನು ನಾನು ಇಲ್ಲಿ ವಿಶೇಷವಾಗಿ ಸ್ಮರಿಸಬೇಕಾಗಿದೆ. ಹೆಚ್ಚಿನ ಪರಿಚಯವಾದ ನಂತರ ಅವರು ನಮ್ಮ ಕಾಲೇಜಿನ ಹಳೆಯ ವಿದ್ಯಾರ್ಥಿನಿಯೆಂದು ಗೊತ್ತಾದ ಮೇಲೆ ಇನ್ನೂ ಹೆಚ್ಚು ಪ್ರೀತಿಯಿಂದ ಸಹಕರಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಶ್ರೀಮತಿ ವೇದವಲ್ಲಿಯವರನ್ನಂತೂ ಮರೆಯುವ ಹಾಗೇ ಇಲ್ಲ. ಹಸ್ತಪ್ರತಿ ಒಂದು ತೂಕವಾದರೆ ಅವರು ಇನ್ನೊಂದು ತೂಕ. ಅವರೂ ಒಂದು ಜೀವಂತ ಹಸ್ತಪ್ರತಿಯೇ. ತಮ್ಮ ತಂದೆಯವರ ಎಲ್ಲ ಗುಣ–ಸ್ವಭಾವ–ವ್ಯಕ್ತಿತ್ವ– ಜೀವನದ ಮುಖ್ಯ ಘಟನೆಗಳು ಹಾಡುಗಳ ಹಿನ್ನೆಲೆಗಳು–ವಿಶೇಷ ಸಂದರ್ಭಗಳು ಹೀಗೆ ಹತ್ತು ಹಲವು ಮಾಹಿತಿಗಳನ್ನೂ ನೀಡಿ ಈ ಸಂಪುಟ ಸಿದ್ಧವಾಗಲು ನೆರವಾಗಿದ್ದಾರೆ. ಸಂಪುಟದ ಎಲ್ಲ ಮಾಹಿತಿಗಳಿಗೂ ಅವರೇ ಆಧಾರ. ದಾಸರ ಜೀವನ ವೃತ್ತಾಂತ ಪೂರ್ತಿ ವೇದವಲ್ಲಿಯವರ ಹೇಳಿಕೆಯ ಮೇಲೆ ಸಿದ್ಧವಾಗಿದೆಯಾದರೂ ದಾಸರು ಬರೆದಿರುವ ಕೃತಿಗಳಲ್ಲಿ ತಾವೇ ಹೇಳಿಕೊಂಡಿರುವ ಮುನ್ನುಡಿಗಳ ವಿವರಗಳನ್ನು ನೆರವಿಗೆ ಪಡೆಯಲಾಗಿದೆ. ಶ್ರೀಮತಿ ವೇದವಲ್ಲಿಯವರು ಹಾಡಿನ ಸಂಪ್ರದಾಯವನ್ನು ಬೆಳೆಸಿದ್ದು ತಂದೆಯವರ ಅನೇಕ ಹಾಡುಗಳನ್ನು ತಾವು ಹಾಡುವುದಲ್ಲದೆ ಮಕ್ಕಳಿಗೆ ಕಲಿಸಿದ್ದಾರೆ. ಸಂಗೀತ ಪಾಠಶಾಲೆ ನಡೆಸುತ್ತ ಎಲ್ಲ ವಿದ್ಯಾರ್ಥಿಗಳಿಗೂ ಆಸೂರಿಯವರ ಹಾಡುಗಳನ್ನು ಕಲಿಸುತ್ತ ಬಂದಿದ್ದಾರೆ. ಆದರೂ ಆಸೂರಿಯವರ ಹಾಡುಗಳು ಹೆಚ್ಚು ಜನಪ್ರಿಯವಾಗಲಿಲ್ಲ ಸಾರ್ವಜನಿಕವಾಗಲಿಲ್ಲ. ಯಾವುದೇ ಕೀರ್ತನಕಾರರ ಹಾಡುಗಳಿಗೆ ಹಾಡಿನ ಸಂಪ್ರದಾಯ ಸೃಷ್ಟಿಯಾಗದೆ ಹೋದರೆ ಶಿಷ್ಯಪರಂಪರೆ ಬೆಳೆಯದೆ ಹೋದರೆ ಈ ದಾಸರು ಬೆಳಕಿಗೆ ಬರುವುದೇ ಇಲ್ಲ. ಈವರೆಗಿನ ಶ್ರೀವೈಷ್ಣವ ಹರಿದಾಸರೆಲ್ಲ ಗೋಪ್ಯವಾಗಿದ್ದುದು ಇದೇ ಕಾರಣದಿಂದ. ಸ್ವಲ್ಪ ಮಟ್ಟಿಗಾದರು ತಮ್ಮ ತಂದೆಯವರ ಹಾಡುಗಳಿಗೆ ಪ್ರಚಾರ ಒದಗಿಸುತ್ತ ಬಂದಿರುವ ವೇದವಲ್ಲಿಯವರು ಇಷ್ಟಾದರೂ ಮಾಹಿತಿಯನ್ನು ಉಳಿಸಿಕೊಂಡಿರುವುದು ಕನ್ನಡಿಗರ ಭಾಗ್ಯ, ದಾಸರಪುಣ್ಯ ಎಂದೇ ಹೇಳಬೇಕು. ಏಕೆಂದರೆ ಎಷ್ಟೋ ದಾಸರ ಬಗ್ಗೆ ಅವರ ಬಂಧುವರ್ಗದವರಲ್ಲಿ ಇಷ್ಟೂ ಮಾಹಿತಿಯಿರುವುದಿಲ್ಲ. ಅವರು ಬರೆದಿರುವ ಕೃತಿಗಳು ಯಾವುವೆಂದು ನಮ್ಮನ್ನೇ ವಿಚಾರಿಸುತ್ತಾರೆ. ನನ್ನ ಅನುಭವದಲ್ಲಿ ಇಂತಹ ಮಹನೀಯರುಗಳ ಗಂಡು ಸಂತತಿಗಿಂತ ಹೆಣ್ಣು ಸಂತತಿಯಲ್ಲಿಯೇ ಅಭಿಮಾನ ಉಳಿದಿರುತ್ತದೆ. ಅಷ್ಟೋ ಇಷ್ಟೋ ಮಾಹಿತಿಯನ್ನು ಹೊಂದಿರುತ್ತಾರೆ. ಹೀಗೆ ಅಭಿಮಾನವನ್ನಿಟ್ಟುಕೊಂಡು ಮಾಹಿತಿ ನೀಡಿ ಹಸ್ತಪ್ರತಿ ಒದಗಿಸಿ ಉಪಕರಿಸಿರುವ ಮಾತೃ ಸ್ವರೂಪರಾದ ಶ್ರೀಮತಿ ವೇದವಲ್ಲಿಯವರನ್ನು ಅತ್ಯಂತ ಗೌರವ ಪೂರ್ವಕವಾಗಿ ಸ್ಮರಿಸುತ್ತೇನೆ.

೨. 'ಕೋಸಲಪುರೀಶ'ರು

(ಅ) ಜೀವನ ವಿವರ

ಕೋಸಲಪುರೀಶರ ಹೆಸರು, ಕಾಲ, ಸ್ಥಳ, ಇತಿವೃತ್ತ, ಇತ್ಯಾದಿ ಯಾವ ವಿವರಗಳೂ ಲಭ್ಯವಾಗಿಲ್ಲ. ಕೆಳದಿ ಹಸ್ತಪ್ರತಿಯಲ್ಲಿ ಈ ಅಂಕಿತದ ಹದಿನಾರು ಕೀರ್ತನೆಗಳು ದೊರೆತಿವೆಯಾದರೂ ಕೀರ್ತನಕಾರರ ಬಗೆಗೆ ಅದರಲ್ಲಿ ಯಾವ ಮಾಹಿತಿಯೂ ಇಲ್ಲ. ಆದರೆ ಪ್ರಸಿದ್ಧ ಹರಿದಾಸರ ಕೀರ್ತನೆಗಳೊಂದಿಗೆ ಈ ಕೀರ್ತನೆಗಳೂ ಸ್ಥಾನ ಪಡೆದು ಸ್ವರ ಪ್ರಸ್ತಾರ ಹಾಕಿ ಸಂಗೀತಕ್ಕೆ ಅಳವಡಿಸುವಷ್ಟು ಮುಖ್ಯವಾಗಿರುವುದನ್ನು ಗಮನಿಸಿದರೆ ಇವರೂ ಪ್ರಮುಖ ಹರಿದಾಸರೇ ಆಗಿರುವಂತೆ ತೋರುತ್ತದೆ. ಇವರ ಕೀರ್ತನೆಗಳಲ್ಲಿ ಸ್ಪಷ್ಟವಾಗಿ ಶ್ರೀವೈಷ್ಣವ ತತ್ವ ವ್ಯಕ್ತವಾಗಿರುವುದಲ್ಲದೆ ನೇರವಾಗಿ ಆಳ್ವಾರಾಚಾರ್ಯರನ್ನು ಸ್ತುತಿಸಿರುವ ಕೃತಿಗಳೇ ಇರುವುದರಿಂದ ಇವರು ಶ್ರೀ ವೈಷ್ಣವ ಹರಿದಾಸರೇ ಎನ್ನುವುದರಲ್ಲಿ ಅನುಮಾನವಿಲ್ಲ.

ಇವರ ಕೃತಿಗಳಲ್ಲಿ ಪದೇ ಪದೇ 'ರಂಗಮುನೀಂದ್ರ', 'ರಂಗೇಶ', 'ರಂಗೇಶ್ವರ' ಅಂಕಿತಗಳೂ 'ಕೋಸಲಪುರೀಶ' ದೊಂದಿಗೆ ಕಾಣಿಸಿಕೊಳ್ಳುತ್ತವೆ. 'ಕೋಸಲನಗರ' ಎಂಬುದು ಯಾವ ಕ್ಷೇತ್ರವನ್ನು ಕುರಿತದ್ದು ಎಂಬುದೇನಾದರೂ ವೇದ್ಯವಾದರೆ ಸ್ಥಳಪರಿಶೀಲನೆಯನ್ನು ಮಾಡಿ ದಾಸರ ಬಗೆಗೆ ಹೆಚ್ಚಿನ ವಿವರ ಸಂಗ್ರಹಿಸಬಹುದು. ಯಾವ ಕೀರ್ತನೆಗಳಲ್ಲೂ ವೈಯಕ್ತಿಕ ವಿವರಗಳೂ ದಾಖಲಾಗಿಲ್ಲದಿರುವುದರಿಂದ ಸದ್ಯಕ್ಕೆ ಇದಕ್ಕಿಂತ ಹೆಚ್ಚಿಗೆ ಏನನ್ನೂ ಹೇಳಲು ಸಾಧ್ಯವಿಲ್ಲ.

(ಆ) ಕೀರ್ತನೆಗಳು

ದೊರೆತಿರುವ ೧೬ ಕೃತಿಗಳಲ್ಲಿ ೧೨ ಶ್ರೀಹರಿಯಸ್ತುತಿಗಳೇ ಆಗಿವೆ. ಅದರಲ್ಲೂ ನಾಲ್ಕು ಕೃತಿಗಳು ನೇರವಾಗಿ ರಾಮನನ್ನು ಕುರಿತಿರುವುದಲ್ಲದೆ ಉಳಿದವುಗಳಲ್ಲೂ ರಾಮನ ವಿವಿಧ ಪ್ರತಿಮೆಗಳನ್ನೇ ವಿಶೇಷವಾಗಿ ಬಳಸಿದ್ದಾರೆ. ಇದರಿಂದ ಇವರ ಆರಾಧ್ಯದೈವ ಕೋಸಲಪುರಾಧೀಶ ಶ್ರೀರಾಮನೇ ಆಗಿರಬಹುದೆಂದು ಹೇಳಬಹುದು. ಈ ಕೃತಿಗಳ ಭಾಷೆ ಸಂಸ್ಕೃತ ಭೂಯಿಷ್ಠವಾಗಿದೆ. ಸಂಸ್ಕೃತ ಕೃತಿಗಳೋ ಎನ್ನುವಷ್ಟು

ಸಂಸ್ಕೃತಮಯವಾಗಿವೆ. ಸಾಮಾನ್ಯವಾಗಿ ಹರಿಸ್ತುತಿಯ ಎಲ್ಲ ಕೃತಿಗಳೂ ನಾಮಾವಳಿಗಳಂತೆ ವಿವಿಧ ರೂಪಗಳನ್ನು ಶ್ರೀಹರಿಯ ಭಿನ್ನ ನಾಮಗಳನ್ನು ಕಲಾತ್ಮಕವಾಗಿ ಕಟ್ಟುವ ಮೂಲಕ ನುಡಿಗಳನ್ನು ರೂಪಿಸಲಾಗಿದೆ. ನಾರಾಯಣನ 'ಪರ' ಮತ್ತು 'ವ್ಯೂಹ' ರೂಪಗಳಾದ ವಾಸುದೇವ, ಸಂಕರ್ಷಣರನ್ನೂ ಅವತಾರ ರೂಪಗಳಾದ ನರಸಿಂಹ ಮತ್ತು ಕೃಷ್ಣರೊಂದಿಗೆ ರಾಮನನ್ನು ಸ್ತುತಿಸಿರುವ ಕೀರ್ತನೆಗಳು ಇಲ್ಲಿ ಕಂಡು ಬರುತ್ತವೆ.

'ಜಯ ಜಯ ಸುಗುಣಾಲಯ ಜಯಜಯಹರೆ ಶ್ರೀ ನರಸಿಂಹ'(೪೫೧)

ಎಂಬುದರಲ್ಲಿ ಪ್ರತಿಸಾಲೂ ನರಸಿಂಹದಿಂದ ಕೊನೆಗೊಂಡರೂ 'ದಂಡಕ'ದಂತೆ ಬೆಳೆಯುತ್ತಹೋಗಿದೆ. ಪಲ್ಲವಿ ನುಡಿಗಳ ವಿಂಗಡಣೆಯಿಲ್ಲ.

'ಕಲಯಂರಘುವಂಶಾಬ್ಧಿಸೋಮಂ ಕಲ್ಯಾಣರಾಮಂ'
'ಜಾನಕಿಮನೋಹರಾಯ ಜಯ ಮಂಗಳಂ'

ಕೃತಿಗಳು ಶ್ರೀರಾಮನನ್ನು ಸ್ತುತಿಸಿರುವ ಸುಂದರ ಕೀರ್ತನೆಗಳಾದರೆ

'ಶ್ರೀರಾಮ ಜಯರಾಮ ಜಯಜಯರಾಮ' ಎಂಬುದು ದ್ವಿಪದಿಯಲ್ಲಿ ೩೦ ನುಡಿಗಳನ್ನುಳ್ಳ ಶ್ರೀರಾಮಕಥೆಯನ್ನು ಸ್ತುತಿಸುವಗೀತೆಯಾಗಿದೆ.

ಶ್ರೀರಂಗನಾಥನನ್ನು ಸ್ತುತಿಸಿರುವ ಎರಡು ಕೃತಿಗಳಲ್ಲಿ 'ರಂಗೇಶಾಯ ಜಯ ಮಂಗಳಂ' ಎಂಬುದು, ಶ್ರೀರಂಗದ ರಂಗನಾಥ ಸ್ತುತಿಯಾಗಿದೆ. ಕೀರ್ತನೆಯಲ್ಲಿ 'ಕಾವೇರಿ ಪರಿಪೂರಿತ' ಎಂದಷ್ಟೇ ಇರುವುದರಿಂದ ಶ್ರೀರಂಗಪಟ್ಟಣದ ರಂಗನಾಥನೂ ಆಗಬಹುದಾದರೂ ಸಾಮಾನ್ಯವಾಗಿ ಶ್ರೀವೈಷ್ಣವರಿಗೆ ಶ್ರೀರಂಗ ದಿವ್ಯಕ್ಷೇತ್ರವಾಗಿರುವುದರಿಂದ ಶ್ರೀರಂಗದ ಸ್ತುತಿ ಎಂದೇ ಹೇಳಬಹುದು.

ಲಕ್ಷ್ಮೀ ಸ್ತುತಿಯಲ್ಲಿ ಸೀತೆಯನ್ನು ಕುರಿತ ಒಂದೇ ಕೃತಿಯಿದ್ದು ಈಕೆಯನ್ನೇ ಲಕ್ಷ್ಮೀ ರೂಪದಲ್ಲಿ ಗ್ರಹಿಸಲಾಗಿದೆ.

ಆಳ್ವಾರಾಚಾರ್ಯರ ಸ್ತುತಿಯಲ್ಲಿ ತೊಂಡರಡಿಪ್ಪೊಡಿಯಾಳ್ವಾರರನ್ನು ಸ್ತುತಿಸಿರುವ ಒಂದು ಗೀತೆ। 'ನಾಥವಾನಸ್ಮಿ ವಿಪ್ರನಾರಾಯಣೇನ'। ಮತ್ತು ರಾಮಾನುಜಾಚಾರ್ಯರನ್ನು ಸ್ತುತಿಸುವ ಒಂದು ಗೀತೆ ('ಶ್ರೀಮಾನಸ ಚಿಂತಯ ಮೌನೀದಂ ರಾಮಾನುಜ ಯತಿ ಕರುಣಾಸಾದಂ') ಯಿದೆ. ಈ ಕೃತಿಗಳಿಂದ ಕೋಸಲಪುರೀಶರನ್ನು ಶ್ರೀವೈಷ್ಣವ ಹರಿದಾಸರು ಎಂಬುದನ್ನು ದೃಢಪಡಿಸಬಹುದು. ಈ ಎರಡೂ ಕೃತಿಗಳಲ್ಲಿ ಇವರ ಮಹತ್ವವನ್ನೂ ಜೀವನಸಂಗತಿಗಳನ್ನೂ ಸ್ತುತಿಸಲಾಗಿದೆ. ಇದರೊಂದಿಗೆ ತಾತ್ವಿಕ ಕೃತಿಯಾಗಿ ಕಾಣಿಸುವ 'ವಿಧಿ ನಿಷೇಧ ನಿನ್ನವರಿಗೆಂತೋಹರಿಯೆ ನಾನಾವಿಧನರರಿವರಿಗೆ ಸರಿಯೆ

ವಿಧಿ ನಿನ್ನ ಸ್ಮರಣೆ ವಿನಾ ನಿಷೇಧ ಎಷ್ಟುಯೆಂಬವಿಧಿಯನೊಂದನೆ ಬಲ್ಲರಲ್ಲ(೪೬೪) ಎಂಬ ಕೃತಿಯಲ್ಲಿ ಶ್ರೀಹರಿಏಕನಿಷ್ಠೆ ಸ್ಪಷ್ಟವಾಗಿ ಪಡಿಮೂಡಿದೆ. ಶ್ರೀಹರಿಯನ್ನು ಹೊರತಾಗಿ ಅನ್ಯದೈವಸ್ತುತಿಯಿಲ್ಲವೆಂಬ ವಿಧಿನಿಷೇಧಬಿಟ್ಟರೆ ಅನ್ಯ ವಿಧಿನಿಷೇಧಗಳ ಭಯ ಇವರಿಗಿಲ್ಲ, ವ್ರತ, ವಿಧಿ, ಶಾಸ್ತ್ರ ಮುಂತಾದವುಗಳ ಕಟ್ಟಿಲ್ಲದ ಸುಲಭೋಪಾಯವಾದ ಶರಣಾಗತಿಯೊಂದೇ ವಿಧಿ. ಅದನ್ನು ಮೀರುವುದೊಂದೇ ನಿಷೇಧ ಎಂಬ ಶ್ರೀವೈಷ್ಣವ ತತ್ವವನ್ನು ಇದು ಸ್ಪಷ್ಟಪಡಿಸುತ್ತದೆ.

ಈ ಕೃತಿಗಳ ಮೂಲಕ ಕೋಸಲಪುರೀಶರು ಶ್ರೀವೈಷ್ಣವ ಹರಿದಾಸರೆಂಬುದು ಖಚಿತವಾಗುವುದಲ್ಲದೆ ಪ್ರೌಢ ಮತ್ತು ಸುಂದರ ಕೀರ್ತನೆ ಗಳನ್ನು ಕನ್ನಡಕ್ಕೆ ನೀಡುವ ಮೂಲಕ ಗಮನಿಸಬಹುದಾದ ಹರಿದಾಸರೆನಿಸಿದ್ದಾರೆ.

(ಇ) ಕೀರ್ತನೆಗಳ ಆಕರ

ಈ ಕೀರ್ತನೆಗಳನ್ನು ಕೆಳದಿ ವಸ್ತುಸಂಗ್ರಹಾಲಯದ ವೈಕುಂಠದಾಸರ ಕೀರ್ತನೆಗಳಿರುವ 'ಕೇಶವನೇತಿಗೀತಾ' ಎಂಬ ಓಲೆಗ್ರಂಥದ ನಕಲಾದ ಕಾಗದ ಹಸ್ತಪ್ರತಿಯಿಂದ ತೆಗೆದುಕೊಳ್ಳಲಾಗಿದೆ. ಈ ಕೀರ್ತನೆಗಳೆಲ್ಲಾ ಬಹುಮಟ್ಟಿಗೆ ಸಂಸ್ಕೃತ ಪದಗುಚ್ಛಗಳಿಂದಲೇ ಕೂಡಿದ್ದು ಅಲ್ಲಲ್ಲೆ ಭಾಷಾದೋಷಗಳು ನುಸುಳಿರುವಂತೆ ತೋರುತ್ತದೆ. ಕೂಡಿದ ಮಟ್ಟಿಗೂ ತಿದ್ದಲು ಪ್ರಯತ್ನಿಸಲಾಗಿದೆ.

ಈ ಹಸ್ತಪ್ರತಿಯನ್ನು ಒದಗಿಸಿದ ಕೆಳದಿ ವಸ್ತುಸಂಗ್ರಹಾಲಯದ ಅಧ್ಯಕ್ಷರಾದ ಶ್ರೀ ಎಸ್. ಆರ್. ರಾವ್ ಅವರಿಗೂ ನಿರ್ದೇಶಕರಾದ ಶ್ರೀಕೆಳದಿಗುಂಡಾಜೋಯಿಸ್ ಅವರಿಗೂ ಕ್ಯೂರೇಟರ್ ವೆಂಕಟೇಶ ಜೋಯಿಸ್ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

೩. ಬಡಣ್ಣಯ್ಯಾಚಾರ್ಯರು(ಅಣ್ಣಾವಧೂತರು) 'ವಿಠಲವ್ಯಾಸ'

(ಅ) ಜೀವನವಿವರ

ಬಡಣ್ಣಯ್ಯಾಚಾರ್ಯರ ಬಗೆಗೂ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಕೇವಲ ನಾಲ್ಕು ಕೃತಿಗಳು ಮಾತ್ರ ಇವರ ಅಂಕಿತವಾದ 'ವಿಠಲವ್ಯಾಸ'ದ ಮುದ್ರಿಕೆಯಲ್ಲಿ ದೊರೆತಿವೆ. ಇವರು ಬಹಳ ಕೃತಿಗಳನ್ನು ರಚಿಸಿದ್ದಾರೆಂದೂ ಇವರು ಅವಧೂತರಾಗಿದ್ದರೆಂದೂ ಪ್ರತೀತಿಯಿದೆ. ಬೇಲೂರು ಕೇಶವದಾಸರ 'ಶ್ರೀಕರ್ನಾಟಕಭಕ್ತವಿಜಯ' ಮತ್ತು ಪಂಡಿತ ಪಂಡರೀನಾಥಾಚಾರ್ಯ ಗಲಗಲಿ ಅವರ 'ಮಾಧ್ವವಾಙ್ಮಯ ತಪಸ್ವಿಗಳು' ಎಂಬ ಕೃತಿಗಳಲ್ಲಿ ಇವರಬಗ್ಗೆ ಅಲ್ಪ ಸ್ವಲ್ಪ ಮಾಹಿತಿ ಲಭ್ಯವಾಗುತ್ತದಾದರೂ ಅದೂ ಸಮಗ್ರವಾಗಿಯಾಗಲಿ ಖಚಿತವಾಗಿಯಾಗಲಿ ಇಲ್ಲ. ಇವರ ಬಗ್ಗೆ ಪರಿವೀಕ್ಷಣೆ ನಡೆಸುತ್ತ ಹೋದಂತೆ ಇದೇ ಹೆಸರಿನ ಮೂವರು ಅಣ್ಣಯ್ಯಾಚಾರ್ಯರು ಲಭ್ಯವಾದರೂ ಪೂರ್ಣಮಾಹಿತಿ ಸಿಗಲಿಲ್ಲ. ಹರಿಭಕ್ತಿವಿಜಯ ಮತ್ತು ಮಾಧ್ವವಾಙ್ಮಯ ತಪಸ್ವಿಗಳು ಪುಸ್ತಕ ಹೇಳುವ ಅಣ್ಣಯ್ಯಾಚಾರ್ಯರ ಮಾಹಿತಿ ಹೀಗಿದೆ.

"ಇವರಿಗೆ ಬಡ ಅಣ್ಣಯ್ಯಾಚಾರ್ಯರೆಂದು ಹೆಸರು. ತುಂಗಾವರದಾ ನದಿಗಳ ಮಧ್ಯ ಪ್ರದೇಶದಲ್ಲಿ ಇವರು ಅವಧೂತರಂತೆ ಓಡಾಡುತ್ತಿದ್ದರು. 'ಕರತಲಭಿಕ್ಷೆ ತರುತಲನಿವಾಸವೇ' ಇವರ ಜೀವನ ಚರ್ಯೆಯಾಗಿತ್ತು. ಇವರನ್ನು ಹುಡುಗರು ಜನ ಹುಚ್ಚರೆಂದು ಭಾವಿಸಿದ್ದರು. ಇವರು ಬೀದಿಗಳಲ್ಲಿ ಓಡಾಡಿದರೆ ಅಂಗಡಿಗಳಿಗೆ ಹೋಗಿ ಸಿಕ್ಕಿದ ಸಾಮಾನು ತೆಗೆದು ಕಂಡವರಿಗೆ ದಾನಮಾಡುತ್ತಿದ್ದರೂ ಯಾರೂ ತಡೆಯುತ್ತಿರಲಿಲ್ಲ. ಬದಲು ತಮ್ಮ ಅಂಗಡಿಗೆ ಬರಲು ಆಹ್ವಾನಿಸುತ್ತಿದ್ದರು. ಇವರು ಮುಟ್ಟಿದ ಮೆಟ್ಟಿದ ಮನೆ ಅಂಗಡಿ ವಸ್ತು ಅಕ್ಷಯವಾಗುತ್ತದೆಂದು ಜನ ಭಾವಿಸಿದ್ದರು.

ಇವರು ಒಮ್ಮೆ ಸವಣೂರಿನ ನವಾಬನಬಳಿಗೆ ತಲೆಗೊಂದು ಸೆಣಬಿನ ಹುರಿಯನ್ನು ವಸ್ತ್ರವನ್ನಾಗಿ ಕಟ್ಟಿಕೊಂಡುಹೋಗಿ ಅವನನ್ನು ಬೆರಗುಗೊಳಿಸಿದ್ದಲ್ಲದೆ ಅವನಿಂದ ಮಾನಿತರಾಗಿದ್ದರು. ಅವನು ನೀಡಿದ ಐಶ್ವರ್ಯವನ್ನೆಲ್ಲ ಅಲ್ಲೇ ಬೀದಿಗಳಲ್ಲಿ ದಾನಮಾಡಿದ್ದರು. ಇವರು ಸಂಸ್ಕೃತ, ಉರ್ದು, ಕನ್ನಡ,ಗಳಲ್ಲಿ ಅನೇಕ ಪದ ಪದ್ಯಗಳನ್ನು ರಚಿಸಿದ್ದಾರೆ. 'ವಿಠಲವ್ಯಾಸ' ಅಂಕಿತದಿಂದ ಇವರು ರಚಿಸಿದ ಪದ್ಯಗಳು ಅತ್ಯಂತ ಹೃದ್ಯವಾಗಿವೆ. ಅಣ್ಣಾವಧೂತರು ಜೀವನದಂತೆ ಸಾಹಿತ್ಯದಲ್ಲಿಯೂ ಅವಧೂತರೇ ಸರಿ. ಛಂದಸ್ಸಿನ ಬಂಧಗಳಾಗಲಿ ವ್ಯಾಕರಣದ ನಿರ್ಬಂಧಗಳಾಗಲಿ ಅವರ ಭಕ್ತಿಯ ಪ್ರವಾಹದ ಸ್ವಯಮುದ್ಗಾರವನ್ನು ತಡೆಯುತ್ತಿರಲಿಲ್ಲ?

ದೀಪದ ಅಣ್ಯೈದಾಸರೆನ್ನುವವರೊಬ್ಬರು ಧಾರವಾಡದಲ್ಲಿದ್ದ ಮಾಧ್ವ ಹರಿದಾಸರೆಂದೂ ಪ್ರತಿವರ್ಷ ತಿರುಪತಿಗೆ ಕಾಲು ನಡಿಗೆಯಲ್ಲಿ ಹೋಗಿ ಅಲ್ಲಿಗೆ ಬರುವ ಭಕ್ತರಿಗೆ ಕರಿಗಡುಬು ಊಟಹಾಕಿಸುತ್ತಿದ್ದರೆಂದೂ ಅಲ್ಲಿಯ ಪುಷ್ಕರಿಣಿಯಲ್ಲಿ ದೊರೆತ ಚಂದನದ ವೆಂಕಟೇಶ್ವರನನ್ನು ತಮ್ಮೂರಿಗೆ ಲಕ್ಷದೀಪೋತ್ಸವದ ಜ್ಯೋತಿಯೊಂದಿಗೆ ತಂದು ಆರದಂತೆ ಪೋಷಣೆ ಮಾಡುತ್ತಿದ್ದರೆಂದೂ ಇನ್ನೊಬ್ಬ ಅಣ್ಣಯ್ಯದಾಸರ ಬಗೆಗೂ ಡಾ|| ನೀ. ಕೃ.ರಾಮಶೇಷನ್ ಮತ್ತು ಇತರರು ಹೇಳುತ್ತಾರೆ.

ಹಾಗೆಯೇ ಮೇಲುಕೋಟೆಯ ಯತಿರಾಜಮಠದ ಸ್ವಾಮಿಗಳೊಬ್ಬರು ದೊಡ್ಡಯ್ಯಾಚಾರ್ಯರೆನ್ನುವವರು ತಿರುನಾರಾಯಣನನ್ನು ಸೇವಿಸುತ್ತ ಅವಧೂತರಂತೇ ಸಂಚರಿಸುತ್ತಿದ್ದರೆಂದೂ ಇನ್ನೊಂದು ಮಾಹಿತಿಯಿದೆ. ದೇವಾಲಯದಲ್ಲಿ ಅನೇಕ ತಮಿಳು ಪಾಶುರಗಳನ್ನೂ ಆಶುಗೀತೆಗಳನ್ನೂ ಹಾಡುತ್ತಿದ್ದರೆಂದೂ ಇವರ ಬಗ್ಗೆ ಪ್ರತೀತಿಯಿದೆ.

ಬೆಂಗಳೂರಿನಲ್ಲೂ ಮಲ್ಲೇಶ್ವರದ ರಸ್ತೆಗಳಲ್ಲಿ ಒಬ್ಬ ಅವಧೂತರು ಊರ್ಧ್ವಪುಂಡ್ರಧಾರಿಗಳಾಗಿ ತುಂಡು ಪಂಚೆ ಬೈರವಾಸದಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಿದ್ದುದನ್ನು ನಾನು ಬಾಲಕನಾಗಿದ್ದಾಗ ನೋಡಿದ್ದುಂಟೆಂದು ಸು.೮೦ ವರ್ಷದ ಬೆಳಗೆರೆ ಕೃಷ್ಣಶಾಸ್ತ್ರಿಗಳು ನೆನಪಿಸಿಕೊಳ್ಳುತ್ತಾರೆ. ಇವರು ತಮಗೆ ತಾವೇ

ಹಾಡುಗಳನ್ನು ಹಾಡಿಕೊಳ್ಳುತ್ತ ಅಂತರ್ಮುಖಿಗಳಾಗಿರುತ್ತಿದ್ದರೆಂದೂ ಲೌಕಿಕ ವ್ಯವಹಾರದ ಗೊಡವೆ ಅವರಿಗಿರಲಿಲ್ಲವೆಂದೂ ಶಾಸ್ತ್ರಿಗಳು ಹೇಳುತ್ತಾರೆ. ಮೇಲುಕೋಟೆಯ ಮಠದ ಶಾಖೆ ಮಲ್ಲೇಶ್ವರದಲ್ಲೇ ಇದ್ದು ಈ ಅವಧೂತರು ಮೇಲುಕೋಟೆಯ ದೊಡ್ಡಯ್ಯಾಚಾರ್ಯರೇ ಆಗಿದ್ದಿರಲೂಬಹುದು.

ಒಟ್ಟಾರೆ ಈ ಮೂವರು ಬಡಅಣ್ಣಯ್ಯಾಚಾರ್ಯರಲ್ಲಿ ಯಾರು ಹರಿದಾಸರಾಗಿ ಕೀರ್ತನೆಗಳನ್ನು ರಚಿಸಿದವರೆಂಬುದನ್ನು ನಿರ್ಧರಿಸಬೇಕಾದ ಅಗತ್ಯವಿದೆ. ದೊರೆತಿರುವ ನಾಲ್ಕು ಕೀರ್ತನೆಗಳಲ್ಲಿ ಒಂದು ಉರ್ದೂಗೀತೆಯಾಗಿರುವುದರಿಂದ ಸವಣೂರಿನ ನವಾಬನೊಂದಿಗೆ ಸಂಬಂಧವಿದ್ದ ಬಡಣ್ಣಾಚಾರ್ಯರೇ ಹರಿದಾಸರಾಗಿರುವುದು ಬಹುಪಾಲು ಖಚಿತವೆನಿಸುತ್ತದೆ. ಸವಣೂರಿನ ನವಾಬ ಸಂತತಿಯು ಖಂಡೇರಾವ್‌ನೊಂದಿಗೆ ಈ ದಾಸರ ಸಂಬಂಧ ಗುರುತಿಸಿರುವುದರಿಂದ ಈತನ ಕಾಲ ಹೈದರಾಲಿಯ ಕಾಲಕ್ಕೆ ಹೊಂದುತ್ತದೆ. ಹೈದರಾಲಿ ಸವಣೂರ ನವಾಬನೊಂದಿಗೆ ವೈವಾಹಿಕ ಸಂಬಂಧ ಬೆಳೆಸಲು ಈ ಖಂಡೇರಾಯನೇ ಕಾರಣನೆಂದೂ ಮುಂದೆ ಕಾರಣಾಂತರದಿಂದ ಇವನೊಂದಿಗೆ ಮನಸ್ತಾಪವುಂಟಾಗಿ ಹೈದರಾಲಿಯು ಇವನನ್ನು ಶ್ರೀರಂಗಪಟ್ಟಣದಲ್ಲಿ ಸೆರೆಯಲ್ಲಿಟ್ಟಿದ್ದನೆಂದೂ ಇತಿಹಾಸದಲ್ಲಿ ಇವನ ಬಗ್ಗೆ ಮಾಹಿತಿ ದೊರೆಯುತ್ತದೆ. ಈ ಘಟನೆ ಕ್ರಿ.ಶ. ೧೮೦೦ರ ಸರಿಸುಮಾರಿನಲ್ಲಿ ಬರುವುದರಿಂದ ಈ ಕಾಲದಲ್ಲಿದ್ದರೆಂದು ಬಡಣ್ಣಾಚಾರ್ಯರ ಕಾಲವನ್ನು ಊಹಿಸಬಹುದಾಗಿದೆ.

ಇವರ ಸ್ಥಳವನ್ನು ಕೆಲವರು ಬೆಂಗಳೂರು ಜಿಲ್ಲೆಯ ಕಲ್ಕುಂಟೆ (ಹೊಸಕೋಟೆ ತಾ||) ಎಂದು ಹೇಳುತ್ತಿದ್ದುದರಿಂದ ಪರಿಶೀಲಿಸಲಾಗಿ ಇಂಥ ಅವಧೂತರು ಅಲ್ಲಿ ಇದ್ದುದರ ಬಗ್ಗೆ ಯಾವ ಮಾಹಿತಿಯೂ ಲಭ್ಯವಾಗಿಲ್ಲ. ದೊರೆತಿರುವ ಕೀರ್ತನೆಗಳಲ್ಲೂ ಇವರ ಇತಿವೃತ್ತದ ಬಗ್ಗೆ ಯಾವ ಮಾಹಿತಿಯೂ ಸಿಕ್ಕುವುದಿಲ್ಲ. ಅಷ್ಟೇ ಅಲ್ಲ ಇವರ ಮತದ ಬಗೆಗೂ ಖಚಿತವಾಗಿ ಹೇಳಲಾಗುತ್ತಿಲ್ಲ. ಸಂತೆಬಿದನೂರಿನ ಆಂಜನೇಯನನ್ನು ಸ್ತುತಿಸಿರುವ ಕೀರ್ತನೆಯಲ್ಲಿ,

('ವೀರಹನುಮ ಬಹುಪರಾಕ್ರಮ ಸುಜ್ಞಾನವಿತ್ತು ಪಾಲಿಸೆನ್ನ ಜೀವರೋತ್ತಮ' -೪೬೪)

'ಮಧ್ವಗೇಹದಲ್ಲಿ ಜನಿಸಿ' ಎಂಬ ಉಲ್ಲೇಖ ಇರುವುದರಿಂದ ಇವರ ಮುದ್ರಿಕೆಯಲ್ಲಿ 'ವಿಠಲ' ಅಂಕಿತವಿರುವುದರಿಂದ ಇವರು ಮಾಧ್ವ ಸಂಪ್ರದಾಯದವರಾಗಿರುವ ಸಾಧ್ಯತೆಯೂ ಉಂಟು. ಹಾಗೆಯೇ, ತತ್ತ್ವಪದದಂತೆ ಸಾಗುವ 'ದಾವಾದಾರದ ದುರ್ವಿಷಯದಿ ನೀ ಮುಳುಗಿ ಹರಿಯುತಿ'ದಿ' ಎಂಬ ಕೃತಿಯಲ್ಲಿ

'ದೃಷ್ಟಿ ಒಬ್ಬನಲ್ಲಿಟ್ಟರೆ ಜಗದಲಿ ಕಷ್ಟಾಹುದೆನೋಡ'
ಥಟ್ಟನೆ ಈ ಭವನಷ್ಟಾಂಗವ ಹಾಂಗಿಷ್ಟು ಮಾಡೊ ಮೂಢ'

ಎಂದು ಹೇಳಿರುವಲ್ಲಿ ಶ್ರೀಹರಿ ಏಕನಿಷ್ಠೆಯಿರುವಂತೆ ಕಂಡುಬರುವುದರಿಂದ ಮತ್ತು ಹಲವರು ಇವರನ್ನು ಊರ್ಧ್ವಪುಂಡ್ರಧಾರಿಗಳಾಗಿದ್ದ ಶ್ರೀವೈಷ್ಣವ ಆಚಾರ್ಯರೇ ಎಂದು ಹೇಳುತ್ತಿರುವುದರಿಂದ ಶ್ರೀವೈಷ್ಣವ ಸಂಪ್ರದಾಯದಲ್ಲೂ ಗುರುತಿಸಬಹುದಾಗಿದೆ. ಒಟ್ಟಾರೆ ಇವರ ಬಗ್ಗೆ ಖಚಿತ ಮಾಹಿತಿ ಲಭ್ಯವಾಗುವವರೆಗೆ ಏನನ್ನೂ ಹೇಳಬರುವುದಿಲ್ಲ.

(ಆ) ಕೀರ್ತನೆಗಳು

ಲಭ್ಯವಿರುವ ನಾಲ್ಕು ಕೀರ್ತನೆಗಳನ್ನಷ್ಟೇ ಇಟ್ಟುಕೊಂಡು ಕೀರ್ತನೆಗಳ ಬಗ್ಗೆ ಏನನ್ನೂ ಹೇಳಲು ಸಾಧ್ಯವಾಗದಾದರೂ ಸಿಕ್ಕಿರುವ ಕೃತಿಗಳೆಲ್ಲ ಶ್ರೀಹರಿಸ್ತುತಿಯಾಗಿ ಮಾತ್ರ ಕಂಡು ಬಂದಿವೆ.

ಮನದಿ ನಿನ್ನ ತಪವ ಮಾಡಿಸೊ ಮಾಧವ
ಅನುದಿನದಲದನೆ ಬಯಸುವೆ ಯಾದವ (೪೬೩)

ಕೃತಿಯಲ್ಲಿ ಶ್ರೀವೈಷ್ಣವ ತತ್ವವಾದ ಶ್ರೀಹರಿಏಕನಿಷ್ಠೆಯೇ ಕಂಡುಬರುತ್ತದೆ.

ನಿನ್ನಿಂದಲೇ ಸೃಷ್ಟಿ ನಿನ್ನಿಂದಲೇ ಸ್ಥಿತಿಯು
ನಿನ್ನಿಂದಲೇ ಪ್ರಳಯ ನಿಯಮಗಳು
ನಿನ್ನಿಂದಲೇ ಜ್ಞಾನ ನಿನ್ನಿಂದಲಜ್ಞಾನ
ನಿನ್ನಿಂದಲೇ ಬಂಧ ಮೋಕ್ಷವೆಂಬ ವಿಧ

ಎಂಬುದೂ ಆ ತತ್ತ್ವಕ್ಕೆ ಪೂರಕವಾಗಿಯೇ ಇದೆ. ಇದರಲ್ಲೇ ಬರುವ 'ಕೃಷ್ಣದಯಮಾಡಿ ನೀ ಪೇಳಿದಂತೆ' . . . 'ಭವ ಭೀತಿಹರಿಸಲು ಕೃಪಾಮಯ ವಿಠಲವ್ಯಾಸ ವಿಧಿ ಒಂದೇ ವಿಭುವೇ' ಎಂಬ ಮಾತಿನಲ್ಲಿ ಭಗವದ್ಗೀತೆಯಿಂದ ಶ್ರೀವೈಷ್ಣವ ತತ್ವ ಸ್ವೀಕರಿಸಿರುವ 'ಶರಣಾಗತಿಯ' ಚರಮಶ್ಲೋಕದ ಸಂದೇಶವನ್ನೇ ಹೇಳುವಂತಿದೆ.

'ದಾವಾದಾರದ ದುರ್ವಿಷಯದನೀ'. – ಕೃತಿ ಸೊಗಸಾದ ತತ್ವಪದವಾಗಿದೆ. ಲಯಬದ್ಧವಾಗಿ ಛಂದೋಬದ್ಧವಾಗಿ ಮತ್ತು ಅತ್ಯಂತ ಸಹಜವಾಗಿ ರಚನೆಯಾಗಿರುವ ಈ ಕೃತಿಗಳನ್ನು ನೋಡಿದರೆ ಬಡಣ್ಣಯ್ಯಾಚಾರ್ಯರ ಇತರ ಕೃತಿಗಳೂ ದೊರೆತಲ್ಲಿ ಕೀರ್ತನಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾಗಬಲ್ಲವು ಎಂದೆನಿಸದಿರದು.

(ಇ) ಕೀರ್ತನೆಗಳ ಆಕರ

ಈ ನಾಲ್ಕೂ ಕೀರ್ತನೆಗಳಿಗೂ ನಾಲ್ಕು ಬೇರೆಬೇರೆ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಉರ್ದೂ ಗೀತೆಗೆ 'ಕರ್ನಾಟಕ ಭಕ್ತವಿಜಯ' ವನ್ನೂ ದಾವಾದಾರ. . . ಕೃತಿಗೆ 'ಹರಿದಾಸ ಭಾರತಿ' ಪತ್ರಿಕೆಯನ್ನೂ 'ಮನದಿನಿನ್ನ . . ' ಕೃತಿಗೆ 'ದಾಸರ ಪದಸಂಗ್ರಹ' ಕೃತಿಯನ್ನೂ 'ವೀರಹನುಮ. . . .' ಕೃತಿಗೆ ಕೊರಟಿಯವರ ಹಸ್ತಪ್ರತಿಯನ್ನೂ ಬಳಸಿಕೊಳ್ಳಲಾಗಿದೆ. ಈ ಆಕರಗಳಲ್ಲಿ ಈ ಒಂದೊಂದೇ ಕೀರ್ತನೆಗಳು ಲಭ್ಯವಾಗಿದ್ದು ಇನ್ನೂ ಹೆಚ್ಚಿನ ಶೋಧ ನಡೆಸಿದಲ್ಲಿ ಇನ್ನಷ್ಟು ಕೀರ್ತನೆಗಳು ದೊರೆಯುವ ಸಾಧ್ಯತೆಯಿದೆ.

ವಿಜಯದಾಸರ ಶಿಷ್ಯಪರಂಪರೆಗೆ ಸೇರಿದ ಕಲ್ಲೂರುಸುಬ್ಬಣ್ಣ ಎನ್ನುವ ಹರಿದಾಸರು 'ವ್ಯಾಸವಿಠಲ' ಅಂಕಿತವನ್ನು ಹೊಂದಿದ್ದು ಕೆಲವೆಡೆ ಈ ಅಂಕಿತದ ಅದಲುಬದಲಾಗಿರುವ ಸಾಧ್ಯತೆಯೂ ಇರುತ್ತದೆ. ಕೊರಟಿಯವರ ಹಸ್ತಪ್ರತಿಯಲ್ಲಿ 'ಭಜಿಸಿರಿಭಾರತಿರಮಣ ಸುಗುಣನ' ಎಂಬ ಕೃತಿ ವ್ಯಾಸವಿಠಲಾಂಕಿತದಲ್ಲಿದ್ದರೂ 'ಬಡಣ್ಣಯ್ಯಾಚಾರ್ಯರು ಮಾಡಿದ್ದು' ಎಂಬ ಟಿಪ್ಪಣಿಯಿದೆ. ಆದ್ದರಿಂದ ಸಂಗ್ರಹ ಮಾಡುವವರು ಈ ಅಂಶವನ್ನೂ ಗಮನಿಸಬೇಕಾಗುತ್ತದೆ.

ಈ ಹಸ್ತಪ್ರತಿಗಳನ್ನು ಒದಗಿಸಿದ ಪ್ರೊ. ಡಾ. ಅನಂತಪದ್ಮನಾಭರಾವ್ ಅವರನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ನಾ. ಗೀತಾಚಾರ್ಯ

ಸಂಪಾದಕರು

ಕೀರ್ತನೆಗಳ ಕ್ರಮಸೂಚಿ

ನಿಂದಾಸ್ತುತಿಗಳು

ಸಾಮಾಜಿಕ–ಲೋಕನೀತಿ ಸ್ತುತಿಗಳು

ತಾತ್ವಿಕ ಕೃತಿಗಳು

ತತ್ವದರ್ಶನದಲ್ಲಿ ಮಂತ್ರಮಹಿಮೆ

ಆಸೂರಿ ರಾಮಸ್ವಾಮಿದಾಸರ ಕೀರ್ತನೆಗಳು

ಶ್ರೀಹರಿಸ್ತುತಿಗಳು

೧

ಇಂದಿರಾಪತಿ ನಂದಕಂದನು ಬಂದ ನೋಡುವ ಬಾ ಪ

ಮಂದಹಾಸವ ಬೀರುತಿರುವ
ಸುಂದರಮಂದರಧರ ಮುಕುಂದನ ಅ.ಪ

ಬೆರಳಿಗುಂಗುರ ಧರಿಸಿ ಮೆರೆವ ಕರದ ಮುರಳಿಯ
ಸ್ಮರನಚೆಲ್ವಿ ಧರೆಯೊಳೆಲ್ಲರ ಕರೆಯುತಿರುವನು
ಸರಸ ಸಂತಸವೆರಿಸಿ ಕೃಷ್ಣನ ಸ್ಮರಣೆಗೈಯುವಾ
ನಿರುತಮವನ ಸನ್ನಿಧಿಯಲಿಬೆರೆತು ಪಾಡುವ ೧

ಮಧುರಗಾನದಿ ಚದುರನಾರಿಯರುದಧಿಶಯನನಾ
ಮುದದಿ ಭಜಿಸಿ ವರವ ಕೇಳಲು ಕಾದುನಿಂತಿಹರು
ಪದುಮನಾಭ ಮಾಂಗಿರೀಶ ಪಾದ ಸೇವೆಯು
ಒದಗಲೆಂದು ನಮಿಸಿನಾವು ಪಾಡಿ ಪೊಗಳುತ ೨

೨

ಇಂದಿರಾ ಮನೋಹರ ನಂದ ಶರಧಿ ಚಂದಿರಾ ಪ

ಮಂದಹಾಸವದನ ಚತುರಾ ಮಂದರೋದ್ಧರಾ ಅ.ಪ

ಶರಧಿ ಶಯನ ಪದ್ಮನಯನ ಸುರಮುನೀಶ್ವರ ನಮಿತ ಚರಣ
ಪರಮ ಕರುಣ । ಸತ್ವಸದನ ಹರಿನಾರಾಯಣ ಗರುಡಗಮನಾ

ದುರುಳ ಭೀಷಣಾ ಶರಣ ತೋಷಣಾ ।
ವರದ ಮಾಂಗಿರಿ ಶೃಂಗ ಭವನ ೧

೩

ಕಂಡೆನಿಂದು ಕಮಲನೇತ್ರನ ಪುಂಡರೀಕಭವನಪಿತನ ಪ

ಅಂಡಜಾರಿ ಶಯನನಾ ಉದ್ದಂಡ ಪುಂಡರೀಕ ವರದನ ಅ.ಪ

ಮಂದಹಾಸ ವದನನ ಕುಂದ ಕುಸುಮವದನ್ನ
ಸಿಂಧುಕುವರಿ ಮಂದಿರನ ಸುಂದರಾಂಗನ
ಇಂದುಶೇಖರ ವಿನುತನಾ ಪುರಂದರಾದಿ ಸೇವಿತನಾ
ನಂದನಂದನ ವೇಣುಧರನ ಬಂಧ ಹರಣ ಮಾಂಗಿರೀಶನ ೧

೪

ಕ್ಷೀರಸಾಗರ ಧಾಮ ನಿರ್ಮಲನಾಮ ಪ

ಕರಿವರದಾಯಕ ದುರಿತ ಸಂಹಾರಕ
ಸುರವರಪಾಲಕ ವರರಮಾನಾಯಕ ೧

ಪೀತಾಂಬರಧರ ಖ್ಯಾತ ಮನೋಹರ
ಶ್ರೀತಾಂಬುನಮಕರ ಪ್ರೀತ ಕುಸುಮಧರ ೨

ಕಾಮಿತ ಫಲದಾತ ಕೋಮಲಕರಯುತ ।
ರಾಮದಾಸಾರ್ಚಿತ ಪ್ರೇಮರಸಾನ್ವಿತ ಮಾಂಗಿರೀಶ ೩

೫

ಖಗವಾಹನಾ ಜಗಮೋಹನಾ ಪ

ಕಮಲಾಸನಾ ಸುತಪಾವನಾ
ಸುರಜೀವನಾ ಸುಮಲೋಚನಾ ಅ.ಪ

ನಿಗಮೋದ್ಧಾರ । ಧೃತಮಂದಾರಾ
ಧರಣೀಧರಾ । ಮೃಗಕಂಧರಾ
ಬಲಿಗೋಚರಾ । ದ್ವಿಜಮಾವರಾ
ಭುವನೇಶ್ವರಾ । ಮುರಳೀಧರಾ ೧

ತ್ರಿಪುರಾಂತಕಾ । ಕಲಿನಿವಾರಕಾ
ಸುರನಾಯಕಾ । ವರದಾಯಕಾ
ಸರಸಿಜಾಂಬಕಾ । ಶುಭಕಾರಕಾ
ಕರುಣಾಬ್ಧಿ ಮಾಂಗಿರಿ ನಾಯಕಾ ೨

೬

ಗರುಡಗಮನ ಪುರುಷೋತ್ತಮ ಶೌರೇ ಪ

ದುರುಳದಮನ ಪರಮಾತ್ಮ ಮುರಾರೇ
ಕರುಣಸದನ ಗೋವರ್ಧನಧಾರೇ
ಸರಸಿಜನಯನ ಪಾತಕ ಸಂಹಾರೇ ಅ.ಪ

ಇಂದಿರಾನಂದ ಗೋವಿಂದ ಮುಕುಂದಾ
ನಂದನಕಂದ ಗೋವೃಂದಾನಂದ
ಸುಂದರ ಬಂಧು ಮುಖಾರವಿಂದ
ವಂದಿತ ನಿರ್ಜರವೃಂದಾನಂದ ೧

ನಿತ್ಯನಿರ್ಮಲಾ ಜಗದಭಿರಾಮಾ
ಬೃತ್ಯಜಾಲಪಾಲನ ಶುಭನಾಮಾ
ನೃತ್ಯನೀಲ ನೀರದ ಘನಶ್ಯಾಮಾ
ಸತ್ಯಕಾಮ ಮಾಂಗಿರಿ ವರಧಾಮಾ ೨

೭

ದಯಾ ಸಾಗರ ದಾನವಾರಿ
ಸರೋಜ ನಯನ ಸೂತ್ರಧಾರಿ ಪ

ಶ್ರೀಯಾಭರಣ ಭೂಷಣ ಶ್ರೀಹರಿ
ನಯ ನೀತಿ ಕಾರಣ ನೃಕೇಸರಿ ಅ.ಪ

ಜನಾರ್ಧನ ಕಮಲಾಲೋಚನಾ
ಸನಕಾರ್ಜಿತ ಸುರಪೂಜನ
ಜನಾನಂದಕರಾರಂಜನ
ಸುನೀಲ ಮಾಂಗಿರಿನಿಕೇತನ ೧

೮

ನಲಿದಾಡು ಬಾರೊ ಗರುಡತುರಂಗಾ ಪ

ದುರುಳ ಭಸ್ಮಾಸುರ ಉರಿಹಸ್ತ ಪಡೆದಂದು
ತರುಣಿರೂಪದೆ ನಲಿದು ಹರನ ಪೊರೆದೆಯಲ್ತೆ ೧

ಲೋಲ ಲೋಚನೆಯರ ಆಲಯಗಳ ಪೊಕ್ಕು
ಹಾಲು ಬೆಣ್ಣೆಯ ಮೆದ್ದ ಗೋಪಾಲ ವಿಠಲನೇ ೨

ಧ್ರುವಗೆ ವರವನಿತ್ತೆ ಪವಮಾನಸುತಗೇ ಅದೆ
(ಭವ ಬಂಧವು ನಾಮಪ್ರಿಯ ಪರಂಧಾಮನೇ) ೩

ಆವ ಬಂಧವನ್ನೂ ಬಿಡಿಸಿ ನವನೀತವೀವನೇ
ಕಾವರಿಲ್ಲವೋಯೆನ್ನ ಮಾವಿನ ಕೆರೆರಂಗಾ ೪

ಕಾಮಿತಂಗಳ ದೇವ ಶಾಮಲಾಂಗನೆ ನಿನ್ನ
ನಾಮವ ನೆರೆಸಾರು ರಾಮದಾಸಾರ್ಚಿತ ೫

೯

ನಿರುಪಮ ಚರಿತಾ ಮಾಂಗಿರಿನಾಥಾ ಈಪ್ಸಿತ ವರದಾತಾ ಪ

ಸರಸಿಜ ಸಂಭವ ನುತ ಗಂಗಾಪಿತ ಪಂಕಜಾಕ್ಷ
ಮೋಕ್ಷದಾತ ನಾರದ ಮುನಿ ವಿನುತಾ ಅ.ಪ

ಶ್ರೀಕರ ಸುಖಕರ ಸುರುಚಿರ ಹಾರಾ
ಶೋಕ ವಿದೂರ ಭವಪರಿಹಾರಾ
ಭೀಕರ ರಾಕ್ಷಸ ವಂಶ ಭಯಂಕರ ಕಿಂಕರ ಶಂಕರಗಾನಸು
ಧಾಕರ ಲೋಕಪಾಲ ಪರಮ ಚತುರ ೧

೧೦

ನೀರಜದಳ ನೇತ್ರ ರಂಗಾ ಪುನ್ನಾಗೋತ್ತುಂಗ ಪ

ಕ್ಷೀರವಾರಿಧಿ ನಿಲಯ ಶುಭಾಂಗ ಶ್ರೀರಮಾಲಿಂಗ ಅ.ಪ

ಘೋರ ಕಲುಷಜಾಲಹರಣ ಮಾರಮಣ ಪದುಮಚರಣ
ಸಾರಸೋದ್ಭವ ವಿನುತ ಕರುಣಾ । ಪಾರ ಭಕ್ತ ವಿಹಾರ ಕಂಕಣ ೧

ಸಂಸಾರಾಂಬುಧಿ ತರಣ ಶೌರೀ । ಹಂಸಗಮನನುತ ಮುರಾರಿ
ಕಂಸವೈರಿ ಚಕ್ರಧಾರಿ । ಹಿಂಸೆ ಬಿಡಿಸೊ ಸೂತ್ರಧಾರಿ ೨

ಕರಿರಾಜವರದಾ ಸುಧಾಂಗ ತರಳ ವಾಮನಾಂಗ ಶುಭಾಂಗ
ದುರಿತ ಜಾಲಹರಣ ರಥಾಂಗಾ ।
ಕರುಣಾಪಾಂಗ ಮಾಂಗಿರಿರಂಗ ೩

೧೧

ನೀರಜನೇತ್ರ ನೀಲಾಂಬುದ ಗಾತ್ರ
ವಾರಿಜಸಂಭವ ಸನ್ನುತಿ ಪಾತ್ರ ಪ

ನಾರದ ವಂದಿತ ಭೂಸುರ ಗಾತ್ರ
ಶ್ರೀರಮಣೀಯುತ ತ್ರಿಭುವನ ಸೂತ್ರ ಅ.ಪ

ಮಂಗಳದಾತಾ ಧನಂಜಯ ಸೂತ್ರ
ಅಂಗಜತಾತ ವಿಹಂಗಮ ರುಂದ್ರ
ಮಾಂಗಿರಿನಾಥ । ಚರಾಚರ ಭರಿತ
ತುಂಗ ಕೃಪಾಯುತ । ಪಾವನ ಚರಿತಾ ೧

೧೨

ನೀನಾರ ಕಂದನೊ । ನಿನಗವನಾರು ತಂದೆಯೊ ।
ಪೇಳಾರು ತಾಯಿಯು ಪ

ಕ್ರೋಧವಾಂತ ಕಂಬೋದ್ಭವನು ।
ಘಾಟಿ ದೈತ್ಯವಂಶ ಪ್ರತಾಪನ ಸುಲಿದವನು
ಕೋಟಿರೂಪಯುತನು ಸಾಟಿಯಿಲ್ಲದವನು ಲೋಕಪಾಲಕನು ೧

ಲೋಕವ ಬೆಳಗುವ ದಿನಕರನು ।
ಜಗವ ದಹಿಸುವ ಪಾವಕನು [ಅ
ನೇಕ ಮಹಿಮೆಯ ತೋರುವ ಪರಶಿವನು । ಪರಾತ್ಪರನು
[ಶೋಕಿಪ] ಶರಣರ ಪಾಲಿಪನು ನಿಗಮ ಮಂದಿರನು ೨

ಧಾರುಣಿಯ ರೇಣುವಲಾ ।
ತರಂಗದ ನೆಲೆಯೆನಿಸುವ ಜಲಧಿ । ವಿ
ಚಾರಿಸೆ ಅಣುತರಬಿಂದುವಲಾ ಬಲು ಮೊರೆವಾ
ಮಾರುತಿ ಸುಯಿಲುದಲಾ ಸಕಲ ಮೂಲಮಾಂಗಿರೀಶನಲಾ ೩

೧೩

ನೆನೆವವಗೆ ಹರಿಯುಂಟು ನೆನೆಯದವಗೆ ಮದ ವೆಂಟು ಪ

ನೆನೆವ ಮನವಿರಲುಂಟು ಮುನಿಸುತನ ನಂಟು ಅ.ಪ

ನೆನೆವ ಧೃವನೂ ಗೆದ್ದ ಶುಕಮಹಾಮುನಿಗೆದ್ದ
ನೆನೆವ ಹನುಮನೂ ಗೆದ್ದ ಶರಭಂಗ ಮುನಿಗೆದ್ದ
ನೆನೆವ ಗಜಪತಿಗೆದ್ದ ವಾಲಿತನಯನೂ ಗೆದ್ದ
ಕನಕದಾಸನು ಗೆದ್ದ ಇದು ಸರ್ವಸಿದ್ಧ ೧

ಧುರದಿ ರಾವಣ ಬಿದ್ದ ವರವಿಭೀಷಣ ಗೆದ್ದ
ಧರೆಗೆ ಕಂಸನುಬಿದ್ದ ಅಕ್ರೂರ ಗೆದ್ದ
ದುರುಳ ಕಶಿಪೂ ಬಿದ್ದ ಪ್ರಹ್ಲಾದ ಶಿಶುಗೆದ್ದ
ಹಿರಿಯವಾಲಿಯುಬಿದ್ದ ಸುಗ್ರೀವ ಗೆದ್ದ ೨

ಸುಲಭನೊ ಮಾಂಗಿರಿಯ ರಂಗ ಜಗದಾನಂದ
ಫಲವ ಕೊಟ್ಟಳಿಗೊಲಿದ ವಿಷಧರೆಯ ಸದೆದ
ಬಲು ಮೆರೆದ ಕೌರವನ ಕುಲವಿನಾಶವ ಗೈದ
ಚೆಲುವ ಮಾಂಗಿರಿರಂಗ ಶರಣರಿಗೆ ವರದ ೩

೧೪

ಪರಮ ಕರುಣ ರಮೆಯ ರಮಣ ಉರಗಭೂಷಣಾ ಪ

ದುರಿತಹರಣ ಶರಣಾವರಣ । ವರದ ಕಂಕಣಾ ಅ.ಪ

ಶ್ರುತಿಗಳೆಲ್ಲ ನುಡಿವುದಲ್ಲ । ಪಿತನೆಂಬ ಸೊಲ್ಲ
ಪತಿತರ ನೀ ಪೊರೆದೆಯೆಲ್ಲ । ಹಿತವೇಕೆನ್ನೊಳಿಲ್ಲಾ ೧

ಅಸ್ತಿಪಂಜರವೆಂಬೀ ಮಂದಿರ । ವಸ್ತ್ರಾಂಬರ
ವ್ಯಸ್ತ ಪಂಚಭೂತದಾಕಾರಾ ಗ್ರಸ್ತ ನಶ್ವರಾ ೨

ಜನನ ಮರಣ ದುರಿತಗಡಣ । ಮನುಜ ಭವಿ ಶರಣ
ಮನಕೆ ಶೋಕಾನೇಕ ಕಾರಣ । ದನುಜ ವಿದಾರಣಾ ೩

ಧರೆಯೊಳುದಿಪ ಸೆರೆಯ ಬಿಡಿಸೋ । ವರವ ಕರುಣಿಸೋ
ಹರಿಯೆ ರಾಮ ವಿಠಲ ಪಾಲಿಸೋ । ನಿರುತ ನಿರುಕಿಸೋ ೪

ಕಾವರನ್ಯರಿಲ್ಲವೆನ್ನ । ಶ್ರೀವನಿತಾರನ್ನ
ಮಾವಿನಕೆರೆಯರಸ ಮುನ್ನ । ನೋವ ಬಿಡಿಸೆನ್ನ ೫

೧೫

ಭಜ ಭಜ ಮಾನಸ ಮಾಂಗಿರಿವಾಸಂ ಪ

ಅಜಸುರ ಸೇವಿತಂ ಪಂಕಜನೇತ್ರಂ
ಗಿರಿರಾಜಾನುತ ನೀರದ ಗಾತ್ರಂ ಅ.ಪ

ಗಾನವಿಲೋಲಂ ಮುನಿಜನ ಪಾಲಂ
ದಾನವ ಕಾಲಂ ಪೀತದುಕೂಲಂ
ಮೌನಿಮರಾಲಂ ಧೃತವನಮಾಲಂ
ಜಾನಕಿಲೋಲಂ ಹೃದಯವಿಶಾಲಂ
ಪೀನಕಪೋಲಂ ಗೋಕುಲ ಬಾಲಂ ೧

೧೬

ಭಜಿಸಿರೋ ಭಜಿಸಿರೋ ಅಜನ ಪೆತ್ತವನಾ
ಭುಜಗಶಯನ ಮದಗಜವ ಪೊರೆದನಾ ಪ

ಭಜಕರ ಕೂಗಿಗೆ ನಿಜವ ತೋರುವನಾ
ಸುಜನೋದ್ಧಾರನ ವಿಜಯ ರಾಘವನಾ ಅ.ಪ

ರಾಗವಿದೂರನ ರಾಗೋಲ್ಲಾಸನ
ರಾಗಕೆ ಒಲಿವನಾ ರಾಗವನುಣಿಪನ

ರಾಗದಿ ಮುರಳಿಯ ಊದಿ ರಾಜಿಸುವನ
ರಾಗದಿ ನಮಗನುರಾಗವನೀವನ ೧

ಶರಣರ ದುರಿತವ ಪರಿಹರಿಸುವನ
ಧರಣಿಯನೀರಡಿ ಅಳೆದವನ
ಕರುತುರುಗಳ ಕನಿಕರದಿಂಕಾಯ್ದನ
ವರದಾಯಕ ಮಾಂಗಿರಿ ರಂಗಯ್ಯನ ೨

೧೭

ಭರಿತ ದಯಾಸಾರ ವಿಹಾರಾ । ಭರಿತ ದಯಾಸಾರಾ ಪ

ಶ್ರೀವನಮಾಲಾ । ಆಗಮ ಮೂಲಾ
ನಿರುಪಮ ಲೀಲಾ ಗೋಕುಲ ಬಾಲಾ
ತ್ರಿಭುವನ ಪಾಲಾ ದಾನವ ಕಾಲಾ
ಸುಮನಸ ಪಾಲಾ । ತುಳಸೀಮಾಲಾ ೧

ಶುಭಕರ ಚರಿತಾ । ಮುನಿಗಣ ವಿನುತಾ
ಸುರಗಣ ಸನ್ನುತಾ । ಸುಭವ ನಮಿತಾ
ಶರಣ ಜನಾನತ ಸಕಲಾಧಿತಾ
ಕಾಮಿತ ದಾತ–ಮಾಂಗಿರಿನಾಥಾ ೨

೧೮

ಯಾರಿಗೆ ಹೋಲುವೆ ನಿನ್ನ ಯಾರಲ್ಲಿ ಸಲ್ಲಾಪಿಸಲಿ
ಮಾರನೋ ಮದನನ ಪಡೆದ ಕೇಶವನೋ ಪ

ವಾರಿಜಭವ ಚರಣನು ನೀರಜನಾಭನು
ಸಾರಸವದನನು ವಾರಿಧಿಶಯನನು ಅ.ಪ

ಆಹವ ಭೀಮನೋ । ಸಾಹಸ ಮಲ್ಲನೋ
ಬಹು ಸುದೀರ್ಘನು ಮೋಹಮಂದಿರನು
ಮಹಿಜೆಯರಸನೋ ಅಹಿಯ ಶಯನನೋ
ಬಹುಗುಣಾನ್ವಿತ ವೆಂಕಟೇಶನೋ
ಮಹಿತ ಮಹಿಮನು ಸಾಹಸ ಶೀಲನು
ಪಾಹಿರಘು ಕುಲಪತಿ ಚೆನ್ನ ಚೆಲುವನು ೧

ಉರಗ ಭೂಷಣನೋ । ಸರಸಿಜ ಭವನೋ
ಧರಣಿಯ ಅಳೆದ ಪರಮಪುರುಷನೋ
ಗರುಡಗಮನನೋ । ಕರುಣ ಭಜಿಪನೋ
ನರಪಸುತ ಕೋದಂಡಧರನೋ
ಮೆರೆವ ಕಾಂಚೀಪುರದ ವರದನೋ
ನಿರುತ ವಂದಿತ ಮಾಂಗಿರೀಶನೋ ೨

೧೯

ರಮಾ ಮನೋಹರ ಶ್ಯಾಮಸುಂದರ
ವಿಮಾನ ಶೋಭಿತ ಹರೇ ಹರೇ ಪ

ಕುಮಾರಪಿತನುತ ಶಮ ದಮಾಯುತ
ಸಮಾನ ವಿರಹಿತ ನಮೋ ನಮೋ ಅ.ಪ

ಪರೇಶ ಯದುಪತಿ, ಪಾರ್ಥಸಾರಥಿ
ಸುರೇಶ ಪಶುಪತಿ, ನಾರಾಯಣಾ
ಧರೇಶ ರಘುಪತಿ ಲಾವಣ್ಯಮೂರುತಿ
ಹರೀಶ ಮಾರುತಿ ಪಾರಾಯಣ ೧

ಗೋಪಾಂಗನಾ ಪ್ರಿಯ ಗೋಪಾಲ ಬಾಲ
ಚಾಪಾಂಬುಕರ ಭಯಹಾರ ಪ್ರಮೇಯ

ಶ್ರೀಪಾದ ಚಿನ್ಮಯ ಸೌಂದರ್ಯ ಶೀಲ
ಭೂಪಾಲ ಮಾಂಗಿರಿ ಶೃಂಗಾರ ನಿಲಯ ೨

೨೦

ವಿಶ್ವಾಧಾರಾ ವಿಹರಿತ ಮನ
ವಿಸ್ಫುರಿತಾನನ ಪಂಕೇಜಲೋಚನ ಪ

ಶರನಿಧಿ ಶಯನ ಸಿರಿಸತಿ ಸದನ
ತ್ರಿಭುವನ ಮೋಹನ ನಿಶಾಚರ ದಹನ ಅ.ಪ

ಶೌರೀ ಶೌರೀ ಶೌರೀ ಶೌರಿ ಮುರಾರೀ
ರಾಧಾ ಮನೋಹಾರಿ ಶಂಖ ಚಕ್ರಧಾರಿ
ನಿಶಾಚರಾರಿ ಜನೋಪಕಾರಿ
ಕರುಣಾಲಹರಿ ಶ್ರೀಹರಿ ೧

೨೧

ಶ್ರೀಗದಾಧರ ಪಾಹಿಮಾಂ ಹರೆ
ಭೋಗಿಶಯನ ಶೌರೇ ಪ

ಯಾಗ ಯೋಗ ಗಮ್ಯ ನೃಹರೆ
ತ್ಯಾಗಶೀಲ ಭೋ ಮುರಾರೆ ಅ.ಪ

ಮೃತಮಾನವ ಸುಗತಿ ದಾತಾ
ಪತಿತಾನತ ದಿವ್ಯ ನೀತ
ದಿತಿವಂಶಜ ಹರಣ ಖ್ಯಾತಾ
ಯತಿ ತಾಪ ಸನ್ನುತ ಚರಿತಾ ೧

ಶೃತಿ ಪುರಾಣ ಭರಿತ ವಿದಿತ
ಧೃತಿ ರಥಾಂಗ ಮಣಿರಂಜಿತ
ಜಿತಗಯಾಸುರ ವಿನುತ ನಮಿತ
ಖ್ಯಾತಮಾಂಗಿರಿ ವರೂಥ ೨

೨೨

ಶ್ರೀವತ್ಸಾಂಕಿತ ಗರುಡ ತುರಂಗ
ಕಾವೇರಿ ಜಲ ಪರಿವೃತ ರಂಗ ಪ.

ದೇವೋತ್ತಮ ನುತ ಧರಿತ ರಥಾಂಗ
ಪಾವನ ಚರಣ ಕೃಪಾಂಗ ಶುಭಾಂಗ ಅ.ಪ.

ದೇವಕೀನಂದನ ಜಲದ ನೀಲಾಂಗ
ಭಾವಜಪಿತ ದಯಾಜಲಧಿ ತರಂಗ
ಶ್ರೀವನಮಾಲಾ ರಿಪುಮದ ಭಂಗ
ಲಾವಣ್ಯಾಂಬರ ಕರುಣಾಪಾಂಗ ೧

ರಾವಣ ಕುಲ ಸಂಹಾರಕ ರಂಗ
ಶ್ರೀವಿಭೀಷಣ ಪೂಜಿತ ರಂಗ
ಭಾವುಕ ಮುನಿಜನ ಸನ್ನುತ ರಂಗ
ಶ್ರೀವಸುಧಾನ್ವಿತ ಮಾಂಗಿರಿರಂಗ ೨

೨೩

ಶ್ರೀನಿವಾಸ ಮಾ[ವಿಲಾಸ] ಮಾನವೇಶ ಈಶ ಶ್ರೀಶ
ದೀನ ಪೋಷಕ ಕಲುಷ[ನಾಶ ಮಾಮನಸಂತೋಷ] ಪ

ಗಾನಲೋಲ ಭಕ್ತಜಾಲ ದೀನರಿಗೆ ಕರುಣಾಲವಾಲ
ಮಾ[ನ]ವರ್ಗೆ ವಿಲೋಲ ಸಂಕುಲ ದಾನವಾಬ್ಧಿ ಕುಲಾಲೀಲ ೧

ಲಕ್ಷರೂಪನೆ ರಾಕ್ಷಸಾರಿ ಮೋಕ್ಷದಾತ [ನುತಪಾಲಕ]
ಯಕ್ಷಪಾಧಿಪ ಸುತೆಯ ರಮಣ ಯಕ್ಷ ಕಿನ್ನರ ವಿನುತ ಚರಣ ೨

[ಲಕ್ಷ್ಯವಿರಲಿ ರಾಮದಾಸಾರ್ಚಿತ ಭಾಗವತ ಪ್ರೋಕ್ತ]
ರಕ್ಷಿಸೈ ವರಪದ್ಮಚರಣ [ಮಾಂಗಿರಿ] ಭೂ ರಮೆಯ ರಮಣ ೩

೨೪

ಶ್ರೀಲಲಾಮ । ಶ್ರೀನಿವಾಸ । ಪಾಲಯಾ ಶುಮಾಂ ಹರೇ
ನೀಲಮೇಘ ಶ್ಯಾಮ ಸುಂದರ । ಬಾಲ ಭಾಸ್ಕರಾ । ಮುರಾರೆ ಪ

ಭಕ್ತ ಜನಾನಂದದಾತ । ಅಮರಕ್ಷೋಣಿ ಸಂಸೇವಿತ
ಶಕ್ತ ಸರ್ವಲೋಕ ಖ್ಯಾತ । ವ್ಯಕ್ತರತ್ನ ಶೋಭಿತ
ಯುಕ್ತಿ ಶಕ್ತಿ ಸಂಭೂಷಿತ । ವ್ಯಕ್ತ ನಿಗಮ ಸಂಗಮ ಸಂಭಾವಿತ
ರಿಕ್ತ ಮಾನವ ಸಂಪೂಜಿತ । ಸೂಕ್ತ ರೂಪದ ಮಾಂಗಿರಿನಾಥ ೧

೨೫

ಭಜ ಭಜ ಮಾನಸ ಗರುಡತುರಂಗಂ
ಅಜ ಸುರಸೇವಿತ ಪಾಂಡುರಂಗಂ ಪ

ಗಜರಾಜಾನತ ಮೋಹನರಂಗಂ
ವಿಜಯಧ್ವಜ ಶ್ರೀಪಾವನರಂಗಂ ಅ.ಪ

ಗಿರಿಧರ ಮುರಹರ ಭೂವರ ರಂಗಂ
ನರಕೇಸರಿ ಮುಖರಾಜಿತ ರಂಗಂ
ವರಶುದ್ಧಾಚ್ಯುತ ಸುರುಚಿರ ರಂಗಂ
ಪರಶಿವ ದಾನವ ವಿನಮಿತ ರಂಗಂ ೧

ಸನಕ ಸನಂದನ ಮುನಿನುತ ರಂಗಂ
ಹನುಮ ವಿಭೀಷಣ ಸನ್ನುತ ರಂಗಂ

ಘನಮಣಿ ಮೌಕ್ತಿಕ ಶೋಭಿತ ರಂಗಂ
ಜನಕ ಧರಾವಿವ ಪೂಜಿತ ರಂಗಂ ೨

ಮಂಗಳದಾಯಕ ಶುಭಕರ ರಂಗಂ
ಸಂಗರ ಧೀರ ಸುಧಾಕರ ರಂಗಂ
ಗಂಗಾಜನಕ ಕೃಪಾಂಬುಧಿ ರಂಗಂ
ಅಂಗಜ ಜನಕ ಶ್ರೀ ಮಾಂಗಿರಿ ರಂಗಂ ೩

೨೬

ಆನಂದ ಚಂದಿರನೇ ದಾಸನನೇಕಿಂತು ಮರೆವೇ ಪ

ದೀನ ದಯಾಪರ ನೀನು ಮನುಜಾಧಮ ನರ ನಾನು ಅ.ಪ

ತ್ರಿಜಗಾಧಿಪ ಸುಪೂಜ್ಯನೇ । ಗಜರಾಜ ನತ ಪಾದನೇ
ಅಜಸನ್ನುತ ವೈಭವನೇ । ಸುಜನಾವಳಿ ಸನ್ನುತನೇ ೧

ಕರುಣಾಮಯ ಸಾಗರನೇ । ಪುರುಷೋತ್ತಮ ಮಾಧವನೇ
ಉರಗಾಧಿಪ ಭೂಷಿತನೇ । ಗರುಡಧ್ವಜ ಕೇಶವನೇ ೨

ಕಡಲವಾಸ ದುರಿತನಾಶ । ಒಡಲ ಬೇಗೆ ಮನದ ಕ್ಲೇಶ
ದಡಕೆಸೆಳೆದ ಬಂಧುನಾಶ । ಬಿಡಿಸಿ ಕಾವವ ಮಾಂಗಿರೀಶ ೩

೨೭

ಆವ ಭಯ ಎನಗಿಲ್ಲ । ದೇವ ನಿನ್ನಯ ಪಾದ
ಸೇವೆ ಮಂತ್ರವು ಎನ್ನ । ಭಾವದೊಳಿರಲು ಪ

ಸಾವಿಗಂಜುವನಲ್ಲ । ನೋವಿಗಂಜುವನಲ್ಲ
ಜೀವಕೋಟಿಯನೆಲ್ಲ । ಕಾವನೀನಿರಲಾಗಿ ಅ.ಪ

ವರದಾತ ನೀನಿರಲು । ನರಕ ಭಯ ಎನಗುಂಟೆ
ಪರಮ ಪುರುಷಾರ್ಥಗಳ । ಕರವೆತ್ತಿ ಕೊಡುವ
ಧರಣೀಶ ಮಾಂಗಿರಿಯ । ಸಿರಿರಂಗಪತಿ ನಿನ್ನ
ಸ್ಮರಣೆ ವಂದನೆ ಎನ್ನ ಮನದೊಳಿರಲು ೧

೨೮

ಇನ್ನಾದರೂ ಮನದ ಚಂಚಲವ ನಿಲ್ಲಿಸೋ
ನೆನ್ನೆ ಕಳೆಯಿತು ನಾಳೆ ಇನ್ನೇನು ಗತಿಯೋ ಪ

ಗುರುಹಿರಿಯರನು ಕಂಡು ಶಿರಬಾಗಿ ವಂದಿಸಲು
ಚಿರಬಾಳು ನೂರ್ವರ್ಷ ಎಂದೆಂಬರು
ಧರೆಯಿಂದ ಜವನವರು ಕರೆಯ ಬರುವಾದಿನವೆ
ಬರಿದಾಗುವುದು ನೂರು ವರ್ಷವದರಿಂದ ೧

ಧನಕನಕ ಮನೆ ಮಾಟ ಎನಗೆ ಚಿರವೆಂದೆನುತ
ಮನವಿಂದ್ರಿಯಂಗಳನು ನಡಸಿತೆಲ್ಲೆಡೆಗೆ
ತನಗಾಗಿಯೇ ಸಕಲ ಜನರು ಜನಿಸಿದರೆಂದು
ನೆನೆದು ಹಿಂಸಿಸಿತವರ ಓ ಮಾಂಗಿರೀಶ ೨

೨೯

ಎಂದಾದರೊಂದು ದಿನ ನಿಂದು ನೋಡುವೆ ನಿನ್ನ
ಸುಂದರ ಪದಾಂಬುಜವ ಇಂದಿರೇಶ ಪ

ಬಂದ ಸುಖ ದು:ಖಗಳ ಒಂದಾಗಿ ತಿಳಿಯುತಲಿ
ತಂದೆ ಗೋವಿಂದ ಸಲಹೆಂದು ನಂಬಿರುವಾಗ ಅ.ಪ

ಮಾ ಮನೋಹರಾ ನಿನ್ನ ನಾಮ ಭಜನೆಯ ಗೈದು
ಕಾಮಿತಾರ್ಥಂಗಳನು ನಾ ಮರೆಯುತೇ

ನಾಮಾಳ್ವ ಕರ್ಮಗಳ ನೇಮದಿಂದಲಿ ಗೈದು
ರಾಮಾರ್ಪಣಾ ಎಂದು ಪ್ರೇಮದಿಂದರ್ಪಿಸಲು ೧

ಬಂದ ಅಭ್ಯಾಗತರಿಗೊಂದು ಪಿಡಿ ಅನ್ನವನು
ಎಂದೀಯಲೀವೆಯೋ ಅಂದು ಹರಿದಿವಸ
ಎಂದೀಯಲಾರೆಯೋ ಅಂದೆನಗುಪೋಷ್ಯವನು
ಸಂದೇಹವಿಲ್ಲದೀಯೆಂದು ನಂಬಿರುವಾಗ ೨

ದೊರೆಯದಿಹ ವಸ್ತುಗಳು ಹರಿಸಮರ್ಪಣವೆಂಬೆ
ದೊರೆತ ವಸ್ತುಗಳೆಲ್ಲ ಹರಿಕರುಣವೆಂಬೆ
ಗರುಡವಾಹನ ನಿನ್ನ ಶರಣು ಹೊಕ್ಕಿರುವಾಗ
ಕೊರತೆ ಏನಿಲ್ಲ ಮಾಂಗಿರಿ ರಂಗವಿಠಲ ೩

೩೦

ಆದಿದೇವ ಕರಣಕಾರಣ ಪ

ವೇದಪ್ರಿಯ ನಾದಪ್ರಿಯ ಸಾರಸ ಚರಣಾ
ಆದಿತೇಯ ವರದಾಭಯ । ದಾತಾ ಪ್ರೀತಾ ಮಾರಮಣಾ ಅ.ಪ

ವಾಸುದೇವ ಜೀವ ಜೀವ ಪಾವನತರ ಭಾವಾ
ಶ್ರೀ ಸಮೇತ ನೀರಜಾತ ಲೋಚನ ಜಗವಿನುತಾ
ಭಾಸಮಾನ ತೇಜವದನ ದಾನವ ಕುಲ ಮಥನ
ವಾಸವಾದಿ ನರಹರಿ ಮಾಂಗಿರೀಶ ಶೌರೀ ೧

೩೧

ಸಂಕರ್ಷಣ ವಾಸುದೇವ । ಸಂಕಟ ಹರಣ
ಶಂಖ ಚಕ್ರಧಾರಿ ಹರಿ । ವೆಂಕಟಾಚಲಾಧೀಶಾ ಪ

ಪಾಹಿ ಪರಮ ಹಂಸವಿನುತ । ಪಾಹಿ ಪರಮ ವೇದಚರಿತ
ಪಾಹಿ ಕಮಲಜಾತ ನಮಿತ । ಪಾಹಿಮಾಂ ಹರೇ
ಪಾಹಿ ಪರಮ ಕರುಣದಿಂ ಪಾಹಿ ಮಾಂಗಿರಿವಾಸ ೧

೩೨

ವಾಸುದೇವ ತೇ ನಮೋ ನಮೋ
ವಾಸವ ವಂದಿತ ನಮೋ ನಮೋ ಪ

ಕೇಶವ ಮಾಧವ ಕೃಷ್ಣ ದಾಮೋದರ
ಶ್ರೀಶ ಪರೇಶ ವಿಷ್ಣು ಪೀತಾಂಬರ
ಈಶ ಮುಕುಂದ ವೈಕುಂಠ ಪರಾತ್ಪರ
ಕೌಶಿಕ ಗೌತಮ ಮೌನಿ ಶುಭಂಕರ ೧

ಶೌರಿ ಚತುರ್ಭುಜ ಚಕ್ರಧರಾಚ್ಯುತ
ವೈರಿ ಭಯಂಕರ ಸಕಲಾಗಮನುತ
ಸಾರಸನಾಭ ನೀರೇಜ ಭವಾನತ
ಮಾರಜನಕ ರಘುವೀರ ಶಿವಾರ್ಚಿತ ೨

ಶ್ರೀಮಹಿತಾಂಗಾ ರಂಗಾ ನಮೋ ನಮೋ
ಶ್ರೀಮಣಿಹಾರಾ ರಂಗಾ ನಮೋ ನಮೋ
ಶ್ರೀಮುಕುಂದಾ ಶ್ರೀರಂಗಾ ನಮೋ ನಮೋ
ಶ್ರೀಮಾಂಗಿರಿ ವರರಂಗಾ ನಮೋ ನಮೋ ೩

೩೩

ಕೇಶಿದನುಜನ ನಾಶಗೊಳಿಸಿದ ಕೇಶವನೆ । ಕಾಯೋ ಶ್ರೀಧರ ಪ

ನಾಶರಹಿತ ಪರೇಶ ದಿನಪಸಂಕಾಶ । ಕ್ಲೇಶವಿನಾಶ ಭೂಧರ ಅ.ಪ

ದೀನಪಾಲನೆ ಗಾನಲೋಲನೆ ಧೇನುಕಾಸುರ ಸೂದನೆ
ಜ್ಞಾನದಾತನೆ ಧ್ಯಾನಕೆನಲಿವನು ಸಾನುರಾಗ ವಿನೋದನೆ ೧

ಗಂಗಾಜನಕ ರಥಾಂಗ ಧೃತ ಕಾಳಿಂಗನ ವೈರಿ ಗೋಪಾಲನೆ
ಮಂಗಳಾಂಗ ಶುಭಾಂಗ ಮಾಂಗಿರಿ ರಂಗ ಗೋಪೀ ಬಾಲನೆ ೨

೩೪

ಶ್ರೀಧರ ಕೇಶವ ಮುಕುಂದ ಜಯತು ಪ

ಮಾಧವ ಮುರಹರ ಗೋವಿಂದ ಜಯತು
ಭೂಧರ ನರಹರಿ ಮುಕುಂದ ಜಯತು
ಯಾದವ ಗಿರಿಧರ ಗೋವಿಂದ ಜಯತು ೧

ದಶರಥ ಸುತವರ ಮುಕುಂದ ಜಯತು
ಶಶಿಧರ ಸುತವರ ಮುಕುಂದ ಜಯತು
ನಿಶಚರ ಬಲಿಹರ ಗೋವಿಂದ ಜಯತು ೨

ನೃಪಾಲಕುಮಾರ ಮುಕುಂದ ಜಯತು
ನೃಪಾಲ ಕುಠಾರ ಗೋವಿಂದ ಜಯತು
ಅಪಾರ ಸಂಸಾರ ಗೋವಿಂದ ಜಯತು ೩

ಸುರಾರಿ ಮದಕರಿ ಮೃಗೇಂದ್ರ ಜಯತು
ಖರಾರಿಯನುಪಮ ನರೇಂದ್ರ ಜಯತು
ಮುರಾರಿ ಹರಿ ಮಾಂಗಿರೀಂದ್ರ ಜಯತು ೪

೩೫

ಕರ್ಣರಸಾಯನ ನಿತ್ಯ ಪಾರಾಯಣ
ವರ್ಣವರ್ಣವು ಶ್ರೀಹರಿ ನಾರಾಯಣ ಪ

ಸತ್ಯಪೂರ್ಣಗುಣ ಚಿತ್ಸುಖಧಾರಣ
[ನಿತ್ಯಾ]ನಂದದ ನಾರಾಯಣ ಅ.ಪ

ಪಾತಕ ಪರಿಹರ ಖ್ಯಾತ ಮನೋಹರ
ಪೀತಾಂಬರಧರ ಮುರಳೀಧರ
ದನುಜ ಭಯಂಕರ ದಿವಿಜ ಸುಖಂಕರ
[ವಿನುತ] ಶ್ರೀ ಮಾಂಗಿರಿವರ ಜಗದಾಧಾರ ೧

೩೬

ನಾರಾಯಣ ನಾರಾಯಣ ನಾರದನುತ ಮಾಂಪಾಹಿ ಪ

ನೀರೇರುಹನಾಭ ಸತ್ಯ [ಪ್ರೀತ] ನಾರಾಯಣ ಮಾಂಪಾಹಿ
ನಾರಾಯಣ ವೇದಾಂತ ನಾರಾಯಣ ಮಾಂಪಾಹಿ ಅ.ಪ

ಶರಣಾಗತ ಪರಿಪೂಜಿತ ಸರಸೀರುಹಭವವಂದಿತ
ಕರುಣಾಕರ ದಿವ್ಯಶೇಷ ನಾರಾಯಣ ಮುನಿಸೇವಿತ
ಸುರನಾಯಕ ನಿತ್ಯವಿನುತ ಮುರಳೀರವ ಪರಿತೋಷಿತ
ವರದಾಯಕ ಮಾಂಗಿರೀಶ ಪರಿಪಾಲಯ ಪಾರ್ಥಸೂರಿ ೧

೩೭

ನಾರಾಯಣ ನಾರಾಯಣ ಶರಣಾಗತ ಕರುಣಾ
ನಾರಾಯಣ ನಾರಾಯಣ ಸರಸೀರುಹ ಚರಣಾ ಪ

ನಾರಾಯಣ ನಾರಾಯಣ ಭವಸಾಗರ ತರಣಾ
ನಾರಾಯಣ ನಾರಾಯಣ ಶೌರೆ ಮಾರಮಣಾ ಅ.ಪ

ಕೇಶವ ಮಾಧವ ಗೋವಿಂದ ಹರೇ
ಕೇಶವ ಪರಾತ್ಪರ ಸಾನಂದ ಹರೇ

ಕ್ಲೇಶನಾಶ ದಾಮೋದರ ಶೌರೇ
ಈಶ ಪರೇಶಾದಿನೇಶಾ ಮುರಾರೇ ೧

ಉರಗ ಶಯನ ಸರಸೀರುಹ ನೇತ್ರಾ ।
ಗರುಡಗಮನ ನೀಲಾಂಬುದಗಾತ್ರ
ವರದಾಭಯಕರ ಪುಣ್ಯ ಚರಿತ್ರಾ ।
ಸುರನಾಯಕನುತ ಪರಮ ಪವಿತ್ರಾ ೨

ಪೀತಾಂಬರ ಪಾವನತರನಾಮಾ ।
ಸೀತಾ ಮನೋಹರ ಸುರಮುನಿಪ್ರೇಮಾ
ಪಾತಕಹರ ದೈತ್ಯಾವಳೀ ಭೀಮಾ ।
ಖ್ಯಾತಚರಿತ್ರ ಮಾಂಗಿರಿ ವರಧಾಮಾ ೩

೩೮

ಪ್ರಣಮಾಮ್ಯಹಂ ನಾರಾಯಣ ।
ಫಣಿ ಭೂಷಣಂ ಮುನಿ ತೋಷಿಣಂ ಪ

ಭವ ತಾರಣಂ ಭಯನಿವಾರಣಂ ।
[ತವ] ಸುಖಕಾರಣಂ ಮಣಿ ಭೂಷಣಂ ಅ.ಪ

ಅಜಸೇವಿತಂ ಕರುಣಾನ್ವಿತಂ
[ಗಜಪೂಜಿತಂ] ಮುನಿ ಸನ್ನುತಂ ।
[ದ್ವಿಜರಾಜಿತಂ ಕಮಲಾಯುತಂ]
ಸುಜನಾಪ ಮಾಂಗಿರಿ ಶೋಭಿತಂ ೧

೩೯

ವೇದವಿದಿತ ಮಾರಮಣ ಹರೇ ಪ

ವೇದಾಂತಾಗಮ ಸನ್ನುತ ಚರಣ
ಶ್ರೀಧರ ಗಂಗಾಪಾದ ನಾರಯಣ ಅ.ಪ

ಸಾರಯೋಗಿ ಕವಿತಾರಸ ತೋಷಿತ
ಕೈರವ ಸುಮಭವ ವಾಣಿ ವಿಭೂಷಿತ
ಚಾರು ಮಾಧವಿ ಭವ ವಾಗ್ರಂಜಿತ
ನಾರಾಯಣ ತೇ ನಮೋ ನಮೋ ೧

ಭೋಗ ಮಂಟಪೋಲ್ಲಾಸ ಮುಕುಂದ
ತ್ಯಾಗ ಮಂಟಪೋಲ್ಲಾಸ ಗೋವಿಂದ
ನಾಗಶಯನ ಶರಣಾಗತ ಬೃಂದ
ಯೋಗ ಮಂಟಪ ಮಾಂಗಿರಿಪತಿ ನಮೋ ನಮೋ ೨

೪೦

ಸೂರಿ ವಿನುತ ಚರಣ ನಾರಾಯಣ ಪ

ವಾರಿಧಿಶಯನ ಫಣಿಮಣಿ ಭೂಷಣಾ
ಸಾರಸಭವನುತ ನಾರಾಯಣಾ ಅ.ಪ

ತಂದೆ ತಾಯಿಯು ನೀನೆ ಬಂಧು ಬಳಗವು ನೀನೇ
ಸಿಂಧುಶಯನ ಗೋವಿಂದನು ನೀನೇ
ಮಂದರಧರ ಮುಚುಕುಂದ ವರದ ನೀನೇ
ಇಂದಿರೆಯರಸ ಮಾಂಗಿರಿಯ ರಂಗಯ್ಯ ೧

೪೧

ಅನಂತ ಮಾಧವ ಗೋವಿಂದಾ ಹರೆ
ಮುಕುಂದ ಕೇಶವ ಗೋವಿಂದಾ ಪ

ಮುರಾರಿ ನರಹರಿ ಗೋವಿಂದಾ ಹರೆ
ಖರಾರಿ ನಗಧರ ಗೋವಿಂದಾ ಅ.ಪ

ಶ್ರೀಶ ಪರೇಶಾ ಗೋವಿಂದಾ ಹರೆ
ಕ್ಲೇಶ ವಿನಾಶಾ ಗೋವಿಂದಾ
ಈಶ ರಮೇಶಾ ಗೋವಿಂದಾ ಹರೆ
ಕೇಶ ಕುಲೇಶಾ ಗೋವಿಂದಾ ೧

ಬೃಂದಾರಕಾನುತ ಗೋವಿಂದಾ ಹರೆ
ಮಂದಾಕಿನೀ ಪಿತ ಗೋವಿಂದಾ
ನಂದಕುಮಾರಾ ಗೋವಿಂದಾ ಹರೆ
ಮಂದರಗಿರಿಧರ ಗೋವಿಂದ ೨

ಭವ ಭಯ ಹರಣ ಗೋವಿಂದಾ ಹರೆ
ಶಿವಸುತ ಚರಣಾ ಗೋವಿಂದಾ
ಭುವನಾಭರಣಾ ಗೋವಿಂದಾ ಹರೆ
ಪವನಜ ಕರುಣಾ ಗೋವಿಂದಾ ೩

ಪರವೋತ್ತುಂಗಾ ಗೋವಿಂದಾ ಹರೆ
ಗರುಡ ತುರಗಾ ಗೋವಿಂದಾ
ಧರಿತರಥಾಂಗಾ ಗೋವಿಂದಾ ಹರೆ
ಮಾಂಗಿರಿ ರಂಗಾ ಗೋವಿಂದಾ ೪

೪೨

ಗೋವಿಂದ ಗೋವಿಂದ ಗೋಕುಲಾನಂದ
ದೇವೇಶ್ವರಾನಂದ ಪಾದಾರವಿಂದ ಪ

ಲಾವಣ್ಯ ಪರಿಪೂರ್ಣ ಸಚ್ಚಿದಾನಂದ
ಶ್ರೀವೇಣುಗೋಪಾಲ ಶೌರೇ ಮುಕುಂದ ಅ.ಪ

ನೀನೇ ಗತಿ ನೀನೇ ಮತಿ ನೀನೆನ್ನ ಪ್ರೇಮಾ
ನೀನೆನ್ನ ತಾಯ್ತಂದೆ ಲೋಕಾಭಿರಾಮಾ

ನೀನೆನ್ನ ಪರಮಾತ್ಮ ನೀನೇ ಪರಂಧಾಮ
ನೀನೆನ್ನ ಕರುಣದಲಿ ಕಾಯೋ ಶ್ರೀರಾಮ ೧

ಮಂಗಳಾಂಗನು ನೀನು ಕಮಲಾಯತಾಕ್ಷ
ಮಂಗ ಮೂಢನು ನಾನು ಸಿರಿದೇವಿ ಪಕ್ಷ
ಶೃಂಗಾರ ಪೂರ್ಣನೀ ಕಾಮ್ಯಾರ್ಥದಕ್ಷ
ಮಾಂಗಿರಿಯ ರಂಗ ಭಕ್ತಾಳಿ ಸಂರಕ್ಷ ೨

೪೩

ಗೋವಿಂದಂ ಭಜರೇ ಮಾನಸ ಪ

ದೇವ ದೇವೋತ್ತಮ ಭಾವುಕ ಫಲದಂ ಅ.ಪ

ಕರುಣಾ ಸಾಗರಂ ಶರಧಿ ಗಂಭೀರಂ
ಪರಮೋದ್ಧಾರಂ ಪುಣ್ಯ ಶರೀರಂ
ಧರಣಿಪ ಬಾಲಂ ಮುರಳೀಲೋಲಂ
ಸುರರಿಪು ಕಾಲಂ ಗೋಕುಲ ಬಾಲಂ ೧

ಪಾವನನಾಮಂ ಭವರಣ ಭೀಮಂ
ರವಿಕುಲಸೋಮಂ ಅವನಿಜಪ್ರೇಮಂ
ಕುವಲಯಶ್ಯಾಮಂ ಭುವನಾಭಿರಾಮಂ
ದಿವಿಜಾನುತ ಮಾಂಗಿರಿವರ ಧಾಮಂ ೨

೪೪

ಮಂದರಧರ ಗೋವಿಂದಾ । ಇಂದಿರಾನಂದ ನಂದನಕಂದ
ಸುಂದರವರದಾ ಪಾಹಿ ಮುಕುಂದಾ ಪ

ನೀರಜನಾಭ ನಿರುಪಮಶೋಭ
ವಾರಿಜಸೌರಭ ಹಿಮಕರ ಬಿಂಬ ೧

ತುಂಗ ಕೃಪಾಂಗ ಗರುಡತುರಂಗ ।
ಮಾಂಗಿರಿ ರಂಗ ಶುಭಾಂಗ ದೇವೋತ್ತುಂಗ ೨

೪೫

ವಂದನೆಯು ವಂದನೆಯು ವಂದನೆಗಳು
ನಂದಕುಮಾರ ಗೋವಿಂದನ ಚರಣಕೆ ಪ

ವಂದನೆ ಇಂದಿನ ಬಂಧನ ನಾಶಕೆ
ಮುಂದಿನ ಭವಗಳ ಮುಂದಿನ ಹರಣಕೆ ಅ.ಪ

ಹುಟ್ಟು ಸಾವುಗಳ ಕಟ್ಟಳೆ ಅವನದು
ಕೊಟ್ಟುದನು ಪಡೆಯುವದೃಷ್ಟ ನನ್ನದು
ಬೆಟ್ಟದ ಗಾತ್ರದ ಪಾಪವು ನನ್ನದು
ಇಷ್ಟನು ಕ್ಷಮಿಸುವ ದೃಷ್ಟಿ ಅವನದು ೧

ಶರಣರ ಪೊರೆಯುವ ಬಲವಾತನದು
ಪರಿಪರಿ ಪಾಪವ ಗಳಿಸುವುದೆನ್ನದು
ಕರುಣೆಯ ತೋರುವ ಮನವಾತನದು
ವರದ ಮಾಂಗಿರಿರಂಗ ನೀ ಶರಣೆಂಬುದು ನನ್ನದು ೨

೪೬

ಯದುನಂದನ ಬುಧಚಂದನ ಭವಬಂಧನ ದಮನಾ ಪ

ಮಧುಸೂದನ ವಿಧುರಂಜನ ಕಮಲಾಕರಭವನಾ ಅ.ಪ

ಅಜವಂದಿತ ಗಜಸೇವಿತ ಕರುಣಾರಸ ಭರಿತ
ಸುಜನಾನತ ಭಜಕಾನ್ವಿತ ಜಗದೀಶ್ವರ ಮಹಿತಾ ೧

ಪುರುಷೋತ್ತಮ ಪದವಿಕ್ರಮ ದನುಜಾವಳಿ ಭೀಮಾ
ಪರಮೋತ್ತಮ ಶರಧಿಸಮಾಯುತ ಮಾಂಗಿರಿಧಾಮಾ ೨

೪೭

ದಾನವಕುಲ ದಮನಾ ಕೇಶವ
ದೀನಪಾಲ ಗಾನಲೋಲ ಶ್ರೀಜನಾರ್ದನ ಪ

ವಾನರಪತಿಸದನಾ ಸನಕಾದಿ ಸೇವಿತ
[ದೀನ] ಶರಣ್ಯ ಸಾರಸಾಕ್ಷ ಲೋಕ ಮೋಹನ ಅ.ಪ
ಶ್ರೀ ರಮಣೀ ಸೇವಿತ ಚರಣಾಬ್ಜ
ಶೂರ ಶುಭಂಕರ ವಾರಿಧಿ ಶಯನಾ
ನಾರದನುತ ಚರಣಾ । ಸುರರಾಜ ಪೂಜಿತ
ನೀರಜಾಕ್ಷ ಮಾಂಗಿರೀಶ ವಾರಿಜಾಸನಾ ೧

೪೮

ಪುಂಡರೀಕಾಕ್ಷನ ನಾ ಕಂಡೆ
ಪಾಂಡುರಂಗೇಶನ ಪಾಂಡವಪಕ್ಷನ ಪ

ಅಂಡಜವಾಹನೋದ್ದಂಡ ಪರಾಕ್ರಮ
ಶುಂಡಲವರದ ಭೂಮಂಡಲ ಭರಿತನ ಅ.ಪ

ದೇವದೇವೇಶನ ಭಾವಜಜನಕನ
ಪಾವನಚರಿತನ ಭಾವುಕವರದನ
ಶ್ರೀವನಮಾಲನ ಲಾವಣ್ಯಾಂಗನ
ದೇವತರಂಗಿಣಿ ಪಾವನ ಪದನ ೧

ಪೀತ ಕೌಶೇಯನ ಪಾತಕ ಹರಣನ
ಜ್ಯೋತಿಸ್ವರೂಪನ ಭೂತಳವಳೆದನ

ಪಾತಕ ಹರ ಜೀಮೂತ ನೀಲಾಂಗನ
[ಪ್ರೀತ] ಮಾಂಗಿರಿನಾಥ ಸುಂದರನ ೨

೪೯

ಆ ರೂಪವನೆ ತೋರಿ ಎನ್ನ ತಣಿಸೊ
ಶೌರಿ ನಿನ್ನಯ ಭಕ್ತ ನಾನೆನ್ನಿಸೊ ಪ

ಇಂದುವರನಂದದಲಿ ಬಂದೆ ನೀ ಕನಸಿನಲಿ
ಇಂದಿರಾಪತಿಯೆಂದೆ । ಹುಸಿನಗೆಯಲಿ
ಒಂದು ಶಿವಚರಿತೆ ಪೇಳೆಂದು ಗುರುರೂಪದಲಿ
ಅಂದಿತ್ತ ದರ್ಶನವೆ ಸಾಕು ಎನಗೆ ೧

ವಾರಿನಿಧಿಯೊಳು ಮುಳುಗಿ ದಾರಿಕಾಣದ ಮುನಿಗೆ
ತೋರಿದಾ ಶಿಶುರೂಪ ಸಾಕು ಎನಗೆ
ಘೋರ ಕಾನನದಲ್ಲಿ ಜಾನಿಸಿದ ಬಾಲನಿಗೆ
ತೋರಿದಾ ಸಿರಿ ಮೊಗವೆ ಸಾಕು ಎನಗೆ ೨

ಅರಸಿಯಾಲಿಂಗನವ ಅರೆಘಳಿಗೆ ಬಿಡದವಗೆ
ಕರುಣದಿಂ ನೀತೋರ್ದ ಚರಣ ಸಾಕೆನಗೆ
ಪರರ ದಂಡಿಸಿ ಧನವ ಅಪಹರಿಸಿದಾತಂಗೆ
ಗುರುವೆನಿಸಿದಾ ರೂಪ ಸಾಕು ಎನಗೆ ೩

ಘೋರ ರೂಪವ ಗಳಿಸಿ ನಾರಣಾಯೆಂದವಗೆ
ತೋರಿದಾ ಕಾರುಣ್ಯವಿರಲಿ ಎನ್ನೊಳಗೆ [ಹದಿ
ನಾ]ರು ಸಾಸಿರ ಜನರ ಗುಂಪಿಂದಲೈತಂದು
ತೋರಿದಾ ದ್ವಿಜರೂಪ ಸಾಕು ಎನಗೆ ೪

ರಂಗನಾಥನು ನೀನೆ ಗಂಗಾಧರನು ನೀನೇ
ಮಾಂಗಿರಿಯ ಶೃಂಗಾರ ನಿಲಯ ನೀನೇ

ಅಂಗಜನ ಪಿತನೀನೆ । ಅಂಗಜಾರಿಯು ನೀನೆ
ಮಂಗಳಾಂಗನೆ ಭವದ ಹಂಗ ಬಿಡಿಸೋ ೫

೫೦

ದಿನ ದಿನ ಹರಿಕೃಷ್ಣಯೆನುತಿರೆ ಮನುಜನ
ಮನವೆ ವೈಕುಂಠವೆಂದೆನಿಸುವುದು ಪ

ನೆನೆಯುವ ಭಕ್ತನ ಕಿವಿಯಲಿ ಕೊಳಲಿನ
ದನಿಜನಿಪುದು ಕಂಬನಿ ಮಿನುಗುವುದು ಅ.ಪ

ಪೊಡವಿ ಪತಿಯ ಎಡತೊಡೆಯೊಳಿದ್ದಾ ಮುದ್ದು
ಹುಡುಗನ ಬಲತಾಯಿ ಪಿಡಿದೆಳೆಯೇ
ಕಡು ದುಗುಡದಿ ಶಿಶು ಅಡವಿಯೊಳಗೆ ಸಿರಿ
ಯೊಡೆಯನ ಕಂಡು ಕೊಂಡಾಡಿದನು ೧

ದ್ಯೂತದೊಳೆಲ್ಲವ ಸೋತರ ಸತಿಯಳ
ಘಾತಿಸಿ ಸೀರೆಯ ಸೆಳೆದಾಗ
ಭೀತಿಯಿಂದಲಿ ಪರಂಜ್ಯೋತಿ ಕೃಷ್ಣಾಯೆನೆ
ಪ್ರೀತಿಯೊಳಕ್ಷಯ ವರವಿತ್ತಾ ಕೃಷ್ಣಾ ೨

ಕೂಗಿದೊಡನೆ ತ್ವರೆಯಾಗಿ ಬರುವ ನಮ್ಮ
ನಾಗಶಯನ ಮಾಂಗಿರಿಪತಿಯ
ರಾಗದಿ ಪೂಜಿಸಿ ವಂದಿಸಲವನನು–
ರಾಗದಿ ನರ್ತಿಪನೆಡಬಲದಲಿ ರಂಗಾ ೩

೫೧

ಧೂಪವಿಡುವನ ಬಳಿಗೇ ದೀಪವಿಡುವ
ಆ ಪರಮ ಕರುಣಾಳು ಶ್ರೀಪತಿಯ ನೆನೆನೆನೆದು ಪ

ವಸುಮತಿಯನಿತ್ತವನ ಹೊಸಲಬಳಿಯಾಳಾದ
ಬಸಿವಲೆಯನಿತ್ತಳಿಗೆ ವಸನಗಳನಿತ್ತ
ಬಿಸಜವೊಂದಿತ್ತವನ ಹೊಸಖೇಚರನಗೈದು
ಬಿಸವುಂಡ ಬಾಲಕನ ಜಸವ ಚಿರಗೈದ ೧

ಅವಲಕ್ಕಿ ಇತ್ತವಗೆ ನಿಧಿಯನೇ ಅರ್ಪಿಸಿದ
ಸವಿಗಂಧವಿತ್ತವಳ । ಸುಂದರಿಯ ಗೈದ
ನವನೀತವಿತ್ತವರನೆಲ್ಲ ತನ್ನೊಳೆ ಹುಗಿದ
ಭವವ ಪರಿಹರಿಸಲ್ಕೆ ಬೇಸರಿಹುದೇ ಹರಿಗೆ ೨

ಅವನ ಜಾನಿಪ ಜನರ ಮರೆಯನಾ ನೀಲಾಂಗ
ಅವನ ಪೂಜಿಪ ನರರ ಮುನ್ನಿಲುವನಾಗಾಗ
ಅವನ ಕಥೆ ಕೇಳ್ವರ್ಗೆ ಉಂಟವನ ಸತ್ಸಂಗ
ಅವನೆ ಗತಿಯೆಂದವನಿಗೊಲಿವ ಮಾಂಗಿರಿರಂಗ ೩

೫೨

ನರಹರಿ ನಿನ್ನಯ ಮಹಿಮೆಯ ಪೊಗಳಲು
ಉರಗೇಂದ್ರನಿಗೂ ಅಳವಲ್ಲ ಪ

ಮರುಳ ಮೂಢ ಪಾಮರನೆನಿಸಿದಾ
ಸೂರಿದಾಸನಿಗೆ ಅಳವಹುದೇನೋ ಅ.ಪ

ಮಾನವರಿಗೆ ಭಕ್ತಿ ಜ್ಞಾನವ ಬೋಧಿಸಿ
ನೀನವತರಿಸಲು ಯೋಚಿಸುತೇ
ಮೌನಿಗಳನು ಬಾಗಿಲ ಬಳಿ ತಡೆವ
ಅಜ್ಞಾನವನಿತ್ತೆ ನೀ ಜಯವಿಜಯರಿಗೆ ೧

ನಿಂದಿಸಿ ತಡೆದಾ ಜಯವಿಜಯರು
ಭವಬಂಧನ ಪಡೆಯುವ ಪರಿಗೈದೆ

ಕುಂದದಿ ಹರಿವೈರದಿ ಸದ್ಧರ್ಮವ
ನಂದಿಸಿ ಮೆರೆಯುವ ತೆರಗೈವೆ ೨

ಹಿರಿಯ ಹಿರಣ್ಯಕ ಧರೆಯ ಕೊಂಡೊಯ್ಯೆ ಸೂ
ಕರ ರೂಪವನಾಂತು ವಧೆಗೈದೆ
ಕಿರಿಯ ಕಶಿಪು ಸರೋರುಹ ಸಂಭವನಲಿ
ವರಗಳ ಪಡೆವಂತೆ ಪ್ರೇರಿಸಿದೆ ೩

ಪುರವಲಯಗಳಲ್ಲಿ ಶರ ಶಸ್ತ್ರಾಸ್ತ್ರದಿ
ನರಖಚರಾಸುರ ಪರಿಪರರಿಂದೆ
ಮರಣವು ಬಾರದ ವರಗಳ ಪಡೆದನು
ದುರುಳ ಹಿರಣ್ಯಕ ವಾರಿಜಭವನಿಂದೆ ೪

ಹರಿಸರ್ವೋತ್ತಮ ನಂದಕುಮಾರಗೆ
ಪರಿಪರಿ ಶಿಕ್ಷೆಯ ವಿಧಿಸಲವು
ಗರಳವಮೃತವಾಯ್ತು ಕರಿಗಿರಿಯಹಿಗಳು
ಕರುಣೆಯ ತೋರ್ದವು ನಿನ್ನ ಮಹಿಮೆಯಿಂದಾ ೫

ಹರಿಚಿನ್ಮಯ ತಾನೆಂದಾ ಬಾಲನ
ಕರವಾಳದಿ ಸಂಹರಿಸುವೆನೆಂದು
ಹರಿಯನು ಕಂಭದಿ ತೋರೆನಲಸುರ ನರಮೃಗ
ರೂಪದಿ ಬಂದೆ ನೀ ತಂದೆ ೬

ಘಡಿ ಘಡಿಸೀ ನರಕೇಸರಿ ರೂಪದಿ ಪಿಡಿದಸುರನ
ಬಾಗಿಲ ಹೊಸಲಿನಲಿ
ಕೆಡುಕನ ಬಸಿರಿನ ಕರುಳ ನಖಗಳಿಂದ
ಪಿಡಿದೆತ್ತಿದೆಯಯ್ಯ ಮಾಂಗಿರಿಯರಸ ೭

೫೩

ಅಂದವ ಜರೆವರಾರು ರಂಗ ನಿನ್ನ ಅಂಗವ ಹಳಿವರಾರು ಪ

ಅಂದವ ಜರೆವರಾರೋ ಇಂದೀವರಾಕ್ಷ ಗೋವಿಂದ ನಿ
ನ್ನಂದಕೇಣಿ ಬಂದವರಿಲ್ಲವಯ್ಯ ಅ.ಪ

ನೀರಮೀನು ಎಂಬರೇನೋ ರಂಗಯ್ಯ
ಭಾರಿ ಕೂರ್ಮನೆಂಬರೇ
ಭಾರಿ ರೋಮ್ಯನು ಎನೆ
ಭೂರಿಸಂತಸವಿತ್ತೇ ೧

ಕೋರೇ ಹಲ್ಲವನೆಂಬರೇ ರಂಗಯ್ಯ
ಘೋರ ಕೇಸರಿ ಎಂಬರೇ
ಕೋರೆ ಹಲ್ಲಿಗೆ ಶೃಂಗಾರ ಧರಣಿದೇವಿ
ಘೋರ ಕೇಸರಿಗೆ ಹತ್ತಾರು ಕೈಗಳು ಚಂದ ೨

ಕೊಡೆಯ ಹಿಡಿದನೆಂಬರೇ ರಂಗಯ್ಯ
ಕೊಡಲಿ ಹಿಡಿದನೆಂಬರೇ
ಕೊಡೆಯ ಹಿಡಿದಡೇನು ಬಲಿಯ ಬಾಗಿಲ ಕಾಯ್ದೆ
ಕೊಡಲಿ ಹಿಡಿದು ಕಾರ್ತವೀರ್ಯಾರ್ಜುನನ ಕೊಂದೆ ೩

ಎಂಜಲ ತಿಂದರೇ ರಂಗಯ್ಯ ಗುಂಜುಗದಾತನೆಂಬರೇ
ಎಂಜಲ ತಿಂದಾ ಬಲದಿ ಮಾರೀಚನ ಕೊಂದೇ
ಗುಂಜುಗ ವೇಗದಿಂದ ಸತಿಯ [ಬಿಡಿಸಿ ಕಂದೆ]
ಕಂಜನೇತ್ರೆಯಳ ಕೈ [ಹಿಡಿದು ಬಂದೆ] ೪

ದುರುಳ ಚೋರನು ಎಂಬರೇ ರಂಗಯ್ಯ
ತುರಗವನೇರಿದನೆಂಬರೇ

ದುರುಳ ಕೌರವರೆದೆ ಬಿರಿವಂತೆ ಮಾಡಿದೆ
ದುರಿತಾರಿ ನೀ ಮಾಂಗಿರಿಯ ರಂಗಯ್ಯ ೫

೫೪

ನಮೋಸ್ತು ಸರಸಿಜ ಭವೇಂದ್ರ ಸನ್ನುತ ।
ನಮೋಸ್ತು ಜಗದಾಧಾರಾ ಪ

ನಮೋಸ್ತು ಸೋಮಕರಾ ವೇದೋದ್ಧಾರಾ ।
ನಮೋಸ್ತು ಮೀನ ಶರೀರಾ ಅ.ಪ

ನಮೋಸ್ತು ಮುನಿಗಣನುತಾ ಕೃಪಾಕರ ।
ನಮೋಸ್ತು ಕೌಸ್ತುಭಧರಾ
ನಮೋಸ್ತು ಮಂದರಧರಾಂಬುಜಾಂಬಕ ।
ನಮೋಸ್ತು ಕೂರ್ಮ ಶರೀರಾ ೧

ನಮೋ ನಮೋ ನಿಚರಾಳಿ ಕುಕುಲ ।
ಮೃಗೇಂದ್ರ ಸದ್ರುಶಾ ಶ್ರೀಪತೇ
[ನಮೋ ನಮೋ] ಭೂಧರಾಚ್ಯುತಾ ಹರೇ ।
ವರಾಹ ರೂಪ ನಮೋಸ್ತುತೇ ೨

ನಮೋ ನಮೋ ಪನ್ನಗಾರಿವಾಹನ ।
ಫಣೀಂದ್ರ ತಲ್ಪ ವಿರಾಜಿತೇ
ನಮೋ ನಮೋ ವರಪ್ರಹ್ಲಾದ ಸನ್ನುತ ।
ನೃಸಿಂಹರೂಪ ನಮೋಸ್ತುತೇ ೩

ನಮೋ ಪುರಂದರ ಕರಾರ್ಚಿತಾಸನ ।
ಫಲಪ್ರದಾ ಸಕಲೇಷ್ಟದಾ
ನಮೋ ತ್ರಿವಿಕ್ರಮ ಬಲೀಂದ್ರ ವತ್ಸಲ ।
ನಮೋಸ್ತು ವಾಮನ ಶ್ರೀಕರಾ ೪

ನಮೋ ದ್ವಿಜೋತ್ತಮ ಮುನೀಂದ್ರ ಕಲಯಾ ।
ರಮಾಮನೋಹರ ಶ್ರೀಹರೇ
ನಮೋ ನೃಪಾಲಕುಲಾಳಿ ಭಂಜನ ।
ನಮೋಸ್ತು ಪರಶುಧರಾಹರೇ ೫

ನಮೋಸ್ತುತೇ ದಶರಥಾತ್ಮ ವಂಶ ।
ಪ್ರದೀಪ ಹನುಮತ್ಸೇವಿತ
ನಮೋಸ್ತುತೇ ದಶಶಿರಾಂತಕಾ ಭವ ।
ವಿನಾಶ ಭೂಮಿಸುತಾನ್ವಿತಾ ೬

ನಮೋಸ್ತುತೇ ಬಕವೃಷಾಸುರಾಂತಕ ।
ಕೃಪಾಕರಾ ಪಶುಪಾಲಕಾ
ನಮೋಸ್ತುತೇ ರುಕ್ಮಿಣೀಶ ಗೀತಾ ।
ಪ್ರವೀಣ ಗೋಪಬಾಲಕಾ ೭

ನಮೋ ನಮೋ ಕಾರಣಾಯ ಜಗತಃ ।
ಪಿತಾಯ ವ್ರತ ನಿರ್ಮೂಲತೇ
ನಮೋ ನಮಃ ಪಾರ್ವತೀಧೃತಕರ ।
ನಮೋಸ್ತು ಬುದ್ಧ ಶರೀರತೇ ೮

ನಮೋ ನಮೋ ಪಾವನಾಯ
ಧರ್ಮೋದ್ಧರಾಯ ತುರಂಗ ವಿರಾಜತೇ
ನಮೋ ನಮಃ ಖಚರೇಂದ್ರ ಗಮನ ।
ಸುರೇಶ ಕಲ್ಕಿ ಮಹಾತ್ಮತೇ ೯

ನಮೋಸ್ತು ನಿಗಮೋದ್ಧರಾಯ
ಪರ್ವತಧರ ಧರಾಯ ನೃಸಿಂಹತೇ
ನಮೋಸ್ತು ವಾಮನ ದ್ವಿರಾಮಕೃಷ್ಣ ।
ಪ್ರಬುದ್ಧಕಲ್ಕಿ ದಿಶಾಕಲತೇ ೧೦

ನಮೋಸ್ತು ಮಂಗಳ ಫಲಪ್ರದಾಯಕ ।
ಶುಭಾಂಗ ಗರುಡ ತುರಂಗತೇ
ನಮೋಸ್ತು ಮಾಂಗಿರಿನಿವಾಸಾ
ನಾರಾಯಣಾಯ ಭಕ್ತೋದ್ಧಾರತೇ ೧೧

೫೫

ಅರವಿಂದ ನೇತ್ರಾನಂದ ಗೋವಿಂದಾ
ವರನಂದ ಕಂದಾ ಪೊರೆಯ್ಯೆ ಮುಕುಂದಾ ಪ

ಶ್ರೀಲಲಾಮ ರಾಮ ಬಾಲಕ ಸುಪ್ರೇಮಾ
ಕಾಲಕಾಲಭೀಮ ಲೋಲ ರಂಗಧಾಮಾ ೧

ಮಾನುಷಾವತಾರ ದೀನಪಾಲ ಶೂರ
ಗಾನಲೋಲ ಮಾರ ದಾನವ ಸಂಹಾರ ೨

ಗಜರಾಜ ವರದ ಅಜಸುರ ವಿನೋದ
ಭಜಕ ಹೃದಯಾಹ್ಲಾದ । ವಿಜಯ ಪದ್ಮಪಾದ ೩

ಮಡುವಿನೊಳಿಹೆನಯ್ಯ ಪಿಡಿಯೆನ್ನ ಕೈಯ
ಮೃಡನುತಾ ರಂಗಯ್ಯ ಪೊಡವಿಯರಸ ಜೀಯ ೪

ವಾಮದೇವ ನುತ ಭೂಮಿಜಾಸೇವಿತ
ರಾಮದಾಸನುತ ಕೋಮಲಾ ದಯಾಭರಿತ ೫

೫೬

ಕರುಣಾ ಜಲಧಿ ರಾಮ । ಪವನಜ ಪ್ರೇಮಾ ಪ

ಪರಮ ಪಾವನ ನಾಮ । ಲೋಕಾಭಿರಾಮಾ ಅ.ಪ

ಜಾನಕಿ ರಾಮ । ದಾನವ ಭೀಮಾ
ಭಾನು ಕುಲೋದ್ದಾಮಾ । ನೀರದ ಶ್ಯಾಮ ೧

ಮೌನಿಜನಾರಾಮ । ಶಿವನುತರಾಮ
ಅನುಪಮಸೀಮ । ಮಾಂಗಿರಿಧಾಮ ೨

೫೭

ಕೌಸಲ್ಯಾ ಸುಕುಮಾರ ಭಾಸಿತ ಕೋದಂಡಧರ
ವಾಸವನುತ ರಣಧೀರ ಭೂಮಿಸುತಾ ಮೋಹಕ ೧

ಮುನಿಕೌಶಿಕ ಮಖಪಾಲನ । ಜನಕಸುತಾ ಮನಮೋಹನ
ಮುನಿಸುದತ್ರಿ ಭವ ಖಂಡನ ಘನದಾನವ ಸತಿಭಂಜನ ೨

ಭರತಾರ್ಚಿತ ವರಚರಣ । ಖರದೂಷಣ ಸಂಹರಣ
ಮರುತಾತ್ಮಜ ಮಣಿಭೂಷಣ । ಶರಣಾಗತ ಮನತೋಷಣ ೩

ಲಂಕಾಧಿಪಕುಲನಾಶಕ । ಕಿಂಕರವಾನರಪೋಷಕ
ಪಂಕೇರುಹ ಲೋಚನಾಕಳಂಕ [ಶಮನ] ಮಾಂಗಿರಿ ನಾಯಕ ೪

೫೮

ಚಿಂತಯಾಮಿ ರಾಮಮಮಿತಮಹಿಮಂ
ಶಾಂತದಾಂತ ಮಾಕಾಂತ ಧೀಮಂತ ಪ

ಅಂತರಾತ್ಮಮಮಲ ಸುಗುಣ ಭರಿತಂ
ಸಂತ ಹನೂಮಂತನಮಿತ ಚರಿತಂ ಅ.ಪ

ಮೌನಿಯಾಗ ಪಾಲಮತುಳ ಶೂರಂ ೧

ಮಾನಿನೀಮಣಿ ಶಾಪಭಂಗ ಚತುರಂ ೨

ಜಾನಕೀ ಹೃದಯಾಪಹಾರ ಧೀರಂ ೩

ಸಾನುಜ ಭರತೇಷ್ಟದಾತಮುದಾರಂ ೪

ದಾನವ ಖರದೂಷಣ ಸಂಹಾರಂ ೫

ಆನತ ಖಚರೇಂದ್ರ ಮೋಕ್ಷದಾತಾರಂ ೬

ಕಾನನ ಸತ್ವಾವನಕರ ಸಂಚಾರಂ ೭

ವಾನರಪತಿ ಸೇವಿತ ಪರಿವಾರಂ ೮

ದಾನವ ರಾವಣ ಮರ್ದನ ಶೂರಂ ೯

ದೀನಪಾಲ ಮಾಂಗಿರಿಪತಿ ಗಂಭೀರಂ ೧೦

೫೯

ಜಾನಕಿರಾಮಾ ಸಾಮಜಪ್ರೇಮಾ
ದಾನವಭೀಮಾ ಇನಕುಲಸೋಮಾ ಪ

ಪಾವನನಾಮಾ ಜಗದಭಿರಾಮಾ
ಸದ್ಗುಣಶ್ಯಾಮಾ ಅಂಬುದಶ್ಯಾಮಾ ಅ.ಪ

ದಶರಥ ನಂದನ ಸುರಮುನಿಚಂದನ
ಶರನಿಧಿ ಬಂಧನ ಶಶಿಸಮ ವದನಾ
ದಶಶಿರ ಭಂಜನ ಜನಮನ ರಂಜನ
ತ್ರಿಭುವನ ಪಾವನ ಮಾಂಗಿರಿಮೋಹನಾ ೧

೬೦

ಜಾನಕೀಮನೋಹರಾ ಜನಪಕುಮಾರಾ
ಭಾನುವಂಶಭಾಸ್ಕರಾ ದುರಿತವಿದೂರಾ ಪ

ಮಾರಕೋಟಿಸುಂದರ ಶರಧಿಗಂಭೀರ
ಶೂರ ದೈತ್ಯಭೀಕರ ಪರಮ ಉದಾರ ೧

ವಾನರೇಂದ್ರ ವಂದಿತ ಮೌನಿನಿಕರ ಸೇವಿತ
ದೀನ ವತ್ಸಲಾಂಕಿತ ಸಕಲ ಸನ್ನುತ ೨

ಪಾಹಿ ಪಾಹಿ ರಾಘವೇಶ ಪಾಹಿ ಲೋಕೇಶ
ಪಾಹಿ ಪಾಹಿ ಮಾಂಗಿರೀಶ ಸುಪ್ರಕಾಶ ೩

೬೧

ಜಾನಕೀ ರಾಮಚಂದ್ರಾಯ ನಮಸ್ತೇ ಶ್ರೀ
ಭಾನುಕೋಟಿ ಸುಪ್ರಕಾಶ ವಾರಿಧಿಸಮ ಗಂಭೀರ ಪ

ದಾನವೇಂದ್ರ ಭೀಷಣಾಯ ದೀನಪಾಲನ ಚಿಂತನಾಯ
ಮಾನವೇಂದ್ರ ಗುಣಸಾಂದ್ರ ವೇದವೇದ್ಯ ರಾಘವಾಯ ಅ.ಪ

ಸಕಲಲೋಕ ಸನ್ನುತಾಯ ವಿಕಸಿತಾಂಬುಜ ಲೋಚನಾಯ
ಮಕರಕುಂಡಲ ಭೂಷಿತಾಯ ಶೋಕನಾಶಚಾರಿತ್ರಾಯ
ಶುಕ ವಶಿಷ್ಠ ವಂದಿತಾಯ ಸಕಲಧರ್ಮಪಾಲನಾಯ
ವಕುಳಮಾಲಾಭರಣ ಮಾಂಗಿರಿನಿಲಯಾಸೂರಿ ಪೂಜಿತಾಯ ೧

೬೨

ತವ ಸಂಸ್ಮರಣಂ ಭವಪರಿಹಾರೀ
ತವ ಮೃದುಚರಣಂ ಶರಣೋದ್ಧರಣಂ ಪ

ಶಿವ ಸಂಸ್ಮರಣಂ । ಸಕಲಾಭರಣಂ
ಕುಃ ವಿಸ್ಮರಣಂ ಚಿರಮಮ ಶರಣಂ ಅ.ಪ

ಶ್ರೀಕರಚರಣಂ ಬಂಧನೋದ್ಧರಣಂ
ರಘುಪತಿ ಚರಣಂ [ಪಾಪವಿನಾಶಂ]
ಜಾನಕಿರಮಣಂ ಭಜಸುಖ ಕರಣಂ ೧

ಶ್ರೀಮಣೀಕರಸೇವಿತ ಚರಣಂ
ಮಾರುತಾತ್ಮಜ ಸುಪೂಜಿತ ಚರಣಂ
ನಾರದನುತ ಮಾಂಗಿರಿಪತಿ ಚರಣಂ ೨

೬೩

ದಿನಮಣಿ ಕುಲಜಾತಾ ಪ್ರತಾಪ ಪ

ಜನಕಸುತಾನ್ವಿತ ಮುನಿಕುಲಸನ್ನುತ
ಶರಣಾಗತ ವರದಾತಾ ವಿನೀತಾ ಅ.ಪ

ದುರುಳ ಖರಾರಿ । ಪಾವನ ಶೌರೀ । ದಶಕಂ
ದರ ಮದಹಾರಿ । ಉದಾರೀ ೧

ಜಗದಭಿರಾಮಾ ರಘುಕುಲ ಸೋಮಾ
ಮರುತಾತ್ಮಜಮನಧಾಮ ಸುನಾಮ ೨

ಮಾಂಗಿರಿಮಂದಿರ ದೀನ ಕೃಪಾಕರ
ಪೀತಾಂಬರಧರ ಮಾರಶರೀರಾ ೩

೬೪

ದೇವ ದೇವ ಲೋಕೇಶ್ವರಾ ರಾಮ ಪ

ಪಾವನಾತ್ಮ ಪರಾತ್ಪರಾ ದೋಷದೂರಾ
ಜೀವ ಜೀವ ಚರಾಚರ ಗೂಢಚಾರ ಅ.ಪ

ಜಗದಾದಿಮೂಲ ಪಾಲನೈಕಲೀಲಾ
ಭಗವಾನ್ ತ್ರಿಕಾಲಾತ್ಮಕ ಕಾಲಕಾಲಾ
ನಗನಾಗ ಹಾಲಾಹಲಮಾಯ ಮಾಲಾ
ತ್ರಿಗುಣಾತ್ಮಕಲೀಲಾ ಕರುಣಾಲವಾಲಾ ೧

ದುರುಳ ವಂಶ ವೇತ್ರಾ । ಸುಜನಾತಪತ್ರಾ
ಪರಮಶುಭಚರಿತ್ರಾ ಸ್ವಪ್ರಕಾಶಗಾತ್ರಾ
ಸರಸಿಜಾತನೇತ್ರಾ ಸಕಲಲೋಕ ಸೂತ್ರಾ
ಧರಣಿಜಾ ಕಳತ್ರಾ ಕರುಣೈಕ ಪಾತ್ರಾ ೨

ಶಿವಶೌರಿ ನೀನೆ । ಭವನಿಂದ್ರ ನೀನೇ
ರವಿಸೋಮ ನೀನೇ । ನವಗ್ರಹವೂ ನೀನೇ
ಅವನಿಯೆಲ್ಲ ನೀನೇ । ಭವಕಳೆವವ ನೀನೇ
ಜವ ಜೀವನೇ ಶ್ರೀಧವ ಮಾಂಗಿರೀಶ ॥ ೩

೬೫

ಧರಣಿಜಾ ಪ್ರಿಯರಾಮಾ ಮರುತಾನಂದನ ಪ್ರೇಮಾ
ಸುರಮುನಿಮನಧಾಮಾ ರತನರಾಮಾ ಪ

ದುರುಳ ರಕ್ಕಸ ಭೀಮಾ ತರಣಿವಂಶಲಲಾಮಾ
ಪರಮ ಸುಂದರ ನಾಮಾ ಲೋಕಾಭಿರಾಮಾ ಅ.ಪ

ಎನ್ನಕಾಯುವರಾರು ನೀನಲ್ಲದಿನ್ನಾರು
ನಿನ್ನಪಾದವತೋರು ಕರುಣವ ಬೀರು
ಎನ್ನ ಪಾತಕಭಂಗ ನಿನ್ನಿಂದ ನೀಲಾಂಗ
ನಿನ್ನ ಭಕ್ತರಸಂಗವೀಯೋ ಮಾಂಗಿರಿರಂಗ ೧

೬೬

ಧರಣೀ ರಮಣಾ ರಾಮ । ದುರಿತಹರಣ ನಾಮ ಪ

ಸುರನಾಯಕವೈರಿ ಭೀಮಾ । ಸರಸೀರುಹನಯನ ರಾಮಾ ಅ.ಪ

ಪರಮಶಾಂತ ರಮೆಯ ಕಾಂತ
ಸರಸಿಜಾತ ಭವದೇವಿತ
ಮರುತನಂದನ ನಿರುತ ಪೂಜಿತ
ಶರಣಜನ ಸಂಸೇವಿತ ಭಾವಿತ ೧

ಅಕ್ಷಯಾತ್ಮ ನೀರಜಾಕ್ಷ
ಲಕ್ಷರೂಪ ದಾನವಶಿಕ್ಷ
ಪಕ್ಷಿವಾಹನ ಮೋಕ್ಷದಕ್ಷ
ರಕ್ಷ ನಿತ್ಯಪೂರ್ಣಕಟಾಕ್ಷ ೨

ಮಂಗಳಾಂಗ ಧಲತ ರಥಾಂಗ
ಅಂಗಜಾತಪಿತ ಶುಭಾಂಗ
ಗಂಗಾಧರವಿನುತ ರಂಗ
ಮಾಂಗಿರೀಶ ದೇವೋತ್ತುಂಗ ೩

೬೭

ಧೀಮಂತಮನಂತಂ ಚಿಂತಯಾಮಿ ಭಗವಂತಂ ಪ

ಹೇಮಾಂಬರವೇಷ್ಟಿತಂ ಸಾಮಜವರಪೂಜಿತಂ ಅ.ಪ

ವಾಸವಾದಿ ಸನ್ನುತಂ ಮಾರುತಾತ್ಮಜಾನತಂ
ವಾಸುದೇವಮಚ್ಯುತಂ ಸೋಮಶೇಖರಾರ್ಚಿತಂ ೧

ಭಾಸಮಾನಮಣಿಯುತಂ ಮೌನಿನಿಕರಸೇವಿತಂ
ಕೋಸಲೇಯ ಮಾಂಗಿರೀಶಿಖರ ನಿಲಯರಾಜಿತಂ ೨

೬೮

ನಮೋ ನಮೋ ರಾಮ । ರಘೂತ್ತಮ ಪ

ನಮೋ ನಮೋ ಶಿವ । ಮನಾಭಿರಾಮಾ
ನಮೋ ನಮೋ ಭವವಿನಾಶ ನಾಮಾ ಅ.ಪ

ಸತ್ಯಕಾಮ ರವಿವಂಶಲಲಾಮ
ಸತ್ಯಪೂರ್ಣ ಭುವನೇಶ್ವರ ರಾಮ
ಭೃತ್ಯಪಾಲ ಮಾಂಗಿರಿ ರಾಮ ೧

೬೯

ಪತಿತಪಾವನ ರಮಾಪತಿ ಪರಂಧಾಮಾ ಪ

ಗತಿಮತಿ ನಿನ್ನ ನಾಮಾ । ಅಮೃತವು ಸೀತಾರಾಮಾ
ಹಿತಪಿತ ನೀನೇ ರಾಮಾ । ತಾರಕ ನಾಮಾ ಅ.ಪ

ದಶರಥ ಬಾಲಾ । ಸುರಮುನಿ ಪಾಲಾ
ನಿಶಿಚರ ಶೂಲಾ । ಶ್ರೀವನಮಾಲಾ
ಶಶಿಸಮ ಪಾಲಾ । ಕರುಣಾಲವಾಲಾ
ದಶಮುಖ ಕಾಲ । ಮಾಂಗಿರಿಯ ಗೋಪಾಲಾ ೧

೭೦

ಪಾಲಯಾಶುಮಾಂ ಸೀತಾರಾಮ
ನೀಲಕಂಠ ಸನ್ನುತ ಶ್ರೀರಾಮ ಪ

ಭೂಲಲಾಮ ಪಾವನಕರ ನಾಮಾ
ಕಾಲಕರ್ಮಕಾರಣ ಭವಭೀಮ ಅ.ಪ

ದಶರಥ ನಂದನ ಕೋದಂಡರಾಮ
ಕುಶಿಕ ಮಹಾಧ್ವರ ರಕ್ಷಕ ನಾಮ
ಶಶಿಮುಖಿ ಮುನಿಸತಿ ಸನ್ನುತ ರಾಮ
ನಿಶಿಚರ ತಾಟಕಾ ಮರ್ದನ ರಾಮ ೧

ಜಾನಕಿ ವಲ್ಲಭ ಜಗದಭಿರಾಮ
ದಾನವ ರಾವಣ ಶಿಕ್ಷಕ ರಾಮ
ದೀನಶರಣ ಮಾಂಗಿರಿವರಧಾಮಾ
(ದೀನನೆನ್ನ ಕಾಯೊ ಶ್ರೀರಾಮ) ೨

೭೧

ಪಾವನಕರ ನಾಮಾ ಪರಮ ಪುರುಷ ರಾಮಾ ಪ

ದೇವೋತ್ತಮ ಸಾರ್ವಭೌಮ । ದಾನವಕುಲ ಭೀಮ ಅ.ಪ

ನಿಗಮಾಗಮ ಪರಿಪೂರಣ । ಸುಗುಣಾಕರ ಮುನಿತೋಷಣ
ಖಗಮಾನಸ ಮಣಿಭೂಷಣ । ಸುರನರಶರಣಾ ೧

ಜಗಜೀವನ ಲಯಕಾರಣ । ಪವನಾತ್ಮಜ ಕರುಣಾ
ಸುಗುಣಾಕರ ಭವತಾರಣ । ಮಾಂಗಿರೀಶ ಕಮಲಚರಣ ೨

೭೨

ಪಾಲಯಮಾಂ ಕರುಣಾಭರಣ ।
ನೀಲಕಾಯ ಜಾನಕಿರಮಣಾ ಪ

ಶೂಲಪಾಣಿ ಸನ್ನುತ ವರಚರಣಾ ।
ಭೂಲಲಾಮ ರಾವಣಸಂಹರಣ ಅ.ಪ

ಪುರಹರ ವಿನುತ ಶಾಪವಿದೂರ ।
ಮರಕತ ಗೋಮೇಧಿಕ ಮಣಿಹಾರಾ ।
ಸರಸಿಜ ಕೋಮಲ ಮದನಾಕಾರ ।
ಸುರಪತಿ ಸನ್ನುತ ನಿಗಮಾಧಾರಾ ॥ ೧

ನರಪಕುಮಾರ ಘನಗಂಭೀರಾ ।
ನಿರುಪಮ ಶೂರಾ ಪುಣ್ಯಶರೀರಾ ।
ದುರುಳ ವಿದಾರಾ ಜಗದಾಧಾರಾ ।
ಪರಮೋದಾರಾ ಮಾಂಗಿರಿವರ ॥ ೨

೭೩.

ಪಾಹಿ ಪಾಹಿ ಪರಂಧಾಮ ಸುನಾಮ ಗುರುವಂದಿತ ಶ್ರೀರಾಮ ಪ

ಅಹಿಭೂಷಣ ನುತರಾಮ । ಮಹಿಜಾಪ್ರಿಯ ಶ್ರೀರಾಮ ಅ.ಪ

ದಶರಥೇಂದ್ರ ಸುಕುಮಾರ । ನಿಶಿಚರಾಳಿ ಸಂಹಾರ ।
ಕೌಶಿಕ ಭಯ ಪರಿಹಾರ । ಪರಮಶೂರ ಶ್ರೀರಾಮ ೧

ಮುನಿಗೌತಮ ಸತಿಪಾವನ । ಜನಕಾತ್ಮಜ ಮನಮೋಹನ ।
ಮುನಿಸನ್ನುತ ಸುರಜೀವನ । ವನಜೇಕ್ಷಣ ಶ್ರೀರಾಮ ೨

ಜನಕ ಮನೋಗತ ಬಂಧಿತ । ಜನಕಜಾ ಸುಮಿತ್ರಜಾಯುತ ।
ವನವನಾಂತರ ಸಂಚರಿತ । ಸನಕಾನತ ಶ್ರೀರಾಮ ೩

ಭರತಾನತ ಪೂಜ್ಯಪಾದ । ಪರಮಾದ್ಭುತ ಶರ ವಿನೋದ ।
ಸುರಭೀಕರ ದೈತ್ಯಸೂದ । ಅಭಯಪ್ರದ ಶ್ರೀರಾಮ ೪

ಖರದೂಷಣ ತ್ರಿಶಿರಾಂತಕ ಶ್ರೀರಾಮ ।
ಖಚರಾಧಿಪ ಪ್ಲವಗೇಶ್ವರರಾಮ
ವರದಾಯಕ ಭಯಹಾರಕ ರಾಮ । ಶುಭಕಾರಕ ಶ್ರೀರಾಮ ೫

ನಿಶಿತ ವರಾಸ್ತ್ರ ವಿಜೃಂಭಿತರಾಮ ।
ನಿಶಿಚರ ಕಾಲಾಂತಕ ರಣಭೀಮ ।
ಕುಶಲ ವಿಭೀಷಣನುತರಾಮ । ಶಶಿಧರ ಸನ್ನುತ ಶ್ರೀರಾಮ ೬

ಪವಮಾನಾತ್ಮಜ ಸೇವಿತರಾಮಾ ।
ಭುವನೋದ್ಧಾರಣ ಕಂಕಣ ರಾಮಾ ।
ಭವ ಬಂಧನ ಸಂಹಾರಕ ರಾಮಾ ।
ಭುವನಾನಂದದ ಶ್ರೀರಾಮಾ ೭

ಪಾವನ ಸೇತೋಕಾರಕರಾಮಾ ।
ದಾವಾನಲ ಸಮರಂಜಕ ರಾಮಾ ।
ರಾವಣಕುಲ ವಿಧ್ವಂಸಕ ರಾಮಾ । ಸೀತಾನಾಯಕ ಶ್ರೀರಾಮಾ ೮

ಸಾಕೇತ ಪುರಾಧೀಶ್ವರ ರಾಮ ।
ರಾಕಾಚಂದ್ರ ಸುಧಾಕರ ರಾಮಾ ।
ಏಕಚಕ್ರಾಧಿಪ ರಘುರಾಮ । ಲೋಕಸುಖಂಕರ ಶ್ರೀರಾಮ ೯

ಅಂಗದ ಹನುಮತ್ಸೇವಿತರಾಮ । ಮಂಗಳಕರ ಸೀತಾರಾಮ ।
ಮಾಂಗಿರಿನಿಲಯ ಶುಭಾನ್ವಿತ ರಾಮ । ಜಗವಂದಿತ ಶ್ರೀರಾಮ ೧೦

೭೪

ಪಾಹಿಮೋಹನರಾಮ ಅಭಿರಾಮ
ಭೀಮ ಪರಾಕ್ರಮ ನಿರುಪಮ ಪ್ರೇಮ ಪ

ಪರಶಿವ ನುತನಾಮ ಪಾವನನಾಮ
ದಾನವಭೀಮ ಕುವಲಯ ಶ್ಯಾಮ ಅ.ಪ

ಕೋಸಲಪುರಪಾಲ ದಶರಥ ಬಾಲ
ದುರುಳ ಕುಲಾನಲ ಘನಗುಣಶೀಲ
ಕನಕದುಕೂಲ ಮಣಿಮಯ ಮಾಲಾ
ಜಾನಕಿಲೋಲ ಕರುಣಾಲವಾಲ ೧

ಪವನಸುತಾನತ ಸುಗುಣಗಣಾನ್ವಿತ
ಭರತ ಸಂಶೋಭಿತ ಮುನಿಗಣ ಸೇವಿತ
ಕಮಲದಳಾಯತ ಲೋಚನ ಸುಲಲಿತ
ಕುಂಭಜಪೂಜಿತ ಮಾಂಗಿರಿನಾಥ ೨

೭೫

ಪೀತಾಂಬರಧರ ದಶರಥಬಾಲಾ
ಸೀತಾ ಮನೋಹರ ದಶಶಿರಕಾಲಾ ಪ

ಭೀತಜನಾಶ್ರಯ ಮಣಿಮಯ ಮಾಲಾ
ಶೀತಕರೋಪಮ ವದನವಿಶಾಲಾ ಅ.ಪ

ಗೌತಮ ಮುನಿಸಂಪೂಜಿತ ಚರಣಾ
ಖ್ಯಾತ ವಿಭೀಷಣ ಪರಮಾಭರಣಾ
ಪಾತಕಹರ ದಾನವ ಸಂಹರಣಾ
ವಾತಾತ್ಮಜಸಂಸೇವಿತ ಚರಣಾ ೧

ಮಂಗಳಮೂರ್ತಿ ಗರುಡ ತುರಂಗ
ಸಂಗರಭೀಮ ಶುಭಾಂಗ ಕೃಪಾಂಗ
ಗಂಗಾಧರನುತ ದಿವ್ಯರಥಾಂಗ
ಮಾಂಗಿರಿರಂಗ ಮೋಹನಾಂಗ ನೀಲಾಂಗ ೨

೭೬

ಪುರುಷೋತ್ತಮ ರಾಘವೇಂದ್ರ
ಕರುಣಾವರ ಸುಗುಣಸಾಂದ್ರ ಪ

ಶರಣಾಗತಶರಧಿ ಚಂದ್ರ
ಪರಿಪಾಲಯ ರಾಮಚಂದ್ರ ಅ.ಪ

ದಿನಪಕುಲೋದ್ದಾಮ ರಾಮ
ಜನಕಸುತಾನಂದ ಧಾಮ
ದನುಜಕುಲಕುಠಾರ ರಾಮ
ಮುನಿಜನಾಶ್ರಯದಾತ ರಾಮ ೧

ಪವನಾತ್ಮಜ ಸೇವ್ಯ ರಾಮ
ಶಿವಸನ್ನುತ ವೈರಿ ಭೀಮ
ಭುವನೇಶ್ವರ ಸತ್ಯಕಾಮ
ದಿವಿಜಗಣಾರಾಧ ರಾಮ ೨

[ಪರಮ ಶಬರಿಗೊಲಿದ ರಾಮ]
ವರವಿಭೀಷಣಾಭಿ ರಾಮ
ನಿರುತಲಕ್ಷ್ಮಣಸೇವಿತರಾಮ
ವರ ಮಾಂಗಿರಿರಂಗಧಾಮ ೩

೭೭

ಭಜರೇ ಶ್ರೀರಾಮಂ ಮಾನಸ ಪ

ಜಾನಕಿರಾಮಂ ದಾನವಭೀಮಂ
ನಿರ್ಜಿತಕಾಮಂ ನಯನಾಭಿರಾಮಂ ಅ.ಪ

ಕರಧೃತ ಚಾಪಂ ಖಂಡಿತ ಪಾಪಂ
ರವಿಕುಲ ದೀಪಂ ಅಸಮ ಪ್ರತಾಪಂ
ಹನುಮಂ ವರೂಥಂ । ಮಾಂಗಿರಿನಾಥಂ
ನಿರುಪಮ ಶಾಂತಂ ಮಹಿಜಾಕಾಂತಂ ೧

೭೮

ಮಾಮವತು ಶ್ರೀ ರಮಾಪತೇ । ರಘುಪತೇ ಸೀತಾಪತೇ ಪ

ಭೀಮಪರಾಕ್ರಮ ದನುಜಾರಾತೇ ।
ಕಾಮಿತಾರ್ಥದಾಯಕ ನಮೋಸ್ತುತೇ ಅ.ಪ

ಜನಕ ನೃಪಾತ್ಮಜಾಯುತ ಸುರ ಭೂಜಾ ।
ಇನಶಶಿತೇಜ ನಯನಸರೋಜ ।
ವಿನಮಿತ ಶುಂಭ ವಿನತಸುತಾಧ್ವಜ ।
ಮುನಿಪ ಸಮಾಜ ರೂಪ ಮನೋಜ ॥ ೧

ವಾನರಪತಿ ಸಂಸೇವಿತ ಚರಣಾ ।
ದಾನವವೈರಿ ವಿಭೀಷಣ ಕರುಣಾ ।
ದೀನಜನಾಶ್ರಯ ಪಾವನಚರಣಾ
ಶ್ರೀನುತ ಮಾಂಗಿರಿ ವೆಂಕಟರಮಣಾ ೨

೭೯

ರಘುಕುಲತಿಲಕಾ ಮಾಂ ಪಾಹಿ ಪ

ಅಘಕುಲನಾಶಕ ಮಾಂ ಪಾಹಿ ಅ.ಪ

ಆಹವ ಭೀಮ ವೈದೇಹಿ ಮಾನಸ
ಗೇಹ ಸುಧಾಕರ ಮಾಂ ಪಾಹಿ ರಾಮಾ ೧

ಕೋದಂಡಧರ ದೀನ ದಯಾಪರ
ಆದಿಮೂಲ ಹರಿ ಮಾಂ ಪಾಹಿ ರಾಮ ೨

ಮಾಂಗಿರಿ ಮಂದಿರ ತುಂಗ ಕೃಪಾಕರ
ಗಂಗಾಜನಕ ಹರಿ ಮಾಂ ಪಾಹಿ ರಾಮಾ ೩

೮೦

ರಾಜೀವ ಲೋಚನ ಹರೇ ಮುರಾರೇ
ಮಾಜೀವ ಮೋಹನ ಹರೇ ಮುರಾರೇ ಪ

ರಾಜೇಂದ್ರ ನಂದನ ಹರೆ ಮುರಾರೇ
ಓ ಜಾನಕೀ ಪ್ರಿಯ ಪಾಹಿ ಖರಾರೇ ಅ.ಪ

ವಾರಾಶಿ ಗಂಭೀರ ಸಾಕೇತಧಾಮ
ಮಾರಾರಿ ವಂದಿತ ಲೋಕಾಭಿರಾಮ
ಘೋರಾಘಸಂಹಾರ ರಣರಂಗ ಭೀಮ
ಶ್ರೀರಾಮ ಜಯರಾಮ ಕಲ್ಯಾಣರಾಮ ೧

ಪವನಾತ್ಮಜಾನಂದದಾತಾಪರೇಶ
ಭವನಾಶ ಜಗತೀಶ ದೈತೇಯನಾಶ
ರವಿಕೋಟಿ ಸಂಕಾಶ ರವಿತೇಜ ಪೋಷಾ
ಸುವಿಲಾಸ ಮಾಂಪಾಹಿ ಶ್ರೀಮಾಂಗಿರೀಶಾ ೨

೮೧

ರಾಜೀವನಯನ ಸೀತಾರಾಮ ಪಾಹಿ ಮುದಂದೇಹಿ ಪ

ರಾಜಾಧಿರಾಜ ಕಲ್ಪಭೂಜಾ ಸೌಜನ್ಯ ನಿಲಯ ರಾಮ ಅ.ಪ

ಸಾಕೇತಾಧಿಪರಾಮ, ಲಂಕಾನತ ದನುಜ ಭೀಮ
ಕಾಕಾಸುರ ನಮಿತ ನಾಮ, ಶ್ರೀಕರ ಕೀರ್ತಿಕಾಮ
ಏಕಾಂತ ರಘುನಾಮ, ಏಕಾಂಬರ ಶಿವಪ್ರೇಮ
ಸಾಕೇಶ್ವರ ಸಾರ್ವಭೌಮ, ಶ್ರೀಮಾಂಗಿರಿ ರಂಗಧಾಮ ೧

೮೨

ರಾಮಂ ಭಜರೇ । ಭಜಮಾನಸ ರಘು ಪ

ಭುವನಾಭಿರಾಮಂ ಗುಣರತ್ನಧಾಮಂ ಅ.ಪ

ರಾಮೇತಿ ದೀನಪಾಲ ಲಲಾಮೇತಿ ಶುಭಕರ ನಾಮಂ ।
ಕೋದಂಡಧರರಿಪು ದೋರ್ದಂಡ ಸದ್ಗುಣಂ ।
ತಾರಕನಾಮ ರಾಮಂ ಧಾಮಂ ಜಾನಕಿರಾಮಂ ।
ಬಾಲೇಂದುಧರನುತ ಸೌಮಿತ್ರಿ ಸನ್ನುತ ರಾಮಂ ।
ನೀಲಾಂಬುಜಾತರಾಮಂ ಪಟ್ಟಾಭಿರಾಮಂ ।
ಶೃಂಗಾರಪೂರ್ಣ ಶುಭಾಂಗ ಮಾಂಗಿರಿವಾಸ ರಂಗಂ ।
ಸತ್ಕರುಣಾಂತರಂಗಂ ದಾನವಕುಲ ಭಂಗಂ ೧

೮೩

ರಾಮಚಂದಿರ ಶ್ಯಾಮಸುಂದರ ಪ್ರೇಮಸಾಗರಾ ಪ

ಭೂಮಿಜಾತೆಯರಸ ಬಂಧುರ ಕೋಮಲಾಕರ ಶರಣಪಾಲಾ ಅ.ಪ

ವೇದವಿದಿತಾ ಮೋದಭರಿತ ಶ್ರೀಧರಾಚ್ಯುತ
ಸಾದರದೊಳು ನಿನ್ನ ಸಂತತಾರಾಧನೆಗೈಸುವ ಭಾರ ನಿನ್ನದು ೧

ಶಿಲೆಯ ಸತಿಯಗೈವ ಪಾದವ ತೊಳೆದ ಜನಕನು
ಸುಲಭಮಾರ್ಗದಿ ಶಬರಿ ನಿನ್ನಯ ಜಲಜಪಾದ ಸೇವೆಗೈದಳು ೨

ಧರೆಯಿದಸ್ಥಿರ ತನುವಿದಸ್ಥಿರ ಜನುಮನಿಸ್ಸಾರಾ
ವರದ ಮಾಂಗಿರೀಶ ನಿನ್ನಯ
ಕರುಣವೇ ಶರಣರ ಪರಮಸೌಭಾಗ್ಯ ೩

೮೪

ರಾಮಚಂದ್ರ ರಘುವೀರಾ ನಮೋ ನಮೋ ಪ

ಶ್ಯಾಮಾಂಗ ಸುಕುಮಾರಾ ನಮೋ ನಮೋ
ಕಾಮಿತಾರ್ಥದಾತಾರಾ ನಮೋ ನಮೋ ಓಂಕಾರ ಅ.ಪ

ದಶರಥೇಂದ್ರ ಪ್ರಿಯಬಾಲಾ ನಮೋ ನಮೋ
ವಸಿಷ್ಠಾದಿಮುನಿ ತೋಷಿತ ನಮೋ ನಮೋ
ನಿಶಚರೇಭ ಕುಲಕಾಲಾ ನಮೋ ನಮೋ ಶ್ರೀ ಬಾಲಾ ೧

ಗೌತಮಸತಿ ಪರಿಪಾಲಾ ನಮೋ ನಮೋ
ಭೂತನುಜಾರ್ಪಿತಮಾಲಾ ನಮೋ ನಮೋ
ನೀತಿಸುಗುಣಯುತಶೀಲಾ ನಮೋ ನಮೋ ಘನಲೀಲಾ ೨

ಘೋರಾರಣ್ಯ ವಿಹಾರಾ ನಮೋ ನಮೋ
ವೀರಖರಾಸುರಮಾರಾ ನಮೋ ನಮೋ
ಮಾರೀಚಾಂತಕ ವೀರಾ ನಮೋ ನಮೋ ಶ್ರೀಕಾರಾ ೩

ಸೀತಾವಿರಹ ಸಂತಪ್ತಾ ನಮೋ ನಮೋ
ಭ್ರಾತಾವಚನ ಸಂತೃಪ್ತಾ ನಮೋ ನಮೋ
ಖ್ಯಾತ ಮೃದುವಾಕ್ ದೀಪ್ತಾ ನಮೋ ನಮೋ ಸಂತೃಪ್ತಾ ೪

ಮರುತಾತ್ಮಜ ನುತಿ ಪಾತ್ರಾ ನಮೋ ನಮೋ
ವರ ಸುಗ್ರೀವ ಸನ್ಮಿತ್ರಾ ನಮೋ ನಮೋ
ಪರಮ ಪುಣ್ಯಚರಿತ್ರಾ ನಮೋ ನಮೋ ಶ್ರೀಗಾತ್ರಾ ೫

ಶರಧಿಗರ್ವ ವಿಭಂಗಾ ನಮೋ ನಮೋ
ಶರಧಿ ವಿಭೀಷಣ ನಮೋ ನಮೋ
ಅರಿಕುಲ ನಾಶಕ ರಂಗಾ ನಮೋ ನಮೋ ಶ್ರೀರಂಗ ೬

ರಾವಣಮರ್ದನ ರಾಮಾ ನಮೋ ನಮೋ
ಭೂವನಿತಾತ್ಮಜ ಪ್ರೇಮಾ ನಮೋ ನಮೋ
ದೇವ ದಿವಿಜನುತ ನಮೋ ನಮೋ ಶ್ರೀರಾಮಾ ೭

ಸತ್ಯ ಧರ್ಮ ಪರಿಪಾಲಾ ನಮೋ ನಮೋ
ದೈತ್ಯವರ್ಗ ನಿರ್ಮೂಲಾ ನಮೋ ನಮೋ
ನಿತ್ಯ ಮುಕ್ತ ವನಮಾಲಾ ನಮೋ ನಮೋ ಭೂಪಾಲಾ ೮

ಮಂಗಳಾಂಗ ನೀಲಾಂಗ ನಮೋ ನಮೋ
ರಂಗನಾಥ ರಿಪುಭಂಗ ನಮೋ ನಮೋ
ಮಾಂಗಿರೀಶ ಮಾಲಿಂಗಾ ನಮೋ ನಮೋ ಶ್ರೀರಂಗ ೯

೮೫

ರಾಮಾ ರಘುನಾಯಕಾ ಭೀಮಾ
ರಾಘವಾ ವರದಾಯಕಾ ಪ

ಸೋಮಸನಾತನ ಭೂಮಿಜ ನಾಯಕಾ
ಪ್ರೇಮಸಮಾನ್ವಿತ । ಶ್ಯಾಮನೆ ಬಾರೋ ಅ.ಪ

ರಾವಣಮರ್ದನ । ಪಾವನಚರಣಾ
ಶ್ರೀವನಮಾಲಾ । ಧಾರಣ ಸುಗುಣಾ
ನಾವಿಕ ಸೇವಿತ । ಸಂತತ ಕರುಣ
ದೇವದೇವಾನತ । ಶರಣಾ ಭರಣ ೧

ಮೌನಿಯ ಕಾಂತೆಯ । ಪಾಲಿಸಿದಾತ
ಶೌನಕವಂದಿತ ಕುಶಲವ ತಾತ
ಹನುಮತ್ಸೇವಿತ ವರ ವರದಾತ
ಮುನಿಜನ ತೋಷಿತ ಮಾಂಗಿರಿನಾಥ ೨

೮೬

ವಿನತಾನುತ ಮಣಿವರೂಥ
ಜನಕಸುತಾ ನಾಥಪ್ರೀತ ಪ

ಕನಕಾಂಬರ ಪಾರ್ಥಸೂತ
ವನಮಾಲಾ ಮಣಿರಾಜಿತ ಅ.ಪ

ಶುಕ ಶೌನಕ ಪರಿಪೂಜಿತ
ಸಕಲಾಗಮ ವೇದವಿದಿತ
ವಕುಳಸುಮಾಭರಣಾಯತ
ಸುಕರಾರ್ಜಿತ ಮೋಕ್ಷದಾತ ೧

ಪಾಹಿ ಪಾಹಿ ಪರಮನಾಮ
ಪಾಹಿ ಪಾಹಿ ಪೂರ್ಣಕಾಮ
ಪಾಹಿ ಪಾಹಿ ದನುಜಭೀಮ
ಪಾಹಿ ಪಾಹಿ ಮಾಂಗಿರಿಧಾಮ ೨

೮೭

ವಿನಾಯಕಾನತ ರಾಮಾ ಪ

ಸುಶೀಲ ನಿರುಪಮ ಗುಣಾಭಿರಾಮಾ ಅ.ಪ

[ಸಶೇಷ] ಮನೋಜ ನಿರುಪಮ ವದನ
ನಿಶಾಕರಾರ್ಭಕ ದಶಾಸ್ಯಹನನ
ವಿಶಾಲ ಲೋಚನ ಕೃಪಾವಲಂಬನ
ದಶರಥ ನಂದನ ಸದಾ ನಿರಂಜನ ೧

ಸೀತಾವಿರಾಜಿತ ವಾತಾತ್ಮಜಾನತ
ಪೀತಾಂಬರಾಚ್ಯುತ ರಮಾನತ
ಭ್ರಾತಾಭಿವಂದಿತ ವಿಭೀಷಣಾನತ
ಧಾತಾನಂದಿತ ಶ್ರೀಮಾಂಗಿರಿನಾಥ ೨

೮೮

ವೇದವೇದ್ಯರೂಪ ವಿಶ್ವವ್ಯಾಪಕನೇ (ರಾಮ)
ನಾದರೂಪಪ್ರೀತ ವಿಶ್ವರಕ್ಷಕನೇ ರಾಮ ಪ

ಆದಿಮಧ್ಯರಹಿತದೇವ ನಾದರಂಜಿತನೇ ರಾಮ ।
ಮಾಧವಾ ಮಧುಸೂದನ ಹರೇ ಮಧುರಭಾಷಿತನೇ ರಾಮ ಅ.ಪ

ಕಮಲನಯನ ಕಮಲವದನ ಕಮಲನಾಭನೇ
ಕಮಲಹಸ್ತ ಕಮಲಮಸ್ತಕ ಕಮಲವಕ್ಷನೇ
ಕಮಲಸದನ ಕಮಲಶೋಭಿತ ಕಮಲಜಾಪ್ರಿಯನೇ
ಕಮಲಸಂಭವಾದಿ ನಮಿತ ಕಮಲಾರಾಧಿಕನೇರಾಮ ೧

ಗಂಗಾಜನಕ ಮಂಗಳಾಂಗ ತುಂಗವಿಕ್ರಮನೇ
ಇಂಗಿತಾರ್ಥದಾತ ಮೌನಿಪುಂಗವಾನತನೇ
ಅಂಗಜಾತವೈರಿ ಸನ್ನುತ ಅಂಗರೂಪನೇ
ಭೃಂಗಕುಂತಳ ಮಾಂಗಿರೀಶ ರಂಗನಾಥನೇ ರಾಮ ೨

೮೯

ಶರಧಿಶಯನಾ ವರ ಸರಸಿಜ ಸುಂದರನಯನಾ ಪ

ಶರಣಾಗತ ಕರುಣಾ ಸದನ ಅ.ಪ

[ವರ] ನಿಗಮ ವಿದಿತನಾಮಾ ಸತ್ಯಕಾಮಾಭಿರಾಮಾ
ನಿರುಪಮ ಸೀಮಾ । ರಮ್ಯ ಪಟ್ಟಾಭಿರಾಮಾ ।
ಸುರಮುನಿವಿನುತ ನಾಮಾ । ದೇವತಾ ಸಾರ್ವಭೌಮ
ದುರುಳದನುಜ ಭೀಮಾ ಶ್ರೀ[ಮಾಂಗಿರಿ] ರಮಾ ಪ್ರೇಮಾ ೧

೯೦

ಶ್ರೀರಘುಪತೇ ನಮೋಸ್ತುತೆ
ಚಾರುನೀತಿಯುಕ್ತ ಭೂಪತೇ ಪ

ನೀರದಸಮಶರೀರ [ಸಮರ] ರಣ
ಧೀರ ಸದಾನಂದಕರ ಭೂಮಿಜಾಪತೇ ಅ.ಪ

ಲೋಕಾಭಿರಾಮ ತಾರಕನಾಮ
ಶ್ರೀಕಂಠವಿನುತ ಸಾಕೇತ ಧಾಮ ೧

ಸಕಲಕಲಾವಿದ ಭಜಕ ಪ್ರೇಮ
ಶುಕಶೌನಕ ಮುನಿಸನ್ನುತ ನಾಮ ೨

ವಿಕಸಿತ ವದನಾಂಭೋರುಹಲೋಚನ
[ಸಖ] ಮಾಂಗಿರೀಶ ಹನುಮಾನತ ನಾಮ ೩

೯೧

ಶ್ರೀರಮಣೀಕರ ಸೇವಿತ ಚರಣಾ
ಮಾರಜನಕ ಕರುಣಾಭರಣಾ ಪ

ವಾರಣೋದ್ಧಾರಣ ಪೂರಿತ ಶುಭಗುಣ
ಶೂರದೈತ್ಯರಣಧೀರ ನಾರಾಯಣ ಅ.ಪ

ಕುವಲಯ ಘನಶ್ಯಾಮ ನವಮೋಹನಾರಾಮಾ
ಶಿವನುತನಾಮಾ । ಭವದೂರ ಭೀಮಾ
ಅವನಿಜಪ್ರೇಮಾ । ರವಿಕುಲಸೋಮಾ
ಭುವನಾಭಿರಾಮಾ । ಮಾಂಗಿರಿವರಧಾಮಾ ೧

೯೨

ಶ್ರೀರಾಮ ಜಯರಾಮ ರಘುರಾಮ ಪಾಹಿ
ನಾರಾಚ ಕೋದಂಡಧರ ಧೀರ ಪಾಹಿ ಪ

ಮಾರಾರಿನುತ ನಾಮ ದನುಜಾರಿ ಪಾಹಿ
ಧರಣೀಸುತಾನಂದ ಸುವಿಹಾರಿ ಪಾಹಿ ಅ.ಪ

ಸಾಮಿತ್ರಿ ಭರತಾಗ್ರಜಾತ ಮಾಂಪಾಹಿ
ಮೌನಿಜನಸಂಪ್ರೀತ ಶ್ರೀಲೋಲ ಪಾಹಿ
ಶ್ರೀಮಾರುತೀ ಸೇವ್ಯ ಪಾದಾಬ್ಜಪಾಹಿ
ಧೀಮಂತ ಘನ ಪುಣ್ಯನಾಮ ಮಾಂಪಾಹಿ ೧

ಭುವನಾಭಿರಾಮಾ ತ್ರಿಮುನಿನುತ್ಯಪಾಹಿ
ಭವನಾಶ ಸತ್ಕೀರ್ತಿಕಾಮ ಮಾಂಪಾಹಿ
ನವಮೋಹನಾಂಗ ರಾವಣವೈರಿ ಪಾಹಿ
ಸುವಿಲಾಸದಾತ ಮಾಂಗಿರಿವಾಸ ಪಾಹಿ ೨

೯೩

ಶ್ರೀರಾಮ ಪಾಹಿಮಾಂ ಸದಾಪೂರ್ಣಕಾಮ
ವಾರಿಜಭವವಿನುತನಾಮ ಸಾರಸಾಕ್ಷ ಸಂಗರಭೀಮ ಪ

ಮುನಿಕೌಶಿಕ ಮಖಪಾಲಕ ಘನತಾರಕನಾಮ
ವನಜಾಂಬಕ ವರದಾಯಕ ಜನಕಾತ್ಮಜ ಪ್ರೇಮ
ದನುಜಾಂತಕ ಭವಭಂಜಕ ಇನವಂಶಲಲಾಮ
ಜನನಾಯಕ ಫಲದಾಯಕ ಸದಯ ಮಾಂಗಿರಿರಾಮ ೧

೯೪

ಸತ್ಯಸುಧಾರ್ಣವ ನಿತ್ಯಸ್ವಯಂಭುವ
ನುತ್ಯಸ್ವಭಾವಗುಣ ರಮಾಧವ ಪ

ಭೃತ್ಯಪಾಲಕ ಭವ ಭಂಜನ ರಾಘವ
ಅತ್ಯಂತ ಸುಖಿವೀವ ದೇವ ಕೃಪಾರ್ಣವ ಅ.ಪ

ಪವನನಂದನನುತ ಭುವನಾರಾಜಿತ
ಧೃವ ಪರಿಭಾವಿತ ಮುನಿಸೇವಿತ
ಕವಿಹೃದಯಾನತ ದಿವಿಜಾರಾಧಿತ
ನವಘನಸುಂದರ ವಿಧಿವಿನುತಾ ೧

ಗಂಗಾಜನಕ ರಥಾಂಗ ಶ್ರೀಕರ
ತುಂಗ ಕೃಪಾಕರ ಧರಣೀಧರಾ
ಮಾಂಗಿರಿ ವರನರಸಿಂಗ ಪರಾತ್ಪರ
ಅಂಗಜಜನಕ ಭುಜಂಗ ಶೃಂಗಾರ ೨

೯೫

ಹರೇ ರಾಘವ ಪಾಲಯ ಚಿರಕರುಣಾಲಯ
ಸುರಾನಂದ ಸಂವರ್ಧಕ ಪರಾತ್ಪರ ಅಪ್ರಮೇಯ ಪ

ವರಾಹ ಕೇಸರಿ ದ್ವಿಜಾವತಾರಿ
ಪರೇಶ ಮುರಳಿ ಧರೇಶ ಶೌರಿ

ವಿರಾಧ ಮಾರೀಚ ದಶಾನನಾರಿ
ಸರೋಜನೇತ್ರ ಮಾಂಗಿರಿವಿಹಾರಿ ೧

೯೬

ಹಿಡಿದ ಕೈಬಿಡಬೇಡವೋ ರಾಮಾ ಪ

ಹಿಡಿದ ಕೈ ಬಿಡಬೇಡ ಕಡಲವಾಸವು ಬೇಡ
ತಡಿಗೆ ತಳೆಯದಿರಬೇಡ ಕಡೆಗಣ್ಣಿಡ ಬೇಡ ಅ.ಪ

ನುಡಿ ಕೇಳದೆನಬೇಡ ಅಡಿದೋರದಿರ ಬೇಡ
ಕುಡುಕ ಹೋಗೆನಬೇಡ ನುಡಿಸದಿರ ಬೇಡ
ಕೊಡು ಕೊಡೆನ್ನಿಸಬೇಡ । ಪಡೆಯುವಾಸೆಯು ಬೇಡ
ದೃಢವಾಗಿ ನಿನ್ನಡಿಯ ಹಿಡಿಸದಿರ ಬೇಡ ೧

ಬಿಗುಮಾನ ಬೇಡಯ್ಯ ನಗುಮೊಗವ ತೋರಯ್ಯ
ಬಗೆಯರಿತು ನಡೆಸಯ್ಯ ಸುಗತಿದೋರಯ್ಯ
ಬಿಗಿಹಿಡಿದ ಕೈಯ ಜಗುಳಿಸಲು ಬೇಡಯ್ಯ
ನಿಗಮ ವಂದಿತಜೀಯ ಮಾಂಗಿರಿಯ ರಂಗಯ್ಯ ೨

೯೭

ಶ್ರೀ ಕೃಷ್ಣ ಸ್ತುತಿಗಳು

ಅದೋ ಬರುವ ರಂಗ ಅದೋ ಬರುವ
ಇದೋ ನಲಿವರಂಗ । ಇದೋ ನಗುವ ಪ

ಇನಬಿಂಬವದನಾ । ಭ್ರಮರಕುಂತಲ ಘನ
ಜನಮನರಂಜನ ಅದೋ ಬರುವ ಅ.ಪ

ಶರನಿಧಿಮಂದಿರ ಭುವನಮನೋಹರ
ಶರಣರಮಂದಾರ । ಅದೋ ಬರುವ
ಸುರಗಂಗೆಯ ಪೆತ್ತವ ಭಕ್ತರಬಾಂಧವ
ವರಮಾಂಗಿರಿ ಮಾಧವ । ಅದೋ ಬರುವ ೧

ಪರಿಮಳ ಹೂಹಾರ ಮೆರೆವ ಮಾಣಿಕಸರ
ಪರಿಪರಿ ಮಣಿಹಾರ ಧರಿಸಿರುವ
ಶರಣರಭೀಷ್ಟವ ಸಲಿಸುವೆನೆನ್ನುವ
ಮುರಳಿಯನೂದುವ । ಅದೊ ಬರುವ ೨

ಕುಣಿ ಕುಣಿದಾರ್ಯೆವ ತರುಣಿ ರಾಧೆಯತವ
ಮಣಿಯೆನಿಸುವ ದೇವ ಅದೋ ಬರುವ
ವೇಣುವನೂದುವ ಜಾಣನ ಪಾದವ
ಕಾಣುವ ಭಾಗ್ಯವ ನೆರೆ ಪಡೆವ ೩

ಇವನೆಲೆ ಕಂಸಾರಿ ಇವನೆ ಭಕ್ತರ ಸಿರಿ
ಇವನೆಲೆ ದುರುಳಾರಿ ವರನೃಹರಿ
ಇವನೆಲೆ ಮಾಂಗಿರಿಶೃಂಗವಿಹಾರಿ
ಇವನಹುದೆಮ್ಮಯ ಅಮಿತಸಿರಿ ೪

೯೮

ಆನಂದ ಗಂಭೀರ ನೀಲಾಂಗ ರಂಗ
ದಾನವ ಭಂಜನ ಹರೇ ಹರೇ ಪ

ಮುನಿಜನ ವಂದಿತ । ವನರುಹ ಲೋಚನ
ಘನ ನೀಲಾಂಬುದಸಮಾ ಹರೇ ಅ.ಪ

ವನಜನಯನ ಹರಿಕೇಶವ ಮಾಧವ
ಕನಕಾಂಬರಧರ ಗೋಪಾಲ

ದನುಜ ಕುಲಾಂತಕ ಧೇನುಕ ಸಂಹಾರ
ಅನಂತ ಶ್ರೀಧವ ಶ್ರೀಬಾಲಾ ೧

ಭುವನಮನೋಹರ ಮುರಳೀಧೃತಕರ
ಭವಸಾಗರದೂರ ನಮೋ ನಮೋ
ಪವನಾತ್ಮಜಕರ ಮಾಂಗಿರಿನಾಯಕ
ತವಸೇವಿತಪದ ನಮೋ ನಮೋ ೨

೯೯

ಆಪದ್ಬಾಂಧವ ಅನಾಥರಕ್ಷಕ
ಶ್ರೀಪತಿಕೇಶವ ಒಲೀ ಒಲೀ ಪ

ತಾಪಸ ಸನ್ನುತ ಕೋಪಿಸಲೇತಕೆ
ಗೋಪೀನಂದನ ನಲೀ ನಲೀ ಅ.ಪ

ಘಳಿಗೆ ಘಳಿಗೆ ಭಜಿಸುವರೆಡೆಯಲಿ
ಕೊಳಲಿನ ನಾದವನುಲೀ ಉಲೀ
ನಳಿನನಾಭ ಮಾಂಗಿರಿಪತಿಯೆನ್ನಯ
ಕೊಳೆಯಾವರಣವ ಸುಲೀ ಸುಲೀ ॥ ೧

ವಂದಿಸುವಗಾನಂದವನೀಯಲು
ಮಂದಹಾಸದಿಂ ಮಣೀ ಮಣೀ
ನೊಂದಿಹ ಭಕ್ತರ ಬಂಧನ ನೀಗಲು
ನಿಂದು ನಲಿದು ನೀ ಕುಣೀ ಕುಣೀ ೨

ಪಾಡಿಪೊಗಳಿ ಕೊಂಡಾಡುವರೆಡೆಯೊಳು । ದಯ
ಮಾಡಿ ನೋಡಿ ನೀ ದಣೀ ದಣೀ
ಬೇಡಿದ ವರಗಳ ನೀಡುತೆ ಭಕ್ತರು
ಮಾಡಿದ ಪಾಪವ ಸೆಣೀ ಸೆಣೀ ೩

೧೦೦

ಎಲ್ಲಿರಲಾರನು ಚೆಲುವ ಗೋಪಾಲ
ಮೆಲ್ಲುಲಿಗೊಲಿವನು ಇಲ್ಲಿರಲಾರನೆ ಪ

ಕ್ಷುಲ್ಲಕರಿರುವೆಡೆ ನಿಲ್ಲಲಾರನು ದಿಟ
ಎಲ್ಲ ಭಕ್ತರ ಮನೆಯಲಿ ನಲಿವನಿವ ಅ.ಪ

ಸಕಲ ತೀರ್ಥಂಗಳ ಸಕಲಕ್ಷೇತ್ರಂಗಳ
ಸಕಲೋತ್ಸವಗಳ ದರ್ಶನಯಾತ್ರೆ
ಭಕುತಿಗೆ ಸಾಧನ ಮಂತ್ರವು ಮಾನವ
ಭಕುತಿಯ ಭಜನೆಯೆ ಮುಕುತಿಯ ಮಾರ್ಗವು ೧

ಮಲಗಿ ಪಾಡಲು ಅವ ಕುಳಿತು ಕೇಳುವನಂತೆ
ಕುಳಿತು ಪಾಡಲು ಅವ ನಿಲ್ಲುವನಂತೆ
ನಿಲುತ ಪಾಡಲು ಅವ ನಲಿಯುವನಂತೆ
ನಲಿದರೆ ಒಲಿವ ಮಾಂಗಿರಿಪತಿಯಂತೆ ೨

೧೦೧

ಗಿರಿಧರ ಗೋಪಾಲ । ಗಾನವಿಲೋಲ ಪ

ವರನೀಲೋತ್ಪಲ ಶ್ಯಾಮಲ ಕೋಮಲ
ಕರುಣಾಲವಾಲಾ ಗೋಪಾಲಬಾಲ ಅ.ಪ

ಸಕಲ ಚರಾಚರ ಭರಿತ ಸುಖಂಕರ
ಬಕಶಕಟಾಸುರನಿಕರ ಭಯಂಕರ
ಶುಕಮೌನೀಶ್ವರನುತ ಕರುಣಾಕರ
ಸುಕುಮಾರಾಂಗ ರಾಜಿತ ಮಾಂಗಿರಿವರ ೧

೧೦೨

ಗೋಕುಲ ಆನಂದ ಲೀಲಾ । ಘನ ಸುಂದರ ರುಕ್ಮಿಣಿಲೋಲ
ಶ್ರೀಕರ ಶುಭದಾಯಕ ವರ । ಗೋಪಾಲ ಬಾಲ ಪ

ಮಣಿರಂಜಿತ ಭೋಗರಾಗವಿಮಲ
ಶೃಂಗಾರಶೀಲ ಸುರಪಾಲ ಸಂಸೇವ್ಯ ಗಾನಲೋಲ ಅ.ಪ

ಪದ್ಮಲೋಚನ ಪರಿವೃತ ಶರಣವತ್ಸಲ
ಸರ್ವಜ್ಞ ಸುಭಾಷಿತ ಸದ್ಭಾವ ವಿನಯಾದಿ
ಭೂಷಿತ ಚಿತ್ರ ವಿಚಿತ್ರ ಕರ್ಷಿತ
ಸೂತ್ರಾ ಮನಸಿಜ ಗಾತ್ರಾ । ಸುವಿನೀತ ಗೋಪೀನಂದನ ೧

ಮಣಿಪೀಠ ಮಂಡಿತಾ । ಕಿರೀಟ ಮಣಿಮಯ
ರಾರಾಜಿತ । ಗೋಪಿಕಾನತ ಪಾಂಡವಪಕ್ಷ
ದನುಜವಿಪಕ್ಷ ।ಕಮಲದಳಾಕ್ಷ ದಾನವಶಿಕ್ಷ
ಶ್ರೀವನಮಾಲಿಕಾವಕ್ಷ । ಮಾಂಗಿರಿನಾಥಾ ದೀನರಕ್ಷ ೨

೧೦೩

ಗೋಪಾಲ ಸಕಲಪಾಲ ಶ್ರೀಪಾಲ ಜಗಕೆ ಮೂಲ ಪ

ತಾರಾಧಿಪಾಶು ಜಾಲ ಶ್ರೀ । ಪಾವನ ಚರಣ ಮಾಲೋಲ ಅ.ಪ

ಗೋಪಿಕಾ ವನಸುಮ ಮಧುಕರ ಸುರುಚಿರ
ಸುಖಕರ ವಿಸರ ಅಘಕುಲಪರಿಹರ
ಸಮೀರಕುವರ ನುತಪದಮುಕುರ
ಮುರಳೀಧರಿತಕರ ನೀರಜಾಕ್ಷಶೃಂಗಾರ
ಮಂದಹಾಸ ಸುಂದರ ತರುಣಿ ।
ನಿಕರ ಮಾಂಗಿರೀಶ ಭವನಾಶ
ರಾಮಭದ್ರ ಶುಭಕರ ವಿಧಿಶಿವ ಸುರನಿಕರ ೧

೧೦೪

ಗೋ ಪಾಲಾ ಶೃತಬಾಲಾ । ಮುನಿಕುಲಾನತಬಲ ಪ

ಶ್ರೀಪದುಮಾಯುತ ನಯನಾ । ವನಮಾಲ ಕೃಪಾಲವಾಲ ಅ.ಪ

ನೂಪುರ ಪಾಡಗಾದ್ಯಲಂಕೃತ ಕೋಮಲ
[ಶ್ರೀ]ಪಾದಾಂಬುಜಾತ ಪ್ರೀತಲೋಲ
ತಾಪಸವರ ಸತತ ವಂದಿತಾ ವೇದವಿದಿತ
[ಗೋಪೀಜನ] ವಿಮಲಚರಿತಾ ಶ್ರೀಯುತ ಅ.ಪ

ದೇವಾನತ ದೇವೇಶಾ ಮುರಳೀರವ ಲೋಲಾ ।
ಗೋವರ್ಧನೋದ್ಧಾರ ಲೀಲಾ । ಶ್ರೀವರ ವನಮಾಲಾ ।
ಪಾವನ ಪದಜಲಜಾಯುತ ಲೋಚನ । ಶ್ರೀ
ಗೋವಿಂದ ಮಾಂಗಿರೀಶ ಭಾವುಕಜನ ಚೈತನ್ಯ ೧

೧೦೫

ಜಯ ಜಯ ಮಾಧವ ಕೃಷ್ಣ ಮುರಾರೇ
ಜಯ ಜಯ ರಾಘವ ರಾಮ ಖರಾರೇ ಪ

ಜಯತು ಸೀತಾಧವ ಪಾವನ ಶೌರೇ ಅ.ಪ

ಜಯತು ಪೀತಾಂಬರಧರ ಶಕಟಾರಿ
ಜಯ ಕನಕಾಂಬರಧರ ವಿಕಟಾರಿ
ಜಯ ಜಯ ಮುರಳೀಧರ ಕಂಸಾರಿ
ಜಯ ಜಯ ಶರಧರ ದಶಶಿರವೈರಿ ೧

ಜಯತು ಗೋಪೀಜನಪ್ರಿಯ ಗೋಪಾಲ
ಜಯತು ತಪೋಬಲ ಮುನಿಜನಪಾಲ

ಜಯತು ಜಯತು ಕೌಸ್ತುಭಮಣಿಮಾಲ
ಜಯ ಜಯತು ಭೂಪಾಲ ಸುಶೀಲಾ ೨

ಜಯ ಕುರುವಂಶ ಮಹಾರ್ಣವ ಭೀಮ
ಜಯ ಜಯ ಪಾಂಡವ ಸನ್ನುತ ನಾಮ
ಜಯ ಜಯಾನತ ಮುನಿಜನ ಪ್ರೇಮಾ
ಜಯತು ಜಯತು ರಾಮ ಮಾಂಗಿರಿಧಾಮಾ ೩

೧೦೬

ಜೈಜಗಜ್ಜನಕ [ಮಾಂ] ಪಾಲಯಾ ಪ

ರಾಜಿತ ಮಣಿಕೋಟಿ [ರುಚಿ] ರ
ರಾಜರಾಜ ಸುರಭೂಜ ಕೃಪಾಕರ ಅ.ಪ

ಕಾರುಣ್ಯ ಮಂದಿರ ಲಾವಣ್ಯ ಚಂದಿರ
ತಾರುಣ್ಯ ಬಂಧುರ ಪಾಹಿ ಕೃಪಾಕರ
ತ್ರಿಲೋಕ ಮೋಹನ ತ್ರಿಲೋಕ ಪಾವನ
ತ್ರಿಲೋಕ ಜೀವನ ತ್ರಿಲೋಕ ರಂಜನ ೧

ಶರಣಾಗತ ಪಾಲ ಗೋಪಾಲ
ಮುರಳೀಧರ ತುಳಸಿ ವನಮಾಲ
ಸರಸೀರುಹ ನಯನ ಪೀತಾಂಬರ
ಕರುಣಾಕರ ಮಾಂಗಿರೀಶ ಶ್ರೀಕರ ೨

೧೦೭

ಝುಂಕೃತಿ ನಾಟ್ಯಕಲಾ ಬೃಂದಾವನ ಪ

ರಾಧಾಮಾಧವ ಗಾನ ಸದನ ಅ.ಪ

ಝಣ ಝಣನಾದ ವೇಣುನಿನಾದ
ಗಾನವಿನೋದ ನಂದನಾ ೧

ನವಮಣಿರುಚಿರ ಭಾಮಾನಿಕರ
ಸುರುಚಿರ ಮಾಂಗಿರಿ ಶ್ರೀವರ ೨

೧೦೮

ಝಣ ಝಣ ಝಣರೆಂದು ಕುಣಿವುದ ನೋಡೆ
ಫಣಿಪತಿ ಶಯನನು ಕಾಣುವ ನೋಡೆ ।ನಾಡೆ ಪ

ಕಿಣಿ ಕಿಣಿ ಕಿಂಕಿಣಿ ಕಿಣಿರವ ಕೇಳೇ
ಮಣಿ ಮಣಿದಾತನ ನಾಮವ ಪಾಡೇ ಅ.ಪ

ನೋಡುವ ನಲಿಯುವ ಹೊಂಗೊಳಲೂದುವ
ಪಾಡುವ ಕರೆಯುವ ನಗಿಸುವ ನಗುವಾ
ಮಾಡೆ ವಂದನೆಗಳ ಸಂತಸಗೊಳುವಾ
ಬೇಡುವರಿಷ್ಟವ ಕರುಣದಿ ಕೊಡುವಾ ೧

ಬೃಂದಾವನದಾನಂದದ ನೋಟಾ
ಮಂದಗಮನೆಯರ ನಲವಿನ ಕೂಟಾ
ಇಂದಿರೆಯರಸ ಮಾಂಗಿರಿಪತಿಯಾಟಾ
ಸಂದಪುದೆಮಗೆ ಬಾ ಕೃಷ್ಣನೊಳಾಟಾ ೨

೧೦೯

ತೋರಿಸು ಪಾದವ ವಾರಿಸು ದಾಹವ ಪ

ನೀರಜ ಸಂಭವಾರಾಧಿತ ಮಾಧವ
ಮಾರಜನಕ ಭವದೂರ ದಯಾರ್ಣವಾ ಅ.ಪ

ಗಾನವಿಲೋಲಾ ಗೋಕುಲ ಬಾಲಾ ।
ದಾನವಕಾಲಾ ಶ್ರೀವನಮಾಲಾ ೧

ಘನತರ ಲೀಲಾ ಮುನಿಜನ ಪಾಲಾ ।
ಕನಕದುಕೂಲ ಮಾಂಗಿರಿವರಬಾಲಾ ೨

೧೧೦

ಜಯ ಜಯ ಸಕಲಾಧಾರಾ । ಕೃಷ್ಣ ಜಯ ಜಯ
ಭಕ್ತೋದ್ಧಾರಾ ಜಯಸಕಲಾಲಂಕಾರಾ । ಕೃಷ್ಣಾ ಯಮುನಾ
ವೇಗ ಸಂಹಾರಾ ಜಯ ಜಯ ನಂದಕುಮಾರಾ
ಕೃಷ್ಣ ಜಯ ಜೀಮೂತ ಶರೀರಾ ಪ

ದೇವಕೀಕುಮಾರಾ ನಿಗಮಗೋಚರಾ ಶಂಖಚಕ್ರಧರ
ಮಣಿಗಣನಿಕರಾ ಕೌಸ್ತುಭಹಾರಾ ಭವಬಂಧನಹರ
ವಸುದೇವಾನಂದಕರ ಸುರುಚಿರ ಪೀತಾಂಬರಧರ ೧

ನಯನ ಮನೋಹರ ಗೋಪೀ ಮಂದಿರ ಸರಸಿಜ
ಮಿಹಿರಾ ಘನತರ ಸುಂದರ ದುರುಳ ಭಯಂಕರ
ಸುಗದಾಕರ
ಶಕಟ ಬಕಾಂತಕ ಶೂರಾ ಕೃಷ್ಣ ಪೂತನಿ ಸಂಹಾರಾ
ಅಜ ಸುರ ಮುನಿ ಪರಿವಾರ ೨

ಧೇನುಕ ದೈತ್ಯವಿದಾರಾ । ಕೃಷ್ಣ ಮರಕತ ಮಣಿಮಯ ಹಾರಾ
ತರುಣೀ ಮಣಿಗಣನಿಕರಾ । ಕೃಷ್ಣ ಸರಸಿಜಲಸದಾಕಾರಾ
ನವನೀತಕರಾ ಘನ ಮುರಳೀಧರ । ಕುಂಜವಿಹಾರಾ
ವಿಷಧರ ಭಯಹರ ಗೋವರ್ಧನಧರ । ಮುಷ್ಟಿಕ ಮಧುರಾ ೩

ವಿಹಾರಾ । ಕೃಷ್ಣ ನಾದಾನಂದ ಪ್ರಚಾರಾ
ಅಕ್ರೂರಾನತ ಚರಣಾ । ಕೃಷ್ಣ ಮುನಿಜನ ಹೃದಯಾಭರಣ

ಕುಬ್ಜಾವಂದಿತ ಚರಣ । ಕೃಷ್ಣ ಘನಮಹಿಮಾ ವಿಸ್ತರಣ
ಗೋಪೀಜನಗಣ ಮೌಢ್ಯನಿವಾರಣ ೪

ಭಕ್ತಕಾರಣಾ । ದುರುಳ ವಿದಾರಣ । ಭವಜನಕರುಣ
ಸದಮಲ ಗುಣಗಣ ಪಶುಪಾಲನ ಸತ್ಸೇವಾ ನಿಪುಣ
ಹಲಧರ ಭುಜಬಲ ಪ್ರಾಣಾ ಕೃಷ್ಣ
ಬೃಂದಾರಕಗಣ ಪ್ರಾಣ ೫

ಶಿಶುಪಾಲೋತ್ಸವ ಬಾಣಾ । ಕೃಷ್ಣ ರುಕ್ಮ ಲೋಭ ಮದ ಯಾಣಾ
ಅರಿಕುಲ ಸೈನ್ಯ ಕೃಪಾಣಾ । ಕೃಷ್ಣ ಚತುರೋಪಾಯ ಪ್ರವೀಣಾ
ರುಕ್ಮಿಣೀರಮಣ ಶುಭಕರಕಂಕಣ ಪಾಂಡವಪೋಷಣ
ಕುರುಕುಲ ಭೀಷಣ ಮುರಮದ ಹರಣ ಚಕ್ರವಿಭೂಷಣ ೬

ದ್ರುಪದಸುತಾನತಚರಣಾ । ಕೃಷ್ಣ ಪರಮಾನಂದಾವರಣ
ವಿದುರಾನತ ನೀಲಾಂಗ । ಕೃಷ್ಣ ಕರಧೃತವ್ಯರಥಾಂಗ
ಕುರುಕುಲ ವನ ಸಾರಾಂಗಾ । ಕೃಷ್ಣ ಗೀತಾವನಜತರಂಗಾ
ಕಮಲಾ ಅಂಗ । ಸತ್ವ ತುರಂಗಾ । ಧರ್ಮವಿಹಂಗಾ ೭

ಅರಿಮದ ಭಂಗಾ ಪುರುಷೋತ್ತುಂಗಾ । ಪರಮಕೃಪಾಂಗಾ
ಮಾಂಗಿರಿ ರಂಗ ಸುಧಾಂಗಾ ಶುಭಾಂಗ । ಜಯ ಜಯ ಮಾಂಗಿರಿ
ರಂಗಾ । ಕೃಷ್ಣ ಜಯ ಜಯ ಗರುಡ ತುರಂಗಾ ೮

೧೧೧

ದೇವಕೀಕುವರ ನವಘನಸುಂದರ
ಭಾವಜ ಜನಕ ಮಾದೇವ ಕೃಪಾಕರ
ಪಾವನ ಸುಕುಮಾರ ಹರೇ ಹರೇ ಪ

ನಿರುಪಮ ಚರಿತ ವರಗುಣ ಭರಿತೇ
ಮರಕತಮಣಿ ಮಾಲಾಹಾರ ಸಂಶೋಭಿತೇ
ಸುರಗಂಗಾಸುತ ರಾಜಿತಮೌನಿಯುತೇ
ವೈರಿಕುಲ ಭಂಜನ ಪಾಂಡವ ಮಿತ್ರೇ ೧

ಶ್ರೀವನಮಾಲಾಧರ ಮುರಳೀಕರ
ದೇವಸುಧಾಕರ ಶ್ರೀ ಮಾಂಗಿರಿವರ
ಭಾವಕಜನಪರಿವಾರ ಶುಭಂಕರೇ
ರೇವತೀರಮಣಾ ನಂದಕರೇ ೨

೧೧೨

ನಂದಕುಮಾರ ಗೋವಿಂದಾ ನಮೋ ನಮೋ
ಮಂದರಧರ ಸಾನಂದಾನವೇ ನಮೋ ನಮೋ ಪ

ಮಂದಾಕಿನಿ ಪದದ್ವಂದ್ವಾ ನಮೋ ನಮೋ
ಸಿಂಧುಶಯನ ಅರವಿಂದನಯನ ನಮೋ ನಮೋ ಅ.ಪ

ವೇದೋದ್ಧರ ನಮೋ ಮಾಧವತೇ ನಮೋ
ನಾದರೂಪಾ ನಮೋ ಭೂವರ ತೇ ನಮೋ
ಯಾದವ ಮುರಳಿನಾದ ನಮೋ
ಮೇದಿನಿಪಾಲ ಮಾಂಗಿರಿನಿಲಯಾ ನಮೋ ೧

೧೧೩

ನಂದಕುಮಾರಾ ಮುಕುಂದಾ ಜನಾರ್ದನ
ಮಂದರಧರ ಗೋವಿಂದ ಹರೇ ಪ

ಸುಂದರ ಗೋಪಿ ವೃಂದ ಶುಭಾನನ
ಬೃಂದಾವನ ಸಾನಂದ ಹರೇ ಹರೇ ಅ.ಪ

ವಾಮನ ಮಾಧವ ಕೇಶವಪತೇ ನಮೋ
ಸಾಮಜಪಾಲನ ನಾಮಾ ನಮೋ
ಭೂಮಿ ಸುತಾನ್ವಿತ ರಾಮಾ ನಮೋ ನಮೋ
ಕಾಮಿತದಾತಾ ಪರೇಶಾ ನಮೋ ನಮೋ ೧

ಅಕ್ಷಯಾತ್ಮ ಸುರಪಕ್ಷಾ ನಮೋ ನಮೋ
ಪಕ್ಷಿಗಮನ ಪದುಮಾಕ್ಷಾ ನಮೋ ನಮೋ
ಲಕ್ಷರೂಪ ಖಳಶಿಕ್ಷಾ ನಮೋ ನಮೋ
[ರಕ್ಷಕ ಪಾಂಡವ ಪಕ್ಷ ನಮೋ] ೨

ತುಂಗ ಕೃಪಾಂಬಕ ರಾಮಾ ನಮೋ ನಮೋ
[ಮಂಗಳದಾಯಕ ಕೃಷ್ಣನಮೋ]
ಅಂಗಜಾತ ಪಿತ ರಂಗ ನಮೋ ನಮೋ
ಮಾಂಗಿರಿವಾಸ ಕೃಪಾಂಗಾ ನಮೋ ನಮೋ ೩

೧೧೪

ನಂದಕುಮಾರ ಸಕಲಾಧಾರಾ ಪ

ಇಂದೀವರಯುಗಚರಣ ಮನೋಹರ
ಕುಂದವದನ ನಿಗಮಾಂತ ಸಂಚಾರಾ ಅ.ಪ

ಉಡಿಗೆ ತೊಡಿಗೆಗಳ ಉಡಿಸುವೆ ತೊಡಿಸುವೆ
ಮುಡಿಗೆ ಮಲ್ಲಿಗೆ ಮಲ್ಲೆಯಳವಡಿಪೆ । ರಂಗ
ಉಡುಪತಿ ಫಾಲಕೆ ತಿಲಕವನಿಡುವೆ
ಅಡಿಗಂದುಗೆ ಗೆಜ್ಜೆ ಪಾಡಗವಿಡುವೆ । ರಂಗ ೧

ಕಿವಿಗಳಿಗೆ ಮುತ್ತು ಹವಳದಾಭರಣವ
ಹವಣಿಸಿ ಸಿಂಗಾರಗೈವೆನೋ । ರಂಗ

ನವಮಣಿಮಾಲೆಯ ಕೊರಳಿಗೆ ಧರಿಸುವೆ
ದಿವಿಯ ಪೀತಾಂಬರವಳವಡಿಪೇ । ರಂಗಾ ೨

ಬೆರಳಿಗುಂಗುರಗಳ ಹರುಷದೊಳಿಡುವೆ
ಕರದೊಳಿಡುವೆ ನಿನ್ನ ಮುರಳಿಯನು । ರಂಗ
ಚರಣಯುಗಕೆ ನಿನ್ನ ಸಕಲವನರ್ಪಿಪೆ
ಕರುಣದಿ ಬಾರೊ ಮಾಂಗಿರಿಯೊಡೆಯಾ । ರಂಗ ೩

೧೧೫

ನಂದನ ಕಂದ ಬಂದ ಗೋವಿಂದ
ಇಂದಿರಾನಂದ ರಾಧೆ ಮುಕುಂದ ಪ

ವೃಂದಿತ ಬೃಂದಾರಕ ಖಗವೃಂದ
ಸುಂದರ ಮುರಳೀ ನಾದಾನಂದ ಅ.ಪ

ಫಣಿಮಣಿ ಭೂಷಣ ಮುನಿತೋಷಣ
ಗಣಿಕಾಗಣ ಮನಮೋಹನ ತರುಣ
ಝಣ ಝಂಝಣರವ ಕಿಣಿಕಿಣಿಚರಣ
ಕುಣಿ ಕುಣಿವನು ಮಾಂಗಿರಿರಂಗ ಕರುಣ ೧

೧೧೬

ನಾದಾನಂದ ಗೋಪೀ ವೃಂದಾ ।
ಮಾಧವ ಗೋವಿಂದ ಪ

ವೇದಸುಧಾನಂದ ನಂದಗೋಪಿಕಂದ
ವಂದಿತ ಮುಚುಕುಂದ ಅ.ಪ

ನೀರದ ಗಾತ್ರನೆ ವಾರಿಜನೇತ್ರನೆ ।
ಮೂರು ಲೋಕಗಳ ಪಾಲಿಪನೆ

ನಾರದನುತನೆ ಕರುಣಾಯುತನೆ ।
ಬಾರೊ ಮಾಂಗಿರಿವರ ವಾಸನೆ ೧

೧೧೭

ಪರಾತ್ಪರಾ ಪ್ರಭುವರ ನೀ
ಕರುಣವಾರಿಧಿಯಲಾ ವಿಶ್ವರೂಪ ಪ

ಸುರೇಶ ಮಾವರ ಮೋಹಕರಾ
ಸಾರಸಾಕ್ಷ ನವನೀತಚೋರಾ ಅ.ಪ

ಮುನಿಪುಂಗವಾನತಪದಕಮಲ ।
ಘನಗುಣ ಮಣಿಗಣ ರಂಜಿತ ವಿಮಲ ೧

ದನುಜಕುಲೋತ್ಪಾಟನ ಭವತರಣ ।
ದಾನವರಿಪು ಮಾಲೋಲ ಮಾಂಗಿರೀಶಾ ೨

೧೧೮

ಪಾಲಯ ದನುಜಾರೆ ನೃಹರೆ ಪ

ಮದನಜನಕ ಮಾಧವ ಗಿರಿಧಾರಿ
ಮಧುರಾಪುರ ಪರಿಪಾಲಕ ಶೌರೀ ೧

ನಂದ ಕಿಶೋರ ಗೋಪಾಲ ಮುಕುಂದ
ಬೃಂದಾವನಾ ಸಾನಂದ ಗೋವಿಂದ ೨

ಸನಕಸನಂದನ ವಿನಮಿತ ಚರಣಾ
ವನಜನಯನ ಗೋಪೀಜನ ಕರುಣಾ ೩

ಮಂಗಳಭಾಸಾ ಮುನಿಗಣತೋಷಾ
ಮಾಂಗಿರಿವಾಸಾ ಮಣಿಗಣಭೂಷಾ ೪

೧೧೯

ಪಾಲಿಸೆನ್ನ ಲೋಲಲೋಚನ ಬಾಲಗೋಪಾಲ ಪ

ಕಾಲಕಾಲ ಶೌರಿ ಶ್ರೀವನಮಾಲಿ ಶ್ರೀಲೋಲ ಅ.ಪ

ನಿನ್ನ ಧ್ಯಾನವೆ ಮಧುರ ಪಾದ ಎನ್ನ ತನುವಿಗೆ
ನಿನ್ನ ಭಾವನ । ಸಂಜೀವನ
ರನ್ನಪಾದವ ನುತಿಸಿದವರ ಮನದೊಳಿರುವೆ
ಪತಿತರಾ ಪೊರೆವೆ ೧

ಸತತ ನಿನ್ನ ಚರಣದಿ ಬೇಡುವೆ
ಹಿತದೊಳೆರಗುವೆ ಮಾಂಗಿರೀಶ ಕಲುಷನಾಶ
ನುತಮಂಗಳ ವೇಷಾ ಶೃಂಗಾರಾಂತರಂಗ ಭಾಸ
ರಂಗ ಸುಪ್ರಕಾಶ ೨

೧೨೦

ಪಾಲಿಸೋ ವನಮಾಲಾ । ಗೋಪಾಲಬಾಲಾ ಪ

ಮುರಾರಿ ಪೂಜಿತ । ಸಾರಸಭವನುತ
ನಾರದಮುನಿ ವಿದಿತಾ । ನೀರಜನೇತ್ರ ೧

ನೀಲ ನೀರದಕಾಯ । ಪಾಲಿತ ಮುನಿಗೇಯ
ಮಾಲಕುಮಿಪ್ರಿಯಾ । ಲೀಲಾಮಯ ೨

ಶೃಂಗಾರರಾಜಿತ ಮಂಗಳವೇಷಿತ
ಮಾಂಗಿರಿಚರಣಾದಿತ । ಗಂಗಾನತ ೩

೧೨೧

ಪ್ರಭು ತವ ಚರಣಾ ಭವೋತ್ತಾರಣ
ವಿಭವ ಪ್ರಪೂರಣ । ಮಾಂಗಿರಿಮೋಹನಾ ಪ

ವಿಭುದಾನತಪಾವನಾ ಸ್ವಾಮಿ
ದಾನವಕುಲಭೀಷಣಾ ಕೃಪಾಕರಾ ಅ.ಪ

ನಿರುಪಮ ಶುಭಗೀತ ವಿಧಿನುತ ವಿಖ್ಯಾತ
ಪರತರ ಸುಖದಾತ ಸುಜನಗಣನುತ
ಕಾಮಿತ ಸಂದಾತ ಪಾರ್ಥಿವ ರಥಸೂತ
ಭೂಮಿತ್ರಯ ನೇತಾ ಮನ್ಮಥತಾತಾ
ಸುರಪತಿ ವಂದಿತಾ ದೇವ ರಮಾಕಾಂತಾ
ವರದಸ್ವಯಂಜಾತಾ ಶರಣ ಸಂಪ್ರೀತಾ ೧

ಗಿರಿಧರ ಗೋವಿಂದ ಶರಣಜನಾನಂದ
ಮುರಹರ ಮುಚುಕುಂದ ಭಯಹರ ವರದಾ
ಶ್ರೀಮುಖ ಸಾನಂದ ಗೋಕುಲ ಮಕರಂದ
ಸುರಮುನಿ ಬೃಂದ ನಂದನ ಕಂದ
ಸುರುಚಿರ ಕೋವಿದಾ । ಮುರಳೀ ಬೃಹನ್ನಾದ
ಪಾಂಡುಸುತಾನಂದ । ಮಾಂಗಿರಿವರದಾ ೨

೧೨೨

ಬಾರೋ ನಿತ್ಯಾನಂದಲೀಲಾ । ಗೋಪಾಲ ಬಾಲ ಪ

ಬಾರೋ ವನಜಮಾಲಾ ಬಾರೋ । ಗಾನಲೋಲಾ ಅ.ಪ

ನಿನ್ನ ಕರುಣೆ ಎನ್ನೊಳಿರಲಿ ನಿನ್ನ ಚರಣ ಎನಗೆ ಸಿಗಲಿ
ನಿನ್ನ ಧ್ಯಾನ ಮನದೊಳಿರಲಿ ನಿನ್ನ ನಾಮ ರಸನೆಯೊಳಿರಲಿ ೧

ಮುರಳೀಧರ ಲೋಕೇಶ ಧರಣೀಧರ ವೆಂಕಟೇಶ
ಶರಣಾಗತ ಕ್ಲೇಶನಾಶ ವರದಾಯಕ ಮಾಂಗಿರೀಶ ೨

೧೨೩

ಬಾರೋ ಭಜಕಾವಳಿ ನಿತ್ಯಾನಂದ ।
ಮಾರಮಣಾ ಹರಿ ಗೋವಿಂದಾ
ಬಾರೋ ಕೊಂಡಾಡಿ ಪಡೆವೆನಾನಂದ ಪ

ಸಾರಸಾಕ್ಷ ಶಿವನುತ ಸಾನಂದಾ ।
ನಾರದಾದಿ ಮುನಿ ಬೃಂದಾನಂದ
ನೀರದಾ ನವಗೋಪೀವೃಂದಾ ।
ಬಾರೋ ಭಕ್ತಕುಮುದೇಂದು ಮುಕುಂದಾ ಅ.ಪ

ನಾನಾ ಜನುಮಗಳೊಳಗುದಿಸಿದೆವಯ್ಯ
ಎನ್ನಯ ಜನುಮಗಳಾ ಪರಿಯಾ ।
ಏನೆಂದು ಪೇಳಲಿ ನಿನಗೆ ಜೀಯ
ನೀನೆನಗಿತ್ತಾ ತನುಗಳನಳೆಯಲು ಏನಪೇಳಲ್ಕೆ ಭೂಮಿಗೆ ನಾಲ್ಮಡಿ
ಸಾನುರಾಗದಿ ಜನನಿಯಿತ್ತಾ ಘೃತ
ಪಾನಕ್ಷೀರ ವಾರಿಧಿಗಿಮ್ಮಡಿಯೋಳ್ ಬಾ ೧

ನೋಡಿ । ಮನಕರಗದೆ ರುಕುಮಿಣಿ ರಮಣಾ
ಮೃಡ ವಂದಿತ ಸರಸಿಜ ಚರಣಾ ಪಾಡೀ ಕೊಂಡಾಡುತಿರ
ದೇಕೆ ನಿಷ್ಕರುಣಾ ಬೇಡಿದರ್ಗೆ ಕೈನೀಡುತೆ ದಾನವ
ಮಾಡಲಿಲ್ಲವದರಿಂದ ದರಿದ್ರತೆ ಪೀಡಿಸವ್ಯೆ ನಾ
[ಮಾಡಿದ] ಪಾತಕವಾರ್ಜಿಸಿ ಜನುಮಂಗಳ ಪಡೆದೆನೊ ಬಾ ೨

ರಾಮ ಜಗದಭಿರಾಮ ಸುನಾಮ । ಸುಪ್ರೇಮ
ನಮಿಸುವೆ ಸುಗುಣ ವಿರಾಮ

ನಾಮ ಸ್ಮರಣೆಯ ಪರಲೋಕದ ಧಾಮಾ
ಕಾಮಿತಾರ್ಥಗಳನೀಮನ ಬಯಸದೋ
ರಾಮದಾಸ ಸನ್ನುತ ವರಮಾಧವ ಕೋಮಲಾಂಗ
ಸೋಮಶೇಖರಾಧಿಪ ಸುಮಚರಣವ ನೋಳ್ಪೆನೋ ಬಾ ೩

೧೨೪

ಬಾರೋ ಮುರವೈರಿ ದುರಿತಾರಿ ನೃಹರಿ ಪ

ದನುಜೇಭ ಕೇಸರಿ ಶರಣಾಗತ್ಯೆಸಿರಿ ಅ.ಪ

ಚರಣಸೇವಾಭಾವ ವರವೀಯೋ ದೇವ
ಧರಣಿಯನುರೆ ಕಾವ ಹರಿ ಜೀವ ಜೀವ ೧

ಜಲಜನೇತ್ರಾನಂದ ಕಲುಷಹರ ಗೋವಿಂದ
ಕಲಿಮಥನ ನೀಲಕಾಯಾ ವರದ ೨

ಗಂಗೆಯ ಪೆತ್ತವನೆ ಮಾಂಗಿರಿಯ ನಾಯಕನೆ
ಅಂಗಜನ ಪ್ರಿಯಪಿತನೆ ಗಂಗಾಧರ ಪ್ರಿಯನೆ ೩

೧೨೫

ಭಾಮಾರಮಣನೆ । ಶ್ಯಾಮಸುಂದರನೆ
ಓ ಮಹಾಮಹಿಮ ಕೇಶವನೆ ಪ

ಪ್ರೇಮಾನಂದ ಸುಧಾಮಾರ್ಚಿತ ಪದ
ಶ್ರೀಮಹಿಜಾ । ಮಹಿಜಾ ಸಂಜೀವನೇ ಅ.ಪ

ಸತ್ಯಸುಧಾಕರ ನಿತ್ಯಸುಖಂಕರ
ದೈತ್ಯಭಯಂಕರ ಮುನಿನಿಕರಾ

ಸ್ತುತ್ಯದಿವಾಕರ ಭಕ್ತನಿಶಾಕರ
ಮೌಕ್ತಿಕರುಚಿರಾ ಅಭಯಕರಾ ೧

ಸುರಮುನಿಪಾಲಾ ಕರುಣಾಲವಾಲಾ
ಮುರಳೀಲೋಲಾ ವನಮಾಲಾ
ಮುರ ಬಕಕಾಲಾ ಹೃದಯವಿಶಾಲ
ವರಮಾಂಗಿರಿಬಾಲಾ ಗೋಪಾಲಾ ೨

೧೨೬

ಬೃಂದಾವನಾನಂದ ಬಾ । ಬೃಂದಾರಕಾನಂದ ಬಾ ಪ

ಮಂದಾಕಿನೀಪಾದ ಗೋಪೀಜನಾನಂದ
ನಂದಾತ್ಮ ಗೋವಿಂದ ಬಾ ಅ.ಪ

ನಂದನ ವನದಲ್ಲಿ ಬೆಳೆದ ಮಂದಾರಾ
ಸುಂದರಿಯ ತಲೆಯ ಜಡೆಯ ಬಂಗಾರ
ಮಂದಮಾರುತನಿಂದ ನಲಿವು ಶೃಂಗಾರ
ಮಂದಿರದೊಳಗೆಲ್ಲ ವಿಸರದ ಸಾರ ೧

ಕತ್ತಲೆಯಲಿ ಹೊಳೆವ ರನ್ನದ ದೀಪ
ಮತ್ತಗಾಮಿನಿಯರ ಸರಸ ಸಲ್ಲಾಪ
ಎತ್ತೆತ್ತ ಸಡಗರ ಸೊಗದ ಪ್ರತಾಪ
ಇತ್ತಿತ್ತ ಬಂದರೆ ಮರೆವುದ ತಾಪ ೨

ಗೋಪಾಲ ಘನಲೀಲ ಬಾ ಮುರಹರ
ಶ್ರೀಪದ್ಮಜಾಲೋಲ ಬಾ
ತಾಪತ್ರಯಕಾಲ ಬಾ ಪರಂಧಾಮ
ದಿತಿಸುತಭೀಮಾ ಆಪತ್ಸಖಾ ಭಕ್ತಪಾಲಾ ಮಾಂಗಿರಿನಾಥ ೩

೧೨೭

ಭಜ ಭಜ ಮಾನಸ ಅಜಸುರ ನಮಿತಂ
ಭಜ ಶಯನಂ ತ್ರಿಜಗನ್ನಾಥಂ ಪ

ಸುಜನಾಕರ್ಷಿತ ಪಾದ ಸರೋಜಂ
ಭಜನಾರಾಧನ ನಂದಿತ ಭೂಜಂ ಅ.ಪ

ವೇಣು ವಿನೋದಂ ಪ್ರಣವಾಕಾರಂ
ಭ್ರೂಣಪಾಲನ ತ್ರಾಣಸಮೀರಂ ೧

ವೀಣಾರವ ಸಂಪ್ರೀತಮುದಾರಂ
ವಾಣಿವಿನುತ ಮಾಂಗಿರಿರಂಗಾಖ್ಯಂ ೨

೧೨೮

ಮಂದರಧರ ಗೋವಿಂದ ಜಯ
ನಂದನ ಕಂದ ಬಾಲಕುಲದಾಸಾನಂದ ಪ

ಬೃಂದಾವನ ಗೋಪೀಜನ ವೃಂದ
ಸುಂದರ ಮುರಳೀ ಗೀತಾನಂದ ಅ.ಪ

ಶ್ರೀವತ್ಸಾಂಕಿತ ಪಾವನಚರಣ
ದೇವ ದೇವಾನತ ದೇವಕಿತರುಣ
ಭಾವ ಸಂಭವಪಿತ ರಾಧಾರಮಣ
ಭಾವುಕ ಸೇವಿತ ಕರುಣಾಭರಣ ೧

ಮಂಗಳನಾಮಾ ಯದುಕುಲಸೋಮಾ
ಸಂಗರಭೀಮ ಜಗದಭಿರಾಮ
ಭೃಂಗಕುಂತಳ ಮಾಲಿಂಗನಿಸ್ಸೀಮ
ರಂಗರಥಾಂಗ ಮಾಂಗಿರಿವರಧಾಮ ೨

೧೨೯

ಮನಮೋಹಮಂದಿರಾ ಶ್ರೀವರ
ಘನಮಣಿ ತಾ ಹಾರಾ ಪ

ಮಾಂಗಿರಿಧಾಮಾ ಮಂಗಳನಾಮಾ
ಶರಣಾಗತ ಪ್ರೇಮಾ ಅ.ಪ

ದಿವಿಜನಿಕರ ಪರಿವಾರಾ ದಯಾಪೂರಾ
ಭುವನೇಶ್ವರ ಶೂರಾ
ಆನಂದಲೀಲಾ ಆಗಮಮೂಲಾ
ತುಳಸೀದಳ ವನಮಾಲಾ ೧

ಭಾಗವತಪ್ರಿಯ ಸಾಗರತನಯಾ
ಮನರಂಜನ ಸದಯಾ
ಮುರಳೀಧೃತಕರ ಕುಂಜವಿಹಾರಾ
ರಾಧಾಮನ ಮಣಿಹಾರಾ ೨

ನಂದನ ಕಂದಾ ಜಗದಾನಂದ
ಬೃಂದಾವನಾನಂದ
ಗೋಪಿಕಾ ಜಾಲ । ಪ್ರೇಮಿತ ಬಾಲಾ
ಬೃಂದಾವನ ಲೋಲಾ ೩

೧೩೦

ಮುರಹರ ಬಾರೋ ವನಮಾಲಾ
ಚರಣವ ತೋರೋ ಗೋಪಾಲಾ ಪ

ಮೊರೆಯ ಕೇಳಿದರೂ ಕರುಣೆಯು ಬರಲಿಲ್ಲ
ಶರಣನ ಮರೆವುದು ತರವಲ್ಲಾ ಅ.ಪ

ಶರನಿಧಿಗಳಿವೆ ಗಿರಿಯ ಧರಿಸಿದೆ ಧರಣಿಯನೆತ್ತಿದೆ
ತರಳನ ಪೊರೆದೆ ವರವಟುವಾದೆ
ಅರಸರ ತರಿದೆ ನರಪಕೃಷ್ಣ ಬುದ್ಧ ಕಲ್ಕಿ ನೀನಾದೆ ೧

ನಿಗಮೋದ್ಧಾರಾ ನಗಧರ ಭೂವರಾ
ಮೃಗಮುಖ ವಾಮನ ಪರಶುಧವಾ
ಜಗಪತಿ ಮುರಳೀಲೋಲಾ ಪುರಹರಾ
ಖಗವಾಹನ ಕಲ್ಕಿ ವಿವಿಧಾವತಾರಾ ೨

ಗಂಗೆಯ ಜನಕಾ ಶರಣರ ಕನಕಾ
ಮಂಗಳದಾಯಕಾ ಅಸುರಾಂತಕಾ
ತುಂಗವಿಕ್ರಮ ಶ್ರೀಮಾಂಗಿರಿನಾಯಕಾ
ಅಂಗಜಜನಕಾ ಲೋಕಮೋಹಕಾ ೩

೧೩೧

ಮುರಳೀ ಲೋಲನ ಪ್ರೇರಿಸುವಳು ರಾಧೆ ಪ

ಒಲಿವಲಿ ನಲಿವಲಿ ಉಲಿವಲಿ ನಿಲುವಲಿ
ಮಲಿನವ ಕಳೆವಲಿ ಲೀಲೆಗಳಲಿ ರಾಧೆ ಅ.ಪ

ಕಂಗಳ ನೋಟದಿ ಸಂಗರದಾಟದಿ
ಅಂಗ ಸೌಂದರ್ಯದಿ ಮಂಗಳ ವೇಷದಿ ೧

ಮುರಳಿಯ ರವದಲಿ । ಕೊರಳಿನ ಸರದಲಿ
ಕರುಣೆಯ ಮನದಲಿ । ಪರಿಮಳ ಭರದಲಿ ೨

ಮಾಂಗಿರಿ ಶೃಂಗದಿ । ರಂಗನ ವೇಷದಿ
ಮಂಗಳನಾದದಿ । ಹೊಂಗೊಳಲೂದಿ ೩

೧೩೨

ಯಮುನಾತೀರವಿಹಾರಿ ಶೌರಿ
ವಿಮಲಾಂಬರಧರ ಪಾಹಿ ಮುರಾರಿ ಪ

ಕಮನೀಯಾವನ ಕುಂಜವಿಹಾರಿ
ಸುಮನಸನುತ ಪದದನುಜ ಸಂಹಾರಿ ಅ.ಪ

ಸರಸಿಜಲೋಚನ ಶರಣಸಂಜೀವನ
ಸುರಮುನಿಸೇವನ ಕರುಣಾಸದನ
ಅರವಿಂದಾನನ ವರಮಣಿರದನ
ದುರಿತವಿಮೋಚನ ನಿರುಪಮ ಗಾನ ೧

ಪುರಹರ ವಿನಮಿತ ಪಾವನಚರಿತ
ಧರಣಿರಮಾಯುತ ಸುರಮುನಿವಿನುತ
ಸುರಪತಿಸೇವಿತ ಫಣಿ ಫಣಿಭೂಷಿತ
ಮುರಳೀಧರ ಮಾಂಗಿರಿ ಶೃಂಗಸ್ಥಿತ ೨

೧೩೩

ವಾಸುಕಿಶಯನನ ನೋಡೆ । ತಂಗಿ
ಸಾಸಿರ ನಾಮವ ಹಾಡೆ । ತಂಗಿ ಪ

ದಾಸರು ಬಂದರೆ ಕೈ ಜೋಡಿಸಿ ವಂದಿಸೆ
ತೋಷದಿ ವರಗಳ ನೀಡುವರಮ್ಮ ಅ.ಪ

ಪರಿಮಳ ಭರದಲಿ ಮೆರೆಯುವ ಹೂಗಳ
ಅರಸಿ ತಂದಿರುವಳು ನೀನಲ್ಲವೇ
ಪರಮ ಮಂಗಳಕರ ಸರಸಿಜಪಾದಕೆ
ಹರುಷದೊಳರ್ಪಿಸೆ ಮರೆಯದಿರಮ್ಮ ೧

ಮಂದರಧರ ಗೋವಿಂದನು ಮನದಲಿ
ನಿಂದಿರುವನು ತಾನೆಂದೆಣಿಸಮ್ಮ
ಬಂಧಿಸಿ ಪಂಚೇಂದ್ರಿಯಗಳನೆಲ್ಲ
ವಂದಿಸಿ ಕೈಪಿಡಿ ಎಂದು ಬೇಡಮ್ಮ ೨

ಅಂಗನೆಯರ ಭಾವಭಂಗಿಗೆ ನಲಿಯುವ
ಮಾಂಗಿರಿಯರಸನು ನಿಜವಮ್ಮ
ಇಂಗಿತವರಿತು ಗೋಪಾಂಗನೆಯರಿಗಾ–
ಲಿಂಗನವಿತ್ತವನಿವನಮ್ಮ ೩

ಇವನಮ್ಮ ಮನದೈವ ಗೋಪಾಲನು
ಇವನಮ್ಮ ಪರದೈವ ನೀಲಾಂಗನು
ಭವದೂರ ಸುಕುಮಾರ ಸಿರಿಲೋಲನು
ನವನೀತ ದಧಿಚೋರ ಸುವಿಲಾಸನು ೪

ಪರಮಾರ್ಥ ಚರಿತಾರ್ಥ ವರದಾತನು
ಪರತತ್ವ ಚಿರತತ್ವ ಗುರುವೀತನು
ದುರಿತಾರಿ ಉಪಕಾರಿ ಪರಮಾತ್ಮನು
ಸಿರಿರಂಗ ಮಾಂಗಿರಿಯ ದೊರೆಯೀತನು ೫

೧೩೪

ವೈಜಯಂತಿ ಮಾಲಾ ಗೋಪಾಲಾ
ಶ್ರೀ । ಜಯ ಹರಿ ವಿಠಲಾ ಪ

ರಾಜರಾಜ ಗೋಪೀಜನ ಲೋಲಾ ।
ರಾಜವದನ ಕರುಣಾಲವಾಲಾ ಅ.ಪ

ಪೀತಾಂಬರಧರ ಪಾತಕ ಪರಿಹಾರ
ಗೀತ ಸುಧಾಕರ ಭೀತಿವಿದೂರ

ಖ್ಯಾತಿಯ ತಾನರಸುತ ವೇಣುಂಕರ
ನೇತಾ ಸಕಲವರದಾತಾ ಮಾಂಗಿರಿವರ ೧

೧೩೫

ಶ್ರೀಧರ ಮುರಹರ ಮಾರಮಣೀಕರ
ಸೇವಿತ ಜಯ ಜಯ ಗೋಪಾಲಾ ಪ

ಭೂಧರಾ ಪರಮೇಶ್ವರಾ ಕರಿವರ ಸುಖಕರ
ಪರಮ ದಯಾಕರ ಗೋಪಾಲಾ ಅ.ಪ

ಪಾಂಡವ ರಕ್ಷಕ ಕೌರವ ಶಿಕ್ಷಕ
ಪಕ್ಷಿಗಮನ ಹರಿ ಗೋಪಾಲಾ
ಚಂಡಕರಾಕ್ಷ ವಿಲಕ್ಷಣ ಲಕ್ಷಿತ
ಲಕ್ಷ್ಮೀನಾಯಕ ಗೋಪಾಲಾ ೧

ಗಂಗಾಜನಕ ವಿಹಂಗಗಮನ
ಮಾತಂಗವರದ ಹರಿ ಗೋಪಾಲಾ
ಸಂಗರಭೀಮ ಕೃಪಾಂಗ ಮನೋಹರ
ಮಾಂಗಿರಿನಾಯಕ ಗೋಪಾಲಾ ೨

೧೩೬

ಶ್ರೀಮುರಳೀಧರ ಕೃಪಾಕರ ಜೀಮೂತನೀಲಾಂಗ ಶೃಂಗಾರ ಪ

ಸಾಮಜಭಯಪರಿಹಾರ ಕಾಮಿತ ಫಲದಾತಾರ
ಸಾಮದಾನಾದಿ ಚತುರ ಪರಾತ್ಪರಾ ಶುಭಂಕರಾ ಅ.ಪ

ಶಾಂತಿ ಸುಗುಣ ಪೂರಣ ಭವತರಣ
ಆಂತರ್ಯ ಸಂಚಾರಣ ಭಯಹರಣ

ಪೂತನೀ ಪ್ರಾಣಹರಣ ಪಾಂಡುಪುತ್ರಸಮೀಕ್ಷಣ
ನೀತಿ ನಿಯಮ ಸಂತ್ರಾಣ ಮಾಂಗಿರೀಶ ಚರಣ ವಿಹರಣ ೧

೧೩೭

ಶ್ರೀಶ ಮುಕುಂದಾ ಜಗದಾನಂದಾ ಪ

ಸುರಮುನಿ ಬೃಂದಾ ನಾದಾನಂದಾ ಅ.ಪ

ನೀರಜನೇತ್ರಾ । ಸುರನುತಿಪಾತ್ರಾ
ದಾನವವೇತ್ರಾ । ನೀರದಗಾತ್ರಾ
ತ್ರಿಭುವನಸೂತ್ರಾ । ಪುಣ್ಯಚರಿತ್ರಾ
ಧರಣಿಕಳತ್ರಾ ಶ್ರೀಗೋತ್ರಾ ಜಯಾ ೧

ಮನಿಜನಪ್ರೇಮ ಅಗಣಿತನಾಮ
ದಾನವ ಭೀಮಾ ಶ್ರೀ ರಘುರಾಮಾ
ಕುವಲಯಶ್ಯಾಮ ಜಗದಭಿರಾಮ
ಮಾಂಗಿರಿಧಾಮಾ ಶ್ರೀರಾಮ ಜಯ ೨

೧೩೮

ಅಕ್ಷಯಾತ್ಮ ಹರಿ ಜೈ ಜೈ ರಂಗ
ಪಕ್ಷಿವಾಹನಾ ಮಾಂಗಿರಿರಂಗ ಪ

ಅಕ್ಷಯ ಸುಖಕರ ಜೈ ಜೈ ರಂಗ
ಲಕ್ಷರೂಪ ಸಿರಿ ಮಾಂಗಿರಿರಂಗ ಅ.ಪ

ಉರಗಶಯನ ಹರಿ ಜೈ ಜೈ ರಂಗ
ಸರಸಿಜಲೋಚನ ಮಾಂಗಿರಿರಂಗ
ಉರುತರ ಮಹಿಮಾ ಜೈ ಜೈ ರಂಗ
ಸುರಮುನಿ ಸನ್ನುತ ಮಾಂಗಿರಿರಂಗ ೧

ಮಧುಮೃದು ವಚನಾ ಜೈ ಜೈ ರಂಗ
ಬುಧಜನರಂಜನ ಮಾಂಗಿರಿರಂಗ
ಮಧುರನಾಯಕ ಜೈ ಜೈ ರಂಗ
ಮಧುದೈತ್ಯಾಂತಕ ಮಾಂಗಿರಿರಂಗ ೨

ಓಂ ನಮೋ ಕೇಶವ ಜೈ ಜೈ ರಂಗ
ದೀನದಯಾಪರ ಮಾಂಗಿರರಂಗ
ಶ್ರೀನಾರಾಯಣ ಜೈ ಜೈ ರಂಗ
ಜ್ಞಾನದಾತ ಸಿರಿ ಮಾಂಗಿರಿರಂಗ ೩

೧೩೯

ಬಾರೈ ನಂದನ ಕಂದನೆ ನೀರಜನೇತ್ರ ಪ

ನೀಲಮಣಿ ಮಂಟಪದ ಮೇಲೆ ಮಾಣಿಕ್ಯಕಲಶ
ಜಾಲು ಜಲ್ಲರಿ ರತ್ನ ನೀಲಪೀಠಕೆ ನೀ ೧

ಮುತ್ತಿನಾಕ್ಷತೆಗಳ ನೆತ್ತಿಯಲಿಡುವೋಲು
ಸುತ್ತಭೂಸುರರೆಲ್ಲರಸುತ್ತ ಬಾರೆನ್ನುವರು ೨

ಶೃಂಗಾರಶೀಲನೆ ಸಂಗೀತಲೋಲನೆ
ರಂಗನಾಯಕಿಸಹಿತ ತುಂಗಪೀಠಕೆ ನೀ ೩

ಅಂಗನೆಯರು ಕೂಡಿ ಮಂಗಳಗಾನ ಪಾಡಿ
ರಂಗ ಬಾರೆನ್ನುವರು ಮಾಂಗಿರಿನಿಲಯ ೪

೧೪೦

ಪರೇಶ ಜಗದೀಶ ಸುರನರ ಪೋಷಾ ಪ

ಶ್ರೀರಮಾರಮಣ ವೈಜಯಂತೀ ಭೂಷಾ
ಶ್ರೀರಂಗಾಧೀಶಾ ಪರಮೇಶ ಅ.ಪ

ಗಿರೀಶವಂದಿತ ಕಮಲಾಸನನುತ ಪರಾತ್ಪರಾ ರವಿಶತನಯನ
ಧರಾಧರಾರ್ಚಿತ ಮೌನಿಸೇವಿತ ಶೌರೀ ರಮಾವಿನಮಿತ ರಾಮಾ ೧

ಗಾನಲೋಲ ಕೃಪಾಲವಾಲ ಸುಶೀಲ ಸದಮಲ ಸಕಲಕಲಾ ಸುವಿಶಾಲ
ಮಾನಸ ನಂದ ಗೋಕುಲಬಾಲ ಶ್ರೀವನಮಾಲಾ ಕೋಮಲ ೨

ದೀನಪಾಲ ಕುಚೇಲವರದ । ಸುಶೀಲ ವಿಮಲಾ
ಸಕಲಬಲ ಸುರಜಾಲಪಾಲ ಖರಕಾಲ
ಘನತರಲೀಲ ಮಾಂಗಿರಿರಂಗವಿಠಲ ೩

೧೪೧

ಮಂಗಳನಾಮಾ ನಮೋ ನಮೋ ಪ

ಮಾಂಗಿರಿಧಾಮಾ ನಮೋ ನಮೋ ಅ.ಪ

ಅಂಗಜಾತ ಪಿತ ಸುರಪತಿವಿನುತಾ
ತುಂಗ ಕೃಪಾಂಬಕ ನಮೊ ನಮೋ ೧

ರಂಗನಾಥ ನೀಲಾಂಗ ಮಹಾದ್ಭುತ
ಸಿಂ[ಗಾನ]ನ ಹರೇ ನಮೋ ನಮೋ ೨

ನಾಗಾಲಂಕೃತ ಸರೋಜ ಭೂಷಿತ
ಕಮಲಭವಾನತ ನಮೋ ನಮೋ ೩

ತಾರಕ ನಾಮ ನಮೋ ನಮೋ
ರಘುರಾಮಾ ನಮೋ ನಮೋ ೪

ಸುರಮುನಿ ನಾರದ ಗೌತಮ ಪ್ರೇಮಾ
ಧರೆಗಭಿರಾಮಾ ನಮೋ ನಮೋ ೫

ಗಿರಿಜಾಧವನುತ ಗುಣ ಮಣಿಧಾಮಾ
ರಾಕ್ಷಸ ಭೀಮಾ ನಮೋ ನಮೋ ೬

ರಾಮಾ ರಘುರಾಮ ಕ್ಷೀರಾಬ್ಧಿಶಾಯಿ
ಸೋಮಾ ಮಾಂಗಿರಿವರ ನಮೋ ನಮೋ ೭

೧೪೨

ರಂಗನ ನೋಡುವಾ ಶ್ರೀರಂಗನ ಪಾಡುವಾ ಪ

ರಂಗನ ನೋಡಿ ರಥಾಂಗ ಸುಧಾಂಗನು ಅ.ಪ

ಇಂದಿರೆಯರಸ ಮುಕುಂದ ಜನಾರ್ದನ
ಮಂದರಧರ ಗೋವಿಂದನ ಕೇಶವನ ೧

ರಾಮನ ಜಾನಕಿರಾಮನ ರವಿಕುಲ
ಸೋಮನ ಮಾಂಗಿರಿಧಾಮನ ಭೀಮನ ೨

೧೪೩

ರಂಗನಾಥಾ ಅಂಗಜಾಪಿತಾ [ಮಾ] ವಂದಿತ ಪ

ಜಗದಾದಿ ಮೂಲಕಾರಣ ನಗಧರಾಘ ನಿವಾರಣ
ಖಗನುತಾ ಭಕ್ತಕಂಕಣ ೧

ದೀನಪಾಲ ಸ್ವರ್ಣಮೇಖಲಾ । ಗಾನಲೋಲಾನುಪಮಲೀಲಾ
ದಾನಶೀಲ ಕರುಣಾಲವಾಲ ೨

ತಾಮಸನಿಕರಮಾನಿತಾ ಶ್ಯಾಮಲಾಂಗಾ ಪೊರೆ ಶ್ರೀಯುತಾ
ರಾಮದಾಸಾರ್ಚಿತ [ಮಾಂಗಿರೀಶ] ೩

೧೪೪

ರಂಗ ನಿನ್ನ ನಂಬಿದೆ ಮಾಂಗಿರಿ
ಶೃಂಗಾರಪೂರ್ಣ ಶುಭಾಂಗ ಶ್ರೀಕಾವೇರಿ ಪ

ಮಂಗಳ ಮದನಾಂಗ ಗಿರಿಧರ
ಶೃಂಗನಿವಾಸ ರಥಾಂಗ ಕೃಪಾಂಗ ಅ.ಪ

ಬಾಲದಿವಾಕರ ತೇಜೋಲ್ಲಾಸ
ಶೀಲ ಸುಗುಣಾ ಸಂಭೂಷಿತ ವೇಷ ೧

ನೀಲ ನೀರದ ತಾರ ಸರೋರುಹ
ಲೋಲ ಬಂಧುರ ನಯನಯುಗ ೨

ಮೂಲಾಧಾರ ವೈಕುಂಠಪುರೀಶ
ಹಾಲಾಹಲಧರ ಮಾಂಗಿರಿ ಪರೇಶ ೩

ಶ್ರೀ ಲಕ್ಷ್ಮೀಸ್ತುತಿ

೧೪೫

ಅಪರೋಕ್ಷಜ್ಞಾನ ಸಂಚಯೇ ಶ್ರೀಪದ್ಮನಾಭ ನಿಲಯೇ ಪ

ತಪಯೋಗ ಭಕ್ತಿನಿಧಿಯೆ ಅಪಾರಮಹಿಮಾವಲಯೇ ಅ.ಪ

ಕಮಲಾ ಕಮಲಸದನೆ । ಕಮಲನಯನೆ ಕಮಲವದನೆ
ಕಮಲಾಂಬರೆ ಕುಂದರದನೆ । ಕಮಲಾಂಬಿಕೆ ಮನಮೋಹನೆ ೧

ಮರಕತಾಂಗಿ ಲೋಕಮಾತೆ । ಶರಣಜನಾಭೀಷ್ಟದಾತೆ
ಸರಸೀರುಹಜಾತನಮಿತೆ । ವರ ಮಾಂಗಿರಿರಂಗಪ್ರೀತೆ ೨

೧೪೬

ಕ್ಷೀರ ಸಾಗರ ಕುವರಿ । ಗೌರೀ ಮನೋಹರಿ
ಬಾರಮ್ಮ ಇಂದಿರಮ್ಮ ಪ

ನೀರೇಜ ಪದಯುಗಕೆ ಸಾರಿ ವಂದಿಪೆನಮ್ಮ
ಹಾರಗಳನರ್ಪಿಸುವೆ ಸ್ವೀಕರಿಪುದಮ್ಮ ಅ.ಪ

ಆವ ತೆರದಲಿ ನಿನ್ನನರ್ಚಿಸಿದರೂ ಕೊರೆಯೆ
ಭಾವಶುದ್ಧಿಯಲಿ ಪೂಜೆಗೈವೆನಮ್ಮ
ಓವರಿಗೆ ದಯಮಾಡು ದೇವಗಂಗಾ ಜಲದಿ
ಪಾವನ ಪಾದಾಂಬುಜವ ತೊಳೆವೆನಮ್ಮಾ ೧

ತವದಿವ್ಯ ಭೂಷಣವ ನವರತ್ನ ಹಾರಗಳ
ಸುವಿಲಾಸದಿಂದಿತ್ತು ಮಣಿವೆನಮ್ಮ
ಪವಳಪದುಮಾಸನ ವಿಶ್ರಾಂತಳಾಗಮ್ಮ
ನವಪುಷ್ಪ ಕುಂಜಗಳ ಧರಿಪೆನಮ್ಮ ೨

ಅಗರು ಚಂದನ ಧೂಪಮಿಗೆ ದಿವ್ಯ ಗಂಧಗಳ
ಬಗೆಬಗೆಯ ದೀಪಗಳ ನೀಡುವೆನಮ್ಮಾ
ಸೊಗಸಾದ ಭಕ್ಷ್ಯ ಭೋಜ್ಯಂಗಳನು ಅರ್ಪಿಸುವೆ
ನಗುನಗುತ ಸ್ವೀಕರಿಸಿ ಪಾಲಿಸಮ್ಮ ೩

ದೇವಕನ್ಯೆಯರೆಲ್ಲ ದಿವ್ಯಗಾನವ ಪಾಡಿ
ದೇವಿ ತವಕರುಣೆಯನು ಬೇಡುತಿಹರು
ಶ್ರೀವನಿತೆ ನಾನೀವ ತಾಂಬೂಲವನು ಸವಿದು
ಜೀವಕೋಟಿಗೆ ಸುಖವನೀವುದಮ್ಮಾ ೪

ಪೊಡಮಡುವೆ ನಿನ್ನಡಿಗೆ ಕೊಡು ಭಕ್ತಿಭಾಗ್ಯವನು
ಎಡೆಬಿಡದೆ ಹರಿಪಾದ ಸೇವೆಗೈದು

ಕಡುಮುದದಿ ನಿನ್ನ ಸಂಕೀರ್ತನೆಯ ಪಾಡಿಸು
ಬಡವರಾಧಾರಿ ಮಾಂಗಿರಿಯೊಡೆಯನ ರಾಣಿ ೫

೧೪೭

ಕ್ಷೀರಾಂಬುಧಿ ಸಂಭವೆ ಅಮ್ಮ
ನಾರಾಯಣಾಂತರ್ಯ ಭಾವೇ ಸ್ವಭಾವೇ ಪ

ಶ್ರೀರಂಗ ಧಾಮೆ । ಕೈವಲ್ಯನಾವೆ ಅ.ಪ

ರಾಕೇಂದು ಸಹಜಾತೆ ಸಾಕಾರ ಹರಿಪ್ರೀತೆ
ಲೋಕೇಶ್ವರಿ ಮಾತೆ ಸೌಭಾಗ್ಯದಾತೆ
ಅಕಳಂಕ ಸುಖಗೀತೆ ಏಕೈಕ ದೇವತೆ
ಸಾಕೇತ ರಾಜಿತೆ ಪ್ರೇಮಾನ್ವಿತೇ ೧

ಗಂಗಾಪಿತಾನಂದ ಸಂದಾತೆ ಸುರಗೀತೆ
ಸಂಗೀತ ಸಾಹಿತ್ಯ ಪೂರ್ಣೇ ವಿಖ್ಯಾತೆ
ಗಂಗಾಧರಾದಿತ್ಯ ರಾಕೇಂದ್ರ ವಿನುತೆ
ಶೃಂಗಾರ ಸದನೆ ಮಾಂಗಿರೀಂದ್ರ ಸಹಿತೇ ೨

೧೪೮

ಚಂದಿರವದನೆಯ ತವ ಸನ್ನಿಧಿಗೂ
ವಂದಿಪೆ ನಿನ್ನ ಪಾದಾಂಬುಜಗಳಿಗೂ ಪ

ಮಂದಮತಿಯುಗ್ಯೈವ ಕುಂದುಗಳೆಣಿಸದೇ
ಬೇಡುವೆ ಗೋವಿಂದನ ರಾಣಿ [ಕಲ್ಯಾಣಿ] ಅ.ಪ

ನನ್ನ ಕರೆಗೆ ಓ ಎನ್ನುವರಿಲ್ಲ
ನನ್ನಲ್ಲಿ ಕನಿಕರ ತೋರುವರಿಲ್ಲ

ಪನ್ನಗಶಯನ ತಾ ಎನ್ನ ನೋಡುತೆ ಕಣ್ಣ
ಸನ್ನೆಯ ಮಾಡಿ ಹೋಗೆನ್ನುವನಮ್ಮಾ ೧

ಅಪ್ಪನು ನಿನ್ನ ಮಾತೊಪ್ಪುವನಮ್ಮ
ತಪ್ಪನು ಮನ್ನಿಸಲೊಪ್ಪುವನಮ್ಮಾ
ತಪ್ಪು ನೆಪ್ಪುಗಳ ನಾನೊ[ಪ್ಪುವೆ ಬೇ]ಗ ನೀ
ನಪ್ಪಣೆಗೊಡಿಸು ರಂಗಪ್ಪನನೊಲಿಸು ೨

ಶೌರಿಯ ಕೃಪೆಯವತಾರೆ ನೀನೆಂಬುದ
ನಾರದನೆಲ್ಲೆಡೆ ಸಾರುತಲಿಹನು
ಮಾರಜನಕ ಮಾಂಗಿರಿರಂಗನು ನಿನ್ನ
ಕೋರಿಕೆಗನುಮತಿ ತೋರುವನಮ್ಮಾ ೩

೧೪೯

ಜಗನುತೆ ಮಾಮಾತೆ ಪ್ರೀತೇ ಪ

ಸಾಗರ ಜಾತೆ ತ್ರಿಜಗ ವಿಖ್ಯಾತೆ । ನಾಗಾಲಂಕೃತೆ ಮಾತೆ ವಿನೀತೆ ಅ.ಪ

ಕೋಮಲಪಾಣಿ ಪನ್ನಗವೇಣಿ ।
ದಿವ್ಯಾಂಬುಜ ಮಣಿ । ಸರಸಿಜ ಪಾಣಿ ೧

ಮಾಂಗಿರಿ ಮಂದಿರೆ ದೀನ ಕೃಪಾಕರೆ ।
ಪೀತಾಂಬರಧರೆ ಪ್ರಣವಾಕಾರೇ ೨

೧೫೦

ಮನಸಿಜಜಾತ ತಾತಮೋಹಿನಿಭಾಮಿನೀ ಶ್ರೀಮಣಿ ಪ

ವನಜಾಸನೆ ಘನಸುಗುಣೀ । ಮುನಿಮಾನಸ ತೋಷಿಣಿ ಅ.ಪ

ನರೋತ್ತುಂಗ ಪ್ರಮೋದಿನೇ । ಚಿನ್ಮಯೆ ಸುಮಭಾವನೆ
ದರಹಾಸ ಸುಮಾನಿನೆ ಭಾಗ್ಯಾಲಂಕಾರೆ ಪಂಕಜಾಸನೇ ೧

ವರ ಸುಖಾಭ್ಯಂಜನೇ ಮೋಹನೇ ಮಣಿಗಣರದನೇ । ಗಜಗಮನೇ
ಸಿರಿ ಮಾಂಗಿರಿಪುರ ಭೃಂಗ ಚತುರೆ ನಿರುತ ನಿರಂಜನಿ ಕೋಮಲೇ ೨

೧೫೧

ವೇಣುಗೋಪಾಲನಿಲಯೇ ವೀಣಾವಿನೋದವಲಯೇ ಪ

ವಾಣಿ ಗೌರಿನುತೆ ತಾಯೆ । ಪ್ರಾಣತ್ರಾಣದಾತೆ ಸದಯೆ ಅ.ಪ

ಬೃಂದಾವನ ವನವಾಸಿನಿ ಮಂದಾಕಿನಿ ಪ್ರಿತಮೋಹಿನಿ
ಮಂದಾತ್ಮಜ ಸಹಚಾರಿಣಿ ಬೃಂದಾರಕ ಸುಖವರ್ಧಿನಿ ೧

ಇಂದೀವರ ಸುಮಭೂಷಿಣಿ ವಂದೇ ಮಾಂಗಿರೀಶ ತೋಷಿಣಿ ೨

೧೫೨

ಹರಿಮನದಂಬೇ ಪರಮ ಕದಂಬೇ
ಸುರಪನುತೆ ಮಾಂಗಿರೀಶ ಸೌರಭೇ ಪ

ಸಿರಿಮಧುರಭಾಷಿಣೆ ಶ್ರೀಮಣಿ
ಸರಸಿಜನೇತ್ರರಮಣೀ ಸುವಾಣಿ
ವರ ಭೋಗೀಶವೇಣಿ ಸದ್ಗುಣಿ
ಸುರುಚಿರ ಸುಮಪಾಣಿ ಭಾಮಿನಿ ೧

ವನಜಭವ ಪೂಜಿತೇ ವಂದಿತೇ
ಮನಸಿಜಮಾತೆ ಮಹಿತೇ ವಿನೀತೇ
ವೈನತೇಯಾದಿ ಸಂತಾನಕೆ
ಜನಗಣನುತೆ । ರಂಗ ಮೋಹಿತೇ ೨

೧೫೩

ಶ್ರೀ ತುಳಸಿ ಸ್ತುತಿಗಳು

ಇಂದಿರೇಶನ ಅರ್ಧಾಂಗಿ ಬೃಂದೆ ಪಾಲಿಸು ಪ

ಸಿಂಧುಶಯನನೊಡನೆ ಬಂದು ಮಂದಹಾಸವನೀಡು ಅ.ಪ

ದೇವಿ ನಿನ್ನ ಕೃಪೆಯನೆಳಸಿಭಾವ ಭಕ್ತಿಯಿಂದ ಭಜಿಸಿ
ಪಾವನಾಂಘ್ರಿಗಳಿಗೆ ನಮಿಸಿ ಕಾವುದೆಂಬೆವು ತಾಯೆ ತುಳಸಿ ೧

ಕಾಮಿತಾರ್ಥದಾತೆ ಮಾತೆ ಪ್ರೇಮಪೂರ್ಣ ಜಗವಿಖ್ಯಾತೆ
ಸೋಮ ಸೂರ್ಯ ವಿನುತೆ ಚರಿತೆ ಭಾವೆ ಮಾಂಗಿರೀಶ ದಯಿತೆ ೨

೧೫೪

ತುಳಸಿ ನಿನ್ನ ಭಜಿಸುವೆ । ಬಳಸಿ ಬಳಸಿ ನಮಿಸುವೆ ಪ

ಕೊಳಲಬಾಲನರಸಿಯೇ । ನಳಿನಬಸರಗಂಧಿಯೇ ಅ.ಪ

ಗಾನಕೊಲಿದು ನಲಿವಳೇ । ಜ್ಞಾನವಿತ್ತು ಕಾವಳೆ
ನಿನ್ನಕರುಣೆ ಕೃಷ್ಣನೊಲವು । ನಿನ್ನಸ್ಮರಣೆ ಪಾಪಹರವು ೧

ಮಂಗಳಾಂಗಿ ತುಳಸಿದೇವಿ ರಂಗಗಿರಿಯ ನೀವದೇವಿ
ಮಾಂಗಿರೀಶ ದಯಿತೆ ಮಹಿತೆ ಇಂಗಿತಾರ್ಥವೀವ ಮಾತೆ ೨

ಬೃಂದಾವನ ದಿವ್ಯಸದನೆ ಇಂದೀವರ ಭವ್ಯವದನೆ
ಕುಂದಾವಳಿ ಸದೃಶರದನೆ ನಂದಾತ್ಮಜ ಮನಮೋಹನೆ ೩

ಸರಸವಿರಸಭರಿತೆ ನಮಿತೆ ಪರಮಚತುರೆ ಸುರಸನ್ನುತೆ
ಮುರಳಿಗಾನಲಸಿತೆ ಮಾತೆ ವಂದೆ ಮಾಂಗಿರೀಶಸಹಿತೆ ೪

ಆಳ್ವಾರಾಚಾರ್ಯಸ್ತುತಿಗಳು

೧. ಶ್ರೀ ಆಂಜನೇಯ ಸ್ತುತಿಗಳು

೧೫೫

ನಮೋಸ್ತು ಹನುಮಾನ್ ನಮೋಸ್ತು ಹನುಮಾನ್
ನಮೋಸ್ತು ಹನುಮಾನ್ ನಮೋ ನಮೋ ಪ

ನಮೋಸ್ತು ಧೃತಿಮಾನ್ ನಮೋಸ್ತು ಧೃತಿಮಾನ್
ನಮೋಸ್ತು ಧೃತಿಮಾನ್ ನಮೋ ನಮೋ ಅ.ಪ

ನಮೋಸ್ತು ಶ್ರೀಮಾನ್ ನಮೋಸ್ತು ಧೀಮಾನ್
ನಮೋಸ್ತು ಮರುತಾತ್ಮಜ ಹನುಮಾನ್
ನಮೋಸ್ತು ಬಲವಾನ್ ನಮೋಸ್ತು ವೀರ‍್ಯವಾನ್
ನಮೋಸ್ತು ಪಂಚಾನನ ರೂಪಾ ೧

ನಮೋ ಸಮೀರಾಂಜನಾಕುಮಾರಾ
ನಮೋ ಬೃಹತ್ಶರೀರಾ ನಮೋ
ನಮೋ ದಿವಾಕರ ಭಯಂಕರಾ ವಿಧಿ
ವರಪ್ರಸಾದಿತ ನಮೋ ನಮೋ ೨

ನಮೋ ನಮೋ ವಾನರೇಂದ್ರ ಸಚಿವಾ ನಮೋ ಜಿತೇಂದ್ರಿಯ ಗದಾಧರಾ
ನಮೋ ನಮೋ ರಾಘವೇಂದ್ರ ಸನ್ನುತ ನಮೋಸ್ತು ಸಕಲಕಲಾಧರ೩

ವಸುಂಧರಾಪ್ರಿಯ ತನೂಭವಾನ್ವೇ
ವಸುಗಣೋತ್ಸುಕಾ ಶುಭದಾಯಕಾ
ಹಸನ್ಮುಖಾ ಶ್ರೀರಘೋತ್ತಮ ಪ್ರಿಯಾ
ಯ [ಸಖ] ಖಗೇಂದ್ರಸಮ ಕಪಿನಾಯಕಾ ೪

ಜನಕಸುತಾ ಸುದರ್ಶನ ಹರ್ಷಿತ ವನಭಂಗಕರಾಕರಣಧೀರಾ
ದನುಜನಿಷೂದನ ಚೂಡಾಮಣಿಕರ [ಘನ]
ಲಂಕಾನಗರ ಭಯಂಕರಾ ೫

ಸೀತಾರಾಮಾನಂದ ವರ್ಧಕಾ ಲಕ್ಷ್ಮಣ ಪ್ರತಾಪವಾನ್
ದೂತಕಾರ್ಯ ವಿಜಯೋತ್ಸುಕ ವಾನರ ಪತಿಸಂಪೂಜ್ಯ ಪ್ರದೀಪ್ತವಾನ್ ೬

ರಾಮಾಲಿಂಗಿತ ದಿವ್ಯಶರೀರಾ ರಾವಣದರ್ಪ ವಿನಾಶಕರಾ
ಭೀಮಪರಾಕ್ರಮ ಸಂಜೀವನಧರ ದಾನವತಿಮಿರ ವಿಭಾಕರ ೭

ಗಂಭೀರಶರಧಿ ವಿಲಂಘನಧೀರಾ ಮೈನಾಕಾರ್ಚಿತ ಪರಮೋದಾರಾ
ವಿಭೀಷಣ ಪ್ರಿಯ ಸಖಾಭಿವಂದಿತ ರಘುಪತಿಸೇವಾ ಧುರಂಧರಾ ೮

ತಾರಕ ಮಂತ್ರೋಪಾಸಕ ಹನುಮಾನ್ ಶೂರಭವಿಷ್ಯ ಚತುರ್ಮುಖಾ
ಧೀರೋದಾತ್ತ ಕೃಪಾಕರ ಮಾಂಗಿರಿರಂಗ ನೀಕೇತನ ಬಹಿರ್ಮುಖ ೯

೧೫೬

ಭಜರೇ ಧೀಮಂತಂ ಮಾನಸ ಪ

ಭಜ ಹನುಮಂತಂ ನಿರುಪಮ ಶಾಂತಂ ಮ
ಹಿಜಾನಾಯಕ ಸೇವಾಸಕ್ತಂ ಅ.ಪ

ಪವನ ಕುಮಾರಂ ವಾನರವೀರಂ
ತವ ಭಯಂಕರಂ ಅಕ್ಷ ಸಂಹಾರಂ
ರಾವಣಗರ್ವವಿಭಂಜನ ಶೂರ ಅ
ಭವ ಸಹೋದರ ಪ್ರಾಣ ದಾತಾರಂ ೧

ಸಕಲ ಮಂತ್ರ ತಂತ್ರಾಗಮ ನಿಪುಣಂ
ಸಕಲ ಕಲಾ ಸದ್ಗುಣ ಗಣ ಪೂರ್ಣಂ

ರಾಮಾಯಣ ಮಹಾಮಾಲಾಭರಣಂ
ಶ್ರೀ ಮರಕತಮಕುಟ ವಿರಾಜಿತಕರಂ ೨

ಪಾಪವಿದೂರಂ ವಜ್ರಶರೀರಂ
ಸೀತಾ ಮಾನಸಾನಂದ ಸಮೀರಂ
ತಾರಕ ಮಂತ್ರೋಪಾಸನ ಚತುರಂ
ಮಾಂಗಿರಿರಂಗ ಸೇವಾಪರಮಮರಂ ೩

೧೫೭

ಶ್ರೀ ಆಂಡಾಳ್ ಸ್ತುತಿಗಳು

ತವ ಚರಣಂ ಶರಣಂ ಅಂಡಾಳ್ ಗೋದಾ ಪ

ತವಶುಭಚರಣಂ ಭವಭಯತರಣಂ
ಭುವನಾಭರಣಂ ಪಾತಕಹರಣಂ ಅ.ಪ

ವೇದಾಂತಾಂಬರೆ ಮಾಧವಮಂದಿರೆ
ನಾದಸುಧಾಕರೆ ಸಕಲಸುಖಂಕರೆ ೧

ಕೃಷ್ಣಕಥಾಮೃತ ಸಾಗರಮಂದಿರೆ
ವಿಷ್ಣುಚಿತ್ತಸುತೆ ಕೀರ್ತನಚತುರೇ ೨

ಪೂಮಾಲಾಧರೆ ಪಾಮಾಲಾಕರೆ
ಶ್ರೀಮಾಂಗಿರಿವರ ಶರಣಸುಖಂಕರೆ ೩

೧೫೮

ಪಾಲಯಾಂಶು ಭೂಮಿಸುತೇ ಪುಷ್ಪಮಾಲಾ ಶೋಭಿತೇ ಪ

ನೀಲ ಮೇಘಶ್ಯಾಮ ಮಹಿತೇ ಶ್ರೀಪ್ರಬಂಧ ವಿಲಸಿತೇ ಅ.ಪ

ವಿಷ್ಣುಚಿತ್ತ ಪರಿಪೋಷಿತೇ ಕೃಷ್ಣ ಸುಧಾಮೃತ [ವಿಸ್ತ]ರತೇ
ಕೃಷ್ಣಭಕ್ತ ಸ್ತುತಿಭಾಜಿತೇ ವಿಷ್ಣುಲೋಕದಾತೆ ಮಾತೇ ೧

ಮಂಗಳಾಂಗಿ ಸುಗುಣಭರಿತೇ
ಇಂಗಿತಾರ್ಥದಾತೆ ಪ್ರೀತೆ
ರಂಗನಾಯಕೀ ಸಮೇತ ಮಾಂಗಿರೀಶ ದಯಿತೇ ಮಹಿತೇ ೨

೧೫೯

ವಿಷ್ಣುಚಿತ್ತ ಸುಕುಮಾರಿ
ಕೃಷ್ಣ ಕಥಾಂಬರ ಧಾರಿ ಪ

ಕೃಷ್ಣ ಸುಖಂಕರಿ ಕರುಣಾಲಹರಿ
ವಿಷ್ಣುಭಕ್ತ ಪಾತಕ ಪರಿಹಾರಿ ಅ.ಪ

[ಸೇವೆಗೆ ಕಟ್ಟಿದ ದೇವರ ಮಾಲೆಯಾ
ಕಾವೊಳೋ]ಪಾದಿ ಮುಡಿ[ದಿ]ತ್ತವಳೇ
ಭಾವೈಕ್ಯತೆಯೊಲು ಅರಂಗ ಮಣಿ ಪಾ
ದಾವನು ಚೆಂಗಳೆ ಸೇರಿದವಳೇ ೧

ತವ ಪಾದಾಂಬುಜವೇ ಗತಿಯು
ತವ ವಚನಾಮೃತವೇ ಮತಿಯು
ತವ ಸಂಸ್ಮರಣವೆ ಪರಮಸುಖ
[ತವ] ಮಾಂಗಿರಿರಂಗೇಶ ಸನ್ನಿಧಿಯೂ ೨

೧೬೦

ಶ್ರೀರಾಮಾನುಜ ಸ್ತುತಿಗಳು

ಉದಾರಗುಣ ಶಾರದಾಮನೋಹರ
ಸದಾನಂದ ರಾಮಾನುಜಂ ಪ

ಮದೀಯ ಗುರುವರ ಸದಾ ಶ್ರಿತಾಕರ
ತ್ರಿದಂಡಧರ ರಾಮಾನುಜಂ ಅ.ಪ

ವಿಭೂತಿಯುಗ ಸತ್‌ಪ್ರಭಾವಿರಾಜಿತ
ಸುಭೂಜವರ ರಾಮಾನುಜಂ
ಶುಭಪ್ರದಂ ಸಾರಭೂತ ವೈಷ್ಣವ
ವಿಭುಂ ಭಜೇ ರಾಮಾನುಜಂ ೧

ಪಾತಕನಾಶನ ಭೂತವಿಮೋಚನ
ಪತಿತಪಾಲ ರಾಮಾನುಜಂ
ಭೀತಿವಿದಾರಣ ಭವಭಯಹರಣ
ಕರುಣಾಮಯ ರಾಮಾನುಜಂ ೨

ನರೋತ್ತಮಂ ಪಾಂಚರಾತ್ರನಿಗಮಾ
ಧರಾಂಬುಧರ ರಾಮಾನುಜಂ
ಪರಾತ್ಪರ ಮಾಂಗಿರೀಶ ಪದ
ಚಂಚರೀಕ ಮುನಿ ರಾಮಾನುಜಂ ೩

೧೬೧

ಪ್ರಣಮಾಮಿ ಗುರುರಾಜ ಪಾದಾಬ್ಜಮನಿಶಂ
ಪೂರ್ಣಂ ಅಭಿಮಾನಂ ಶಿರಸಾ ಮನಸಾ ದಿಪ ಪ

ಅಣು ರೇಣು ತೃಣ ಕಾಷ್ಠ ಪರಿಪೂರ್ಣ ಕಾವ್ಯಂ
ಗುಣಭೂಷಣ ಪಾತಕಸಂಹರಣ ಪರಮಾರ್ಥ ಚರಿತ ಅ.ಪ

ನಯನೀತಿ ವಿನಯಾದಿ ಸುಗುಣಾಕರ ಮೂರ್ತೇ
ಭಯನಾಶಕ ಭವಬಂಧನಸಂಹಾರಕ ಕೀರ್ತೇ
ಜಯದಾತ ಜಗದೀಶ ಪವನಾತ್ಮ ಅವತರಣ
ಪ್ರಿಯ ಭಾಷಣ ಮಾಂಗಿರಿರಂಗೇಶ್ವರ ಸೇವಾ ಚಾರುಕೀರ್ತಿಯುತೇ ೧

೧೬೨

ಯತಿರಾಜಂ ಭಜರೇ ಮಾನಸ
ಪತಿತೋದ್ಧಾರಕ ಯದುಗಿರಿ ನಿಲಯ ಪ

ಶ್ರೀಮದ ದಾಶರಥೀನುತ ಚರಣಂ
ಯಾಮುನಾ ಮುನಿ ಸಂಭಾವಿತ ಕರುಣಂ
ಶ್ರೀಮದನಂತಂ ಕರುಣಾಭರಣಂ
ರಾಮಾಯಣ ಮೂಲತತ್ವ ವಿಸ್ತರಣಂ ೧

ಸಕಲವೇದ ಶಾಸ್ತ್ರಾಗಮ ನಿಪುಣಂ
ವಕುಳಾಭರಣ ಪಾದಾಂಬುಜ ಭರಣಂ
ಮುಕುಳಿತ ವೈಷ್ಣವ ತತ್ವೋದ್ಧರಣಂ
[ವಿಕಸಿತ ವಿಶಿಷ್ಟಾದ್ವೈತ ವಿಶೇಷಂ] ೨

ವ್ಯಾಸ ತತ್ವಸಾರಾಬ್ಧಿ ವಿಸ್ತರಣಂ
ವಾಸುದೇವಕೃತ ಗೀತೋದ್ಧರಣಂ
ವಾಸವನುತ ಮಾಂಗಿರಿಹರಿ ಚರಣಂ
ದಾಸದಾಸೀಜನ ಪಾತಕಹರಣಂ ೩

ಸರ್ವದೈವ ಸ್ತುತಿಗಳು

೧. ಶ್ರೀ ಗಣಪತಿ ಸ್ತುತಿಗಳು

೧೬೩

ಗಜಮುಖ ಗಣಪ ಪಾಹಿಮಾಂ ಪ

ತ್ರಿಜಗಾಧಿಪ ಸಂಪೂಜಿತ ಅಜವಂದಿತ ಏಕದಂತಂ ಅ.ಪ

ಗಿರಿಜಾಸುತ ಸುಖವರ್ಧನ । ಉರಗಾಧಿಪ ಕಟಿಬಂಧನ
ವರದಾ ಮೌಕ್ತಿಕ ರದನ [ವರಮಾಷಿಕವಾಹನಾ] ೧

ಗಂಗಾಧರ ಮನಮಂದಿರ ಇಂಗಿತೇಷ್ಟದಾತಾರ
ಮಂಗಳ ಪಾಶಾಂಕುಶಧರ ಮಾಂಗಿರೀಶ ಪ್ರಿಯಶಂಕರ ೨

೧೬೪

ಗಜಾನನಂ ಲೋಕನುತಂ । ಸ್ಮರಾಮಿ ಗೌರಿಕೃತ ಸುತಂ
ಅಜಾಮರೇಶ ನಿಕರನುತಂ । ಸನ್ನುತ ಭಕ್ತಾಶಯದಂ ಪ

ಸನಕಾದಿ ಸ್ತುತಂ ಹಿತಂ । ಶುಭಪ್ರದರತಂ ಮತಂ ಅ.ಪ

ಕಲ್ಪಭೂಜಂ ಸಾನುಜಂ । ಪಾಶಧರ ಸಾಮಜಂ
ಪ್ರಸನ್ನ ಚತುರ್ಭುಜಂ । ಕಾರ್ತಿಕೇಯ ಮಹಾಗ್ರಜಂ
ಪರಶಿವ ಕಾಮಿತ ತನುಜಂ । ಫಣಿಬಂಧಯುತಂ
ಸುಭುಜಂ ಪ್ರಮಂಧ ಸೇವ್ಯ ವನಜಂ ।
ಮಹಾಗಣೇಶ ಪಿತರಜಂ ೧

೧೬೫

ಗಿರಿತನುಜಾ ತನಯಂ ವಂದೇತಂ ಪ

ಹರಿಹರ ವಿನುತಂ ಸುರಪತಿನಮಿತಂ
ಕರಧೃತ ಪಾಶಾಂಕುಶ ದಯಭರಿತಂ ಅ.ಪ

ಸಾಮಜವದನಂ ಮಣಿಮಯರದನಂ
ಹೇಮಾಂಬರಧರ ಕರುಣಾಸದನಂ
ಕಾಮಿತ ಫಲದಂ ಸರಸಿಜನಯನಂ
ಶ್ರೀಮಾಂಗಿರಿವರದಾ ಭಾವಿತಮದನಂ ೧

೧೬೬

ಪಾಲಿಸುಗಣನಾಯಕಾ ವಿನಾಯಕ ಪ

ಶೂಲಪಾಶಾಂಕುಶಧೃತ ವರದಾಯಕ ಅ.ಪ

ಲಂಬೋದರಾಂಕಿತ ಜಂಭಾರಿವಂದಿತ
ಕುಂಭೋದ್ಭವಾನತ ಅಂಬಾಸುತ
ಅಂಭೋಜ ಸಖಿನುತ ಗಂಭೀರ ಗುಣಯುತ
ಜಂಬೂ ಕಪಿತ್ಥಫಲ ಸಾರ ಸಂತೋಷಿತ ೧

ಆತಂಕಪರಿಹಾರ ಮಾತಂಗಮುಖವೀರ
ಶೀತಾಂಶುಶೃಂಗಾರ ಶ್ವೇತಾಂಬರ
ಭೂತಾಳಿಪರಿವಾರ ಖ್ಯಾತಾವಿಘ್ನೇಶ್ವರ
ದಾತಾರ ಮಾಂಗಿರಿನಾಥಾ ಕೃಪಾಧರ ೨

೧೬೭

ವಿವಿಧ ದೈವ ಸ್ತುತಿ

ಜಲರುಹ ಮೋಹನ ವಿಶಾಲ ನೇತ್ರ ಪ

ಗಾನಾನಂದ ಲೋಲ ಬಂಧುರ ಗಾನಾನಂದ ಲೋಲಾ
ಗೋಪಾಲ ವನಮಾಲ ಗೋಕುಲ ಗೋಪಾಲ ವನಮಾಲ ಅ.ಪ

ದಶರಥ ನಂದನ ವಿಶಾಲಹೃದಯ
ಸತ್ಯಧರ್ಮಶೀಲ ರಾಘವ ಸತ್ಯಧರ್ಮಶೀಲ
ಖಲಾಳಿಕುಲಶೂಲ ರಾಘವ ಖಲಾಳಿಕುಲಶೂಲಾ ೧

ಪುರಹರ ಶಂಕರ ಕೃಪಾ ಸಮುದ್ರ
ನಾಟ್ಯನಾದ ಚತುರ ಶ್ರೀಕರ ನಾಟ್ಯನಾದ ಚತುರ
ಪಿನಾಕ ಶಶಿ ಶೇಖರ ಶಂಕರ ಪಿನಾಕ ಶಶಿಶೇಖರ ೨

[ಶ್ರೀರಾಮಪ್ರಿಯ ಭಕ್ತಾಗ್ರೇಸರ]
ಪವನಾತ್ಮಜ ಶೂರ ಹನುಮಾನ್ ಪವನಾತ್ಮಜ ಶೂರ
ಮರಕತ ಮಣಿಹಾರ ಮಾರುತಿ ಮರಕತ ಮಣಿಹಾರ ೩

ಶರಣ ಜನಾನುತ ಗಿರೀಶ ಸದೃಶ
ಸತ್ಯಸಾಯಿಬಾಬ ಪಾಲಯ ಸತ್ಯಸಾಯಿಬಾಬ
ಪರಮದಯಾಹೃದಯಾ ಸವಿನಯ ಪರಮದಯಾಹೃದಯ ೪

೧೬೮

ನಾಟ್ಯಕಲಾವಿದ ಶಿವನೋ ಕೇಶವನೋ
ನಾಟ್ಯಕೆ ನಲಿವನಾ ಭವನೋ ಮಾಧವನೋ ಪ

ನಾಟ್ಯಾಪ್ಸರಗಣವೇಷ್ಟಿತನಿವನು
ನ್ಯಾಟ್ಯದಿಸಕಲರಾಭೀಷ್ಟದನವನು ಅ.ಪ

ಝಣ ಝಣ ಝಣರವ ರಣಿಪನಿವನು
ಕಿಣಿ ಕಿಣಿ ಕಿಣಿರವ ಚೆಲ್ಲುವನವನು
ಗಣ ಗಣ ನಾದದಿ ವರ್ತಿಪನಿವನು
ಮಣಿಗಣನಾದದಿ ನರ್ತಿಪನವನು ೧

ಮುರಳಿಯಗಾನವ ಪಾಡುವನಿವನು
ನಿರುಪಮ ದಿವಿಜಾ ನರ್ತಕನವನು
ಭರತನಾಟ್ಯ ಕಲಾ ಕೋವಿದನಿವನು
[ವರ ನಾಟ್ಯ ನಟನಾ ನಿಪುಣನವನು] ೨

ಭೇರಿನಗಾರೀ ತುತ್ತೂರಿ ಡಮರುಗ
ಕರಿಮುಖ ಷಣ್ಮುಖಯುತ ಭಸಿತಾಂಗ
ನಾರದ ತುಂಬುರ ವೀಣೆ ಮೃದಂಗ
ಸಾರಗಾನಯುತ ಮಾಂಗಿರಿರಂಗ ೩

೧೬೯

ಕಾವೇರಿ ಕನ್ಯಾರ್ಚಿತ ಸುಚರಿತ
ದಿವಾಕರಾನತ ಸುರೇಶ ವಿನಮಿತ ಪ

ಭವಾಬ್ಧಿ ವಿರಹಿತ ಸಮೀರಸುತನುತ
ಶಿವಾ ನೃಹರಿ ಮಾಧವಾ ಕೃಪಾಯುತ ಅ.ಪ

ರಮೇಶ ಧರಣಿಪ ಕುಮಾರ ಶಿರಧರ
ಸುಮಾನ ವಿರಹಿತ ಪರಾತ್ಪರಾ
ಶಮಾ ದಮಯು ತಕ್ಷಮಾ ಸುಧಾಕರ
ನಮಾಮಿಶಂಕರ ವಿಮಾನಮಂದಿರ ೧

೧೭೦

(೩) ಶಿವಸ್ತುತಿಗಳು

ನಮೋ ಗಿರೀಶ್ವರ ನಮೋ ಸುರೇಶ್ವರ
ನಮೋ ಧರೇಶ್ವರ ಗಂಗಾಧರಾ ಪ

ರಮಾರಮಣ ಹರ ಕುಮಾರ ಪಿತಹರ
ನಮಾಮಿ ಶಂಕರ ಗಂಗಾಧರಾ ಅ.ಪ

ಬಾಲಾರ್ಕ ಸುರುಚಿರ ಬಾಲೇಂದುಶೇಖರ
ಬಾಲಾಂಬಿಕಾ ವರಗಂಗಾಧರಾ ೧

ಮಹಾಜಟಾಧರ ಮಹಾನಟೇಶ್ವರ
ಮಹಾ ಮಹೇಶ್ವರ ಗಂಗಾಧರ ೨

ಮಹಾ ಮಹಿಮರ ಮಹಾಚತುರ ಹರ
ಮಹಾ ಮುನೀಶ್ವರ ಗಂಗಾಧರ ೩

ಪರೇಶ ನಿರುಪಮ ಪರಾಕ್ರಮಾ ಹಿಮ
ಗಿರೀಂದ್ರ ಧಾಮಾ ಗಂಗಾಧರ ೪

ಸುರಾಸುರೋತ್ತಮ ಕರಾರ್ಚಿತಾ ಮಾಂ
ಗಿರೀಶ ನಾಮಾ ಗಂಗಾಧರಾ ೫

೧೭೧

ಪರಮೇಶ್ವರಾ ಕರುಣಾಕರಾ
ಗಿರಿಜಾಪ್ರಿಯ ಸೋಮಶೇಖರಾ ಪ

ಪರಮ ವೇದ ಸಾರ ಶರನಿಧಿ ಗಂಭೀರ
ಸ್ಮರಹರಾ ಉದಾರ, ಪಾಹಿಶಂಕರ ಅ.ಪ

ಕಮಲಾಕ್ಷ ಮಿತ್ರ ಕಮನೀಯಗಾತ್ರ
ಅಮರಾರಿ ವೇತ್ರ ವಿಮಲಾ ತ್ರೀನೇತ್ರಾ
ರಮಣೀಯ ಚಾರಿತ್ರ ಹಿಮಶೈಲಜಾಪಾತ್ರ
ಅಮರೇಂದ್ರನುತ ಗೋತ್ರ ಶರಣಾತಪತ್ರ ೧

ಉರಗ ವಿಭೂಷಣ ಪರಿಜನ ತೋಷಣ
ಸುರನದಿ ರಮಣಾ ಭವಭಯ ಭೀಷಣ
ದುರಿತ ನಿವಾರಣ ಪರಮ ಕೃಪಾಗುಣ
ಪರಶಿವ ಮಾಂಗಿರಿಶೃಂಗಾಭರಣಾ ೨

೧೭೨

ಪರಮೇಶ್ವರಾ ಸೋಮಶೇಖರಾ ಪ

ಗಿರಿಜಾವರಾ ಕರುಣಾಕರಾ ಅ.ಪ

ಆದಿಮೂಲಾ ದೇವಾದಿದೇವಾ ಶಿವ
ನಾದರೂಪ ಜೀವಾದಿಜೀವ ಶಿವ
ವೇದವಿದಿತ ವೇದಾಂತರೂಪ ಶಿವ
ವಾದವಾಕ್ಯ ಮಹಾಹ್ಲಾದ ವೈಭವಾ ೧

ಅಂಗಜಾರಿ ಚರ್ಮಾಂಬರಧಾರಿ
ರಂಗನಾಥ ಮಾಂಗಿರಿ ಸಂಚಾರಿ
ಮಂಗಳಾಂಗ ಪಾತಕ ಪರಿಹಾರಿ
ಲಿಂಗರೂಪ ಶುಭಕಾರಕ ಶೌರಿ ೨

೧೭೩

ಪರೇಶ ಸರ್ವೇಶ ಗಂಗಾಧರಾ
ಗಿರೀಶ ಗೌರೀಶ ಕೃಪಾಕರಾ ಪ

ಸುರೇಶ ಸುಖಕರ ಬಾಲೇಂದುಧರ ಹರ
ಧರೇಶ ಶುಭಕರ ಭವಾಬ್ಧಿ ಪರಿಹರ ಅ.ಪ

ಉಮಾಮಹೇಶ್ವರ ಕುಮಾರಪಿತ ಹರ
ನಮಾಮಿ ಶಂಕರ ಪರಾತ್ಪರಾ ೧

ಪಿನಾಕಧರಕರ ಪುರಾರಿ ಸ್ಮರಹರ
ತ್ರಿನೇತ್ರ ಹರ ಮಾಂಗಿರೀಶ ಸಹಚರ ೨

೧೭೪

ಪಾಲಿಸೆನ್ನ ಫಾಲಲೋಚನಾ ನಂದೀಶವಾಹನಾ ಪ

ಬಾಲಸೂರ್ಯ ಸದೃಶ ವದನ ಕಾಲಕಾಲ ಮೌನಿ ಸದನ ಅ.ಪ

ನಾಗಭೂಷಣ ದನುಜಹರಣ ದಿವಿಜಶರಣ ಭೂತಗಣ
ಭೋಗಿಶಯನ ಸಿರಿಯ ರಮಣ ವಿಮಲಚರಣ ಸೇವೆಯಿತ್ತು ೧

ಮದನವೈರಿ ದುರಿತಹಾರಿ ಶಶಿಜಟಾಜೂಟಧಾರಿ ಮ
ಮ ದೇವ ಮಾಂಗಿರಿರಂಗ ಚರಣಯುಗವ ತೋರಿ ೨

೧೭೫

ಮಾಂ ಪಾಲಯಾಶು ಗಂಗಾಧರ
ಚಂದ್ರಶೇಖರ ಗೌರೀವರ ಪ

ನೀಲಾಂಬರ ಕೇಶಪಾಶಹರ
ಶಿವಶಂಕರ ಕರುಣಾಕರ ಅ.ಪ

ಚರ್ಮಾಂಬರ ಪರಮೇಶ್ವರಾ
ದಾನವೇಶ್ವರಕುಲಕುಠಾರ ಧೀರ
ದಿವಿಜೋಪಕಾರ ಶರಚಾಪಧರ
ಮನಸಿಜಸಂಹಾರ ಮಾಂಗಿರೀ ವಿಹಾರಾ ೧

೧೭೬

ರಜತಗಿರೀಶ್ವರ ಮಹಾನುಭಾವ
ಗಜಚರ್ಮಾಂಬರ ನಮೋ ನಮೋ ಪ

ವಿಜಯರಾಮಾರ್ಚಿತ ಪದಕಮಲ
ಅಜಸುತ ಸೇವಿತ ನಮೋ ನಮೋ ಅ.ಪ

ವಾರಣಾಸಿ ಸುಕ್ಷೇತ್ರ ನಿವಾಸ
ಪರಮೋಲ್ಲಾಸ ನಮೋ ನಮೋ
ಭೂರಿ ವೈಭವಾನಂದ ವಿಲಾಸ
ರವಿಶತಭಾಸಾ ನಮೋ ನಮೋ ೧

ನಾದಾಲಂಕೃತ ವರದಾತಾ ಶ್ರೀ
ಗೌರಿಯುತ ನಮೋ ನಮೋ
ಭಾಗೀರಥೀಪ್ರಿಯ ಲೋಕನುತ
ದೇವೇಂದ್ರಾತ ನಮೋ ನಮೋ ೨

ಮಂಗಳದಾಯಕ ಶಶಿಶಿಖರ
ಸಂಗವಿದೂರಾ ನಮೋ ನಮೋ
ಮಾಂಗಿರಿ ಶೃಂಗವಿರಾಜಿತಶಂಕರ
ಶರಣಶುಭಂಕರ ನಮೋ ನಮೋ ೩

೧೭೭

ಶಿವ ಶಿವ ಶಂಕರ ಮಹಾದೇವ
ಭವ ಭಯಹರ ನಮೋ ಸದಾಶಿವ ಪ

ಕಮನೀಯಾನನ ಸುಮನಸಪಾಲನ
ಉಮೆಯ ರಮಣ ಘನಸುಮಶರದಹನ
ವಿಮಲವಿಲೋಚನ ಶಮಾ ದಮಾ ಭವನ
ಪ್ರಮಥಗಣಾನನ ಪಾವನಸದನಾ ೧

[ಬಾಲ ಗಣಪಪಿತ ಸರ್ವೇಶ್ವರಾ]
ನೀಲಕಂಠ ಸೋಮಶೇಖರಾ
ಶೂಲಪಾಶಕರ ಫಾಲಾಂಬಕಹರ
ಕಾಲಕಾಲ ಕರುಣಾಲವಾಲ ಹರ ೨

ಸಕಲ ಸುಗುಣಗಣ ಪಾತಕಹರಣ
ಸಕಲಲೋಕ ಸನ್ನುತ ಪಾವನಚರಣ
ಸಕಲ ದನುಜಗಣ ಜೀವನಹರಣ
ಸಕಲಾನತ ಮಾಂಗಿರಿಪತಿ ಕರುಣ ೩

೧೭೮

ಸಾಂಬಶಿವಾ ಭಕ್ತಿಮಾರ್ಗದಿ ನಡೆಸೋ
ಅಂಬುಜಾಕ್ಷನ ದಿವ್ಯನಾಮವ ನುಡಿಸೋ ಪ

ನಂಬಿದ ಭಕ್ತನ ಕೊರತೆಯ ಬಿಡಿಸೋ
ಶಂಬರಾರಿಯ ಪಿತನ ಚರಣವ ಹಿಡಿಸೋ ಅ.ಪ

ಮಾನವರಿಷ್ಟವ ಸಲ್ಲಿಸುವೆಯಂತೆ
ದೀನರೊಳನುಕಂಪ ನಿನಗುಂಟಂತೆ
ಜ್ಞಾನ ವೈರಾಗ್ಯ ನಿಧಿ ನೀನಂತೆ
ದೀನಗೊಲಿದು ವರವೀಯುವೆಯಂತೆ ೧

ಕಾಮಿತವೆನ್ನದು ಒಂದೇ ಅಯ್ಯ
ಆ ಮಾಂಗಿರಿಪತಿ ಕರುಣೆ ಅದಯ್ಯ
ರಾಮತಾರಕನಾಮ ಎನಗಿರಲಯ್ಯ
ನೀ ಮನಮಾಡೆ ಕೃತಾರ್ಥ ನಾನಯ್ಯ ೨

೧೭೯

ಶ್ರೀ ಪಾರ್ವತಿ ಸ್ತುತಿಗಳು

ಅಂಬಾ ಮನೋನಾಯಕಾ
ಶಂಭೋಮಹಾನಂದ ಸಂದಾಯಕ ಪ

ಕುಂಭೋದ್ಭವಾನತ ಜಂಭಾರಿವಂದಿತ
ಅಂಭೋಜ ಭವನುತ ತ್ರಿಲೋಚನಾ ಜಗದಂಬಾ ಅ.ಪ

ಈಶ ಪರೇಶ ಗಿರೀಶ ಮಹೇಶಾ
ಕ್ಲೇಶವಿನಾಶಾ ದಿನೇಶಪ್ರಕಾಶಾ

ಪಾಶ ತ್ರಿಶೂಲಾಲಂಕಾರ ಕಲುಶವಿನಾಶಾ
ನಮಿಪೆ ಮಾಂಗಿರೀಶ ಶಿವ ಜಗದಂಬಾ ೧

೧೮೦

ಓಂಕಾರ ರೂಪಿಣಿ ಭದ್ರಾಣಿ ಕಲ್ಯಾಣಿ
ಪಂಕೇಜದಳಲೋಚನೀ ಅಂಬಾ ಪ

ಶಂಕರ ಪ್ರಿಯರಾಣಿ ಗೀರ್ವಾಣಿ ರುದ್ರಾಣಿ । ಸ
ರ್ವ ಮಂಗಳವಾಣಿ । ಕರುಣಿ ಶುಶ್ರೋಣಿ ಅ.ಪ

ಹೈಮವತೀ ಮಾತೆ । ಹಿಮಗಿರಿ ತನುಜಾತೆ
ಭಾಮೆ ಸ್ವಯಂಜಾತೆ । ಸುರಮೌನಿಗೀತೆ
ಪ್ರೇಮ ರಸಾನ್ವಿತೇ । ರಾಮಾಭಿನಂದಯುತೆ
ಶ್ರೀಮಾಂಗಿರೀಶ । ರಂಗಸಹಜಾತೆ ೧

೧೮೧

ದೇವಿ ವಿಶಾಲಾಕ್ಷಿ ತಾಯೆ ಪಾವನೆ ಜಲಜಾಕ್ಷಿ ಕಾಯೆ ಪ

ಪಾವಕ ನೇತ್ರ ಪ್ರಿಯೆ ಕಾಮಾಕ್ಷಿ ಅ.ಪ

ಅನ್ನಪೂರ್ಣೇಶ್ವರಿ ಶಿವಕಾಮೇಶ್ವರಿ
ಸನ್ನುತ ಶುಭಕರಿ ಪನ್ನಗ ಕಬರಿ
ರನ್ನೆ ತಳೋದರಿ ಕರುಣಾಲಹರೀ
ಮನ್ನಿಸು ಮಾಂಗಿರಿರಂಗ ಸಹೋದರಿ ೧

೧೮೨

ಪಾಲಯ ಗಂಗಾಧರಪ್ರಿಯ ರಮಣಿ
ಬಾಲಾಂಬಿಕೆ ಫಣಿವೇಣಿ ಕಲ್ಯಾಣಿ ಪ

ಶ್ರೀಲಲಿತೆ ವರದಾಯಕ ಮಹಿತೆ
ಬಾಲಗೋಪಾಲ ಸೋದರಿ ಶುಭಚರಿತೆ ೧

ದೇವಿ ಭವಾನಿ ಶಿವೆ ಕಾತ್ಯಾಯಿನಿ
ಪಾವನಿ ಭಾಮಿನಿ ತ್ರಿಜಗನ್ಮೋಹಿನಿ ೨

ಮಂಗಳದಾಯಕಿ ಶಂಕರನಾಯಕಿ
ಮಾಂಗಿರಿರಂಗ ಕೃಪಾಂಬರದಾಯಕಿ ೩

೧೮೩

ಪಾಲಿಸು ಪರಮೇಶ್ವರಿ ಅಂಬಾ ಪ

ಶ್ರೀಲಲಿತೇ ಗೌರಿ ಶೌರಿಸಹೋದರಿ
ಫಾಲಾಕ್ಷಸಹಚರಿ ಬಾಲೇಂದುಶೇಖರಿ ಅ.ಪ

ಭ್ರಮರಾಂಬೆ ದುರಿತಾರಿ ಹಿಮವಂತ ಸುಕುಮಾರಿ
ಹೇಮಾಂಬರಧಾರಿ ಜಗದೀಶ್ವರೀ
ಸೋಮಾರ್ಕ ಜಂಭಾರಿ ವಿನುತೆ ಮಾಹೇಶ್ವರಿ
ಶ್ರೀಮಾಂಗಿರೀನಾಥ ಪ್ರೇಮಾಂಬುಲಹರೀ ೧

೧೮೪

ಶಾಂಭವಿ ಸುಖದಾಯಿನಿ
ಅಂಬಾ ಮಹೇಶ್ವರ ಮನಮೋಹಿನಿ ಪ

ಉಮಾಮಹೇಶ್ವರಿ ಭವಾನಿಗೌರೀ ।
ರಮಾವಿನುತ ಹರಿಸಹೋದರೀ
ಶಮಾ ಶುಭಂಕರಿ ಶಾಕಾಂಬರೀ
ನಮಾಮಿ ಶಂಕರೀ ಲೋಕೇಶ್ವರೀ ೧

ಮಾರವೈರಿರಾಣಿ ನೀರಜಾತಪಾಣಿ
ಶಾರದೇ ಶರ್ವಾಣಿ ಗೌರಿ ಕಲ್ಯಾಣಿ
ಸಾರ ಮಧುರವಾಣಿ ನಾರಿ ಭುಜಗವೇಣಿ
ಘೋರದೈತ್ಯ ಸಂಹಾರಿಣಿ ದೇವಿ ರುದ್ರಾಣಿ ೨

ಈಶ ಮನೋಹರೆ ಪಾಶಾಂಕುಶಧರೇ
ಶ್ರೀಶಿತಿಕಂಠ ವಿಲಾಸ ವಿಹಾರೆ
ಕ್ಲೇಶನಾಶಕರೇ ಭಾಸುರ ಮುಕುರೇ
ಶ್ರೀಶ ಮಾಂಗಿರಿವಾಸ ತೋಷಣಚತುರೆ ೩

೧೮೫

ಶಿವ ಮೋಹಿನಿ ವನಮಾಲಿನಿ ಲಲನಾಮಣೀ ಜನನೀ ಪ

ಭವನಾಶಿನಿ ರವಿರಂಜಿನಿ ಕಾತ್ಯಾಯನೀ
ಜಯತು ಜಯತು ಜಯತು ಅ.ಪ

ಅಂಬಾ ಶಶಿಬಿಂಬಾ ಜಗದಂಬಾ ಮೃದುಳಾಂಬಾ
ಲಂಬೋನ್ನತ ಕುಂಭಸ್ಥಲೇ ಶುಂಭಾಸುರ ಡಿಂಬಾ ೧

ಸ್ವರ್ಣಾಂಬಿಕೆ ಸ್ವರ್ಣೇಶ್ವರಿ ಸ್ವರ್ಣೋಪಮವದನೆ
ಸ್ವರ್ಣಗೌರಿ ಸ್ವರ್ಣಶಿವೆ ಸ್ವರ್ಣಪ್ರಿಯೆ ದಯಾಕರೆ ೨

ಗಂಗಾಧರ ಅಂಗಸ್ಥಿತೇ ಗಂಗಾರ್ಚಿತೆ ಮಹಿತೇ
ಮಂಗಳಕರ ಮಾಂಗಿರೀಶ ರಂಗಾನುಜೆ ಲಲಿತೇ ೩

೧೮೬

ಶಾರದಾಸ್ತುತಿ

ದಯಮಾಡು ದಯಮಾಡು ಶಾರದಾಂಬೇ
ನಯ ನೀತಿ ಕಲೆ ಭಾಗ್ಯ ಘನ ಕುಟುಂಬೇ ಪ

ಜಯ ವಿಜಯ ಯಶಭೋಗ ಶ್ರೀಕರಾಂಬೇ
ಭಯ ಭೀತಿ ಪರಿಹಾರೆ ವರಕದಂಬೆ ಅ.ಪ

ಸರಸಿಜಾಸನರಾಣಿ ವೇಣಿ ಫಣಿ ಕಲ್ಯಾಣಿ
ಸರಸಗುಣಿ ಗೀರ್ವಾಣಿ ವೀಣಾಪಾಣಿ ೧

ಸಾರತರ ಶುಕವಾಣಿ ನೀರೇಜ ಮೃದುಪಾಣಿ
ಭೂರಿದಯೆ ಸುಶ್ರೋಣಿ ದೇವಿ ಶುಭವಾಣಿ ೨

ಸಕಲ ಲೋಕಖ್ಯಾತೆ ಸಕಲ ಜಗಸನ್ನುತೇ
ಸಕಲ ಜಗವಂದಿತೇ ಸಕಲ ಶುಭಗೀತೇ
ಸಕಲ ವೈಭವದಾತೇ ಸಕಲ ಸದ್ಗುಣ ಲಸಿತೇ
ಸಕಲ ಸನ್ನುತೇ ಮಾಂಗಿರೀಶ ವಿನುತೇ ೩

೧೮೭

ಸಾರಸಭವ ಮೋಹಿತೆ ದೇವಿ ಜಗನ್ಮಾತೆ ಪ

ಚಾರುಕೀರ್ತಿ ಪರಿಶೋಭಿತೆ ಲಾವಣ್ಯಾಂಬರಭೂಷಿತೆ ಅ.ಪ

ಸುರನುತೆ ಶಾರದೆ ಬುಧಗಣಸೇವಿತೆ ಮಯೂರರಂಜಿತೆ
ವರ ಮಾಂಗಿರಿವರ ಭಾವಿತೆ ಪಾಹಿಮಾಂ ಲೋಕವಂದಿತೆ ೧

೧೮೮

ನಿನ್ನ ನಂಬಿದೆ ಓ ಶಾರದೇ ಪ

ಸನ್ನುತಾಂಗಿ ಇನ್ನೂ ಕರುಣ ಬಾರದೆ ಅ.ಪ

ಸಕಲಕಳಾಧರೆ ಸಕಲಕಲಾಧರೆ
ವಿಕಸಿತ ಸುಮಹಾರೆ ಜ್ಞಾನಸಮೀರೆ

ಪ್ರಕಟಿತ ಮಧುರ ಜಪಮಾಲಾಕರೆ
ಶಿಖಿ ವೀಣಾಧರೆ ಮೃದುತನುರುಚಿರೆ ೧

ಧಾತಾ ಮನೋನ್ಮಣಿ ಧ್ವಾಂತ ಸಂಹಾರಿಣಿ
ಪಾತಕವಾರಿಣಿ ಮಾತೆ ಕಲ್ಯಾಣಿ
ಭೂತಲ ಕಣ್ಮಣಿ ರಾಗತರಂಗಿಣಿ
ಖ್ಯಾತಚರಿತ ಮಾಂಗಿರಿವರತೋಷಿಣಿ ೨

೧೮೯

ತುಳಸೀ ಸ್ತುತಿ

ಶ್ರೀ ತುಳಸೀ ಮಾಧವ ಹೃದಯೆ ಪ

ಸೀತಕರಾರ್ಚಿತೆ ಪಾವನನಿಲಯೆ
ಪೀತಾಂಬರಧರ ಶ್ರೀಹರಿಜಾಯೆ ಅ.ಪ

ಚಂದಿರವದನೆ ಮರಕತರದನೆ
[ಸುಂದರ] ಮಣಿಮಯಸದನೆ ಪರಮಪಾವನೆ
ನಂದ ತನುಜ ಮನಮೋಹನ ಲಲನೆ
ಇಂದೀವರದಳ ಕೋಮಲನಯನೆ ೧

ಕಾಮಿತದಾತೆ ಸುರಗುರುನಮಿತೆ
ಪ್ರೇಮರಸಾನ್ವಿತೆ ಗುಣಭರಿತೇ
ಭೂಮಿದೇವಿಸುತೆ ಬೃಂದಾವನ ಲಸಿತೇ
ಶ್ರೀಮಾಂಗಿರಿವರ ರಂಗಮಹಿತೇ ೨

೧೯೦

ಶ್ರೀ ಸುಬ್ರಹ್ಮಣ್ಯಸ್ತುತಿ

ಮಾಮವ ಸುಬ್ರಹ್ಮಣ್ಯ ಹೈಮವತಿಸುತ ಘನಕಾರುಣ್ಯ ಪ

ಕಾಮಿತದಾಯಕ ಭೀಮಪರಾಕ್ರಮ
ಸಾಮಗಾನಪ್ರಿಯ ಕೋಮಲಕಾಯ ಅ.ಪ

ವೇಲಾಯುಧ ಸಂಭ್ರಾಜಿತ ವರದಾ
ನೀಲಕಂಠವಾಹನ ಚಿರಸುಖದಾ
ಶ್ರೀಲಲಿತಾ ಮನಾಕರ್ಷಿತ ನಾದ
[ಬಾಲ]ಕೇರಳಪುರವಾಸ ವಿನೋದ ೧

ಭವಭಯನಾಶನ ಪವನ ಷಡಾನನ
ರವಿಸಮಲೋಚನ ನವಮಣಿಸದನಾ
ಭುವನಮನೋಹರ ಸಾಸಿರವದನಾ
ಶಿವಪ್ರಿಯನಂದನ ತಾರಕದಮನಾ ೨

ಸಂತನಾನತ ಶಾಂತವಿನೀತ
ಸಂತತ ಮಾತಾ ಲಲಿತಾ ಸಹಿತಾ
ಚಿಂತಿತಾರ್ಥದಾತಾರಾ ಕೃಪಾಯುತ
ಅಂತರಾತ್ಮ ಮಾಂಗಿರಿಪತಿ ಶೋಭಿತ ೩

೧೯೧

ಶಂಕರನಂದನ ನಮೋ ನಮೋ
ಕಿಂಕರಪಾಲಕ ನಮೋ ನಮೋ ಪ

ಪಂಕಜಭವನುತ ನಮೋ ನಮೋ
ಸಂಕಟ ಪರಿಹರ ನಮೋ ನಮೋ ಅ.ಪ

ಅಂಕುಶ ಪಾಶಾಯುಧ ಶೋಭಿತಕರ
ಓಂಕಾರಪ್ರಿಯ ದಿವ್ಯಶರೀರಾ
ಶಂಕರ ಸುಖಕರ ಭವಪರಿಹಾರ
ಅಂಕನಾಥ ಸರ್ವೇಶ ಮನೋಹರ ೧

ಗಿರಿಜಾನಂದ ಕುಮಾರ ಶರಣಾಗತ ಪರಿವಾರ
ವರಕೈಲಾಸ ವಿಹಾರ । ಸುರುಚಿರ ವಜ್ರಶರೀರಾ
ಶರವಣಭವ ಭುಜಗೇಶ । ಕರುಣಾಕರ ಜಗದೀಶ
ಹರಿಪರ್ಯಂಕ ಪರೇಶ ಮುದಗಾಂಕಿತ ಧೃತಕೋಶ ೨

ಸಂತನಾಪ್ರಿಯಧಾಮ ಶಾಂತರೂಪ ಗುಹನಾಮ
ಚಿಂತಾ ಜಲನಿಧಿ ಭೀಮ । ಸಂತ ಶರಣಜನ ಪ್ರೇಮ
ಚಿಂತಿತಾರ್ಥದಾಯಕ ನಿಸ್ಸೀಮ
ಅಂತರ ಭಯಹರ ಜಗದಭಿರಾಮ
ಭ್ರಾಂತಿವಿನಾಶಕ ಅನಂತನಾಮ
ಸಂತಸದಾಯಕ ಮಾಂಗಿರಿಧಾಮ ೩

೧೯೨

ಶ್ರೀ ರಾಘವೇಂದ್ರಸ್ತುತಿಗಳು

ಏಕಯ್ಯ ಎನ್ನ ಮರೆತಿರುವೆ ಓ ರಾಘವೇಂದ್ರ ಪ

ಯಾಕೀ ಪ್ರಕೋಪ ಇನ್ನೆಗಮಾಂ ಗೈದುದೇನು ಅ.ಪ

ನೀನೆ ಶ್ರೀವೆಂಕಟಾರ್ಯಗೊಲಿದೆ ಪತಿತನ್ನ ಪೊರೆದೆ
ದೀನಪಾಲಕ ಜ್ಞಾನಪರಿಪೂರ್ಣ ಮಾಂಗಿರೀಶ ಕೃಪಾರ್ಣ ೧

೧೯೩

ರಾಘವೇಂದ್ರ ಜಯತು ಗುರುವರಗೌತಮ ಗೋತ್ರಜ ಪ

ರಾಗರಹಿತಾಂತರಂಗ ಭಕ್ತಾವಳಿ ಸಂಗ ಶೃಂಗ ಅ.ಪ

ಗಂಭೀರ ಗುಣಾಭರಣ ಕರುಣಾರುಣ ತೇಜಸಾ
ಅಂಬಾಸುತ ಪರಿಪೂಜಿತ ಪಾದವ ತೋರ್ರೈ ವಂದಿಪೆ ೧

ನಿರುತನಿನ್ನ ಪಾದಪದ್ಮವ ನಮಿಸುವಂಥ ಮನವ ಕೊಡೈ
ಪರಮವೈದಿಕನ ಅರಿಯುವ ಶಕ್ತಿಯ ನೀಡು ರಾಘವೇಂದ್ರ ೨

ತರಳ ಸರಳ ಮೃದುವಚನಪೂರಣ ಸಾಧು ಪೂರ್ಣಸದನ
ಶರಣಸುಜನ ವಾಂಛಿತಾರ್ಥದಾತ ಮಾಂಗಿರೀಶ ಪ್ರೀತ ೩

೧೯೪

ಗುರುಪಾದವೇ ಗತೀ ಮತೀ
[ವರ]ಭಕ್ತಿ ಮಾರ್ಗಮೊಳ್ಳಿತೆಲೈ ಮನುಜ ಪ

ಗುರುರಾಜ ಶ್ರೀ ರಾಘವೇಂದ್ರನಾ
ಸ್ಮರಣಾಮೃತಂ ಓರಿದಪ್ಪುದೈ ಅ.ಪ

ದ್ವೈತ ತತ್ವ ಸಾರಾಂಬುಧಿ ಚಂದ್ರಮಂ
ಶ್ವೇತರೋಗ ಭಾವ ಪರಿಚಂದನಂ
ಭೂತ ಪ್ರೇತ ಭೇತಾಳ ಭಂಜನಂ
ಪ್ರೀತ ಮಾಂಗಿರೀಶ ನಿತ್ಯಸೇವನಂ ೧

೧೯೫

ಗುರುವರಾ ಪರರ ಕಾಣೆ ಪಾತಕಹರಣ ಗೈವರಾ ಪ

ಮರುಕದಿಂದ ಕಾಯೆನ್ನ ಶ್ರೀಪಾದವನಾಲಿಂಗಿಪೆ ಅ.ಪ

ಶಾರದಾ ವಿಶಾರದಾ ಚಿರಸೌಖ್ಯದಾ
ಚಾರುಕೀರ್ತಿ ಭರಿತ ಬೃಂದಾವನಮು
ದಾರನಮಿತ । ಮಾಂಗಿರೀಶ ಕೃಪಾದಾತ ೧

೧೯೬

. ಜ್ಞಾನಗಮ್ಯ ಶ್ರೀರಾಘವೇಂದ್ರ
ದೀನಪಾಲ ಶರಣ ಶರಣ್ಯ ಯೋಗ ಪ

ದಾನವೇಶ್ವರಾಂತಕ ವಂಶೋದ್ಭವಾ
ಪೂರ್ಣಾವತಾರಾ ವ್ಯಾಸರಾಯರೂಪಾ ಅ.ಪ

ಭವಬಂಧನಾಶ । ಕಮನೀಯವೇಷ
ಸರ್ವಜನ ಹಾಸ । ಬೃಂದಾವನ ನಿವಾಸ
ಭುವನ್ಯೈಕ ನೇತ್ರಾ । ಸಕಲಾರ್ಥದಾತ
ತವಚರಣಂ ಮಾಂಗಿರೀಶ ಪ್ರೀತ ೧

೧೯೭

•ತುಂಗಾತೀರ ಪ್ರಭಾಕರ ಶೃಂಗಾರ ಶ್ರೀ
ರಾಘವೇಂದ್ರ ಪ್ರಭು [ಮಾ ಮಂದಾರ] ಪ

ತುಂಗ ಕೃಪಾಕರ ಕಾಮಿತದಾತ
[ಸಂಗ]ವೆಂಕಟೇಶ ನಿರಂತರ ಮೋದಿತ ಅ.ಪ

ಯೋಗದಂಡಧರ [ವರ] ಸಂಭಾವಿತ
ತ್ಯಾಗಾದಿ ಸುಗುಣ ನಿರುಪಮ ಶಾಂತ
ಮಾರ್ಗ ದ್ವೈತ ನಿರೂಪಣ ಮಹಾನಂದ
[ಶ್ರೀ]ಗುಣೋಲ್ಲಾಸಿತ ವಿರಾಜಿತ ೧

ಆಗಮಾದಿ ವಿಧಿಸೂತ್ರ ವಿಚಾರಿತ
ರಾಗ ರಾಗಾಂಗರಾಗಭೂಷಿತ
ಯಾಗ ಯಜ್ಞ ಭೇದ ನಿರೂಪಿತ
ಮಾಂಗಿರೀಶ ಹರಿಪದ ಪ್ರಪೂಜಿತ ೨

೧೯೮

ಬಾ ಬಾ ಬೃಂದಾವನಾಲಯಸೋಮ ಶರಣಾವಲಯ
ಬಾ ಬಾ ಪರಿಮಳ ಆಚಾರ್ಯ ಸತತಯೋಗಾನಂದ ಪ

ಶೋಭಾಲಂಕರಣವಾರಿಧಿ ವೇಣುವಿನೋದ ನರೋತ್ತಮ
ಶ್ರೀ ಭೂಮಿನಿಲಯ ಪರಮಸುರುಚಿರ ರಘುವರಾ ಪ್ರಪೂಜಕ ಅ.ಪ

ನೀನೇ ದೀನಶರಣಕರುಣನು ಜಾನಿಸುವರ ಸುರತರು
ವೆನ್ನಿಪೆ ದ್ವೈತಾಗಮಸರಸಿಜಭಾನು ವೇದಾಂತ ವೈಷ್ಣವಚತುರ ೧

ಗಾನಲೋಲ ಮರಕತಮಣಿರಂಜಿತ
ಪ್ರಣವರೂಪ ನಿರುತ ಸುಖಕರಸದನ
[ನೀನೆ]ಪಾವನಾ ಪರಮಪುಣ್ಯಕರಾ ಸುಜನಪಾಲ ಶ್ರೀ ಮಾಂಗಿರೀಶ ೨

೧೯೯

ಪಾಹಿ ಗುರುವರೇಣ್ಯ ಜಗದಾನಂದ
ದೀನ ಪರಿವಾರ ಪಾಹಿ ದಾತಾರ ಮಾಂ
ದೇಹಿಮೇ ಚರಣಸೇವಾಂ ಪ

ಬೃಂದಾವನಶೈಲವಾಸ ಪರಮಕೃಪಾಕರ ಪಾಪನಾಶ
ಸುಧೀಂದ್ರ ವಿಭೂಷ ಹೃದಯೋಲ್ಲಾಸ ಅ.ಪ

ಸರ್ವೇಶ ವೆಂಕಟೇಶ ಗುರುವರ ಸುಖಧಾಮ
ಸುರರಂಜನ ಅಖಿಲ ಬೃಂದಾಳಿಭೀಮ
[ನಿರುತ]ಮತ್‌ಸಂಕಟ ಹರಿಪ ನಾಮಾ
ಶ್ರೀರಾಮ ಪರಿಭಾಷಾ ಮನಿವೇಶ ಜಿತಸೋಮ ೧

ಮೌನಿ ರಾಜೇಂದ್ರ ಧೀಮಂತ ಸದಯ
ಪ್ರಾಣೇಶಸುತ ಭಜನ ಸತತ ವಿರಾಜ ಪರಿ

ಪೂರ್ಣದರ್ಶನ ನಿರಂತರದಾಯಕ
ಮುನಿಪುಂಗವ ಹರಿಣ ಸಾರಾಂಗ ೨

ಮಂಗಳ ಚರಣ ತುರಂಗ
ಗಂಗಾಮೃತ ಪೂರ್ಣತೀರ್ಥ
[ತುಂಗಾತೀರ ನಿವಾಸಿನೀಂ]
ಮಾಂಗಿರಿರಂಗ ಸಂಪ್ರೀತ ಮಾಂ ೩

೨೦೦

ಬೃಂದಾವನವಿದೆಕೊ ಯತಿವರ ಪ

ನಂದ ನಂದನ ಗೋವಿಂದನ ಪಾದಾರ
ವಿಂದವ ಪೂಜಿಪ ಶ್ರೀರಾಘವೇಂದ್ರನ ಅ.ಪ

ಮಂತ್ರಾಲಯದಿ ಸ್ವತಂತ್ರ ಭೂಮಿಕೆಯಲ್ಲಿ
ಯಂತ್ರ ಸ್ಥಾಪನೆಗೈದು ಸಂತೃಪ್ತಿಯಾಂತು
ಮಂತ್ರಾರ್ಥ ತತ್ವಗಳನುಪದೇಶ ಗೈಯುವ
ಮಂತ್ರ ಸ್ವರೂಪನು ಸೇವಿಪ್ಪ ಪುಣ್ಯದ ೧

ಗುರುರಾಜರಾಜನು ಕರುಣಾಪಯೋಧಿಯು
ನಿರುತ ಭಕ್ತರಿಗೆಲ್ಲ ವರವೀವ ದೊರೆಯು
ಸರಸೀರುಹಾಕ್ಷ ಮಾಂಗಿರಿವಾಸ ರಂಗನ
ಚರಣವ ತೋರುವ ಕೃಪೆಮಾಡುವಾತನ ೨

೨೦೧

ಯತಿರಾಜಂ ಭಜರೇ ರಾಘವ ಸದ
ಗತಿ ತಂ ಭಜರೆ ಕಲುಷಿತ ಕುಟಿಲ ಮನಸೇ ಪ

ಯತಿಪಾದ ತೀರ್ಥವೆ ಗತಿಯೆಂಬರಸನಿಗೆ
ಪತಿತಪಾವನ ತನ್ನ ಪದವ ತೋರುವನಯ್ಯ ಅ.ಪ

ಗುರುವಚನವೇ ವೇದ ಗುರುನಾಮ ಸುಖದಾ
ಗುರುಪೂಜೆ ಪರಂಧಾಮ ಗುರುವೆ ಶ್ರೀರಾಮ
ಗುರುರಾಘವೇಂದ್ರ ಮಾಂಗಿರಿಯ ರಂಗಯ್ಯ
ಗುರುರಾಜ ಪ್ರಹ್ಲಾದ ಚಿರ ಸುಖದಾತಾರ ೧

೨೦೨

ರಾಘವೇಂದ್ರ ನಿನ್ನ ಸೇವೆಯೀವುದಯ್ಯ ಪ

ಸಾಗರಗಂಭೀರ ಧರ್ಮಸೂತ್ರಧಾರ
ತ್ಯಾಗಶೀಲ ಧೀರ ಸತ್ತ್ವೋಪಕಾರ ಅ.ಪ

ಮೂಲರಾಮ ಪೂಜಾ ಲೋಲ ರಾಘವೇಂದ್ರ
ಬಾಲಗೋಪಬಾಲ ಧ್ಯಾನತತ್ಪರಾ
ಕಾಲಮೇಘಶ್ಯಾಮ ವರದಾತಧೀರ
ಪಾಲಿಪುದಯ್ಯ ಮಾಂಗಿರೀಶ ಪ್ರಿಯ ೧

೨೦೩

ರಾಘವೇಂದ್ರ ನೀನೆನ್ನ ರಕ್ಷಕನಯ್ಯ
ನಾಗಶಯನಧ್ಯಾನ ಒದಗಿಸೋ ಜೀಯ ಪ

ಭಾಗ್ಯದೇಯ ವೈಶಾಲ್ಯ ಹೃದಯ
ಮಂತ್ರಾಲಯ [ತುಂಗಾತೀರ] ಕ್ಷೇತ್ರ ನಿಲಯ ಅ.ಪ

ಭಕ್ತರಕ್ಷಕ ನೀ ರಾಘವೇಂದ್ರ
ಭಕ್ತ ಪಾಲಕ ನೀ ರಾಘವೇಂದ್ರ

ಮುಕ್ತಿದಾಯಕ ನೀ ರಾಘವೇಂದ್ರ
ಶಕ್ತಿ ಸ್ವರೂಪ ನೀ ರಾಘವೇಂದ್ರ ೧

೨೦೪

ವರಗುರುದೇವ ದೇವ ಮುಕುಂದ
ಸುರುಚಿರಭಾವ ಸದಾನಂದ ಪ

ಪರತತ್ವ ಸೌಖ್ಯದ ಶುಭಕರ ಸುಖಕರ
ಅರಿಸಖಸಮಕರ ಹಿಮಕರ ಶಾಂತ ಅ.ಪ

ಪರಮತತ್ವ ವಿಭೂಷಿತ ವಾದ ಮೋದಿತ
ನರವೇಷ ಮುನಿವರ ವ್ಯಾಸರಾಯಾಂಶಕ ೧

ಸ್ಮರರೂಪ ಶುಭ್ರಾಂಗ ದಂಡ ಕರ ಕಮಂಡಲ
ಸಾರಸುಮಾರ್ಗಚರಾ ಪರಿಚಿತ ಮಾಂಗಿರಿವಾಸ ೨

•

೨೦೫

ವೀರವೈಷ್ಣವ ಪದ್ಮಲೋಚನ
ಶ್ರೀರಾಘವ ಪಾದಸರಸಿಜ ಪ

ಕರುಣಾಮಯ ಸುರಕಲ್ಪಭೂಜ
ನಿರುತ ಸೇವೆ ಮಾಳ್ಪ ವ್ಯಾಸರಾಯರೂಪ ಅ.ಪ

ಪರಮ ಶೃಂಗಾರ ಮಣಿಮಾಲಿಕಾ
ಧರಿತ ಕಲ್ಪತರು ಜಪಮಣಿಕರ
ಗುರು ಮಂತ್ರನಿಲಯ ಮಾಂಗಿರೀಶ ಪದ
[ವರ] ಪಂಕೇಜರೂಪ ಶ್ರೀ ರಾಘವೇಂದ್ರ ೧

೨೦೬

ಶಿರಸಾವಂದಿಪೆ ನಿನ್ನ ಕರುಣಾಕರ ನೇತ್ರ
ದೀನದಲಿತ ವರದಾತ [ಮಾಂಗಿರೀಶ ಪ್ರೀತ] ಪ

ಗುರುರಾಜ ಸುರಭೂಜ ಸುರುಚಿರಗಾತ್ರ
ಪರಮಾತ್ಮ ಶಶಿತೇಜ ಶ್ರೀಮಂತ್ರ ವಾಸ ಅ.ಪ

ವರದಂ ಸುಖದಂ ಚಿರಂ ಅರವಿಂದ ಸಾನಂದ
ನಿರುಪಮ ಗುರುವರ್ಯ ವಾರಿಜ ನೇತ್ರ ೧

ಸಾರಸ ಪದಯುಗ ಕನಕ ಸಮಗಾತ್ರ
ಚಾರುತರ ಕಮ[ನೀಯ] ಮಿತ್ರರೂಪಂ ದ್ಯುತಿಮಾನ್ ೨

೨೦೭

ಶ್ರೀಗುರುರಾಜ ಪಾಲಯಮಾಂ ಸದಾ
ಸುಗುಣ ವಿರಾಜಭೂಜ ಓ ದಿವಿಜ ಪ

ಓ ಗುರುಮಾನ್ಯ ಕಾಮಿತ ನೀರಜ
ತ್ಯಾಗಿ ಶುಭಾಂಗ ಭಾಸ್ಕರತೇಜ ಅ.ಪ

ಕಂಗಳ ನೀಡಿದೆ ಚರಣವ ತೋರಿದೆ
ಬಂಗಾರವ ನೀ ಪಡೆದೆ । ಪಂಗುತಾ ನಡೆಯಲಾದ
ಮಂಗನ ಸಿಂಗಗೈದೆ । ಇಂಗಿತಜ್ಞನೀನೆಲೆ
ಮಾಂಗಿರಿರಂಗನ ಪ್ರೇಮದಿಂದರ್ಚಿಸುವ ೧

೨೦೮

ಶ್ರೀ ಸಾಯಿ ಸ್ತುತಿಗಳು

ಸತ್ಯಸಾಯೀಶ್ವರ, ಪಾತಕ ಪರಿಹರ
ನಿತ್ಯನಿರ್ಮಲ ನಾಮ ಭಾವುಕಪ್ರೇಮ ಪ

ನುತ್ಯ ದಯಾಕರ ಶಂಕರ ಸುಖಂಕರ
ಭೃತ್ಯ ಮನೋರಮ ನಿರ್ಜಿತಕಾಮ ಅ.ಪ

ಶಾಂತಸ್ವಭಾವ ಪರಮಪ್ರಭಾವ
ದಾಂತ ಕೃಪಾಕರ ಭವಪರಿಹಾರ
ಮಂತ್ರಸುಧಾರ್ಣವ ಶೀತಳಭಾವ
ಭ್ರಾಂತಿವಿದೂರ ಪುಣ್ಯಶರೀರ ೧

ಅಗಣಿತ ಗುಣಗಣ ಸತ್ವ ನಿರೂಪಣ
ಜಗದಾನಂದದಾ ವೂದಿ ಪ್ರಸಾದ
ನಿಗಮಾಗಮಗಣ ವಿನಮಿತ ಚರಣ
ನಗಜಾನಂದದ ಮಾಂಗಿರಿವರದ ೨

೨೦೯

ಶ್ರೀಪ್ರಶಾಂತ ನಿಲಯ ನಿನ್ನ ಸುಪ್ರಕಾಶ ಬೆಳಗಲಿ ಪ

ಅಪ್ರಮೇಯ ನಮಗೆ ನಿನ್ನ ಸುಪ್ರಸನ್ನತೆ ದೊರೆಯಲಿ ಅ.ಪ

ನಿನ್ನ ಮಹಿಮೆ ಲೋಕವಿದಿತ ನಿನ್ನ ಚರಿತೆ ಪುಣ್ಯಭರಿತ
ನಿನ್ನ ಭಜನೆ ಪಾಪರಹಿತ ನಿನ್ನದರ್ಶನ ಮೋಕ್ಷಕಲಿತ ೧

ಅಂದು ಪತ್ರಿಯಲ್ಲಿ ಜನಿಸಿ ಭಕ್ತವರದನೆನಿಸಿದೆ
ಇಂದು ಪರ್ತಿಯಲಿ ಜನಿಸಿ ಚಂದ್ರಮೌಳಿ ಎನಿಸಿದೆ ೨

ಸತ್ಯಸಾಯಿಬಾಬ ನಿನ್ನ ತತ್ವಬೋಧ ನಿರುಪಮ
ನಿತ್ಯಕೃಪಾಜಲಧಿ ನೀನು ಶ್ರೀಶಮಾಂಗಿರಿ ಧಾಮ ೩

೨೧೦

ಆತ್ಮನಿವೇದನಾಸ್ತುತಿಗಳು

ಅನಿಲಜ ಸನ್ನುತ ವನಜಭವಾನುತ ಪ

ಮುನಿಜನವಂದಿತ ಅನಘ ವಿರಾಜಿತ ಅ.ಪ

ಭಕುತಿಯಲ್ಲವೆ ಜೀಯ ಮುಕುತಿಗೊಂಡಿಹನಯ್ಯ
ವಿಕಳನಾ ಮುನಿಗೇಯ ಸುಕವಿಪೂಜಿತಕಾಯ ೧

ಮರೆಯಬೇಡವೋ ಯನ್ನ ಗರುಡಗಮನ ನಿನ್ನ
ಚರಣ ಸೇವಕರನ್ನ ನಿರುತನೆನೆವೆ ಮುನ್ನ ೨

ನಡುಗಡಲಿನೊಳಿಹೆ ತಡಬಡಿಸುತಲಿಹೆ
ಪಿಡಿಯಲು ತೃಣವಿಲ್ಲ ನುಡಿವರು ಗತಿಯಿಲ್ಲ ೩

ತಾಮಸನಯ್ಯ ಬೇಡ ನೀ ಮನಸೋಲಬೇಡ
ಪಾಮರ ವರದನೆ । ರಾಮದಾಸಾರ್ಚಿತನೆ ೪

ಮಾಂಗಿರಿವರವಾಸ ರಂಗನಾಥನೆ ಶ್ರೀಶಾ
ಹಿಂಗದೆ ಯನ್ನಂತರಂಗದೆ ನಿಲೊ ಈಶಾ ೫

೨೧೧

ಅನುಭಪಿಸುವುದೆನ್ನದೇ [ಜೀವ] ನೀನಿತ್ತುದ ಪ

ಅನುಭವಿಸುವುದೆನ್ನ ದಿನಚರಿ ಕರ್ಮವೋ
ನೆನೆವುದ ಪಡೆವುದು ಕನಸೋ ರಂಗಯ್ಯ ಅ.ಪ

ಮನದ ವೇಗವ ನಿಲಿಸಲಾರೆನು
ಮನದ ಬಯಕೆಯ ಪಡೆಯಲಾರೆನು
ಮನವ ನಿನ್ನಲಿ ನಿಲಿಸಲಾರೆನು
ಮನದಿ ನೀನಿರೆ ಸಕಲ ಸೌಖ್ಯವು ೧

ಕಷ್ಟನಷ್ಟ ವಿಶಿಷ್ಟವು ನಿ
ನ್ನಿಷ್ಟವೆಂಬುದ ಬಲ್ಲೆನಾದರು
ಕಷ್ಟಕಳುವೆನು ಭ್ರಷ್ಟದೋರುವೆ
ದೃಷ್ಟಿ ನಿನ್ನದು ದೊರಕುವವರೆಗೂ ೨

ನಿನ್ನ ಮೂರ್ತಿಯು ಮನದಿ ನೆಲೆಸಲಿ
ನಿನ್ನ ಭಜನೆಯು ರಸನೆಗಾಗಲಿ
ನಿನ್ನ ಕೃಪೆಯವಲೋಕಗೊಲಿಯಲಿ
ಚೆನ್ನ ಮಾಂಗಿರಿರಂಗನೊಲಿಯಲಿ ೩

೨೧೨

ಅಮ್ಮ ನೀನಾದರೂ ನಮ್ಮಯ್ಯಗುಸಿರದೆ ।
ಸುಮ್ಮನಿಹುದು ನ್ಯಾಯವೇ ಪ

ದಮ್ಮಯ್ಯ ಪೊರೆಯೆನಲು ಒಮ್ಮೆಯಾದರೂ ಎನ್ನ
ದುಮ್ಮಾನವೇನೆಂದು ನಮ್ಮಯ್ಯ ಕೇಳಲಿಲ್ಲ ಅ.ಪ

ಸಣ್ಣ ಬಾಲಕನೊಬ್ಬ ಕಣ್ಣೀರ ಸುರಿಸಲು
ಪುಣ್ಯ ಲೋಕವನಿತ್ತಮ್ಮಾ
ಕಣ್ಣುಕಾಣದೆ ಗೊಂಡಾರಣ್ಯಮಧ್ಯದಿ ನಾನು
ಬಣ್ಣಿಸಿ ಕರೆದರೂ ಕಣ್ಣೆತ್ತಿ ನೋಡಲಿಲ್ಲವಮ್ಮಾ ೧

ಕರಿಯೊಂದು ಕೊಳದಲಿ ಒರಲಲಾಕ್ಷಣದೊಳು
ಪರಿದೋಡಿದನಮ್ಮ ನಮ್ಮಯ್ಯ ದುರಿತವಾರಿಧಿಯಲಿ ಕೊರಗುತಲಿಹ ಎನ್ನ
ಅರಿತು ಅರಿಯದಂತೆ ಇರುವನಲ್ಲ ಇಂದಿರಮ್ಮ ೨

ಮೃತಿಯ ವೇಳೆಯೊಳೊಬ್ಬ ಸುತನಕರೆಯಲಾಗ
ಹಿತದಿ ಸೌಖ್ಯವನಿತ್ತನು [ಕೇಳಮ್ಮಾ]
ಮಾಂಗಿರಿರಂಗ ಪತಿತಪಾವನಾಯೆಂದು
ನುತಿಸಿ ಬೇಡಿದರೂ ಸಂಗತಿಯೇನೊ ಎನಲಿಲ್ಲ ೩

೨೧೩

ಅಹುದೋ ದೇವ ನೀ ದಯಯುತನೆಂಬುದು
ಸಹಜವೋ ಎಲೆ ರಂಗ ಪ

ಮಹದುಪಕಾರವ ಗೈವೆ ಜಗಕೆಲ್ಲ ಅಹುದೋ
ಅಹುದೋ ಸಲೆ ಸಲಹುವ ಪಿತ ನೀ ಅ.ಪ

ಅಜಗೆ ನೇತ್ರವನಿತ್ತೆ ಗಜಕೆ ಪ್ರಾಣವನಿತ್ತೆ
ಅಜಮಿಳನಿಗೆ ಮೋಕ್ಷಪದವಿಯನಿತ್ತೆ
ಭಜನೆಗೈಯುವ ತುಂಬುರು ನಾರದರಿಂಗೆ
ನಿಜಸುಖ ಸಾಮ್ರಾಜ್ಯ ಪದವಿಯನಿತ್ತೆ ೧

ತರಳನ ನುಡಿಕೇಳಿ ಕಂಬದೊಳುದಯಿಸಿ
ದುರುಳರಕ್ಕಸನಶಿಕ್ಷಿಸಿದೆ
ತರಳ ಧ್ರುವನು ಗೈದಾ ತಪಸಿಗೆ ನಲಿಯುತೆ
ವರಸುಖಪದವಿತ್ತ ಕರುಣಾಕರನೀ ೨

ಭೂತಳದೊಳು ಜನ್ಮವಾಂತಿಹ ಸಾಸಿರ
ಚೇತನಾಚೇತನ ವಸ್ತುಗಳನು ನೀ
ಪ್ರೀತಿಸಿ ಪೊರೆಯುವ ರೀತಿಯದಾಶ್ಚರ್ಯ
ಏ ತೆರ ಪೇಳ್ದೊಡನಂತಮಹಿಮ ನೀ ೩

ದೇವದೇವನೆ ನಿನ್ನ ಪಾವನಚರಣವು
ದೇವಮುನಿಗಳೆಲ್ಲ ಸೇವಿಸಲರಿದೈ

ಭಾವಜಪಿತ ರಾಮದಾಸಾಚೇತ
ಸಾಕು ಜನ್ಮವಬಿಡಿಸೊ ಮಾವಿನಕೆರೆರಂಗಾ ೪

೨೧೪

ಎನ್ನನಾರು ಕರದು ತಂದರೇ ಇಲ್ಲಿಗೆ ಪ

ಮುನ್ನಗೈದ ಕರ್ಮವೆಂದು ನನ್ನ ಪುಣ್ಯ ಭಾಗ್ಯವೆಂದು
ಭಿನ್ನಮತವ ಪೇಳ್ವದು ನನ್ನ ಮಟ್ಟಿಗೊದಗದು ಅ.ಪ

ಯಾರ ಕರೆದು ತಂದರೇನು । ಯಾರು ಹೊತ್ತು ಹೆತ್ತರೇನು
ಗಾರು ಹೇಳಿನೆ ಕುಲವದೇನು ಮಾರಜನಕ ಪೊರೆವ ನೀನು ೧

ತಂದೆ ನೀನೆ ಕರೆದುತಂದೆ ಎಂದು ನಾನು ಭರದಿಬಂದೆ
ಬಂದು ನಿಂದೆ ಏಕೆ ತಂದೆ ಕುಲವನೆಣಿಸಬೇಡ ತಂದೆ ೨

ಯಾವದೈವವ ತೋರಿಸುವೆಯೊ ಯಾವ ಜಪವ ಮಾಡಿಸುವೆಯೊ
ಯಾವ ಕೃಪೆಯ ಬೀಳಿಸುತಿಹೆಯೊ ದೇವ ಮಾಂಗಿರೀಶ ಕಾಯೊ ೩

೨೧೫

ಎಷ್ಟು ಪರೀಕ್ಷಿಸಿ ನೋಡುವೆಯೋ ಇನ್ನು
ಎಷ್ಟು ಶೋಧಿಸೆ ನಿನಗಿಷ್ಟವೋ ರಂಗಾ ಪ

ಹಣವಿರುವನಕ ಕುಣಿಕುಣಿದು ಮೆರೆದೆನೊ
ಹಣವನಪಾತ್ರಕೆ ಮಣಿದು ಕಳೆದೆನೋ
ಋಣವಮಾಡಿ ಯೆನ್ನ ಬಣಗುಹೊಟ್ಟೆಯ ಹೊರೆದೆ
ಉಣಲುಡಲಿಲ್ಲದೆ ನೋಡದವೋಲಲೆದೇ ೧

ಹೆಣ್ಣು ಹೊನ್ನು ಮಣ್ಣು ಕಣ್ಣಿಗಿಂಪಾಗಲು
ಬಣ್ಣಿಸಿ ಭಾಗ್ಯವನುಣ್ಣಲು ಬಯಸಲು

ಬೆಣ್ಣೆಯಂತಿದ್ದುದು ಸುಣ್ಣವಾಯಿತೋ ದೇವ
ಕಣ್ಣು ಮಂಜಾಗಿ ಮೈಗಿಣ್ಣು ಮುರಿಯಿತಿನ್ನು ೨

ಬಹು ಜನುಮದಿ ಸಂಗ್ರಹಿಸಿದ ಪಾತಕ
ಬೃಹದಾಕಾರವಾಗಿದ್ದು ರಂಗಯ್ಯ
ಅತಿಶಯನನೆ ನಿನ್ನ ಮಹಿಮೆಯಿಂದೆಲ್ಲವು
ದಹಿಸುವುದೆಂದು ನಂಬಿದೆ ಮಾಂಗಿರೀಶ ೩

೨೧೬

ಏನ ಬೇಡಲಿ ನಾನು ಏನ ನೀಡುವೆಯೋ ನೀನು
ನೀನೆನ್ನ ಪ್ರಭುವಾಗಿರೆ ಹೇಳೋ ರಂಗ ಪ

ನಾನಿನ್ನ ವಂದಿಸಿ ಧ್ಯಾನವ ಗೈವಾಗ
ಏನನೀ ಕೊಡಲಾರೆ ಹೇಳೋ ರಂಗಯ್ಯ ಅ.ಪ

ಕರಣಕಾರಣ ನೀನು ಕೊರಡಬೊಂಬೆಯು ನಾನು
ಕರವ ಪಿಡಿದು ಎನ್ನ ನಡೆಸುವೆ ನೀನು
ಧರೆ ಗಿರಿ ಕಾನನ ಸಿರಿ ಸುಖ ಭೋಗವು
ಸ್ಥಿರವಲ್ಲ ಹರಿ ನಿನ್ನ ಚರಣಸೇವೆಯೆ ಸಾಕೋ ೧

ಬೇಡಿ ಬೇಡಿ ನಿನ್ನ ಕಾಡುವ ಮನವೀಯಬೇಡಯ್ಯ
ನೀಡಯ್ಯ ಮಂಗಳನಾಮಂಗಳ
ಪಾಡಿ ಕೊಂಡಾಡುತ ನಾಡೆ ವಂದನೆಗೈವ
ರೂಢಿ ಒಂದಿರಲಿ ಮಾಂಗಿರಿಯ ರಂಗಯ್ಯ ೨

೨೧೭

ಏನೊಂದು ಬೇಡೆನಗೆ ರಂಗಯ್ಯ
ಆನಂದ ಎನಗಾಗಿದೆ ಪ

ನಾನಿನ್ನನನುದಿನ ಧ್ಯಾನಿಸುತಿರುವಾಗ
ಜೇನುಸಕ್ಕರೆ ಸವಿ ಇರುವಾಗ ಅ.ಪ

ಖಗ ಮುಕ್ತಿ ಬೇಕೆಂದನೆ ಆ ಧೃವರಾಯ
ಜಗವೊಂದ ನೀಡೆಂದನೆ
ನಗವ ಕೈಯಿಂದೆತ್ತಿ ಸೊಗವ ನೀಡೆಂದರಾರು
ಜಗದೊಡೆಯಾ ನಿನ್ನ ಭಜನೆಯೆ ಸಾಕು ೧

ಅವಲಕ್ಕಿಯನು ತಂದಾಕುಚೇಲನು
ನವನಿಧಿ [ಯನೇನು] ಬೇಡಿದನೆ
ಪವನಜ ಬ್ರಹ್ಮಪಟ್ಟವನು ಬೇಡಿದನೆ
ಕುವಲಯಶ್ಯಾಮ ಮಾಂಗಿರಿಯ ರಂಗಯ್ಯ ೨

೨೧೮

ಕಡೆಯ ಬಾಗಿಲೊಳೆನ್ನ ನಿಲಿಸೋ ರಂಗಯ್ಯ
ಕಡೆಯ ಬಾಗಿಲ ಎನ್ನಕಡೆಗೆ ನಿಲಿಸಯ್ಯ ಪ

ಕಡೆಬಾಗಿಲೊಳು ನಿಲಿಸು ಅಡಿಗಡಿಗೆ ನಾನಿನ್ನ
ಕಡೆನೋಡಿ ಪೊಡಮಡುತೆ ಕೈಮುಗಿಯುವಂತೆ ಅ.ಪ

ಕಡೆಯ ಬಾಗಿಲಿನಿಂದ ದೃಢ ಭಕ್ತರೈತಂದು
ಕಡುಮುದದಿ ನಾಮಗಳ ನುಡಿವರಯ್ಯ
ನುಡಿಗಳೆಲ್ಲ ಎನ್ನ ಕಿವಿಗಿಡಿಯುತಿರಲಯ್ಯ
ಬಡವನಾದೆನಗಿದೇ ಉಪದೇಶವಯ್ಯ ೧

ಸಾಮೀಪ್ಯದವರೆಲ್ಲ ಮನದಲ್ಲೇ ಜಾನಿಪರು
ಮಾ ಮುನಿಗಳೆಲ್ಲರು ಶ್ರುತಿಯ ಸಾರುವರು
ನಾಮಗಳನುಚ್ಚರಿಸಿ ನಮಿಸುವರು ಪಾಡುವರು
ಆ ಮಧುವು ಸಾಕೆನಗೆ ಮಾಂಗಿರಿಯ ರಂಗ ೨

೨೧೯

ಕಣ್ಣಿಗೆ ಕಾಣದೆ ಏಕಿರುವೇ ರಂಗ
ಕಣ್ಣಲಿ ನೋಡದೆ ಬಣ್ಣಿಸಲಳವೇ ಪ

ಬಣ್ಣವು ಬಿಳುಪೋ । ಬೆಣ್ಣೆಯ ಕದಪೋ
ಚಿಣ್ಣನೊ ತರುಣನೋ । ಹಣ್ಣುಮುದುಕನೋ ಅ.ಪ

ನರನಾಗಿರುವೆಯೋ । ಹರಿಯಾಗಿರುವೆಯೋ
ನರಹರಿಯೆಂಬರು । ದಿಟವೋ ಸಟೆಯೋ
ಗಿರಿಯಂತಿರುವೆಯೋ । ಧರೆಯಂತಿರುವೆಯೋ
ಗಿರಿಧರನೆಂಬರು ದಿಟವೋ ಸಟೆಯೋ ೧

ಸ್ಮರನಂತಿಹೆಯೋ । ಗುರುವಂತಿಹೆಯೋ
ಸ್ಮರಗುರುವೆಂಬರು ದಿಟವೋ ಸಟೆಯೋ
ಕರಣನಾಗಿರುವೆಯೋ ಕಾರಣನಹೆಯೋ
ಕರಣಕಾರಣ ನೀನೆಂಬುದು ದಿಟವೋ ಸಟೆಯೋ ೨

ವೇದವಾಗಿರುವೆಯೋ ನಾದವಾಗಿರುವೆಯೋ
ವೇದನಾದಗಳೊಂದೇ ಎಂಬುದು ಸಟೆಯೋ
ಕಾದಿಹೆನಯ್ಯ ಮೋದವನೀಯೋ
ಸಾದರದಿಂದ ಬಂದೆನ್ನನು ಕಾಯೋ ೩

ಸಲಿಗೆಯ ತೋರು ಮಾಂಗಿರಿರಂಗ
ಸಲೆ ನಲಿವೆನೋರಂಗ ಗರುಡತುರಂಗ
ಛಲವ ಬಿಡೋ ರಂಗ ನಿಲು ನಗುತಲಿ ರಂಗ
ಸಲೆ ಬಣ್ಣಿಪೆನಾ ಚೆಲುವನು ರಂಗ ೪

೨೨೦

ಕನಿಕರವ ತೋರೋ ಜನಾರ್ಧನ
ನೆನೆವವರ ಬಳಿಯಲಿ ನಗುವ ಮಣಿರದನ ಪ

ಜಪತಪವರಿಯದ ವಿಫಲ ಜೀವಿಯು ನಾನು
ಕುಪಿತನಾಗದೆ ಎನ್ನ ತಾಪವ ಬಿಡಿಸೋ ೧

ಸ್ನಾನ ಸಂಧ್ಯೆಗಳಿಂದ ಜ್ಞಾನ ದೊರೆಯಲಿಲ್ಲ
ಧ್ಯಾನಭಿಕ್ಷೆಯ ನೀಡೋ ಶ್ರೀನರಸಿಂಹ ೨

ಮಂಗಳ ಮೂರ್ತಿ ಮಾತಂಗವರದ ನನ್ನ
ಭಂಗಪಡಿಸಬೇಡ ಮಾಂಗಿರಿರಂಗ ೩

೨೨೧

ಕನಿಕರವಿಲ್ಲವೆ । ವನರುಹಲೋಚನಾ ಪ

ಘನಕೃಪಾಪೂರ್ಣ ನೀನೆನುವುದು ಜಗವೆಲ್ಲಾ
ಎನಗದು ನಿಜವೆಂದು ಅರಿವಾಗಲಿಲ್ಲ ಅ.ಪ

ವೇದ ಪುರಾಣವ ಓದಿ ತಿಳಿಯಲಿಲ್ಲ
ಸಾಧುಸಂತರ ಸೇವೆ ಸಾಧಿಸಲಿಲ್ಲ
ಮೇದಿನಿದೇವಿಗೆ ಭಾರ ನಾನಾದೆನಲ್ಲ
ಆದಿಮೂರುತಿ ನಿನ್ನಾರಾಧನೆ ಮಾಡಲಿಲ್ಲ ೧

ಜ್ಞಾನ ಸುಧಾರಸ ಪಾನವ ಮಾಡಲಿಲ್ಲ
ದೀನತೆಯೊಳು ನಿನ್ನ ಧ್ಯಾನಿಸಲಿಲ್ಲ
ದೀನರ ಸಂಗದಿ ಶ್ವಾನನಂತಾದೆನಲ್ಲ
ನಾನು ನನ್ನದು ನಿನ್ನಾಧೀನವಾಗಲು ಇಲ್ಲ ೨

ನಿನ್ನ ಬಿಟ್ಟನ್ಯರ ಇನ್ನು ಸೇವಿಪುದಿಲ್ಲ
ಅನ್ನ ಪಾನಂಗಳೊಳಿನ್ನಾಸೆಯಿಲ್ಲ
ನಿನ್ನ ನಾಮಾಮೃತವನು ಬಿಡುವವನಲ್ಲ
ನಿನ್ನವನೆಂದೆನ್ನ ಮನ್ನಿಸೊ ಮಾಂಗಿರೀಶ ೩

೨೨೨

ಕರುಣ ಬಾರದೇ ಸ್ವಾಮಿ ಕರುಣ ಬಾರದೆ ಪ

ಶ್ರುತಿ ಪುರಾಣ ವೇದ ಶಾಸ್ತ್ರ ಪತಿತಪಾವನ ನೀನೆಯೆಂದು
ನುತಿಸಿ ಸಾರಿ ಪೇಳ್ವುದ ಕೇಳಿ ಪಿತ ನೀನೆಂದು ನಂಬಿದೆನಯ್ಯಾ ಅ.ಪ

ಕಡಲಿಗುರುಳಿದೆನ್ನ ಕೈಯ ಪಿಡಿವರಿಲ್ಲ ಮಾರನಯ್ಯ
ದಡವ ಸೇರಿಸಿ ಪಾಲಿಸೊ ಜೀಯ ಅಡಿಯ ಪಿಡಿದು ಬೇಡುವೆನು ೧

ಶತಶತಾಪರಾಧಿ ನಾನು ಸತತ ದೀನದಯಾಮಯನು
ಪಿತನು ಹಿತನು ನೀನೇ ಬೇರೆಗತಿಯ ಕಾಣೆ ಮಾಂಗಿರೀಶ ೨

೨೨೩

ಕರುಣವೇಕೆ ಬಾರದಯ್ಯ ಧರಣಿಜಾಪ್ರಿಯಾ ಪ

ಶರಣಜನರ ಪೊರೆವನೆಂಬ ಬಿರುದ ಪೊತ್ತವನಾಗಿರಲೆನ್ನೊಳು ಅ.ಪ

ಯಾಗರಕ್ಷಣೆಗಾಗಿ ಕೌಶಿಕ
ಕೂಗಲಾಕ್ಷಣ ಓಡಿಪೋದೆ
ಕೂಗಿಬೇಡದೆ ಪಾಡದಹಲ್ಯೆಯ
ರೋಗವ ನಂದಿಸಿದಾತನೆ ॥ ಯೆನ್ನೊಳು ॥ ೧

ಹರನ ಚಾಪವ ಮುರಿದು ಸೀತೆಯ
ಕರವ ಪಿಡಿಯೆ ಕರೆದರಾರು ।

ಕಿರಿದು ತಾಯ ದುರಾಸೆ ಮನ್ನಿಸಿ ಭರದಿ
ವನಕೆ ಪೋದವನೆ ॥ಯೆನ್ನೊಳು ॥ ೨

ಭಾಮೆಯೆಂಜಲ ತಿಂದೆ ಪಕ್ಷಿಗೆ
ಪ್ರೇಮ ತೋರಿ ಲಂಕೆಯ ಸೇರಿ
ಆ ಮಹಾದೈತ್ಯನ ತಮ್ಮನಿಗೊಲಿದೆ ।
ಭೂಮಿಜೆಯರಸ ಮಾಂಗಿರಿರಂಗ ೩

೨೨೪

ಕರುಣಿಸು ರಘುನಂದನ ರಾಮಾ
ನಿರುತವು ನಿನ್ನನೆ ಸ್ಮರಿಸುವ ಭಾಗ್ಯವ ಪ

ಪರಮಮಂಗಳನಾಮಾ ದುರಿತಭಂಜನ ನಾಮ
ಗಿರಿಜೆಪಾಡುವ ನಾಮಾ । ಜಾನಕೀರಾಮ ಅ.ಪ

ರಾಮನೆನೆ ಪಾಪವು ಲಯವಹುದಂತೆ
ರಾಮಾಯೆನೆ ಭಯಗಳು ಪರಿಹರವಂತೆ ೧

ರಾಮನೆನೆ ಮಾಯೆಯು ಹರವಂತೆ
ರಾಮನ ನುತಿಸೆ ಮನ ಪರವಶವಂತೆ ೨

ಜಯರಾಮ ಜಯರಾಮ ಎನುತಿರುವಂತೆ]
ದಯಮಾಡೊ ಮಾಂಗಿರಿರಂಗ ನೀನಂತೆ ೩

೨೨೫

ಕರೆತಾರಬಾರದೇನೇ ರಂಗಯ್ಯನ
ಬರಲಾರೆನೆಂದರೂ ಕರವಮುಗಿದಾದರೂ ಪ

ಸರಸಿಜನಾಭನ ಅರವಿಂದಚರಣಕೆ
ಎರಗಿ ಎರಗಿ ಮತ್ತೆ ಕರುಣಿಸೆಂದಾದರೂ ಅ.ಪ

ನೆನೆದು ಪೂಜಿಸುವರ ಮನೆಗೆ ಬರುವೆಯೆಂದು
ಮುನಿಜನ ಪೇಳ್ದುದು ಸಟೆಯಹುದೇನೋ
ಜನನಿಯು ಜನಕನ ಅನುಜನಗ್ರಜನ
ಘನತರ ಬಂಧುವು ನೀನೆಂದುಸುರಿ ೧

ನಂದನಕಂದ ಗೋವಿಂದನ ಪಾದಾರ
ವಿಂದವ ಕಾಣದೆ ಜೀವಿಸಲರಿಯೆ
ಎಂದು ಪೇಳುತ ಮುಚುಕುಂದಗೆ ವಂದಿಸು
ಮಂದಹಾಸದಿ ಬರುವ ಮಾಂಗಿರಿರಂಗ ೨

೨೨೬

ಕರೆದರೆ ಓ ಓ ಎನಬಾರದೆ
ಮರೆತರು ಕೂಗಿನ ದನಿಕೇಳದೆ ರಂಗ ಪ

ಶರಣಜನರು ಸಾಸಿರವಿದ್ದರೇನೋ
ಮೊರೆಯಿಡುವವ ಕಂಡರರಿವಾಗದೇನೋ ಅ.ಪ

ಲಕ್ಷ ಜೀವಿಗಳನ್ನು ರಕ್ಷಿಸುವವನೆಂದು
ವಕ್ಷದೊಳಿರುವ ಶ್ರೀಲಕ್ಷ್ಮಿ ಹೇಳುವಳು
ಪಕ್ಷಿರಾಜನ ಫಣಿಯಕ್ಷನಂಗನೆಯರು
ಅಕ್ಷರ ಲೋಕಾಧ್ಯಕ್ಷನೆನುವರು ೧

ಯೋಗವನರಿಯೆನು ಯಾಗವನರಿಯೆನು
ತ್ಯಾಗ ಮಾಡುವ ಬುದ್ಧಿ ಎಳ್ಳನಿತಿಲ್ಲ
ರಾಗ ರಚನೆಗಳ ಅರಿವೆನಗಿಲ್ಲ
ನಾಗಶಯನ ಕಾಯೋ ಮಾಂಗಿರಿರಂಗ ೨

೨೨೭

ಕರೆದಾಗ ಬಳಿಸಂದು ನಿಲ್ಲಬಾರದೆ
ಶರಣಾರ್ಥಿನಾನೆಂಬುದರಿವಾಗದೆ ರಂಗ ಪ

ಪೊರೆವಾತ ನೀನೆಂಬ ನುಡಿಕೇಳದೆ ರಂಗ
ಕರುಣಾಳು ನೀನೆಂದು ನೆರೆನಂಬಿದೆ ಅ.ಪ

ಶಿಲೆಯಾದ ಪತ್ನಿಯು ಪೊರೆಯೆಂದಳೆ ಆ
ಬಲುಪಾಪಿ ಅಜಮಿಳನು ಬಾರೆಂದನೆ
ಬಲಿ ತನ್ನ ಬಾಗಿಲನು ಕಾಯೆಂದನೇ ನೀ
ಸಲೆ ಮುಕ್ತಿಯೀಯೆಂದು ಖಗ ಕೇಳ್ದನೇ ೧

ಸಿರಿಭೂಮಿ ಸುಖದಾಸೆ ಪಡಲಾರೆನೋ ನಾ
ನೆರೆ ದಾನಧರ್ಮಗಳ ಕುಡಲಾರೆನೋ
ವರ ಯಾಗಯೋಗಗಳ ಕೊಡಲಾರೆನೋ ಮಾಂ
ಗಿರಿರಂಗ ಭಜನೆಯ ಬಿಡಲಾರೆನೋ ೨

೨೨೮

ಕಾದು ಕುಳಿತಿಹೆನಯ್ಯ ರಂಗನಾಥ
ಪಾದದರ್ಶನವೀಯೈ ಜಾನಕೀನಾಥ ಪ

ವೇದ ವೇದಾಂತಗಳ ಓದಿದವ ನಾನಲ್ಲ
ವಾದ ವಾಕ್ಯಾರ್ಥಗಳ ಭೇದ ಎನಗಿಲ್ಲ ಅ.ಪ

ಪಾತಕಂಗಳ ಗೈದು ಭೀತನಾಗಿಹೆನಯ್ಯ
ನೀತಿನಿಯಮಗಳಿಂದ ದೂರ ನಾನು
ಈತಿ ಬಾಧೆಗಳಿಂದ ನಾ ತಪಿಸುತಿಹೆನಯ್ಯ
ಮಾತುಮಾತಿಗೆ ನಿನ್ನ ನಾಮ ಜಪವೀಯೆಂದು ೧

ಕೆಸರೊಳಗೆ ಹಾಕುವೆಯೊ ಹೊಸ ಜನುಮವೀಯುವೆಯೊ
ಬಿಸಜಾಕ್ಷ ನಿನ್ನ ಮನಬಂದಂತೆ ಮಾಡೊ
ಉಸಿರಾಡುವನ್ನೆಗಂ ನಿನ್ನ ಭಜನೆಯ ಗೈಸಿ
ರಸ ಕಸಗಳೊಂದೆನಿಸೊ ಮಾಂಗಿರಿಯರಂಗ ೨

೨೨೯

ಕಾವ ಜನಕ ನೀನಿರುತಿರಲೆನಗಿ
ನ್ನಾವ ಬಂಧುವು ಬೇಕೊ ಮಾಂಗಿರಿಯ ರಂಗ ಪ

ದೇವ ನೀನಲ್ಲದೆ ಲಕ್ಷಜೀವಿಗಳಿದ್ದು
ಈವ ಸೌಖ್ಯವು ಬೇಡ ಮಾಂಗಿರಿಯ ರಂಗ ಅ.ಪ

ನಾರಿಯ ಮಾನಾಪಹಾರವ ಗೈದಾಗ
ವೀರರೈವರು ತಮ್ಮ ಮೋರೆಯ ತೋರ್ದರೆ
ನೂರುಮಂದಿ ವೇದಪಾರಂಗತರಿದ್ದು
ಕ್ರೂರ ಕಾರ್ಯಂಗಳ ನಿಲಿಸಿದರೆ ರಂಗ ೧

ಮೂವತ್ತುಮೂರುಕೋಟಿ ನಿರ್ಜರರಿದ್ದು
ರಾವಣನೊಬ್ಬನ ಜೈಸಿದರೆ
ಪಾವಕ ಹಸ್ತವನಿತ್ತ ಗಿರೀಶನ
ದೇವಗಣೇಶ್ವರರುಳಿಸಿದರೇ ೨

ಅರಕ್ಷಿತವಾದುದ ಸುರಕ್ಷಿತ ಗೈವೆ
ಸುರಕ್ಷಿತವಾದುದಕ್ಷಯ ಗೈವೆ
ನಿರಕ್ಷರಕುಕ್ಷಿಗೆ ಮೋಕ್ಷವ ನೀನೀವೆ
ದುರಿತಕ್ಷಯ ಗೈದು ಪಾಲಿಸುವೆ ೩

೨೩೦

ಕೈಹಿಡಿದೆನ್ನನು ನಡೆಸೋ ರಂಗ
ಚೋಹವ ಬಿಡಿಸಿ ನಿನ್ನಡಿಗಳ ಹಿಡಿಸೊ ಪ

ಮೋಹ ಮಾತ್ಸರ್ಯದ ದಾಹವ ಬಿಡಿಸೋ
ಶ್ರೀಹರಿ ನಿನ್ನ ನಾಮಂಗಳ ನುಡಿಸೋ ಅ.ಪ

ಇಂದಿರೆಯರಸ ಮುಕುಂದ ನಿನ್ನ । ಕಂದನ ಮರೆವರೆ
ತಂದೆ ಗೋವಿಂದಾ । ಮಂದಮತಿಯು ನಾನೆ ಗೋಪೀ
ಕಂದ । ಮಂದರಧರ ಕಾಯೋ ನಿತ್ಯಾನಂದ ೧

ಮಂಗಳಕರ ಶುಭನಾಮ । ಹಿಂಗದೆ ಭಜಿಪೆನು ಅರಿಕುಲಭೀಮ
ತುಂಗಕೃಪಾಕರ ಜಗದಭಿರಾಮ
ಭಂಗಿಸು ದುರಿತವ ಮಾಂಗಿರಿಧಾಮ ೨

ಆಸುರಿ ಭಾವವನಳಿಸೋ ನಿನ್ನ
ದಾಸರದಾಸ ನಾನೆಂಬುದನುಳಿಸೋ
ವಾಸುಕಿಶಯನನ ಅಡಿಯಾಳೆನಿಸೋ
ವಾಸುದೇವ ನಿನ್ನ ಬೇಡುವುದೆನಿಸೊ ೩

೨೩೧

ಗಿರಿಯೆಡೆಗೆ ಬರಲಾರೆನೇ [ಮಾಂಗಿರಿ ರಂಗನ] ಪ

ಗಿರಿಯೆಡೆಗೆ ಬರಲಾರೆ ಬರುವದೃಢವಿಡಲಾರೆ
ಬರಲಾರೆನೆನಲಾರೆ ಹೊರಡಲಾರೆನೊ ರಂಗ ಅ.ಪ

ನೂರುಯೋಜನ ಪೋಪೆನೇ ಅಲ್ಲಿಂದಿತ್ತ
ಕಾರ್ಯಮಿಲ್ಲದೆ ಬರ್ಪೆನೇ

ನೂರುಹೊನ್ನಾದರೂ ಬೇರೆ ಎಣಿಸದೆ ಕಳೆವೆ ।
ಮೂರು ಹೊನ್ನನು ಹಿಡಿದಾ ಮೂರು ಹರಿದಾರಿಯ ೧

ಪರಿಕಿಸುತಿಹೆ ನೀನೆನ್ನಾ ಮಾಮನದ ರನ್ನ
ಹುರುಳಿಲ್ಲದಿಹಯನ್ನ
ಬರುವೆ ನಿನ್ನನು ನೋಡಿ ಶಿರಬಾಗಿ ಬಹೆನೆಂಬ
ಭರವಸೆ ಬಿಡಲಿಲ್ಲ ಹೊರಡಲಿಲ್ಲವೋ ರಂಗ ೨

ಬೀನದೊಳು ನೀನು ಮಾಂಗಿರಿರಂಗ
ನೀನರಿಯದುದಾವುದೋ
ಸೂನು ಧ್ರುವರಾಯನೆಡೆಗೆ ನೀನೋಡಿ ಬರಲಿಲ್ಲವೇ
ನಾನು ಮೊರೆಯಿಡೆ ನಿನ್ನ ಮಾನಸ ಕರಗದಲ್ಲ ೩

ತಾಮರಸಾಕ್ಷಾ ನಿನ್ನ ನಾಮದ ಭಜನೆ
ಕಾಮವಾಗಿಹುದೆ ಯನ್ನಾ
ಶ್ರೀಮಹಿತಾಂಗನೆ ಸೋಮಶೇಖರವಿನುತ
ರಾಮದಾಸಾರ್ಚಿತ ಕೋಮಲಾಂಗ ರಂಗ ೪

೨೩೨

ಗುಣದೋಷವೆನ್ನದಲ್ಲ ರಂಗಯ್ಯ ರಂಗ ಪ

ಗುಣದೋಷಯೆನ್ನದಲ್ಲ ಫಣಿರಾಜಶಯನನೆ
ಅಣುರೇಣು ತೃಣಕಾಷ್ಠಭರಿತ ನೀನಾಗಿರಲ್ಕೆ ಅ.ಪ

ಮಂತ್ರಕರ್ತನು ನೀನು ಮಂತ್ರಾಧೀನನು ನೀನು
ಮಂತ್ರಕೊಲಿವವ ನೀನು ಮಂತ್ರಿಯೂ ನೀನು
ಯಂತ್ರವೆನ್ನದೊರಂಗ ಯಂತ್ರನಡೆಸುವವ ನೀನು
ಯಂತ್ರವೆಂಬುದೀ ದೇಹ ಯಂತ್ರಿಯೇ ನೀನಾಗಿರಲು ೧

ಅಂಬರಾಕಾರನು ನೀನು ಅಂಬುಧಿ ಅಂಬುಜ ನೀನು
ಅಂಬುವಾಹಕಾರ ಪೀತಾಂಬರನು ನೀನು
ಅಂಬುಧಿಯೊಳೆನ್ನ ಬಿಟ್ಟು ಅಂಬರಕ್ಕೆ ಸೆಳೆವ ನೀನು
ಅಂಬು ಅಂಬರದೊಳಗೆ ಕೈಯ ಬೊಂಬೆಯು ನಾನಾಗಿರಲ್ಕೆ ೨

ನಾಡುಕಾಡು ಬೀಡುಗಳ ನೋಡು ಮಾಡು ಬೇಡು ಎಂಬೇ
ಆಡಿ ಓಡಿ ಮಾಡುವುದ ನೋಡುತಿರುವೆ
ಆಡಿ ಬೇಡಿ ಪಾಡಿ ಕೊಂಡಾಡಿ ಭಕ್ತಿಯನ್ನಿತ್ತು
ಜೋಡಿ ನೀನಾಗುವೆ ಮತ್ತೆ ಮಾಂಗಿರೀಶ ಸುಪ್ರಕಾಶ ೩

೨೩೩

ಘನಲೀಲಾಕುಲ ದೇವಕಿ ಬಾಲಾ ಪ

ಹೀನನ ಮೊರೆ ಕಿವಿಗೆ ಬೀಳದಲಾ ಸ್ವಾಮಿ ಅ.ಪ

ಬಾಲಕ ನೆನೆದುದ ಆಲಿಸಿದ್ಯೆ ತಂದೆ
ಖೂಳನ ನುಡಿ ಕಿವಿಗೆ ಕೇಳಿಸದೆ ದೇವಾ ೧

ಹಾಡಲು ಅರಿಯೆ ಕೊಂಡಾಡಲು ಅರಿಯೆನು
ನೋಡುವೆಯೋ ನದಿಗೆ ದೂಡುವೆಯೋ ದೇವಾ ೨

ಚರಣ ಸರೋಜದ ದರುಶನಗೈಸೋ
ಕರವ ಮುಗಿವೆ ಮಾಂಗಿರಿ ರಂಗಾ ೩

೨೩೪

ತಂದೆ ನಿನ್ನೊಲುಮೆಯೊಂದೆ ಎನ್ನ ಬಯಕೆ ಪ

ಬಂದ ಕಷ್ಟಗಳೆಲ್ಲ ಎನ್ನಭ್ಯುದಯಕೆ ಅ.ಪ

ಆಸೂರಿಯಾದರೂ ಈ ಸೂರಿಯಾದರೂ
ಏಸೂರಿಗ್ಹೋದರೂ ವಾಸಿಯಿಲ್ಲ
ಕೂಸುಗಳ ಪಡೆದರೂ ಆಸೆಗಳ ತೋರಿದರೂ
ಹೇಸಿಕೆ ಬೇಳಲೆದರೂ ಲೇಸಾಗಲಿಲ್ಲ ೧

ಈ ವೂರಿನ್ಯೆವತ್ತು ಆ ವೂರಿನ್ಯೆವತ್ತು
ದೇವರ್ಕಳಿಗೆ ನಾಮ ಹರಕೆ ಹೊತ್ತು
ಬೇವಿನಲಿ ಸಿಹಿಯ ನೀನೀವುದೆಂದತ್ತತ್ತು
ಜೀವಿತವು ಬರಿದಾಯ್ತು ಬಾಧಿಸುವುದ್ಯೆಮುಪ್ಪು ೨

ತಂದೆ ಗೋವಿಂದನಯ್ಯ ಒಂದುನೂರ್ವಂದನೆಯ
ಇಂದರ್ಪಿಸುವೆನಯ್ಯ ಕೈಹಿಡಿಯಯ್ಯ
ಕುಂದ ಕಳೆಗಾಣಿಸಯ್ಯ ಬಂಧನವ ಬಿಡಿಸಯ್ಯ
ಇಂದಿರಾನಂದ ಮಾಂಗಿರಿಯ ರಂಗಯ್ಯ ೩

೨೩೪

ತಂದೇ ಕಮಲಾಪತಿಯೇ ಕಂದನ ಬಂಧನವಳಿದ ಹರಿಯೇ ಪ

ಮಂದರ ಗಿರಿಧರ ರಾಮ ಖರಾರೇ
ನಂದನ ಕಂದ ಗೋವಿಂದ ಮುರಾರೇ ಅ.ಪ

ಭವಶರಧಿಯೊಳು ನೊಂದೇ [ಸುಖಲವಲೇಶವು] ಕಾಣದಾದೆ
ಜವನ ಬಾಧೆಗೆ ಪಕ್ಕಾದೆ ನಿನ್ನ ಚರಣವೆ ಗತಿಯೆಂದು ಬಂದೆ ೧

ಶರಣರು ಕರೆಯಲು ಬರುವೆ ರಂಗ ತ್ವರಿತದಿ ಪಾಪವ ಕಳೆವೆ
ಪರಮದಯಾಕರ ಮಣಿವೆ ಎನ್ನ ಮೊರೆಯ ಲಾಲಿಸದಿರೆ ತರವೆ ೨

ಮಂಗಳದಾಯಕ ನೀನೆ । ತ್ರಿಲೋಕಂಗಳ ಸಲಹುವ ನೀನೇ
ಮಾಂಗಿರಿರಂಗನು ನೀನೇ । ನಿನ್ನ ದಾಸರ ದಾಸನು ನಾನೇ ೩

೨೩೬

ತಡವಿದು ಯೇತಕೋ ರಂಗ
ಬಿಡದಿರೆನ್ನ ಕಡಲನಡುವೆ ಪ

ಕಡಲ ಸೇರಿ ಮಡುವಿನೊಳಗೆ
ತಡಬಡಿಪುದ ನೋಡಿ ನೋಡಿ ಅ.ಪ

ಸರಸ ಕರುಣಾಭರಣ ಶರಣ ನಿರುತ ಸೇವಿತ
ವರ ಸುಚರಣ ಮರೆಯದಿರು ದಾಸಾನುದಾಸನ ಲೋಕಕಾರಣ ೧

ಕರಿ ಬಲಿ ಪಾಂಚಾಲಿಯರನು ಹರುಷದಿಂದ ಪೊರೆದೆಯಲ್ತೆ
ಕರುಣದಿಂದ ಬಾರೊ ಹರಿಯೆ ಸರಸಿಜಾಕ್ಷನೇ ೨

ದೇವ ದೇವ ಪಾವನಾತ್ಮ ಭಾವಜಾತಪಿತ ಪರಮಾತ್ಮ
ಜೀವಕೋಟಿ ಕಾಮಿತದಾತ ದಿವಿಜ ಸನ್ನುತಾ ೩

ಕಾವರನ್ಯರಿಲ್ಲವಯ್ಯ ಪಾವನಾತ್ಮ ಮಾರನಯ್ಯ
ಸಾವಕಾಶವೇಕೋ ಜೀಯ ಮಾವಿನಕೆರೆಯರಸ ರಂಗ ೪

೨೩೭

ತನು ಮನ ಧನ ನಿನ್ನವಯ್ಯ ವನಜನಾಭ ಮಾರನಯ್ಯ ಪ

ಮನಸು ನನಸು ನಿನ್ನವಯ್ಯ ಕನಸು ಕಿನಸು ನಿನ್ನವಯ್ಯ
ದಿನ ದಿನ ದಿನ ಭಜಿಪೆನಯ್ಯ ಮನದಿ ನೆಲಸೋ ನೀ ರಂಗಯ್ಯ ಅ.ಪ

ಸ್ನಾನ ಸಂಧ್ಯಾ ಜಪವು ತಪ ಧ್ಯಾನಪೂಜೆ ಧೂಪ ದೀಪ
ದಾನ ಧರ್ಮ ನೇಮ ಲೋಪವೇನನರಿಯೆ ವಿಶ್ವರೂಪ ೧

ಎನ್ನದೆಂಬುದಾವುದಿಲ್ಲ ಎನ್ನ ಕಾರ್ಯವೆನ್ನದಲ್ಲ
ಎನ್ನ ಪೊರೆವರಾರು ಇಲ್ಲ ನಿನ್ನ ಬಿಟ್ಟರೇ ಗತಿಯಿಲ್ಲ ೨

ನಿನ್ನ ಸನ್ನಿಧಿ ಎನ್ನದೇಶ ನಿನ್ನ ಭಜನೆ ಎನ್ನ ಕೋಶ
ನಿನ್ನ ಕೃಪೆಯೇ ಎನ್ನ ದೋಷನಾಶ ಸನ್ನುತಕಾಯೋ ಮಾಂಗಿರೀಶ ೩

೨೩೮

ದಯವ ಮಾಡೋ ಎನ್ನ ಭಯವ ಬಿಡಿಸೋ ಪ

ಅಭಯಪ್ರದಾಯಕ ರಥಾಂಗ ಮಾವಿನಕೆರೆರಂಗಾ ಅ.ಪ

ಮುನಿವರರೆಲ್ಲ ನಿನ್ನ ಅನುದಿನ ಭಜಿಪರೋ
ತನು ಮನ ಧನಗಳ ನಿನಗೊಪ್ಪಿಸಲು
ಘನ ತಪೋಶಕ್ತಿಯಿಂದ ಮನವೊಲಿಸುವರು ನಿನ್ನಾ
ಅನಿತನರಿಯದೆನ್ನೊಳು ಸನುಮತದಿಂದಲಿಯೆನ್ನೊಳು ೧

ಕಾಮ ಕ್ರೋಧಂಗಳಿಂ ಭ್ರಾಮಕನಾದೆನ್ನ
ನೇಮವೊಂದಿಲ್ಲ ನಿನ್ನ ನಾಮಂಗಳುಲಿಯೆ ನಾ
ಭೂಮಿಯೊಳನೇಕ ಜನ್ಮನಾಮದಿಂದೆ ಜನಿಸಿ ಪಾಪ
ಕರ್ಮವ ತಳೆದೆಂ ರಾಮದಾಸಾರ್ಚಿತನೆ ಯೆನ್ನೊಳು ೨

ಕರಿಯ ಪೊರೆದೆ ಹರೀ ತರಳಗೊಲಿದೇ
ಸಿರಿತರುಣಿಯಕಾಯ್ದೆ ಶೌರಿ ದುರುಳನ ಪೊರೆದೆ ಉದಾರಿ
ಸರಸಿಜಾಕ್ಷ ಮುರಾರಿ ಸುರಪತೆ ರಕ್ಕಸಾರಿ
ಕರುಣಿಸೋ ಸೂತ್ರಧಾರಿ ಕರವಪಿಡಿದು ಯೆನ್ನೊಳು ೩

೨೩೯

ದಾರಿಗಾಣದಯ್ಯ ಕಣ್ಣಿಗೆ ದಾರಿ ತೋರಿಸಯ್ಯಾ ಪ

ಪಾರುಗಾಣದ ಸಂಸಾರ ವಾರಿಧಿಯಲಿ
ಪಾರುಗಾಣಿಸಯ್ಯ ಮಾರನ ಪಿತನೇ ಅ.ಪ

ಯಾರಿಗೆ ಮೊರೆಯಿಡಲಾರು ಕೈಹಿಡಿವರು
ಧಾರಿಣಿಯೆ ಅಂಧಕಾರವಯ್ಯ
ಸಾರಸನಾಭ ನೀ ಕಾರುಣ್ಯಾಮೃತ
ಬೀರದಿದ್ದರೆ ಎನ್ನ ಗತಿಏನೋ ರಂಗ ೧

ಸತಿಸುತರೆನಗತಿ ಹಿತರೆಂದೆನ್ನುತೆ
ಸತತ ನಂಬಿ ಸತ್ಪಥವನು ಮರೆತಂತೆ
ಪತಿತನಾದೆನಗೆ ನೀ ಗತಿದೋರದಿದ್ದರೆ
ಪತಿತನಾಗಿರುವುದೇ ಗತಿಯೊ ಮಾಂಗಿರಿರಂಗ ೨

೨೪೦

ದಾರಿತೋರೋ ಮಾಯಾಕಾರ ಕರುಣಾಸಾಗರ ಪ

ಪಾರುಗಾಣಲಾರೆನಯ್ಯ ದೂರಮಾಡದಿರಯ್ಯ ಅ.ಪ

ಪರರ ತಂಬೂಲಕಾಗಿ ಯೆನ್ನ ಕರವ ನೀಡಿದೆ
ಹರಿಯೇ ನಿನ್ನ ಭಜನೆಯೆಂಬುದ ಮರೆತು ಮೆರೆದೆನಯ್ಯ ೧

ಸ್ನಾನ ನೇಮ ಜಪ ತಪಂಗಳ ಜ್ಞಾನವಿಲ್ಲವೈ
ಧ್ಯಾನ ಹೋಮ ಭಜನೆ ಪೂಜೆ ಏನನರಿಯೆನಯ್ಯ ೨

ನಿನ್ನ ದಾಸರದಾಸನೆಂದು ಎನ್ನ ಪಾಲಿಸೈ
ಸನ್ನುತಾಂಗ ಮಾಂಗಿರೀಶ ನಿನ್ನ ನಂಬಿದೆ [ನಯ್ಯ] ೩

೨೪೧

ದೀನಶರಣ ಮಾಮನೋಹರಾ ಕೃಪಾಪೂರಾ ಪ

ಗಾನಲೋಲ ತರಣಿರುಚಿರ ನೀಲಗಾತ್ರ ಅ.ಪ

ನೀರಜಾಕ್ಷ ನೀರಜಭವ ನಾರದಾದಿನುತಚರಣಾ
ಚಾರುಚರಿತಾ ನಿಗಮವಿದಿತಾ । ವಾರಣೀಶನಮಿತಾ ೧

ಸುಗುಣ ಭರಿತ ಮಾಂಗಿರೀಶ ಪಾರ್ಥಸೂತ್ರ
[ಅಗಣಿತಗುಣಚರಿತ ಕಾಯೋ ನಾ ಶರಣಾಗತ] ೨

೨೪೨

ದೂರದಿ ನಿಲಿಸಯ್ಯ ರಂಗಯ್ಯ
ದೂರದಿ ನಿಲಿಸಯ್ಯ ನಿನ್ನ ನೀರಜಪಾದವ ಈಕ್ಷಿಸುವಷ್ಟೇ ಪ

ಸಾರಸಭವ ವಾಲ್ಮೀಕಿ ಪುರಂದರ
ನಾರದರೆಲ್ಲ ನಿನ್ನ ಬಳಿಯೊಳೆ ಇರಲೀ ಅ.ಪ

ಹನುಮ ಖಗೇಶ್ವರ ದನುಜ ವೈರಿಗಳೆಲ್ಲ
ಮುನಿ ಮನು ಗಣವೆಲ್ಲ ನಿತ್ಯ ಸೂರಿಗಳು
ಘನ ವೇದಾಂತ ಸಂಗೀತ ಕೋವಿದರು
ವನಜನಾಭನೆ ನಿನ್ನ ಸೇವಿಸುತಿರಲಿ ೧

ಮಣಿದು ಮಣಿದು ನಿನ್ನ ಗುಣಗಳ ಬಣ್ಣಿಸಿ
ಕುಣಿ ಕುಣಿದೆರಗುವ ಭಕ್ತರ ಬಳಿ ನಾ
ತೃಣಕೆ ಸಮ ನಾನಿಣುಕಿ ಬಾಗಿ
ಮಣಿವಂತೆ ಮಾಡೋ ಮಾಂಗಿರಿಯ ರಂಗಯ್ಯ ೨

೨೪೩

ನರಕಾಂತಕ ವರದೇವನೆ ಕರುಣಾಕರ ಗೋವಿಂದಾ ಪ

ಮರೆವೆಯೇತಕೋ ಲೋಲ ಬಾರೋ ಬಾರೋ ಗಾನಲೋಲ ಅ.ಪ

ಧರೆಯೊಳಗಾನುರೆ ನೊಂದೆನೋ
ಪರಿಪರಿಯಾ ಜನುಮಾಂತರ
ಸರಣಿಯೊಳಾನು ಜನಿಸಿ
ಸೊರಗಿ ಸೊರಗಿ ಮರುಗಿ ತಿರುಗಿದೆ ೧

ನಿಲುವುದಕೇ ನೆಳಲಿಲ್ಲವೋ
ನೆಲೆಸಲಿಕೆ ಸ್ಥಳವು ಇಲ್ಲವೋ
ಸಲೆ ಪೊರೆಯುವ ನಾಥನಿಲ್ಲವೋ
[ಕಲಿ]ಕಾಲಪಾಶ ಬದ್ಧನಾದೆನೊ ೨

ತನುವಿದು ತಾ ನಶಿಸಿ ಪೋಪುದು
ಜನುಮಕೋಟಿಯೊಳಾದು ಪೋಪುದು
ಜನನ ಮರಣ ಬೇಡವೊ ನಿನ್ನ
ನಾಮ ಸ್ಮರಣೆಯೊಂದಿರಲೋ ೩

ಕಾಮ ಕ್ರೋಧ ಲೋಭ ಮೋಹ ಭ್ರಾಮಕನಾದೆನ್ನ
ರಾಮದಾಸವಿನುತ ಕೇಶವಾ [ಉದ್ಧರಿಸೋ]
ಆವ ಸುಖವು ಬೇಡವೆನಗೆ ಜೀವ ಪೋಗುವಂದು ನಿನ್ನ
ಸೇವೆಗೈವ ವರವು ಸಾಕೆಲ್ಲೈ ಮಾವಿನಕೆರೆಯರಸ ೫

೨೪೪

ನರಜನ್ಮವನು ಕೊಟ್ಟು ಸಲಹಿದೆ ಯೆನ್ನನು
ಕೊರತೆಯೇನಿಲ್ಲವೋ ಗೋವಿಂದಾ ಪ

ಉರುತರ ಜನ್ಮವ ಸುರುಚಿರಾಂಗಗಳನ್ನು
ಅರಿವು ಇಂದ್ರಿಯಗಳ ಸ್ಮರಣೆಯಿಂ ಕೂಡಿದ ಅ.ಪ

ನಿನ್ನಧ್ಯಾನವ ಗೈವವೊಲೆನ್ನ ಈ ರಸನೆಯು
ನಿನ್ನ ಮೂರ್ತಿಯ ನೋಡಲಿ ಈ ನೇತ್ರಾ
ನಿನ್ನ ಪೂಜಿಸೆ ಹಸ್ತ ನಿನ್ನ ಚರಿತೆಗೆ ತರ್ಕಾ
ನಿನ್ನ ನಮಿಸಲು ಶಿರವು ನಿನ್ನಾಲಯಕೆ ಕಾಲು ೧

ನಿನ್ನ ಪಾದದ ತುಳಸಿಯನ್ನು ಘ್ರಾಣಿಸ
ಲೆನ್ನ ಈ ನಾಸಿಕವಿಹುದಯ್ಯ
ನಿನ್ನ ಬಣ್ಣಿಸುವುದಕೆ ಎನ್ನ ಈ ಮನವಯ್ಯ
ಇನ್ನೇನು ಬೇಡವಯ್ಯ ಸನ್ನುತಾಂಗ ಗೋಪಾಲ ೨

ಧನಕನಕಾಂಬರ [ವಸ]ನದ ಧರ್ಮ ಮೋಕ್ಷದೊ
ಳಿನಿತಾಸೆಯೆನಗಿಲ್ಲ ಕೇಳಯ್ಯ
ಜನುಮ ಜನುಮದೆ ನಿನ್ನ ಘನಪುಣ್ಯ ನಾಮವ
ನೆನೆವ ಭಕ್ತಿಯು ಮಾತ್ರ ಮನದೆ ನೆಲೆಗೊಳಿಸಯ್ಯ ೩

ದೇವದೇವನೆ ನಿನ್ನ ಸೇವಕರಿಗೆ ಯೆನ್ನ
ಸೇವಕನೆನಿಸದೆ ಬಿಡಬೇಡಾ
ದಾಸರಸೇವಿಸಲೆನ್ನ ಜೀವ ತುಡಿಯುವುದೊ ವಿಸಲೆ
ದಾಸರದಾಸ ಶ್ರೀ ಮಾಂಗಿರಿಯರಸ ೪

೨೪೫

ನಾಗಶಯನಾ ನಿನಗೆ ದಯಬಾರದೇನೋ ಪ

ಕೂಗಿ ಬೇಸರವಾಯ್ತು ಬಸವಳಿದೆನೋ ಸ್ವಾಮಿ ಅ.ಪ

ಗುಡಿಯ ಪ್ರಾಕಾರದಲಿ ನಡುನಡುಗಿ ಕಡುನೊಂದು
ಮೃಡನು ತಾ ಬಾಯೆಂದು ಕರೆಕರೆಯೆ
ಕಡುಮುದದಿ ಹಿಂದಿರುಗಿ ಕನ್ನವೊಂದನು ಗೈದು
ಸಡಗರದಿ ಮೈದೋರಿದುಡುಪಿನಾಯಕ ಶೌರಿ ೧

ಪೀತಾಂಬರವ ಮಾರಿ ವಿತ್ತಮಂ ತಾರೆಂದ
ಮಾತೆಯಾ ಮಾತಿಗಂಜಿದ ಕಬೀರಂಗೆ
ಖ್ಯಾತಿಯೀಯುವ ಬಯಕೆ ನಿನಗಾಯಿತಲ್ಲವೇ
ಮಾತಿಂಗೆ ಮರುಳಾಗಿ ನಲಿಯಲಿಲ್ಲವೆ ನೀನು ೨

ಸತಿಯೆಪ್ರಾಣವುಯೆಂದು ಕಾರಿರುಳ ಲೆಕ್ಕಿಸದೆ
ಮತಿಗೆಟ್ಟ ತುಳಸಿದಾಸಂಗೊಲಿದೆಯಲ್ತೇ
ಸತತ ಮಾಂಗಿರಿರಂಗ ಪತಿತಪಾವನಾಯೆಂದು
ನುತಿಸಿ ನಾ ಕೂಗುವುದು ಕೇಳದಿಹುದೇ ಸ್ವಾಮಿ ೩

೨೪೬

ನಾನಾಗಿ ನನಗಾಗಿ ನಮಿಸುವೆನು ಬಾಗಿ
ನೀನಾಗಿ ಕೃಪೆಮಾಡೋ ದೀನಾನುರಾಗಿ ಪ

ನಾನಿನ್ನ ಕೈಗೊಂಬೆ ನೀನೆಗತಿಯೆಂಬೆ
ನೀನನ್ನ ಕರೆತಂದೆ ಶ್ರೀನಾಥ ನಾ ಬಂದೆ ಅ.ಪ

ತರಳನ ಕರೆತಂದೆ ತರುಣಿಕೂಗಿ
[ದರಿಕೆಬಿಡಿಸಿ ಮಾನಿನಿಯ ರಕ್ಷಿಸಿದೆ]
ಹರಿಯೊಂದು ಜಲದಲಿ ನರಳಿದಕರೆಗೆ
ಕರುಣದೊಳೋಡಿ ಬಂದು ಪೊರೆದೆ ನೀತಂದೆ ೧

ಜ್ಞಾನಿಯು ನಾನಲ್ಲ ಮಾನಿಯುಮಲ್ಲ
ಧ್ಯಾನದ ರೀತಿಯ ನಾನರಿತಿಲ್ಲ

ನಾನಾ ಶಾಸ್ತ್ರಂಗಳ ಕಲಿತವನಲ್ಲ
ನೀನೆ ಶರಣೆಂಬೆ ಮಾಂಗಿರಿಯ ರಂಗಯ್ಯ ೨

೨೪೭

ನಾನಾವ ಪರಿಣತನು ನಾನೇನ ತಿಳಿದಿಹೆನು ದೇವ
ನೀನಿರುವುದನು ಕಾಣದವನು ಪ

ಹೀನ ಮಾನವ ನಾನು ಧ್ಯಾನವರಿಯದ ನರನು
ನಾನಾಪರಾಧಗಳ ಮಾಡಿದವನು ಅ.ಪ

ಬೆಣ್ಣೆ ಹಾಲಿನೊಳುಂಟು ಎಣ್ಣೆ ಎಳ್ಳಿನೊಳುಂಟು
ಕಣ್ಣರಿಯದಗ್ನಿಯು ಶಮಿಯೊಳುಂಟು
ಮಣ್ಣಿನಲಿ ಜಲವುಂಟು ಜಲದಿ ಲವಣಗಳುಂಟು
ನೀನೆಲ್ಲರೊಳಗುಂಟು ಎಂದೆಂಬುದರಿಯದ ೧

ವೇದಶಾಸ್ತ್ರಪುರಾಣ ಓದಿದವ ನಾನಲ್ಲ
ವಾದ ವಾಕ್ಯಾರ್ಥಗಳ ಮಾಡಿದವನಲ್ಲ
ಆದಿ ಕೇಶವಪಾದ ಪೂಜೆಗೈದವನಲ್ಲ
ಆದರಿಸಿ ಕಾಯಯ್ಯ ನೀ ಮಾಂಗಿರೀಶ ೨

೨೪೮

ನಾನೊರಲುವಾ ದನಿಯು ಕೇಳದೆ ರಂಗಾ
ನೀನೆನ್ನ ಕಡೆಗಣಿಸೆ ನಿನ್ನ ಬಿರುದಿಗೆ ಭಂಗ ಪ

ನಾರಿಯೊಬ್ಬಳು ಬಾಲರಿಬ್ಬರು ಕರಿಯೊಂದು
ಕ್ಷೀರಾಬ್ಧಿಯೆಡೆಗೈದಿ ಬಾರೋವರೇನೋ
ನಾರದನಾ ಯೆನ್ನಂಗ ಬಾರೆಂದೊಡೇನಾಯ್ತೋ
ನೀರಜಾಂಬಕ ನೀನು ಪರಿದೋಡಲೇಕೋ ೧

ಒಂದೆಲೆಯ ನೈವೇದ್ಯ ಒಂದು ಹಿಡಿಯವಲಕ್ಕಿ
ಒಂದು ಹನಿಗೋಕ್ಷೀರ ಒಂದು ದಳ ಶ್ರೀತುಳಸಿ
ಒಂದು ಫಲವರ್ಪಣಕೆ ತೇಗಲಿಲ್ಲವೆ ಸ್ವಾಮಿ
ತಂದೆಯೆನ್ನಾತ್ಮನೈವೇದ್ಯ ಸಾಲದೆ ರಂಗಾ ೨

ಕಾಲು ಕೈ ಕಣ್ಣು ಬೆನ್ನು ಸೋಲುವಂತಾದಾಗಾ
ನೀಲಾಂಗ ನಿನ್ನ ಸೇವೆಯು ಸಾಧ್ಯವಲ್ಲ
ಕಾಲ ಎಂದೊಳ್ಳಿತ್ತೈ ನಾಲಗೆಗೆ ನೋವಿಲ್ಲ
ಬಾಲ ಗೋಪಾಲ ಮಾಂಗಿರಿಯ ರಂಗ ದಯಮಾಡೊ ೩

೨೪೯

ನಿನಗಾಗಿ ನಾನೇನ ಕೊಡಬಲ್ಲೆನೋ
ನನಗೇನು ಗತಿಯಿಲ್ಲ ಇದಬಲ್ಲೆನೋ ಪ

ನನಗಾಗಿ ನೀನಿರುವೆ ಪರಮೇಶ್ವರಾ
ನಿನಗಾವ ಕೊರೆಯುಂಟು ಸಕಲೇಶ್ವರಾ ಅ.ಪ

ತನುಭಾವ ದಿನಚರ್ಯೆ ನಿನಗರ್ಪಿತ
ಧನಧಾನ್ಯ ಮನದಿಷ್ಟ ಚರಣಾರ್ಪಿತ
ಸನಕಾದಿ ಮುನಿವಂದ್ಯ ವರದಾಯಕಾ
ಮನದಾಸೆ ಬೇಡ ಮಾಂಗಿರಿನಾಯಕಾ ೧

೨೫೦

ನಿನ್ನ ಕಾಣದೆ ಬನ್ನಗೊಂಡೆನೊ ಪನ್ನಗಾರಿ ವಾಹನಾ ಪ

ನಿನ್ನ ಕಂದನೆಂದು ಭಾವಿಸೋ
ಯೆನ್ನ ಪಾಲಿಸೋ ಗೋಪಿನಂದನಾ ಅ.ಪ

ಕರೆದರೆಡೆಗೆ ಬರುವೆಯೆಂದು ಶರಣ ಜನರು ಪೇಳ್ವರಯ್ಯ
ಕರಿಯ ಪೊರೆದು ತರಳ ಧೃವಗೆ ವರವನಿತ್ತುದ ಬಲ್ಲೆನು ೧

ತರಳೆದ್ರೌಪದಿ ಕರವಮುಗಿದು ಕರೆಯಲಾಗ ಬಂದೆರಂಗ
ಬರಿಯಮಾಯೆಯ ತೋರದೆನ್ನ ಪೊರೆಯೋ ಮಾಂಗಿರಿವಾಸರಂಗ ೨

೨೫೧

ನಿನ್ನ ಕಾಣಬಂದೆನಯ್ಯ ಚೆನ್ನಕೇಶವಾ
ನಿನ್ನ ಕಂಡು ನಲಿದೆ ರಮಾರನ್ನ ಮಾಧವಾ ಪ

ಜಳದಿ ಮುಳುಗಿ ತೊಳಲಿ ಬಳಲಿ ಬಹಳನೊಂದೆನು
ತಳವ ಬಯಸಿ ಬಳಸಿ ಬಳಸಿ ನಡುವೆ ನಿಂದೆನೊ
ಬಳಿಯ ಬಳಗವಿಲ್ಲ ನೋವಿನಿಂದ ಬೆಂದೆನೋ
ಸುಳಿಗೆ ಸಿಲುಕಿ ಅಳುಕಿ ಬಳುಕಿ ವಿಧಿಯ ಬೈದೆನೋ ೧

ಕರವ ಮುಗಿದು ಕರೆವೆ ನಿನ್ನ ಕರುಣದಿ ಬಾರೋ
ಮರುಗಿ ಮರುಗಿ ಕೊರಗಿದೆನಗೆ ಚರಣವ ತೋರೋ
ಕರಿಯ ಪೊರೆದೆ ತರಳಗೊಲಿದೆ ಮರುಕವ ಬೀರೋ
ಶಿರವ ಚರಣಕಿರಿಸುವೆ ಮಾಂಗಿರಿಯರಂಗ ಬಾರೋ ೨

೨೫೨

ನಿನ್ನ ಚರಣಾಂಬುಜವೇ ಶರಣವೆನಗೆ
ನಿನ್ನ ಧ್ಯಾನವೇ ನಿತ್ಯ ಕರ್ಮವೆನಗೇ ಪ

ನಿನ್ನ ಮಹಿಮೆಯ ಪೇಳ್ವ ಕಾರ್ಯವೇ ಭೋಜನ
ನಿನ್ನ ಚರಿತೆಯ ಕೇಳ್ವುದೆನಗೆ ಪಾನ ಅ.ಪ

ಗೋವಿಂದ ಗೋಪಾಲ ದೇವ ವನಮಾಲಾ
ಗೋವರ್ಧನೋದ್ಧಾರ ಕರುಣಾಕರ

ಶ್ರೀವಾಸುದೇವ ಹರಿ ಚಕ್ರೀ ಮುರಾರಿ
ದೇವ ದೇವೋತ್ತುಂಗ ಮಾಂಗಿರಿಯ ರಂಗ ೧

೨೫೩

ನಿನ್ನ ನಂಬಿದೆನಯ್ಯ ಚನ್ನಕೇಶವರಾಯ
ಇನ್ನಾದಾರೂ ಕೃಪೆಯ ತೋರಿಸಯ್ಯ ಪ

ಎನ್ನ ಕರ್ಮದ ಫಲದಿ ಬನ್ನಗೊಂಡಿಹೆನಯ್ಯ
ನಿನ್ನ ಚರಣವನೆನಗೆ ಸನ್ನಿಹಿತ ಮಾಡಯ್ಯ ಅ.ಪ

ನಡೆವುದೂ ನಿನಗಾಗಿ ನುಡಿವುದೂ ನಿನಗಾಗಿ
ಪಡೆವುದೂ ನಿನಗಾಗಿ ಎನ್ನಿಸಯ್ಯ
ಕೊಡುವವನು ನೀನಾಗಿ ಪಡೆವವನು ನಾನಾಗಿ
ಪೊಡವಿಯಲೆಷ್ಟುದಿನ ಬಾಳ್ವುದಯ್ಯ ೧

ಕಲಿಯುಗದಿ ಭಜನೆಯಿಂದಲೆ ಭವವು ಕಳೆವುದೆಂದು
ಉಲಿದರ್ರೆ ವ್ಯಾಸಾದಿ ಮುನಿವರ್ಯರು
ಸಲೆ ಲಕ್ಷಜನ್ಮದಲಿ ಕಲುಷ ಪೂರಿತನಾಗಿ
ಬಲುನೊಂದೆ ಕೈ ಪಿಡಿಯೊ ಮಾಂಗಿರಿರಂಗ ೨

೨೫೪

ನಿನ್ನನಲ್ಲದೆ ಯಾರ ಸನ್ನುತಿಸಿ ಫಲವೇನೋ
ಪನ್ನಗಾದ್ರಿನಿವಾಸ ಶ್ರೀವೆಂಕಟೇಶ ಪ

ಮನ್ನಣೆಯು ಬೇಡಯ್ಯ ಎನ್ನ ತಪ್ಪುಗಳನ್ನು
ಮನ್ನಿಸೆಂದೊರಲುವೆನು ಶ್ರೀವೆಂಕಟೇಶ ಅ.ಪ

ತಪ್ಪುಹಾದಿಯ ಹಿಡಿದು ಬೆಪ್ಪನಾಗಿರುವೆನ್ನ
ಒಪ್ಪಿ ಪರಿಪಾಲಿಸುವ ಅಪ್ಪ ನೀನೋ
ತಪ್ಪೊಪ್ಪುಗಳನೆಲ್ಲಾ ಒಪ್ಪಿಸಿದೆ ನಿನಗೆ
ತಿಮ್ಮಪ್ಪ ಮಾಂಗಿರಿವಾಸ ಕೈಹಿಡಿದು ಕಾಯೋ ೧

೨೫೫

ನಿನ್ನವ ನಾನಲ್ಲವೇ ರಂಗಯ್ಯ ನನ್ನವ ನೀನಲ್ಲವೇ ಪ

ನಿನ್ನವ ನಾನಲ್ಲವೆಂದರೆ ಬಿಡಲೊಲ್ಲೆ
ಎನ್ನ ಕೈಬಿಡಲೊಲ್ಲೆ ಎಂಬುದ ನಾ ಬಲ್ಲೇ ಅ.ಪ

ಧನವನು ಕೊಡಬೇಕೇ ರಂಗಯ್ಯ
ಮನೆಮಠಗಳು ಬೇಕೇ
ಕನಕಲಕ್ಷ್ಮಿ ವೈಕುಂಠವಿರಲ್ಕೆ
ಧನ ಮನೆ ಮಠಗಳ ಯೋಚನೆಯೇಕೆ ೧

ಜನಕನು ನೀನಲ್ಲವೇ ರಂಗಯ್ಯ
ತನಯನು ನಾನಲ್ಲವೇ
ತನುಮನಧನಗಳು ನಿನಗೇ ಸಲ್ಲವೇ
ಎನಗಿರ್ಪುದು ನಿನ್ನ ಭಜನೆಯೊಂದಲ್ಲವೇ ೨

ನನ್ನದೇನಿಹುದಯ್ಯ ರಂಗಯ್ಯ
ನಿನ್ನದೇ ನಿಜವಯ್ಯ
ನಿನ್ನ ಕೈಗೊಂಬೆ ನಾನಾಗಿಹೆನಯ್ಯಾ
ಎನ್ನವ ನೀ ಮಾಂಗಿರಿಯ ರಂಗಯ್ಯ ೩

೨೫೬

ನಿನ್ನ ಸೇವಕ ನಾನಲೆ ರಂಗಯ್ಯ ।
ನನ್ನ ಸ್ವಾಮಿಯು ನೀನಲೆ ಪ

ನಿನ್ನ ನಾಮದ ಭಜನೆ ಯೆನ್ನುಸಿರಾಗಲಿ
ನನ್ನನುದ್ಧರಿಪುದು ನಿನ್ನದಾಗಿರಲಯ್ಯ ಅ.ಪ

ನಿನ್ನ ಚರಿತೆಯ ಕೇಳಲಿ ಕಿವಿ ನಿನ್ನನೀಕ್ಷಿಸಲೆನ್ನ ಕಂಗಳು
ನಿನ್ನ ಪೂಜಿಸಲೆನ್ನಕೈಗಳು ನಿನ್ನ ಹೊಗಳಲೆನ್ನ ರಸನೆಯು ೧

ತಂದೆ ನೀನೆನ್ನತಂದೆ ನಾನು ಅದರಿಂದ ಬಂದೆ ನಿನ್ನಯ ಹಿಂದೆ
ಮುಂದೆ ಪೋಗುತಲಿ ಒಂದೆ ನಿಮಿಷದಲಿ
ಕಂದನೆನ್ನಿದಿರಿಂದ ಮರೆಯಾದೆ ೨

ಅಂದಿನಿಂದ ಮುಕುಂದ ನಿನ್ನರವಿಂದಚರಣದ್ವಂದ್ವ ವಿರಹದಿ
ನೊಂದು ನಿಂದೆಡೆನಿಲ್ಲದಲೆವೆನೋ ತಂದೆ ಮಾಂಗಿರಿರಂಗ ೩

೨೫೭

ನಿನ್ನೊಳೇನ ಬೇಡಿಕೊಂಬೆನೋ ನಾ ಸನ್ನುತಾಂಗ ಪ

ನಿನ್ನ ಪಾದವನ್ನು ಭಜಿಪ ಮನದ ಹೊರತು ಅ.ಪ

ಮನೆಯು ಬೇಡ ಮಠವು ಬೇಡ
ಧನವು ಬೇಡ ಕನಕ ಬೇಡ
ಮನದ ಶುದ್ಧಿಯಿಂದ ನಿನ್ನ ನೆನೆವ
ಮನದ ಭಾವ ಹೊರತು ೧

ಸತಿಯು ಸುತರು ಗತಿಯು ಮತಿಯು
ಹಿತರು ಸಖರು ನೀನೇ ಎಂಬ

ಮತವನಾಂತು ನಿನ್ನ ಪೂಜೆ
ವ್ರತವು ಸಾಕು ಎನ್ನದೇ ೨

ಗಂಗೆ ಸಿಂಧು ಯಮುನೆ ಕೃಷ್ಣೆ
ತುಂಗಭದ್ರೆ ತಪತಿ ಕಪಿಲೆ
ಮಂಗಳ ಕಾವೇರಿ [ಹೇಮವತಿಯ]
ಮಾಂಗಿರೀಶ ನೀನೆ ಎನ್ನದೆ ೩

೨೫೮

ನೀ ಕೃಪೆ ಮಾಡೋ ಹರಿಯೇ ಲೋಕವಿನುತ ಸಿರಿಯೇ ಪ

ಶ್ರೀಕರ ಭಾಸ್ವರಾ ಭಕ್ತಸುಧಾಕರ ಶೋಕಹರಣಾ ನೀ ಶೂರಾ ಅ.ಪ

ನಡು ನೀರೊಳೆನ್ನ ಕೈಯ ಬಿಡಬೇಡ ಮಾರನಯ್ಯ
ಅಡಿಗೆರಗುವೆನಯ್ಯ ಕೊಡು ನಿನ್ನ ನಾಮಾವಳಿಯ
ದೃಢದೆ ಭಜಿಪೆನಯ್ಯ ಮೃಡನುತಾನೇ ಗೋವಿಂದಯ್ಯ ೧

ಕಳೆದ ದುರಿತಾವೃತ ಉಳಿದುದು ವೋವರಾ
ಅಳಿವ ಕಾಲವಿದಿನ್ನು ಬಳಲಿಸೋಲುವೆ[ನಯ್ಯ]
ಘಳಿಲನೆ ನಿನ್ನ ನಾಮಾವಳಿಯ ಸ್ಮರಣೆಯ ೨

ಅನ್ಯರ ಭಜಿಸೆನು ಅನ್ಯರ ನುತಿಸೆನು
ಅನ್ಯರಿಗೆರಗೆನು ಅನ್ಯರ [ಪೂಜಿ]ಸೆನು [ಅ
ನನ್ಯ ಶರಣನೆ ಮನ್ನಿಸೊ ಶರಣುಬಂದಿಹೆನು] ೩

ಕಾವಧೀರನು ಇನ್ನು ಅವನೇ ಶ್ರೀಹರಿ
ಸೇವಕರಿಗೆ ನಾನು ಸೇವಕನೆನ್ನುತಾ
ಭಾವಿಸೋ ದೇವದೇವಾ ಮಾವಿನಾಕೆರೆರಂಗ ೪

೨೫೯

ನೀ ಕೈಯ ಬಿಡಬೇಡವೋ ನರಹರಿ ಪ

ನೀ ಕೈಯ ಬಿಡಬೇಡ ನಾಕೆಟ್ಟರೂ ಬೇಡ
ನೀ ಕೊಟ್ಟ ಫಲವಿನ್ನು ಸಾಕೋ ಮಾಂಗಿರಿರಂಗ ಅ.ಪ

ನನ್ನ ಕಾಯುವ ಭಾಗ ನಿನ್ನದಾಗಿರಲಯ್ಯ
ಇನ್ನಾವುದನು ಕೇಳ್ವುದೆನ್ನ ಭಾವದೊಳಿಲ್ಲ
ಸನ್ನುತಾಂಗ ಕೃಷ್ಣ ಪನ್ನಗಶಯನ
[ಉನ್ನತದಿ ಸದಾ ಭಜಿಸುವೆನು ನಿನ್ನ] ೧

ಆಡುವಾ ನುಡಿಗಳು ನೋಡುವಾ ನೋಟವು
ಮಾಡುವ ಕಾರ್ಯವು ನಿನ್ನದಾಗಿರಲು
ಮೂಡಿಸು ಮನದಲ್ಲಿ ತವಪಾದಭಕ್ತಿಯ
ಜೋಡಿಸಿ ಕೈಗಳ ಮುಗಿವೆನೋ ರಂಗ ೨

೨೬೦

ನೀ ತಂದೆ ನಾಕಂದನಯ್ಯ ರಂಗಯ್ಯ ಪ

ಪಾತಕಿಯು ನಾನೆಂದೆ ಘಾತಕನು ನಾನೆಂದೆ
ನೀತಿಗಳ ಕಲಿಸೆಂದೆನ್ನ ತಂದೆ ನಿನ್ನ ಹಿಂದೆ ಅ.ಪ

ತಂದೆ ನೀ ಕರೆತಂದೆ ಎಂದು ನಂಬುತೆ ಬಂದೆ
ತಂದೆ ನೀ ಕೈಬಿಟ್ಟು ಹಿಂದೆ ನಿಂದೆ
ನಿಂದೆಯಲಿ ನಾನೊಂದೆ ಬಂದೆ ಭವದಲ್ಲಿ
ಮಂದರೋದ್ಧಾರ ಗೋಪಾಲ ತಾಪವತಂದೆ ೧

ಹಿಂದೆ ಜನ್ಮಂಗಳಲಿ ಬೆಂದು ಬಳಲಿದೆನಯ್ಯ
ಇಂದು ನರಜನ್ಮದಲಿ ಬಂದೆನಯ್ಯ
ಬಂಧು ಬಳಗವಕಾಣೆ ಕಂದು ಕುಂದಿದೆನಯ್ಯ
ಇಂದೀವರಾಕ್ಷ ಸಾನಂದ ಭೈರವೀಪ್ರಿಯಾ ೨

ಮುಂದಿನಾ ಪಥವಾವುದೆಂದರಿಯೆ ಮದನಾಂಗ
ಮಂದಮತಿಯನು ನೀಗಿಸೆಂದೆನುವೆ ರಂಗ
ಬಂದ ಸುಖದು:ಖಗಳನೊಂದೆಣಿಸು ನೀಲಾಂಗ
ಇಂದಾದರೂ ಕರವ ಪಿಡಿ ಮೋಹನಾಂಗ ೩

ಎಂದು ತವಪಾದಾರವಿಂದವನು ಸೇರಿಸುವೆ
ಅಂದು ಜನ್ಮವು ಸಫಲವೆಂದು ನಂಬಿರುವೆ
ಮುಂದೆ ಜನ್ಮಗಳಿಲ್ಲ ಎಂದು ನಾನಂಬಿರುವೆ
ಸಂದೇಹವೇತಕೆ ನಿನ್ನ ಸೂತ್ರದೋಲ್ ಮೆರೆದೆ ೪

ಮಂದಾಕಿನೀಜನಕ ನಂದಗೋಪನ ಕಂದ
ಇಂದೀವರಾಕ್ಷ ಮುಚುಕುಂದವರದಾ
ಎಂದೆಂದು ವಂದನೆಯ ಮಾಳ್ಪುದೆನಗಾನಂದ
ಇಂದದನು ಕರುಣಿಸೈ ಮಾಂಗಿರಿಯ ಗೋವಿಂದ ೫

೨೬೧

ನೀನೆ ಗತಿಯೆನಗೆ ಮಾಂಗಿರಿಯ ರಂಗ ಪ

ನಾನಾ ಜನುಮವ ನಾನೇ ಪಡೆದವ
ಮಾನವ ಜನ್ಮವ ನೀನೆನಗಿತ್ತವ ಅ.ಪ

ಹಿಂದಿನ ಜನ್ಮದ ಅಂದವ ಮರೆಸಿದು
ದೊಂದುಪಕಾರವೋ ಇಂದಿರೆಯರಸ

ಇಂದೆನ್ನ ಬಳಿಗೆ ನೀ ಬಂದು ಪಾಲಿಸಬೇಕು
ಮುಂದಿನ ಭವ ಬೇಡೆಂದು ಬೇಡುವೆನಯ್ಯ ೧

೨೬೨

ನೀನೆ ಜಗದಾನಂದದಾಯಕ ರಂಗಾ
ದೀನರಕ್ಷಕ ನೀನೊಬ್ಬನೇ ರಂಗಾ ಪ

ಎನ್ನಂಥ ಶರಣಾರ್ಥಿ ಎಷ್ಟಾದರುಂಟಯ್ಯ
ನಿನ್ನಂಥ ದಾತಾರ ಇನ್ನುಂಟೆ ರಂಗಾ ಅ.ಪ

ಬಾಲನ ಪೊರೆದವನಾರಯ್ಯಾ ಪಾಂಚಾಲಿಗೆ ಒಲಿದವನಾರಯ್ಯ
ಆಲದೆಲೆಯ ಹಾಸಾಂತನಾರಯ್ಯಾ ।
ಬಲುದೀನನು ನಾನೊಬ್ಬನಹುದಯ್ಯ ೧

ಮಾನ ನಿನ್ನದು ಪ್ರಾಣ ನಿನ್ನದು ಸ್ಮರನಯ್ಯ
ನಾನು ನಿನ್ನವನೋ ಮಾಂಗಿರಿಯ ರಂಗಯ್ಯ ೨

೨೬೩

ನೀನೆ ತಾಯಿಯು ನೀನೆ ತಂದೆಯು ನೀನೆ ಬಾಂಧವನು ರಂಗ ಪ

ನೀನೆ ನಿತ್ಯನನಾದಿದೇವನು ನೀನೆ ಸತ್ಯಲೋಕೇಶನೀಶನು ಅ.ಪ

ಲೋಕಭರಿತ ಅನೇಕಚರಿತ ಲೋಕಪಾಲಕನು
ಲೋಕದುದಯ ವಿಭವ ಲಯಗಳೇಕಕರ್ತನು
ಶ್ರೀಕರಾ ಕೃಪಾಕರಾಸುರ ಭೀಕರಾಂಗನು
ನಾಕಪತಿ ಪಿನಾಕಿ ವಿನುತನೂ ಕಳತ್ರನು ೧

ನಂದಗೋಪನ ಕಂದ ಕೃಷ್ಣ ನೀನೆಂದು ನಂಬಿದೆನೋ
ಮಂದಹಾಸವದನವ ನಾನೆಂದು ನೋಡುವೆನೋ

ಸುಂದರಾರವಿಂದ ಪಾದವನೆಂದು ಪೂಜಿಪೆನೋ
ತಂದೆ ಮಾಂಗಿರಿರಂಗನೊಲವನೆಂದು ಪಡೆದೇನೋ ೨

೨೬೪

ನೀನೊಲಿದು ನಿನ್ನ ಸೇವೆಯನು ಕೊಡು ಹರಿಯೇ ಪ

ನಾನೊರಲುವಾ ಕೂಗು ಕೇಳಿಸದೆ ದೊರೆಯೇ ಅ.ಪ

ಸಂಸಾರ ಸುಖಗಳನು ಅನುಭವಿಸಿ ಸಾಕಾಯ್ತು
ಹಿಂಸೆ ಚಿಂತೆಯ ರುಚಿಯ ತಿಳಿದುದಾಯ್ತು
ಹಂಸನೀರೊಳಗಿದ್ದು ನೀರರಿಯದಂತಾಯ್ತು
ಕಂಸಾರಿ ಸಾಕಿನ್ನು ಭೂಮಿ ಬೇಸರವಾಯ್ತು ೧

ಶತಪಾಪಿ ನಾನಾಗಿ ಪತಿತಜನ್ಮವನಾಂತು
ವ್ರತ ನೇಮ ನಿಷ್ಠೆಗಳ ಮರೆತು ಕುಳಿತು
ಮಿತವಿಲ್ಲದನ್ಯಾಯಕಾರ್ಯದಿಂ ಬಸವಳಿದು
ಸತಿಸುತೆಯರಾಟದಲಿ ನಿನ್ನ ಮರೆತೆ ೨

ಕರುಣಾ ಸಮುದ್ರ ನೀನಲ್ಲವೇ ಹರಿಯೇ
ಕರಣ ಜನಪಾಲ ನೀನಲ್ಲವೇ ಹರಿಯೇ
ಕರವ ಮುಗಿವೆನು ಎನ್ನ ಅಪರಾಧಗಳ ಕ್ಷಮಿಸಿ
ಪೊರೆಯೋ ಮಾಂಗಿರಿರಂಗ ಕರುಣಾಂತರಂಗ ೩

೨೬೫

ಬೆಳೆಬೆಳೆದು ಮನದಾಸೆಗಳ ಕಳೆದೆನಯ್ಯ
ಸುಳಿದಿರ್ಪುದೊಂದಾಸೆ ಅದ ಪೇಳ್ವೆನಯ್ಯ ಪ

ತೊಳತೊಳಲಿ ಬಳಬಳಲಿ ಬೆಂಡಾದೆನಯ್ಯ
ಕೊಳಕೊಳದಿ ಮುಳುಮುಳುಗಿ ತಳಮಳಿಪೆನು ಅ.ಪ

ಅದು ನಿನ್ನ ಬಳಿಸಾರ್ದು ನಿಲ್ವಪರಿಯಾಸೆ
ಅದು ನಿನ್ನ ಪಾದಗಳ ನೋಡಿ ನಲಿವಾಸೆ
ಅದು ನಿನ್ನ ನಾಮಗಳ ಪಾಡಿನುಡಿವಾಸೆ
ಅದು ನಿನ್ನ ನಸುನಗೆಯ ಬೇಡಿಕೊಂಬಾಸೆ ೧

ಅದು ನಿನ್ನ ಅಡಿಗಳಿಗೆ ಮುಡಿಯಿಡು[ವಾಸೆ]
ಅದು ನಿನ್ನ ಕೊರಳಿಗೆ ಮಾಲೆಯಿಡು[ವಾಸೆ]
ಅದು ನಿನ್ನ ಬೆಡಗುಗಳ ನುಡಿನುಡಿಯೊಳೆಸೆವಾಸೆ
ಅದು ಮಾಂಗಿರಿಯ ರಂಗ ನಿನ್ನ ಕೃಪೆಯಾಸೆ ೨

೨೬೬

ಬೇಡುವೆನು ಇದನೊಂದ ಕರುಣಿಸೋ ಹರಿಯೇ
ಬೇಡವೆಂಬುದನೆಲ್ಲ ಏಕೀವೆ ಹರಿಯೇ ಪ

ಒಪ್ಪಿಡಿಯ ಅವಲಕ್ಕಿಗೊಲಿದವನು ನೀನಂತೆ
ಒಪ್ಪದಿಂದೆಲೆಯ ತಿಂದು ತೇಗಿದೆಯಂತೆ
ತಪ್ಪುನೂರೆಂಟುಗಳು ಮನ್ನಿಸಿದೆ ನೀನಲ್ತೇ
ಸರ್ಪಶಯನನೆ ನಿನ್ನ ನಾಮಭಜನೆಯ ಮಾತ್ರ ೧

ಘೋರ ಪಾಪಿಯು ಮಗನ ಕರೆದಾಗ ಕರುಣಿಸಿದೆ
ನಾರಿ ಹೊರದೂಡಿದ ತರಳನನು ಕಾಯ್ದೆ
ಭಾರಿ ಮಕರಿಯ ಸೀಳಿ ಕರಿಯನೊಂದನು ಕಾಯ್ದೆ
ನೀರಜಾಸನಪಿತನೆ ನಿನ್ನ ಸ್ಮರಣೆಯ ಮಾತ್ರ ೨

ನಿನ್ನ ನಾಮದ ಭಜನೆ ಎನ್ನ ರಸನೆಯೊಳಿರಲು
ಇನ್ನಾವ ಭಾಗ್ಯಗಳ ಬೇಡಲಾರೆನೋ ದೇವ
ಪನ್ನಗೇಂದ್ರ ವಿಭೂಷಣ ಪರಿಪಾಲಿಸೈ ಶ್ರೀಶಾ
ನಿನ್ನ ಧ್ಯಾನವ ಮಾತ್ರ ಮಾಂಗಿರೀಶ ೩

೨೬೭

ಬೇಡುವೆನೊಂದು ಬೇಡತಕ್ಕುದು ಎಂದು
ಬೇಡ ವರಗಳೆನಗೆ ನೀಡು ಅದನೊಂದ ಪ

ಬೇಡ ಸುಖವು ಕೃಷ್ಣ ಬೇಡ ಫಲವಿಫಲ
ಬೇಡ ಮಾನಾಪಮಾನ ಬೇಡ ಜಯಾಪಜಯ ಅ.ಪ

ನಿದ್ರೆಸುಖವು ಬೇಡ ಭದ್ರಭೋಜನ ಬೇಡ
ತಿದ್ದಿದ ವಾಸ್ತುವುಬೇಡ ಮಧುರವು ಬೇಡ
ಮೃದುತರಾಂಬರ ಬೇಡ ಸದನ ವಿತ್ತವು ಬೇಡ
ಹೃದಯದಿ ರಾಮನಾಮ ಪರಿಹರಿಸಲು ಬೇಡ ೧

ನರಕ ಬಾಧೆಯ ಪರಿಹರಿಸಲು ಬೇಡ
ದುರಿತ ಸಂತತಿಗಳ ತೊರೆಯಿಸ ಬೇಡ
ಸುರಲೋಕ ಸಾಮ್ರಾಜ್ಯ ವರವನೀಯಲು ಬೇಡ
ನಿರುತ ನಿನ್ನಯ ಪದ್ಮ । ಚರಣವ ತೋರೆಂದು ೨

ಮಾವಿನಕೆರೆರಂಗ ಶ್ರೀವನಿತಾ ಸಂಗ
ಭಾವಜಪಿತರಂಗ ಗರುಡ ತುರಂಗ
ಭಾವನೆಗೈದು ಯೆನ್ನ ಸರ್ವಜನ್ಮದೆ ನಿನ್ನ
ದಿವ್ಯನಾಮವ ಭಜನೆಗೈವ ಬುದ್ಧಿಯು ಮಾತ್ರ ೩

ನೀ ಮರೆಯದಿರಯ್ಯ ನಾಮರೆಯುವನಯ್ಯ
ಕಾಮಿತವೊಂದಿದ ನೀಡೊ ಮುಕುಂದ
ಸೋಮಧರ ವಂದಿತ ರಾಮದಾಸಾರ್ಚಿತ
ಭೀಮವಿಕ್ರಮರೂಪ ಅಮಿತಕಲಾಪಾ ೪

೨೬೮

ಬೇಡುವೆನೋ ಗೋವಿಂದಾ ಬೇಡಬೇಡವೀ ಬಂಧ ಪ

ಪಾಡಿಪಾಡಲಾನಂದಾ ನೋಡಿ ನೋಡಲತ್ಯಾನಂದ ಅ.ಪ

ಕಡವರವೀಯಬೇಡ ಪೊಡವಿಯ ಸುಖಬೇಡ
ಕಡುಲೋಭ ಮೋಹಬೇಡ ದೃಢ ಭಕ್ತಿಯನು ಮಾತ್ರ ೧

ನರಕದ ಬಾಧೆಯು ಪರಿಹರಿಸಲು ಬೇಡ
ನಿರುತ ನಿಮ್ಮಯ ನಾಮ ಸ್ಮರಣೆ ಸುಖವು ಮಾತ್ರ ೨

ಜನನ ಮರಣಗಳ ಕೊನೆಗಾಣಿಸಲಿ ಬೇಡ
ಅನಿತು ಜನುಮದಿ ನಿನ್ನ ನೆನೆವ ಬುದ್ಧಿಯು ಮಾತ್ರ ೩

ಮಾಂಗಿರಿಯರಸನೆ ತುಂಗ ಕೃಪಾಂಗನೆ
ಹಿಂಗದೆ ನೀನೆನ್ನಂತರಂಗದೊಳಿರುವುದ ಮಾತ್ರ ೪

೨೬೯

ಮನವು ಸ್ಥಿರವಾಗಲಿಲ್ಲ ಧನದಾಸೆ ಬಿಡಲಿಲ್ಲ
ಸನುಮತವೆಂಬುದಿಲ್ಲ ಅನುನಯವಿಲ್ಲ ಪ

ಮಮತೆಯೆಂಬುದು ಇಲ್ಲ ಇನಿತುಗುಣವಿಲ್ಲ
ವನಜನಾಭನ ನೆನೆವಾ ತನುವೆನ್ನೊಳಿಲ್ಲಾ ಅ.ಪ

ಪಂಚಭೂತಗಳೆಲ್ಲ ಸಂಚು ಮಾಡುತಲಿಪ್ರ
ಪಂಚದ ಸುಖದೊಳು ಪಂಚೇಂದ್ರಿಯಗಳಾ
ಹಂಚುತೆ ಮನವನು ಚಂಚಲಗೈದುವಲ್ಲ
ಅಂಚೆಯಿಲ್ಲದ ಸರಸಿಯಂತಾಗಿಯೆನ್ನ ೧

ಹರಿಯ ನೋಡುವ ನೇತ್ರ ಪರನಾರಿಯರ ಸೊಬಗ
ಹರಿಯ ಪೂಜಿಪ ಹಸ್ತ ಪರರ ವಿತ್ತಂಗಳರಸಿ
ಹರಿ ತುಳಸಿಯ ತೊರೆದು ಪರಿಮಳವ ನಾಸಿಕವಾಂತು
ಹರಿಗೆರಗುವ ಶಿರವು ಗರುವವ ಬಯಸಿದೆ ೨

ಚಕ್ರಪಾಣಿಯಮರೆದು ತಕ್ರಾನ್ನವನು ಸವಿದು
ಮುಕ್ತಿ ಚರಿತೆಯ ತೊರೆದು ಅಕ್ಕರೆಯಿಂದಾ
ರೊಕ್ಕ ವಿಷಯವ ಕರ್ಣ ಠಕ್ಕು ಕೌಳಿಯ ಮೆದುಳು
ಸೊಕ್ಕಿ ಬಯಸುತಲಿವೆ ದಿಕ್ಕಾರೋ ಯೆನಗೇ ೩

ಸುಡುಯಿದುರ್ನೇತ್ರವ ಕೊಡು ದಿವ್ಯದೃಷ್ಟಿಯ
ತೊಡೆ ಯೀ ದುರಿಂದ್ರಯಗಳ ಕೊಡು ಸತ್ವಗುಣವಾ
ದೃಢಗೈದು ಒಮ್ಮೆ ಮಾತ್ರ ಅಡಿಗೆರಗುವೆನಯ್ಯ
ಬಿಡಬೇಡ ಎನ್ನ ಕೈಯ ಮಾವಿನಾಕೆರೆರಂಗಾ ೪

೨೭೦

ಮರೆಯುವೆ ಏತಕೋ ಗರುಡಗಮನ ಯೆನ್ನಾ
ದುರಿತವನಾರ್ಜಿಸಿ ಕೊರಗುವೆನ್ನನು ನೀ ಪ

ಹದಿನೆಂಟು ಸಾಸಿರ ಉದರದೊಳುದಿಸುತೇ
ಹೃದಯದಿ ನಿನ್ನ ನಾಮಾ ಒದಗಲಿಲ್ಲವೋ ೧

ಧರೆಯೊಳು ನರಜನ್ಮ ಹಿರಿದೆಂದು ಪೇಳ್ವರು
ತ್ವರಿತದಿ ನಿನ್ನ ನಾಮಸ್ಮರಣೆಯನೀಯದೆ ೨

ಸೋಮಶೇಖರನುತ ಕಾಮಜನಕ ಹರಿ
ಪ್ರೇಮದಿ ಪಾಲಿಸೆನ್ನ ರಾಮದಾಸಾರ್ಚಿತಾ ೩

೨೭೧

ಮರೆವುದುಚಿತವೆ ರಂಗ ದಾರಿ ತೋರಿ ಪ

ಯೆನ್ನ ಕಾವರನ್ಯರಿಲ್ಲ ನೀಲಾಂಗ ಅ.ಪ

ಧರೆಯ ವೈಭವ ನಿತ್ಯವೆಂದು ಪರರ ಸಿರಿಯ ಹರಣಗೈದು
ನಿರುತ ದುರಿತಕಾರ್ಯಗೈದು ಪರಮ ಪಾಪಿಯಾದೆನೆಂದು ೧

ಕರುಣಶರಧಿ ನೀನೆಯೆಂದು ಸ್ಮರಿಸುವವರ ಪೊರೆವನೆಂದು
ಶರಣಜನರು ಬಳಿಗೆ ಬಂದು ಕರೆಯದಿಹರೆ ದೀನಬಂಧು ೨

ಅಂಗದಿಂದ ಗೈದ ಪಾಪ ಕಂಗಳಿಂದ ಗೈದ ಪಾಪ
ಭಂಗಗೈವರಿಲ್ಲ ಭೂಪ ಮಾಂಗಿರೀಶ ಜ್ಞಾನದೀಪ ೩

೨೭೨

ಮಾರ್ಗವೇ ಕಾಣಿಸದು ವೈಕುಂಠಕೆ
ಪೇರ್ಗಿರಿಗಳ ದಾಂಟಲಾರ್ಗಳವೋ ಕಾಣೆ ಪ

ಭೋರ್ಗರೆವುದು ಬಲಮಾರ್ಗದಿ ಜಲನಿಧಿ
ಕಾರ್ಗಡಲು ಎಡ ಮಾರ್ಗದಿ ಕಗ್ಗತ್ತಲೆ ಅ.ಪ

ಹಿಂದೆ ಮೃಗಂಗಳ ಸಂದಣಿಯಾರ್ಭಟ
ದಿಂದ ಮನದ ಧೈರ್ಯಕುಂದಿದುದಕಟ ಮ
ಹಾಂಧಕೂಪದೊಳೆನ್ನ ಎದೆ ಕುಸಿದು
ಬಂಧಿಸಿತೆನ್ನ ಕಾವ ಬಂಧುಗಳಿಲ್ಲ ೧

ಕೂಪದಿ ಕ್ರಿಮಿಗಳು ಕೋಪಿಸಿ ತನುವನು
ವ್ಯಾಪಿಸಿ ಕಡಿಯೆ ಸಂತಾಪವನಾಂತೆ

ಈ ಪರಿಯೆಲ್ಲವು ತಾಪತ್ರಯಂಗಳ
ಧೂಪ ದೀಪಗಳ ಪಾಪದ ಫಲವೋ ೨

ದಡವನು ಕಾಣದೆ ತಡಬಡಿಸುವೆನೋ
ಮೃಡನು ತಾ ಮಾಂಗಿರಿಯೊಡೆಯ ಶ್ರೀರಂಗ
ಕಡುಪಾತಕಿಯ ಕೈಹಿಡಿದೆತ್ತಿ ಕೃಪೆಯಿಂದ
ತಡಿಗೆ ಸೇರಿಸಿ ನಿನ್ನ ಅಡಿಯಪಿಡಿಸೋ ದೇವಾ ೩

೨೭೩

ಯಾಕೆನ್ನ ಎದುರಲಿ ನಿಲ್ಲುವುದಿಲ್ಲೋ
ಯಾಕೆನ್ನಯ ಕರೆ ಕೇಳುವುದಿಲ್ಲೋ ಪ

ಯಾಕೆನ್ನ ಅರ್ಚನೆಗೊಲಿಯುವುದಿಲ್ಲೋ
ಯಾಕೆನ್ನೊಳು ದಯಮಾಡುವುದಿಲ್ಲೋ ಅ.ಪ

ತರಳ ಧೃವನ ಮೊರೆ ಕೇಳಿಸಿತಲ್ಲ
ಕರಿ ಎತ್ತಿದ ಸುಮ ಕಾಣಿಸಿತಲ್ಲ
ಅರಿ ಅನುಜನ ಸೇವೆ ಹಿರಿದಾಯ್ತಲ್ಲಾ
ಕರುಣ ಎನ್ನೊಳಗೇಕೆ ಬರದೋ ಕೃಷ್ಣಯ್ಯ ೧

ಅಗಣಿತ ಗೋಪಿಯರೆಡೆಯಲಿ ನಲಿದೆ
ನಗಧರನಾಗಿ ಗೋಪಾಲರ ಪೊರೆದೆ
ಖಗನಿದ್ದೆಡೆಗೇ ಭರದಲಿ ನಡೆದೆ
ನಗುಮೊಗದರಸ ಮಾಂಗಿರಿಯ ರಂಗಯ್ಯ ೨

೨೭೪

ಯಾಕೆ ನಿರ್ದಯವೋ ದೇವ ದೇವ ಸ್ವಭಾವ
ಯಾಕೆ ಮರೆತೆ ದೇವಾ [ಎನ್ನನು] ಪ

ಯಾಕೆಂಬುದರಿಯೆನಾ ಶ್ರೀಕರಾಂಬುಜನೇತ್ರ
ಕಾಕುಮನುಜನೆಂದು ನೀಕರಿಸಿದೆಯೋ ಅ.ಪ

ಉದರ ಪೋಷಣೆಗಾಗಿ ವಿಧ ವಿಧ ದೇಶದಿ
ಬಧಿರ ಹೆಳವ ಮೂಗ ಅಧಿಕರೋಗಿಯು ಅಂಧಾ
ವಿದಿತ ವೇಷಗಳಿಂದ ಅಧಿಕ ಬಳಲಿದೆನಯ್ಯ
ಪದುಮಾಕ್ಷ ಪರಂಧಾಮ ಮುದದೆ ಪೋಷಿಸಲು ೧

ಪರರ ನಿಂದನೆ ಗೈದೆ ನೆರೆಯವರನು ಕೊಂದೆ
ಪರರ ಸ್ವತ್ತನು ತಂದೆ ಪರರನ್ನವನು ತಿಂದೆ
ದುರಿತಕಾರ್ಯವಗೈದೆ ನರಹರಿ ನಿನ್ನ ಮರೆದೆ
ಪರರು ಕಾವವರಿಲ್ಲ ನೆರೆನಂಬಿದೇ ನಿನ್ನ ೨

ಸಾವು ಜನ್ಮಂಗಳಿಂದ ನೋವು ಬಂಧನವಡೆದು
ಬೇವಿನಂದದೆ ದುರ್ಗುಣಭಾವವ ತಳೆದೆನೋ
ಕಾವರಿಲ್ಲವೋಯೆನ್ನ ಶ್ರೀವನಿತಾರನ್ನ
ಸಾವುನೋವನು ಬಿಡಿಸೊ ಮಾವಿನಕೆರೆರಂಗ ೩

೨೭೫

ಯಾರ ಪಾಡಿದರೇನು ಯಾರ ಬೇಡಿದರೇನು
ಯಾರು ಕೈಹಿಡಿದೆತ್ತಿ ಪಾಲಿಸುವನು ಪ

ನೀರಜಾಸನ ನೊಂದು ನೂರುವರ್ಷ ಬಾಳೆಂದ
ಮಾರವೈರಿಯು ಕರ್ಮ ಕಳೆಯಲೆಂದು ಅ.ಪ

ವೀರಪಾರ್ಥನು ಧುರದಿ ಹೊರಾಡಬೇಕೆಂದ
ಮಾರುತಿಯಶ್ರೀರಾಮ ಕರುಣೆ ಬರಲೆಂದ
ನಾರದನು ನಾರಾಯಣನ ಮಂತ್ರ ಭಜಿಸೆಂದ
ಕಾರಣದಿ ಮಣಿವೆ ಮಾಂಗಿರಿಯರಂಗ ಗೋವಿಂದ ೧

೨೭೬

ಯಾವಪರಾಧ ಮಾಡಿದೆನೋ ರಂಗ
ಈ ವಸುಧೆಯೊಳಿನ್ನು ಬಳಲುವೆನೋ ರಂಗ ಪ

ಯಾವ ಪಕ್ಷಿಗೆ ಬಲೆ ಬೀಸಿದೆನೋ ರಂಗ
ಯಾವ ಜೀವಿಗೆ ಗಾಳ ಹಾಕಿದೆನೋ ರಂಗ ಅ.ಪ

ಯಾವ ಎಳಗೂಸನು ಬಾವಿಗೆ ತಳ್ಳಿದೆ
ಯಾವ ತಪಸಿಗೆ ಭಂಗವಗ್ಯೆದೆ
ಯಾವ ದಂಪತಿಗಳ ಬೇರೆಗ್ಯೆದೆನೊ ರಂಗ
ಜೀವನು ನಾನೇನ ವಂಚನೆಗ್ಯೆದೆನೊ ೧

ಅಪರಾಧಂಗಳು ವಿಪರೀತವಾದರೂ
ವಿಪುಲ ಕೃಪಾಕರ ನೀನಹುದಯ್ಯ
ಅಪಕೃತಿಗ್ಯೆದರೂ ಉಪಕೃತಿಗ್ಯೆವೆ ನೀ
ಕುಪಿತನಾಗದೆ ಕಾಯೋ ಮಾಂಗಿರಿರಂಗ ೨

೨೭೭

ಲೋಕಪಾಲನೆ ನಾಕವಂದ್ಯನೆ ಸಾಕುಬಿಡು ಚಲವಾ
ಯಾಕೆ ಕೋಪ ದೀನ ನಾನೆಲ್ಯೆ ಶ್ರೀಕರ ಸುಗುಣಾ ಪ

ಕಾವರಿಲ್ಲವೋ ದೇವ ದೇವನೆ ಭಾವಜಾತಪಿತನೆ
ಜೀವಕೋಟಿಯ ಜೀವರಾಶಿಯ ಪಾವನಾಂಗನೆ ಅ.ಪ

ಪರರ ನಾನುಪರಿಚರಿಸಲಿಲ್ಲವೋ ದುರುಳಭಾವದಿ
ಪರರ ಹಿಂಸೆಗ್ಯೆದು ಎನ್ನ ಉದರ ಪೊರೆದೆನೋ ೧

ವೇದಗಳ ನಾನೋದಿ ಅರಿಯೇ ಸಾಧು ಸಂಗಮ
ಭೇದಗ್ಯೆದೆ ಗರ್ವದಿಂದೆ ವೇದವೇದ್ಯನೆ ೨

ಗಂಗಜನಕ ತುಂಗ ವಿಕ್ರಮ । ಮಂಗಳಾಂಗನೇ
ಮಾಂಗಿರೀಶ ನಿನ್ನ ನಾಮಭೃಂಗವ ತೋರೈ ೩

೨೭೮

ವಂದಿಸುವೆನನವರತ ಇಂದಿರೇಶಾ ಪ

ನೊಂದು ಬಳಲಿದೆನಯ್ಯ ಸಲಹೋ ಶ್ರೀಶಾ ಅ.ಪ

ಹಿಂದೆ ಜನುಮಾಂತರದಿ ಬಂಧಕೋಟಿಯ ಪಡೆದೇ
ಇಂದು ನರಜನುಮದೊಳು ನೊಂದೆನಯ್ಯ
ಮುಂದಿನಾ ಜನುಮಗಳ ಸಂದಣಿಗಳೊಳು ನಿನ್ನ
ಸುಂದರ ಪಾದಾಂಬುಜವನೆಂದೆಂದು ತೋರೆಂದು ೧

ನರಜನ್ಮ ಹಿರಿದೆಂದು ಅರಿತವರು ಪೇಳುವರು
ನರನಾಗಿ ನಾ ಜನಿಸಿ ಗರುವದಿಂದಾ
ಸಿರಿಯಾಸೆಯಿಂದ ಮದ ಪರವೈರ ಲೋಭಗಳ
ದುರಿತಗಳನಾರ್ಜಿಸಿದೆ ಪೊರೆಯೊ ದೇವ ೨

ಕಡುಪಾಪ ಕೂಪದೊಳಗಡಗಿರ್ಪೆನ್ನೈ ಹರಿಯೆ
ಅಡಿಗಳಿಗೆ ಎಡೆಯಿಲ್ಲ ನುಡಿವರಿಲ್ಲಾ
ಪಿಡಿವುದಕೆ ತೃಣವಿಲ್ಲ ದಡಕೆ ದಾರಿಯು ಇಲ್ಲ
ತಡವೇಕೆ ಎನ್ನ ಕೈಪಿಡಿಯೊ ಗೋಪಾಲ ೩

ಜಗದೊಡೆಯ ನೀನೆಂದು ಖಗರಾಜ ಪೊತ್ತಿಹನು
ಸುಗತಿದಾಯಕನೆಂದು ಹೊಗುಳುವವು ಶೃತಿ ಶಾಸ್ತ್ರ
ನಗಧರನೆ ನಿನ್ನತಾ ನಗಪುತ್ರಿ ನುತಿಸಿಹಳು
ನಗಬೇಡವೈ ಪಾದಯುಗಗಳನು ತೋರೆಂದು ೪

ನಿನ್ನ ನಾಮದ ಭಜನೆ ಎನ್ನ ರಸನೆಯೊಳಿರಲಿ
ಮುನ್ನಿಗಿಂತೆಂಟುಮಡಿ ಜನುಮ ಬರಲಿ
ಮುನ್ನ ನಾವಾರ್ಜಿಸಿದ ಘನಪಾಪನಶಿಸಲಿ
ಚೆನ್ನ ಮಾಂಗಿರಿವಾಸ ನನ್ನ ಹೃದಯದೊಳಿರಲಿ ೫

೨೭೯

ವೇದವಿದಿತ ಶೌರೀ ಮುರಾರೀ ಮಧು ಕೈಟಭವೈರೀ ಪ

ಭಾಗವತಪ್ರಿಯ ಸಾಗರತನಯಾ ।
ವಾಗೀಶ ಸದಯಾ । ಪೂಜಿತ ಪಾದದ್ವಯ
ಭೋಗಿ ಶಯನ ಮಾಯ ಶ್ರೀಗುರು ಚಿನ್ಮಯ
ನಾಗಭೂಷಣಹೃದಯಾ ಸದಯಾ ಅ.ಪ

ನಡುಗಡಲಿನೊಳೆನ್ನ ಬಿಡಬೇಡ ಸಲಹೆನ್ನ
ಅಡಿಗೆರಗುವೆ ನಿನ್ನ ಶ್ರೀಶ ಮೋಹನ್ನಾ
ಕಡುಬಾಲ ಧ್ರುವ ತನ್ನದೃಢದಿ ನೆನೆಯೆ ನಿನ್ನ
ಪಡೆದನು ಪದವಿಯ ತಾ ವಿನೀತ ೧

ಅಜಮಿಳವರದನೆ ಗಜರಾಜಗೊಲಿದನೆ
ಸುಜನ ಸಮ್ಮಾನಿತನೆ ಮಾಂಗಿರಿಯರಸನೆ
ಅಜಸುರ ವಿನುತನೆ ರಾಮದಾಸಾರ್ಚಿತನೆ
ಭಜಕ ವಾರಿಧಿಸೋಮ ವಿರಾಮಾ ೨

೨೮೦

ಶ್ರೀವರನೆ ಬಾ ಮುಕುಂದ ಮಾಧವ
ಕಾವರನ್ಯರು ಇಲ್ಲ ಗೋವಿಂದ ಕೇಶವ ಪ

ವೇದವಿದಿತ ಹರಿ ಸಾದರ ಮುರವೈರಿ
ಮೇದಿನೀಪತಿ ಕೋದಂಡ ಸುವಿಹಾರಿ ೧

ನೋಡಿ ನಿನ್ನಯ ಚರಣ ಹಾಡಿ ನಿನ್ನಯ ಸುಗುಣ
ಬೇಡಿ ನಿನ್ನಯ ಕರುಣ ಪಾಡುವೆನೋ ಶರಣ ೨

ಮಂಗಳ ಸುವಿಲಾಸ ಶೃಂಗಾರ ಭಾನುಭಾಸ
ಮಾಂಗಿರಿವರವಾಸ ರಂಗೇಶ ಶ್ರೀನಿವಾಸ ೩

೨೮೧

ಶ್ರೀವರ ಶ್ರೀಕರ ಶುಭಕರನೇ
ಪಾವನ ಸಂಪದನೇ ವರದನೇ ಪ

ಕಾವನು ಈವನು ಜೀವನು ನೀನೆ
ದೈವವು ನೀನೆ ನವನಿಧಿಯು ನೀನೆ
ಆವನು ಇನ್ನಾರನೂ ಅರಿಯೆನೆ ೧

ತಂದೆಯು ತಾಯಿಯು ಮಾವನು ಭಾವನು
[ಎಂದಿಗೆ ಇರುವನ ಪ್ರಿಯನು ಸಹಾಯನು
ತಂದೆ ಮಾಂಗಿರಿನಿಲಯನೆ ಅಪ್ರಮೇಯನು ಜೀಯನು ೨

೨೮೨

ಸನಕಾದಿ ಮುನಿವಂದ್ಯ ವಿನತಾಸುತಾನಂದ
ನಿನಗೇಕೆ ದಯಬಾರದೋ ಪ

ನಿನಗಾಗಿ ಕಾದಿರುವೆ ಮನಸಾರೆ ವಂದಿಸುವೆ
ವನಜಾಕ್ಷ ಕರುಣಾಳು ನೀನಲ್ಲವೇ ಅ.ಪ

ಕನಸಲ್ಲಿ ನನಸಲ್ಲಿ ನಡೆಯಲ್ಲಿ ನುಡಿಯಲ್ಲಿ
ಮನಸಲ್ಲಿ ಕ್ರಿಯೆಯಲ್ಲಿಯಾವಾಗಲೂ
ತನುಧ್ಯಾನ ಮನವೆಲ್ಲ ನಿನಗೆ ಅರ್ಪಿತವಯ್ಯ
[ಅನುದಿನವು ಕೈಪಿಡಿಯೋ ಮಾಂಗಿರಿರಂಗಯ್ಯ] ೧

೨೮೩

ಸರಿತಪ್ಪುಗಳ ಗೊಡವೆ ನನಗೇತಕೋ
ಸರಿತಪ್ಪ ನಡೆಸುವವನು ನೀನಾಗಿರೇ ಪ

ಹರಿ ನಿನ್ನ ಕೈಗೊಂಬೆ ನಾನಾಗಿರೆ
ಪರಿಪರಿಯ ಯೋಚನೆಯು ನೀನಾಗಿರೇ ಅ.ಪ

ಹಗಲಿರುಳ ಬಗೆ ಭಾವ ಎನಗೇತಕೆ
ನಗುವಳಲ ಶೋಕಂಗಳು ಇನ್ನೇತಕೇ
ಜಗವೆಲ್ಲ ತುಂಬಿರುವೆ ಭಯವೇತಕೆ
ಭಗವಂತ ನಿನ್ನದಯೆ ಇರದೇತಕೆ ೧

ಹರಿಚರಣ ಶರಣೆಂಬುದೆನಗಾಗಲಿ
ಕರವಿಡಿದು ನಡೆಸುವುದು ನಿನಗಾಗಲೀ
ಗುರುದೇವ ನೀನೆಂಬುದರಿವಾಗಲೀ
ಸಿರಿ ಮಾಂಗಿರಿಯರಂಗ ದಯೆದೋರಲಿ ೨

೨೮೪

ಸಾಕು ಜನ್ಮದ ಸುಖವು ಸಾಕಿನ್ನು ಹರಿಯೇ ಪ

ಅನೇಕ ಜನ್ಮದ ಸುಖ ಬೇಡ ಹರಿಯೇ ಅ.ಪ

ಹದಿನೆಂಟು ಸಾಸಿರ ವಿಧವಿಧ ಜನ್ಮವ
ಮೊದಲು ಕಳೆಯುತಲೀಗ ನರನಾಗಿ ಜನಿಸೀ

ಕ್ರೋಧ ಲೋಭಗಳಿಂದ ಮದ ಮಾತ್ಸರ್ಯಗಳಿಂದ
ಅಧಿಕ ಮೋಹಿತನಾದೆ ಪದುಮಾಕ್ಷ ಪರಂಧಾಮಾ ೧

ನರಜನ್ಮ ಹಿರಿದೆಂದು ಅರಿತವರು ಪೇಳ್ವರು
ಹರಿ ನಿನ್ನ ನುತಿಸಿ ಪಾಡುವ ಭಕ್ತ ಜನಕೆ
ಪರಮಪಾತಕ ಗೈದು ನರಕಕೆ ಪೋಪೆನ್ನ
ಮರಳಿ ಕಳುಹಲಿಬೇಡ ಧರಣಿಗೆ ದೇವ ದೇವ ೨

ನರಕದೆ ಸುಖವುಂಟು ಧರೆಯಲ್ಲಿ ಸುಖವಿಲ್ಲ
ಕರುಣಾಕರ ದೇವ ಸಿರಿಕಾಂತನೇ
ಧರೆಯೊಳು ನಾನಿಹೆ ಅರೆಘಳಿಗೇ ನಿನ್ನ
ಪರಮನಾಮಾವಳಿಯ ಸ್ಮರಣೆಯ ಕೊಡುಸಾಕು ೩

ಗಂಗೆಯ ಜನಕನೆ ಮಂಗಳ ಮೂರುತಿ
ಮಾಂಗಿರಿವರವಾಸ ಶ್ರೀಶ್ರೀನಿವಾಸ
ಅಂಗಜಾತನ ತಾತ ಶೃಂಗಾರ ಪೂರಿತ
ಭಂಗ ಮಾಡಿಸಬೇಡ ರಂಗೇಶ ಭವಬೇಡ ೪

೨೮೫

ಸಾರಸ ಚರಣವ ತೋರೋ ನಿನ್ನ
[ಪಾರ] ಕರುಣಾಮೃತವನು ಬೀರೋ ಪ

ಮುರಳೀಧರ ಕೃಷ್ಣ ಬಾರೋ ಎನ್ನ
ಹೃದಯ ಮಂದಿರವನು ಸೇರೋ ಅ.ಪ

ನಿನ್ನ ಹೊರತು ಕೈ ಹಿಡಿಯುವರಾರೋ
ಎನ್ನ ಭವಗಳ ಹರಿಸುವರಾರೋ
ಎನ್ನಪರಾಧವ ಮನ್ನಿಸಿ ಬಾರೋ
ಪನ್ನಗಶಯನ ನೀ ನಸುನಗೆದೋರೋ ೧

ನಿನ್ನ ದರ್ಶನಕಾಗಿ ಹಾತೊರೆಯುವೆನೋ
ನಿನ್ನ ಸೇವೆಗೆ ಎನ್ನ ತೆತ್ತಿಹೆನೋ
ನಿನ್ನ ಪರೀಕ್ಷೆಗೆ ಫಲ ನಿನಗೇನೋ
ಚೆನ್ನ ಮಾಂಗಿರಿರಂಗ ಮುನಿಸೆನ್ನೊಳೇನೋ ೨

೨೮೬

ಸುರೇಶ ಪದವಿಯ ಬೇಡುವನಲ್ಲ
ನರೇಶ ಭಾಗ್ಯವ ಕೋರುವನಲ್ಲ ಪ

ಗುರೂಪದೇಶವ ಮರೆಯುವನಲ್ಲ
ಪರೇಶ ಸ್ಮರಣೆಯ ಬಿಡುವವನಲ್ಲ ಅ.ಪ

ಜನನ ಮರಣಕೇ ಹೆದರುವನಲ್ಲ
ಜನುಮಗಳು ಬೇಡ ಎನ್ನುವನಲ್ಲ
ಮನದಿ ವ್ಯಾಮೋಹವ ಪಡೆಯುವನಲ್ಲ
ವನಜನಾಭನ ನಾಮ ಮರೆಯುವನಲ್ಲ ೧

ನಿನ್ನ ಚರಿತಗಳ ಕೇಳದೆ ಬಿಡೆನು
ನಿನ್ನ ಮೂರ್ತಿಯ ನೋಡದೆ ಬಿಡೆನು
ನಿನ್ನ ಪಾದಾರ್ಚನೆ ಮಾಡದೆ ಬಿಡೆನು
[ನಿನ್ನ ನಾಮಂಗಳ ನುತಿಸದೆ ಬಿಡೆನು] ೨

ಮಾಂಗಿರಿಪತಿ ನಿನ್ನ ಒಲಿಸದೆ ಬಿಡೆನು
ಕಂಗಳಿಂದಾನಂದ ಪಡೆಯದೆ ಬಿಡೆನು
ಅಂಗಾಂಗದ ಸೇವೆ ಮಾಡದೆ ಬಿಡೆನು
ರಂಗ ಸಮರ್ಪಣ ಎನ್ನದೆ ಬಿಡೆನು ೩

ನಿಂದಾಸ್ತುತಿಗಳು

೨೮೭

ಎನ್ನಪರಾಧವೇನೋ ಮಾಂಗಿರಿ ರಂಗ
ಎನ್ನ ಕೈಬಿಡುವೆಯೇನೋ ಪ

ನಿನ್ನ ನಂಬಿದೆನಯ್ಯ ಭಕ್ತವತ್ಸಲನೆಂದು
ಎನ್ನ ಬೆಂಬಿಡದೆ ಕಾಯುವ ಭಾರ ನಿನಗಿರೆ ಅ.ಪ

ತಾಪಸಿಯಂತೆ ನಿನ್ನ ವಕ್ಷವನೊದ್ದು
ತಾಪವನು ತೋರ್ಪಿದೆನೇನೋ
ಗೋಪಿಯಂದದೆ ನಿನ್ನ ಒರಳಿಗೆ ಬಿಗಿದೆನೇ
ಭೂಪ ಶಿಶುಪಾಲನಂದದೆ ಬೈದೆನೇ
[ಚಾಪವಿಟ್ಟು] ಭೀಷ್ಮನಂದದೆ ಕಾದಿಪೆನೇನೋ
ಶ್ರೀಪತಿ ನೀನೆನ್ನ ದೂರ ಮಾಡುವೆಯಲ್ಲ ೧

ಜಾರಚೋರನು ನೀನೆಂದು ಯಶೋದಗೆ
ದೂರು ಹೇಳದೆನೇ
ಕೌರವನಂತೆ ಕಂಬಕೆ ಕಟ್ಟಿರೆಂದೆನೆ
ಸಾರಿದೆನೇನೋ ಸತ್ರಾಜಿತನಂತೆ
ಚಾರುರತ್ನವ ಕದ್ದ ಅಪರಾಧಿ ನೀನೆಂದು
ಆ ರುಕ್ಮನಂತೆ ನಾರಿಚೋರನೆಂದೆನೆ ೨

ಪುರುಹೂತನಂತೆ ನಾನು ಮಳೆಯಕರೆದು
ಗಿರಿಯನ್ನು ಪೊರಿಸಿದೆನೇ
ಧರಣಿಯ ಬಲಿ[ಯಿಂದ ಬೇಡುತಲಿರುವಾಗ
ವರಮುನಿಯಂತೆ ಕಿಂಡಿಯ ಮುಚ್ಚಿದೆನೆ]
ನರನಂತೆ ರಥವ ನಡಸೆಂದು ಹೇಳಿದೆನೇನೋ
ಉರಗನಂತೆ ಕಟ್ಟಿದೆನೇ ಮಾಂಗಿರಿರಂಗ ೩

೨೮೮

ಏಕೆ ಪೋಗುವೆ ರಂಗಾ, ರಂಗಯ್ಯ ರಂಗ ಪ

ಏಕಾಂತದೊಳು ಪೇಳ್ವ ವಾಕ್ಕುಗಳನು ಕೇಳಿ ಅ.ಪ

ಮುನಿಸತಿ ಶಿಲೆಯಾಗಿ ವನಜನಾಭಾಯೆಂದು
ನೆನೆಯುತಲಿಲ್ಲವೋ ಮನ ಮೋಹನಾ
ದನುಜನ ಕೈವಶಳು ನೀನಲ್ಲ ಭೂದೇವಿ
ತನಯ ಪ್ರಹ್ಲಾದ ತಾ ಜನಕಾ ಬಾರೆನಲಿಲ್ಲ ೧

ಕರಿರಾಜ ಸಲಿಲದೇ ದುರುಳ ಮಕರಿಯಿಂದೆ
ಪರಿತಾಪವಾಂತಿಲ್ಲ ಸ್ಮರಿಸಲಿಲ್ಲ
ಸುರುಚಿರವೇದಗಳ ದುರುಳ ಕದ್ದೊಯ್ಯಲಿಲ್ಲ
ಸರಸಿಜಾನನನೀಗ ಚರಣಕೆರಗಲಿಲ್ಲ ೨

ಹದಿನಾರು ಸಾವಿರ ಸುದತೀ ಮಣಿಯರೆಲ್ಲ
ಮದನಾಂಗ ಬಾರೆಂದು ಕರೆಯಲಿಲ್ಲ
ವಿದಿತ ಮಂದರಗಿರಿ ಉದಧಿ ನಿನ್ನರಸಲಿಲ್ಲ
ಪದುಳದೆ ಬಲಿ ನಿನ್ನ ಚದುರ ಬಾರೆನಲಿಲ್ಲ ೩

ಕರದೆ ಕೊಡಲಿಯ ಪಿಡಿದು ಮರದೆ ನಿ[ಲ್ಲೆನುತಲಿ]
ನೂರಾರು ಕೈಯವ ಕರೆಯಲಿಲ್ಲ
ಹರನೀಗ ತ್ರಿಪುರರ ತರಿಯೆ ಬಾರೆನಲಿಲ್ಲ
ವರತುರುಗವೇರಿ ಧುರಕೆ ಬಾರೆಂಬರಿಲ್ಲ ೪

ಕಾಮಿತವೀಯೆಂದು ಪ್ರೇಮದಿ ಭಜಿಸುವ
ಪಾಮರರಿಲ್ಲಿಗೇ ಬರುತಿರ್ಪರೋ
ಶಾಮನೆ ಮಾಂಗಿರಿಗಾಮಿಯಾಗಿಹೆಯೇಕೆ
ಕಾಮಹರನೆ ಬಾರೊ ರಾಮದಾಸಜೀವ ೫

೨೮೯

ದಯವ ಮಾಡೋರಂಗ ನಯದಿ ನೋಡೊ
ದಯವು ನಯವು ನಿನಗಿರದಿದ್ದರೆ ಎನಗೆ ಕೇಳೊ ಪ

ಭಯವು ಲಯವು ನಿನಗಿದೆಯೆಂಬುದು ನನ್ನ ಹಾಡೊ
ಭಯ ಭೀತಿಗಳನು ಬಿಡಿಸುವುದೊಂದೇ ನಿನ್ನ ಪಾಡೊ ಅ.ಪ

ತನುವು ಧನವು ಚಿರವಲ್ಲೆಂಬುದ ನಾನು ಬಲ್ಲೆ ರಂಗ
ಜನನ ಮರಣ ಮತ್ತಿರಲೆಂಬುದು ನೀನು ಬಲ್ಲೆ
ಮನಸು ನೆನಸು ನಿನ್ನೆಡೆಗಿರೆ ವೈಕುಂಠವಲ್ಲೆ ರಂಗ
ದಿನವು ಸ್ಮರಣೆಯ ಗೈಸುವ ರೀತಿಯ ನೀನೇ ಬಲ್ಲೆ ೧

ಹಿಂದಿನ ಜನ್ಮದ ಪಾಪಗಳೆಲ್ಲವನಳಿಸೋ ರಾಮ
ಇಂದಿನ ಜನ್ಮದ ನಾಮಸ್ಮರಣೆಯ ನುಡಿಸೋ ರಾಮ
ಮುಂದಿನ ಭವಗಳ ನೀಗಿಸಿ ಕಾಯೋ ಸೀತಾರಾಮ
ಇಂದಿರೆಯರಸ ಮುಕುಂದ ನೀ ಮಾಂಗಿರಿ ರಂಗಧಾಮ ೨

೨೯೦

ನಿನಗೇನು ಕಡಿಮೆ ಪೇಳ್ಳೈ ಎನಗೆಲೊ ರಂಗಾ ಪ

ಕ್ಷೀರಾಬ್ಧಿ ನಿನ್ನದು ಸಂಸಾರಾಬ್ಧಿ ಎನ್ನದಯ್ಯ
ಮೂರೇಳವತಾರ ನಿನಗೆ ನೂರೆಂಟು ಎನಗೇ ೧

ನಿನಗೆ ಸುರಮುನಿಗಣ ಎನಗೆ ಭೂಸುರಗಣ
ನಿನಗೆ ಸತ್ವದ ಗುಣ ಎನಗಾಸೆ ದ್ವಿಗುಣ ೨

ಜಗವು ಉದರವೆಂದು ಬಗೆದು ಪೋಪೆನೀ
ಜಗದ ಸರ್ವಾರ್ಥವ ಮಿಗೆ ಬಯಸುವೆನಾ ೩

ನಿನಗೆ ಭಕ್ತರೆ ಪ್ರಿಯ ಎನಗೆ ಮುಕ್ತಿಯೆ ದೈವ
ನಿನಗೆ ರಕ್ಷಣೆನಾಮಾ ಎನಗೆ ಭಕ್ಷಣೆ ಕಾರ್ಯಾ ೪

ವರಷಡ್ಗುಣವು ನಿನಗೆ ಅರಿಷಡ್ವರ್ಗವು ಯನಗೆ
ನಿರುತ ತೃಪ್ತತೆ ನಿನಗೆ ದುರಿತ ತೃಪ್ತತೆ ಯೆನಗೆ ೫

ನಿನಗೆ ನಾನೆಂಬುದಿಲ್ಲ ಎನಗೆ ನಾನೆಂಬುದುಂಟು
ರಂಗನಾಥ ಶ್ರೀಶ ತುಂಗವಿಕ್ರಮ ನೀ ೬

ಕ್ಷಮಿಸೆನ್ನಪರಾಧವ ವಿಮಲಾಂಗ ಮಾಧವ
ಕಮಲಾಕ್ಷ ಪೊರೆದೇವ ರಾಮದಾಸನುತಾ ೭

೨೯೧

ನಿನ್ನ ತಂತ್ರಗಳೆಲ್ಲ ಬಯಲಾಯ್ತೊ ರಂಗ
ನಿನ್ನ ಕಥೆಯ ಕೇಳಿ ಭಯವಾಯ್ತೋ ಪ

ನಿನ್ನ ವಂಚನೆಗೇ ಜಯವಾಯ್ತೋ ಅ.ಪ

ಶರನಿಧಿಯ ಮಥನದಿ ಗರಳವು ಜನಿಸಲು
ಪರಶಿವನುಂಬುವ ಪರಿಗೈದೆಯೇನೋ
ತರುಣಿ ಸಂಜನಿಸಲು ಶರಗಳ ನೀಡಿ ದೈ
ತ್ಯರ ವಂಚಿಸಿದಾ ಪರಿ ಸಟೆಯೇನೋ ೧

ಧರಣಿಯನಿತ್ತನ ಶಿರವನು ತುಳಿದೆ
ಪರಿಗಣಿಸದೆ ತಾಯ ಕೊರಳನು ತರಿದೆ
ಪರಸತಿಯರ ಕೂಡ ನೆರೆ ನಲಿದಾಡಿದೆ
ಕರದಿ ಸನ್ನೆಯ ಮಾಡಿ ಕುರುಕುಲವಿರಿದೇ ೨

ಮದನ ಸುಂದರಿಯಾಗಿ ಸುಧೆಯ ಕುಂಭವ ಕೊಂಡೆ
ಅದಿತಿಯ ಸುತರಿಗೆ ಅದ ನೀನುಣಿಸಿದೆ

ಮಧುರುಚಿಯರಿತನ ಚಕ್ರದಿ ತರಿದೆ
[ಎದುರಿಸದೆವಾಲಿಯ ಮರೆಯಲಿರಿದೆ] ೩

ಪೊಡವಿಯೊಡೆಯನ ಕಡೆಗಣಿಸೀ ನಿನ್ನ
ಅಡಿಯಿಡೆ ಯಿದ್ದವನೊಡವೆರೆದೆ
ನುಡಿದು ಕರ್ಣನ ಕಂಗೆಡಿಸಿದೆ ಭೀಷ್ಮನ
ಕೆಡಹಿದೆ ಮಾಂಗಿರಿಯೊಡೆಯ ಗೋಪಾಲಾ ೪

೨೯೨

ಬೇಡಿದರೆ ನೀಡುವುದೇನು ಹಿರಿದೆ ಗೋವಿಂದ
ಬೇಡದೆ ನೀಡೆ ನಿನ್ನಂತಸ್ತಿಗತಿಚೆಂದ ಪ

ನೀಡುವನು ನೀನಿರಲು ಬೇಡಿಕೆಗೆ ಕೊನೆಯುಂಟೆ
ಬೇಡಿ ಬೇಸತ್ತರೂ ಆಸೆಯಿಂಗುವುದುಂಟೆ
ಬೇಡಿದಮಣಿ ನೂರುಜನುಮ ಸಾಕಹುದುಂಟೆ
ಬೇಡದೇ ಭಜಿಪವಗೆ ಹುಟ್ಟು ಸಾವುಗಳುಂಟೆ ೧

ಹಿಂದೆ ನೀನಿತ್ತುದನು ಇಂದುಣುತಲಿಹೆವಯ್ಯ
ಮುಂದೆ ನಾನುಣಲೇನು ಬೇಡವಯ್ಯ
ಸಂದಿರ್ಪುವೈ ಸಾಲಸೋಲಂಗಳೇನಯ್ಯ
ಮುಂದೇನು ಬೇಡ ಮಾಂಗಿರಿವಾಸ ರಂಗಯ್ಯ ೨

೨೯೩

ಬೈಯದವನಿಗಿಂತಲೂ ಬೈಯುವವನೇ ಮೇಲು
ಹೊಯ್ಯದವಗಿಂತಲೂ ಹೊಯ್ಯುವವನೆ ಮೇಲು ಪ

ಬಾಯೆನಲು ಬರಲೊಲ್ಲೆ ಮಾಯಾಕಾರ ನಿನ್ನ ಅ.ಪ

ಒಬ್ಬ ಧರಣಿಯನೊಯ್ದ ಒಬ್ಬ ಖಡ್ಗವ ಹಿಡಿದ
ಒಬ್ಬ ಧರಣಿಯನೆ ಕದ್ದ ಒಬ್ಬ ಬೈದಾ
ಉಬ್ಬಿ ನೀ ಸಂತಸದಿ ಅಬ್ಬರಿಸಿ ಪರಿದೈದೆ
ಒಬ್ಬೊಬ್ಬರಿಗೂ ದಿವ್ಯ ದರ್ಶನವನು ೧

ಜಾರನೆಂದರು ಕೆಲರು ಚೋರನೆಂದರು ಕೆಲರು
ಪೋರನಿವನೆಂದರು ನಾರಿಯರು ಪಲರು
ಆರೇನ ಬೈದರೂ ದೂರಿ ನಿಂದಿಸಿದರೂ
ಸ್ಮರಿಸಿದಾ ನಿಮಿಷಾರ್ಧ ಹರಿ ನಿನ್ನ ಭಕ್ತರ ೨

ಇರಬಹುದು ಹಸಿವು ಬಾಯಾರಿಕೆಗಳಿಂದ
ಅರಿವು ನಿದ್ರಾ ನೀರಡಿಕೆಗಳ
ತೊರೆದು ಅರಸುವಾ ಸಮಯದಲಿ
ಬರುವೆ ನೀನದರಿಂದ ೩

ಇಳೆಯನೇ ತೆತ್ತವನ ತುಳಿದು ಕೈಸೆರೆ [ಮಾಡ್ದೆ]
ಹಳಿದು ನಿಂದಿಸಿದವನ ಬಳಿಗೆ ಹೋದೆ
ಮುಳಿಸಿನಿಂದೊದ್ದವನ ಕಾಲುಗಳ ನೀತೊಳೆದೆ
ಹಳಿವು ಬೈಗಳು ನಿನಗೆ ಹಿತವು ಮಾಂಗಿರಿಯ ರಂಗ ೪

೨೯೪

ನಾನೊಂದನಿತ್ತರೆ ನೀನೊಂದನೀಯುವೆ
ನಾನೀಯದಿದ್ದರೆ ನೀನೇನನೀವೆ ಪ

ನಾನು ಎಂಬುದು ಮಾತ್ರ ನಾ ನಿನಗಿತ್ತರೆ
ಏನನೀಯುವೆ ರಂಗ ದೀನದಯಾಳು ಅ.ಪ

ಅವಲಕ್ಕಿಯನು ತಂದವಗೆ ಭಾಗ್ಯವನಿತ್ತೆ
ನವಫಲವನಿತ್ತವಳಿಗೆ ಒಲಿದೆ

ನವನೀತವಿತ್ತರ್ಗೆ ಸುವಿಲಾಸಗಳನಿತ್ತೆ
ಭುವಿಯೆಲ್ಲವಿತ್ತಂಥವನ ಬಾಗಿಲಕಾಯ್ದೆ ೧

ಗಜರಾಜನಂದು ಪಂಕಜವೊಂದನಿತ್ತಂದು
ಅಜಗರನನು ಕೊಂದು ಸೌಜನ್ಯವನಿತ್ತೆ
ಭುಜದ ಮೇಲೆ ನಿನ್ನನಂಗಜ ಪೊತ್ತು ತಿರುಗಲು
ರಜತಪದವಿಯನಿತ್ತು ವಿಜಯ ನೀ ಗೈದೆ ೨

ಮಡದಿಮಣಿಯು ತಾನುಟ್ಟ ಪೀತಾಂಬರ
ದೆಡ್ಡೆಯ ಹರಿದು ನಿನ್ನ ಅಡಿಗೆ ಕಟ್ಟಲ್ಕೆ
ಮಡದಿಗೆ ಅಕ್ಷಯದುಡುಗೆಯ ನೀನಿತ್ತೆ
ಮೃಡನು ತಾನೇನು ಕೊಡಲೋ ಗೋವಿಂದಾ ೩

ಜಗಜಟ್ಟಿ ಹನುಮನು ಬಗೆದು ನಿನ್ನಯ
ದುಗುಡವ ಬಿಡಿಸಿದ ಬಗೆಯ ನೀನರಿತೂ
ಜಗದೊಳು ಸರಿಯಾದುಡುಗರೆಯಿಲ್ಲದೆ
ನಗುತ ನಿನ್ನನು ನೀನೆ ಸೊಗಸಿನಿಂದಿತ್ತೆ ೪

ನಾನೆಂಬುದಲ್ಲದೆ ಏನುಂಟು ಎನ್ನೊಳು
ನೀನೀವೆನಿದ ಮಾತ್ರ ಶ್ರೀನಾಯಕೇಶ
ಏನನಾದರೂ ಸರಿ ನೀನೀಯೋ ಮುರವೈರಿ
ನಾನು ನನ್ನದು ನಿನ್ನಧೀನ ಮಾಂಗಿರಿರಂಗ ೫

೨೯೫

ಶಯನ ಸುಖವೇ ಸುಖವೆ ರಂಗನಾಥ
ಭಯಗೊಂಡ ಭಕ್ತರೊಳು ದಯವಿಲ್ಲವೆ ಪ

ಶರಣನ ಕೈ ನೀಡಿ ಪೊರೆಯೆಂದು ಪೇಳ್ವಾಗ
ದುರಿತಗಳ ಹರಿಸೆಂದು ಬೇಡುವಾಗ

ಕರುಣಾನಿಧಿ ನೀನೆಂದು ಹಾಡಿ ಹಂಬಲಿಪಾಗ
ಶಿರಬಾಗಿ ಪಾದಕೆ ವಂದಿಸುವಾಗ ರಂಗಾ ೧

ಜೀವಿಗಳ ಪಾಲಿಸುವ ಹೊಣೆ ನಿನಗೆ ಸಲುವಾಗ
ದೇವ ನೀನೊಬ್ಬನೇ ದಿಕ್ಕೆನುವಾಗ
ಭಾವದಲಿ ನಿನ್ನಮೂರ್ತಿಯ ನೆನೆದು ನಲಿವಾಗ
ದೇವ ಎನ್ನಪ್ಪ ಬಾಯೆನುವಾಗ ರಂಗಾ ೨

ಸ್ವಾಭಿಮಾನದಿ ನೀನು ಲೋಕವನು ಮರೆವಾಗ
ಲೋಭಿ ನೀನೆನ್ನದೇ ಜಗವೆಲ್ಲ ರಂಗಾ
ಲಾಭವುಂಟೇ ಭಕ್ತಜನಕೆಲ್ಲ ಕ್ಷಯರೋಗ
ನಾಭಿಗಂಟದೆ ಪೇಳು ಮಾಂಗಿರಿಯರಂಗ ೩

೨೯೬

ನಾನಿನ್ನ ತೆಗಳಿದೆನೇ ರಂಗಯ್ಯ
ನಾನಿನ್ನ ಮಹಿಮೆಯ ಹೊಗಳಿದೆನಲ್ಲವೆ ಪ

ನೀನೇತಕೆನ್ನೊಳು ದಯತೋರದಿರುವೆ
ನಾನಿನ್ನ ಚರಣವ ದೃಢದಿ ನಂಬಿರುವೆ ಅ.ಪ

ಮೀನಾಗಿ ನಾಲ್ಕುಮಕ್ಕಳ ಹೊತ್ತು ತಂದೆ
ನೀನೇ ಕಮಠನಾಗಿ ನಗವೆತ್ತಿ ನಿಂದೆ
ದಾನವ ಸಂಹಾರಕಾಗಿ ಸೂಕರನಾದೆ
ನೀನೇ ನರಹರಿಯೆಂದು ನುತಿಸಿದೆನಲ್ಲದೆ ೧

ಭೂಮಿಯನಳೆದವನೆಂದೆ ನೀನೇ
ಭೂಮಿಪರನು ಕೊಂದೆ ಎಂದೆ
ಭೂಮಿಜೆಯರಸ ರಾವಣವೈರಿಯೆಂದೆ
ಕಾಮಪಾಲನು ಹಲಧರನೆಂದೆನಲ್ಲದೆ ೨

ತರುಣಿದ್ರೌಪದಿಗಾಗಿ ಕುರುಕುಲವಿರಿದೆ
ತುರಗವನೇರಿ ದುಷ್ಟರನೆಲ್ಲ ತರಿದೆ
ಶರಣ ಜನರಿಗಾಗಿ ಹರಿಹರ ನೀನಾದೆ
ವರದ ಮಾಂಗಿರಿರಂಗ ನೀನೆಂದೆನಲ್ಲದೆ ೩

೨೯೭

ಮರೆಯಲಾರೆ ನಿನ್ನ ತೊರೆಯಲಾರೆ
ಮರೆತು ತೊರೆದು ಜೀವಿಸಲಾರೆ ಕೃಷ್ಣಮುರಾರೆ ಪ

ಹರಿಚರಣಂಗಳೆ ಶರಣೆನದಿದ್ದರೆ ನಾನಪರಾಧಿ ರಂಗ
ಕರುಣವ ಬೀರದೆ ಮರೆ ನೀನಾದರೆ ನೀನಪರಾಧಿ ೧

ಭಕ್ತಿ ವಿರಕ್ತಿಯ ಮಾರ್ಗವ ಬಿಟ್ಟರೆ ನಾನಪರಾಧಿ ರಂಗ
ಯುಕ್ತಿಯೊಳೆನ್ನನು ಕತ್ತಲೆಯೊಳಗಿಡೆ ನೀನಪರಾಧಿ ೨

ನೀನೇ ಗತಿಮತಿಯೆನಗೆನದಿದ್ದರೆ ನಾನಪರಾಧಿ
ಎನ್ನಪರಾಧವ ಮನ್ನಿಸದಿದ್ದರೆ ನೀನಪರಾಧಿ ೩

ಅಪರಾಧಗಳಿನ್ನಿಬ್ಬರಿಗೇತಕೋ ಕಮಲಾಂಗ
ಸುಪಥವ ತೋರುವ ಜಾಣ್ಮೆಯು ನಿನ್ನದು ಮಾಂಗಿರಿರಂಗ ೪

ಶ್ರೀಕೃಷ್ಣಬಾಲಲೀಲೆಗಳು

೨೯೮

ಅಕ್ಕಾ ಚಿಕ್ಕಮಕ್ಕಳ ನಡುವೆ
ನಕ್ಕು ನಲಿವ ಬಾಲ ಇವನಾರೆ ಪ

ಇಕ್ಕೆಲದಲಿ ಹೆಣ್ಣುಮಕ್ಕಳು ಭುಜದಿ
ಕೈಯಿಕ್ಕಿ ಬರುವನಿವ ನೋಡುವ ಬಾರೆ ಅ.ಪ

ಮುತ್ತಿನ ಗೊಂಚಲ ರತುನಕಿರೀಟ
ಸುತ್ತಲು ಕುಣಿಯುವ ಬಾಲೆಯರಾಟ
ಕತ್ತಿನ ಮಣಿ ಸರಗಳ ನಲಿದಾಟ
ಅತ್ತಿತ್ತ ಮಿಂಚಿನ ಕಡೆಗಣ್ಣೋಟ ೧

ನಸುನಗೆವದನ ಮರಕತರದನ
ಮಿಸುನಿಯ ಬಣ್ಣದ ಹೊಸವಸನ
ವಿಸರದ ಹೂಗಳ ಮಾಲೆಯ ಕೊರಳಿನ
ರಸಿಕನನೀಕ್ಷಿಸು ಎನ್ನುತಿದೇ ಮನ ೨

ಮೆಲ್ಲನೆ ನಡೆವನು ಅಲ್ಲಲ್ಲಿ ನಿಲುವನು
ಘಲ್ಲೆಂಬ ಕಿರುಗೆಜ್ಜೆ ಧರಿಸಿಹನು
ನಲ್ಲೆಯ ಗಾನಕೆ ಸರಿಕುಣಿಯುವನು
ಮೆಲ್ಲುಲಿವನು ಮತ್ತೆ ಕೊಳಲೂದುವನು ೩

ಬಾಯಲಿ ಜಗಗಳ ತೋರಿಸಿದನಂತೆ
ಮಾಯದ ನಾರಿಯ ಮಡುಹಿದನಂತೆ
ತೋಯಜಗಾತ್ರೆ ರಾಧೆಗೆ ಹಿತನಂತೆ
ಜೀಯನೀತನೆ ಗೋವಳನಂತೆ ೪

ಮದನ ಸುಂದರನು ಲೋಕ ಮೋಹಕನು
ಮುದವ ಬೀರುವನು ಮನವ ಸೆಳೆವನು

[ಸ]ದಯನು ಸಕಲರಿಗಭಯವನೀವನು
ಪದುಳದಿಕಾವ ಮಾಂಗಿರಿ ಪತಿಯವನು ೫

೨೯೯

ಅಲ್ಲಿ ಇಲ್ಲಿ ಮೊಸರನು ಚೆಲ್ಲಿ
ಮೆಲ್ಲನೆ ಬಂದವ ಎಲ್ಲಿವನಮ್ಮ ಪ

ಬಲ್ಲಿದರಲ್ಲಿ ಬಲ್ಲಿದನಂತೆ
ಇಲ್ಲಿಗೆ ಬಂದವ ಎಲ್ಲಿಹನಮ್ಮ ಅ.ಪ

ಗೆಜ್ಜೆ ಪಾಡಗ ಕಡಗ । ಝಣ ಝಣ
ಭಜ್ಜರ ರವವನು ಬೀರುವನಮ್ಮ
ಹೆಜ್ಜೆ ಹೆಜ್ಜೆಗಾನಂದವ ನೀಡುವ ।
ಸಜ್ಜನು ಬಲ್ಲವ ಅವನಮ್ಮ ೧

ಅಂಗಳದಲ್ಲಿ ತಂಗುವನಲ್ಲ
ಹೊಂಗೊಳಲೂದುತ ಓಡುವನಮ್ಮ
ಮಂಗಳಾಂಗ ನೀಲಾಂಗನು
ಮಾಂಗಿರಿರಂಗನೆ । ಅವನೆನ್ನುವರಮ್ಮ ೨

೩೦೦

ಆಡುವ ಬಾರೋ ಕೃಷ್ಣ ಓಡಿಬಾರೋ ಪ

ನಾಡೆ ನಿನ್ನ ನೋಡಬಯಸಿ ಹಾಡುವೆನ್ನ ಕಣ್ಣಮುಂದೆ ಅ.ಪ

ಓಡಿಬರುವೆ ನೀನು ಎಂದು ನೋಡಿ ಹಸುಗಳತ್ತ ಇತ್ತ
ಬೇಡುತಿಹವು ನಿನ್ನ ಬರವ ಮೋಡಿಯೇಕೆ ಕೊಳಲನೂದಿ ೧

ಚಿಣ್ಣರೊಡನೆ ನೀನು ಬಂದು ಬೆಣ್ಣೆಗಾಗಿ ಕರವ ನೀಡಿ
ಮಣ್ಣಮೆದ್ದನೆಂದು ತಾಯ ಕಣ್ಗೆ ತೋರ್ದೆ ಜಗವನೆಲ್ಲ ೨

ಪೊಂಗಲೀವೆ ಬಾ ಮುಕುಂದ ಹೊಂಗೊಳಲಾನಂದದಿಂದ
ತಂಗುವೆ ನಾ ನಿನ್ನ ಪಾದದಿ ಮಾಂಗಿರೀಶ ಮುದ್ದುರಂಗ ೩

೩೦೧

ಇವನಾರೆ ಮನಸೂರೆಗೈದೋಡುವಾ
ನವನೀತ ಮೆಲುವಾತ ಪರಿದೋಡುವಾ ಪ

ಸವಿನೋಟ ರಸದೂಟವನೆ ಬೀರುವ
ಸುವಿಲಾಸ ಪರಿಹಾಸಗಳ ತೋರುವ ಅ.ಪ

ಓರೆನೋಟವ ತೋರುತ ನಲಿವ
ಕ್ಷೀರವ ಕುಡಿವ ಬೆರಳಲಿ ಕರೆವ
ಕೊರಳಿನ ಹಾರವ ಎಡಬಲಕೆಳೆವ
ಕೊರಳನು ಕೊಂಕಿಸಿ ಪರಿಪರಿ ಕುಣಿವ ೧

ನೀರಜನೇತ್ರನು ನೀರದ ಗಾತ್ರನು
ನಾರಿಯತನುವನು ಬರಸೆಳೆಯುವನು
ಚೋರನು ಭವಭಯಹಾರನು ಧೀರನು
ಶ್ರೀರಮೆಯರಸನು ಮಾಂಗಿರಿವರನು ೨

೩೦೨

ಎತ್ತಣದನಿಯಿದು ಎತ್ತಣ ಮಧುರವ
ಚಿತ್ತಾಕರ್ಷಕ ಬಾನುಲಿಯೇ ಪ

ಮತ್ತ ಭೃಂಗಾಳಿಯ ಝೇಂಕೃತಿ ಶ್ರುತಿಯು
ಸುತ್ತ ಮಯೂರದ ನಾಟ್ಯದ ನಲವೋ ಅ.ಪ

ಏಣಲೋಚನೆಯರ ಕಾಂಚನ ಕಿರುಗೆಜ್ಜೆ
ವೀಣಾನಾದವ ಅಣಕಿಪುದು
ತಾಣವದೆಲ್ಲಿಯೋ ಕಾಣಿರೆ ಸಖಿಯರೇ
ವೇಣು ಗೋಪಾಲನ ನಾಟ್ಯವಿದಲ್ತೇ ೧

ಅಲ್ಲಿ ನೋಡೇ ತಂಗಿ ಬಾನೆಡೆಯಿಂದಲಿ
ಮಲ್ಲಿಗೆ ಪೂಮಳೆ ಸುರಿಯುತಿದೆ
ನಲ್ಲೆಯರಿಂಚರ ಸರಿಗಮಪದನಿಯು
ಎಲ್ಲ ರಾಗಗಳಲಿ ನಲಿಯುತಲಿಹುದು ೨

ಅಂಗನೆಯರೆ ನಮ್ಮ ಗೆಜ್ಜೆಯ ಝಣರವ
ಮಂಗಳಗಾನಕೆ ಇಂಬಿರಲಿ
ಹೊಂಗೊಳಲೂದುವ ಚಿನ್ಮಯ ಮಾಂಗಿರಿ
ರಂಗನ ದರ್ಶನ ಮಾಡುವ ಬನ್ನಿ ೩

೩೦೩

ಎತ್ತಣ ಪಯಣವೋ ಕೃಷ್ಣಯ್ಯ ನಿನ
ಗಿತ್ತ[ಏನವ]ಸರ ಏಕೋ ರಂಗಯ್ಯ ಪ

ಹೆತ್ತತಾಯಿಯ ಮುಂದಾಡದೆ ಇ
ನ್ನೆತ್ತ ಯಾರಿಗೆ ಲೀಲೆ ತೋರುವೆ ಅ.ಪ

ಗೊಲ್ಲ ಗೋಪಿಯರೆಲ್ಲ ಚೆಲ್ಲಾಟದಿಂದ ನಿನ್ನ
ಗಲ್ಲವ ಹಿಡಿದುಕೊಂಡು ಅಲ್ಲಾಡಿಸಿ
ಸೊಲ್ಲು ಸೊಲ್ಲಿಗೆ ಮುತ್ತಿಟ್ಟು ನೋಯಿಸಿದರೆಂದು
ಬಿಲ್ಲ ಹಬ್ಬವ ನೋಡಲೊಲ್ಲದೆ ಪೋಪೆನೆಂಬೆ ೧

ನೂರೆಂಟು ಕನ್ನೆಯರೋರಂತೆ ನಿನ್ನ ಬಳಿ
ಸೇರಿರ್ಪುದನು ಕಂಡು ಕಲಹಪ್ರಿಯ
ನಾರಿಯೊಬ್ಬಳ ತನಗಾರಿಸಿ ಕುಡಲೆಂದು
[ಯಾರಬಳಿ ಮಸಲತ್ತು ಮಾಡಹೊರಟೆಯೊ] ೨

ಬಾಲೆ ರುಕ್ಮಿಣಿಯನು ದುರಳಶಿಶು
ಪಾಲಂಗೀಯುವರೆಂದು ಪೇಳಿದ್ದೆಯಲ್ತೆ
[ಹ]ಲಾಂಕನೊಡನೆ ಸಿಕ್ಕಲಾದ ಕಾರಣದಿ
ಬಾಲೆಯ ತರ್ಪನೆಂದೇ ಶ್ರೀ ಮಾಂಗಿರಿಯ ರಂಗ ೩

೩೦೪

ಏಣಾಕ್ಷಿಯರೇ ವೇಣು ಗೋಪಾಲನ
ಕಾಣಲಿಲ್ಲವೆಂದೆನಬೇಡಿ ಪ

ಜಾಣನವನು ನಿಮ್ಮ ಕೋಣೆಯೊಳಗಿರುವಾ ಗು
ಡಾಣವ ತುಡುಕುವ ನೆರೆನೋಡಿ ಅ.ಪ

ಸುಲಭನು ನಿಮಗವನೊಲಿವನು ನಿಮ್ಮೆಡೆ
ನಿಲುವನು ನಲಿವನು ಕೈನೀಡೀ
ಸಲಿಸಿರಿ ಬೆಣ್ಣೆಯ ಮೆಲುವನು ಕಿಲಕಿಲ
ನುಲಿವನು ಚಲಿಸಲು ಬಿಡಬೇಡಿ ೧

ಅಳುಕುತ ಬಳುಕತ ಬಳಲುತ ಸುಳಿಯುತೆ
ಘಳಿಲನೆ ಪೋಪನೆಚ್ಚರವಿರಲಿ
ಎಳನಗೆಯಿಂದ ಪಾಲೆರೆಯಿರಿ ಮನ
ದೊಳಚ್ಚಳಿಯದ ಮೋದವು ನೆಲೆಸಿರಲಿ ೨

ಮನವೆಂಬುವುದೇ ವನರುಹವಮ್ಮಾ
ಕನಸುನೆನಸಿನೊಳಾ ವನಜವನರ್ಪಿಸೆ

ನೀನೆಂಬುದನೇ ಮರೆಯುವಿರಮ್ಮಾ
[ತನುಮನ ಅವನಡಿ ಸೇರುವುದಮ್ಮಾ] ೩

ಪಡಸಾಲೆಯೊಳಿವ ನಿಲ್ಲುವನಲ್ಲಾ
ಅಡಿಗೆಯ ಕೋಣೆಯ ಬಿಡುವನಲ್ಲ
ಒಡೆಯ ಶ್ರೀಮಾಂಗಿರಿಪತಿಯನು ನೋಡದ
ಮಡದಿಯಿಲ್ಲವೆಂಬುದು ಸಟೆಯಲ್ಲ ೪

ನೀವಿರುವಾಯೆಡೆ ಪಾಲ್ಗಡಲಮ್ಮಾ
ನೀವಡಿಯಿಡುವುದೇ ಕಡೆಗೋಲಮ್ಮಾ
ನೀವಾಡುವ ನುಡಿ ದಧಿ ನವನೀತವು
ನೀವಿರೆ ಮಾಂಗಿರಿರಂಗನುಂಟಮ್ಮಾ ೫

೩೦೫

ಒಡಲೆರಡಂತೆ ಅಸುವೊಂದಂತೆ
ನುಡಿಯಿದು ನಿಜವೇ ಪೇಳೇ ಗೋಪಮ್ಮ ಪ

ನಡೆ ನುಡಿ ಭಾವಗಳೊಂದೇಯಂತ
ಹುಡುಗನೇನೇ ಕೃಷ್ಣ ಪೇಳೇ ಗೋಪಮ್ಮ ಅ.ಪ

ರಾಧೆ ಬಾಲಕಿಯಂತೆ ಕೃಷ್ಣ ಬಾಲಕನಂತೆ
ಸೋದರಿಯರು ಇದ ಹೇಳುವರಮ್ಮ
ನಾದ ನರ್ತನ ದೇಹಕಾಂತಿಗಳಲ್ಲಿ
ಭೇದವಿಲ್ಲೆಂಬರು ನಿಜವೇನಮ್ಮಾ ೧

ಬಾಲೆಯು ತಾನೆ ಗೋಪಾಲನೆನುವಳಂತೆ
ಬಾಲಕೃಷ್ಣನು ರಾಧೆ ತಾನೆಂಬನಂತೆ
ಬಾಲನಾರಿದರಲ್ಲಿ ಬಾಲೆಯಾರಿವರಲ್ಲಿ
ಮೂಲತತ್ವವ ನೀನೆ ಹೇಳೇ ಗೋಪಮ್ಮ ೨

ಯುಗ ಯುಗದಲ್ಲಿ ತಾನವತರಿಸುವ ಕೃಷ್ಣ
ಜಗದೀಶ್ವರನೆ ತಾದಿಟವಮ್ಮ
ನಗಧರ[ನ] ಮಗನೆಂದಾಡಿದ
[ಮಿಗೆ] ಭಾಗ್ಯವೆ ನಿನ್ನದಾಗಿಹುದಮ್ಮ ೩

ನಿರುಪಮ ಭಕ್ತಿಯಮೂರ್ತಿಯು ರಾಧೆ
ಮುರಳೀಧರನಲಿ ಒಂದಾಗಿಹಳು
ಅರಿತುದ ಪೇಳ್ವೆನು ಮಾಂಗಿರಿರಂಗನ
ಶರಣರಿಗೀತತ್ವ ಕರಗತವಮ್ಮಾ ೪

೩೦೬

ಓಡಿಬಾ ಬಾ ರಂಗ ಆಡುಬಾ ನೀಲಾಂಗ
ಪಾಡಿ ಪೊಗಳುವೆ ರಂಗ ಶ್ರೀಪಾಂಡುರಂಗ ಪ

ಬೇಡುವೆನೊ ಮಾರಾಂಗ ನೋಡಿನಲಿವೆನೊರಂಗ
ನೀಡು ವರಂಗಳ ರಂಗ ಶ್ರೀಕರಾಂಗ ಅ.ಪ

ಬಡ ಮೌನಿಗಳು ನಿನ್ನ ಪಿಡಿಯ ಬಂದಿಹರೆನ್ನ
ತೊಡೆಯ ಮೇಲಿರೋ ಚಿನ್ನ ಮುದ್ದುಮೋಹನ್ನ
ಬೆಡಗ ತೋರುತೆ ಚೆನ್ನ ಚೆಲುವ ಬಾ ರನ್ನ
ಒಡೆಯ ಮಾಂಗಿರಿಯ ಚೆನ್ನಿಗ ನಂಬಿಹೆನೊ ನಿನ್ನ ೧

೩೦೭

ಕಾಣೆಯೇನೇ ತಂಗಿ । ಇವನಾ ಕಾಣೆಯೇನೇ ತಂಗಿ ಪ

ವೇಣುವನೂದುವ ಮುದ್ದು ಮೋಹನ್ನನ ಅ.ಪ

ಪೂತನಿಯುಸುವಾ ಹೀರಿದನಿವನು
ಮಾತೆಗೆ ಬಾಯಲಿ ಜಗವ ತೋರಿದನು ೧

ಬಕ ಶಕಟಾಸುರನಿಕರವ ಸದೆದ
ವಿಕಟ ಕಾಳಿಂಗನ ಹೆಡೆಯನು ತುಳಿದ ೨

ಬೃಂದಾವನದಾನಂದ ಮುಕುಂದ
ನಂದನಕಂದ ಮಾಂಗಿರಿಯ ಗೋವಿಂದ ೩

೩೦೮

ಕೂಗಿದವರ ಬಳಿ ರಾಗವ ಬೀರುವ
ನಾಗಶಯನ ನಮ್ಮ ವೇಣುಗೋಪಾಲ ಪ

ನಾಗನ ಕೂಗಿಗೆ ಜಗುಡುತ್ಯೈದಿದ
ತ್ಯಾಗಶೀಲನವ ಗೋಪಿಯ ಬಾಲ ಅ.ಪ

ಕರದ ಮುರಳಿಯಲ್ಲಿ ಪರಿಪರಿಗಾನವ
ಉರುಳಿಸಿ ನಾಟ್ಯಕೆ ಕಿರುನಗೆದೋರಿ
ತರುಣ ತರುಣಿಯರ ಬರಸೆಳೆಯುವ ಮಾಂ
ಗಿರಿ ಶಿಖರಾಗ್ರದಿ ಮಹಿಮೆಯ ತೋರಿ ೧

೩೦೯

ಕೇಳಿದೆ ಏನೇ ಕೊಳಲ ದನಿಯ
ಬಾಳಿಗೆ ಅಮೃತವ ಬೀರುವ ಸವಿಯ ಪ

ಬೃಂದಾವನದಲಿ ನಂದಯಶೋದ
ಕಂದನು ಮುರಳಿಯನೂದುತಿರೆ
ಸುಂದರಿಯರು ಆನಂದದಿ ನರ್ತಿಸಿ
ಇಂದಿರೆಯರಸನ ಹೊಗಳುವರು ೧

ಕಿರುಗೆಜ್ಜೆಯ ದನಿ ಕಿಣಿಕಿಣಿಸುತಿರೆ
ಕರದ ಕಂಕಣಬಳೆ ಗಣಗಣರೆನಲು

ಚರಣದ ಕಡಗ ಝಣ್ ಝಣಿ ಝಣಿರೆನುತಿರೆ
ಪರಮ ಸಂತೋಷದಲಿ ಹರಿಯರುಳುತಿರೆ ೨

ಮರುಗ ಮಲ್ಲಿಗೆ ಪಾದರಿ ಸುಮ ಪರಿಮಳ
ಭರಿತ ತಂಬೆಲರು ಪರಿಚರಿಸುತಿರೆ
ಪರಮಾನಂದವೆ ಪುರುಷನಾಗಿರುವ ಮಾಂ
ಗಿರಿಪತಿಯೊಲವನು ಪಡೆಯುವ ಗೆಳತಿ ೩

೩೧೦

ಕೇಳೆ ಕೊಳಲಿನ ದನಿಯ ಸಖಿಯೆ ನಾಳೆಯೆಂದೆನಬೇಡವೆ ಪ

ಹೇಳೆ ಕೊಳಲಿನ ನಾದ ಸೇರಲಿ ತಾಳವನು ಬಿಡಬೇಡವೆ
ಬಾಳು ಹಸನಾಗಿರಲು ಗಾನವು ಮೇಳವಿಸಬೇಕಲ್ಲವೆ ಅ.ಪ

ಗಾನವೇ ಸುಖಸಂಪದದ ನೆಲೆ ಗಾನವೆ ಶಿಶುಲಾಲನೆ
ಗಾನವೇ ಫಣಿಗಿಷ್ಟವಲ್ಲವೇ ಗಾನವೇ ಪಶುಪಾಲನೆ
ಗಾನದಿಂದಲೆ ಗೋಪಿ ನಲಿದಳು ಗಾನ ವೇದದ ಸಾಧನೆ ೧

ಅಂಗಜಾತನ ವೈರಿ ಜಪಿಸುವ ರಾಮನಾಮವೇ ಗಾನವು
ಅಂಗಜಾತನ ಪಿತನ ಕೊಳಲಿನ ಗಾನವೇ ಮಧುಪಾನವು
ಮಂಗಳಾಂಗನ ಪಾದಸೇವೆಗೆ ಮಾಂಗಿರೀಶನ ನಾಮವು ೨

೩೧೧

ಕೈತುತ್ತ ಹಾಕುವೆ ಬಾರೋ ರಂಗ
ಮೈತುಂಬಾ ಒಡವೆಯ ಇಡುವೆನು ಬಾರೋ ಪ

ಬೈತಲೆ ಬಾಚಿ ಹೂ ಮುಡಿಸುವೆ ಬಾರೋ
ತೈ ತೈ ತೈ ಎಂದು ಕುಣಿದಾಡು ಬಾರೋ ಅ.ಪ

ಬಿಸಿ ಬಿಸಿಯನ್ನವ ಮೊಸರಲಿ ಕಲಸಿ
ಹಸುವಿನ ಬೆಣ್ಣೆಯ ಅದರ ಮೇಲಿರಿಸಿ
ನಸುಕಂದನೀಯುವೆ ಕೇಸರಿ ಬೆರೆಸಿ
ತುಸು ಏಲಕ್ಕಿಯ ಪುಡಿಮಾಡಿರಿಸಿ ೧

ಬಸಿರಲ್ಲಿ ಜಗಗಳ ತುಂಬಿಹೆನೆಂದು
ಹಸಿವಿಲ್ಲವೆನಬೇಡ ಅಸುರರಕೊಂದು
ಬಿಸದ ಕಾಳಿಂಗನ ತುಳಿದೆದ್ದುನಿಂದು
ಬಸವಳಿದಿರ್ಪೆನೀನಮರರ ಬಂಧು ೨

ಹೊಸ ಪೀತಾಂಬರ ಕಟಿಬಂಧವಿಡುವೆ
ವಿಸರವ ಪಸರಿಪ ಹೂಗಳ ಮುಡಿವೆ
ರಸಸವಿನಾದದ ಕೊಳಲನು ಕುಡುವೆ
ನಸುನಗೆ ತೋರೋ ಮಾಂಗಿರಿರಂಗ ನಲಿವೆ ೩

೩೧೨

ಗೋಪಾಲ ಬಾಲಾ ತ್ರಿಭುವನ ಪಾಲಾ ಕರುಣಾಲವಾಲ
ಗೋಪಾಲ ಬಾಲಾ ಗೋಪೀ ಬಾಲಾ ಭಕುತಾನುಕೂಲ ಪ

ಪಾಪಕುಲಾನಲ ತಾಪಸ ಸಂಕುಲ
ಶ್ರೀಪತೆ ಮಾಂಗಿರಿನಿಲಯ ಶುಭಾಕುಲ
ತಾಪತ್ರಯ ಕುಲಜಾಲ ನಿರ್ಮೂಲ
ಗೋಪಗೋಪಿಕಾನಂದದುಕೂಲಾ ಅ.ಪ

ಮುರಳೀಧರ ಘನಸುಂದರ ಭಾವ ದೇವಾದಿದೇವ
ಸರಸೀರುಹದಳನಯನ ಸ್ವಭಾವಾ ಜೀವಾದಿಜೀವ
ವರದಾಯಕ ಶರಣರ ಸಂಜೀವಾ ಮೃದುಮಧುರಸ್ವಭಾವ
ಸ್ವರನಾದದಿ ಘಲು ಘಲ್ಲೆನುತಿರುವಾ

ವರನೂಪುರದುಂಗುರ ಝಣ ಝಣರವ
ಹರುಷದೊಳೆಲ್ಲೆಡೆಯೊಳು ನಲಿನಲಿದಾಡುವ ೧

ಮುದ್ದಾಡಿ ನಲಿಯಳೆ ನಿನ್ನ ಯಶೋದಾ ಅಘರೂಪವಾದ
ಮುದ್ದೆ ಬೆಣ್ಣೆಯ ಮೆಲುವಾತುರದಿಂದ ಕರಯುಗಗಳಿಂದ
ಕದ್ದು ನೀ ನೋಡುವುದೇ ಅತಿಚೆಂದ ಭಕ್ತರಾನಂದಾ
ಮದ್ದುಣಿಸಿದಳ ಒದ್ದು ಸಂಹರಿಸಿದ
ಶುದ್ಧನೆ ನಿನಗಾರಾಧೆಯೊಪ್ಪಿಸಿದುದ
ಸಿದ್ಧಮಾಡಿ ಮುದ್ದಾಡಿ ಕುಡುವೆನದ
ಮೆದ್ದು ಉದ್ಧರಿಸೊ ಗೋವಿಂದ ನಂದನಕಂದ ೨

ಅಕ್ಕೋ ಬೃಂದಾವನದಾನಂದ ಹೊಂಗೊಳಲಿಂದಾ
ಇಕ್ಕೋ ಚೆಂದದ ಗಾನಾನಂದ ಕಿರುನಗೆಯಿಂದ
ಅಕ್ಕೋ ಚೆಂದುಟಿಯಿಂದ ಮುಕುಂದ ಬಂದ ಗೋವಿಂದ
ಸಿಕ್ಕಿದನೆಂದೆವೆಯಿಕ್ಕದ ನೋಟದಿ
ಕಕ್ಕುಲತೆಯ ಮದದಿಕ್ಕೆಗೆ ಸಿಲುಕದ
ಠಕ್ಕುಗಾರ ಸೊಬಗಿಂದ ರಾಧೆಗೆ ಮುದ
ವಿಕ್ಕಿ ಮಡುವ ಧುಮ್ಮಿಕ್ಕಿ ನರ್ತನಗೈದ ೩

ಬಾ ಬಾರೋ ಬಕ ಶಕಟಾಸುರ ವೈರಿ ಕಂಸಾರಿ ಶೌರಿ
ಬಾ ಬಾರೋ ಪಾಂಡವ ಪಕ್ಷ ವಿಹಾರೀ ಶಿಶುಪಾಲ ಸಂಹಾರೀ
ಬಾ ಬಾರೋ ಭವ ಬಂಧನ ಪರಿಹಾರಿ ಶರಣರಿಗುಪಕಾರೀ
ಶುಭ ಫಲ ಲಹರೀ ಸದಮಲನೃಹರಿ
ಇಭಕುಲಕೇಸರಿ ಘನ ಗಿರಿಧಾರೀ
ಅಭಯಪ್ರದ ಹರಿ ಗೂಢಸಂಚಾರಿ
ನಭಚರಹರಿ ಮಾಂಗಿರಿ ಸುವಿಹಾರೀ ೪

೩೧೩

ಗೋಪಿಯ ಕಂದ ಇಗೋ ಬಂದ
ತಾಪಸರೆಡೆಯಿಂದ ಗೋವಿಂದ ಪ

ಆಪನ್ನರ ಕರೆ ಕೇಳಿಸಿದಾಕ್ಷಣ
ಗೋಪಿಯರೆಡೆಯಿಂದ ಪರಿಪರಿದೋಡಿ ಅ.ಪ

ಹಣೆಯ ಕಸ್ತೂರಿಯು ಥಳಥಳಿಸುತಿರೆ
ಮಣಿ ಮಾಲೆಗಳೆಲ್ಲಾ ಮಿನುಗಾಡುತಿರೆ
ಕಿಣಿ ಕಿಣಿ ನಾದದ ಗೆಜ್ಜೆ ನುಲಿಯುತಿರೆ
ಫಣಿಪತಿಶಯನ ಮಾಂಗಿರಿಯೆಡೆಯಿಂದ ೧

೩೧೪

ದೂರ ತರುವಿರೇನೆ ಕೃಷ್ಣನ ಮೇಲೆ ಪ

ದೂರ ತರುವಿರೇನೆ ಚೋರಾಗ್ರೇಸರನೆಂದು
ಕ್ಷೀರ ತಕ್ರಗಳನ್ನು ಸೂರೆ ಮಾಡಿದನೆಂದು ಅ.ಪ

ನೊರೆಹಾಲ ಕುಡಿಬಾ ದೊರೆ ಬಾರೋ ಬಾ ಎಂದು
ಕರದಿಂದಲೆತ್ತಿ ಮುತ್ತಿಟ್ಟೆಯಂತೆ
ಬಿರುಗಾಳಿ ಬಂತೆಂದು ಬಿಗಿದಪ್ಪಿ ಕೊರಳಿಂಗೆ
ಕೊರಳಿಟ್ಟು ಬರಿಗೈಯ ತೋರಿದೆಯಂತೆ ೧

ಹಸಿದೆ ಬಾ ಕಂದ ಮೊಸರ ಕುಡಿಯೆಂದು
ಮುಸಿನಗೆಯ ಬೀರಿ ಕೈಹಿಡಿದರವಳು
ಉಸಿರಾಡದಂತೆ ಅಧರಕಧರವನ್ನಿಟ್ಟು
ಹಸಿವಾರಿತಿನ್ನು ನೀ ಹೋಗೆಂದಳಂತೆ ೨

ಮಲ್ಲಿಗೆ ಹಾಸಿನಲ್ಲಿ ಮಲಗು ಬಾರೆನ್ನುತ
ಬೆಲ್ಲ ತುಪ್ಪವ ನೀ ತಿನ್ನಿಸಿದೆಯಂತೆ
ಹಲ್ಲ ತೋರಿಸು ಹೊಂಬೆಳಕ ನೋಡುವೆನೆಂದು
ಮೆಲ್ಲನೆ ಬಾಗಿ ಬಾಗಿ ಗಲ್ಲವ ಕಚ್ಚಿದೆಯಂತೆ ೩

ಬೆಣ್ಣೆಗಳ್ಳನು ಎಂದು ಹಿಂದೋಡಿ ಓಡಿ ಬಂದು
ಸಣ್ಣ ತೋಳನು ಹಿಡಿದು ಎಳೆದಾಡಲವಳು
ಕಣ್ಣಿನಲಿ ಕಣ್ಣಿಟ್ಟು ದೃಷ್ಟಿ ದೋಷವ ಬೀರೆ
ಚಿಣ್ಣ ಮಾಂಗಿರಿರಂಗ ಕಣ್ಣಬಿಡಲೊಲ್ಲ ನೋಡೆ ೪

೩೧೫

ನಳಿನಿಯ ಬಳಿಯಲಿ ಕುಳಿತ ಮರಾಳಾ
ಕೊಳಲಿನ ಬಾಲನು ಬಂದರೆ ಹೇಳಾ ಪ

ಪುಳಿನದ ಕೊಳದಲಿ ಕುಳಿತು ಕಾಯುವಳಾ
ಗೆಳತಿಯೆ ರಾಧೆಯು ಅವಳನು ಕೇಳಾ ಅ.ಪ

ತರುಗಳ ಮರೆಯಲಿ ತುರುಗಳ ನೆರೆಯಲಿ
ಕರುಗಳ ಜೊತೆಯಲಿ ನಲಿಯುತಲಿ
ಅರಳಿದ ಹೂಗಳ ಪರಿಮಳ ಭಾರದಲಿ
ಮೆರೆವಲತೆಯ ಬಳಿ ಇರುವನು ಒಲವಿನಲಿ ೧

ಮುರಳಿಯ ನಾದವನೆಲ್ಲೆಡೆಗೆರೆವ
ತರುಣಿಯರೀವಾ ಬೆಣ್ಣೆಯ ಮೆಲುವಾ
ಮೆರೆವಪೀತಾಂಬರ ಉಡಿಗೆಯೊಳೆಸೆವ
ಶರಣೆಂದೊಡೆ ನವಚೇತನವೀವ ೨

ಪಾಡಿಪೊಗಳುವರ ಕೂಡ ನರ್ತಿಸುವಾ
ನಾಡೆ ನರ್ತಿಸುವರ ನೋಡುತ ನಗುವ

ಬೇಡಿದ ವರಗಳ ನೀಡುತ ನಗುವ
ಮಾಡೆ ವಂದನೆಗಳ ಓಡಿಬಂದಪ್ಪುವ ೩

ಜೊನ್ನದ ಬಣ್ಣವ ಹಳಿಯುತೆ ಬೆಳಗುವ
ಚೆನ್ನ ಮರಾಳವೆ ನಿನ್ನೆಡೆ ಬರುವ
ಅನ್ನೆಗಮೆನ್ನನೀ ಕರೆಯಲು ಮಾಡುವ
ಸನ್ನೆಯ ಕಂಡೋಡಿ ಪಿಡಿಯುವೆ ಚರಣವ ೪

ಬಾಲೆಯರೊಡನೆ ಕೋಲಾಟವನಾಡುವ
ನೀಲಾಂಬರ ಘನ ಶ್ಯಾಮನವ
ಮೇಲೆನಿಸುವ ವನಮಾಲೆಯಿಂದೆಸೆವ
ಬಾಲನವನು ಮಾಂಗಿರಿಗೆ ಬಾರೆನುವ ೫

೩೧೬

ನಿನ್ನ ತನುಜನೆಲ್ಲೇ ಗೋಪಿ ಪ

ತನ್ನ ಬಳಿಗೆ ಬಾರೆನ್ನುತಲೋಡಿದ ಅ.ಪ

ನೊರೆ ನೊರೆ ಹಾಲನು ಸುರಿಸುರಿದು ತನ್ನ
ಕಿರು ಬೆರಳಾಡಿಸಿ ಕೊರಳನು ಕೊಂಕಿಸಿ
ಪರಿ ಪರಿ ಹಾಸ್ಯ ಕುಚೋದ್ಯವ ಮಾಡುತ
ಮುರಳಿಯನೂದಿ ಬಾರೆನ್ನುತ ಬಂದನೆ ೧

ಬೆಣ್ಣೆಯ ಕದ್ದು ಕೈ ಸುಣ್ಣವಾಯಿತು ಎಂದು
ಕಣ್ಣು ಬಾಯಿಗಳಿಂದ ಸನ್ನೆಯ ಮಾಡಿ
ಹಣ್ಣನು ತಿನ್ನುವೆ ಎನ್ನುತಲೋಡಿದ
ಚಿಣ್ಣನು ಮಾಂಗಿರಿರಂಗನು ನೋಡೇ ೨

೩೧೭

ನಿಲುನಿಲು ಘನಲೀಲಾ ನಲಿನಲಿ ಗೋಪಾಲ ಪ

ಕಿಲಕಿಲನಗು ಬಾಲಾ ಒಲಿಒಲಿ ಶ್ರೀಲೋಲಾ ಅ.ಪ

ಅಡಿಯಿಡು ಸಡಗರದಿ ನುಡಿನುಡಿ ಕಡುಮುದದಿ
ಪಿಡಿಕೊಳಲನು ಕರದಿ ನುಡಿಸಿ ಮುದ್ದಾಡುವೆ ನಾನು ೧

ತೊದಲುನುಡಿಗೆ ನಲಿವೆನು ಬಾ ಬಾ
ಚದುರತನವ ನೀ ತೋರುತೆ ಬಾ ಬಾ
ಮುದದಿ ಕುಣಿಯುತೆ ಮಣಿಯುತೆ ಬಾ ಬಾ
ಇದೆಗೋ ಎತ್ತಿಕೊಂಡೊಯ್ವೆನು ೨

ಜೋಗುಳಗಳ ಹಾಡಿ ರಾಗದಿ ಕೊಂಡಾಡಿ
ಬಾಗಿ ಬಿಗಿದು ಕುಣಿದಾಡಿ ನಾಗಸಂಪಿಗೆ ಸೂಡಿ ೩

ಸಂತಸದಿಂದೋಡು ಅಂತರಿಕ್ಷವ ನೋಡು
ಕಂತುಕವೆಸೆದಾಡು ಶಾಂತಿಯ ಮನಕೆ ಕೊಡು ೪

ಚಂದಿರನಂದದ ಕಂದಾ ನೊಂದಿಹ ಮನಕಾನಂದಾ
ಸುಂದರ ಮುಖಾರವಿಂದಾ ಅಂದದ ನಗು ಮಿಗಿಲಾನಂದಾ ೫

ಗೋಲಿಯನಾಡುವೆ ಬಾ ಗಾಲಿಯನೋಡಿಸು ಬಾ
ಬಾಲಭಾಷೆಯ ಪೇಳುವ ಬಾ ಲೀಲೆಯನೀಕ್ಷಿಸಿ ದಣಿವೆ ೬

ಕುಣಿ ಕುಣಿ ಅರಗಿಣಿಯೆ । ಅಣಕಿಸು ಮನದಣಿಯೆ
ಮಣಿ ಮಣಿ ಕಣ್ಮಣಿಯೆ । ತಣಿಯುವ ಮನಕೆಣೆಯೆ ೭

ಕಣ್ಣಿಗೆ ಕಪ್ಪಿಡುವೆ ಬೆಣ್ಣೆಯ ಕೈಲಿಡುವೆ
ಬಣ್ಣದ ಹೂಮುಡಿವೆ ಹಣ್ಣನು ಮೆಲಗುಡುವೆ ೮

ನೂರೆಹಾಲ್ಕುಡಿ ನೀಲಾಂಗ ಮರೆಹೊಕ್ಕರ ಪೊರೆ ರಂಗಾ
ಕರುಣಿಸೊ ಶಿರಬಾಗುವೆನಾಂ ಮಾಂಗಿರಿಯ ರಂಗಾ ೯

೩೧೮

ನೋಡ ಬಂದನೇ ಬಾಲಗೋಪಾಲ ಪ

ನಾಡೆರಾಧೆ ಪಾಲ ಕರೆಯುವ ಪರಿಯ ಅ.ಪ

ಮೊಲೆಯನು ತನ್ನ ಬಾಯ್ಗೆರೆಯುವ ಮೋಹದಿ
ಕರುವಿಗೆ ಬಿಡದೆ ಪಾಲ್ಗರೆಯುವಳೋ ಎಂದು ೧

ಹಿರಿಸತಿ ರುಕ್ಮಿಣಿಯರಮನೆಯೊಳು ತಾ
ನಿರುವುದ ಕಂಡು ಬೇಸರಗೊಳುವಳೋ ಎಂದು ೨

ಅರೆಘಳಿಗೆಯು ತನ್ನ ಮರೆಯದ ರಾಧೆಗೆ
ಹರುಷವನೀಯೆ ಮಾಂಗಿರಿ ಶಿಖರವ ಬಿಟ್ಟು ೩

೩೧೯

ನೋಡಮ್ಮ ಕೃಷ್ಣನ ಕೂಡ ನಾನಾಡುವೆ
ನೋಡೆ ಕಣ್ದಣಿಯಾ ಪ

ಪಾಡುವೆ ಪೊಗಳುವೆ ನೋಡುತ ನಲಿಯುವೆ
ನೋಡೆ ಕಣ್ದಣಿಯಾ ಅ.ಪ

ಮುರಳಿಯ ಗಾನಕೆ ಸರಿಸಮ ಕುಣಿವೆವು
ನೋಡೆ ಕಣ್ದಣಿಯಾ
ಪರಿಮಳ ಪುಷ್ಪದ ಮಾಲೆಯ ಧರಿಸುವೆ
ನೋಡೆ ಕಣ್ದಣಿಯಾ ೧

ಬಾಲೆಯರೊಡನೆ ಕೋಲಾಟವಾಡಿದೆ
ನೋಡೆ ಕಣ್ ದಣಿಯಾ
ಲೀಲಾವಿನೋದದಿ ನಲಿಯುವ ಕೃಷ್ಣನ
ನೋಡೆ ಕಣ್ ದಣಿಯಾ ೨

ಓಡುವ ಕೃಷ್ಣನ ಕೂಡೆ ನಾನಾಡುವೆ
ನೋಡೆ ಕಣ್ ದಣಿಯಾ
ಹಾಡುವ ರಾಸಕ್ರೀಡೆಯೊಳೆಸೆವೆವು
ನೋಡೇ ಕಣ್ ದಣಿಯಾ ೩

ಜಗವ ಬಾಯಲಿ ತೋರ್ದ ಖಗವಾಹನನಿವ
ನೋಡೆ ಕಣ್‌ದಣಿಯಾ
ಭಗವಂತನಿವ ನಸುನಗುವ ಸೌಂದರ್ಯವ
ನೋಡೇ ಕಣ್ ದಣಿಯಾ ೪

ನಾರದವಂದ್ಯನ ನೀರಜಪಾದಕೆ ಮಾಡೆ ವಂದನೆಯ
ನೀರಜನೇತ್ರ ಮಾಂಗಿರಿಯ ರಂಗಯ್ಯನ ಪಾಡೆ । ಮನದಣಿಯಾ ೫

೩೨೦

ನೋಡಾನ ಬನ್ನಿ ನೋಡಾನ ಬನ್ನಿ
ಮುದ್ದು ಕೃಷ್ಣಯ್ಯನ ನೋಡಾನ ಬನ್ನಿ ಪ

ಹಾಡಾನ ಬನ್ನಿ ಹಾಡಾನ ಬನ್ನಿ
ಕೃಷ್ಣಗೆ ಪೂಜೆಯ ಮಾಡಾನ ಬನ್ನಿ ಅ.ಪ

ಚಿನ್ನದ ತೊಟ್ಟಿಲಲ್ಲಿ ಚೆನ್ನಾಗಿ ಕುಂತವ್ನೆ
ಚೆನ್ನ ಚೆಲುವನಕ್ಕೋ ನಗುತವ್ನೇ
ಕನ್ನೆ ರಾಧಮ್ಮಗೆ ಸನ್ನೆಯ ಮಾಡುತವ್ನೆ
ಬನ್ನಿ ಬನ್ನಿ ಎಂದು ಕರಿತವ್ನೆ ೧

ಹುಬ್ಬಹಾರಿಸ್ತವ್ನೆ ಮಬ್ಬ ತೋರಿಸ್ತವ್ನೆ
ಅಬ್ಬಬ್ಬ ಇವನಾಟ ಬಲ್ ತಮಾಸೆ
ಒಬ್ಬಿಟ್ಟು ಬೇಕಂತ ಕೈಲೇ ತೋರಿಸ್ತಾನೆ
ಅಬ್ಬ ಇವ ಏಳೋದು ಒಂಥರ ಬಾಸೆ ೨

ಎಂಥ ಮುದ್ದಿನ ಮೊಗ ಚೆಂದುಳ್ಳಿ ಚೆಲುವ
ಇಂಥವ್ನ ನೀವೆಲ್ಲೂ ಕಂಡಿಲ್ಲ ಬನ್ರೋ
ನಿಂತು ನೋಡಬೇಕಿವಗೆ ಆಲು ಮೊಸರು ಬೆಣ್ಣೆ
ಹಣ್ ತುಂಬಿದ ಗಂಗಾಳ ತನ್ರೋ ೩

ಮೈಗೆ ಸರಮಾಲೆಗಳು ಕಾಲ್ಗೆ ಕಿನ್ನರ ಗೆಜ್ಜೆ
ಕೈಗೆ ಔಜುಬಂದಿ ತೊಟ್ಟವ್ನೆ
ಕಣ್ಗೆ ಕಪ್ಪಾ ಹಚ್ಚಿ ನವಿಲ್ಗರಿ ತಲ್ಗಿಟ್ಟಿ
ಹಣೆ ಉದ್ದಾದ ತಿಲಕ ಇಟ್ಟವ್ನೇ ೪

ರಾಮ್ನೂ ನಾನೆಂತಾನೇ ಭೀಮ್ನೂ ನಾನೆಂತಾನೇ
ಕಾಮ್ನಪ್ಪನೂ ನಾನೆ ನೋಡಂತಾನೆ
ನಿಮ್ಮೂರ ದೇವ್ರಾಣೆ ನಾನೆ ಮಾಂಗಿರಿರಂಗ
ನಿಮ್ನ ಕಾಯೋಕ್ಬಂದೆ ಅಂತಾನೆ ೫

೩೨೧

ನೋಡಿ ದಣಿಯಳೂ ಗೋಪಿ ಹಾಡಿ ದಣಿಯಳೂ ಪ

ನೋಡಿ ಹಾಡಿ ಹೊಗಳಿ ಕೃಷ್ಣಗೆ ಮಾಡಿ ಮಾಡಿ ಸಿಂಗರವನು ಅ.ಪ

ಮಣ್ಣತಿಂದು ಚಪ್ಪರಿಸುವ ಚಿಣ್ಣನೆಡೆಗೆ ಓಡಿಬಂದು
ಸಣ್ಣಬಾಯ ಬಿಡಿಸಿ ವಿಶ್ವವ ಕಣ್ಣಿನಿಂದ ಕಂಡು ನಲಿದು ೧

ವಿಕಳೆಯಸುವ ಹೀರಿ ಕುಣಿದು ಶಕಟಖಳನನೊದ್ದು ಕೊಂದು
ಬಕನ ಸೀಳಿ ಫಣಿಯ ತುಳಿದ ವಿಕಸಿತಾಂಗನ ಹಾಡಿ ಹೊಗಳಿ ೨

ಗಿರಿಯನೆತ್ತಿ ಬೆರಳಿನಿಂದ ಕರದಮುರಳಿನಾದದಿಂದ
ಧರೆಯ ದಿವಿಯಗೈದ ಮಾಂಗಿರಿಯರಸರಂಗನಂಗವ ನೋಡಿ ೩

೩೨೨

ಬಂದವನಾವನೋ ನಾ ಕಾಣೆ
ಇಂದೀವರ ನೇತ್ರಾ ಸುಗಾತ್ರಾ ಪ

ಮೆಲ್ಲಡಿ ಇಡುವ ಮರೆಯಲಿ ನಿಲುವಾ
ಕಾಂತಿಯ ಚೆಲ್ಲುವ ನೋಡಲು ನಗುವಾ ಅ.ಪ

ಆಕಳ ಕರೆವಾಗ ಸಾಕೆಂದೆನುವಾ
ಆಕಳ ಬೆಣ್ಣೆಯೇ ಬೇಕೆನುತಿರುವಾ
ಏಕೆಲೊ ಮರೆಯಾಗಿ ನಿಂತಿಹೆ ಪೇಳೆನೆ
ನೀ ಕೊಡೆ ನಾ ಬಿಡೆ ಕೇಳೆಂಬಾ ೧

ಮೊಸರನು ಕಡೆವಾಗ ಹಸಿವೆಂದೆನುವ
ಬಿಸಿಯನ್ನವನಿಡೆ ಹಸುವಿಗೆ ಕೊಡುವಾ
ನುಸುಳಿ ಬಂದು ಕೆನೆಮೊಸರನೆ ಮೆಲ್ಲುವ
ಕಿಸಿಕಿಸಿ ನಗುತಲಿ ಓಡುವನಾರೋ ೨

ಬೆಣ್ಣೆಯ ತೆಗೆವಾಗ ತಣ್ಣೀರೆರಚುವ
ಕಣ್ಣು ಮುಚ್ಚಲು ಬೆಣ್ಣೆಯ ಕಳುವ
ಹೆಣ್ಣುಗಳೆಡೆಯಲಿ ನಗುತಲಿ ಹುದುಗುವ
ಚಿಣ್ಣನು ಮಾಂಗಿರಿರಂಗನೇ ಯೇನೋ ೩

೩.೨೩

ಬೇಗನೆ ಕರೆತಾರೇ ಸಖಿಯೇ [ಬೆಗನೆಕರೆತಾರೆ] ಪ

ನಾಗಶಯನನವ ಕೂಗದೆ ಬಾರನೆ ಅ.ಪ

ಪೂತನಿ ಶಿಶುಗಳ ಘಾತಿಸುತಿಹಳೆಂಬ
ಮಾತನವಗೆ ಪೇಳೆ ಭೀತಿಯತೋರಿ
ಆತುರದಿಂದವ ಐತರುವನೆ ಸಖಿ
ಪ್ರೀತಿಯೊಳೀವೆನೀ ರತುನದ ಹಾರವ ೧

ಕರಿ ಧ್ರುವ ಪ್ರಹ್ಲಾದ ತರುಣಿ ಪಾಂಚಾಲಿ
ಮೊರೆಯಿಡುವುದ ಹೇಳೆ ಭರದಲಿ ಬರುವ
ಉರಗನ ಗರಳದಿ ಕರುತುರು ನೋಯುವ
ಪರಿಯ ಬಿತ್ತರಿಸಿ । ಮುರಳೀಧರಗೆ ೨

ಸಂಗಡ ಬರದಿರೆ ಭಂಗಿಸುವರು ಗೋ
ಪಾಂಗನೆಯರು ಎಂದು ರಂಗಗೆ ಹೇಳೇ
ಇಂಗಿತಜ್ಞನು ನಮ್ಮ ಮಾಂಗಿರಿಯರಸನು
ಸಂಗಡ ಬರುವನು ಸಂದೇಹವಿಲ್ಲ ೩

೩.೨೪

ಭುವನಮೋಹನ ಮಾಧವ ನಿನ್ನ ಕಮಲ ಪಾ
ದವ ತೋರಿಪಾಲಿಸೋ ಬಾಲಗೋಪಾಲ ಪ

ದಿವಿಜೇಶ ವನಜಸಂಭವ ನಿತ್ಯನೇಮ ರಾ
ಧೆವಲ್ಲಭ ಸಂಗೀತ ಲೋಲಾ ಅ.ಪ

ನಂಬಿದ ಭಕ್ತರ ಬೆಂಬಿಡದಿಹೆ ನೀ
ನೆಂಬುದು ನಿಜವೆಂಬುದ ತೋರೋ
ಅಂಬುದ ಶ್ಯಾಮರೋಲಂಬನಂದದೆ ಪಾ
ದಾಂಬುಜಯುಗಳವ ನಂಬಿದೆನಯ್ಯ ೧

ತಂದೆ ಕರೆಯಲ್ಕೆತಂದೆ ಕರಿಯು ಕೂಗೆ
ಒಂದು ನಿಮಿಷಾರ್ಧದಿ ಬಂದೆ ಕೃಪಾಳು
ಇಂದಿರೆಯರಸ ಗೋವಿಂದ ಮಾಂಗಿರಿರಂಗ
ಮಂದರಧರ ಬಾರೆಂದು ಬೇಡುವೆನಯ್ಯ ೨

೩.೨೫

ಮಂಜುಳನಾದವು ರಂಜಿಸಿತು
ಕಂಜನಯನಕೃಷ್ಣ ಕೊಳಲನು ಊದಲು ಪ

ಅಂಜಲಿಯಲಿ ಪುಷ್ಪಹಾರವ ಪಿಡಿಯುತ
ಸಂಜೆಯ ತಿಂಗಳು ಬೆಳಗಿರಲು ಅ.ಪ

ಕೈಯಲಿ ವೀಣೆಯ ನುಡಿಪ ಕನ್ನೆಯರು
ಮೈಯಿನ ಗಂಧವ ಚೆಲ್ಲುತಲಿರಲು
ಸುಯ್ಯಿ ಸುಯ್ ಸುಯ್ ಎಂದು ಚಲಿಸಲು ಎಲರು
ಜೈಯೆನುತಲಿ ಗೋಪಿ ವೃಂದವು ನಲಿಯಲು ೧

ಸರಿಗಮಪದನಿ ಸ್ವರಗಳ ರವದಲಿ
ಸರಸ ಸಾಹಿತ್ಯವು ಉರುಳುತಲಿರಲು
ಮುರಳಿಯ ಇಂಚರ ಸರಿಸಮ ತೂಗಲು
ವರದ ಮಾಂಗಿರಿರಂಗ ನಸುನಗೆ ಬೀರಲು ೨

೩೨೬

ಮನೆಯೊಳಗಾಡೋ ನೆನೆವರ ನೋಡೋ ಪ

ಮುನಿಸಬೇಡವೋ ಎನ್ನ ಮಾನಸವೆಂದೆಂಬ ಅ.ಪ

ನಸುನಗೆಯನು ತೋರಿ ನುಸುಳಿ ಪೋಗುವೆಯೇಕೆ
ಬಿಸಿಬಿಸಿ ಪಾಲನಿತ್ತು ಬೀಸಿ ಬೀಸಿ ತೂಗುವೆನು ೧

ಬಡಮುನಿಗಳು ನಿನ್ನ ಪಿಡಿದೆಳೆಯೆ ಚಿಣ್ಣ
ನುಡಿಯಿದು ಸಟೆಯೆನಬೇಡ ಕದ್ದೋಡಬೇಡ ೨

ಎನ್ನದೆಂಬುದೆಲ್ಲ ನಿನ್ನದೋ ಮಾಂಗಿರೀಶ
ನಿನ್ನ ನಾಮದ ನೆಲೆ ಎನ್ನದೆನ್ನಿಸೋ ರಂಗ ೩

೩೨೭

ಮರೆಯುವರಾರೆ ಶ್ರೀ ಮುರಳೀಧರನ ಕಂಡು
ವರವ ಬೇಡದವರಾರೆ ಪಡೆಯದವರಾರೆ ಪ

ಮುರಳೀದನಿಯ ಕೇಳಿ ಪರಿದೋಡದವರಾರೆ
ಅವನೆಡೆ [ಪರಮಸುಖ] ಪಡೆಯದವರಾರೆ ಅ.ಪ

ಕಂಜನಾಭನು ಬಂದು ಪುಂಚವನದಿ ನಿಂದು
ಮಂಜುಳಗಾನವ ಮಾಡುತಿರೆ
ಅಂಜುವರೇನೆ ನಿರಂಜನನವ ಪಾಪ
ಭಂಜಕನೇ ತಂಗಿ ಹೋಗೋಣ ಬಾರೆ ೧

ಮಂಗಳಮೂರ್ತಿ ಮಾತಂಗವರದ ಭವ
ಭಂಗನ ಚರಣವ ನೋಡುವ ಬಾರೆ

ಮಂಗಳ ಜಯ ಜಯ ಮಂಗಳ ಮಾಂಗಿರಿ
ರಂಗಗೆ ಶುಭವೆಂದು ಪಾಡುವ ಬಾರೆ ೨

೩೨೮

ಯಾವ ಸಂಭ್ರಮವಿದೇ ವಾರಿಜ ವದನೆ
ಶ್ರೀವೇಣುಗೋಪಾಲ ಮನೆಗೆ ಬಂದಿಹನೇ ಪ

ದೇವ ದೇವನು ನಿನ್ನ ಪೂಜೆಗೊಪ್ಪಿದನೇ
ಯಾವ ವಾತ್ಸಲ್ಯವ ನಿನಗೆ ತೋರಿದನೇ ಅ.ಪ

ಗಾನ ನೃತ್ಯಗಳಿಂದ ಒಲಿಸಿದೆಯೇನೇ
ಜೇನು ಸಕ್ಕರೆ ಬೆಣ್ಣೆಗಳನಿತ್ತೆಯೇನೇ
ಸಾನುರಾಗದಿ ಪೂಜೆ ಮಾಡಿದೆಯೇನೇ
ನಾನೇನಗೈದರೆ ಅವನೊಲಿಯುವನೇ ೧

ಪರಿಮಳ ಗಂಧಕೆ ಮೈ ತೋರುವನೇ
ಕೊರಳಿಗೆ ಹಾರವ ನೀಡಲೊಪ್ಪುವನೇ
ಮುರಳಿಯ ಗಾನವನೊಲಿದು ಕೇಳುವನೇ
ಪರಮಪುರುಷ ಬಾರೆಂದರೆ ಬಹನೇ ೨

ಕರಗಳ ಮುಗಿದರೆ ಕರುಣಿಪನೇನೇ
ಚರಣಕೆ ಮಣಿದರೆ ಒಲಿಯುವನೇನೇ
ಪರಿಪರಿ ಹೊಗಳಲು ನಲಿಯುವನೇನೇ
ವರದ ಮಾಂಗಿರಿರಂಗ ದಯೆ ತೋರನೇನೇ ೩

೩೨೯

ರಂಗ ಬಾರೋ ರಂಗ ಬಾರೋ
ರಂಗ ಬಾರೋ ಶ್ರೀರಂಗ ಬಾರೋ ಪ

ತುಂಗ ಕೃಪಾಂಬಿಕ ಮಂಗಳದಾಯಕ ಅ.ಪ

ಮೆಲ್ಲಮೆಲ್ಲನೆ ಬಾ ಮೆಲ್ಲಡಿಯಿಡು ಬಾ
ಮೆಲ್ಲುಲಿಯುಲಿ ಬಾ ಮೆಲ್ಲು ಬೆಣ್ಣೆಯ ಬಾ
ಸಲ್ಲಲಿತಾಂಗ ಬಾ ಪಲ್ಲವಾಧರ ಬಾ
ಫುಲ್ಲಲೋಚನ ಬಾ ಚೆಲ್ವಮೂರ್ತಿಯೆ ಬಾ ೧

ಗಂಗೆಯ ಜನಕ ಬಾ ಅಂಗಜಪಿತನೆ ಬಾ
ಭೃಂಗಕುಂತಳನೆ ಬಾ ಮಂಗಳ ಮೂರ್ತಿ ಬಾ
ಹೊಂಗೊಳಲೂದು ಬಾ ಸಂಗೀತಲೋಲ ಬಾ
ಮಾಂಗಿರಿಯರಸ ಬಾ ಬಾಬಾರೊಬಾರೋ ೨

೩೩೦

ಸಾರತರದ ಮುರಳಿದನಿಯ ಕೇಳಿದೆ ಏನೆ ಪ

ನಾರಿಮಣಿಯರುಲಿವದನಿಯ ಕೇಳಿದೆ ಏನೆ ಅ.ಪ

ನಲಿದು ಕುಣಿವ ಲಲನೆಯರನು ನೋಡಿದೆ ಏನೆ
ಬಾಲಕೃಷ್ಣ ಸಲೆ ನಗುವುದ ನೋಡಿದೆ ಏನೆ
ಝಣ ಝಣ ಝಣ ಕಿಣಿ ಕಿಣಿ [ಭರ್‍ತಾ] ರವವು ಕೇಳ್ವುದೇನೆ ೧

ಬಡನಡುವಿನ ಮಡದಿಯವನ ಅಡಿಯ ಪಿಡಿವೆ ಏನೆ
ಕಡುಬೆಡಗಿನ ಹುಡುಗಿಯವನ ಅಡಿಯ ಪಿಡಿವೆ ಏನೆ
ಸಡಗರದಲಿ ನಡೆದು ಮನವ ರಂಗಗೀವೆ ಏನೆ ೨

ಮನದ ಕಲುಷವಳಿದು ಮುದವ ತಳೆದಿಹೆಯೇನೆ
ಇನಿದುವಚನ ಕನಸು ನೆನಸ ತಳೆದಿಹೆಯೇನೆ
ತನುಮನಧನ ಮಾಂಗಿರೀಶಗೊಪ್ಪಿಪೆಯೇನೇ ೩

೩೩೧

ಸಿಕ್ಕದೆ ಪೋಪೆಯೇತಕೆ ಮಾಂಗಿರಿರಂಗ ಪ

ಸಿಕ್ಕದೆ ಪೋಪೆಯೇಕೆ ಠಕ್ಕುಮಾಡುವೆಯೇಕೆ
ಅಕ್ಕರೆಯಿಂದ ನಾ ಸಕ್ಕರೆ ಕೊಡುವೆನೆ ಅ.ಪ

ಚಿಣ್ಣರ ಕೂಡಾಡಿ ಕಣ್ಣುಸನ್ನೆಯ ಮಾಡಿ
ಸಣ್ಣಕೊಳಲಪಾಡಿ ಬೆಣ್ಣೆಗಳ್ಳ ರಂಗಾ ೧

ಪಿಡಿದು ಬರುವೆನೆಂದು ಕಡಲಿನೊಳಗೆ ಮಿಂದು
ಪೊಡವಿದೇವಿಯ ತಂದು ಕಡುನೊಂದುದಾಯ್ತಿನ್ನು ೨

ತರಳ ಪ್ರಹ್ಲಾದನು ಕರೆಯುತಲಿಹನೇ ನಿನ್ನ
ಕರದೆ ಬೆಣ್ಣೆಯನಿಟ್ಟು ಕರುಣಾಳು ಬಾರೆನಲು ೩

ಕಡುನುಡಿಗಳ ಕೇಳಿ ಪಿಡಿಯಲಾರೆನೇ ನನ್ನ
ಕಡೆಗಣಿಸಲಿ ಬೇಡ ಅಡಿಗೆರಗುವೆ ರಂಗಾ ೪

ಮಾಂಗಿರಿಮೇಗಿಹ ಶೃಂಗಾರ ದೇವಯ್ಯ
ರಂಗ ನೀನೆನ್ನಂತರಂಗ ದೇವದೇವಾ ೫

ತಾಮರಸಾಕ್ಷನೆ ಕಾಮಿತ ದಾತನೆ
ರಾಮದಾಸಾರ್ಚಿತ ಭೀಮವಿಕ್ರಮ ರಂಗಾ ೬

೩೩೨

ಸುಲಲಿತ ಮಧುಕರ ಕೊಳಲನೂದುವುದನು
ಕಲಿಸಿದರಾರೇ ನಳಿನಮುಖೀ ರಾಧೇ ಪ

ಬಲಿಸಂಹಾರನು ಲೋಕದ ನಾರಿಯ
ರಲಸದೆ ಗಾನವ ಕಲಿಸಿದನೇನೇ ಅ.ಪ

ಕರು ತುರುಗಳ ಬಳಿ ಸರಸವನಾಡುತ
ಮುರಳಿಯನೂದುವ ಸರಸಿಜನಾಭ
ಕರೆಕರೆದು ನಿನ್ನ ಬೆರಳಿಗುಂಗುರವಿಟ್ಟು
ಸ್ವರಗಳ ಬೋಧಿಸಿ ನಲಿನಲಿದಿಹನೇನೇ ೧

ಬೃಂದಾವನದಲಿ ನಂದಕುಮಾರನ
ವಂದಿಸೆ ನಾರದ ಬಂದುಹಾಡಿದನೇ
ಅಂದದ ಕಲಿಕೆಯ ತುಂಬುರ ನಿನಗಾ
ನಂದದಿ ಗಾನವ ಕಲಿಸಿದನೇನೆ ೨

ಅಂಗಜಪಿತನಿಗೆ ಮಂಗಳಗಾನವ
ಅಂಗನೆ ಶಾರದೆ ಪಾಡಿದಳೇನೇ
ಮಾಂಗಿರಿರಂಗ ಮಾತಂಗವರದನಂತ
ರಂಗದರಾಣಿ ನೀ ಕಲಿಯೆಂದನೇನೇ ೩

೩೩೩

ಸ್ಥಾಣುಂಕರ ವಿರಾಜಿತ ರಮಾಸದನ ಮೋಹನ ಪ

ವಾಣೀಶ ಸಂಭಾವಿತ ಗೋಪೀಜನ ಸೇವಿತಾ ಅ.ಪ

ಮಣಿಭೂಷಣ ರಂಜಿತ ಮುಕ್ತಜನಾನಂದಿತಾ ೧

ಫಣಿಮಣಿಗಣ ಸಂಭೂಷಿತ ವನಿತಾಜನ ತೋಷಿತ ೨

ಅಣುರೇಣು ತೃಣಪೂರಿತ ಗುಣಸಾಗರ ಮಾಂಗಿರೀಶ ೩

೩೩೪

ಹೊಂಗೊಳಲೂದುತ ಬರುವ ರಂಗ
ಮಂಗಳ ಗಾನಕೆ ನಲಿವ ಪ

ಅಂಗನೆಯರ ಕೂಡಾಡುತೆ ಕುಣಿವ
ರಂಗನ ಪಾದಕೆ ಮಣಿವ ಅ.ಪ

ಕಿರುನಗೆ ನಸುನಗೆ ನಗುವ ಮರಕತಹಾರದಿ ಹೊಳೆವ
ಸ್ಮರವರನಂದವ ಹಳಿವ ಕರುಣವ ಬೀರುತ ಒಲಿವ ೧

ಗಾನದಿ ಮನವನು ಸೆಳೆವ ಧ್ಯಾನಕೆ ತನುಮನ ತೆರುವ
ಸನ್ನುತ ಪದವಿಯ ಕೊಡುವ ಮಾಂಗಿರಿ ರಂಗಗೆ ಮಣಿವ ೨

ಸಾಮಾಜಿಕ–ಲೋಕನೀತಿ ಸ್ತುತಿಗಳು

೩೩೫

ಅಳುವವರಿಲ್ಲದ ಜಗವಿಲ್ಲ ಪ

ಅಳುವಿಲ್ಲದವಗೆ ನಲವಿಲ್ಲಾ ಸದಾ
ಅಳುವವನಿಗೆ ಸದ್ಗತಿಯಿಲ್ಲ ಅ.ಪ

ಅಳಿವಿಂಗಳುವುದು [ಅಸಹಾಯಾರ್ಥ]
ಬಳಲಿಕೆಗಳುವುದು ಬಹುವ್ಯರ್ಥ
ಘಳಿಗೆಯೊಂದಾದರೂ ನಳಿನನಾಭನಕೃಪೆ
ಗಳುವುದೇ ಮನುಜಗೆ ನಿಜದರ್ಥ ೧

ಸ್ವಾಮಿಯ ಬಳಿಯಲಿ ಕಾಮಿತವಿಲ್ಲದ
ನಾಮಭಜನೆಯೊಳು ಇರಬೇಕು
ಶ್ರೀಮಹಿತಾಂಗ ಮಾಂಗಿರಿರಂಗಯ್ಯನ
ಪ್ರೇಮಕಳುವ ಮನವಿರಬೇಕು ೨

೩೩೬

ಇಂದಿನ ದಿನವೆ ಸುದಿನ । ಗೋ
ವಿಂದನ ಸ್ಮರಣೆಯ ಗೈದುದರಿಂದ ಪ

ನಾಳೆ ಏಕಾದಶಿ ಹರಿದಿನವೆನಲಾ
ವೇಳೆಗೆ ವುಳಿವೆವೋ ಅಳಿವೆವೋ ಅರಿಯೆವು
ತಾಳವಾದ್ಯತಂಬೂರಿಗಳಿಲ್ಲವೆಂ
ದಾಲೋಚಿಸೆ ಹರಿಭಜನೆಯು ದುರ್ಲಭ ೧

ಗೀತವಿದ್ಯಾಕೋವಿದರಿಹರೆನ್ನುತ
ಯಾತರ ದಾಸರ ಪದಗಳು ಎನುತಲಿ

ಮಾತನಾಡಿ ಕಾಲವ ಕಳೆದೊಡೆ ಇ
ನ್ನಿತರ ಕಾಲವು ದೊರಕುವುದಿಲ್ಲ ೨

ದಾಸರ ಪದದೊಳಗಿರುವ ಮಹತ್ವವು
ಲೇಶವಿಲ್ಲ ಸಂಗೀತ ಸ್ವರದೊಳು
ಭಾಸುರಾಂಗ ಮಾಂಗಿರಿಪತಿ ಸಲಹುವ
ದಾಸರಪದ ತಾಳಗಳಿಗೊಲಿವಾ ೩

೩೩೭

ಇದು ಕಲಿಗಾಲದ ಮಹಿಮೆಯ ಗುಟ್ಟು
ಮುದಿತನ ಬಂದರೆ ಮಾಯದ ಪೆಟ್ಟು ಪ

ವಿಧವೆಯಾದರೆ ತಲೆಯ ಮೇಲ್ಮೊಟ್ಟು
ವಿಧುರನಾಗೆ ದುರ್ನೀತಿಯ ಕಟ್ಟು ಅ.ಪ

ಕುರುಡನಾದರೆ ಅಣಕದ ಬಾಳು
ಅರೆಕಿವುಡಗೆ ಬೈಗುಳ ಕೂಳು
ನರಳಿದರೆ ಸಾಯಲಿಲ್ಲವೆಂಬ ಗೀಳು
ಕೊರಗಿ ಕಣ್ಣೀರನು ಸುರಿಸುವ ಗೋಳು ೧

ಇತ್ತಬಾರದಿರು ಎಂಬರು ಕೆಲರು
ಅತ್ತಲೆ ಹೋಗು ಹೋಗೆಂಬರು ಕೆಲರು
ಎತ್ತಹೋದರೂ ಬಂದುದೇಕೆಂಬರು
ತುತ್ತೊಂದಾದರೂ ಸಿಗದೆಂಬುವರು ೨

ಹದ್ದುಹದ್ದೆಂಬುವ ಬಿರುನುಡಿಯಿಂದ
ಒದ್ದೋಡಿಸುವಳು ಸೊಸೆ ಮನೆಯಿಂದ
ಕದ್ದೋಡುವನು ಮಗ ಭಯದಿಂದ
ಮದ್ದುಕೊಡಯ್ಯ ಮಾಂಗಿರಿಯ ಗೋವಿಂದ ೩

೩೩೮

ಕೆಡುವೆಯೇಕೋ ಮನುಜ ಕೆಡುವೆಯೇಕೋ ಪ

ಪೊಡವಿಯಾ ಸುಖ ಸ್ಥಿರವದೆಂಬ ದೃಢವನಾಂತು ನೀ ಅ.ಪ

ಧನವಗಳಿಸಲೇಂ ಮನುಜಾ ಮನೆಗಳೀಡಾಡೆ
ಎನಿತು ಬಳಗಮಿರ್ಪೊಡೇನು ತನುವಿನಾಸೆಯಿಂ ೧

ಮರೆವೆಯೇತಕೋ ಮನುಜಾ ಅರಿಯಲೆನ್ನುತಾ
ಬರಿಯ ಮಾಯೆಯೀ ಪ್ರಪಂಚ ಚಿರವೆಂದೆನ್ನುತಾ ೨

ರಂಗಮಾಲೋಲನಾ ಮಾಂಗಿರೀಶನ ನೆನೆ[ದರೆ]
ಹಿಂಗದೇ ಭವಬಂಧಗಳನು । ಭಂಗಗೈಯನೇ ೩

ಕಾಲದೂತ ರಂಗ ಕಾಲಿನಿಂದೊದೆಯುವಾಗ
ಬಾಲರಾಮದಾಸ[ನುತನ] ನಲಿದು ನೆನೆಯದೆ ೪

೩೩೯

ಚಿಂತೆಯಿಲ್ಲದ ನರನು ಧರೆಯೊಳಗಿಹನೇ
ಅಂತರಂಗದಿ ನಮ್ಮ ರಂಗನಿಲ್ಲದಿರೆ ಪ

ಅಂತರಂಗದಿ ಶುದ್ಧಿ ಇಲ್ಲದಿರೆ ರಂಗಯ್ಯ
ಎಂತು ನೀನಿಹೆಯಯ್ಯ ಮಾನಸದಿ ಸ್ವಾಮಿ ಅ.ಪ

ಧನಧಾನ್ಯಗಳ ಚಿಂತೆ ಕನಕದೊಡವೆಯ ಚಿಂತೆ
ತನುಜ ತನುಜೆಯರನ್ನು ಪಡೆವ ಚಿಂತೆ
ಅನಿಶ ಯೌವ್ವನವಾಂತು ಕನಸು ನನಸುಗಳಲ್ಲಿ
ವನಿತೆಯರನೊಡಗೂಡಿ ಭೋಗಿಸುವ ಚಿಂತೆ ೧

ಉಡಿಗೆ ತೊಡಿಗೆಯ ಚಿಂತೆ ಉಡುವೆನೆಂಬಾ ಚಿಂತೆ
ಒಡಲ ಪೋಷಿಪ ಚಿಂತೆ ಕಡಲಲೆಗಳಂತೆ
ಪಿಡಿದೆನ್ನ ಬಾಧಿಪುವು ಬಿಡಿಸೆಲ್ಲ ಚಿಂತೆಗಳ
ಕೊಡು ನಿನ್ನ ಸೇವೆಯನು ಮಾಂಗಿರಿಯರಂಗ ೨

೩೪೦

ಜಪವ ಮಾಡಿದರೇನು ತಪವ ಮಾಡಿದರೇನು
ವಿಪುಲಭಕ್ತಿಯು ಮಾತ್ರ ಇಲ್ಲದಿರುವವನು ಪ

ವಿಪರೀತ ಡಂಭದಲಿ ಉಪಕರಣಗಳ ತೋಳೆದು
ಕೃಪೆ ಪಡೆಯದಿರೆ ಗುರು ರಾಘವೇಂದ್ರನ ಅ.ಪ

ಗುರುವಿನುಪದೇಶದ ಸ್ಮರಣೆಯನು ಮರೆತವನು
ಗುರುಪಾದ ಸೇವೆಯನು ತೊರೆದು ಕಿರಿದೆನ್ನುವನು
ಹರಿಯನೇ ನಾ ಕಂಡೆ ಗುರುಹಂಗು ಎನಗಿಲ್ಲ
ಸರಿಯಾರು ತನಗೆಂಬ ಗರುವಯುತನು ೧

ಗುರುವಿನೊಲವೇ ಧರ್ಮ ಗುರುಸೇವೆಯೇ ತಪ
ಗುರುನಾಮವೇ ಮಂತ್ರ ಗುರುಸಿದ್ಧಿಯೇ ತಂತ್ರ
ಗುರುವೇ ಸ್ವರ್ಗಕೆ ದಾರಿ ಗುರುರೂಪ [ಕಣ್‌ಸಿರಿಯು]
ಗುರುವೇ ಸರ್ವಸ್ವ ಮಾಂಗಿರಿರಂಗನುಸಿರು ೨

೩೪೧

ಜಾತಿ ಕುಲಗೋತ್ರಗಳ ಖ್ಯಾತಿ ಹಿರಿದಲ್ಲಯ್ಯ ಪ

ನೀತಿ ನಯ ಭಕುತಿಗಳು ಹಿರಿಯವಯ್ಯ ಅ.ಪ

ಸ್ನಾನ ಸಂಧ್ಯಾ ಹೋಮ ಧ್ಯಾನ ದಿನಚರ್ಯೆಗಳ
ತಾನಲಕ್ಷ್ಯವ ಗೈವ ಮಾನವನು ದ್ವಿಜನೇ

ಶ್ರೀನಿವಾಸಾ ರಂಗ ದಾನವಾರಿ ಎಂದು
ಜಾನಿಸುವ ಹರಿಜನರು ಹೀನರಹರೇ ೧

ಬೂದಿ ನಾಮವ ಬಳಿದು ವೇದಾಂತಿ ತಾನೆಂದು
ಮೇದಿನಿಯ ಜನರಲ್ಲಿ ಕ್ರೋಧ ತೋರಿ
ಮಾಧವನ ಭಕುತರಲ್ಲಿ ಭೇದ ವೈರವ ತಾಳಿ
ವಾದ ಮಾಡುವ ನರಗೆ ಹರಿಯ ಕೃಪೆಯುಂಟೆ ೨

ವನಜನಾಭನ ನೆನೆದು ತನುಮನವನರ್ಪಿಸದೆ
ಧನದಾಸೆದೋರುವನು ಹರಿಭಕುತನೆ
ಕನಸುಮನಸಿನೊಳೆಲ್ಲ ಮಾಂಗಿರೀಶನ ಭಜಿಸಿ
ದಿನಪೂಜೆಗೈವವನು ಕುಲಹೀನನೇ ೩

೩೪೨

ತನುವ ತೊಳೆದ ಮಾತ್ರದಿಂದ ಜನರು ಶುದ್ಧರೆನಿಪರೆ ಪ

ಮನದ ಶುದ್ಧಿ ಆದ ಹೊರತು ವನಜನಾಭನೊಲಿವನೇ ಅ.ಪ

ದಿನಪನುದಯ ಕಾಲದಿಂದ ದಿನಪನಸ್ತದನ್ನೆಗಾ
ಧನವಗಳಿಸುವಾಸೆಯಿಂದ ಮನಸಿನಲ್ಲಿ ಯೋಚಿಸಿ
ಮನಸಿಜಾತನಾಟಕೆ ಪರವನಿತೆಯರ ಬೆರೆಯುತುರುಳಿ
ಕನಸಿನಲ್ಲಿ ಹರಿಯ ಕಂಡೆ ಎನುತ ಪೇಳ್ವ ಮಾನವಾ ೧

ಪರರು ನೋಡಿ ಮೆಚ್ಚಲೆಂದು ಬೆರಳಿನಿಂದ ಮಣಿಯನೆಣಿಸಿ
ಶಿರವನೊಮ್ಮೆತೂಗಿ ತೂಗಿ ತೆರೆದು ಮುಚ್ಚಿ ಕಂಗಳ
ಹಿರಿಯ ಭಕ್ತನಂತೆ ನಟಿಸಿ ಪರರ ಮೋಸಗೊಳಿಸಿ ದಣಿಸಿ
ಬರಿಯಡಾಂಭಿಕ ಮಾಂಗಿರೀಶ್ವರನ ಶರಣನೆನಲು ಸಾಧ್ಯವೇ ೨

೩೪೩

ತನುವಿದು ನಿತ್ಯವಲ್ಲ ಮನವು ನಿಶ್ಚಲ ಅಲ್ಲ ಪ

ಕನಸಿನಂತೆ ಜೀವಿತವೆಲ್ಲ ಇನಿತು ಶಾಂತಿಯ ತಾಣ ಅಲ್ಲ ಅ.ಪ

ಜಲಚರಂಗಳು ವನಚರಂಗಳು
ಅಲೆವ ಪಕ್ಷಿಕೀಟಕ್ರಿಮಿಗಳು
ಕಲುಷ ವಿಮಲವೆಂಬುದನರಿಯವು
ಸುಲಭವೀಗುಣ ಮಾನವ ಜನ್ಮಕೆ ೧

ಜನುಮಗಳೊಳು ಹಿರಿಯದೆನಿಪ
ಮನುಜ ಜನ್ಮವನಾಂತ ಮೇಲೆ
ವಿನಯ ನಯ ವಿಧೇಯತೆಯಿಂದ
ವನಜನಾಭನ ನೆನೆಯದಿರ್ದೊಡೆ ೨

ಭಜಿಪ ಭಕ್ತರ ಕೂಗಿಗೊಲಿದು
ಗಜವ ಪಾಲಿಸಿದಂತೆ ಬಂದು
ನಿಜಪದಂಗಳ ತೋರ್ಪ ಮಾಂಗಿರಿ
ವಿಜಯರಂಗನ ಸನ್ನುತಿ ಗೈಯದ ೩

೩೪೪

ತಾನಾಗಿ ದೊರಕುವುದು ಹರಿದರುಶನ ಪ

ಶ್ರೀನಾಥವಿಠಲನಲಿ ದೃಢಭಕ್ತಿವುಳ್ಳವಗೆ ಅ.ಪ

ಅರುಣೋಯದೊಳೆದ್ದು ಹರಿಕೃಷ್ಣ ಎನುವವಗೆ
ಹರಿಹರಿ ಹರಿ ಎಂದು ಸ್ನಾನಗೈವವಗೆ
ಹರಿಯ ದ್ವಾದಶನಾಮ ಪಠಣೆಯಿಂಮಣಿವವಗೆ
ಗರುಡವಾಹನ ಕೃಷ್ಣ ಗೋಪಾಲಯೆನುವವಗೆ ೧

ನಿತ್ಯಕರ್ಮವಗೈದು ಫಲವ ಬಯಸದ
ಕರ್ತವ್ಯಗಳ ಗೈದು ಫಲ ಕೃಷ್ಣಗರ್ಪಿಪ ನರಗೆ
ಉತ್ಸಾಹದಿಂದ ಅಭ್ಯಾಗತರ ಪೂಜಿಪಗೆ
ಸತ್ಯದೈವವು ಎಂದು ಗೋಸೇವೆ ಗೈವವಗೆ ೨

ಕುಳಿತು ನಿಲುವೆಡೆಗಳೊಳು ಹರಿಕೃಷ್ಣ ಎನುವವಗೆ
ಇಳೆಯೊಳಿಹ ನರರೆಲ್ಲ ಭ್ರಾತರೆಂದವಗೆ
ಉಳಿವು ಅಳಿವುಗಳೆಲ್ಲ ಹರಿಕರುಣವೆಂಬವಗೆ
ಜಲಜನಾಭನ ದಿವ್ಯ ನಾಮಗಳ ಭಜಿಸುವಗೆ ೩

೩೪೫

ತಾಳಬೇಕು ಭಕ್ತಿಯೇಳಬೇಕು ಪ

ತಾಳಬೇಕಾದವನು ಮೇಳದಲಿ ಬಾಳಬೇಕು ಅ.ಪ

ಹಾಡಲು ತಾಳಬೇಕು ಬೇಡಲು ತಾಳಬೇಕು
ಓಡಾಡಿ ಕುಳಿತು ಮಾತಾಡಲು ತಾಳಬೇಕು
ನೋಡಬೇಕಾದವನು ನೋಡಲು ತಾಳಬೇಕು
ಮಾಡಿ ಮುಳುಗುವ ಜನ್ಮಬೇಡೆಂದು ತಾಳಬೇಕು ೧

ತಾಳರಿತಮೇಲಂತರಾಳವನು ಕಾಣಬೇಕು
ತಾಳದವ ಬಾಳುವನೇ ಮೇಳದೊಳಗೇ
ತಾಳ ನೋಡುವರೆಲ್ಲ ಹೂಳನೋಡಲಿಬೇಕು
ತಾಳಿ ಮಾಂಗಿರಿರಂಗನೂಳಿಗಕ್ಕೆ ನುಗ್ಗಬೇಕು ೨

೩೪೬

ದಾಸನಾಗಬೇಕು ಮನದಲಿ ಆಸೆಯಿಂಗಬೇಕು ಪ

ಮೋಸಮೆಂಬುದಂಕುರಿಸದ ಅದರ
ವಾಸನೆಯಂಟದ ಮಾನಸದಲಿ ಹರಿ ಅ.ಪ

ಅತಿಮಾತಾಡುವ ಸತಿಯಿರಬೇಕು
ಖತಿಯಿಂತೆರಳುವ ನೆಂಟರು ಬೇಕು
ಹಿತವನು ಬಯಸದ ಸುತರೂ ಬೇಕು
ಸತತಮಿವೆಲ್ಲರ ಸಹಿಸಿ ಭಜನೆಗೈವ ೧

ತಣಿವಿಲ್ಲದೆ ತಿಂಬ ಅಣುಗರು ಬೇಕು
ಹಣವ ಕೊಡೆಂಬುವ ಅಳಿಯರು ಬೇಕು
ಋಣಬಾಧೆಗಳೊಳು ಕೊರಗಲು ಬೇಕು
[ಅಣು ಅಣು ಕಾಡುವ ಸಂಸಾರಕಂಟದೆ] ೨

ಮಾನಸವ ಬಿಗಿಹಿಡಿದಿರಬೇಕು
ಧ್ಯಾನದೊಳಾತ್ಮಶಾಂತಿಯು ಬರಬೇಕು
ಶ್ರೀನಿವಾಸನೇ ಶರಣೆನಬೇಕು
ಜ್ಞಾನದಿ ಮಾಂಗಿರಿರಂಗನ ಪಾದದ ೩

೩೪೭

ದುರಿತಾರಿಯೊಳು ಮನವಿರಿಸಿ ಸೌಖ್ಯವತಾಳು
ನರಕವು ಬರದೊ ಮಾನವಾ ಪ

ಪರಿಪರಿ ಜನ್ಮದೆ ಕೊರಗಿ ಕಂಗೆಡಬೇಡ
ಸ್ಥಿರವಲ್ಲವೀ ದೇಹವೂ ಭರವಸದಿಂದ ಅ.ಪ

ಮಂದಮತಿಯನಾಂತು ನೊಂದು ಸಾಯಲಿಬೇಡ
ಮಂದರಧರಗೆರಗು
ಇಂದ್ರಿಯವೆಂಬುದ ಬಂಧಿಸು ಜತನದಿ
ಕುಂದುಕೊರತೆಗಳಿಲ್ಲವೋ ವಂದಿಸಲು ಹರಿಯ ೧

ಎರಡು ಕಂಬದ ಮೇಲೆ ಮೆರೆವ ಗೋಪುರವಿದು
ಚಿರಕಾಲವಿರದೋ
ಬಿರುಗಾಳಿಯಿಂದಲೋ ಉರುತರ ಮಳೆಯೊಳೊ
ಉರುಳಿ ಬೀಳುವುದೆಂಬುದು ಬರೆದಿಡೊ ಮೂಢಾ ೨

ನೀರ ಬೊಬ್ಬುಳಿಯಂತೆ ಆರಿಹೋಗುವುದಿದು
ಸೇರದು ಪದುಮಾಕ್ಷನಾ
ಆರುದಿನ ಬಾಳಿಗಾರು ಸಮರೆನಬೇಡ
ಆರಡಿ ಕಮಲವುತಾ ಸೇರುವವೊಲು ೩

ಎನಗೆ ಮುಂದೊದಗುವ ಜನ್ಮಕೋಟಿಗಳೊಳು
ಅನುಗಾಲ ದೇಶವಸ್ಥೆಗಳೊಳಗೂ
ವನಜನಾಭನೆ ನಿನ್ನ ಘನಪಾದಕಮಲವ
ನೆನೆವ ನೆಲೆಸುವಂದದೆ ಅನವರತ ಬೇಡೋ ೪

ಜೀವಾತ್ಮ ಪೋಪಾಗ ದೇವದೇವನ ಮರೆವ
ಭಾವಗಳೊಳುದಯಿಪವು
ಸಾವಕಾಶವ ತೊರೆದು ಮಾಂಗಿರಿರಂಗನ
ದಿವ್ಯನಾಮವ ನೆನೆದು ಭಾವುಕನಾಗು ೫

೩೪೮

ಧರ್ಮದ ನೀತಿಯ ಅರಿತೇನು
ಮರ್ಮದ ರೀತಿಯ ತಿಳಿದೇನು ಪ

ಧರ್ಮಕರ್ಮಗಳು ಹರಿಗರ್ಪಣವೆಂದು
ನಿರ್ಮಲಚಿತ್ತದಿ ಧ್ಯಾನಿಸದವನು ಅ.ಪ

ಗಂಗಾಸ್ನಾನವ ಮಾಡಿದರೇನು
ಅಂಗುಲಿಯೂರುವ ಯೋಗದೊಳೇನು

ಪಂಗನಾಮ ಬೂದಿಯ ಬಳಿದೇನು
ರಂಗನ ಸ್ಮರಿಸದ ಮನವಿದ್ದೇನು ೧

ದೇಶ ದೇಶಂಗಳ ತಿರುಗಿದರೇನು
ಆಶೆಯ ಬಿಡದ ಕಾಷಾಯದಿಂದೇನು
ಕಾಶಿರಾಮೇಶ್ವರಕೋಡಿದರೇನು
ಶ್ರೀಶನನಾಮವೇ ಗತಿಯೆನದವನು ೨

ಚಿತ್ತದಿ [ನೆನೆದರೆ] ಹರಿ ಕಿರಿದೇ
ಸತ್ತು ಹುಟ್ಟುವುದೇ ಜಗದೊಳು ಹಿರಿದೇ
ಎತ್ತೆತ್ತಲು ಹರಿಯಿಹನೆನಬಾರದೇ
ಕರ್ತಶ್ರೀ ಮಾಂಗಿರಿರಂಗನ ನೆನೆಯದೆ ೩

೩೪೯

ನಗುವಿನಿಂದಾರೋಗ್ಯ ಉಂಟೆಂಬರಯ್ಯ
ನಗುವಿನಲಿ ಹಲವಾರು ಬಗೆಗಳುಂಟಯ್ಯ ಪ

ನಗುವಿಂದ ಸನ್ಮಿತ್ರ ಹಗೆಯಪ್ಪುದುಂಟಯ್ಯ
ನಗುತ ಬಾಳೆಂಬುದೇ ಸೊಗವೋ ರಂಗಯ್ಯ ಅ.ಪ

ಗೊಳ್ಳೆಂಬ ನಗೆಯುಂಟು ಬಲ್ಲವನ ಸಭೆಯಲಿ
ಕಳ್ಳನಗೆಯೊಂದುಂಟು ಪೊಳ್ಳುಕಡೆಗಳಲಿ
ಸುಳ್ಳುನಗೆಯೊಂದುಂಟು ಜಳ್ಳು ಡಾಂಭಿಕರಲಿ
ಮುಳ್ಳುಕಲ್ ನಗೆಯುಂಟು ಕಳ್ಳಕಾಕರಲಿ ೧

ನಸುನಗೆಯು ಮನದ ಸಂತಸದ ಕುರುಹು
[ಎಸೆ]ವ ರಸನೆ ನಗುವುದೇ ಹಾಸ್ಯವಯ್ಯಾ
ರಸಪೂರ್ಣ ನಗುವುಂಟು ಬಿಸಜಾಕ್ಷನಲ್ಲಿ
ಹೊಸದಾದ ನಗು ಮಾಂಗಿರಿನಲವಿನಲಿ ೨

೩೫೦

ನರ್ತನಶಾಲೆ ಇದೇನಯ್ಯ
ವರ್ತುಳವಾದ ಭೂಮಂಡಲವೆಲ್ಲಾ ಪ

ಕರ್ತನೀನೇ ಚಕ್ರವರ್ತಿಯಾಗಿರುವೆ
ವರ್ತನೆ ಗಡಿಬಿಡಿ ಮಾಡದಿರಯ್ಯ ಅ.ಪ

ಕುಂಟರು ಕುರುಡರು ನರ್ತನೆಗೈವರು
ನೆಂಟರು ಭಂಟರು ನರ್ತಿಸುತಿರುವರು
ಗಂಟನುಂಗುವರೂ ನರ್ತಿಸುತಿಹರೋ ೧

ವರ್ತಕ ಲಾಭಕೆ ನರ್ತಿಸುತಿಹನು
ಆರ್ತ ದರ್ಶನಕಾಗಿ ನರ್ತಿಸುತಿಹನು
ನರ್ತನೆ ಮಾಂಗಿರಿಪತಿ ಕೃಪೆಗೈಯ್ಯ ೨

೩೫೧

ಬೇಡಿಕೆಗೆ ಮಿತಿಯಿಲ್ಲ ಬೇಡಿಕೆಗೆ ಕೊನೆಯಿಲ್ಲ
ಬೇಡಿ ಬದುಕುವುದೊಂದು ರೋಗವಯ್ಯ ಪ

ರೂಢಿಗೊಡೆಯನ ದಿವ್ಯನಾಮಗಳ ಕೊಂಡಾಡಿ
ಹಾಡುವವಗೆ ರೋಗಭಯವಿಲ್ಲವಯ್ಯಾ ಅ.ಪ

ಬೇಡುವವ ಮನೆಮನೆಗೆ ಓಡೋಡಿ ನಿಲಬೇಕು
ನಾಡಿಗರ ನೋಡಿ ಕೈ ನೀಡಬೇಕು
ನೋಡಿದರೆ ಕಟ್ಟಾಳು ಬೇಡುವೆ ಹೋಗತ್ತ ದುಡಿ
ಗೇಡಿ ಎಂದಾಗ ಗೋಳಾಡಲೇಕಯ್ಯ ೧

ಕಂಡ ಕಂಡವರಿಗೆಲ್ಲ ಕೈಮುಗಿದು ಮಂಡೆಯ ಬಾಗಿ
ಭಂಡನೆಂದೆನಿಸುವುದು ಮಾನಭಂಗ

ಪುಂಡರೀಕಾಕ್ಷ ಗೋವಿಂದ ನಾಮವ ಹಾಡಿ
ಕೊಂಡಾಡಲೊದಗುವವನು ಮಾಂಗಿರಿಯರಂಗ ೨

೩೫೨

ಧ್ಯಾನಕೆ ಮನವಿಲ್ಲ ಸುರಪಾನಕೆ ಕೊನೆಯಿಲ್ಲ ಪ

ಮಾನ ಮರ್ಯಾದೆಗೆ ಒಲವಿಲ್ಲ
ದಾನಧರ್ಮಕೆ ಕೈಯಿಲ್ಲ
ಹೀನರ ಸಂಗವು ಬೇಸರವಲ್ಲ
ಜ್ಞಾನದ ಸೊಲ್ಲಿಗೆ ಸ್ಥಳವಿಲ್ಲ ೧

ಮಾವೆಂದರಿತುದು ಬೇವಾಯ್ತಲ್ಲ
ಜೀವಕೆ ಅರಿವಿನ ಅರಿವಾಯ್ತಲ್ಲ
ಮಾವ ಭಾವವೆನ್ನುವರಿಲ್ಲ
ದೀವಿಗೆ ಆರಿ ಕತ್ತಲೆಯಹುದೆಲ್ಲ ೨

ಇಂತಾದುದು ಎನ್ನ ನಾಟಕ ರಂಗ
ಚಿಂತೆಯಿಂದ ತುಂಬಿತು ಸಕಲಾಂಗ
ಮುಂತೋರದು ಕಾಯೊ ಘನ ನೀಲಾಂಗ
ಸಂತವಿಸೋ ಎನ್ನ ಮಾಂಗಿರಿರಂಗ ೩

೩೫೩

ಮುಕುತಿಯ ಮಾರ್ಗವ ಹಿಡಿಯಲಿಬೇಕು
ಭಕುತಿಯು ಮನದಲಿ ಮಾಡಲಿಬೇಕು ಪ

ಭಕುತರು ತುಳಿವ ಕಲ್ಲಾಗಿರಬೇಕು
ಲಕುಮಿಯ ರಮಣನ ದಯೆ ಬರಬೇಕು ಅ.ಪ

ನೊಂದವರನು ಸಂತೈಸಲಿಬೇಕು
ತಂದೆ ತಾಯಿಯರ ವಂದಿಸಬೇಕು
ಬಂದುದ ಮೋದದಿ ಪಡೆಯಲಿಬೇಕು
ಇಂದಿರೆಯರಸನೇ ಗತಿಯೆನಬೇಕು ೧

ಸಂಗವು ಶರಣರದಾಗಿರಬೇಕು
ರಂಗನೊಳೇ ಮನ ತಂಗಿರಬೇಕು
ಭಂಗಿಸಿ ಕಾಮವ ವರ್ಜಿಸಬೇಕು
ಮಾಂಗಿರಿನಾಥನ ದಯೆ ಬರಬೇಕು ೨

೩೫೪

ಮುಮುಕ್ಷುಗಳನು ಉಪಚರಿಸುವವ ನೀನೆ ಹರಿಯೆ ಪ

ಅಪ್ಪಾ ಮಾಂಗಿರಿ ರಂಗ ಅಪರಾಜಿತ ನೀನೆಂಬುದ ತಿಳಿದೂ
[ಉಪಾಧಿಗೊಳಗಾದೆ ನಿನ್ನ ಮರೆತು] ಅ.ಪ

ಇನ್ನೆವರ ಒಮ್ಮನದಿ ಯೋಚಿಸಿದ ಫಲವಾಗಿ
ನಿನ್ನ ಮಹಿಮೆಯನರಿತೆ ಸಂಪೂರ್ಣವಾಗಿ ೧

ರನ್ನಹಾರಗಳನ್ನು ಕಟ್ಟಿರುವೆ ಸಾಲಾಗಿ
ನಿನ್ನ ಮೈಬಣ್ಣವನ್ನು ಮುಚ್ಚುವುದಕಾಗಿ ೨

ಸಕಲಾಂಗಗಳು ಹೊಳೆವ ಮುತ್ತು ಮಾಣಿಕ್ಯಗಳು
ಉಡಿಗೆಯಾಗಿರಲೇನು ಕಾಂಬುವಂಗಗಳು ೩

ಅದರಿಂದ ನಿನ್ನ ಮೈ ಮುಖವು ಕೈಕಾಲ್ಗಳು
ಕಪ್ಪು ಕಾಣಿಸದಿರದು ಹೇಳುವೆನು ಕೇಳಾ ೪

ನೂರಾರು ಯೋಜನದ ದೇಹ ನಿನ್ನದು ತಾಯೆ
ನಿನ್ನ ಕೆಲಸಗಳೆಲ್ಲಾ ಅತಿ ವಿಚಿತ್ರದ ಮಾಯೆ ೫

ಬೆಳಕ ಬಾಯೊಳಗಿಟ್ಟು ಮತ್ತು ಉಗುಳುವೆ ತಾಯೆ
ನಿನ್ನ ವಿಸ್ತೀರ್ಣವನು ನಾನಳೆಯಲರಿಯೆ ೬

೩೫೫

ರಾಗಿ ಬೆಳೆಯುವಾ ನಿರ್ಮಲರಾಗಿ ಬೆಳೆಯುವಾ ಪ

ಸೇವಕರಾಗಿ ಬೆಳೆಯುವಾ ಭಾವುಕರಾಗಿ ಬೆಳ
ಗೂವರಾಗಿಯಾದ ಮೇಲೆ ರಂಗನಪಾದವ ಪೂಜಿಪರಾಗಿ ಅ.ಪ

ಪರರ ಹಳಿಯದಿರುವರಾಗಿ ಪರರಸುಖಕೆ ನಲಿವರಾಗಿ
ಪರರ ಸೇವೆಗೈವರಾಗಿ ಪರಮಶಾಂತರಾಗಿ
ಹಿರಿಯರೆಡೆಯ ಕಿರಿಯರಾಗಿ ಕಿರಿಯರೆಡೆಯ ಗೆಳೆಯರಾಗಿ
ಹರಿಯನೆನೆವ ಮಾನಸರಾಗಿ ಪರಮಭಕ್ತಿಯಿಂದ ಜಾನಿಪರಾಗಿ ೧

ವಿತ್ತದಾಸೆಯ ಹಳಿವರಾಗಿ ಚಿತ್ತಪಿತ್ತವ ತೊಡೆವರಾಗಿ
ಕುತ್ತವಿಲ್ಲದ ಪುಷ್ಟರಾಗಿ ನಿತ್ಯ ತೃಪ್ತರಾಗಿ
ಹೊತ್ತಿಗೊದಗಿ ಬರುವರಾಗಿ ಮತ್ತು ಭ್ರಮೆಗಳಿಲ್ಲದರಾಗಿ
ಚಿತ್ತಜಾತಜನಕ ಮಾಂಗಿರಿರಂಗನ
ಪಾದಯುಗಳಕೆರಗುವರಾಗಿ ೨

೩೫೬

ಸಕ್ಕರೆರುಚಿ ತಾಯಕ್ಕರೆ ಬಲುರುಚಿ
ಚಿಕ್ಕರಂಗನ ಉಕ್ಕುವ ರುಚಿಯು ಪ

ಸಕ್ಕರೆ ರಸನೆಗೆ ಅಕ್ಕರೆ ಮನಸಿಗೆ
ಚಿಕ್ಕರಂಗನ ನಗು ಸಿಕ್ಕದೆಲ್ಲರಿಗೆ ಅ.ಪ

ಜೇನು ಮಧುರ ಅಭಿಮಾನ ಮಧುರಬ್ರಹ್ಮ
ಜ್ಞಾನ ಮಧುರ ಕೃಷ್ಣಾ ಎನಲತಿಮಧುರ

ಜೇನು ಸಕ್ಕರೆಗಿಂತ ಮಾಂಗಿರಿರಂಗನ
ಜ್ಞಾನಾಮೃತಪಾನ ನಿರುಪಮಮಧುರ ೧

೩೫೭

ಸ್ಥಿರವೆಂದು ನಂಬಿ ಕೆಡಬೇಡ ಮನುಜಾ ಧರಣಿ [ಬಾಳು]
ಕರುಣೆಯಿಹುದು ಮಾ[ಂಗಿರೀಶನ] [ನಂಬಿದರೆ] ಪ

ಕ್ಷೀರಾಬ್ಧಿಗೈದು ಮುದದಿ ಪೊರೆವನು ಸ್ತನ್ಯದಿಂ
ಹೀರಿ ತೇಲುತ ಬೆಳೆದು ತೋರಮುತ್ತುಗಳಾ
ಹಾರ ಪದಕಗಳಿಂದ ಚಾರುಭೂಷಣದಿಂದ
ಮಾರಸುಂದರನೆನಿಪ । ಮೂರು ದಿನದ ಬಾಲ ೧

ಬಾಲತನ ಪೋಗಲು ಮೇಲೆ ಯೌವನವೊದಗಿ
ಬಾಲೆಯೋರ್ವಳಕರವ ಘಳಿಲದೊಳು ಹಿಡಿದು
ಮೇಲಾದ ಸೌಭಾಗ್ಯವಲ್ಪಕಾಲವಿರುವಾಗ
ಕಾಲದೂತರು ಪಿಡಿಯಲೊಡನೆ ಬ[ರುವ]ವರಿಲ್ಲ ೨

ಉಕ್ಕುವ ಯೌವನದ ಸೊಕ್ಕಿಲ್ಲ ಮರುದಿನ
ಉಕ್ಕುಕ್ಕಿ ಬಸವಳಿದು ಶಕ್ತಿಗುಂದಿ
ಸುಕ್ಕು ಸುಕ್ಕಿನ ದೇಹ[ಭಾ]ವವಿಲ್ಲದ ಬಾಳ
ಭಕ್ತಿಗೆ ಮನಮರೆಯೆ ಭಕ್ತಗತಿಯದರಿಂದ ೩

ಧನವ ದಾಯಾದಿಗಳು ಮನವ ಕಾಮಾದಿಗಳು
ಸನುಮತ ಜ್ಞಾನವನ್ನು ದುರಿತಕಾರ್ಯ
ತನುಜ ತನುಜೆಯರೆಲ್ಲರವರವರ ಸೌಖ್ಯವನು
ಸನಿಹದಿಂ ಸೂರೆಗೈವರಿನ್ನೇತರಾಸೆ ೪

ಕುಂಟು ಜೀವವಿರುವನಕ ನೆಂಟರಿಷ್ಟರು ಹಣವ
ಗಂಟನುಂಗಲು ಬರುತಲೆಂಟೆಂಟುದಿನವಿಹರು
ಗಂಟು ತೀರಿದ ಬಳಿಕ ಪಾಪಪುಣ್ಯಗಳ ಹೊರತು [ಏ
ನುಂಟು ಈಭವದ ನಂಟಿನಲಿ ಯದರಿಂದ ೫

ಜೀವ ತಾ ಜನಿಪಂದು ರವೆಯಷ್ಟು ತರಲಿಲ್ಲ
ಅವನಿಯಾ ಬಿಡುವಂದು ಜವೆಯಷ್ಟ ಹೊರಲಿಲ್ಲ
ಭಾವಶುದ್ಧಿ ಬೇಕನಿಶ ಮಾವಿನಾಕೆರೆರಂಗನ
ಸೇವಿಸಿದೊಡಾ ರಂಗ ಭವವೆಲ್ಲ ಕಳೆವಾ ೬

೩೫೮

ಹಣವನರಸುವರೆಲ್ಲ ಗುಣವನರಸುವರೆ
ಮಣಿಯನರಸುವ ಕೆಲರು ಹಣಕೆ ಬಾಯ್ ಬಿಡರೆ ಪ

ನೀಡುವವನೊಬ್ಬನಿರೆ ಬೇಡವೆಂಬುವರಿಹರೆ
ನೀಡಲೊಲ್ಲದ ನರನ ನೋಡುವವರಿಹರೆ
ಬೀಡು ಹೆಚ್ಚಳಸಿರಿಯ ನೀಡೆನಗೆ ತನಗೆಂಬ
ನಾಡಿಗರ ಗಡಣವನು ಎಣಿಸಲಳವೇ ೧

ಕಲಿಯುಗದ ನೀತಿಯೋ ಬಲುದುರಾಸೆಯ ಬಲೆಯೋ
ಸಲೆ ಬೆಳೆದಸೂಯೆಯೋ ಕಲಿತ ದುರ್ನೀತಿಯೋ
ಜಲಜಾಕ್ಷನನೀ ದುಶ್ಶೀಲ ಪ್ರವಾಹದಲಿ
ಅಲೆಯಬಿಡಬೇಡಯ್ಯ ಮಾಂಗಿರಿಯ ರಂಗ ೨

೩೫೯

ಹರಿಪಾದ ತೀರ್ಥವನು ಕರದಿ ಪಿಡಿದವರೆಲ್ಲ
ತಿರುನಾಮದವರೆನಲು ನಂಬಬಹುದೇ ಪ

ಪರವಾಸುದೇವನನು ಮರೆತು ಸತಿಸುತರ
ವರಾಭರಣವೇ ಹಿರಿದೆಂಬ ನರರಿಲ್ಲವೇ ಅ.ಪ

ಹರಿನಿವೇದನಕಾಗಿ ಕರದಿ ಫಲಪುಷ್ಪಗಳ
ತರುವವರು ದಕ್ಷಿಣೆಯ ಇರಿಸಿಹರೋ ಎಂದು
ಪರಿಪರಿಯ ದೃಷ್ಟಿಯಲಿ ಪರಿಕಿಸುತ ಅಲ್ಲವೆಂ
ದರಿತಾಗ ಕೋಪ ನಿಷ್ಠುರ ಗೈಯುವರು ೧

ಈಶಾಯನಮಃ ಓಂ ಶ್ರೀಶಾಯ ನಮಃ ಪ
ರೇಶಾಯ ನಮಃ ಎಂಬುದಕೆ ಬದಲು
ಆಶೋತ್ತರವನಾಂತು ಕ್ಲೇಶಪೂರಿತರಾಗಿ
ನಾಶವಾಗಲಿ ಕುಡದಜನರೆಂಬರಕಟಾ ೨

ಏನೊಂದನಾಶಿಸದೆ ಧ್ಯಾನ ಪೂಜೆಯಗೈವ
ಮಾನವೋತ್ತಮ ಮಾತ್ರ ತಿರುನಾಮಧಾರಿ
ಜ್ಞಾನಿ ಇಂಥವನಿಂದ ತೀರ್ಥವನು ಪಡೆದವರು
ಶ್ರೀನಾಥ ಮಾಂಗಿರಿಯ ಭಕ್ತರೆನಿಸುವರು ೩

೩೬೦

ಹಳಿವವನೇ ನಮ್ಮ ನೆಂಟ
ಬಳಿಯೊಳು ಕುಳಿತು ಹೊಗಳುವಗಿಂತ ಪ

ಹುಳಿಯಾಗದೆ ಕಾಯಿಸಿಹಿದಹುದೇ ಮದ
ಅಳಿದಲ್ಲದೆ ಹರಿಯೊಲುಮೆಯು ಬಹುದೇ ಅ.ಪ

ಹಳಿವು ಮನದೊಳಿಹ ಕೊಳೆಯನು ಕಳೆವುದು
ಹಳಿವಿರದಿರೆ ಮದ ಮೊಳೆದೋರುವುದು
ಹಳಿವಿನ ಭಯದಿಂದ ಬೆಳೆವುದು ಶುದ್ಧತೆ
ಹಳಿವು ಸತ್ಕೀರ್ತಿಯ ಬೆಳಗುವ ದೀಪ ೧

ಮನದೊಳಸೂಯೆಯ ಕಳೆದು ನಾಲಗೆಯಲಿ
ಇನಿವಾತುಗಳ ಬಿನ್ನಾಣವ ಬೀರಿ
ನಿನಗೆ ಸಮಾನರಿನ್ನಿಲ್ಲಾ ಎಂಬ ಕ್ಷುಲ್ಲ
ಮನುಜನು ಸ್ವಾರ್ಥದಿ ಕೆಡಿಸುವನಯ್ಯ ೨

ಹಳಿವಿಂದಲೆ ಕೃಷ್ಣ ಮೂರು ರತ್ನವ ತಂದ
ಹಳಿವಿಂದಲಿ ಸೀತೆ ಕೀರ್ತಿ ಹೊಂದಿದಳು
ಹಳಿದಲ್ಲದೆ ಸತ್ಯ ಹೊರಹೊಮ್ಮದು ಯನ್ನ
ಹಳಿವರನೊದಗಿಸೋ ಮಾಂಗಿರಿರಂಗ ೩

೩೬೧

ಅಂಥಾ ಕರುಣನೇ ನಮ್ಮ ರಂಗ ಅನಂತ ಶರಣನೇ ಪ

ಎಂಥ ಕರುಣ ನಮ್ಮ ರಂಗ ಅಂತರಾತ್ಮ ಪಾಂಡುರಂಗ
ಚಿಂತೆಗಳನು ದಹಿಪ ರಂಗ ಅಂತರಾ ಅಭ್ಯಂತರಂಗ ಅ.ಪ

ಮೂಡಲಾದ್ರಿಯ ವೆಂಕಟೇಶ ಆಡಬಂದನೇ
ನಾಡಿನೊಳಗೆ ಮೂಡಿ ನಿಂದನೇ
ಗಾಡಿಕಾರ ರಂಗಧಾಮ ಕೇಡುಗಳನು ಬಡಿವನಾಮ
ವಾಡಿಗೆಗಳಂತಿರುವ ಭಕ್ತ ಕೋಟಿಗೇ ವರವೀವ ಪ್ರೇಮ ೧

ಹರನ ರೂಪವತಾಳಿ ನಿಂದ ಹರಿಮಾಧವ
ಒರಳಿನೊಳು ಮೆರೆಯುತಿರುವವ
ಹರಿಯುಹರನು ಬೇರೆಯಲ್ಲ । ನರರನೋಡಿ ನೋಡಿ ಸೊಲ್ಲ
ಬರಿದೆಭ್ರಾಂತಿ ಲೇಸದಲ್ಲ ಅರುಹುವನೆಂಬುವ ಗೊಲ್ಲ ೨

ಭಕ್ತವರ್ಗಕಾನಂದದಾತ ಶಕ್ತಿನಾಯಕ ವೇದಗಳೊಳುಕ್ತಮಾಗಿಹ
ಯುಕ್ತಿಯವರನ್ಯರಿಲ್ಲ ವಿ
ರಕ್ತನಾಗಿ ಗುಣವದಿಲ್ಲ ಭಕ್ತಗೊಲಿವ ಹರಿಯುಬಲ್ಲ
ಯುಕ್ತಿ ಇದಕೆ ಬೇರೆ ಇಲ್ಲ ೩

ತನಯನೋರ್ವನನೆ ಪಡೆಯಲೆಳಸಿವನಜನಾಭನ ಕರುಣದಿಂದ
ತನಯನುದಯಿಸಲು
ಧನಿಕ ಕೈಂಕರ್ಯವನು ಗೈದು ಧನವ ಗಣನೆಗೈಯಲದು
ಮನದಿ ಮರುಗಿ ಕೆಳಕ್ಕೈತಂದ। ವನಿತೆಯಿತ್ತ ಪೊಂಗಲ ಸವಿದ ೪

ಕಾಮಜನಕನೇ ನಮ್ಮರಂಗ । ಕೋಮಲಾಂಗನೇ ಕರುಣಾಪಾಂಗ
ಭೀಮವಿಕ್ರಮನೇ ಭೂಮಿಜಾತೆಯ ರಸಭರಿತ

ಪ್ರೇಮಸಾಗರ ದೀನಪಾಲ [ನಮ್ಮ ಮಾಂಗಿರಿಲೋಲ]
ರಾಮದಾಸವಿನುತಲೀಲ ವಾಸುದೇವನ ಹೋಲುವರಂಗ ೫

೩೬೨

ಆದಿದೇವ ನಿನ್ನೊಲುಮೆಯೊಂದಾದರೆ
ಮೇದಿನಿ ವೈಕುಂಠ ಎನ್ನಿಸದೆ ಪ

ವೇದವೇದ್ಯ ನಿನ್ನಾದರವಿರದಲೆ
ಮೇದನಿ ಬೂದಿಯಾಗದಿಹುದೇ ಅ.ಪ

ಹೂವಿಗೆ ಗಂಧವ ಎರೆದವರಾರೋ
ಬೇವಿಗೆ ಕಹಿಯನು ಕೊಟ್ಟವರಾರೋ
ಜೀವಿಗಳೆಲ್ಲಾ ಸಲಹುವರಾರೋ
ಸಾವು ನೋವುಗಳ ಬಿಡಿಸುವನಾರೋ ೧

ದೇವರಿಗಮೃತವ ಕೊಟ್ಟವನಾರೋ
ಹಾವಿನ ಹಾಸನು ಪಡೆದವನಾರೋ
ಭಾವದನೆಲೆಯ ಮಾಂಗಿರಿಪತಿಯೆಲೆ
ಕಾವನು ಕೊಲ್ವನು ನೀನಲ್ಲದಾರೋ ೨

೩೬೩

ಇದು ಹೊನ್ನು ಹೂವುಗಳ ತಾರತಮ್ಯ ಪ

ಇದು ಬಾಹ್ಯ ಅದು ಅಂತರಂಗಿಗೆ ರಮ್ಯ ಅ.ಪ

ಹೊನ್ನಿನಿಂದಾಗುವುದು ಹೂವಿನಿಂದಾಗುವುದು
ಹೊನ್ನು ಹೂವೆರಡಯ್ಯ ಬಣ್ಣ ಒಂದೇ

ಹೊನ್ನು ಹೂವೆರಡಕ್ಕು ಬಣ್ಣ ಒಂದಾಗವೋ
ನಿನ್ನ ಕೃಪೆಯೆಂಬ ರೇಕುಗಳಾಗಬೇಕೋ ೧

ಹೊನ್ನು ಭೂಲೋಕಕ್ಕೆ ಹೂವು ಪರಲೋಕಕ್ಕೆ
ಹೊನ್ನಿನಾ ಹೂವುಗಳು ಇಹಪರಕೆ ದಾನ
ಹೊನ್ನುಳ್ಳವರಿಗೆಲ್ಲ ಹೂ ಹೊನ್ನುವಿಲ್ಲ ತಾನಿಲ್ಲ
ಹೊನ್ನ ಹೊರುವುದಸಾಧ್ಯ ೨

ಹೊನ್ನ ಕಾವುದಸಾಧ್ಯ । ಹೊನ್ನುಳ್ಳ ನರರಿಗೆ [ಮ] ಗಳಿಲ್ಲ
ಹೊನ್ನುಳ್ಳ ಮನುಜ ಪಾತಕಗಳನು ಕಲಿಯುವ
ಹೊನ್ನಿಲ್ಲದಾತರಿಗೆ ಹೂವೊಂದು ದೊರಕಿದೊಡೆ
ಅನ್ನ ನಿದ್ರಾ ಪಾನ ಸೌಖ್ಯಂಗಳುಂಟಯ್ಯ ೩

[ಹೊನ್ನುಳ್ಳವಸದಾ ಹೊನ್ನಿ ನೊಡನೆಕಳ್ಳ್ವ]
ಹೊನ್ನಿಲ್ಲದಾತ ಶ್ರೀರಾಮಕೃಷ್ಣರ ಕಲೆವ
ಹೊನ್ನಿಂದ ಬೆಣ್ಣೆತಾಂ ಸುಣ್ಣವೆನಿಪುದು ಜಗದಿ
ಹೊನ್ನಿಲ್ಲದಾತಂಗೆ ಸುಣ್ಣವೇ ಬೆಣ್ಣೆ ೪

ಹೊನ್ನಕೇಳನು ನಮ್ಮ ಮಾಂಗಿರಿಪುರವಾಸ
ಹೊನ್ನಿಂಗೆ ಬದಲು ಭಕ್ತಿಯಹೂವ ಕೇಳ್ವುದು
ಹೊನ್ನ ದಾನವಮಾಡಿ ಹೂವ ಹರಿಗರ್ಪಿಸಿರಿ
ಇನ್ನಾವ ವರಗಳನ್ನು ಬೇಡ ಬೇಡಿ ೫

೩೬೪

ಈ ಕ್ಷಿತಿಯ ಸಾರತರ ವೃಕ್ಷವನು ಕಂಡೆ ಪ

ರಾಕ್ಷಸಾಂತಕ ದೇವ ನೀ ವಿರಚಿಸಿರುವ ಅ.ಪ

ಅಡವಿಯೊಳಗೀವೃಕ್ಷಕಡಿಯ ಪಾತಿಯಿದು
ದೃಢದ ಬೇರುಗಳು ಮೂರು ರಸವು ನಾಲ್ಕು
ಪೊಡವಿಗಿಳಿದಿರ್ಪ್ಯದು ಬಿಳಿಲುಂಟು ಕೊನೆ ಮೂರು
ಎಡೆವ ಪರೆಯೇಳಾ ಕೊಂಬೆಗಳೆಂಟು ಫಲವೆರಡು ೧

ಮೂರು ಮುಮ್ಮಡಿ ರಂಧ್ರ ಐದರಿಮ್ಮಡಿ ಪರ್ಣ
ತೇರ್ೃಸೆ ತೋರುವಾಕಾರ ಎರಡು
ಮೂರೆರಡರಿಂದೆಸೆವ ಸಾರಫಲಗಳನೆಲ್ಲ
ಓರಂತೆ ಭಕ್ಷಿಸುವ ಪಕ್ಷಿಯೊಂದುಂಟಯ್ಯ ೨

ವೃಕ್ಷದಾ ಫಲಗಳನು ಭಕ್ಷಿಪುದನೀಕ್ಷಿಸುವ
ಪಕ್ಷಿ ನೀನಾಗಿರಲು ಪರಮಕೃಪೆಯಾ
ಪಕ್ಷಿಗಿತ್ತಾಗಲೊಂದೇ ಪಕ್ಷಿಯೆಂದೆನ್ನಿಸಿ
ಕುಕ್ಷಿಯನ್ನುಳಿದೈದಲರಿದೇ ಮಾಂಗಿರಿಯ ರಂಗ ೩

३೬೫

ಎನ್ನಳವೆ ಯೋಗದಭ್ಯಾಸ ಹರಿಯೇ
ಎನ್ನಕೈ ನೀ ಪಿಡಿಯದಿಹುದು ಸರಿಯೇ ಪ

ದಿವ್ಯಯೋಗದ ಬಗೆಯ ಪೇಳಿದೈ ಗೋಪಾಲ
ಸವ್ಯಸಾಚಿಯ ಧನ್ಯನೆನಿಸಿದೈ ಶ್ರೀಲೋಲ
ಭವ್ಯವಾದಾಕೃತಿಯ ತೋರ್ದೆ ಗೋಪಿಬಾಲಾ
ಅವ್ಯಯಾನಂದ ಮಾಂಗಿರಿರಂಗ ವಿಠಲ ೧

ನಿರ್ಮಮತೆಯೇ ಬೀಜ ಸರ್ವಸೇವೆಯೇ ಬೇರು
ಕರ್ಮದೊಳಗುತ್ಸಾಹವಿರಲದೇ ಸುರಿನೀರು
ಮರ್ಮವಿಲ್ಲದ ಹೃದಯವೈಶಾಲ್ಯವೇ ಕುಸುಮ
ನಿರ್ಮಲತೆಯೇ ಫಲವು ಇದು ಕರ್ಮಯೋಗ ೨

ಭಕ್ತಿಯೆಂಬುದೆ ಬೀಜ ಸಮ್ಮತಿಯೆ ತಾಬೇರು
ಭಕ್ತಜನರ ಸೇವೆಯೇ ಮೇಲೆರೆವ ನೀರು
ಏಕಾಗ್ರಚಿತ್ತವೇ ಸರಸಪರಿಮಳಪುಷ್ಪ
ಮುಕ್ತಿಯೇ ಫಲಮಿದೆ ಭಕ್ತಿಯೋಗ ೩

ಆಸನವೇ ಬೀಜ ಪ್ರಾಣಾಯಾಮವೇ ಬೇರು
ಆಸೆಯಿಂ ಗೈವ ದಿನಚರ್ಯೆಯೇ ನೀರು
ಮಾಸದಿರುವಾರೋಗ್ಯ ಪುಷ್ಪತಾನೊಮ್ಮನಮೆ
ಭಾಸಿಪಾ ಫಲಮಿದೆ ಹಟಯೋಗವಯ್ಯ ೪

ಯಮನಿಯಮಗಳೆ ಬೀಜಧಾರಣವೆ ತಾಂಬೇರು
ಕ್ರಮಮಾದಪ್ರಣಿದಾನ ಮೇಲೆರೆವ ನೀರು
ವಿಮಲವಾಗಿಹ ಧ್ಯಾನ ಪೂರ್ವಸಂಪ್ರಜ್ಞತಾ
ಕ್ರಮಸಮಾಧಿಯೆ ಫಲವು ಇದು ರಾಜಯೋಗ ೫

ವರವಿವೇಕ ಬೀಜ ವೈರಾಗ್ಯವೇ ಬೇರು
ಗುರುಕರುಣಮೆಂಬುದೇ ಮೇಲೆರೆವ ನೀರು
ಪರಬ್ರಹ್ಮ ಜ್ಞಾನವೇ ಪರಿಮಳಿಸುವ ಪುಷ್ಪ
ವರಮೊಕ್ಷವೇ ಫಲವು ಇದು ಜ್ಞಾನಯೋಗ ೬

ಯೋಗಮಾರ್ಗವ ತಿಳಿಮ ಅನುಸಂಧಿಯಿಂ ಸಕಲ
ತ್ಯಾಗ ಮಾಡುವ ನಿಯಮವೆನಗಸಾಧ್ಯ
ಆಗಾಗ ನಿನ್ನ ನಾಮಂಗಳನು ಪೇಳ್ವುದೇ
ಯೋಗವೆಂದೆನಿಸುವ ಮಾಂಗಿರಿರಂಗ ನೀಲಾಂಗ ೭

೩೬೬

ಎಲೆ ಮನವೆ ಚಲಿಸದಿರು ಕಂಡಕಡೆಗೆ
ನಿಲು ನೀನು ಸ್ಥಿರವಾಗಿ ಧ್ಯಾನ ಮಂಟಪದೊಳಗೆ ಪ

ಕಲುಷಪೂರಿತವಾದ ಬಲೆಯ ದೂರಕೆ ದೂಡು
ಒಲಿದು ರಕ್ಷಿಪುದೆಂದು ಜಲಜಾಕ್ಷನನು ಬೇಡು ಅ.ಪ

ಆರು ಮಂತ್ರಿಗಳುಂಟು ಮೂರು ದುರ್ಗಗಳುಂಟು
ಮೂರು ಮತ್ತೆರಡಶ್ವ ಸಹಿತ ನೀನು
ದೂರ ದೂರದ ಸಿರಿಯ ತರುವೆ ನಾನೆಂದೆನುವೆ
ಧೀರ ನೀನೇ ಎಂಬೆ ಮರುಳತನದಿಂದೆ ೧

ನಡೆಯೆ ಸತ್ಪಥವೆಂಬೆ ನುಡಿಧರ್ಮವೆಂದೆಂಬೆ
ಕುಡುಕನಂತತ್ತಿತ್ತ ಅಲೆಯುತಿರುವೆ
ಸಿಡಿಲು ಬಡಿವುದ ಮರೆತು ದುಡುಕಿ ನಿರ್ದಯವಾಂತು
ಕೆಡಬೇಡ ಮಾಂಗಿರಿಯ ಅಡಿವಿಡಿದು ಸುಖಿಯಾಗು ೨

३೬೭

ಒಂದಿಲ್ಲದ ಮೇಲೆರಡುಂಟೇ ಭಕ್ತಿ
ಒಂದಲ್ಲದೆ ಹರಿಯೊಲವುಟೇ ಪ

ಒಂದಲ್ಲದೆ ರುಚಿ ಔಷಧಿಯುಂಟೇ
ನೊಂದಲ್ಲದೆ ರಂಗಾ ಎಂಬುವುದುಂಟೇ ಅ.ಪ

ಗಿಡಮರವಾಗದೆ ಕ್ರಿಮಿಯಾಗುವೆನೇ
ಅಡವಿಯೊಳಿರದೆ ಗೋವಾಗುವೆನೇ
ಪಡೆಯದೆ ಪುಣ್ಯವ ನರನಾಗುವೆನೇ
ಮೃಡನ ಪೂಜಿಸದೇ ದ್ವಿಜನಾಗುವೆನೇ ೧

ಸುಗುಣವಿರದೆ ಮಾತಿನಿದಾಗುವುದೇ
ಸೊಗಮಿಲ್ಲದೆ ಬಾಯಿ ನಗೆದೋರುವುದೇ
ಸುಗುಣವಿಲ್ಲದೆ ನಿರ್ಗುಣಬಹುದೇ
ಮುಗಿಲಿಲ್ಲದೆ ಮಳೆ ಧರೆಗೆ ಬೀಳುವುದೇ ೨

ತಂಗಿದ್ದಲ್ಲದೆ ಭಾವ ಎಂಬೋದುಂಟೋ
ಹಂಗಿ[ಗ]ಲ್ಲದೆ ಮರೆ ಹಿತಕುಂಟೋ
ತಂಗಿನೋಡಲು ಭಾವ ಮರೆಯಹುದುಂಟೋ
ಮಾಂಗಿರಿರಂಗ ನೀನೆನ್ನಯ ನಂಟೋ ೩

೩೬೮

ಕಾಣದ ವಸ್ತುವು ಕಾಣುವುದು ಕೇಳದದನಿಯು ಕೇಳುವುದು
ಇಂದಿನ ಕಾರ್ಯವು ನಾಳಿನ ಸಂಗತಿ ತಿಳಿಯುವುದು ಚಿರವಹುದು ಪ

[ಜೀವ]ಹೇಗಿದ್ದರೆ ಹೀಗಾಗುವುದು ನಾ ಮಾಡುವ ಕೈ ವಶವಹುದು
ಭಾವದಿ ಭಕ್ತಿಯು ತುಂಬಿರಬೇಕು
ಮನಸಿನ ಕಶ್ಮಲ ಕಳೆದಿರಬೇಕು ೧

ಆಶೆಯ ಪಾಶವು ಸುಟ್ಟಿರಬೇಕು ಸೋದರ ಭಾವವು ನೆಟ್ಟಿರಬೇಕು
ದ್ವೇಷಾಸೂಯೆಯ ಬಿಟ್ಟಿರಬೇಕು ಮಾಂಗಿರಿರಂಗ
ನೀ ಗತಿಯೆಂದರೆ ಸಾಕು ೨

೩೬೯

ಜಗಕ್ಕಿಂತ ಭಾರವೇನೊ ನಮ್ಮ ರಂಗ
ನಗಕ್ಕಿಂತ ಗಾತ್ರನೇನೋ ಪ

ಜಗಕ್ಕಿಂತ ಭಾರವೇನೋ । ಖಗಪೊತ್ತು ತಿರುಗಲೆ[ೀಕೆ]
ನಗಕ್ಕಿಂತ ಗಾತ್ರನೇನೋ । ನಗದ ಮೇಲೇ ಕುಳಿತಿಹ
ಜಗ[ನ]ಗಳದಾವ ಭಾರ ಹೇಳ ಅಳಿದವನೀನ ವನೆಯೇ ?
ಜಗಗಳ ಹೊರುತಲಿ ನಲಿವವನಿವನೇ
ನಗಗಳ ಬೆರಳಲಿ ಎತ್ತಿದನಿವನೇ
ಖಗಮೃಗಗಳಿಗೆ ಒಲಿದವನಿವನೇ ೧

ತೃಣಕ್ಕಿಂತ ಹಗುರನೇನೋ ನಮ್ಮರಂಗ
ಮಣಿಗಿಂತ ಸಣ್ಣನೇನೋ
ತೃಣಕ್ಕಿಂತ ಹಗುರನೇನೋ ರಣದೆ ರಾವಣನ ಕೊಂದೆ
ಮಣಿಗಿಂತ ಸಣ್ಣನೇನೋ ಧರಣಿಯನಳೆದೈತಂದೆ
ಅಣುವಿಗೆ ಅಣು ರೂಪವಾಂತಿಹನು
ತೃಣಕ್ಕೆಲ್ಲಾ ತೃಣರೂಪಾಗಿಹನು
ಮಣಿಗೆಲ್ಲಾ ಶ್ರೀಮಣಿಯಾಗಿರುವ ಸ
ದ್ಗುಣಿಗಳಿಗೆ ಕರುಣಿಯು ಇವನು ೨

ಎಲ್ಲೆಲ್ಲು ಇರುವನೇನೋ ನಮ್ಮ ರಂಗ
ಎಲ್ಲೆಲ್ಲು ಇಲ್ಲವೇನೊ
ಎಲ್ಲಿಯೂ ಇರುವನೇನೇ ಅಲ್ಲಲ್ಲಿ ಇರುವ ರಂಗ
ಎಲ್ಲೆಲ್ಲು ಇಲ್ಲವೇನೇ ಅಲ್ಲಲ್ಲಿ ಅಂತರಂಗ ೭

ಬಲ್ಲಿದರೆಲ್ಲ ಬಲ್ಲರು ಇವನ ಕಲ್ಲೆಂಬುವರಿಗೆ ಇವನು
ಇಲ್ಲದ ತಾಣವೊಂದಿಲ್ಲವು ಭಕ್ತಿಯ
ಸೊಲ್ಲಿಗೆ ಸೋಲುವ ಮಾಂಗಿರಿರಂಗ ೮

೩೭೦

ಜ್ಞಾನವೆಂಬುದು ಇಲ್ಲವೋ ಈ ಚೇತನದಿ
ಏನೂ ಸಾರ್ಥಕವಿಲ್ಲವೋ ಪ

ಏನೂ ಸಾರ್ಥಕವಿಲ್ಲ ಜ್ಞಾನಮಾರ್ಗಗಳಿಲ್ಲ
ಮಾನಸ ಸ್ಥಿರವಿಲ್ಲ ಶ್ರೀನಾಥನಿದಬಲ್ಲ ಅ.ಪ

ಎರಡುಕಂಬದ ಮೇಲೆ ಇರುವ ಪಂಜರವಿದು
ಬರಿಯಡಂಭದ ಜಗವು ಸ್ಥಿರವೆಂಬ ತನುವಿನೊಳು ೧

ತೈಲವಿಲ್ಲದ ದೀಪ ಮಲಿನವಾಗುವ ತೆರದಿ
ಸುಲಭದೊಳಿಹ ಪ್ರಾಣ ತೊಲಗಿದ ಬಳಿಕಿನ್ನು ೨

ಸಂತೆಗೈದಿದ ಜನದಂತೆ ಪಂಚೇಂದ್ರಿಯವ
ನಾಂತ ದೇಹವು ವ್ಯರ್ಥ ಅಂತರಾತ್ಮನು ಹೋಗೆ ೩

ರಸನೆ ತೊದಲುವ ಮೊದಲು ಅಸುವು ಪೋಗುವ ಮೊದಲು
ಅಸುರಾರಿ ಎಂಬ ಮಧುವ ರಸನೆಯೊಳಿಡೋ ಮನುಜ ೪

ದಿನದಿನ ಹರಿಕೃಷ್ಣ ವನಮಾಲಿಯ ನುತಿಸೋ
ತನುವ ಪ್ರಾಣವ ಬಿಡುವ ದಿನವನರಿಯೆ ನೀನು ೫

ದೇವದೇವನೆ ನಿನ್ನ ಸೇವಕನೆಂದೆನ್ನ
ಭಾವಿಸೋ ಮದನಾಂಗ ಮಾವಿನಕೆರೆರಂಗ ೬

೩೭೧

ತನುವೆಂಬ ಭವನದಲಿ ಮನವೆಂಬ ಮಂಟಪದಿ
ವನರುಹಾಸನ ವಿಹುದು ನಿನಗಾಗಿ ಕೃಷ್ಣಾ ಪ

ಅನವರತ ಸ್ವಾಗತವ ಇನಿದಾಗಿ ಪೇಳುತಲಿ
ಸನುಮತದೊಳಿರ್ರ್ಯೆದು ಮುನಿವರರು ನಿಂದಿಹರು ಅ.ಪ

ಎನಗೆ ತನಗೆಂದಿಬ್ಬರನುವಾಗಿ ಕಾದಿಹರು
ಘನ ಮೌನಿಯಂತೊಬ್ಬ ಮಣಿಯುತಿಹನು
ವನಜ ಸಂಭವ ಜನಕ ಮುನಿಯೊಡನೆ ನೀ ಬಂದು
ಕನಕಮಂಟಪವೇರು ಅವರಿಬ್ಬರೋಡುವರು ೧

ಕರಿಯ ಮೈಯವನೊಬ್ಬ ದುರದುರನೆ ನೊಡುವನು
ಪರಿವಾರದವರನ್ನು ತೋರುತಿಹನೊಬ್ಬ

ಕರದಿ ಸನ್ನೆಯ ಮಾಡುತಿಬ್ಬರೂ ಬರುತಿಹರು
ತರಿದವರ ಮಂಟಪವನೇರೊ ಮಾಂಗಿರಿರಂಗ ೨

೩೭೨

ನೀನಾರು ನಾನಾರು ನೀನೆನ್ನೊಳಿರಲು
ನಾನಾರು ನೀನಾರು ನಾನಿನ್ನೊಳಿರಲು ಪ

ನೀನೇನ ಮಾಡಿಸುವೆ ನಾನದನು ಮಾಡುವೆ
ನೀನೇನ ಮಾಡಿದರೂ ನಾನದನು ಮಾಡುವೆ ಅ.ಪ

ಎನ್ನದೆಂಬುವುದೆಲ್ಲ ನಿನ್ನದಾಗಿರುವಾಗ
ನನ್ನದೇನುಂಟಯ್ಯ ಪನ್ನಗಾಧೀಶಾ
ನಿನ್ನವನು ನಾನಯ್ಯ ನನ್ನವನು ನೀನಾದೊ
ಡಿನ್ನೇನು ನಾನೀನು ಎನ್ನುವಂತಿಲ್ಲ ೧

ಇಂದಿರಾನಂದ ಗೋವಿಂದ ತವಪಾದಾರ
ವಿಂದಸೇವೆಯ ಮಾಳ್ಪೆನೆಂದು ಕಾದಿಹೆನೋ
ಮುಂದೆನಗೆ ಜನ್ಮಂಗಳೊಂದಾದರೂ ಬೇಡ
ತಂದೆ ಮಾಂಗಿರಿರಂಗ ಬಂದುಕಾಯೋ ೨

೩೭೩

ನೀನೆನ್ನೊಳಡಗಿದೆಯೊ ರಂಗಯ್ಯ ನಾನಿನ್ನೊಳಡಗಿಹೆನೆ ಪ

ನೀನೆನ್ನೊಳಡಗಿಹುದೇನೂ ಅಚ್ಚರಿಯಿಲ್ಲ
ನಾನಿನ್ನೊಳಡಗಿಹುದೆನೆ ಸಂದೇಹವಯ್ಯ ಅ.ಪ

ಆತ್ಮಾರಾಮನು ನೀನು ರಂಗ । ನಿಜಾತ್ಮಪ್ರಕೃತಿ ನಾನು
ಆತ್ಮಾವಲಂಬಯೆಂಬ ಅಂತರಾತ್ಮ ಪಾಲಿಪನಾನು
[ಆತ್ಮೋದ್ಧಾರಕ ನಿನ್ನಬಿಟ್ಟರಾನಿಲ್ಲವೋ ರಂಗ] ೧

ಒಬ್ಬಳೆಂಜಲ ತಿಂದೆ ರಂಗ ನೀನೊಬ್ಬಳಿಗಕ್ಷಯವಿತ್ತೆ
ಒಬ್ಬರೊಳು ಜನಿಸಿ ಮತ್ತೊಬ್ಬರೊಳು ಬೆಳೆದೆ
ಇನ್ನೊಬ್ಬನಾನೊಬ್ಬ ಇನ್ನೊಬ್ಬರಿಲ್ಲವೋ ರಂಗ ೨

ಕೊಡುವೆನೆನ್ನೊಳಗಿಹುದರಂಗಯ್ಯ ಓಡಿಯೆನ್ನ ಕರವ
ಪಡೆವೆನದನೆ ಅಯ್ಯ ಕೊಡಬೇಡ ಜನುಮವ
ತಡವೇಕೆ ಮಾಂಗಿರಿಯಯ್ಯ ನೀನೊಲಿದೆ ೩

೩೭೪

ಪರಮೌಷಧಿ ಸಿಕ್ಕಿತು ಪರಿಪರಿರೋಗ
ಪರಿಹಾರಕಿದು ದಕ್ಕಿತು ಪ

ಜ್ವರದ ಬೇಗೆಗೆ ದಾಹ ಕರುಳ ಕುಂದಿಸಿಯೆನ್ನ
ನರಳಿಸಿದಾಗ ಮಾಂಗಿರಿರಂಗಾ ಎಂದೆಂಬ ಅ.ಪ

ಸುರನರೋರಗ ಗರುಡ ಚರಣ
ಗುರು ದಿವಾಕರ ಕಿನ್ನರಾಪ್ಸರ
ಶರಣಜನ ಕರುಣಾಕರ ಶ್ರೀ
ಧರ ಸುಖಂಕರ ಶೌರಿಯೆಂಬಾ ೧

ಪಿತ್ತವು ತಲೆಗೇರಿತು ಸುತ್ತಲು ಕಣ್ಗೆ
ಕತ್ತಲೆ ಮುಸುಕಿದ್ದಿತು
ಚಿತ್ತಪಲ್ಲಟಿವಾಗಿ ಮತ್ತನಾಗಿರಲಾಗ
ನೆತ್ತಿಯೊಡೆದ ಎನ್ನ ಕುತ್ತಿಗೋಂಕಾರ ೨

ಚಿತ್ತ ಮಸ್ತಕ ನೆತ್ತಿಗಳ ಬೆಂಬತ್ತಿ
ಮತ್ತತೆಯಿತ್ತ ಪತ್ತದ
ಕತ್ತಲೆಯನುತ್ತರಿಸಿದುತ್ತಮ
ಚಿತ್ತಜನಪೆತ್ತಚ್ಯುತಾ ಯೆಂಬ ೩

ರಸ ನಾಲಗೆಗೇರಿತು ಮಹದಾಸೆಯ
ಹಸಿವೊಂದು ಬಲವಾಯಿತು
ಬಸಿರೊಳಗ್ನಿಯು ಹುಟ್ಟಿ ಅಸುವು ಪೋಪಂತಾಗಿ
ಉಸಿರು ಉಗ್ಗಡಿಪಾಗ ವಸುದೇವ ಸುತಯೆಂಬ ೪

ರಸರಸಂಗಳೊಳೆಸೆದು ವಾಸಿಸಿ
ಉಸಿರು ಬಸಿರನು ವಸುವಿಲಾಸದೊಳೆಸೆದು
ಪೊಸ ಪೊಸ ಎಸಕದಿಂ ಸುಖ
ರಸವನೀಯುವ ರಾಮಯೆಂಬಾ ೫

ಕಿವಿ ಮೂಗು ಕರ ನೇತ್ರಗಳು ತಂಪಿಂಪಿನ
ಸವಿ ಬಲೆಯೊಳು ಬಿದ್ದುವು
ಭುವಿಯೆ ನರಕವಾಯ್ತು ಶವವಾದುದೀ ದೇಹ
ಜವ ನೇಣೆಸೆದಾಗ ಭವದೂರಹರಿ ಯೆಂಬ ೬

ಶಿವ ಭವಾಮರಪವನಪಾವಕ
ಜವ ಶಶಾಂಕವಾಕರಾನಕ
ಭುವನ ಮೋಹನ ಪಾವನಾ
ಶ್ರೀಧರ ಹರೇ ಭವದೂರನೆಂಬಾ ೭

ಲಕ್ಷನಾಮಗಳೆಲ್ಲ ಲಕ್ಷಣವಾದ [ತು
ರಕ್ಷೆಯೀಯುವಗುಳಿಗೆ] ಮಾತ್ರಾ
ಮೋಕ್ಷಸುಖವನಿತ್ತು ರಕ್ಷಿಪುದೆಂಬುದ
ದಕ್ಷಸುತೆಗೆ ಫಾಲಾಕ್ಷ ತಾಂ ಪೇಳಿದ ೮

ಅಕ್ಷಯಾತ್ರವಿಪಕ್ಷ ರಾಕ್ಷಸ
ಶಿಕ್ಷ ಸುಜನರಕ್ಷ ಪ್ರದವ ಅ
ಧ್ಯಕ್ಷ ನುತಕಮಲಾಕ್ಷ ಶರಣಕಟಾಕ್ಷ
ಲಕ್ಷ್ಮೀಪಕ್ಷ [ಮೂಂಗಿರಿರಂಗ] ಯೆಂಬಾ ೯

೩೭೫

ಬಡವನಾಗಿರುವನಕ ಭಯವಿಲ್ಲವಯ್ಯ ಪ

ಕೆಡುಕ ವಂಚಕ ಕಳ್ಳ ಬಳಿಬಾರನಯ್ಯ ಅ.ಪ

ಬಡವತಾನಡಿಗಡಿಗೆ ಕಡುದೈನ್ಯಭಾವದಲಿ
ದೃಢ ಭಕ್ತಿಯೊಳು ಹರಿಗೆ ಪೊಡಮಡುವನು
ಕಡವರವನಾಂತವನು ಕಡುನುಡಿಗಳನು ಕಲಿತು
ಪೊಡವಿಚನೆಂದೆನಿಸಿ ಕಡುಲೋಭಿಯಹನು ೧

ಗುಣ ಶಾಂತಿ ನಯ ವಿನಯ ಹಣವಂತಗಿರದಯ್ಯ
ಹಣವು ಕಪಿಯಂತವನ ಕುಣಿಸದಿರದು
ಉಣಿಸು ನಿದ್ರಾದಿಗಳು ಕ್ಷಣಮಾತ್ರವಿಲ್ಲವಗೆ
ಹಣದಾಸೆ ಎಳ್ಳಷ್ಟು ಬೇಡ ಮಾಂಗಿರಿರಂಗ ೨

೩೭೬

ಬಾನ್ದಳದ ಬುಡವೆನಗೆ ಅತಿದೂರ ಬೆಳಕೇ
ಮನ್ದಿರವು ಶುದ್ಧವಿದೆ ಬಾ ಇದರತಳಕೆ ಪ

ಸುಂದರದ ಕಾಂತಿಯನು ಚೆಲ್ಲು ಈ ಮನೆಗೆ
ಇಂದು ಬಾ ನಾಳೆಯೆನಬೇಡ ನನ್ನೆಡೆಗೆ ಅ.ಪ

ಜನುಮದಂಚಿನ ಬೆಳಕು ನಿನ್ನದೇ ಗೊತ್ತು
ನಲಿದು ಬಂದಿಹೆನೊಳಗೆ ನಾ ನಿನ್ನ ಸೊತ್ತು
ನಿಲುಕದೆಡೆ ನಿಲಬೇಡ ಬಾ ನನ್ನ ಮುಪ್ಪೆ
ಬಲಯುತನ ಮಾಡೆನ್ನ ಸುಜ್ಞಾನಚಿತ್ತೆ ೧

ನೀ ಮಾತ್ರವಿತ್ತಲಿರೆ ನನ್ನೈದು ಗೆಳೆಯರು
ನೇಮಯುತರಾಗುವರು ಸೊಗಬಾಳ್ವರು

ನಾ ಮಾಳ್ಪುದೆಲ್ಲವೂ ನಿನ್ನದೇ ಆಗುವುದು
ರಾಮಕೃಷ್ಣರ ನೆನಪು ನನಗೆ ದೊರಕುವುದು ೨

ನೀನಿರದ ನನ್ನ ಮನೆ ಕಡುಕತ್ತಲೆಯ ಕೋಣೆ
ನೀನಿರದೆ ನಾನಿರಲು ಫಲವೇನು ಕಾಣೆ
ಕಾನನದ ಹೂವಿನಂತಿದ್ದೇನು ಫಲವಿಲ್ಲ
ಜ್ಞಾನ ಹೊಂಬೆಳಕೆ ಮಾಂಗಿರಿರಂಗ ನೋಡೆ ಭಯವಿಲ್ಲ ೩

೩೭೭

ಬೇಡ ಬೇಡ ಹೋಗೆಂದು ಕಾಡದಿರು ಕೃಪೆಯೊಂದ
ಬೇಡದಿರಲಾರೆ ಮಾಂಗಿರಿಯರಂಗ ಪ

ಬೇಡುವನ ಕೈ ಕೀಳು ನೀಡುವನ ಕೈ ಮೇಲು
ಬೇಡಿದಲ್ಲದೆ ಕೃಪೆಯ ಮಾಡನ್ನೆರಂಗಾ ಅ.ಪ

ಗಾನಕೆ ನಲಿಯುವೆಯೋ ಧ್ಯಾನಕೆ ಒಲಿಯುವೆಯೋ
ಜ್ಞಾನಕೆ ಸಿಗುವೆಯೋ ನಾನರಿಯೆನು
ಗಾನದರಿವೆನಗಿಲ್ಲ ಧ್ಯಾನಮಾಡುವನಲ್ಲ
ಜ್ಞಾನಾನುಭವವಿಲ್ಲ ಆಧಾರವಿಲ್ಲ ೧

ನೀನೆನ್ನ ಕಡೆಗಣಿಸಿ ಹೀನ ಹೋಗೆಂದೆನಲು
ನಾನಳುವೆನನವರತ ಶ್ವಾನದಂತೆ
ನಾನಳುವುದನು ಕಂಡು ಸೂನು ಬಾ ಬಾರೆಂದು
ಸಾನುರಾಗದಿ ರಮಾದೇವಿ ಸಂತೈಪಳು ೨

ಎನ್ನಮ್ಮ ಕೃಪೆಯಿಂದ ನಿನ್ನ ಕಾಲ್ವಿಡಿಯೆಂದು
ಎನ್ನ ಕಳುಹುತ ನಿನಗೆ ಎನ್ನ ತೋರ್ದು
ಎನ್ನನತಿಕೃಪೆಯಿಂದ ಮನ್ನಿಸೆನ್ನುವಳಾಗ
ನಿನ್ನ ಕೃಪೆ ಯೆನಗುಂಟು ಮಾಂಗಿರೀಶಾ ೩

೩೭೮

ಮನವು ಕರಗದೇನೋ ಸಿರಿಹರಿ ಮುನಿಸದೇಕೆ ಪೇಳೋ ಪ

ತನು ಮನ ಧನಗಳ ನಿನಗೊಪ್ಪಿಸುತ್ತಲಿ
ಮುನಿವರರೊಲು ನಿನ್ನ ನೆನೆಯಲಿಲ್ಲವುಯೆಂದು ಅ.ಪ

ಬಾಲತನದೆ ನಿನ್ನ ನೆನೆಯದೆ ಕಾಲಕಳೆದೆ ಯೌವನದೊಳು
ಲೋಲುಪನಾದೆನ್ನ ಕಾಲದೂತರು ಬಂದು ನೂಲಿಂದಚೆಳೆದರೂ ೧

ಜಗವು ಚಿರವೆಂದು ಸತತವು ಬಗೆದು ಭ್ರಾಂತನಾದೆನ
ಅಗಣಿತ ನೀಲಮಣಿ । ಖಗಪತಿವಾಹನ [ಪೊರೆಯಲಿನ್ನು] ೨

ಮಂಗಳಾಂಗ ಮಾಂಗಿರಿ ಪುರವಾಸ
ಗಂಗಾಧರ ರಂಗಾ ನೀನೆನ್ನಂತರಂಗದೆ ನಿಲಲಿನ್ನು ೩

೩೭೯

ಮನವೆಂಬ ತುರಗವು ಪರಿದೋಡುತಲಿದೆ
ಸನಿಹದಲೆ ದೆಸೆದೆಸೆಗೆ ಪ

ಅನುದಿನ ಸ್ಪರ್ಶ ರೂಪ ರಸ ಗಂಧಗಳೆಂಬ
ಇನಿತುಪಾದಗಳಿಂದ ಅನಿಲನ ಸೋಲಿಸಿ ಅ.ಪ

ಕಾಮಕ್ರೋಧಗಳೆಂಬ ನೇತ್ರಗಳಿದಕಿದೆ
ವ್ಯಾಮೋಹ ಲೋಚನ ಎಂಬ ಕರ್ಣಂಗಳಿವೆ
ದುರ್ಮದವೆಂಬುವ ಪುಚ್ಛವೊಂದಿಹುದಯ್ಯ
ಈ ಮದಹಯಕೆ ಮಾತ್ಸರ್ಯ ನಾಸಿಕವಯ್ಯ ೧

ಮೃಡನು ತಾ ಎಂಬುವ ಕಡಿವಾಣದ ಹಿಡಿ
ದೃಢಭಕ್ತಿಯೆಂಬ ಪಾಶ ಕೊರಳೊಳಗಿರಲಿ
ಎಡಗೈಯೊಳು ಹರಿಯೆಂಬ ಕೊಳಲನು ಹಿಡಿ
ತಡವೇಕೆ ಮನುಜ ಓಡಿ ಹಯವ ತಡಿ ೨

ಆಡಲು ನಿಲಬೇಡ ನೋಡಿ ನಲಿಯಬೇಡ
ಓಡಾಡಿ ತುರಗವ ಹಿಡಿ ಹಿಡಿ ಮನುಜ
ಓಡಿ ಹಯವ ಪಿಡಿದು ಬಂಧಿಸದಿದ್ದರೆ
ಕಾಡಿಗೈದಿ ದೊಡ್ಡ ಮಡುವ ಸೇರುವುದು ೩

ನರಹರಿಯೆಂಬ ಕುಣಿಕೆಯ ಗೈದು
ತ್ವರಿತದಿ ತುರಗದ ಕೊರಳಿಗೆ ಬಿಗಿದು
ಕರದೊಳಗಿರುವ ಕಡಿವಾಣ ಒಂದಿಡಿ
ನೆರೆ ಭಕ್ತಿಪಾಶದಿ ತುರಗವ ಸೆರೆಗೈ ೪

ನಾರಾಯಣಾ ಎಂಬ ನೀರ ಕುಡಿಸುತಲಿ
ಶ್ರೀರಮಣ ಎಂಬ ಹುರಳಿಯ ನಿಡುತೆ
ಮಾರ[ಮಣ] ಎಂಬ ತೃಣವನೆಣಿಸಿ ದಿವ್ಯಾ
ಕಾರದಿ ಮಾಂಗಿರಿರಂಗಗರ್ಪಿಸಿರೋ ೫

೩೮೦

ಕೃಷ್ಣ ಸ್ತುತಿ

ಮಾಂಗಿರಿಯೊಡೆಯ ಗೋಪಾಲನೇ ಮಧುರ ಪ

ಗೋಪಾಲನ ಮಾಂಗಿರಿಯೇ ಮಧುರ ಅ.ಪ

ಗೋಪಾಲನು ನಿಲ್ಲುವ ಪರಿ ಮಧುರ
ಗೋಪಾಲನ ಗಜಗಮನವು ಮಧುರ ೧

ಗೋಪಾಲನ ಮುರಳೀರವ ಮಧುರ
ಗೋಪಾಲನ ರಸಗಾನವೆ ಮಧುರ ೨

ಗೋಪಾಲನ ಸಸುನಗೆಯತಿ ಮಧುರ
ಗೋಪಾಲನ ಕಲಾನರ್ತನ ಮಧುರ ೩

ಗೋಪಾಲನ ಝಣ ಝಣರವ ಮಧುರ
ಗೋಪಾಲನ ಕೋಲಾಟವು ಮಧುರ ೪

ಗೋಪಾಲನ ನಡುಗೆಜ್ಜೆಯು ಮಧುರ
ಗೋಪಾಲನ ಕರದಭಯವು ಮಧುರ ೫

೩೮೧

ಮಾತ್ರೆಯಿದು ಸಜ್ಜನರಿಗಾರೋಗ್ಯ ಮಾತ್ರೆ
ಸೂತ್ರ ನಾರದನಿದಕೆ ನೆನಪಿನಾ ಮಾತ್ರೆ ಪ

ನಾರು ಬೇರಿದಕಿಲ್ಲ ಸಾರ ಪಾಕಗಳಿಲ್ಲ
ಊರೂರಿಗೊಯ್ವುದಕೆ ಭಾರವಲ್ಲ ಅ.ಪ

ಚಾರು ಚೂರ್ಣವಿದಲ್ಲ । ನೀರೊಳಲೆದುದು ಅಲ್ಲ
ಕ್ಷಾರ ಹುಳಿ ಕಹಿಯಿಲ್ಲದೈಶ್ವರ್ಯದಾ ಮಾತ್ರೆ ೧

ಇಂದಿರಾಪತಿಯೆಂಬ ಚಂದ್ರೋದಯದ ಮಾತ್ರೆ
ಮಂದರೋದ್ಧಾರನೆಂಬ ಸಿಂಧೂರಮಾತ್ರೆ ೨

ನಾರಾಯಣಾಯೆಂಬ ನೀರ ಬೆರಸಿರೋದಿದಕೆ
ಸಾರತರ ರಸಪಾಕ ತೋರುವಾ ಮಾತ್ರೆ ೩

ಶ್ರೀರಮಣನೆಂಬ ಮಧುಸೇರಲಾ ಮಾತ್ರೆಗಳ
[ಮೂರೊತ್ತು ಸೇವಿಸೆ ಮನಕಹುದು ಹಿತ] ೪

ಕರುಣಾಕರಾಯೆಂಬ ವರಸಕ್ಕರೆಯ ಬೆರಸಿ
ಶರಣಜನವರದನೆಂದೊರೆವರು ಸದಾ ೫

ಪರಮಾತ್ಮನೆಂಬ ಒರಳೊಳ್ ಹರಿಯೆಂಬ ಗುಂಡಿನಿಂದ
ಅರೆದೊಡದು ಕೇಳಾ ಮಾಂಗಿರಿರಂಗನೆನಿಪಾ ೬

३८೨

ರತ್ನದೊಳಗಿದು ರತ್ನ ನವರತ್ನಗಳೊಳಗಿದು ರತ್ನ ಪ

ಚಿತ್ತಜಪಿತನೆಂಬ ರತ್ನ ನಮ್ಮ ನಿತ್ಯಮುಕ್ತರಂಗರತ್ನ ಅ.ಪ

ಭಕ್ತಪಾಲಕನೆಂಬ ರತ್ನ ಸತ್ಯಾಸಕ್ತ ವರದನೆಂಬ ರತ್ನ
ಮುಕ್ತಿದಾಯಕ ರಾಮರತ್ನ ನಮ್ಮ ಯುಕ್ತಿಭರಿತ ಕೃಷ್ಣರತ್ನ ೧

ಗೋಪಾಲಕೃಷ್ಣನೆಂಬ ರತ್ನ ವರತಾಪಸವಿನುತ ಮಾರತ್ನ
ಶ್ರೀಪತಿಯೆಂಬ ಜೀವರತ್ನ ನಮ್ಮ ಪಾಪವಿನಾಶಕರತ್ನ ೨

ನಾರದ ಪೊಗಳುವ ರತ್ನ ಇದು ನಾರಿದ್ರೌಪದಿ ಕಂಡರತ್ನ
ಚಾರು ವೇದದೊಳಿಹ ರತ್ನ ನಮ್ಮಶ್ರೀರಮಣ ಎಂಬರತ್ನ ೩

ಕರಿರಾಜವರದ ಸುರತ್ನ ನಮ್ಮ ಕರುಣಾಕರಯೆಂಬ ರತ್ನ
ಶರಣ ಜನರ ಹಸ್ತರತ್ನ ನಮ್ಮ ತರಳಧ್ರುವನ ಕಾಯ್ದ ರತ್ನ ೪

ಪ್ರೇಮರಸಾನ್ವಿತ ರತ್ನ ಇದು ಶ್ರೀಮಾಂಗಿರಿರಂಗರತ್ನ
ನಮ್ಮ ರಾಮದಾಸಾರ್ಚಿತ ರತ್ನ ೫

३८३

ರಾಜೆಯಿದ್ದೋರೆಲ್ಲ ಕೇಳ್‌ಬಹುದಣ್ಣ
ಪೂಜೆ ಮಾಡೋ ಇದ ಹೇಳತೀನಣ್ಣ ಪ

ಆಜನ ಈಜನ ಮಾಡ್ಯವ್ರಣ್ಣ
ಸಾಜದ ಹಾದಿಲಿ ಬಾಳ್ಯವ್ರಣ್ಣ ಅ.ಪ

ನೇಸರಿಗೂ ಮುಂಚೆ ಯೋಳಬೇಕಣ್ಣಾ
ಹಾಸಿಗೇಲಿ ತಿಂಡಿ ತಿನಬಾರ್ದಣ್ಣ
ಮೋಸದ ಯೋಚನೆ ಯಿರಬಾರ್ದಣ್ಣ
ಕಾಸಿಗೆ ಸುಳ್ಳ ಯೋಳ್ಬಾರದಣ್ಣ ೧

ಕೈ ಮೈ ಬಾಯ್ತೊಕ ತೊಳಿಬೇಕಣ್ಣ
ನಾಮ ಇಬೂತಿಯ ಅಣೆಗಚ್ರಣ್ಣ
ಸೋಮಿಗೆ ಕೈಗಳ ಮುಗಿದೆರಗಣ್ಣ
ರಾಮಾ ನಿನ್ವಾದ್ವೇಗತಿಯೆನ್ನಣ್ಣ ೨

ಎಣ್ಣುವೊನ್ನಾಸೆಯ ಸುಡಬೇಕಣ್ಣ
ಮಣ್ಣಿನ ಭೂಮಿಯ ನಂಬದಿರಣ್ಣ
ಕಣ್‌ಬಾಯ್ ಕಿವಿಗಳ ಮುಚ್ಚಬೇಕಣ್ಣ
ಸಣ್ಣ ಕೃಷ್ಣನೇ ಗತಿಯೆನ್ನಣ್ಣ ೩

ಓಡುವ ಮನವನು ಬಿಗಿಹಿಡಿಯಣ್ಣ
ನೋಡುವ ಕಣ್ಗಳ ಮನದಲಿಡಣ್ಣ
ಮಾಡೋಂಕಾರವ ಗೆರೆಯೊಳಗಣ್ಣ
ನೋಡದರಲಿ ಹೊಳೆ ಹೊಳೆವಾಬಣ್ಣ ೪

ಅದರಡಿ ತಾವರೆ ಹೂವೈತಣ್ಣ
ಅದರ ಮೇಲೆಳ್ಡು ಕಾಲ್ಗಳ ನೋಡಣ್ಣ
ಮುದದಿ ಮನದಿ ತಲೆಬಾಗುತಿರಣ್ಣ
ಮದನ ಗೋಪಣ್ಣನು ಕಾಣುವನಣ್ಣ ೫

ಕಡಗೆಜ್ಜೆ ಸರಪಳಿಗಳ ನೋಡಣ್ಣ
ಮಡಿಯ ಪೀತಾಂಬ್ರದವುಡಗೆಯ ನೋಡಣ್ಣ

ವೊಡಲ ಮುಚ್ಚಿದಾ ಸರಗಳ ನೋಡಣ್ಣ
ಹಿಡಿದೆತ್ತಿದ ಕೈಕೊಳಲನು ನೋಡು ೬

ಮುಡಿಯ ಕಿರೀಟದ ಹೊಳಪನು ನೋಡು
ನಡುಹಣೆಯ ನಿಡು ತಿಲಕವ ನೋಡು
ಬೆಡಗಿನ ಕಿರುನಗೆ ತುಟಿ ಬಾಯ್ನೋಡು
ಕಡೆನೋಟದ ಕಣ್ಮಿಂಚನು ನೋಡು ೭

ತುಂಬಿದ ಮುದ್ದಿನ ಕೆನ್ನೆಯ ನೋಡು
ಅಂಬರದಂತೆ ಸರೀರವ ನೋಡು
ಲಂಬವಾದವನ ಮಾಲೆಯ ನೋಡು
ನಂಬಿಕೆಯಲಿ ಸರಣಾರ್ತಿಯ ಮಾಡು ೮

ಆಗ ನಾನೆಂಬೋದ ಮರೆಯುವೆಯಣ್ಣ
ಬೋಗಾನಂದವ ಪಡಿತೀಯಣ್ಣ
ಯೋಗದ ಪೂಜೆಯ ಹಾದಿಯಿದಣ್ಣ
ಕೂಗಿಗೆ ಬರುವನು ಮಾಂಗಿರಿಯಣ್ಣ ೯

೩೮೪

ಶಕ್ತಿಗೊಲಿವೆಯೋ ರಂಗ ಯುಕ್ತಿಗೊಲಿವೆಯೋ ಪ

ಶಕ್ತಿ ಯುಕ್ತಿಗೇ ಒಲಿವನಲ್ಲ ಭಕ್ತಿಯೆಂಬುದಿಲ್ಲದಿರಲು ಅ.ಪ

ಸಕಲ ಭುವನಗಳೊಳು ಹುಡುಕಿ ವಿಕಲನಾದನಂದು ಕಶಿಪು
ಭಕುತಿಯಲಿ ಪ್ರಹ್ಲಾದ ಕರೆಯೆ ಮರುಘಳಿಗೆಯೆ ಕಂಭದಿ ಬಂದೆ ೧

ಸೆರೆಯೊಳರಿಯು ಜನಿಸಲಂದು ಬರಿಯಮಾಯೆಯ
ಸೆರೆಯೊಳಿರಿಸಿ ಭರದಿ ಗೋಕುಲಕ್ಕೈದಿದೆಯಲ್ಲವೆ ೨

ಕರೆದ ಕೌರವರಿಗೊಲಿಯಲಿಲ್ಲ ಕರೆಯದಾವಿದುರಗೊಲಿದೆ
ಅರಿಯಲರಿದು ಮಹಿಮೆಗಳ ಮಾಂಗಿರಿರಂಗ ಕರುಣಾಸಾಗರ ೩

೩೮೫

ಸಿರಿಪತಿಯೇಗತಿ ಎನುವವಗೆ
ಮತ್ತೆದೊರಕುವುದೇ ಮುಕುತಿ ಪ

ಪರಮೇಶ್ವರನತಿ ಕರುಣಾಮಯನೆಂದು
ಅರಿಯದವನೇ ಕುಮತಿ ಅ.ಪ

ಸಾಸಿರನಾಮನು ಸಾಸಿರ ನೇತ್ರನು
ಸಾಸಿರ ಗಾತ್ರನು ಸುಂದರನು
ವಾಸುದೇವ ಮಾಂಗಿರಿಪತಿಯವನು
ದಾಸರ ಪೊರೆಯಲು ನಿಂದವನು ೧

ವೇದದೊಳಿರುವ ನಾದಹೇಳಿರುವ
ಆದರೂ ಕಾಣದ ಮಹಿಮನವ
ಮೋದದಿ ಭಜಿಸುವ ಸಾಧಕರಿಗೆ ।
ಆದರಿಸಿ ಅಪಾರವ ತೋರುವ ಮಹದೇವ ೨

೩೮೬

ಸುಮ್ಮನೇಕೆ ಕಾಲ ಕಳೆವೆ
ಹಮ್ಮದೇಕೆ ಮನವೇ ಪ

ಹಮ್ಮುಧನಗಳೆಲ್ಲ ನಶ್ವರ
ಪೆರ್ಮೆ ಸಲ್ಲದು ಭಜನೆಗೆ ಅ.ಪ

ನಿಲುವೆಡೆಯೊಳು ಕುಳಿತೆಡೆಯೊಳು
ಸಲಿಲದೊಳು ಸಲೆ ನಲಿಯುವೆಡೆಯೊಳು
ಒಲಿದು ಭೋಜನ ಗೈಯುವೆಡೆಯೊ
ಳೊಲಿದು ರಾಮರಾಮ ಯೆನ್ನದೇ ೧

ಮಲಗಿಪಾಡಲು ನಂದಕಂದ
ಕುಳಿತು ಲಾಲಿಪ ಪರಮಾನಂದ
ಕುಳಿತು ಪಾಡೆ ನಿಲುವ ಗೋವಿಂದ
ನಿಲಲು ನಲಿವನಾ ಮುಕುಂದ ೨

ಕಾಲಪಾಶ ಎಳೆವ ಕಾಲದಿ ನಾಲಗೆಯೊಳಕೆಸೆಳೆವಕಾಲದಿ
ಮೇಲೆ ಬೆಳೆವ ಜ್ಞಾನಘಾತದಿ
ಬಾಲಗೋಪಾಲನ ಧ್ಯಾನಿಸಲಾರೆನೀ ೩

ಭಕ್ತವತ್ಸಲ ನಮ್ಮ ದೇವ
ಶಕ್ತಿಗೊಲಿವನಲ್ಲ ಮಾಧವ
ಭಕ್ತಿಯಿಂದ ನೆನೆಯಲು ದಿನ
ಮುಕ್ತಿಯೀವನಾ ರಮಾಧವಾ ೪

ಸಾವಿರಾರು ವರುಷಕಾಲ
ಜೀವಿಸಿರಲು ಫಲವದೇನು
ಮಾವಿನಾಕೆರೆಯರಸ ದಿವ್ಯ
ದೇವನ ನೆನೆದು ಸುಖಿಸದೀಪರಿ ೫

ತತ್ವದರ್ಶನದಲ್ಲಿ ಮಂತ್ರಮಹಿಮೆ

೩೮೭

ಈ ಮಂತ್ರ ಜಪಗೈದು ಜನುಮವ
ಸ್ವಾಮಿಗರ್ಪಿಸೋ ಮಾನವಾ ಪ

ಕಾಮಿತಾರ್ಥವ ಬೇಡದೆ ಶತ
ನಾಮಗಳೊಳು ಹಿರಿಯದೆನಿಪ
ಹೋಮ ಯಾಗಕೆ ಮೂಲ ಮಂತ್ರ ।
ಸಾಮಜಾಪತಿ ನೆನೆವ ಮಂತ್ರ ಅ.ಪ

ಧ್ರುವನು ಜಪವಗೈದ ಮಂತ್ರ ।
ದಿವಿಜರನಿಶ ಪಠಿಪ ಮಂತ್ರ
ಶಿವನು ಗೌರಿಗೆ ಪೇಳಿದ ಮಂತ್ರ ।
ಜವನ ಭಟರ ಸದೆದ ಮಂತ್ರ ೧

ಶಿಲೆಯು ಲಲನೆಯಾದ ಮಂತ್ರ
ಲಲನೆಪಾಂಚಾಲಿ ಹೇಳಿದ ಮಂತ್ರ
ಜಲದೊಳಕ್ರೂರಗೊಲಿದ ಮಂತ್ರ ।
ಬಲಿಗೆ ವರವನಿತ್ತ ಮಂತ್ರ ೨

ನಾರದಮುನಿ ಪೇಳ್ವ ಮಂತ್ರ ।
ಸಾರಸಭವನುಲಿದ ಮಂತ್ರ
ಘೋರದುರಿತನಾಶಕ ಮಂತ್ರ ಸಂ
ಸಾರಜಲಧಿ ದಾಟಿಪ ಮಂತ್ರ ೩

ಅಸುರರೆದೆಯ ಸೀಳುವ ಮಂತ್ರ
ವಸುಧೆಭಾರವ ಕಳೆವ ಮಂತ್ರ

ಅಸಮಬಲ ಶ್ರೀರಂಗ ಮಂತ್ರ
ಉಸುರಲಳವೆ ಪರಮ ಮಂತ್ರ ೪

ಗಿರಿಯ ತೇಲಿಸಿದೊಂದು ಮಂತ್ರ
ನರನ ಪಾಲಿಪೊಂದು ಮಂತ್ರ ೫

ತರಳ ಪ್ರಹ್ಲಾದಗೊಂದು ಮಂತ್ರ
ಸಿರಿಗೋವಿಂದನೆಂಬ ಮಂತ್ರ
ಮಂಗಳಕರ ರಂಗಮಂತ್ರ ಗಂಗಾಜನಕನೇಂಬೀ ಮಂತ್ರ
ಶೃಂಗಾರಾಬ್ಧಿ ಸೋಮಮಂತ್ರ ಮಾಂಗಿರೀಶನೆಂಬ ಮಂತ್ರ ೬

೩೮೮

ಒಂದೇ ಮಂತ್ರವು ಸಾಕೋ ಶ್ರೀರಾಮ ಎಂಬ ಪ

ಒಂದುಸಾಸಿರ ಮಂತ್ರಕೊಂದೇ ಸಾಟಿಯು ಎಂದು
ಇಂದುಶೇಖರ ಪೇಳ್ವ ಶ್ರೀರಾಮ ನಾಮವೆಂಬ ಅ.ಪ

ಮಾಹೇಶ್ವರ [ನುತ] ಮಂದರೋದ್ಧಾರ ಕೇಶವ
ಶ್ರೀಹರಿ ಭೂದೇವಿಯುತ ಮೃಗೇಂದ್ರ ವರದಾ
ರೋಹಿಣಿಪುತ್ರ ವೇಣುವಿಶಾರದ
ಬಾಧಾಪಹಾರಕ ಕೇಶವ ನಾಮಂಗಳೆಲ್ಲಕೆ ೧

ನಾರಾಯಣಾಚ್ಯುತ ಗೋವಿಂದ ಮಾಧವ
ನೀರೇಜಭವತಾತ ದಾಮೋದರ
ಕ್ಷೀರಾಬ್ಧಿ ಮಂದಿರ ಖಗೇಂದ್ರವಾಹನ
ಶ್ರೀರಂಗ ಮಾಂಗಿರಿಯ ಕೋದಂಡಧರನೆಂಬ ೨

೩೮೯

ಔಷಧದ ಬೇರೊಂದನು ನಾರದನು ತಂದ
ಪೋಷಣೆಗೆ ಸಕಲರೂ ಸವಿಯಲೆಂದ ಪ

ಜ್ವರಭೇದಗಳಿಗೆಲ್ಲ ನರಹರಿ ಎಂಬ ಬೇರು
ಶಿರವೇಧೆ ಎಂಬುದಕೆ ಹರಿಹರಿ ಎಂಬ ಬೇರು
ಉರಿ ವಾತ ರುಜೆಗಳಿಗೆ ಸಿರಿಲೋಲನೀ ಬೇರು
ಪರಿಪರಿಯ ಭವಗಳಿಗೆ ನಾರಾಯಣಾ ಎಂಬ ಬೇರು ೧

ಪಿತ್ತರೋಗಂಗಳಿಗೆ ಚಿತ್ತಜನಪಿತನೆಂಬ
ಪೃಥ್ವಿಯೊಳಗತ್ಯಧಮ ವಿಭಂದ ರೋಗಗಳಿ
ಗರ್ಥಿಯಿಂ ಲೇಪಿಸುವ ಸತ್ವಗುಣನಿಧಿಯೆಂಬ
ನಿತ್ಯಶೌರಿಯ ನಾಮ ಶಿವಬೇರು ೨

ನಾರದನು ಬೇರೂರೆ ನೀರೆರೆದ ಪ್ರಹ್ಲಾದ
ಧೀರಬಲಿ ಬೆಳೆಯಿಸಿದ । ನೀರ ಗಜನೆರೆದ
ವೀರದಶಶಿರನನುಜನೆಚ್ಚರದೊಳಿದ ಕಾಯ್ದು
ನಾರಿ ದ್ರೌಪದಿ ಶಿರದಿ ಮೊಗ್ಗಾಗಿ ಧರಿಸಿದಂಥ ೩

ಅರಳಿದ ಸುಮಗಳನು ಅಕ್ರೂರ ಪೋಷಿಸಿದ
ತ್ವರಿತದಿ ಕಾಯ್ಗಳನು ಶುಕದೇವ ಕಾಯ್ದು
ನರರೆಲ್ಲರೀ ಫಲವ ದಿನದಿನವು ಮೆಲಲೆಂದು
ವರದ ಮಾಂಗಿರಿರಂಗ ಪೇಳುತಿಹನು ೪

೩೯೦

ಕೋಟಿನಾಮಗಳಲ್ಲಿ ಹಿರಿಯದಂತೆ
ಕಾಟದಾ ಶರನಿಧಿಯ ದಾಟಿಸುವುದಂತೆ ಪ

ಕೋಟಿನಾಮಂಗಳಿಗೂ ಕೋಟೆಯಾಗಿಹುದಂತೆ
ಸಾಟಿಯಿಲ್ಲದ ಮಂತ್ರ ಪಾಟವಿದಂತೆ ಅ.ಪ

ಭುವನ ಸುಂದರನಂತೆ ಭವವ ಕಳೆಯುವನಂತೆ
ಶಿವನಿಗೆ ಹಿತವಂತೆ ಭುವನೇಶನಂತೆ
ಅವನಿಸುತೆಗಾಗಿ ದಾನವರ ಹರಿಸಿದನಂತೆ
ಅವನೆ ಮಾಂಗಿರಿಯ ಮಾಧವ ರಾಮನಂತೆ ೧

೩೯೧

ಚಿಂತಯಾಮಿ ತಾರಕನಾಮಂ ಅಂತರಾತ್ಮ ರಘುರಾಮಂ ಪ

ಶಾಂತಿದಾಂತಭರಿತ ಹನುಮಂತ ಸೇವ್ಯ ಸೀತಾರಾಮಂ ಅ.ಪ.

ರಾಕ್ಷರ ರಹಿತಾಷ್ಟಾಕ್ಷರಿ ಶೂನ್ಯಂ
ಮಾಕ್ಷರ ಲೋಪ ಪಂಚಾಕ್ಷರಿ ಶೂನ್ಯಂ
ಸಾಕ್ಷರ ರಾಮಾದ್ವ್ಯಕ್ಷರಿ ಮಾನ್ಯಂ
ರಾಕ್ಷಸನಾಶ ರಾಮಾಕ್ಷರ ಮಾನ್ಯಂ ೧

ರವಿವಂಶಾಂಬುಧಿ ಚಂದ್ರಪ್ರದೀಪಂ
ಭುವನಮನೋಹರ ದಿವ್ಯಸ್ವರೂಪಂ
ಶಿವಧನುಭಂಜನ ವೀರಪ್ರತಾಪಂ
ಅವನಿಜಾಲೋಲ ವೈಭವಯುತ ಭೂಪಂ ೨

ಸತ್ಯಧರ್ಮ ಪರಾಯಣ ರಾಮಂ
ನಿತ್ಯಮುಕ್ತ ಸೇವಿತ ರಘುರಾಮಂ
ಸತ್ಯ ಪರಾಕ್ರಮ ಜಗದಭಿರಾಮಂ
ಸ್ತುತ್ಯಚರಿತ್ರ ಮಾಂಗಿರಿವರಧಾಮಂ ೩

೩೯೨

ಜ್ಞಾನಾನಂದಮಯಂ ಭಜೇಹಂ ಪ

ಧ್ಯಾನಾಮೃತಸಾಗರ ಶಾಂತಕರಂ
ಶ್ರೀನಿವಾಸ ಕರುಣಾರಸಪೂರಂ ಅ.ಪ

ಸಕಲ ಕಲಾಕೃತಿ ಪೂರ್ಣಮನಂತಂ
ಸಕಲ ವರಪ್ರದಮನುಪಮ ಶಾಂತಂ
ವಿಕಸಿತ ಕಮಲೋಪಮ ಶಂಭುಚಿತ್ತಂ
ಶ್ರೀಕರಮಮಿತ ಕೃಪಾಗುಣ ಸಹಿತಂ ೧

ಮೂಲಮಂತ್ರ ಸಕಲಾರ್ಥಸಮೀರಂ
ಮೂಲತತ್ವ ನಿರ್ಧಾರಕಮಮರಂ
ಗಾಲವ ನಾರದ ಮುನಿಜನನಿಕರಂ
ಸಾಲಂಕೃತ ಮಾಂಗಿರಿವರಮಿಹಿರಂ ೨

೩೯೩

ನಾರದನುತ ಪಾವನನಾಮಾ
ನೀರಜಭವಪಿತ ರಣಭೀಮಾ ೧

ಸಾರಸಲೋಚನ ಜಗದಭಿರಾಮಾ
ಸೂರಿಗಣನುತ ರವಿಕುಲ ಸೋಮಾ ೨

ದಶರಥನಂದನ ಮುನಿಮುಖಚಂದನ
ನಿಶಿಚರಬಂಧನ ಕಪಿವರಸೇನಾ
ದಶಮುಖಭಂಜನ ಬಂಧವಿಮೋಚನ
ಪಶುಪತಿಮೋಹನ ಮಾಂಗಿರಿಸದನ ೩

೩೯೪

ನಾರದ ನುತಿಸುವನಾಮ ನಾರಾಯಣ ಹರಿನಾಮ ಪ

ಮಾರವೈರಿಯ ಜಪನಾಮ ನೀರಜನಾಭನ ನಾಮ ಅ.ಪ

ತಾಪಸನರಸಿಯ ಶಾಪವನಳಿಸುತೆ
ಆ ಪರಮೇಶನ ಚಾಪವ ಮುರಿದು
ಭೂಪತಿಯಣುಗಿ ಶ್ರೀರೂಪಿಯ ವ್ಯಾಜ್ಯದಿ
ಪಾಪಿ ರಾವಣನನು ಛೇದಿಸುವಾ ನಾಮ ೧

ನಂದ ಯಶೋದ ಕಂದನೆನಿಸಿ ಬಹು
ಮಂದಿ ರಕ್ಕಸರ ಕೊಂದು ಗೋಪಿಯರ
ವೃಂದದಿ ಮುರಳಿಯಾನಂದವ ನೀಡಿದ
ಸುಂದರ ಮಾಂಗಿರಿ ರಂಗನ ನಾಮ ೨

೩೯೫

ನಾರಾಯಣಾಯ ನಿಗಮೋದರಾಯ
ಶ್ರೀರಾಘವಾಯ ನಮೋ ಸಮಸ್ತೆ ಪ

ನೀರೇಜನಾಭಾಯ ನೀಲಾಂಬುದಾಭಯ
ನೀರೇಜ ನಿಲಯಾಯ ನಮೋನಮಸ್ತೆ ಅ.ಪ

ನಾಗೇಶ ಶಯನಾಯ ವಾಗೀಶ ವಿನುತಾಯ
ಯೋಗೀಶ ನಮಿತಾಯ ನಮೋ ನಮೋ
ಶ್ರೀಗೋತ್ರ ಸಹಿತಾಯ ರಾಗಾಂಬು ಭರಿತಾಯ
ಶ್ರೀಮಾಂಗಿರೀಶಾಯ ನಮೋ ನಮಸ್ತೇ ೧

೩೯೬

ಭೂಷಣವಿದು ಭೂಷಣ ಕೇಶವಧ್ಯಾನ ಪ

ಭೂಷಣವದನಾ ವಿಭೀಷಣ ಧರಿಸುತೆ
ನಾಶರಹಿತ ಪೌರುಷವಾಂತ ಧರಣಿಯೊಳು ಅ.ಪ

ಶೇಷಶಯನನಾಮ ಭೂಷಣ
ದೋಷರಹಿತ ಶಿರೋಧಿ ಭೂಷಣ
ಶ್ರೀಶ ವಿಠ್ಠಲನಾಮ ಭೂಷಣ
ಶೇಷಫಣಿಮಣಿಧೃತ ಭೂಷಣ ೧

ಕರಯುಗಗಳ ಭೂಷಣ ಹರಿಪೂಜೆಯು
ಶಿರಕೆ ವಂದನೆ ಭೂಷಣ
ಹರಿಪಾದದರ್ಶನ ವರನೇತ್ರಭೂಷಣ
ವರಕ್ಷೇತ್ರಸಂಚಾರ ಚರಣಕೆ ಭೂಷಣ ೨

ಹರಿಯ ಚರಿತೆಯು ಕರ್ಣಭೂಷಣ
ಹರಿತುಳಸಿ ನಾಸಿಕಕೆ ಭೂಷಣ
ಹರಿಯ ಕೊಂಡಾಡುವುದೆ ರಸನೆಗೆ ಭೂಷಣ
ಹರಿಯ ಭಜನೆಯು [ಜಿಹ್ವಾಭೂಷಣ] ೩

ಧರೆಯೊಳು ಜನಿಸಿದ ಮಾನವರಿಗೆ
ಹರಿನಾಮವೆ ಭೂಷಣಾ
ಸಿರಿರಮಣನಾಮ ಕಿರೀಟವಯ್ಯ
ವರದನೆಂಬುವನಾಮ ವರಕರ್ಣಾಭರಣವು ೪

ಗಂಗಾಜನಕನೆಂಬ ನಾಮವೆ ಅಂತ
ರಂಗಕೆ ಮಣಿಭೂಷಣಾ

ರಂಗನೆಂಬುವ ನಾಮ ಹಸ್ತಸಿಂಗರದ ಪೀತಾಂಬರವು ತಾ
ಮಾಂಗಿರೀಶನ ನಾಮ ಮಂಗಳಕರ ಭೂಷಣವೈ ೫

೩೯೭

ಯಾರು ಗತಿಯೋ ರಂಗಯ್ಯ
ಘೋರ ದುರಿತ ಸಂಸಾರವೇರುವವಗೆ ಪ

ಕಾಯಿ ನಿನ್ನದು ಕುಡುಗೋಲು ನಿನ್ನದೆ ಸ್ವಾಮಿ
ಕಾಯುವೆಯೋ ದೇವ ಗಾಯಪಡಿಸುವೆಯೋ
ನ್ಯಾಯ ಅನ್ಯಾಯವಾದಾಯ ನಷ್ಟಗಳೆಲ್ಲ
ಜೀಯ ನಿನ್ನದೇ ಅಪ್ರಮೇಯ ವಿನುತ ಎನ್ನ ೧

ಕಾಲಕರ್ಮಂಗಳ ಜಾಲಕೆ ಸಿಲುಕಿದ
ಕೀಲುಮುರಿದ ತೇರಂತೆ ನಾ ಬಳಲಿ
ಮೂಲಮಂತ್ರವ ಬಿಟ್ಟು ಲೋಲಮಾನವ ನಾನು
ಪಾಲಿಸುವರು ಬೇರಿಲ್ಲ ಮಾಂಗಿರಿರಂಗ ೨

೩೯೮

ರಸನೆಗೆ ರಸವಿದು ತಾರಕನಾಮಾ
ಅಸುವಿಗಸುವು ವಾಸುದೇವನ ನಾಮಾ ಪ

ರಾವಣಾರಿಯ ನಾಮ ಭಾವದಿವ್ಯಾಮೃತ
ಗೋವಳನಾಮವು ಜೀವಜೀವಾಮೃತ ೧

ಶಬರಿಗೊಲಿದ ನಾಮ ಅಭಯವೀಯುವ ನಾಮ
ಕುಬುಜೆಗೊಲಿದ ನಾಮಾ ವಿಭವದ ನಾಮಾ ೨

ಅಕ್ಷಯಪದ ನಾಮ ಪಕ್ಷಿವಾಹನ ನಾಮಾ
ರಕ್ಷಕ ಮಾಂಗಿರಿರಂಗನ ನಾಮಾ ೩

೩೯೯

ರಾಮತಾರಕ ಒಂದೆ ಮೂಲಸೂತ್ರ
ಕಾಮವೈರಿಯು ತೋರ್ಪ ಮೋಕ್ಷದಪಾತ್ರ ಪ

ಶ್ರೀಮಹಿಜಾಪ್ರಿಯ ದಿವ್ಯಮಂತ್ರವು ಮಾತ್ರ
ಕಾಮಿತ ಪಡೆಯಲು ಭಕ್ತಿಮಾಡುವ ತಂತ್ರ ಅ.ಪ

ತಾಪಸ ಮಡದಿಯ ಶಾಪವನಳಿಸಿತು
ಪಾಪಿ ದೈತೇಯಳ ಕೋಪವನುರುಬಿತು
ಪರಮೇಶನ ಚಾಪವ ಮುರಿಯಿತು
ಭೂಪತಿ ತನುಜೆಯ ಪಾಪವ ಹರಿಸಿತು ೧

ಅಂಗನೆಗೊಲಿಯಿತು ಮುನಿಗಳ ಸಲಹಿತು
ಹಿಂಗದೆ ರಾವಣಸೋದರಗೊಲಿಯಿತು
ಭಂಗಿಸುವ ದಶಕಂಠನ ವಧಿಸಿತು
ಮಾಂಗಿರೀಶನ ಪಾದವೆಗತಿ ಯೆಮಗೆನಿಸಿತು ೨

೪೦೦

ರಾಮಮಂತ್ರದ ನೆನಪು ಮನಕಂಟಬೇಕು
ರಾಮನಾಮದಿ ರಸನೆ ನಲಿಯುತಲಿರಬೇಕು ಪ

ರಾಮಮೂರ್ತಿಯ ಕಣ್ಣು ಕಾಣುತಲಿರಬೇಕು
ರಾಮಕಥೆಯ ಕಿವಿ ಕೇಳುತಲಿರಬೇಕು ಅ.ಪ

ರಾಮಪಾದದ ತೀರ್ಥ ಕಂಠಕಿಳಿಯಬೇಕು
ರಾಮ ಪ್ರಸಾದವು ತುಳಸಿಯಾಗಿರಬೇಕು

ರಾಮನ ನಿಲಯವೇ ಕ್ಷೇತ್ರವೆನಿಸಬೇಕು
ರಾಮನ ಭಜನೆಯೆ ದಿನಚರಿಯಾಗಬೇಕು ೧

ರಾಮನಯೋಧ್ಯೆಯೆ ಹೃದಯವಾಗಲಿಬೇಕು
ರಾಮಮಂತ್ರದ ಜಪ ಚಿತ್ತದಿ ನಿಲಬೇಕು
ರಾಮನೇ ಮಾಂಗಿರಿರಂಗನೆನಲಿಬೇಕು
ರಾಮಗೆ ಸಕಲವ ಅರ್ಪಿಸಬೇಕು ೨

೪೦೧

ಶರಣಾಗತಿಯೇ ಪುರುಷಾರ್ಥ
ಸುರಪಕುಮಾರ ನಾರಣ ಗೀತಾರ್ಥ ಪ

ಸ್ಮರಣಾರಾಧನ ಸಾಧನೆಗರ್ಥ
ಧರಣಿಯ ಸೌಖ್ಯದ ಬಯಕೆಯು ವ್ಯರ್ಥ ಅ.ಪ

ಮರಣಕಾಲದಿ ತನ್ನ ಬಳಿಗೆ ಬಂದಾತನ
ಚರಣವೆ ಶರಣೆಂದ ಖಗನು ಸಮರ್ಥ
ಶರಣೆಂದೆನ್ನುತ ಧರಣಿಜೆಯರಸನ
ಚರಣವ ನುತಿಸಿದ ದನುಜ ಸಮರ್ಥ ೧

ಸರಳ ಪಂಜರದಲಿ ಶಯನಿಸಿದಾಗ ತನು
ಹರಿ ಶರಣೆಂದುದು ಪರಮ ಪದಾರ್ಥ
ಗುರು ಉಪದೇಶದಿ ಶರಣಾಗತಿಯ ಮಾಂ
ಗಿರಿಯರಸಗೊರೆವುದೆ ಚಿರ ಚರಿತಾರ್ಥ ೨

೪೦೨

ಶ್ರೀಕಾರ ಶೃಂಗಾರ ಶ್ರೀಮಾಮನೋಹರ
ಓಂಕಾರ ಸಾಕಾರ ಪರಮೇಶ್ವರಾ ಪ

ಗಂಭೀರ ಝೇಂಕಾರ ಮುರಳೀಧರ ಗುಣ
ಸುಕುಮಾರ ಬೀರ ಕರುಣಾಕರಾ ಅ.ಪ

ಮುರವೈರಿ ಕಂಸಾರಿ ನರಕೇಸರಿ
ಮಾರಾರಿ ನುತಕಾರಿ ಶುಭ ಶ್ರೀ
ಹರೀ ಜಂಭಾರಿ ದಯಕಾರಿ ಮಧುಸಂಹರೀ
ಗಿರಿಧಾರಿ ದುರಿತಾರಿ ಶ್ರೀ ಮಾಂಗಿರೀ ೧

೪೦೩

ಸ್ಮರಿಸಿ ಸುಖಿಸೆಲೋ ಮಾನವಾ ಪ

ಸರಸಿಜಾಸನ ಸತತ ನೆನೆವ ಹರಿನಾಮವನು ಅ.ಪ

ಜವರಾಯ ಕಿಂಕರರ ಹಿಮ್ಮೆಟ್ಟಿಸಿದ ನಾಮ
ಧ್ರುವರಾಯಗೊಲಿದ ಘನವು ಈ ನಾಮ
ನವನೀತರೂಪದಿಂದ ಘನವ ತಾಳ್ದಿಹ ನಾಮ
ಸುವಿಲಾಸದಿಂ ಪಾರ್ಥಗೊಲಿದಿರ್ಪನಾಮವನು ೧

ಸನಕಾದಿ ಮುನಿಗಳು ಸತತ ಭಜಿಸುವ ನಾಮ
ಅನಿಲಜಾತನಿಗೊಲಿದ ಪರಮನಾಮ
ವನಚಾರಿಯಾಗಿದ್ದ ಶಬರಿಗೊಲಿದ ನಾಮ
ವನಚರರ ಗರುವವನು ಮುರಿಯುವ ನಾಮ ೨

ಪಾಂಚಾಲಿಗಕ್ಷಯದ ವರವನಿತ್ತಾ ನಾಮ
ಪಾಂಚಜನ್ಯವ ಸಿರಿಯೊಳೆಸೆಯುತಿಹ ನಾಮ
ವಂಚಕರ ಹೃದಯಗಳ ಭೇದಿಸುತ್ತಿಹನಾಮ
ಚಂಚಲೆಯರುತ್ಸಾಹದಿಂ ಭಜಿಪ ನಾಮವನು ೩

ದುರುಳದೈತ್ಯರ ಮನವ ಕದಡಿ ಕಲಕುವ ನಾಮ
ಶರಣಾಗತಾವಳಿಯ ಪೊರೆಯುತಿಹನಾಮ

ಗರಿಸಿಗಿದ ಸಂಪಾತಿಗಾನಂದವಿತ್ತನಾಮ
ತರಳಪ್ರಹ್ಲಾದ ತಾ ಪಿತಗೊರೆವ ನಾಮವನು ೪

ಮಾಂಗಿರೀ ವರಾಗ್ರದೊಳು ಮರೆಯುತಿಹ ಸಿರಿನಾಮ
ಶೃಂಗಾರ ಶ್ರೀ ಪಾಂಡುರಂಗ ನಾಮ
ಗಂಗಾಧರಾನುತ ಸುಖದಾತ ಶ್ರೀನಾಮ
ಮಂಗಳಕರ ರಾಮದಾಸನುತ ನಾಮವನು ೫

೪೦೪

ಹುಚ್ಚು ಹಿಡಿಯಬೇಕು ಭಜನೆಯ
ರಚ್ಚೆ ತೊಡಗ ಬೇಕು ಪ
[ಮೆಚ್ಚುತ] ಅಚ್ಯುತನಾಮವ
ಉಚ್ಚರಿಸುತಲಿರೆ ಕಿಚ್ಚೂ ಮಂಜಹುದು ಅ.ಪ

ಊರುಗಳನು ದಾಟಿ ಬೆಟ್ಟವ
ನೇರುತಲಿರಬೇಕು
ಊರುಹೆಜ್ಜೆಗೂ ನಾರಾಯಣ ನಾಮೋ
ಚ್ಚಾರದ ಹಸಿವು ಬಾಯಾರಿಕೆಯಾಗುವತನಕ ೧

ಕೀರ್ತನೆಯಲಿ ಮುಳುಗಿ ಕೃಷ್ಣನ
ಮೂರ್ತಿಯ ಕಾಣುತಲಿ
ಪಾರ್ಥಸಾರಥಿಯವ ಅನಾಥರಕ್ಷಕನೆಂಬ
ಕೀರ್ತಿಯನಾಂತ ಮಾಂಗಿರಿಯ ಭಜನೆಯಾ ೨

ಕ್ಷೇತ್ರದರ್ಶನ

೪೦೫

ಯಾತ್ರೆಬೇಕು ಕ್ಷೇತ್ರಯಾತ್ರೆ ಬೇಕು ಪ

ಸೂತ್ರದಾರ ಪಂಕೇಜನೇತ್ರನ ನೆನೆವುದಕೆ ಅ.ಪ

ನೇಮ ಸಾಧನೆಗಾಗಿ ಪ್ರೇಮ ಮೊಳೆವುದಕಾಗಿ
ಕಾಮ ಕ್ರೋಧವ ಸುಡುವ ಸ್ಥೈರ್ಯಕಾಗಿ ೧

ಈ ಮನದ ಚಂಚಲವ ಕಡಿದೊಂದೆ ಮನದಿಂದ
ಶ್ರೀಮಾಂಗಿರಿಯ ರಂಗ ನಾಮಾಮೃತವೆಂಬ ೨

೪೦೬

ಮೇಲು ಕೋಟೆ

ತಿರುನಾರಾಯಣ ಚರಣಂ ಶರಣಂ
ಸುರ ಮುನಿ ವಲಯಂ ಯದುಗಿರಿನಿಲಯಂ ಪ

ಗುರುರಾಮಾನುಜ ಹೃದಯಭರಣಂ
ಸ್ಮರವರ ಸುಂದರಮನಿಶಂ ಸದಯಂ ಅ.ಪ

ಯತಿರಾಮಾನುಜ ಶೆಲ್ವಕುಮಾರಂ
ಪತಿತಪಾವನ ಮಾಯುತ ಮಣಿಹಾರಂ
ಸತತಾನಂದದ ಪುಣ್ಯಶರೀರಂ
ಶತಪತ್ರಾಯುತ ನೇತ್ರಮುದಾರಂ ೧

ಗರುಡ ಕರಾರ್ಷಿತ ನಿರುಪಮಮಣಿಕೋಟೀರ
ವಿರಾಜಿತ ಮಸ್ತಕಮಮಲಂ

ಪರಮ ವೈಭವೋತ್ಸವ ರಾರಾಜಿತ
ಪುರುಷೋತ್ತಮ ಕೇಶವ ಮಾಲೋಲಂ ೨

ಪರಮ ಪುಣ್ಯತೀರ್ಥಾಕರ ಶೋಭಿತ
ನರಹರಿ ಗಿರಿಸಂಭೂಷಿತ ಧಾಮಂ
ನಿರುತ ದಯಾಕರ ಮಾಂಗಿರಿಪತಿ ಭೂ
ಸುರನುತ ಮಾಧವ ಜಗದಭಿರಾಮಂ ೩

ತಿರುಪತಿ

೪೦೭

ವರ ವೆಂಕಟಾದ್ರಿ ಸ್ಮರಸುಂದರ
ಸರಸಿಜ ಮಣಿಹಾರ ಪ

ಧರಣಿಸುತಾ ಪರಿಭೂಷಿತ
ಶರಣಾಗತ ಪರಿವೇಷ್ಟಿತ
ಸುರನಾಯಕ ವಿಧಿಸೇವಿತ
ಮರುತಾತ್ಮಜ ಗರುಡಾನತ ೧

ಪರಮಕೃಪಾ ಶರಧೀ[ಶ್ವರ]
ಮುರಳೀಧರ ಘನಸುಂದರ
ದುರಿತಾನಲ ಪರಿಹಾರ ನರಹರಿ
[ವರ]ಮಾಂಗಿರಿ ಮಿಹಿರ ೨

೪೦೮

ವೆಂಕಟಗಿರಿನಿಲಯ ಜೀಯ ಪ

ಪಂಕಜಾಕ್ಷ ಅಕಳಂಕ ಜನಾರ್ದನ
ಶಂಖ ಚಕ್ರಧರ ಲೋಕಮೋಹನ ಅ.ಪ

ವೇದಶಾಸ್ತ್ರ ಸಕಲಾಗಮ ವಿನುತ
ನಾದರೂಪ ಶ್ರೀ ಭೂಮಿದೇವಿ ಸಮೇತ
ಮಾಧವ ಮಧುಪರ ನಾರದ ಸನ್ನುತ
ಪಾದವ ತೋರೋ ಮಾಂಗಿರಿನಾಥ ೧

೪೮೯

ಶ್ರೀರಂಗ

ಶ್ರೀರಂಗ ರಂಗಮಣಿ ವಿಭೂಷಿತ
ನೀರೇಜ ಲೋಚನ ಪ

ಶ್ರೀರಂಗನಾಥ ಪರಮ ವೈಭವ
ಶೃಂಗಮುನಿವಿನುತ ಸಿರಿ ಮಾಹೃದಯಾ ಅ.ಪ

ಭವನಾಶಕರಾ ಮಹಾಹ್ಲಾದಕರಾ
ಭುವನ ವೈಕುಂಠ ವಿಹಾರಾ ಭುಜಗತಲ್ಪಶಯನೇಶ್ವರ
ನವಮಣಿ ಗುಣಹಾರ ಪರಮಯೋಗಿ ನಿಕರ ೧

ಧೀರ ತುಳಸೀನಿಕರ । ಸಂಭೂಷಣ ಸುಕು
ಮಾರಾ ಭುವನನುತ ಕಮಲನಾಭ
ವೇರಜ ಪರಿವೇಷಿತ ಮಾಂಗಿರೀಶ ಸುರುಚಿರ ೨

೪೯೦

ಕಂಡೆನಿಂದು ಕುಳಿತರಂಗನ ಪುಂಡರೀಕನಯನನ
ಅಂಡಜಾರಿಶಯನ ಶ್ರೀರಂಗಪಟ್ಟಣದರಸನ ಪ

ಏಳು ಏಳು ಎಂದೆ ತಾಳು ತಾಳೆನೆ ಮನದಿ ನೊಂದೆ
ಗೋಳು ಕೇಳಿಸದೇ ಎಂದೆ ।
ತೋಳ ಚಾಚಿ ವಂದನೆಗೈದೆ (ಅಪೂರ್ಣ) ೧

ನರಸಿಂಹಕ್ಷೇತ್ರಗಳು

೪೧೧

ಜಯ ಜಯ ಶ್ರೀ ನರಕೇಸರಿ
ಜಯ ಜಯ ಲೋಕೋಪಕಾರಿ
ಜಯಜಯ ದೈತೇಯ ವೈರಿ
ಜಯ ಜಯ ನೃಹರೀ ಪ

ಜಯ ಜಯ ಜಯತು ಹರಿಶೌರೀ
ಜಯ ಜಯ ಜಯತು ಚಕ್ರಧಾರಿ
ಜಯ ಜಯ ಕಶಿಪು ಸಂಹಾರಿ
ಜಯ ಕಾರುಣ್ಯ ಲಹರೀ ಅ.ಪ

ಯಾದವಾದ್ರಿ ನಿಲಯ ನೃಹರೀ
ಖಾದ್ರಿನಗರವಾಸ ನೃಹರೀ
ವೇದರೂಪ ನೃಹರೀ ಸಾವ
ನಾದುರ್ಗವಾಸ ಧೀರ ನೃಹರೀ ೧

ಭಾನುಕೋಟಿ ತೇಜ ನೃಹರೀ
ದೀನ ಭಕ್ತಪಾಲ ನೃಹರೀ
ದಾನವಾರಿ ಯೋಗ ನೃಹರೀ
[ಗಾನಲೋಲ ಹಂಪೀ ನೃಹರೀ] ೨

ಸ್ಥಂಭಜಾತ ನಾರಸಿಂಹ [ಕನ್ನ
ಡಾಂಬೆಯೂರೂರನಾರಸಿಂಹ
ತುಂಬುರನುತ ನಾರಸಿಂಹ]
ಶಂಭುವಿನುತ ನಾರಸಿಂಹ ೩

ಶೀಬಿನಗರ ನಾರಸಿಂಹ
ನಾಭಿಕಮಲ ನಾರಸಿಂಹ

ಅಭಯಂಕರ ನಾರಸಿಂಹ
ಪ್ರಭುಮಾಂಗಿರಿ ನಾರಸಿಂಹ ೪

ಮಹಾಬಲಿಪುರ

೪೧೨

ಮಹಾಬಲೇಶ್ವರ ಮಾವಳಿಪುರ ಮಿಹಿರಾ
ಸುರುಚಿರ ಪರಾತ್ಪರಾ ಪ

ಮಹೀಸುರಾರ್ಚಿತ ಸದಾಕೃಪಾಕರ
ವಿಹಂಗವಾಹನ ಪೀತಾಂಬರ ಅ.ಪ

ಮಧುಸೂದನ ತವಪಾದುಕಾ ಸಾರದ
ಮಾಧವಿ ಸುಮದಲಿ ಪೂದತ್ತರುದಿಸಿ
ಮೇದಿನಿಯೊಳು ತವಾರಾಧನ ತತ್ವವ
ಬೋಧಿಸುವಂತೆ ನೀಗೈದೆ ಕೃಪಾನಿಧೆ ೧

ಶ್ರೀಮದನಂತ ದಿವ್ಯಾಸನಮಂಡಿತ
ಶ್ರೀಮಹೀಸಂಯುತ ಲೋಕವಿಖ್ಯಾತಾ
ಪ್ರೇಮಸುಧಾನ್ವಿತ ಕಾಮಿತದಾತಾ
ಶ್ರೀ ಮಾಂಗಿರಿಪತಿ ಶರಣಸಂಪ್ರೀತಾ ೨

ತಿರುವಲ್ಲಿಕೇಣಿ (ಚೆನ್ನೈ)

೪೧೩

ತಿರುವಲ್ಲಿಕೇಣಿಯ ಸಿರಿಕೃಷ್ಣನ
ದರುಶನ ಮಾಡುವ ಬಾಬಾರೋ ಪ

ಪರಮ ಪುರುಷನವ ಪಾರ್ಥನ ಸೂತನು
ವರಗೀತಾಮೃತವುಸುರಿದವನು ಅ.ಪ

ಶರನಿಧಿಯೊಳು ಮಿಂದು ಐತರುವವರಿಗೆ
ವರದಾಭಯಕರ ತೋರುವವನು
ಪರಮಾಚಾರ್ಯಗೆ ದರುಶನವಿತ್ತು
ಪರಭಕ್ತಿಯ ಸಾರಿದನಿವನು ೧

ಚಾರು ವೇದಂಗಳ ತುರಗವ ಗೈದ
ಧಾರುಣಿಯನು ರಥಹೂಡಿದನು
ಮರುತಾತ್ಮಜನನು ಧ್ವಜಕೇರಿಸಿದನು
ದುರುಳ ಕೌರವನ ಧುರದಿ ಸೋಲಿಸಿದನು ೨

ಹತ್ತವತಾರದಿ ಬಂದವನಿವನೇ
ಮತ್ತದೈತ್ಯರನೆಲ್ಲ ಕೊಂದವನಿವನೇ
ಉತ್ತಮಭಕ್ತರ ಕಾಯಲು ಮಾಂಗಿರಿ
ಅತ್ತ ನಿಂದಾ ರಂಗನಾಥನು ಇವನೇ ೩

ಬೇಲೂರು

೪೧೪

ಬೇಲೂರ ಚೆನ್ನಿಗನ ನೋಡುವ ಬನ್ನಿ
ಬಾಲಾರ್ಕತೇಜನ ಪಾಡುವ ಬನ್ನಿ ಪ

ಮೇಲಾದ ವರಗಳ ಬೇಡುವ ಬನ್ನಿ
ನೀಲಾಂಗನಿಗೆ ಪೂಜೆ ಮಾಡುವ ಬನ್ನಿ ಅ.ಪ

ಕ್ಷೀರಸಮುದ್ರದಿ ಮೀಯುವ ಬನ್ನಿ ಇಲ್ಲಿ
ದ್ವಾರದೇಶದಿ ನಿಂತು ಕಾಯುವ ಬನ್ನಿ

ಚಾರುಸುಗಂಧವ ತೇಯುವ ಬನ್ನಿ ನಮ್ಮ
ಕಾರುಣ್ಯದಿಂದವ ಕಾಯುವ ಬನ್ನೀ ೧

ಸುತ್ತು ಪ್ರದಕ್ಷಿಣೆ ಮಾಡುವ ಬನ್ನಿ ಅಲ್ಲಿ
ಚಿತ್ತಾಕರ್ಷಕ ಚಿತ್ರ ನೋಡುವ ಬನ್ನಿ
ಅತ್ತಿತ್ತ ವಂದನೆ ಮಾಡುವ ಬನ್ನಿ ಎಲ್ಲ
ಮತ್ತೆ ಕೈ ಜೋಡಿಸಿ ಪಾಡುವ ಬನ್ನಿ ೨

ಎಂಥ ಚೆಲುವ ಚೆನ್ನನಿವನಬ್ಬ ಮ
ತ್ತಿಂಥ ಚೆಲುವನಿಲ್ಲ ಇನ್ನೊಬ್ಬ
ಎಂಥ ಲಾವಣ್ಯವಿದಬ್ಬಬ್ಬ ಮ
ತ್ತಿಂಥಾವ ಮಾಂಗಿರಿ ರಂಗನೊಬ್ಬ ೩

ಜಗನ್ನಾಥ

೪೧೫

ಸಮುದ್ರ ತೀರದಿ ಜಗನ್ನಾಥ
ಸಮಗ್ರ ಸೇವೆಯ ಕೊಡುವಾತ ಪ

ಸಮರ್ಥ ಫಲ್ಗುಣ ರಥಸೂತ
ಸಮಸ್ತಲೋಕವ ಪೊರೆವಾತ ಅ.ಪ

ಬಲಭದ್ರಾನುಜೆಯರನೊಡವೆರಸಿ
ಜಲನಿಧಿ ಮಧ್ಯದಿ ದ್ರೋಣದಿಂದಿಳಿಸಿ
ಒಲಿದು ವೈಕುಂಠಕೆ ಅವದಿರ ಕಳಿಸಿ
ಸಲೆ ನಿಂದೆಯಾ ಜಗನ್ನಾಥನೆಂದೆನಿಸಿ ೧

ಪಾಂಡವರಕ್ಷಕ ನೀಲಾಂಗಾ
ಪುಂಡರೀಕಾಂಬಕಾ ಮದನಾಂಗಾ
ಅಂಡಜವಾಹನ ರಿಪುಮದಭಂಗ
ಕಂಡೆ ನಿನ್ನನಾ ಮಾಂಗಿರಿರಂಗ ೨

ಮಾವಿನಕೆರೆ

೪೧೬

ಎಲ್ಲಿರುವೆ ಬಾರಂಗ ಬಾ ಮೋಹನಾಂಗ
ಎಲ್ಲಿರುವೆ ನೀಲಾಂಗ ಮಾಂಗಿರಿರಂಗ ಪ

ಇಲ್ಲಿರುವೆಯಾರಂಗ ಸಲ್ಲಲಿತ ರಂಗ
ಮೆಲ್ಲನೇ ರಂಗ ಓ ಮುದ್ದುರಂಗಾ ಅ.ಪ

ಅಲ್ಲಿ ನೋಡಿದರಿಲ್ಲ ಇಲ್ಲಿ ಕಾಣಿಸಲಿಲ್ಲ
ಬಲ್ಲೆ ನಾನೀ ಚೆಲ್ಲ ವರದಾತನಲ್ಲ
ಇಲ್ಲಿ ತಿಳಿಗೊಳವಿಲ್ಲ ಮಲ್ಲಿಗೆಯ ಹೂವಿಲ್ಲ
ಇಲ್ಲಿರುವ ಧೃಢವಿಲ್ಲ ನೀ ಬರುವೆ ಅರಿವಿಲ್ಲ ೧

ಗಜರಾಜ ಕರೆದನೆ ಅಜಾಮಿಳನು ಕೂಗಿದನೆ
ಅಜನು ಬಾರೆಂದನೆ ಲೋಕವಂದಿತನೆ
ರಜತಾದ್ರಿ ವಾಸನೆ ಪೂಜಿಸಲು ಕರೆದನೊ
ಸುಜನ ವರದಾಯಕನೆ ವಿಜಯ ಪೂರಿತನೇ ೨

ವನವನದಿ ಸಂಚರಿಸಿ ದನಿದನಿಯನನುಸರಿಸಿ
ತನುಮನವ ಸಂತವಿಸಿ ನಿನ್ನನರಸಿ
ಮನದಿ ನೋವನನುಭವಿಸಿ ಕನಸೆಂದು ಭಾವಿಸಿ
ಕನವರಿಪ ಯೆನ್ನೊಳಗೆ ಕನಿಕರವ ಸೂಸಿ ೩

ಮಾವಿನಕೆರೆ–೨

೪೧೭

ಏತಕೆ ಗಿರಿಯಲ್ಲಿ ನೆಲೆಸಿದೆಯೊ । ರಂಗ ॥ ಪ

ಭೀತಿಯೋ । ಆಗ್ರಹವೋ । ವ್ರತವೋ । ರಿಪು ಭಂಗ ಅ.ಪ

ದಾನಿ ನೀನೆನ್ನುತಲಿ ದಿನದಿನವು ಲಕ್ಷಾಳಿ
ದೀನ ಮನುಜರು ಬಂದು ಬಾಧಿಸುವರೆಂದೂ
ಕಾನನಾಂತರದಲ್ಲಿ ನೆಲೆಸಿದೆಯೊ ನಾಕಾಣೆ
ನೀನೆಲ್ಲಿ ಪೋದೊಡಂ ಬಿಡೆನೈಯ ರಂಗ ೧

ಜನನಿಬಿಡ ಪುರವೆಂದು ಮನಕೆ ಬೇಸರವಾಗಿ
ವನದೊಳಗೆ ಚರಿಸಬೇಕೆನುತಲಿಹೆಯೋ
ಮನುಜರ ಅನ್ಯಾಯ ದುಷ್ಕಾರ್ಯಗಳ ನೋಡಿ
ಮನಕರಗಿ ಗಿರಿಯನ್ನು ಸೇರಿದೆಯೊ ರಂಗ ೨

ದೇಹದಂಡನೆಯಿಂದ ಇಹಪರದ ಸುಖವೆಂಬ
ರಹಸ್ಯ ತತ್ವಾರ್ಥವನು ತಿಳಿಸಲಿಹೆಯೋ
ಶ್ರೀಹರಿಯೇ ನಿನ್ನ ವೈಚಿತ್ರ್ಯವಸದಳವಯ್ಯ
ದೇಹಧಾರಿಗೆ ಅಳವೆ ವರ್ಣಿಸಲು ನಿನ್ನಾ ೩

ಬೇವ ಮಾವನು ಗೈದೆ ಮಾವಬೇವನು ಗೈದೆ
ಶಿವರೂಪದೆ ನಿಂದು ಕೇಶವನು ಎನಿಸಿದೆ
ಭಾವುಕರು ಗೈಯದಾ ದೇವಾಲಯವ ಗೈದೆ
ಮಾವಿನಕೆರೆರಂಗ ನಿನಗಾರು ಸಮರೋ ೪

ವನಜನಾಭನು ಎಂಬ ಅನುಮತಿಯನೀಯಲ್ಕೆ
ಹನುಮದೇವನ ಪೂಜಿಸಿ ಮನವೊಲಿಸಿದೇ
ಸನುಮತದಿ ಕಾಯೆನ್ನ ರಾಮದಾಸಾರ್ಚಿತನೆ
ಅನುವಿಂದ ನೀನೆನ್ನ ಮನದೊಳಿರು ಹರಿಯೇ ೫

ಮಾವಿನಕೆರೆ ೩

೪೧೮

ನಮ್ಮೂರ ದ್ಯಾವರೇ ಬೊಮ್ಮನಪ್ಪನು ಎಂದು
ಹೊಯ್ಸಿರೋ ಡಂಗುರವನು ಪ

ನಿಮ್ಮ ನೆಂಟರಿಗೆಲ್ಲ ನಿಮ್ಮ ಮಕ್ಕಳಿಗೆಲ್ಲಾ
ರಂಗಪ್ಪನವನೆಂದು ಸಾರಿಸಾರಿ ಅ.ಪ

ಭೋರಪ್ಪನೆಂದರೂ ತಿಮ್ಮಪ್ಪನೆಂದರೂ
ಈರಪ್ಪನೆಂದರೂ ಒಬ್ಬನಣ್ಣ
ನೂರೆಂಟು ಹೆಸರುಗಳು ನಾರಣಪ್ಪನಿಗುಂಟು
ಸಾರಿ ಡಂಗುರವನು ಹೊಯ್ಸಿರಣ್ಣ ೧

ಕುರಿಕೋಳಿ ಕೋಣಗಳ ಶಿರವ ತರಿಯಲು ಬೇಡಿ
ನರರಂತೆ ಜೀವಿಗಳು ಅವುಗಳಣ್ಣ
ಬರಿಯ ಭಕ್ತಿಯೇ ಸಾಕು ಗರುಡವಾಹನನವನು
ಪರಮಾತ್ಮನವನೆಮ್ಮ ಕಾಯ್ವನಣ್ಣ ೨

ರಂಗ ನರಶಿಂಗನು ಗಂಗೆಯನು ಹೆತ್ತನೂ
ಗಂಗೆಯನು ಹೊತ್ತವನೂ ಒಬ್ಬನಣ್ಣ
ಶಿಂಗರದ ಗೋಪಾಲ ಮಾಂಗಿರಿಯ ರಂಗನೂ
ಒಬ್ಬನೇ ತಾನೆಂದು ತಿಳಿಯಿರಣ್ಣ ೩

ಮಾವಿನಕೆರೆ ೪

೪೧೯

ನೀನಿಲ್ಲದೆನಗಾರೋ ಮಾಂಗಿರಿಯ ರಂಗ ಪ

ಮಾನಾಪಮಾನಕ್ಕೆ ಹೊಣೆಗಾರ ರಂಗಾ ಅ.ಪ

ಗಿರಿಯೊಳಗೆ ವಾಸಿಸುವೆ ನರರ ಗೋಜೆನಗೇಕೆ
ನರರ ನೇತ್ರಂಗಳಿಗೆ ಹರನಂತೆ ಕಾಂಬೇ
ಧರೆಯೊಳಗೆ ವಾಸಿಸುವರಾರ ಹಂಗೆನಗಿಲ್ಲ
ಕೊರತೆಯೇ ಎನಗಿಲ್ಲವೆಂದರಿಯಬೇಡಾ ೧

ಗಿರಿಯಾದರೇನಯ್ಯ ಸುರಲೋಕಕದು ಪೂಜ್ಯ
ಹರನಾದಡೇನಯ್ಯ ಹರಗೆ ಪಿತನೀನು
ನರರ ಹಂಗೇಕಿಲ್ಲ ಗಿರಿಯನೇರುವ ಭಕ್ತ [ಜ]
ನರಅಂಜಿಟ್ಟಾ ಹರಕೆಗಳು ಸಾಲವೇ ರಂಗ ೨

ಶಾಮಜೋಯಿಸ ನಿನ್ನ ಸೋಮಧರನೆಂಬರಿಗೆ
ಪ್ರೇಮದಿಂ ವಿಭೂತಿ ಅಕ್ಷತೆಯ ನೀಡುವಾ
ಸೋಮಸುಂದರ ನಮ್ಮ ಮಾಂಗಿರಿಯ ರಂಗಯ್ಯ
ಸ್ತೋಮ ಜನಗಳಿಗದು ತಿರುಮಣಿಯೂ ಜೀಯ ೩

ಮಾವಿನಕೆರೆ ೫

೪೨೦

ಪವಮಾನಾತ್ಮಜ ಚರಣಂ
ಭವಸಾಗರ ಭಯ ಹರಣಂ ಪ

ಶಿವಹರಿ ಸಂಶಯ ಪರಿಹರಣಂ
ಭುವನೇಶ್ವರ ತವಶರಣಂ ಅ.ಪ

ರಾಮಮಂತ್ರ ಮಾಲಾಭರಣಂ
ಸೋಮಶೇಖರಾನಂದ ಗುಣಂ
ಕಾಮರೂಪಿದಾನವ ಹರಣಂ
ಧೀಮಂತಂ ಸಾರಸ ಚರಣಂ ೧

ಮಂಗಳ ಚರಿತಂ ಭವರಹಿತಂ
ಸಂಗರಧೀರಂ ಗುಣಭರಿತಂ
ಪಿಂಗಲಾಕ್ಷ ಕೋವಿದ ಹನುಮಂತಂ
ಮಾಂಗಿರಿ ನಿಲಯ ಹನುಮಂತಂ ೨

ಮಾವಿನಕೆರೆ ೬

೪೨೧

ಮಾಧವನಿವನೋ ಉಮಾಧವನಿವನೋ
ಮಧುಸೂದನನೋ ಗಂಗಾಧರನೋ ಪ

ವೇದವನುಲಿದನೋ ನಾದಕೆ ಒಲಿದನೋ
ಮೇದಿನಿಗ್ಯೆದಿ ಮಾಂಗಿರಿಯ ಸೇರಿದನು ಅ.ಪ

ಹಿರಿಯ ಕಲ್ಲ ಗುಡಾರದೊಳಿರುವ
ಒರಳಲಿ ನಲಿವ ಹರನವೊಲೆಸೆವ
ಕರಗಳಿಂದೆಳೆದರೂ ಬಾರನೆಂದೆನುವ
ಸ್ಮರಿಸುವ ಮಾನವನೆದುರಲಿ ನಿಲುವ ೧

ಎರೆದ ಹಾಲಾದರೂ ಸುರಿದ ನೀರಾದರೂ
ದೊರಕದು ಕರಕೆ ತೊಟ್ಟೊಂದಾದರೂ
ಹರಕೆ ಹೊತ್ತವರು ನೆರೆನಮಿಸುವರು
ಹರುಷದಿ ಕುಣಿದು ಕೊಂಡಾಡುತಿಹರು ೨

ಸಾವಿರ ನಾಮನು ದೇವನೀನೊಬ್ಬನು
ಭಾವದೊಳಿರುವನು ಕಾವವನು
ನೋವ ಬಿಡಿಸುವನು ಪಾವನಚರಣನು
ಭಾವುಕಗೊಲಿವನು ಗಿರಿಯ ಮೇಲಿಹನು ೩

ಮಾವಿನಕೆರೆ ೭

೪೨೨

ಮಾನಗಿರಿಯು ಹಲವಾಭಿಮಾನ ಗಿರಿಯು ಪ

ಮಾನಗರಿ ಭಕ್ತಾಭಿಮಾನ ಮಾಂಗಿರಿಯು ಅ.ಪ

ಭಾರತದ ದಕ್ಷಿಣದಿ ನೂರೆಂಟು ತಿರುಪತಿಯೊ
ಳೋರಂತೆ ಮಹಿಮೆಗಳ ತೋರಿಸಲ್ಕೆ
ಕಾರುಣ್ಯ ಪರಿಪೂರ್ಣ ಸಿರಿವೆಂಕಟಾದ್ರೀಶ
ಏರಿನಿಂದನು ನಮ್ಮ ಮಾಂಗಿರಿಯಲಿ ೧

ಕಡುಸುಂದರಾಕೃತಿಯ ಬೆಡಗಿಂಗೆ ಮರುಳಾಗಿ
ನಡೆತಂದ ಮಾನವರು ಕುಡಿದೃಷ್ಟಿಬೀರಿ
ಪಿಡಿದು ಕೊಂಡೊಯ್ವೆವೆಂದಡಿಯಿಡಲು ರಂಗಯ್ಯ
ಅಡಗಿಸಿದ ದೇಹವನು ಒರಳಿನಲ್ಲಿ ೨

ಮಾವಿನಕೆರೆ ೮

೪೨೩

ರಂಗಗಿರಿಯನೇರಿಬರುವಾ ತಂಗಿ ಬರುವೆಯಾ ಪ

ಅಂಗನೆಯರು ಕುಣಿದು ಮಣಿವ ಸಂಗದೊಳಿರುವಾ ಅ.ಪ

ಅವನ ಪಾದದ ನಡಗೆ ಚಂದ । ಧವಳಹಂಸ ಮನಕಾನಂದಾ
ಅವನ ನಲಿವು ನವಿಲಿಗಂದ । ಅವನ ಉಲಿವು ಕೋಗಿಲೆಯಂದಾ ೧

ಅವನ ಕರದ ವೇಣುಗಾನ ಭುವನಕೆಲ್ಲ ಅಮೃತಪಾನ
ಅವನ ನಗೆಯ ತೋರ್ಪ ಭವವ ಕಳೆವ ಪುಣ್ಯಸದನ ೨

ವಾರಿವಾಹ ವರ್ಣದವನು ಹಾರಪದಕ ಧರಿಸಿದವನು
ತೋರಮಾಲೆಯ ಕೊರಳಿನವನು
ಚಾರುಸುಂದರ ಪೀತಾಂಬರನು ೩

ಹಿಂದೆ ನೀನು ನೋಡಲಿಲ್ಲ ಮುಂದೆ ನಾನು ಕರೆವುದಿಲ್ಲ
ಇಂದು ಬಂದೆಬರುವನಲ್ಲ ಸಂದೇಹ ಎಳ್ಳಷ್ಟೂ ಇಲ್ಲ ೪

ರಾವಿ

ಬೊಮ್ಮನಪ್ಪನವನೆ ನೀರೆ ನಮ್ಮ ಮಾಂಗಿರಿಗೊಪ್ಪುವ ತಾರೆ
ಹೊಮ್ಮಿದಾ ಸಂಪ್ರೀತಿಯ ಬೀರೆ ಸುಮ್ಮನೆ ನನ್ನೊಡನೆ ಬಾರೆ ೫

ಮಾವಿನಕೆರೆ ೯

೪೨೪

ಶಿವನೋ ಕೇಶವನೋ ನಾನರಿಯೆ
ಜವನೊ ಮಾಧವನೋ ಪೇಳುವರಾರೋ ಪ

ಶಿವಗೆ ಜಡೆಯು ಮಾಧವನವ ಕೇಶಿಯು
ಶಿವನು ಮಂಗಳನು ಮಾಧವನು ಸುಂದರನು ಅ.ಪ

ಶಿವ ಭಸಿತಾಂಗ ಮಾಧವ ನೀಲಾಂಗನು
ಶಿವನುರಿಹಸ್ತ ಮಾಧವನುರೆ ಚಕ್ರಿಯು
ಶಿವಗೌರಾಂಗ ಮಾಧವ ಮಾಲಿಂಗನು
ಶಿವ ಮಾಧವ ಮಾಂಗಿರಿವರನಹುದು ೧

ವಾರಣಾಸಿ

೪೨೫

ಕಾಶೀಪುರಾಧೀಶ್ವರಾ ಶಶಿಧರ ವಾ
ಣೀಶ ಪರೇಶ ಸುರೇಶನುತ ಹರ ಪ

ಶ್ರೀಶೈಲಜಾಪ್ರಿಯ ಪಾಶಾಂಕುಶಧರ
ಶೇಷಾಭರಣ ಪರಮೇಶಾ ಪರಾತ್ಪರ ಅ.ಪ

ಇಂದೀವರಾಕ್ಷ ಗೋವಿಂದಾದಿ ಪರಿವೃತ
ನಂದೀಶನುತ ಸುರಬೃಂದಾಳಿ ವಿನುತ
ಮಂದಾಕಿನೀಧರ ಮಂದಾರ ಸುಮಯುತ
ಬಿಂದುಮಾಧವ ಮಾಂಗಿರೀಶರಂಜಿತ ೧

೪೨೬

ನದಿಗಳು

ಗೋದಾವರೀ ದೇವಿ ನಿನಗೆ ಶರಣಾರ್ಥಿ ಪ

ಮೇದಿನಿಯ ಪಾಪ ಸಂಹಾರಿಣೀ ಕಲ್ಯಾಣಿ ಅ.ಪ

ಹೇಮಾದ್ರಿಸಂಜಾತೆ ಸೋಮಸಮಕಾಂತಿಯುತ
ಭೂಮಿಜಾಖೇಲನಾ ಪುಳಿನಭರಿತೆ
ಕ್ಷೇಮ ಸಂದಾತೆ ಶ್ರೀರಾಮ ಕರಪೂಜಿತೇ
ಕಾಮಿತಾರ್ಥದೆ ಮಾತೆ ಪ್ರಾಙ್ಮುಖೀ ವರದಾತೆ ೧

ದೇವಗಂಗೋಪಮೆ ಪಾವನತರಂಗಿಣೆ
ಗೋ ವಿಪ್ರ ಸುಖದಾತೆ ಮೌನಿವಿನುತೆ
ಕಾವೇರಿಸನ್ಮಿತ್ರೆ ಪರಮಶುಭಚಾರಿತ್ರೆ
ಜೀವಪೋಷಕಶಾಲಿ ವಸನಾಂಬಿಕೆ ೨

ದಂಡಕಾರಣ್ಯ ಸಂಚಾರಿಣಿ ನಾ ನಿನ್ನ
ಕಂಡು ಧನ್ಯತೆಯಾಂತೆ ಮಿಂದು ನಲಿದೆ
ಅಂಡಜಾಧಿಪಗಮನ ಮಾಂಗಿರೀಶನ ಸುತ ಎಂತು
ಕಂಡಂತೆ ಮನದೊಳಾನಂದವಾಂತೆ ೩

೪೨೭

ಏಳು ನಿದ್ದೆಯು ಸಾಕು ರಂಗನಾಥ ಪ

ತಾಳು ತಾಳೆನಲೇಕೆ ಮಾಂಗಿರಿ ನಿವಾಸ ಅ.ಪ

ಜಗವ ಪೋಷಿಪಚಿಂತೆ । ಮಿಗಿಲಾದ ದೇವಂಗೆ
ಸೊಗಸಾದ ನಿದ್ದೆಯಾಪರಿವುಂಟೇ
ನಗಜಗವ ಪೊತ್ತವನ ಬಳಗವು ಏನೆಂಬೇ
ನಗೆಬೇಡ ಕಣ್ತೆರೆಯೊ ಮಾಯಕಾರ ೧

ನಿದ್ದಗೆಡಿಸಲು ಪಾಪ ಇದ್ದರೆ ನನಗಿರಲಯ್ಯ
ಸದ್ದಿಲ್ಲದಿಹುದೇ ಭಕ್ತರು ಹಾಡಿ ಕುಣಿಯೇ
ಒದ್ದಮುನಿಗಾ ಪಾಪವಿದ್ದಿತೇ ಕರುಣಾಳು
ಎದ್ದು ಬಾ ಬಾರ್ಯೆಯ ಮಾರನಯ್ಯ ೨

ಬಲ್ಲೆ ಬಲ್ಲೆನು ನಿನ್ನ ಚೆಲ್ಲಾಟಗಳನೆಲ್ಲ
ಬೆಲ್ಲವನು ಕಂಡಿರುವೆ ಮುತ್ತದಿಹುದೇ
ಮೆಲ್ಲನೇಳಯ್ಯ ಸಿರಿ ಮಾಂಗಿರಿಯ ರಂಗ
[ಒಲ್ಲೆನದೆ ಈಯಯ್ಯ ಎನಗು ಬೆಲ್ಲದಸವಿಯ] ೩

೪೨೮

ಮೆಲ್ಲನೇಳಯ್ಯ ಮಣಿವೆ ಪ

ನಲ್ಲುಲಿಗಳಿಂದ ಶುಕಪಿಕಗಳೆಚ್ಚರಿಸುತಿವೆ ಅ.ಪ

ಅರುಣ ವರ್ಣದ ಗಗನಯೆಂಬ ಹರಿವಾಣವನು
ಕರದಿ ಪಿಡಿದೆತ್ತೆ ನಿನಗಾರತಿಯ ಗೈಯಲು
ತರಣಿ ನಿಂದಿರ್ಪ ತುಂಬುರು ನಾರದರು ಮುದದಿ
ಪರಮಾತ್ಮ ಸುಪ್ರಭಾತಗಳ ಪೇಳುವರು ೧

ಸತ್ಯಸಂಕಲ್ಪ ತವ ಭೃತ್ಯ ದಿಕ್ಪಾಲಕರು
ಅತ್ಯಧಿಕ ಭಕ್ತಿಯಿಂ ಕರವೆತ್ತಿ ಮುಗಿದು
ನಿತ್ಯಕಾರುಣ್ಯ ಪರಿಪೂರ್ಣ ಸದ್ಭಕ್ತಗಣ
ನುತ್ಯ ನೀನೇಳೆಂದು ನುತಿಸುತಿಹರು ೨

ನಿನ್ನ ನಾಮವ ಭಜಿಸಿ ಪಾದಪೂಜೆಯ ಗೈದು
ನಿನ್ನ ಕಾರುಣ್ಯ ದರ್ಶನಕೆ ಕಾದಿರುವಾ
ಪನ್ನರೆಲ್ಲರ್ಗೆ ದರ್ಶನವ ನೀನೀಯಲು
ಇನ್ನೇಕೆ ತಡ ಏಳು ಮಾಂಗಿರೀಶ ೩

೪೨೯

ಆರತಿ ಬೆಳಗುವೆ ವಾರಿಧಿಶಯನಗೆ
ಮಾರನಪಿತನಿಗೆ ನಾರದಸುತಗೆ ಪ

ಸಾರಸನಾಭಗೆ ನೀರಜಗಾತ್ರಗೆ
ಶ್ರೀರಮೆಯರಸಗೆ ನಾರಿಯರೊಡನೆ ಅ.ಪ

ಮುರಳಿಯನೂದುವ ತರಳ ಶ್ರೀಕೃಷ್ಣಗೆ
ಶರಣರ ದುರಿತವ ಪರಹರಿಸುವಗೆ
ಕರುಣಜಲಧಿ ಮಾಂಗಿರಿರಂಗಯ್ಯಗೆ
ಸರಸತಿ ಪಾರ್ವತಿ ತರುಣಿಯರೊಡನೆ ೧

೪೩೦

ಜಯ ಜಯತು ಕಾಮಾಕ್ಷಿ ಜಯ ಜಯ ವಿಶಾಲಕ್ಷಿ ಪ

ಜಯ ಜಯತು ಮೀನಾಕ್ಷಿ ಜಯತು ಹರಿಣಾಕ್ಷಿ ಅ.ಪ

ಜಯ ಜಯತು ಫಾಲಾಕ್ಷ ಸತಿ ಜಯ ಕೃಪಾಪೂರ್ಣಾಕ್ಷಿ
ಜಯ ಜಯತು ಕಮಲಾಕ್ಷಿ ಜಯ ಚಂಚಲಾಕ್ಷಿ ೧

ಜಯ ಜಯ ಸ್ವರ್ಣಾಂಬೇ ಜಯತು ಚಾಮುಂಡಾಂಬೆ
ಜಯತು ಜಯ ಜಗದಂಬೆ ಜಯತು ದುರ್ಗಾಂಬೆ ೨

ಜಯತು ಜಯ ಶಶಿಬಿಂಬೆ ಜಯತು ವರ ಗಿರಿಜಾಂಬೆ
ಜಯತು ಮಾಂಗಿರಿ ರಂಗ ಸೋದರಿ ಶುಭಾಂಬೆ
ಜಯ ಮಂಗಳಂ ನಿತ್ಯ ಶುಭ ಮಂಗಳಂ ೩

೪೩೧

ಜಯ ಜಯ ದಯಾಮಯ ಚಿನ್ಮಯ
ಜಯ ಜಯ ನಿರಾಮಯ ಶ್ರೀಜಯ ಪ

ಶ್ರೀರಮಣೀ ಮನಮೋಹನ ಪಾವನ
ಸಾರಸಲೋಚನ ಪಾಪವಿಮೋಚನ
ಸರ್ವ ಭುವನಪಾಲಾ ಭಕ್ತಬೃಂದಾನುಕೂಲಾ ೧

ವಿರಚಿತ ಮಣಿಮಾಲಾ ಶುಭ್ರಶೀತಾಂಶು ಜಾಲಾ
ದುರಿತ ತಿಮಿರಕಾಲಾ ಶುದ್ಧಸತ್ವಾದಿ ಮೂಲಾ
ಉರುತರ ಶುಭಲೀಲಾ ನಿತ್ಯಕಾರುಣ್ಯ ಶೀಲಾ ೨

ಮಂಗಳದಾಯಕ ಮಾಂಗಿರಿನಾಯಕ
ತುಂಗಕೃಪಾಂಬಕ ದುರುಳಕುಲಾಂತಕ
ರಂಗ [ಶರಣ್ಯಕ ಭಕ್ತಜನ ಪಾಲಕ] ೩

೪೩೨

ಜಯ ಜಾನಕೀಪ್ರಿಯ ರಾಘವ
ಜಯ ಪಾವನ ಚರಣಾ ಪ

ಜಯ ದಾನವಭಯ ತಾರಣ
ಜಯ ಭವಸಾಗರ ತರಣಾ ಅ.ಪ

ಸಾರಸಭವ ಸೇವ್ಯ ಚರಣ
ದಾನವ ಕುಲ ಹರಣಾ
ಚಾರು ಚರಿತ ಮಾರಜನಕ
ಸಾಗರಜಾ ರಮಣಾ ೧

ಸುರುಚಿರ ಮಣಿಗಣ ವಿತರಣ
ಸುರನಾಯಕ ಶರಣಾ
ಉರಗಶಯನ ಮರಕತ ಮಾಂ
ಗಿರಿನಾಯಕ ಕರುಣಾ ೨

೪೩೩

ಜಯ ಪದ್ಮಜಾರಮಣ ಜಯ ಭಕ್ತಜನಕರುಣ
ಜಯ ಕೌಸ್ತುಭಾಭರಣ ಜಯ ಪದ್ಮಚರಣ ಪ

ಜಯ ಭವಾಂಬುಧಿ ತರಣ ಜಯ ಪಾಪಭಯಹರಣ
ಜಯತು ಸತ್ವಾವರಣ ಜಯ ದೀನಶರಣ ಅ.ಪ

ಜಯತು ಗಾನವಿಲೋಲ ಜಯ ಗೋಕುಲಬಾಲ
ಜಯತು ತುಳಸೀಮಾಲ ಜಯತು ಜಗಮಾಲ ೧

ಜಯತು ದಾನವಕಾಲ ಜಯತು ಸತ್ವದುಕೂಲ
ಜಯತು ಸುರಮುನಿಪಾಲ ಜಯತು ಮಾಲೋಲ ೨

ಜಯತು ಜಯ ರಿಪುಭಂಗ ಕಮಲಜಾ ಅಂಗ
ಜಯತು ಘನನೀಲಾಂಗ ಜಯತು ಗರುಡತುರಂಗ
ಜಯತು ಮಾಂಗಿರಿರಂಗ ಕರುಣಾಂತರಂಗ ೩

೪೩೪

ಜಯರಾಮ ರಘುರಾಮ ಪುರುಷೋತ್ತಮ ಪ

ತವನಾಮ ಸುಖಧಾಮ ಅಮೃತೋಪಮಾ ರಾಮಾ ಅ.ಪ

ರಿಪುಭೀಮಾ ಜಿತಕಾಮ ದೇವೋತ್ತಮ
ಘನಶ್ಯಾಮ ಅಭಿರಾಮ ಸಕಲಾಗಮ ರಾಮ ೧

ಭವನಾಶ ಜಗದೀಶ ಸುರನಾಯಕಾ
ಫಣಿ ಭೂಷ ಸಕಲೇಶ ವರದಾಯಕಾ ೨

ಪರಮೇಶ ಯಮಪಾಶ ಭವನಾಯಕಾ
ಕಮಲೇಶ ಶ್ರೀಶ ಮಾಂಗಿರಿ ನಾಯಕಾ ೩

೪೩೫

ಜಯ ರುಕ್ಮಿಣೀ ಕಾಂತ ಜಯ ಪಯೋನಿಧಿ ಶಾಂತ ಪ

ಜಯತು ಜಯ ಭಗವಂತ ಜಯತು ಧೀಮಂತ ಅ.ಪ

ಜಯ ಭಕ್ತಮಂದಾರ ಜಯ ಮೌನಿಪರಿವಾರ
ಜಯತು ಜಯ ಧುರಧೀರ ಜಯತು ಸಾಕಾರಾ ೧

ವಿಜಯ ಮೌಕ್ತಿಕಾಭರಣ ಜಯತು ವಿಧಿನುತಚರಣ
ಜಯತು ಜಯ ಭವತರಣ ಜಯ ಶರಣಕರುಣಾ ೨

ಜಯನಾದ ಸುವಿಲಾಸ ಜಯತು ಭಾಸ್ಕರ ಭಾಸ
ಜಯ ಮಾಂಗಿರೀವಾಸ ಜಯ ಶ್ರೀನಿವಾಸ ೩

೪೩೬

ನಿತ್ಯನಿರ್ಮಲನಿಗೆ ಜಯಮಂಗಳಂ
ಸತ್ಯಸಂಕಲ್ಪಗೆ ಶುಭ ಮಂಗಳಂ ಪ

ಸತ್ಯಪರಾಕ್ರಮ ಸತ್ಯಚರಿತ್ರಗೆ
ಸತ್ಯಕಾಮ ಪುರುಷೋತ್ತಮ ಹರಿಗೆ ಅ.ಪ

ಮೂರುರೂಪದಲಿ ವಾರಿಯೊಳಿದ್ದಗೆ
ಘೋರವದನ ಬ್ರಹ್ಮಚಾರಿಯಾದವಗೆ
ವೀರರ ಕೊಂದಗೆ ಹನುಮವಿನುತಗೆ
ಮಾರಜನಕ ಸುಕುಮಾರ ಹಯೇಶಗೆ ೧

ವೇದಾಚಲ ಭೂಧರ ನರಹರಿಗೆ
ಮೇದಿನಿಯಳೆದಗೆ ಮುನಿಸುತಗೆ
ಕೋದಂಡೋತ್ಸುಕ ನಾದಪ್ರಿಯನಿಗೆ
ಭೇದವ ಕಲ್ಪಿಸಿದಶ್ವವಾಹನಗೆ ೨

ಮಂಗಳರೂಪಗೆ ಈರೈದವತಾರಗೆ
ಅಂಗಜತಾತ ಶುಭಾಂಗನಿಗೆ
ಮಾಂಗಿರಿಶೃಂಗನಿವಾಸ ರಥಾಂಗಗೆ
ಗಂಗೆಯಪೆತ್ತ ಪನ್ನಂಗಶಯನಗೆ ೩

೪೩೭

ಮಂಗಳಂ ಜಯ ಮಂಗಳಂ ಪ

ಕಮಲಸದನ ಕಮಲೇಶನಿಗೆ
ಕಮಲನಾಭ ಕಮಲಾಂಗನಿಗೆ

ಕಮಲಹಸ್ತ ಕಮಲಾಪ್ರಿಯಗೆ
ಕಮಲಮನೋಹರ ಚರಣನಿಗೆ ೧

ವಾರಿಧಿಶಯನ ನಾರಾಯಣನಿಗೆ
ವಾರಿಜಭವನುತ ಚರಣನಿಗೆ
ನೀರದ ಕಾಯ ಸದ್ಗುಣಗಣಗೆ
ವಾರಣಸುತ ಮಾರಮಣನಿಗೆ ೨

ಮಂಗಳರೂಪ ನೀಲಾಂಗನಿಗೆ
ಸಂಗರಭೀಮ ಕೃಪಾಂಗನಿಗೆ
ಅಂಗಜಜನಕ ಶುಭಾಂಗನಿಗೆ
ಮಾಂಗಿರಿನಿಲಯ ಶ್ರೀರಂಗನಿಗೆ ೩

೪೩೮

ವಾರಿಜನಯನಗೆ ಜಯ ಮಂಗಳ
ನಾರದನುತನಿಗೆ ಶುಭ ಮಂಗಳಾ ಪ

ನೀರಧಿಶಯನಗೆ ಜಯ ಮಂಗಳ
ಮಾರನಪಿತನಿಗೆ ಶುಭ ಮಂಗಳಂ ಅ.ಪ

ಭವ ಭಯ ಹರನಿಗೆ ಪವನಜನಮಿತಗೆ
ಭುವನಸುಂದರನಿಗೆ ಜಯಮಂಗಳಂ
ಕುವಲಯಶ್ಯಾಮಗೆ ನವಮಣಿಮಾಲಗೆ
ದಿವಿಜಸಂಸೇವ್ಯಗೆ ಶುಭಮಂಗಳಂ ೧

ಕರುಣಾಜಲಧಿಗೆ ಶರಣರ ಪೊರೆವಗೆ
ನರಹರಿರೂಪಗೆ ಜಯ ಮಂಗಳಂ
ಪುರುಷೋತ್ತಮನಿಗೆ ದುರಿತಸಂಹಾರಗೆ
ಸರಸಿಜನಾಭಗೆ ಶುಭ ಮಂಗಳಂ ೨

ಗಂಗೆಯ ಜನಕಗೆ ಮಂಗಳರೂಪಗೆ
ಸಂಗರಧೀರಗೆ ಶುಭಮಂಗಳಂ
ತುಂಗವಿಕ್ರಮನಿಗೆ ಇಂಗಿತವರಿವಗೆ
ಮಾಂಗಿರಿಯರಸಗೆ ಜಯ ಮಂಗಳಂ ೩

೪೩೯

ವೈನತೇಯವಾಹನಾಯ ನಿತ್ಯಮಂಗಳಂ
ದಾನವಾಬ್ಧಿಶೋಷಿತಾಯ ನಿತ್ಯಮಂಗಳಂ ಪ

ಪಾರಿಜಾತಲೋಚನಾಯ ಭವ್ಯಮಂಗಳಂ
ನಾರದಾದಿಸೇವಿತಾಯ ಭವ್ಯಮಂಗಳಂ ಅ.ಪ

ಶರಣಜನಾನಂದದಾಯ ದಿವ್ಯಮಂಗಳಂ
ಪರಮಕೃಪಾಪೂರಿತಾಯ ದಿವ್ಯಮಂಗಳಂ ೧

ಪರಮಸುಂದರ ದ್ಯುತಿಧರಾಯ ಸರ್ವಮಂಗಳಂ
ದುರಿತದೋಷ ಪರಿಹರಾಯ ಸರ್ವಮಂಗಳಂ ೨

ಮೌನಿನಿಕರವಂದಿತಾಯ ನವ್ಯಮಂಗಳಂ
ದೀನದಲಿತಪೋಷಣಾಯ ನವ್ಯಮಂಗಳಂ ೩

ಜ್ಞಾನ [ಮೋಕ್ಷ]ದಾಯಕಾಯ ಸೇವ್ಯಮಂಗಳಂ
ಮಾನಿತ ಮಾಂಗಿರಿವರಾಯ ಸೇವ್ಯಮಂಗಳಂ ೪

೪೪೦

ಜೋ ಜೋ ದೇವಕಿಕಂದ ಮುಕುಂದ
ಜೋ ಜೋ ಗೋಪಿಯಾನಂದ ಗೋವಿಂದಾ ಪ

ಜೋ ಜೋ ಜೋ ಭಕ್ತಮನಕಾನಂದ
ಜೋ ಜೋ ಜೋ ಗೋಪಿಕಾವೃಂದ ಅ.ಪ

ಗೋಕುಲಬಾಲಾ ಮುರಳೀಲೋಲಾ
ಶ್ರೀಕರಶೀಲಾ ತುಳಸೀಮಾಲಾ
ರಾಕಾಚಂದ್ರ ಸಮಾನಕಪೋಲ
ಗೋಕುಲ ಬೃಂದಾವನ ಸಲ್ಲೀಲಾ ೧

ದೇವದೇವೋತ್ತಮ ಭಾನುಪ್ರಕಾಶ
ಭಾವಜಪಿತ ಸರ್ವಸುರ ಮುನಿಪೋಷಾ
ಶ್ರೀವನಿತಾಪ್ರಿಯ ದನುಜವಿನಾಶ
ಪಾವನ ಮಾಂಗಿರಿನಿಲಯ ರಂಗೇಶ ೨

೪೪೧

ಜೋ ಜೋ ಸುಚರಿತ್ರ ಪರಮ ಪವಿತ್ರಾ
ಜೋ ಜೋ ಶತಪತ್ರನೇತ್ರ ಸುಗಾತ್ರಾ ಪ

ಜೋ ಜೋ ವಟಪತ್ರಶಯನ ವಿಚಿತ್ರ
ಜೋ ಜೋ ಸುಂದರಚಿತ್ರ ಸೀತಾಕಳತ್ರ ಅ.ಪ

ಕುಶಿಕಾಧ್ವರಪಾಲಬಾಲ ಸುರನುತಿಪಾತ್ರಾ
ಪಶುಪತಿ ಸನ್ನುತ ಸ್ವರರೂಪ ಚಿತ್ರ
ನಿಶಿಚರಹರ ನಿತ್ಯಸುಖದಾತ ಮಿತ್ರಾ
[ತ್ರಿಶಿರಾದ್ಯಸುರ ಸಂಹಾರಕನೇತ್ರ] ೧

ಕರುಣಾಕಾರ ದಿವ್ಯ ಶಶಿಬಿಂಬವದನಾ
ಶರಣಜನಾನತ ಮರಕತವದನಾ
ಧರಣಿಜಲೋಲ ಭಾಸ್ಕರವಂಶಮದನಾ
ಗರುಡವಾಹನ ನಿತ್ಯ ಮಾಂಗಿರಿಸದನಾ ೨

೪೪೨

ಜೋ ಜೋ ಜೋ ಗುಂಡ ಪರಮಪ್ರಚಂಡ
ಜೋ ಜೋ ಜೋ ಗುಂಡ ಸುರಚಿರದಂಡ ಪ

ಜೋ ಜೋ ಜೋ ದೊಡ್ಡ ಕರಿಯಕಲ್ಗುಂಡ
ಜೋ ಜೋ ಜೋ ಮದ್ದನರೆಯಚ್ಚಗುಂಡ ಅ.ಪ

ದುಂಡು ಮಲ್ಲಿಗೆಗಿಂತ ಮೃದುವಾದ ಗುಂಡಾ
ಕೆಂಡ ಸಂಪಿಗೆಗಿಂತ ಚೆಲುವಾದ ಗುಂಡಾ
ಪುಂಡರೀಕಕ್ಕಿಂತ ಚೆಲುವಾದ ಗುಂಡಾ
ಮೊಂಡ ಮೂಕರಕಯ್ಯ ಕೋದಂಡಗುಂಡಾ ೧

ಒಬ್ಬಿಟ್ಟು ಹೂರಣವರೆಯುವ ಗುಂಡಾ
ತಬ್ಬಿಬ್ಬಾಡುವರನು ಕಡುಗುವಾ ಗುಂಡಾ
ರುಬ್ಬಿ ರುಬ್ಬಿ ದೋಸೆ ಯೀಯುವಾ ಗುಂಡಾ
ಕೊಬ್ಬಿದ ಜನವನು ದಬ್ಬುವಾ ಗುಂಡಾ ೨

ಪರಿಪರಿ ಬಂಧನವರಿಯದ ಗುಂಡಾ
ಉರುಳಿಸಿದಲ್ಲಿಯೇ ನಿದ್ರಿಪ ಗುಂಡಾ
ಕೊರತೆಯನರಿಯದ ಸುಖದ ಕಲ್ಗುಂಡಾ
[ವರಭಕ್ತಾವಳಿಗೆ ಸುಖವೀವಗುಂಡಾ] ೩

ನೀನಿಲ್ಲದಿರುವ ಮನೆಗಳಿಲ್ಲ ಗುಂಡಾ
ನೀನಿರುವಲ್ಲಿ ತಿಂಡಿಗಳುಂಟು ಗುಂಡಾ
ಕಾನನದೊಳಗಿದ್ದು ಕರಗದ ಗುಂಡಾ
ಮಾನವ ಗಣಕ್ಕೆಲ್ಲಾ ಬೇಕಾದ ಗುಂಡಾ ೪

ಒರಳುಕಲ್ಲಿನ ಮೇಲೆ ನೇಯುವಾ ಗುಂಡಾ
ತರುಣಿಯ ಕರದೊಳು ನಲಿಯುವಾ ಗುಂಡಾ

ವರ ದುಕೂಲಂಗಳ ಬಯಸದ ಗುಂಡಾ
ವರದ ಮಾಂಗಿರಿರಂಗನೆನಿಸುವ ಗುಂಡಾ ೫

ವಿಶೇಷ ಸಂದರ್ಭದ ಹಾಡುಗಳು

೪೪೩

ರಂಗನತೇರಿಗೆ ಬನ್ನಿರೋ ತೆಂಗು ಹೂ ಹಣ್ಣುಗಳ ತನ್ನಿರೋ
ಬಂಗಾರದ ಗಿರಿಯಪ್ಪ ಎನ್ನಿರೋ ರಂಗ ಪರ್ಸಾದವ ಕೊಳ್ಳಿರೊ ೧

ತೆಂಗಿನಮರುದ್ದ ತೇರ್ರೈತೆ ಅಲ್ಲಿ ರಂಗಿನ ಬಾವುಟ ಹಾರ್ರೈತೇ
ಸಿಂಗಾರದಬಟ್ಟೆಯೇರ್ರೈತೇ ಹಂಗೂ ಹಿಂಗೂ ಜನ ಸೇರ್ರೈತೇ ೨

ಬಾಳೆಕಂಬಗಳನು ಕಟ್ಟವ್ರೇ ತೋಳುದ್ದ ಹೂಸರ ಬಿಟ್ಟವ್ರೇ
ತಾಳಮ್ಯಾಳ್ದೋರೆಲ್ಲಾ ನಿಂತವ್ರೇ ಬಾಳತುತ್ತೂರ್ಗೋಳನೂತ್ತವ್ರೇ ೩

ತೇರಿನ ಗದ್ದುಗೆ ಬಂಗಾರ ತೋರಗಲ್ದಪ್ಪ ಅಲಂಕಾರ
ಹಾರುವರ ಬಾಯಲ್ಲಿ ಓಂಕಾರ ರಂಗಪ್ಪಗಾಗ್ರೈತೆ ಸಿಂಗಾರ ೪

ಭಟ್ಟರು ಮಂತ್ರವ ಹೇಳ್ತವ್ರೆ ಕಟ್ಟುನಿಟ್ಟಾಗಿ ನಿಂತವ್ರೇ
ಬಟ್ಟಂದ ಹೂಗೊಳ ಹಾಕ್ತವ್ರೇ ಸಿಟ್ಟಿಲ್ಲದೆ ರಂಗ ನಗತವ್ನೇ ೫

ಕೊಂಬು ತಮಟೆ ಭೇರಿ ಬಡಿತವ್ರೇ
ಇಂಬಾಗಿ ಹೂರ್ಜಿಯ ಹಿಡಿದವ್ರೆ
ದೊಂಬರೆಲ್ಲ ಕುಣಿತವ್ರೆ ಹಿಂಬದಿಯಲಿ ತೇರ ನಡೆಸವ್ರೇ ೬

ಹಣ್ಣು ಜನ್ನವ ತೇರಿಗೆಸಿತಾರೆ ತಣ್ಣನೆ ಪಾನಕ ಕೊಡುತಾರೆ
ಸಣ್ಣೋರೆಲ್ಲ ಕೈಮುಗಿತಾರೆ, ಹಣ್ಣು ಕಾಯ್ಗಳ ಗಾಲಿಗಿಡುತಾರೆ ೭

ಅಕೋ ಬಂತು ರಂಗಪ್ಪನ ತೇರು
ತಕ್ಕೋ ಹಣ್ಕಾಯ ಎಂಬೋರು ಕೆಲವರು

ಸಕ್ಕರೆ ಮಿಠಾಯಿ ಹಂಚೋರು ಕೆಲವರು
ನಕ್ಕು ಕುಣಿಯುವರೆಲ್ಲ ನೂರಾರು ಜನರು ೮

ರಂಗಪ್ಪನ ತೆಪ್ಪ ತೇಲುತಿವೆ ಸಂಗೀತ ವಾದ್ಯ ಕೇಳುತಿವೆ
ರಂಗುಮತಾಪು ಹೊಳೆಯುತಿವೆ ಮಂಗಳಾರತಿ ದೀಪ ಕಾಣುತಿವೆ ೯

ಹೂಮಾಲೆಗಳು ಜೋಲಾಡುತಿವೆ
ಜೋಮಾಲೆ ಸರಗಳು ಹೊಳೆಯುತಿವೆ
ಚಾಮರಗಳು ಗಾಳಿ ಬೀಸುತಿವೆ
ನಾಮ ಮಂತ್ರಗಳೆಲ್ಲ ಮೊಳಗುತಿವೆ ೧೦

ರಂಗಪ್ಪನುಬ್ಬುವ ಗುಡಿಗೆ ಬಂತಣ್ಣ ರಂಗು
ರಂಗಿನದೀಪ ಉರಿಯುವುದಣ್ಣ
ಮಂಗಳಾರತಿಗಳ ಬೆಳಗಿದರಣ್ಣ
ಮಾಂಗಿರಿರಂಗನೆ ಬಲುಸೊಗಸಣ್ಣ ೧೧

೪೪೪

ರಂಗಪ್ಪ ಬಂದವ್ನೆ ಬಾಗ್ಲಲ್ಲಿ ನಿಂತವ್ನೆ ಸಿಂಗಾರದಿಂದವ್ನೇ
ತೆಂಗಿನಕಾಯ್ಬಾಳೆಹಣ್ಣಂದು ನೋಡಿರೋ ಹೊಂಗೂಳನೊತ್ತವ್ನೇ ಪ

ನಾಕ್ಮಳ ನಿಂತವ್ನೆ ನೀರಲ್ಲಿ ನಿಂತವ್ನೆ ನಾಕೈಯಾ ಪಡೆದವ್ನೇ
ಇಕ್ಕೆಲದಲಿ ಸಂಕುಚಕ್ರವ ಹಿಡಿದವ್ನೆ ರಾಕ್ಷಸನ್ನ ಮೆಟ್ಟವ್ನೆ ೧

ಗಟ್ಟಿ ಬೆನ್ನಿನ ಮ್ಯಾಗೆ ಬೆಟ್ಟವ ಹೊತ್ತವ್ನೆ ಗಟ್ಟಿ ಗದೇ ಹಿಡಿದವ್ನೇ
ಮಟ್ಟಸವಾದ ನಾಕ್ಕಾಲಲ್ಲಿ ನಿಂತವ್ನೆ ಸಿಟ್ಟಿಲ್ಲ ನಗತವ್ನೇ ೨

ಮೊಳದುದ್ದ ಮೂಗ್ಯಾಲೆ ಭೂಮಿಯ ಹೊತ್ತವ್ನೇ
ಬೆಳಸವ್ನೇ ಕೋರೆಹಲ್ಲಾ
ತೊಳಲಿಬಳಲವನಪ್ಪ ನಮ್ಮಪ್ಪ ರಂಗಪ್ಪ ಯೆಳನಗೆ ನಗ್ತಾನೇ ೩

ಮೂಡ್ತವ್ನೆ ಕಂಬ್ದಲ್ಲಿ ನರಸಿಮ್ಮನಾಗವ್ನೆ ಹಿಡಿದವ್ನೆ ದೊಡ್ರಾಕ್ಷಸ್ನಾ
ದೊಡ್ಡುಗ್ರಲೊಟ್ಟೆಯ ಬಗಿತವ್ನೆ ಸಿಗಿತವ್ನೆ
ಕೊಡುತೀನ್ವರವನೆಂತಾನೇ ೪

ಗಿಡ್ಡ ಹಾರುವನಂತೆ ಮೂರೆಜ್ಜೆ ಭೂಮಿಯನಡ್ಡಡ್ಡ ಅಳೆದವ್ನೆ
ಪಾಡ್ಯದ ಹಬ್ದಲ್ಲಿ ಬಲಿಯ ಕರೆತರುತಾನೆ ಬೇಡಿದ್ದ ಕೊಡುತಾನೇ ೫

ಮೈಯಲ್ಲಿ ಜನಿವಾರ ಪೀತಾಂಬ್ರ ತೊಟ್ಟವ್ನೆ
ಜಯ ಜಯ ಜಯವೆಂತಾನೇ
ಕೈಯಲ್ಲಿ ಹಿಡಿದವ್ನೆ ಗಂಡುಗೊಲ್ಲಿಯ ನೋಡೋ
ಭಯವಿಲ್ಲ ಕೈಮುಗಿಯೋ ೬

ಶಿವನ ಬಿಲ್ಮುರಿದವ್ನೆ ರಾವಣನ ತರಿದವ್ನೆ ಭೂಮಿಯೆಲ್ಲವಾಳ್ತವ್ನೆ
ಅವ ನಿಯಮಗಳಿಂದಲೊಡಗೂಡಿ ನಿಂತವ್ನೆ
ತವಕದಿ ನೋಡಿರೆಲ್ಲಾ ೭

ಮಡುವಿಗೆ ಧುಮುಕಿ ಕಾಳಿಂಗನ ತುಳಿದವ್ನೆ
ಹಿಡಿದವ್ನೆ ಹೊಂಗೊಳಲಾ
ಮಡದಿಯ ಮಾನವ ಕಾಪಾಡಿ ನಿಂದವ್ನೆ
ಕಡುರೂಪವಂತ ನಮ್ಮ ೮

ಮತ್ತರ ಮಡದೀರ ವ್ರತವನು ಕೆಡಿಸಲು ಬೆತ್ತಲೆ ನಿಂತವ್ನೇ
ಕೃತ್ತಿವಾಸನ ಕೈಯ್ಯೊಳಿಂಬಾಗಿ ನಿಂದವ್ನೆ ಉತ್ತಮ ದೇವನಮ್ಮ ೯

ಕುದುರೆಯ ಮ್ಯಾಲ್ಕುಂತು ಕಾಲಿಂದ
ದುರುಳರನೊದೆಯಾಕೆ ಹೊಂಟವ್ನೇ
ಮದನಪ್ಪ ನಮ್ಮ ಮಾಂಗಿರಿಯೊಡೆಯನ
ಪದಕಮಲಕೆ ಯೆರಗೋ ೧೦

ಮುದ್ದು ರಂಗಪ್ಪನಿಗೆ ಪೊಂಗಲು ನೇವೇದ್ಯ ಸಿದ್ಧ ಮಾಡಿರಯ್ಯಾ

ಬದ್ಧವು ಅವ ನಮ್ಮ ಕಾಯೋದು ಸಟೆಯಲ್ಲ
ಎದ್ದೆದ್ದು ತಲೆಬಾಗಿರೊ ೧೧

ರಾಮನು ಅವನೇ ಕಾಮನಪ್ಪನು ನಿಸ್ಸೀಮ ನಮ್ಮ ರಂಗನೇ
ರಾಮದಾಸನ ಮನದೊಳು ಮನೆ ಮಾಡ್ಯನ್ವೇ
ಪಾಮರ ವರದನೆಂಬ ಮಾಂಗಿರಿ ೧೨

ಸಾಮಾಜಿಕ

೪೪೫

ಹಿಂಗಿಪ್ಪವನಿಗೆ ಕೈಲಾಸ
ಹಿಂಗಿಲ್ಲದವನಿಗೆ ವನವಾಸ ಪ

ಹಂಗ ಬಿಟ್ಟವಗೆ ಸುಖವಾಸ
ಹಂಗುಳ್ಳವನಿಗೆ ಉಪವಾಸ ಅ.ಪ

ಮುಳ್ಳಿನ ಹಾದಿಯ ತುಳಿಯಬೇಡಣ್ಣ
ಕಳ್ಳಿಯ ಬೇಲಿಗೆ ನುಗ್ಗಬೇಡಣ್ಣ
ಪೊಳ್ಳುಹರಟೆಗಳ ಬಿಡಬೇಕಣ್ಣ
ಸುಳ್ಳು ಹೇಳುವುದ ಸುಡಬೇಕಣ್ಣ ೧

ಕಾಮಕ್ರೋಧಂಗಳಿಗೆಡೆಗೊಡಬೇಡ
ನೇಮನಿಷ್ಠೆಗಳ ಸಡಿಲಿಸಬೇಡ
ಕಾಮಿತಗಳ ನೀ ಬೇಡಲೂಬೇಡ
ರಾಮಧ್ಯಾನವ ಬಿಡಲೂಬೇಡ ೨

ಮೂರಂಗಗಳಲಿ ಶುದ್ಧಿಬೇಕಣ್ಣ
ಹಾರುವ ಮನವನು ಹಿಡಿಯಬೇಕಣ್ಣ
ತೋರಿಕೆ ಬೂಟಾಟಿಕೆ ಬೇಡಣ್ಣ
ಶ್ರೀರಂಗನಾಥನ ಮರೆಯಬೇಡಣ್ಣ ೩

ಸಂಸಾರದೊಳತಿ ಮುಳುಗಬೇಡಣ್ಣ
ಹಂಸ ತಾವರೆಗಳಂತಿರಬೇಕಣ್ಣ
ಹಿಂಸೆಯ ಸಹಿಸಿ ಪಾಪವ ಕಳೆಯಣ್ಣಾ
ಕಂಸಾರಿಯ ಭಕ್ತನೆಂದೆನಿಸಣ್ಣ ೪

ಹೆಂಗಳ ನಿಟ್ಟಿಸಿ ನೋಡಬೇಡಪ್ಪಾ
ಮಂಗನ ಚೇಷ್ಟೆಯ ಮಾಡಬೇಡಪ್ಪಾ
ಮುಂಗೋಪದಿ ಮಾತನಾಡಬೇಡಪ್ಪಾ
ಮಾಂಗಿರಿರಂಗನ ಮರೆಯಬೇಡಪ್ಪಾ ೫

೪೪೬

ಶ್ರೀವೇಂಕಟೇಶ ಸುಪ್ರಭಾತ

ಶ್ರೀವೆಂಕಟೇಶಂಗೆ ಜಯ ಸುಪ್ರಭಾತ
ದೇವಾದಿದೇವಂಗೆ ನವಸುಪ್ರಭಾತ ಪ

ಪಾವನ ಶರೀರಂಗೆ ಜಯ ಸುಪ್ರಭಾತ
ದೇವಪರಮಾತ್ಮಂಗೆ ನವಸುಪ್ರಭಾತ ಅ.ಪ

ಅಂದು ಕೌಸಲ್ಯೆಯಣುಗ ರಾಮಾ ಏಳು
ಎಂದಿನಂತೆ ಆಹ್ನಿಕವ ಮಾಡೆಂದು ನುಡಿಯಾ
ಮುಂದೆ ವಿಶ್ವಾಮಿತ್ರ ಮುನಿ ರಾಮಭದ್ರಂಗೆ
ಮಂದಹಾಸದಿ ಪೇಳ್ದ ಸರಯೂಬಳಿಯಲ್ಲಿ ೧

ಎದ್ದೇಳು ಗೊವಿಂದ ಗರುಡಧ್ವಜಸ್ವಾಮಿ
ಉದ್ಧರಿಸ ಬೇಕಯ್ಯ ಕರುಣಾಂತರಂಗ
ಎದ್ದೇಳು ಚೈತನ್ಯ ಪುಣ್ಯದಾತ
[ಎದ್ದೇಳು ಕಮಲಾಕಾಂತರಂಗ] ೨

ಮಧುಕೈಟಭಾರಿಯಾ ವಕ್ಷಸ್ಥಲದಲಿ ನಿಂದ
ಹದಿನಾಲ್ಕು ಲೋಕಗಳ ಮಾತೆಯೆನಿಸಿ
ವಿಧ ವಿಧದ ವರಗಳನು ಭಕ್ತರ್ಗೆ ಕೊಡುತಿರುವ
ಪದುಮಾಕ್ಷಿ ಲಕ್ಷ್ಮೀಗೆ ಜಯಸುಪ್ರಭಾತ ೩

ಸರ್ವಭುವನೇಶ್ವರಿ ಸರ್ವ ಭಕ್ತಂಕರಿ
ಸರ್ವಲೋಕ ವಿಖ್ಯಾತೆ ಜಾತೆ ವಿನೀತೇ
ಸರ್ವಲೋಕೇಶನ ರಾಣಿ ಕಲ್ಯಾಣಿ
ಸರ್ವಸನ್ನುತೆ ನಿನಗೆ ಸುಪ್ರಭಾತ ೪

ಸಪ್ತರ್ಷಿ ಮಂಡಲವು ಔಪಾಸನೆಯಾಗೆ
ತೃಪ್ತರಾಗಿರುತಿಹರು ನಭದ ನದಿಯೊಳು
ವ್ಯಾಪ್ತವಾದಖಿಳ ಕರಪುಷ್ಪಗಳ ಅರ್ಪಿಸಿ
ಒಪ್ಪಿರ್ಪರೇಳೇಳು ವೆಂಕಟೇಶ ೫

ಹರನಿಂದ್ರ ಷಣ್ಮುಖನು ಅಜ ನಿರಂಜನ
ಸ್ಮರಿಸಿ ತ್ರೈವಿಕ್ರಮನ ಚರಿತೆಗೇಳು
ಶಿರಬಾಗಿ ವಂದಿಪರು ಗುರು ಶುಭವ ಪೇಳುವನು
ವರದರಾಜ ಏಳು ವೇಂಕಟೇಶ ೬

ಈಗ ವಿಕಸಿತವಾದ ಕಮಲಸೌರಭದೊಡನೆ
ರಾಗ ರಸ ತಂಪಿಂಪು ಮಿಳಿತಮಾಗಿ
ಸಾಗುತಿದೆ ತಂಗಾಳಿ ಉಲ್ಲಾಸಮಂ ಬೀರಿ
ತ್ಯಾಗಿ ನೀನೇಳಯ್ಯ ವೇಂಕಟೇಶ ೭

ಕದಳಿ ಖರ್ಜೂರಗಳ ರಸಯುಕ್ತ ಪಾಯಸ
ಮುದದಿ ಸಂಸೇವಿಸುತ ಉತ್ಸಾಹದೀ
ಮಧುರ ಗಾನವ ಪಾಡಿ ಶುಕಪಿಕಗಳುಲಿಯುತಿವೆ
ಪದುಮನಾಭ ಏಳು ವೇಂಕಟೇಶ ೮

ದೇವರ್ಷಿನಾರದನು ಮಹತಿ ವೀಣೆಯ ನುಡಿಸಿ
ದೇವದೇವನೆ ನಿನ್ನ ನುತಿಸುತಿಹನು
ಭಾವರಸಯುತವಾದ ಗಾನಕೇಳುತಿಹುದು
ಪಾವನಾತ್ಮನೇ ಏಳು ವೇಂಕಟೇಶ ೯

ಸುರಿವ ಮಕರಂದವನು ಹೀರಿ ಹೀರಿ
ಅರುಣನುದಯವ ತಿಳಿದು ಅರಳುತಿಹ ಕಮಲದಿಂ
ಸರಸರನೆ ಝೇಂಕರಿಸಿ ಬರುತಿರ್ಪುವೈ
ಸಿರಿಯ ದುಂಬಿಗಳೇಳು ವೆಂಕಟೇಶ ೧೦

ಮಡದಿಯರು ಕೆನೆಮೊಸರನಾಂತ ಭಾಂಡಗಳಲ್ಲಿ
ಕಡೆಗೋಲಿನಿಂ ಮಥಿಸಿ ಹಾಡುತಿಹರು
ಅಡಿಗಡಿಗೆ ಜಯ ಘೋಷ ಕೇಳುತಿದೆಯಯ್ಯ
ಪೊಡವೀಶ ನೀನೇಳು ವೇಂಕಟೇಶ ೧೧

ಕಮಲದಿಂದೈತಂದ ದುಂಬಿಗಳು ಸುತ್ತಲಿನ
ಕುಮುದಗಳ ಮೈಗಪ್ಪಿ ಝುರಿಝುರಿ ಗರ್ವದಿ
ಅಮರ ದುಂದುಭಿಯಂತೆ ಝೇಂಕರಿಸುತಿವೆಯಿದೋ
ವಿಮಲಾಂಗ ನೀನೇಳು ವೇಂಕಟೇಶ ೧೨

ಶ್ರೀರಮೆಯ ನಿತ್ಯಯೋಗಸ್ಥಾನ ಹೇಸ್ವಾಮಿ
ಭೂರಿಭಕ್ತರ ಕಾಯ್ವ ಕರುಣಾನಿಧೇ ಸ್ವಾಮಿ
ಮೂರು ಲೋಕವನಳೆದು ಪಾಲಿಸುವ ಸ್ವಾಮಿ
ಮಾರಮಣ ನೀನೇಳು ವೇಂಕಟೇಶ ೧೩

ಅಜ ರುದ್ರ ಸನಕಾದಿ ಪರಮ ಭಕ್ತರ ಬಂಧು
ಭಜಿಸಿ ತವ ದರ್ಶನವ ಕಾಯುತಿಹರು
ವಿಜಯ ಜಯರೀರ್ವರು ತಡೆಯುತ್ತಲಿಹರಯ್ಯ
ಗಜವಿನುತ ನೀನೇಳು ವೇಂಕಟೇಶ ೧೪

ಶೌರಿ ನಿನ್ನಾವಾಸ ತಾಣ ವೈಕುಂಠದಿಂದ
ನಾರಾಯಣಾದ್ರಿ ಗರುಡಾದ್ರಿ ಎಂತೆಂಬ
ಆರೇಳು ನಾಮಗಳ ಪೇಳ್ವರಿದು ಶೇಷಾದ್ರಿ
ಸಾರತರ ನಾಮವೈ ವೇಂಕಟೇಶ ೧೫

ಶಿವನಿಂದ್ರ ಅಷ್ಟದಿಕ್ಪತಿಗಳು ಕಾದಿಹರು
ಭುವಿಯ ಗೋಪಾಲಕರು ಅನುಮತಿಯ ಬೇಡುವರು
ರವಿಯಗ್ನಿಯುಕ್ತ ನವಗ್ರಹಗಳು ಕಾದಿಹರು
ಭವದೂರನೇ ನಿನಗೆ ಸುಪ್ರಭಾತ ೧೬

ತವಪಾದ ಧೂಳಿಯನು ಪೊತ್ತ ಚೇತನರೆಲ್ಲ
ದಿವಿಮೋಕ್ಷ ಬೇಡ ತವದರ್ಶನವು ಸಾಕೆಂದು
ನವಭಕ್ತಿಯಿಂ ತಳೆದು ಭಜನೆ ಮಾಡುತಿಹರು
ಪವಮಾನನುತ ನಿನಗೆ ಸುಪ್ರಭಾತ ೧೭

ನಿನ್ನ ಧಾಮದ ಶಿಖರ ವೀಕ್ಷಣೆಯೊಳಾನಂದ
ವನ್ನು ಪಡುತಿಹರೆಲ್ಲ ಶರಣ ಜನರು
ನಿನ್ನ ದರ್ಶನವೊಂದೆ ಪರಮ ಪದವದನು
ಸನ್ನುತಾಂಗನೆ [ತೋರೇಳು]ಸುಪ್ರಭಾತ ೧೮

ಶ್ರೀ ರಮಾ ಭೂಮಿಪತಿ ಕರುಣಾಂಬುಸಾಗರನೆ।
ಧೀರ ಶೂರಾನಂತ ಗರುಡ ವಿಷ್ವಕ್ಸೇನ
ರಾರಾಜಿಸುತ್ತಿಹರು ನಿನ್ನ ದರ್ಶನಕಾಗಿ
ನಾರಾಯಣಾ ನಿನಗೆ ಸುಪ್ರಭಾತ॥ ೧೯

ಕಮಲನಾಭ ದೇವ ಪುರುಷೋತ್ತಮಾ ಸ್ವಾಮಿ
ಅಮಲಸದ್ಗುಣಧಾಮ ಕೃಷ್ಣ ವೈಕುಂಠ
ಸುಮಬಾಣಕೋಟಿ ಸೌಂದರ್ಯನುತ ಮಾರಮಣ
ಕಮಲನಯನಾ ನಿನಗೆ ಸುಪ್ರಭಾತ॥ ೨೦

ದೀನರಕ್ಷಣೆಗಾಗಿ ಹತ್ತುಜನ್ಮದಿ ಬಂದೆ
ಮಾನವ ಶ್ರೇಷ್ಠರೂ ಆಕಾಶಗಂಗೆಯಲಿ
ನಾನಾ ಸುಗಂಧಗಳ ಬೆರೆಸಿ ಕಾಯುತ್ತಿಹರು
ಭಾನುತೇಜನೆ ನಿನಗೆ ಸುಪ್ರಭಾತ ೨೦

ದಿನಪನುದಯಿಸುತ್ತಿಹನು ಕಮಲವರಳುತ್ತಿಹುದು
ಬನದ ಪಕ್ಷಿಗಳೆಲ್ಲ ಹಾಡುತ್ತಲಿಹವು
ಘನವೈಷ್ಣವರು ಮಂಗಳಂಗಳಂ ಪಾಡುವರು
ಮನುಜಪುಂಗವ ನಿನಗೆ ಸುಪ್ರಭಾತ ೨೨

ಕಮಲಜಾದ್ಯಮರರೂ ಸಪ್ತರ್ಷಿಯೋಗಿಗಳು
ವಿಮಲ ಮಾನಸರಾಗಿ ನಿನಗಾಗಿ ಕಾದಿಹರು
ತಿಮಿರಸಾಗರವನ್ನು ದಾಟಿಸುವ ಪರಮಾತ್ಮ
ಕಮನೀಯಗುಣ ನಿನಗೆ ಸುಪ್ರಭಾತ॥ ೨೩

ಭಾವನೆಯೊಳೀಯದ್ರಿ ವೈಕುಂಠವಾಗಿಹುದು
ಮಾವನಿತೆಯುಪಚಾರದಭ್ಯರ್ಥಿಯಾಗಿಹಳು
ಶ್ರೀವೈಷ್ಣವ ಕೇಳು ಕೈಮುಗಿದು ಕಾದಿಹರು
ಕಾವಕಾರುಣ್ಯನಿಧಿ [ನಿನಗೆ ಸುಪ್ರಭಾತ] ೨೪

ಅರುಣೋದಯದೊಳೆದ್ದು ಈ ಸುಪ್ರಭಾತವನು
ಪರಮ ಭಕ್ತಿಯೊಳೊಮ್ಮೆ ಪಾಡುವರಿಗೆ
ಪರಮಪುರುಷನು ದಿವ್ಯತಾಣವನು ನೀಡುವನು
ಹಿರಿಯರಾ ವಚನವಿದು ಪರಮ ಚರಿತಾರ್ಥ ೨೫

ಶರಣಾಗತಿ

ಒಂದೆರಡು ಮೂರು ನಾಲ್ಕೈದಾರು ಮೊಗದವರು
ಬಂದು ವಂದಿಸುತಿಹರು ಪುರುಷೋತ್ತಮ

ಮಂದಾರ ಪರಿಮಳ ಸುಗಂಧಗಳನಾಂತಿಪ್ಪ
ಬಂಧುರ ಶರೀರನೀ ಪಾಲಿಸೆಮ್ಮ ವೆಂಕಟೇಶ ೨೬

ನಾನಾಪರಾಧಗಳ ಮಾಡಿರುವೆನಯ್ಯ
ನೀನೆಲ್ಲವನು ಕ್ಷಮಿಸಿ ಪರಿಪಾಲಿಸಯ್ಯ
ನೀನೇ ಸರ್ವಾಧಾರ ಕರುಣಾಂತರಂಗನು
ದಾನಶೀಲಾ ಸ್ವಾಮಿ ಶ್ರೀವೇಂಕಟೇಶ ೨೭

ಗೋಪಿಕಾ ಪರಿವೃತನೆ ಪರವಾಸುದೇವನೆ
ಗೋಪಿಕಾ ಗೀತಗುಣ ಸಂಪೂಜ್ಯ ದೇವನೆ
ಗೋಪಿಕಾ ಮನ್ಮಥನೆ ದೈತ್ಯಾರಿ ಶ್ರೀಕೃಷ್ಣ
ನೀ ಪೊರತು ಬೇರೆ ದೇವರ ಕಾಣೆ ವೆಂಕಟೇಶ ೨೮

ದಶರಥನ ಸುತನಾಗಿ ಜಾನಕಿಯ ಕರವಿಡಿದು
ದಶಮುಖಾದ್ಯಸುರರನು ಸಂಹರಿಸಿದಾತ
ಶಶಿಮೌಳಿ ವಂದ್ಯನೆ ಲೋಕಮೋಹನ ಸ್ವಾಮಿ
ಕ್ಲೇಶಗಳ ಸಹಿಸಿ ಶಾಶ್ವತ ಸುಖವ ನೀಡಯ್ಯ ವೆಂಕಟೇಶ ೨೯

ಕಂಜಾಯತಾಕ್ಷಿಯೆ ಸರ್ವಲೋಕ ಶರಣೇ
ಕಂಜವದನೆಯೆ ಸರ್ವವಾತ್ಸಲ್ಯ ಪೂರ್ಣೇ
ಕಂಜನಾಭನ ದಿವ್ಯ ವಕ್ಷಸ್ಥಲಾವಾಸಿ
ಕಂಜಸರ್ವಾಂಗಿ ಪೊರೆ ಪುಣ್ಯಚರಿತೆ ಶ್ರೀಯೆ ೩೦

ಸರ್ವಲೋಕ ಶರಣ್ಯ ಸರ್ವಗುಣ ಸಂಪೂರ್ಣ
ಸರ್ವದೇವರದೇವ ವೇದವಂದಿತ
ಸರ್ವಕಾರುಣ್ಯನಿಧಿ ಸರ್ವಾತ್ಮ ಸಂಚಾರಿ
ಸರ್ವಪೂಜಿತ ನಿನಗೆ ಶರಣು ವೆಂಕಟೇಶ ೩೧

ರಕ್ಷಿಸು ಜಗನ್ಮಯ ರಕ್ಷಿಸು ದಯಾಮಯ
ರಕ್ಷಿಸು ಮನೋಮಯಾ ಮಾಯ ನಿರ್ಮಾಯ

ರಕ್ಷಿಸ್ಸೈ ಸರ್ವಜ್ಞ ಸರ್ವಲೋಕಾಧ್ಯಕ್ಷ
ರಕ್ಷಸ್ಸೈ ಹರಿ ನಿನ್ನ ಚರಣ ವೆಂಕಟೇಶ ೩೨

ಆವನಾದಿಯನಂತನೆಂದೆನಿಪನೊ ವರವ
ಈವ ಕರುಣಾಳುವೋ ಜೀವರಾಶಿಯನೆಲ್ಲ
ಕಾವನೋ ಸಹಸ್ರಾಕ್ಷನೆಂದೆನಿಪ ದೇವನಾ
ಶ್ರೀವನಜ ಪದವೆನಗೆ ಶರಣು ವೆಂಕಟೇಶ ೩೩

ವೇದಗಳ ತಂದು ಮಂದರವೆತ್ತಿ ಹರಿಯ
ಮೇದಿನಿಯ ನಳೆದ ಭಾರ್ಗವನಾದ ರಾಮನೀ
ನಾದೆ ಕಂಸನಕೊಂದೆ ಗೋಪಾಲಕೃಷ್ಣ
ನಾದ ಕಲ್ಕೀ ನಿನ್ನ ಚರಣ ವೆಂಕಟೇಶ ೩೪

ಮೂರು ವೇಣಿಗಳುಳ್ಳ ಗಂಗೆ ಪುಟ್ಟಿದ ಪಾದ
ಮೂರು ಲೋಕವನಳೆದ ಸುಪ್ರಸಿದ್ಧದ ಪಾದ
ಮೂರು ಕಣ್ಣಾಂತವನು ಜಪಿಸುತಿರುವ ಪಾದ
ಚಾರುತರ ಪದವೆನಗೆ ಶರಣು ವೆಂಕಟೇಶ ೩೫

ಕಾಳಿಂಗನಾ ಹೆಡೆಯ ತುಳಿದು ಕುಣಿದಾ ಪಾದ
ಖೂಳ ಶಕಟನನೊದ್ದು ಕೊಂದ ಪಾದ
ಚೋಳರಾಯನು ತೊಳೆದು ವಂದಿಸಿದ ಪಾದ
ನಾಳೀಕ ಪದವೆನಗೆ ಶರಣು ವೆಂಕಟೇಶ ೩೬

ಕ್ಷೀರವಾರಿಧಿತನುಜೆಯೊಪ್ಪಿ ವೊತ್ತುವ ಪಾದ
ನಾರದಾದಿಗಳೆಲ್ಲ ಪಿಡಿದು ನಲಿವಾ ಪಾದ
ಶ್ರೀರಮಣಿ ಮುದದಿಂದ ಕಣ್ಣೊತ್ತುವ ಪಾದ
ಮಾರಮೋಹಕ ನಿನ್ನ ಚರಣ ವೆಂಕಟೇಶ ೩೭

ಮಂಗಳ

ಕಲ್ಯಾಣ ರೂಪಂಗೆ ಅದ್ಭುತಾಕಾರಂಗೆ
ಮಾಲ್ಯಪೀತಾಂಬರಾಂಗದ ಶೋಭಿತಂಗೆ
ಶಾಲ್ಯನ್ನ ಸಂಪ್ರೀತ ಶ್ರೀ ವೇಂಕಟೇಶಂಗೆ
ಬಾಲ್ಯಕುಂದದವಂಗೆ ಜಯಮಂಗಳ ೩೮

ಭಕ್ತಪರಿಪಾಲಂಗೆ ಜಗದಾದಿ ಮೂಲಂಗೆ
ಭಕ್ತಿದಾತಾರಂಗೆ ರಮೆಯರಸಂಗೆ
ಮುಕ್ತಿ ಸೌಖ್ಯವನೀವ ಶ್ರೀವೇಂಕಟೇಶಂಗೆ
ಶಕ್ತಿ ಸ್ವರೂಪಂಗೆ ಶುಭಮಂಗಳ ೩೯

ಶೇಷಾದ್ರಿ ವಾಸಂಗೆ ದಿನಕರ್ತ ಭಾಸಂಗೆ
ಕ್ಲೇಷದಾರಿದ್ರ್ಯಾದಿ ಪರಿಹಾರ ಕರ್ತಂಗೆ
ಶೇಷ ಪರ್ಯಂಕಂಗೆ ಶ್ರೀ ಶ್ರೀನಿವಾಸಂಗೆ
ದೋಷಾಪಹಾರಂಗೆ ಜಯಮಂಗಳ ೪೦

ಅರವಿಂದ ವದನಂಗೆ ಅರವಿಂದ ಲೋಚನಗೆ
ಅರವಿಂದನಾಭನಿಗೆ ಅರವಿಂದ ಗಾತ್ರಗೆ
ಅರವಿಂದ ಪಾದನಿಗೆ ಅರವಿಂದ ಭೂಷನಿಗೆ
ಅರವಿಂದ ಹಸ್ತಂಗೆ ಶುಭಮಂಗಳಂ ೪೧

ಹಿಂದಿನಾಚಾರ್ಯರಿಗೆ ಮುನಿಮುಖ್ಯಭಕ್ತರಿಗೆ
ಇಂದಿನಾ ಭೂದೇವಿ ನೀಳಾದಿ ವಧುಗಳಿಗೆ
ಮಂದಾಕಿನೀಧರಗೆ ಇಂದ್ರ ದಿಕ್ಪಾಲರಿಗೆ
ವಂದಿಪೆನು ಮಂಗಳಾಚರಣೆ ಮಾಡಿ ೪೨

ಫಲಶ್ರುತಿ

ಹನ್ನೆರಡು ಮಾಸವು ತಪ್ಪದೆ ಹಾಡಿದರೆ
ಮುನ್ನಮಾಡಿದ ಪಾಪವೆಲ್ಲ ಕಳೆಯುವುದು
ಪನ್ನಗಾರಿಧ್ವಜನ ಕರುಣೆಯೊದಗುವುದು
ಬನ್ನಗುಡುವನರಕಬಾಧೆ ತಪ್ಪುವುದು ೪೩

ಶ್ರಾವಣಾಶ್ವೀಜದಲಿ ಮಾರ್ಗಶಿರ ಮಾಸದಲಿ
ಭಾವಭಕ್ತಿಯಲಿಂತು ಹಾಡುವರಿಗೆ
ನೋವು ಕಾಲನಭಟರ ಕಾಟನಶಿಪುದು ಹರಿಯ
ಭಾವುಕರು ಸತ್ಕರಿಸಿ ಕರೆದೊಯ್ವುರು ೪೪

ಅಪ್ಪ ಮಾಂಗಿರಿರಂಗನಪ್ಪಣೆ ಪಡೆದಿದನು
ಒಪ್ಪಿಸುವೆನ್ನೈ ನಿನಗೆ ವೇಂಕಟೇಶ।
ತಪ್ಪು ನೆಪ್ಪುಗಳನ್ನು ಮನ್ನಿಸ್ಸೈ ಜಗದೀಶ
ಒಪ್ಪದಿಂ ಸಕಲರನು ಪೊರೆ ವೇಂಕಟೇಶ॥ ೪೫

ಕೋಸಲ ಪುರೀಶರ ಕೃತಿಗಳು

(ಅ) ಶ್ರೀಹರಿಸ್ತುತಿಗಳು

೪೪೭

ನಾರಾಯಣ ವಾಸುದೇವ ಸಖ ಯೋಗಾನಂದ
ಶ್ರೀ ರಮಾಪಪಾಲಯಮಾಂ
ವಾರಿಜಾಸನಪ್ರಮುಖಾಮರಗಣ ವಂದ್ಯ
ಶೌರಿ ಕೋಸಲಪುರೀಶ ನರ ಸಂಕರ್ಷ ಅ.ಪ

[ಶ್ರೀಧರ]ಶೇಷಶಯನ ವಿಠಲ ರಮಾಸಖ
ಯಾದವೇಂದ್ರ ಪಾಂಡವದೂತ
ಮಧುರಾನಗರ ಗೋವಿಂದ ವೀರರಾಘವ
ಗದಾಧರ ಪೂರ್ಣಹರೇ ೧

ಪರಮೇಶಪುರಾಶ್ರಯ ಪುರುಷೋತ್ತಮ
ಸುರಪ್ರಿಯ ಪದ್ಮಲೋಚನಸಂಗ
ಪರಮ ಸ್ವಾಮಿನ್‌ನಾಥ ಹಿರಣ್ಯಾ
ಸುರಮರ್ದನ ಭಾರ್ಗವಮಹಾವಿಷ್ಣೋ ೨

ಮಧುಸೂದನ ಪದ್ಮಲೋಚನ ಹರ
ಮಾಧವ ತ್ರಿವಿಕ್ರಮ ಸಂಕರುಷಣ
ಮಧುರದ್ವಿಜರವನಿಪತೇ ಪರಬ್ರಹ್ಮಂ
[ಮದರಿಪು] ಪಾಪಹರಮಹಾವಿಷ್ಣೋ ೩

ಭಕ್ತಿಪ್ರದಾಯಕ ಗೋಪವೇಷ
ಭಕ್ತವತ್ಸಲ ಪ್ರದ್ಯುಮ್ನಾಚ್ಯುತ
ಭಕ್ತಸಖ ಮಹಾಸಿಂಹಮಣಿ ವ್ರತ
ಭಕ್ತ ಪ್ರಿಯ ಕೃಷ್ಣ ಭೋಗಿಶಯನ ಶೌರೆ ೪

ಕಾಳಮಘಮಲ್ಲಾರ ನಿಬಿಡಾಕಾರ[ಲೋಲ]
ಸುವರ್ಣ[ಸೀತಾ]ಶರಣ್ಯ ರಘುದ್ವಹ

ಸಾಲಗ್ರಾಮ ಗರ್ಭಜ್ಞ ಸುದರುಶನ
ಪಾತೋನಂದಸೂನೊ [ಸಲಾಪುರಾಧಿ] ೫

೪೪೮

ಮಾಧವ ನಾರಾಯಣ ಪುರುಷೋತ್ತಮ
ಮಧುಸೂದನ ಪಾಲಯಮಾಂ
ಶ್ರೀಧರ ಕೇಶವ ರಾಘವ ವಿಷ್ಣೋ [ಕೋಸ
ಲಾಧೀಶ] ಮೋಹನ ರಂಗಾಧಿಪ ಶೌರೇ ಪ

ಪರಮಪುರುಷಾನತ ಕಲುಷವಿದಾರಣ
[ವರ] ಪಾಲಿತನಕ್ರ ಭಯಾರ್ಧಿತವಾರಣ
ಸುರವರಮುನಿನಿಕರ ಭಯವಿದಾರಣ
ಸುರುಚಿರರುಚಿ ಕೌಸ್ತುಭಧಾರಣ ೧

ವನಧಿಶಯನ ಸರಸಿಜದಳಲೋಚನ
ವಾನವಮುಖ್ಯ ಶುಭಾಷಿತ ಸೂಚನ
ಘನವಿವಿಧಾ ನಿರುಪಮಾಗಮ ಧರ್ಮಾ
ರ್ಚನ ಗೌತಮತರುಣಿ ಶಾಪವಿಮೋಚನ ೨

ಚರಣವಿನತಜನ ಬಹುಸುಖದಾಯಕ
ಸರ್ವ ಸುರಾರಿಭಯಾವಹನಾಯಕ
ದರಹಸಿತಾನನ ಭುವನವಿದಾಯಕ
ಶರಧಿಸುತ ರಮಣೀಮಣಿ ನಾಯಕ ೩

೪೪೯

ಜಯ ಜಯ ಸುಗುಣಾಲಯ
ಜಯಜಯ ಹರೇ ಶ್ರೀನರಸಿಂಹ

ಜಯ ಜಯ ಶಶಿಧರಕೋಟಿ ಸದೃಶದೀಪ್ತಿ
ಶರಣ್ಯ ಶ್ರೀನರಸಿಂಹ ಪ

ವಿತತಕೇಸರ ಹತಜಲಮಹೋನ್ನತರೂಪ ಶ್ರೀನರಸಿಂಹ
ಕನಕ ಕಶಿಪು ವಿದಳನಚರಣ ಕಾರುಣ್ಯನಿಧಾನ ಶ್ರೀನರಸಿಂಹ
ಘನಭಕ್ತಿ ನಿಕ್ಷೇ[ಪ ದಯಾಕರ ಜ]ನವಂದ್ಯ ಶ್ರೀನರಸಿಂಹ
ಅಘಮದಜೀಯ ಶಾಲನುತರಾಶ್ರಯನಗಚರಿತ ಶ್ರೀನರಸಿಂಹ
ಅಖಿಲಮೌನಿ ಸುರಸುಖದಾಯಕ ಕರನಖಜಾಲ ಶ್ರೀನರಸಿಂಹ
ಅಸದೃಶಮಹಿಮೆ ವಿಲಸಿತ ವಿಮಲ ಮಾನಸಗಮ್ಯ ಶ್ರೀನರಸಿಂಹ
ಅನವದ್ಯ ತಪೋಧನ ಸನಕಸನಂದನವಂದ್ಯ ಶ್ರೀನರಸಿಂಹ
ದುರಿತತಿಮಿರಭಾಸ್ಕರ ಕೋಸಲಪುರನರನಾಥ ಶ್ರೀನರಸಿಂಹ

೪೫೦

ಶೌರೆಯದೊತ್ಕರಾರಿ ನೃಸಿಂಹ ಜಾನ
ಕಿಪ್ರಿಯಾಷ್ಟಭುಜ ಮಹಾಬಲ
ನಾರಾಯಣ ಸುಂದರತರ
ಚಾಪಘ್ನಪ್ರವಾಳ ವರ್ಣನೃಹರಿ ಶಾಂತ ಮೂರ್ತೇ ೧

ಶಾರ್ಙನೃಪಾಶ್ರಯ ವಿಜಯರಾಘವ
ಜಗತ್ಪತೆ ರಾಕ್ಷಸಾಘ್ನ ಮಾಧವ
ಶಾರ್ಙಪಾಣೆ ಜಗನ್ನಾಥ
ಪೂರ್ವಜಗದೀಶ್ವರ [ಸಿಂಹರೂಪಿ] ವಿಷ್ಣೋ ೨

ಪದ್ಮಲೋಚನ ಮಹಾನಂದ ಗದಿರನಿ
ರುದ್ಧಾ ಬಲಾಢ್ಯವಿಶ್ವರೂಪಾ
ಪದ್ಮಪ್ರಿಯ ದೇವದೇವೇಶ ಜಗತ್ಪಾಲಾ
ಉದ್ದಾನಿ ಸಿಂಹ ಕೂರ್ಮ ಶೌರೆ ೩

ಗೋಪೀಜನಪ್ರಿಯ ಮಹಾವರಾಹ
ಗೋಷ್ಪಪತೆ ತುಂಗಶಯನ ರಾಘವ

ಗೋಪಜಾತೇ ಗಜಾಮುಕುತಿ ಸುದರ್ಶನ
ಗೋಪೀವಂದ್ಯ ಸಿಂಹರೂಪಿ ವಿಷ್ಣೋ ೪

ಹನುಮಂತಂ ಚಿಂತಯಹಂ ಪಾ
ವನಶಾಂತ ಕುಂಭರಂಭಾವನಗೇಹಂ
ಅನಮಿತ ಮುಷ್ಟಿಪ್ರಹಾರವಹಂ
ಹನನಂದಶಗ್ರೀವಂ ಸಿಂಹರೂಪಿ ರಾಮಂ ೫

ಪ್ರತಿಭಟ ಭೀಕರ ನಿಜಸೈನ್ಯ
ಸತತ ಮೋದಕರ ಸಂಹಾರಂ
[ನುತ] ಸಂಕಾಶ, ಕೋಸಲಪುರ
ಜಿತಶೌರ್ಯಂ ಬಾಲಭಾಸ್ಕರೊಭಾಸಂ ೬

೪೫೧

ಕಲಯ ರಘುವಂಶಾಬ್ಧಿಸೋಮಂ ಕಲ್ಯಾಣರಾಮಂ
ಸಲಲಿತ ಗುಣಾಭಿರಾಮಂ ಸಕಲದಾನವವಿರಾಮಂ ಪ

ಮರಕತನೀರದ ಮಂಜುಳಗಾತ್ರಂ
ಹರಿಹಯ ಸನ್ನುತಮಂಬುಜನೇತ್ರಂ
ಹರಮುಖಸೇವಿತಂ ಮಾಸುರ ಸಂಸ್ತುತಂ
ಪರಮಪವಿತ್ರಂ ಬಾನುಜ [ಸಖ]ಮಿತ್ರಂ ೧

ಕಮಲಜ ನಾರದ ಗಾನವಿಲೋಲಂ
ಕಮನೀಯಾನನ ಕಾಂಚನಚಲಂ
ಸುಮನಾಶ್ರಿತಜನ ಸುರತರುಮೂಲಂ
ದ್ಯುಮಣಿಕುಲಂ ರಣದೋರ್ಬಲಶೀಲಂ ೨

ಅನಿಶಂವೇಮನನಿಜಕಾಮಂ
ಹನುಮತ್ಸೇವಿತ ಆಹವಭೀಮಂ

ಜನಕಾರ್ಚಿತಮತಿ ಸಾರ್ವಭೌಮಂ
ಘನ [ಕೋಸಲಪುರ] ಕಲ್ಯಾಣರಾಮಂ ೩

೪೫೨

ಜಾನಕೀ ಮನೋಹರಾಯ ಜಯಮಗಳಂ
ಸೂನು ಪವನ ವಿಹಿತಾದರಾಯ ಶುಭಮಂಗಳಂ ಪ

ಮಕರ ಕುಂಡಲಯುಗಳ ಮಂಡಿತಗಂಡಸ್ಥಳಾಯ
ಚಕಿತ ಮುನಿ ಶರಣ್ಯಾಯ ಜಯ ಮಂಗಳಂ
ಅಕಳಂಕ ಶಶಾಂಕ ಸಂನಿಭಾನನಾಯ ಜಲದನಿಲ
ಸುಕುಮಾರ ಶರೀರಾಯ ಶುಭಮಂಗಳಂ ೧

ಗರ್ವಿತ ರಾವಣ ಕುಂಭಕರ್ಣ ವಿದ್ರಾವಣಾಯ
ಸರ್ವಲೋಕ ಶರಣ್ಯಾಯ ಜಯಮಂಗಳಂ
ಗೀರ್ವಾಣ ವಂದಿತಾಂಘ್ರಿಯುಗಾಯ ಸುಜ್ಞಾನ ಚ
ಕ್ಷುರ್ವಿದ್ಯಾ ಸ್ವರೂಪಾಯ ಶುಭಮಂಗಳಂ ೨

ಜಲದಮೂಲ್ಯಮಣಿಸಿಂಹಾಸನ ಸಂಸ್ಥಿತಾಯ ಕೋ
ಸಲನಗರ ನಿಲಯಾಯ ಜಯ ಮಂಗಳಂ
ಜಲಜದಳಲೋಚನಾಯ ಸಪರಿವಾರಾಯ ಭಕ್ತ
ಸುಲಭ ಶ್ರೀ ರಾಮಾಯ ಶುಭಮಂಗಳಂ ೩

೪೫೩

ಮಾಮವ ರಘುವೀರ ಮಾನಿತ ಮುನಿವರ
ಭೂಮಿಸುತ ನಾಯಕ ಭಕ್ತಜನ
ಕಾಮಿತ ಫಲದಾಯಕ ಗರ್ವಿತ ಸು
ತ್ರಾಮ ತನಯವಿರಾಮ ನೃಪತಿ ಲ

ಲಾಮ ದಶರಥರಾಮ ಸಮರೋ
ದ್ದಾಮ ದಶಮುಖ ಸಾಮಜ
ಮೃಗೇಂದ್ರ ಕೋಸಲಪುರೀಂದ್ರ ೧

ದಿನಕರಕುಲದೀಪ ಧೃತದಿವ್ಯ ಶರಚಾಪ
ವನಜ ಸನ್ನಿಭಗಾತ್ರಾ ಯೋಗಿವರ್ಯ
ಸನಕಾದಿಮತಿಪಾತ್ರ ನಭೋಮಣಿ
ತನುಜಶರಣ ಪವನಜಮುಖ ಪರಿ
ಜನ ಜಗದಹಿತ ದನುಜ ಮದಹಾರ
ಮನುಜ ತನುಧರ ವನಜದಳ ನಯನ ಅಗಣಿತಗುಣಗಣಾ ೨

ಭಂಡನೋದ್ಧತ ರೋಷಪಾಲಿತ ಗೌತಮಯೋಷ
[ದಂಡಿತ ಮಾರೀಚ ಅಮಿತ ಯತಿವಿರಸವನಅಬ್ಧಿಗರ್ವ
ಖಂಡಕನಾರಾಚ ಕುಂಡಲಕವಿತ
ಗಂಡ ಯುಗವೇ ದಂಡ ಕರಭುಜ
ದಂಡ ಹಿಮಕರ ಖಂಡಧರ ಕೋ
ದಂಡ ದಳ ಚರಣಾ ಅಗಣಿತ ಗುಣಗಣ ೩

ಘಟಿತ ನಾನಾಭೂಷ ಕವಿತಾಶ್ರಿತ ಪೋಷ
ಕಟಿದೂಪಮಿತವಾಸನ ಶ್ರೀಕೋಸಲೇಶ
ಮಠಬೇಧನ ನಿವಾಸನ ಇಂದ್ರನೀಲಾಭ
ಕುಟಿಲ ಕಚವೃತ ನಿಟಿಲತಟಮಣಿ
ಪಟಲ ಖಚಿತಮಕುಟಲಸಿತ ಮೃದು
ಚಟುಲಪಿತನತಜಟಿಲ ಮೂಲಧನ ದರಹಸಿತವದನ ೪

ಮಾಮವ ರಘುವೀರ ಪರಮ ಪುರುಷ ಹರಿ
ಗೋವಿಂದಂ ಸಿರಿಧರ ನಾರಾಯಣ

೪೫೪

ಶ್ರೀರಾಮ ಜಯರಾಮ ಜಯ ಜಯ ರಾಮ
ಶ್ರೀರಾಮಕೋಸಲನಗರಿ ಸಾರ್ವಭೌಮ ಪ

ತಾಪಸವಂಶ ಕಲಶಾಂಬುಧಿ ಚಂದ್ರ
ತಾಟಕಾದಿ ಭೀಕರಾಹಿತನಗೇಂದ್ರ ೧

ಪ್ರಾಪ್ತವೀವಿದ ದೇವೈಸ್ರನಿಕಾಯ
ಪರಿಹೃತಗಾಥೆಯ ಪವನಾಂತರಾಯ ೨

ವೈಶಾಲಿಕ ವರ್ಣನೀಯ ಸೌಂದರ್ಯ
ವರಪಾದರೇಣು ಪಾವಿತ್ರ ಮುನಿಭಾರ್ಯ ೩

ಹರಧನುರ್ಧರಮೋದಿತ ಜನಕರಾದ್ಯ
ಜನ ಹಸನಾಗತಸೀತಾಪಾಣಿ ಸರೋಜ ೪

ಜಮದಗ್ನಿ ತಿಮಿರ ಖದ್ಯೋತ
ಸಾರಮಹೋತ್ಸವೋಜ್ವಲಸಾಕೇತ ೫

ಅನುಗತ ಸೀತ ಸುಮಿತ್ರಕುಮಾರ
ಆಶ್ರಿತರಮಣೀಯ ತಾಮಸತೀರ ೬

ಮಹನೀಯ ಕರುಣಾಪಾತ ನಿಷಾದಭೂಪ
ಮಕುಟವಾಯತ ಬಂಧುಜನಕಲಾಪ ೭

ನವಶಂಕಾರಿಕ ಜನ್ಹುತನೂಜ
ನೈಜಲೋಕನ ಶೋಷಿತ ಭರದ್ವಾಜ ೮

ಚಿತ್ರಕೂಟ ಶೈಲಕೃತ ಪರ್ಣಕಾಲ
ಜೀವ ಸಂಯೋಜಿತ ಕಪಟಕಕೋಲ ೯

ಭರತಭೇದ ಶಮನ ವ್ಯಾಹಾರ
ಪಾದುಕಂ ಹಿತೇ ಘನ ರಾಜ್ಯಭಾರ ೧೦

ಅಮಿತ ತಪೋ ನಿಲಯಾತ್ರಿಸಮ್ಮಾನ್ಯ
ಅನಸೂಯಲಂಕೃತ ವೈದೇಹಿ ಕನ್ಯ ೧೧

ದಾರಿಕರ ಉದ್ರ ವಿರಾಧಮಹಾಂಗ
ತಾವಕ ದರ್ಶನೋತ್ಸುಕ ಶರಭಂಗ ೧೨

ಅಭಯ ಪ್ರಧಾನಮೋದ್ಧಿತ ಮುನಿಜಾಲ
ಯಮಿಗಣ್ಯ ಸುತೀಕ್ಷ್ಣದರುಶನ ಲೋಲ ೧೩

ಕಲಶಜಾರ್ಪಿತ ಖಡ್ಗ ತೂಣಿಶರಾಸ
ಘನತಮಭಿ ಪಂಚವಟಿ ನಿವಾಸ ೧೪

ಕಾರಿತ ಘೋರ ಶೂರ್ಪಣಖಿ ವಿರೂಪ
ಖರದೂಷಣಾದಿ ಖಂಡನಕೃತ ಕೋಪ ೧೫

ಪ್ರಬಲಮಾರೀಚ ನಿರ್ವಾಪಣ ಧೂರ್ಯ
ಪ್ರಾಕೃತ ಬಂಧಮೋಚನಗೈದವರ್ಯ ೧೬

ಚಂಡ ಕಬಂಧ ಸುಹರ ಕರವಾಲ
ಶಬರಿ ಸಮರ್ಪಿತ ವರಫಲ ಮೂಲ ೧೭

ಪಂಪಾತಟಾಕ ತೀರ ಕೃತ ವಿನೋದ
ಭಾನುಜ ಸಖ್ಯ ಸಂಜಾತ ಪ್ರಮೋದ ೧೮

ಪ್ರದರ ಕವಿತ ಬಾಲವೈರಿ ಸುತಾಂತ
ಪವನಜ ಕರ್ಣಿಕ ಸೀತಾ ವೃತ್ತಾಂತ ೧೯

ಅಬ್ಧಿವೇಲಾಕ್ರಾಂತ ವನಚರಸೇನಾ
ಅಘೋಷಿತ ವಿಭೀಷಣಾಭಯಪ್ರದಾನ ೨೦

ಜಲನಿಧಿಮದವಿದಳ ವಚಣಬಾಣ
ಜನಪಾವನ ಸೇತುಕರಣ ಧುರೀಣ ೨೧

ಹರಿವಿರಹಾರಿಕ ರಕ್ಷೋವಿನಾಶ
ಅನಿವಾರ್ಯ ಶೌರ್ಯ ಪರಿಭೂತಲಂಕೇಶ ೨೨

ಇಕ್ಷುಖಂಡಿತ ಕುಂಭಕರ್ನೋಗ್ರಕಾಯ
ಇಂದ್ರಜಿದ್ದಮನ ಸೌಮಿತ್ರಿ ಸಹಾಯ ೨೩

ದಾರುಣಮೂಲ ಬಲಾರ್ದನ ಕಾಂಡ
ದಶಕಂಠ ಜೀವವಿನೋದ ಪ್ರಚಂಡ ೨೪

ಅಜಶಿವ ಮುಖ ದೇವನುತ ಗುಣವಾರ
ಆರ್ತ ಜೀವಹ ತ್ವಂ ವಾನರವೀರ ೨೫

ಅತ್ಯೂರ್ಜಿತ ವಿಭೀಷಣ ಮಹಾಧಿಕಾರ
ಹವ್ಯವಾಹನ ಪಾಲಿತ ಮುನಿನಿಜದಾರ ೨೬

ಅತುಲ ಪುಷ್ಪಕ ಸಂಪ್ರಾಪ್ತಯೋಧ್ಯ
ಅನುಜಮಾತ್ಯಮಿತ್ರ ಪೌರಾರಾಧ್ಯ ೨೭

ಆಕಲಿತಾಧ್ರುವ ಪಟ್ಟಾಭಿಷೇಕ
ಅಖಿಲಲೋಕ ಸಂರಕ್ಷಣ ಜಾಗರೂಕ ೨೮

ಭಕ್ತಾವನಕೃತ ಮಾನು ಇವೇಷ
ಭೌವ್ಯದಯಾ ಪರಿಪೋಷಿತ ಶೇಷ ೨೯

ಸ್ಥಾವ್ಯ ದಿವ್ಯ ಕಲ್ಯಾಣ ಗುಣಾಲವಾಲ
ದಶರಥೋಕ್ತಿ ಪರಿಪಾಲನ ಶೀಲ ೩೦

೪೫೫

ಗೋವಿಂದ ಗೋಪಾಲಕಾ ಮಮಪ್ರಸೀದ
ಗೋವರ್ಧನೋದ್ಧಾರಕ ಪ

ನಂದಗೋಪ ಕುಮಾರಂ ಗೋಪಾಂಗನಾ
ಬೃಂದದುಕೂಲ ಚೋರಾ
ಸೌಂದರ್ಯ ಕೋಟಿ ಮದನಾ ಹರೆ ಶರ
ದಿಂದುಸಮಾನವದನಾ
ಮಂದರಧರ ಸಂಕ್ರಂದನ ಸನಕ ಸ
ನಂದನ ಮುನಿಮುಖವಂದಿತ ಚರಣಾ ೧

ಚಾಣೂರಮದದಮನಾ ಗೋಪಾಲಬಾಲ
ಬಾಣಗರಳದಮನಾ ವೇಣುನಾದ ವಿನೋದ ಕೋದಂಡಪಾ
ರೀಣ ಸಹಸ್ರಪಾದಾ ವೇಣಿ ಪಿಂಚ ಪುರಾಣ ಪುರುಷ ಪರ
ಮಾಣು ದೇಹಿ ವರಪಾಣಿ ಸುವಿನುತಾ ೨

ಅಂಗದ ಗುರುಖಂಡನಾ ಕಿಂಕಿಣಿ ಕಂಕ
ಣಾಂಗದ ಮಣಿಮಂಡನ
ಗಂಗ ಸಂಜಾತಾಭರಣಾ ಗೋಪಾಲ ಬಾಲಂಗನಾಂತ
ರಂಗಮುನೀಂದ್ರಭರಣಾ
ಅಂಗಜ ಜನಕ ವಿಹಂಗ ತುರಂಗ
ರಂಗದನುಜಹರ ಸಂಗರವಿಜಯಾ ೩

ಪಾಂಡವ ವರದಾಯಕಾ ಅಖಿ
ಳಾಂಡಕೋಟಿ ಬ್ರಹ್ಮಾಂಡನಾಯಕ

ಕಂಡೇಂದು ಸಮಫಾಲ ಗೋಪಾಲಬಾಲ ಕಂಡಿತೇಂದು ಜಾಲ
ಖಂಡಪರಶು ಕೋದಂಡದಳನ ಮಣಿ
ಕುಂಡಲರಾಜಿತ ಗಂಡಉಗ್ರಸ್ಥಳಾ ೪

ಕಾರುಣ್ಯ ಸದ್ಗುಣಯತಾ ಗಂಧರ್ವ ಸಿದ್ಧ
ಚಾರಣ ಸರಿತಾ ಶೌರೆ ಕೋಸಲಪುರವಾಸ ಸಂಸಾರ ಸಿಂಧು
ಕಾರಣ ಮಂದಹಾಸ
ರಾವಣ ವೈರಿ ನಿವಾರಣತಾಂಸ ವಿದಾರಣ
ಕುವಲಯ ಕಾರಣ ಪಾಹಿ ೫

೪೫೬

ರಂಗನಾಯಕ ಭುಜಂಗಶಯನ ಸಾರಂಗವರದ ಸಾರಕ್ಷಮಾಂ
ಪುಣ್ಯಚರಿತ ಕಾರುಣ್ಯ ಸಾಗರ ಹಿರಣ್ಯಾಚಲ ಸಂರಕ್ಷಮಾಂ ೧

ನೀರದೋಜ್ವಲ ಶರೀರ ನೀಳಾಧರಾ ರಮೇಶ ಸಂರಕ್ಷಮಾಂ
ಪಂಕಜಾಪ್ತ ಹರಿಣಾಂ ತನಯ಼ನ ಮಕ
ರಾಂಕ ಜನಕ ಸಂರಕ್ಷಮಾಂ ೨

ಬಾಧಿಕಾಮರ ವಿರೋಧಿಜನ ಬುಧಾರಾಧನೀಯ ಸಂರಕ್ಷಮಾಂ
ಸೂರಿಬೃಂದ ಸರಸೀರುಹಾಸನಪುರಾರಿವಂದ್ಯ ಸಂರಕ್ಷಮಾಂ ೩

ಬ್ರಾಜಿತೇಂದ್ರಮಣಿ ವೈಜಯಂತಿ ವಿರಾಜಮಾನ ಸಂರಕ್ಷಮಾಂ
ಪ್ರಾಣಿಪಾಲನಧುರೀಣ ಕೇಶವ ಪುರಾಣಪುರುಷ ಸಂರಕ್ಷಮಾಂ
ಶ್ರೀಧರ ಪ್ರಣವಾಸ್ವಾದ ಕೋಸಲಪುರಾಧಿನಾಥ ಸಂರಕ್ಷಮಾಂ ೪

೪೫೭

ರಂಗೇಶಾಯ ಜಯ ಮಂಗಳಂ ಸುಗುಣ
ಸಂಗತಾಯ ಶುಭಮಂಗಳಂ ಪ

ಶ್ರೀರಂಗೇಶ ಮಂದಸ್ಮಿತ ಮುಖಾರವಿಂದಾಯ
ಪ್ರಣವ ಮಂದಿರಾಯ ಜಯಮಂಗಳಂ
ನಿಜಾದಯಾಜಿತ ಕೋಟಿ ಕಂದರ್ಪಾಯ
ಧೃತಮಂದರಾಯ ಶುಭಮಂಗಳಂ ೧

ಫಾಲಾಕ್ಷ ಕಥಿತ ಪ್ರಭಾ ಆವಾಹನಾಯ ದೃತವನ
ನೂಲಿಕಾಯ ಜಯಮಂಗಳಂ
ಪರಿಪಾಲಿತ ಭಕ್ತಾಯ ಭಾವಿ ಜಿತಾಪಾಂಶು
ಮಾಲಿಕಾಯ ಶುಭಮಂಗಳಂ ೨

ಕಾವೇರಿ ಪರಿಪೂರಿತಸಾಲಾಯ
ರಮಾವರಾಯ ಜಯಮಂಗಳಂ
ರಕ್ಷೋವಿಭಂಜನಾಯ ಕೋಸಲ ನಗ
ರಾಕ್ಷ ಮಾವರಾಯ ಶುಭಮಂಗಳಂ ೩

೪೫೮

ಪರಿತೋಷಸರ್ವಸನ್ನುತಾ ಆತ ವಸುಧಾತನೆ ಯಾದವ
ಪವನ ತನೂಭವ ಮಾಮವ ಸ್ವರ್ಭಾನುಭಯಾವಹ
ಬಾಲ್ಯ ಪಲಪನ್ನಗಾಸನ ಪೂಜಾವಹ ಪ

ಘೋರ ಸಿಂಹಾಕಾರಾಂಬುಧ ಜಂಝ್ಝಾನಿಲ
ಗೋಷ್ಪದೀಕೃತ ಮಹಾರ್ಣವಾ
ಖಿಲ ಜಂಬುಮಾಲಿ ಪಣಿ ಮಯೂರ
ದಶಕಂಠ ಕಿಂಕರವನೀದವಾ ೧

ಕುಟಿಲ ಕಂಡನ ಚೈತ್ರಕ ಪನ್ನಗ ನಿಕುಂಭ ಕುಂಭಿ ಕಂಠೀರವಾ
ಅತಿಬಲಯೂಪಾ ಕ್ಷೀದಿತುವಿಶ ಧೂಮ್ರಾಕ ಕಾಲಕೂಟ ಭವಾ ೨

ತ್ರಿಶೀರ್ಷಾಗ್ನಿ ವಾರಿದ ದೇವಾಂತಕ
ತಿಮಿರ ತಾಮರಸಾಬಾಂಧವಾ
ಶ್ರೀಕೋಸಲನಗರೀಶ ದಾಸ ಸುರ ಸಿದ್ಧ ಸಾಧ್ಯವಿನುತಾರ್ಹವಾ ೩

ಪನ್ನಗಶಯನ ವಿನುತ ಶರಣ್ಯ ನಿನ್ನನೋಲೈಸಿದೆ ಅನ್ಯವನುಳಿದು
ಮನ್ನಿಸಿ ಮನದಿಷ್ಟಾರ್ಥವನಿತ್ತು ಸಲಹೆನ್ನ
ಚಿನ್ಮಯಾತ್ಮಕ ಸುಪ್ರಸನ್ನ ವೆಂಕಟಸ್ವಾಮಿ ೪

(ಆ) ಲಕ್ಷ್ಮೀ ಸ್ತುತಿ

೪೫೯

ಸೀತೆ ವಸುಮತಿ ಸಂಜಾತೆ ರಮಣೀಯ ಗುಣ
ಜಾತೆ ರಕ್ಷಿತ ಸರ್ವಭೂತೆ ಪರಿಪಾಹಿಮಾಂ ಪ

ಧನ್ಯೆ ವೈದೇಹಿರಾಜಕನ್ಯೆ ಪರಿವೃತ ಭಕ್ತದೈನ್ಯೆ ತ್ವ
ದನ್ಮಧ್ಯೆ ಮಾನ್ಯೆ ಪರಿಪಾಹಿಮಾಂ ೧

ಧೀರೆ ಸಂವರಾನಿ ಹೃದಯಧಾರೆ ಕರಧೃತ ಕಲ್ಹಾರೆ
ಘನೋಪಮಿತ ಕುಚಭಾರೆ ಪರಿಪಾಹಿಮಾಂ ೨

ಶಾಂತೆ ಕಾರುಣ್ಯ ಮನಸಿ ಸಾಮು
ನ್ಮಾತೆ ಶ್ರೀನಿಧಾನಲೋಚನಾಂತೆ
ಕೋಸಲ ರಮಣನ ಕಾಂತೆ ಪರಿಪಾಹಿಮಾಂ ೩

ಶ್ಯಾಮೆ ಲಾವಣ್ಯವಿಭವಸೀಮೆ ವದನನಿರ್ಜಿತಸೋಮೆ
ಸದಾನುಗತೆ ರಘುರಾಮ ಪರಿಪಾಹಿಮಾಂ ೪

ಶರದೆ ಲವಿತೆ ದಿವ್ಯಾಭರಣ ಸಮುಜ್ವರಿತೆ
ಕೋಸಲನಗರಿವಂತೆ ಸುರವನಿತಾಜನ ಸಂಯ್ಯುತೆ ೫

ಆಳ್ವಾರಾಚಾರ್ಯಸ್ತುತಿಗಳು

೪೬೦

ನಾಥವಾನಸ್ಮಿ ವಿಪ್ರನಾರಾಯಣೇನ ನಾಥವಾ
ರಂಗನಾಕೈಂಕರ್ಯರಚನ ಪರಾಯಣೇ ನಾಥವಾ ಪ

ದಿನದಿನ ಪ್ರವಾರ್ಧಿತ ತುಲಸೀವನ
ಘನ ಸುಮ ತರುಲತಿಕಾ ಮಿತಾನನ।
ವನ ಮಾಲಿಕಾಂಶಪ್ರಭವ ನಾದಿ
ತ ನಿಗಮೆ ನಾ ಶಾಂತಿ ನಿಧಾನೇ ನಾಥವಾ ೧

ಶರಣಾಗತರಕ್ಷಕ ರಂಗೇಶ್ವರ
ವಿರಚಿತವಿಸ್ಮಯ ಕರದೌತ್ಯೆನಾ–
ಹರಿಭಕ್ತ ಚೋಳ ನರವರವಂದಿತಪಾದ
ಸರಸಿಜನ ಬುಧಸಂಸ್ತುತ್ಯೇ ನಾಥವಾ ೨
ಅತುರಿತಾಶ್ರೀಮಾಲಿಕಾರಿ ದ್ರಾವಿಡ
ಕೃತಿರಚನಾಕಾರಿತ ಲೋಕೇನಾ
ಅತಿವಿಚಿತ್ರ ಮಾಲ್ಯ ಸಮರ್ಪಣ ಹಾ–
ರ್ಷಿತ ಕೋಸಲನಗರಿ ನಾಯಕೇನ ನಾಥವಾ ೩

೪೬೧

ಶ್ರೀ ಮಾನಸಚಿಂತಯ ಮೌನೀದಂ
ರಾಮಾನುಜಯತಿ ಕರುಣಾಸಾದಂ ಪ

ದ್ರುತ ಕಷಾಯ ವಸನ ತ್ರಿದಂಡಂ
ಶ್ರೀಪತಿಮತ ಸಂಸ್ಥಾಪನ ಶಾಂಡಂ ಅ.ಪ

ಉಪವೀತಾ ಶಿಖಾ ವಿರಾಜಮಾನಂ
ಉಲ್ಲಸಿತ ಊರ್ಧ್ವಪುಂಡ್ರ ವಿತಾನಂ
ಅಧಿಗತ ಯಾಮುನಿ ಸಂಪ್ರದಾಯಂ
ಅಮಿತದುರಿತಹರ ನಿಜನಾಮಧೇಯಂ ೧

ಗೋಷ್ಠೀಪೂರ್ಣ ಗುರುದಯಾಪಾತ್ರಂ
ಗುರುತರ ಕಳಾಧುನಿ ನಿಜಗೋತ್ರಂ
ಮಾನುಷವೇಷೋಪಗತಾನಂತಂ
ಮುನಿಯಾದವ ಪದಯುಗ ನಿಹಿತಾಸ್ವಾಂತಂ ೨

ವಿದಿತಾ ಶ್ರೀಭಾಷ್ಯಾದಿ ವಿರಚನಂ
ವೇದಸದೃಶ ಮಹಿಮೋಜ್ವಲ ರಚನಂ
ದ್ವಯಮಂತ್ರ ವಿರತರಣೀತ ಧುರೀಣಂ
ವಾಗ್ವಶಗತ ವೇದ ಶಾಸ್ತ್ರ ಪುರಾಣಂ ೩

ಪರವಾದಿ ಮಹಾಗಜಂ ಮೃಗರಾಜಂ
ಸರಸಹೃದಯ ಬುಧಜನ ಸಂರಾಜಂ
ಶ್ರೀಕೋಸಲ ಪುರವರ ಭಕ್ತವತಂಸಂ
ಕುಟಿಲಮತ ಮಹಾಂಧತಮಸಹಂಸಂ ೪

ತಾತ್ವಿಕ ಕೃತಿಗಳು

೪೬೨

ವಿಧಿನಿಷೇಧ ನಿನ್ನವರಿಗೆಂತೊ ಹರಿಯೆ
ನಾನಾವಿಧ ನರರಿವರಿಗೆ ಸರಿಯೆ ಪ

ವಿಧಿನಿನ್ನ ಸ್ಮರಣೇವಿನಾನಿಷೇಧ ವಿಸ್ಮೃತಿಯೆಂಬ
ವಿಧಿಯನೊಂದನೆಬಲ್ಲರಲ್ಲದೆ ಮತ್ತೊಂದು ಅ.ಪ

ನಡೆಯಲ್ಪಡುವುದೆಲ್ಲವು ಲಕ್ಷಪ್ರದಕ್ಷಣೆ
ನುಡಿವುದೆಲ್ಲ ಗಾಯಿತ್ರಿಮಂತ್ರಗಳು
ಕೊಂಡುದೆಲ್ಲವು ವಿಷಯೇಂದ್ರಿಯಜ್ಞ ಹೋಮ
ದೃಢ ಪ್ರಾಜ್ಞರೇನ ಮಾಡಿದರದೆ ಮರಿಯಾದೆ ೧

ಕಂಡಕಂಡದ್ದೆಲ್ಲ ನಿನ್ನ ಮೂರ್ತಿಗಳು ಭೂ
ಮಂಡಲಶಯನವೇ ನಮಸ್ಕಾರ
ಕಂಡಕಂಡಸುಕ್ರಿಯೆಯೆ ಯಜ್ಞಹೋಮ
ಮಂಡಿಯಾಗಿ ಬಿದ್ದುದೆ ಬಲಯುತರಿಗೆ ೨

ಮಿಂದುದೆ ಗಂಗಾದಿ ತೀರ್ಥಗಳು
ಬಂದುದೆ ಪುಣ್ಯಕಾಲ ಸುಜನರು
ನಿಂದುದೆ ಗಯೆ ವಾರಣಾಸಿ ಕುರುಕ್ಷೇತ್ರ
ಸಂದೇಹವೇಕೆ ಮದ್ದಾನೆ ಹೊದ್ದುದೆ ಬೀದಿ ೩

ಬಡಣ್ಣಯ್ಯಾಚಾರ್ಯರ ಕೃತಿಗಳು

(ಅಣ್ಣಾವಧೂತರು)

೪೬೩

ಮನದಿ ನಿನ್ನ ತಪವ ಮಾಡಿಸೊ ಮಾಧವ ಪ

ಅನುದಿನದಲದನೆ ಬಯಸುವೆ ಯಾದವ ಅ.ಪ

ಸ್ನಾನ ಸಂಧ್ಯಾದಿ ಸತ್ಕರ್ಮ ಮಾಡಿಸು ಬಿಡು
ಹೀನ ಸಂಗವ ಕುಡುಕುಡದಲಿರು
ಜ್ಞಾನಿ ಎಂದೆನಿಸು ಅಜ್ಞಾನಿ ಎಂದೆನಿಸು
ನಾನಂಜುವನಲ್ಲ ನಳಿನನಾಭ ೧

ನಿನ್ನಿಂದಲೇ ಸೃಷ್ಟಿ ನಿನ್ನಿಂದಲೇ ಸ್ಥಿತಿಯು
ನಿನ್ನಿಂದಲೇ ಪ್ರಳಯ ನಿಯಮಗಳು.
ನಿನ್ನಿಂದಲೇ ಜ್ಞಾನ ನಿನ್ನಿಂದಲಜ್ಞಾನ
ನಿನ್ನಿಂದಲೇ ಬಂಧಮೋಕ್ಷವೆಂಬ ವಿಧ ೨

ಪ್ರಿಯನೀನೆ ಸರ್ವಜಗಕ್ಕೆಂಬರ್ಥವಿನು ಕೃಷ್ಣ
ದಯಮಾಡಿ ನೀ ಪೇಳಿದಂತೆ ನಿತ್ಯ
ದಯವನೆ ಕೊಟ್ಟು ಭವಭೀತಿ ಹರಿಸಲು ಕೃಪಾ
ಮಯವಿಠಲವ್ಯಾಸ ವಿಧಿಬಂದೇ ವಿಭುವೇ ೩

೪೬೪

ವೀರಹನುಮ ಬಹು ಪರಾಕ್ರಮ ಸುಜ್ಞಾನವಿತ್ತು
ಪಾಲಿಸೆನ್ನ ಜೀವರೋತ್ತಮ ಪ

ರಾಮದೂತನೆನಿಸಿಕೊಂಡ್ಯೋ ನೀ ರಾಕ್ಷಸರ
ವನವನೆಲ್ಲ ಕೆಡಿಸಿ ಬಂದ್ಯೋ ನೀ
ಭೂಮಿಪುತ್ರಿಗೆ ಮುದ್ರೆಯಿತ್ತು ಜಗತ್ತಿಗೆಲ್ಲ
ಹರುಷವಿತ್ತು ಪ್ರಖ್ಯಾತನಾದ್ಯೋ ನೀ ೧

ಗೋಪಿಸುತನ ಪಾದಪೂಜಿಸಿ ಗದೆಯ ಧರಿಸಿ
ಕೌರವಕುಲವ ಸವರಿದ್ಯೋ ನೀ
ದ್ರೌಪದಿಯ ಮೊರೆಯ ಕೇಳಿ ಕಷ್ಟವೆಲ್ಲ
ಬಿಡಿಸಿ ಭೀಮರೂಪನೆನಿಸಿದ್ಯೋ ನೀ ೨

ಮಧ್ವಗೇಹದಲ್ಲಿ ಜನಿಸಿ ಬಾಲ್ಯತನದ
ಮಷ್ಕರಿಯ ರೂಪಗೊಂಡ್ಯೋ ನೀ
ವೇದ ವಿಠಲವ್ಯಾಸದಾಸನಾಗಿ ಭಾಷ್ಯವನೋದಿ
ಸನ್ಮುದದಿಂದ ಸಂತೆಬಿದನೂರಿನಲ್ಲಿ ನಿಂತ್ಯೋ ನೀ ೩

೪೬೫

ದಾವಾದಾರದ ದುರ್ವಿಷಯದಿ ನೀ ಮುಳುಗಿ ಹರಿಯುತಿದ್ದಿ ಪ

ಕೋವಿದರನು ಕೇಳೀಜೀವಕೆ ಸುಖವಾವಾವಾ ತೆರದಿ ಅ.ಪ

ಕಾಲನ ದೂತರು ಕರುಣುಳ್ಳವರೆ ಹಾಳಾಯಿತೆ ಯಮನೂರು
ಭಾಳದೂರ ಹೋಗ್ಯಾರೆ ಬಂದರೆ ನಾಳೆಹೇಳುವರ್ಯಾರು
ತಾಳೆಂದರೆ ತಾಳ್ವರೆ ರವಿಶಶಿಗಳು ಆಳ್ಗಳೆ ನಿನಗವರು
ಚಾಳಕತನವೇನು ಶ್ರುತಿಸ್ಮೃತಿಗಳಲಿ ಪೇಳ್ವರು ನಿನಗ್ಯಾರು ೧

ಮೃತ್ಯುವಿನಾ ಒಯ್ದುತಲೆಕುತ್ತಿಗೆ ಒತ್ತಿಬಿಟ್ಟರೆಂತೋ
ಕರ್ತೃಯಮನ ವ್ಯಾಪಾರಹೋಗಿ ಮತ್ತುತ್ತಮವಾಯ್ತೆಂತೋ
ಚಿತ್ರಗುಪ್ತರು ಇತ್ತಣ ವಾರ್ತೆಯ ಮರ್ತುಬಿಟ್ಟರೆಂತೋ
ಚಿತ್ತಕೆ ಚಂಚಲ ತಾ ಬ್ಯಾಡೆಂದೀ ಗುತ್ತಮ ಸಾವೆಂತೊ ೨

ಇಷ್ಟುಬವಣೆ ಮುಂದಿಟ್ಟುಕೊಂಡು ನೀ ಕೆಟ್ಟುಪೋಗಬ್ಯಾಡ
ದೃಷ್ಟಿಒಬ್ಬನಲ್ಲಿಟ್ಟರೆ ಜಗದಲಿ ಕಷ್ಟಾಹುದೆ ನೋಡ
ಥಟ್ಟನೆ ಈ ಭವನಷ್ಟಾಂಗವ ಹಾಂಗಿಷ್ಟು ಮಾಡೊಮೂಢ
ವಿಠಲವೇದವ್ಯಾಸನ ನಿಜವರನಿಷ್ಠೆಯ ಬಿಡಬ್ಯಾಡ ೩

೪೬೬

ಹರ್ದಂಬೇ ಪರವಾಹುವಾ ಮೈ ಹರ್ದಂಬೇ ಪರವಾಹುವಾ ಪ

ಅಂಧಾಹೋಕರ್ ಏಕೇಲಾಮೈಫಿರತಾಥಾ ಜಂಗಲ್
ಗುರು ಪೂಕರ ಕಾನ್ಮೇ ಆಖಿಯಾ ಪಾತಕಿಯಾಚೇದಿಲ್ ೧

ಅಪೇ ಖೋಲ್ಕರ್ ಕುಪೂಲ್ ದಿಲ್ ಕಾ ದಿಖಾಯಾವ್ಹೋಜಾಲ್
ಘುಸಿ ಹೋಕರ್ ಹಮ್ಕು ಕ್ಯಾ ಕರೇಗಾ ಜೀ ಕಾಲ್ ೨

ದಿಯಾ ಸದ್ಗುರು ಮುಝೇ ವಿಠಲವ್ಯಾಸ ನಾಮಕಾಭಾಂಗ್
ಛಾನ ಚಾನಕರ ಪೀಕೋ ಮೈಮಸ್ತಾನ್ ಹುವಾ ಜೀದಂಗ್ ೩

ಪರಿಶಿಷ್ಟ

ದಾಸರನ್ನು ಕುರಿತ ಹಾಡುಗಳು

೪೬೭

*ಸರಳಕವಿ ರಾಮಾರ್ಯ ಹರುಷದಿ
ವಿರಚಿಸಿದ ವರವೆಂಕಟೇಶನ
ಪರಮಲೀಲೆಯ ಚರಿತೆಯುನ್ನತ ಕೀರ್ತಿಯಾಂತಿಹುದು
ನರರ ಭಕ್ತಿಯ ಪೆರ್ಚಿಸಲ್ಕಿದು
ಕರದ ದಿವ್ಯಜ್ಯೋತಿಯಪ್ಪುದು
ಬರೆದಕವಿಯಾಸೂರಿವಂಶದ ಶರಧಿಚಂದಿರನು ೧

ಭರತಭಕ್ತಿ ಯೆನಿಪ್ಪ ಚರಿತೆಯ
ಬರೆದು ತಾನೇ ಭರತನಾಗಿಹ
ಪರಿಯ ತೋರುವ ಭಕ್ತಿಬೋಧಕ ಭಾವಭಂಗಿಯಲಿ
ಸರಸ ಸರಳತೆ ಲಲಿತಪದಗಳ
ಶರಧಿಯಪ್ಪುದು ಕಾವ್ಯಮಿದನಾ
ದರದಿ ಮುದ್ರಣಗೊಳಿಸಿ ಹಂಚಿದ ಕವಿಯು ಧನ್ಯನಲೇ ೨

ಕವಿ ವಿಶಿಷ್ಟಾದ್ವೈತತತ್ವೋ
ದ್ಭವನು ಹರಿಹರ ಭೇದರಹಿತನು
ನವರಸಾಲಂಕೃತಯುತ ಗೋಕರ್ಣ ಮಹಿಮೆಯನು
ಶಿವನ ಸನ್ನುತಿಗೈದು ರಚಿಸುತೆ
ಭುವಿಯ ರಕ್ಷಣೆಗೈವ ಶಿವಕೇ
ಶವರ ನಾಮವನೇಕ ವೊಬ್ಬನೆ ದೈವತಾನೆಂಬ ೩

ಭಕ್ತಿಕಾವ್ಯಂಗಳನು ರಚಿಸಿಹ
ಭಕ್ತನೀತನ ವಹ್ನಿಪುರಕಾ
ಸಕ್ತಿಯಾಂತ್ಯೆತರ್ಪುದೆಂದೆವು ವೇಂಕಟೇಶ್ವರನ
ಭಕ್ತಿಬೋಧಕ ಕೃತಿಗೆ ಮಂಗಳ

* ದಿನಾಂಕ ೧೦-೯-೧೯೯೯ ರಂದು ಬನ್ನೂರಿನಲ್ಲಿ ನಡೆದ ಪೌರಸನ್ಮಾನದಲ್ಲಿ ಆಸೂರಿಯವರಿಗೆ ಅರ್ಪಿಸಿದ ಪದ್ಯರತ್ನಮಾಲಿಕ. ರಚಿಸಿದವರು ಹೆಚ್. ಸೂರ್ಯನಾರಣಪ್ಪ.

ದುಕ್ತಿಯುತ್ಸವಕಾಗಿ ನಾವತಿ
ಭಕ್ತಿ ಸುಸ್ವಾಗತವನೀವೆವು ಕೈಗಳಂ ಮುಗಿದು ೪

ಕೃತಿಯ ರಚನೆಗೆ ಮೋಹಗೊಂಡೆವು
ಕೃತಿಯನೋದಿಸಿ ಕೇಳಿ ನಲಿದೆವು
ಕೃತಿಯ ಬರೆದಾ ಕವಿಯ ಭಕ್ತಿಗೆ ಮನವ ತೆತ್ತಿಹೆವು
ಕೃತಿಯ ಕರ್ತಗೆ ಮಣಿದು ಮಹದುಪ
ಕೃತಿಯ ಗೈದಿಹಿರೆಂಬುದಲ್ಲದೆ
ಕೃತಿಯ ಬರೆದವಗಾವಭಾಗ್ಯವನಿತ್ತು ತಣಿಸುವೆವು ೫

ಸರಳ ಕವಿಯೆಂದೆನಿಸಿ ರಂಜಿಪ
ಪರಮಭಕ್ತನಿಗಿಂದು ವಂದಿಸಿ
ನೆರೆದ ಪಂಡಿತ ಪೌರಸಭಿಕರ ನೇಮಗಳಪೊತ್ತು
ಹರಿಯ ಪಾದಂಗಳಿಗೆ ವಂದಿಸಿ
ವರಕವಿಗೆ 'ಕವಿರತ್ನ' ನೆನ್ನುವ
ಬಿರುದನೀವೆವು ಸರಳಕವಿವರನಿದನು ಕೈಗೊಳಲಿ ೬

ಗಮಕಕೋಕಿಲನೆನಿಪ ಕೌಶಿಕ
ನಮಲಕೃತಿವಾಚನವಗೈಯಲು
ಅಮಿತಸಂತಸದಿಂದ ವಿವರಿಸುತಂತರಾರ್ಥಗಳ
ಕ್ರಮದಿ ಪೇಳಲು ಸೂರ್ಯನಾರಣ
ನಮಿತ ಹರ್ಷಾಂಬುಧಿಯೊಳಿಳಿಯುತೆ
ರಮೆಯ ರಮಣನ ಪಾದಕೆರಗಿದ ಸರಳಕವಿರತ್ನ ೭

ಆ ಮಹಾಮುನಿ ಸೂತನಂದದಿ
ರಾಮಚರಿತಾಮೃತವ ರಚಿಸುತೆ
ಕಾಮಿತಾರ್ಥವನೀವ ವೇಂಕಟಪತಿಯ ಚರಿತೆಯನು
ಆ ಮಹೇಶ್ವರನಾತ್ಮಲಿಂಗವು

ಭೂಮಿಗಿಳಿದಾಕಥೆಯ ಕಾವ್ಯವ
ನೀ ಮಹಾಮತಿ ರಚಿಸಿ ಮುಕ್ತಿಯ ಮಾರ್ಗವಿಡಿದಿಹನು ೮

ಸರಳಕವಿರತ್ನನಾಸೂರಿ ರಾಮಾರ್ಯತಾಂ
ವಿರಚಿಸಲಿ ಸದ್ಭಕ್ತಿ ಕಾವ್ಯಗಳನೋರಂತೆ
ಸಿರಿಕಾಂತನೀತಂಗೆ ದೀರ್ಘಾಯುರಾರೋಗ್ಯಗಳ ಕುಡಲಿ ಕಡುಕೈಪೆಯೊಳು
ನೆರೆ ಗಮಕ ಕಲೆಯ ಸತ್ಕೀರ್ತಿ ವಿಸ್ತರಗೊಳಲಿ
ಸಿರಿಗನ್ನಡಂ ಚಿರಂ ಬಾಳ್ಗೆ ಸುಕ್ಷೇಮದಿಂ
ವರವಹ್ನಿಪುರದರಸನೆಲ್ಲರಂ ರಕ್ಷಿಸಲಿ ಭದ್ರಂ ಶುಭಂ ಮಂಗಳಂ ೯

೪೬೮

*ಸುದಿನ ದುರ್ದಿನಮೆಂಬುದವರವರ ಸಂಪ್ರಾಪ್ತಿ
ಸುದಿನಮದು ಜನಿಸಿದೊಡೆ ದುರ್ದಿನಮದಳಿಯಲ್ಕೆ
ವಿಧಿಲೀಲೆ ಜನನಮರಣಂಗಳ್ಳೆ ರಕ್ತಾಕ್ಷಿ ಮಧುಮಾಸ ಸಿತಪಕ್ಷದ
ಸದಮಲಾನ್ವಿತಮಪ್ಪ ತಾರಗೆಪುನರ್ವಸೂ
ವಿಧುವಾರ ಪೂರ್ವಾಹ್ನಮಾಸೂರಿ ನಾಮಮೆದಿ
ರೆದ ರಾಮಸ್ವಾಮಿಯ್ಯೆಂಗಾರ್ಯನೇರಿದಂ
ಮಾಂಗಿರಿಯ ರಂಗಪದಮಂ ೧

ಬಂಧುಜನಮಿತ್ರರ್ಗೆ ದುರ್ದಾಂತ ದುರ್ದಿನಂ
ಸಂದಮಾಂಗಿರಿರಂಗಪದನಳಿನಮಂ ಸೇರ್ದ
ಸಿಂಧುಪುತ್ರಂ ಬಳಗದಾಸೂರಿಯಾತ್ಮಮದು ಚಿರಶಾಂತಿಯಂಪಡೆಯಲ್ಕೆ
ಚೆಂದವಹ ಕಮಲಮದು ಕಮನೀಯ ಕಾಂತಿಯಿಂ
ದಂದವಡೆದಿರ್ಪುದೇ ನಿಡುಗಾಲಮದು ಬಳಿಕ
ಕುಂದದಿರದೇಂ ನಿಜದೆಯಾದರ್ಶಜೀವನಂ ಶ್ರೀರಕ್ಷೆಯಲ್ತೆ ನಮಗೆ ೨

* ದಿನಾಂಕ ೯-೪-೧೯೮೪ ರಂದು ದೈವಾಧೀನರಾದ ಆಸೂರಿಯವರನ್ನು ಕುರಿತು ಗಮಕಿ. ಆರ್. ಶಂಕರನಾರಾಯಣ್ ಅವರು ರಚಿಸಿದ್ದ ಚರಮಗೀತ ಚರಮ ಪಂಚರತ್ನ ಪದ್ಯ ಮಾಲಿಕೆ

ವರಮಹಾಲೆಕ್ಕಿಗರ ಶಾಖೆಯೊಳ್ ಪರಿಣತಿಯ
ಕರಣಿಕಂ ತಾನಾಗಿ ವಿಶ್ರಾಮ ಜೀವನದೆ
ಸರಸಕಾವ್ಯಾದಿ ಪದರಚನೆಯಿಂ ಗಮಕಿಗಳ ತಣಿಸಿಯಾನಂದಮುಣಿಸಿ
ಸಿರಿಲೋಲ ಸುವಿಲಾಸ ಗೋಕರ್ಣಮಹಿಮೆಯಂ
ಭರತಮಾರುತಿಭಕ್ತಿಯಾಳ್ವಾರುವೈಭವಂ
ಸರಿಸದಲಿ ಕಾವ್ಯಪಂಚಕ ರಚಿಸಿ ಪಂಚತ್ವವೈದಿದರ್ ಧನ್ಯರಲ್ತೆ ೩

ಕಿವಿಚುರುಕು ನಿಡುಮೂಗು ದೃಷ್ಟಿಪಾಟವಹೊಳಪು
ಸವಿನೆನಪಿನಂಗಳಂ ಬೇವುಬೆಲ್ಲದಪದರು
ರವಿಯೆಡೆಗೆ ನಿಟ್ಟಿಯಿಸಿ ಧೀರ್ಘಾಯುವೆಂದೆನಿಸಿ, ಶರದಶಕಗಳ ಕಳೆದನು
ಇವಗೆ ಮಣಿವುದೆ ಬೆಲ್ಲ ಹರಿಚಿಂತನೆಯಬಲ್ಲ
ದಿವರಾತ್ರಿ ಸಂತೃಪ್ತಿ ಮಾಳ್ಪಕಾರ್ಯಂಗಳಲಿ
ತವಕದಿಂ ಸುತ್ತುವರೆದಿರ್ಪರ್ಕೈ ಹಿರಿತನದ ನಮ್ರತೆಗೆ ಬೆರಗಾಗುತ ೪

ಸುತರತ್ನರೀರ್ವರಂ ಸುತೆಯರಂ ಸೊಸೆಯರಂ
ಹಿತಮಪ್ಪಮೊಮ್ಮಂದಿರಂ ನೆಂಟರಿಷ್ಟರಂ
ಮಿತವಚನದಿಂ ನಲಿಸಿ ಮನದಳಲಿಗೆಡೆಮಾಡಿ ವೈಕುಂಠಮಂ ಸೇರಿದೈ
ಶತಪತ್ರಲೋಚನದ ಪರಿಚರ್ಯೆಯಂ ಗೈದು
ಶತವರುಷಮಂ ತುಂಬುಜೀವನವ ತಾಳ್ದ ಸ
ತ್ಪಥವಿಡಿದು ನಿನಗಾತ್ಮಶಾಂತಿಯುಂಟಾಗಲ್ಕೈ ತವಕುಲಂ ವರ್ಧಿಸಿರಲ್ಕೈ ೫

ಅನುಬಂಧಗಳು

ಅನುಬಂಧ-೧

ಕಠಿಣ ಶಬ್ದಗಳ ಅರ್ಥ

ಅಂಗಜ = ಮನ್ಮಥ

ಅಂಜಲಿ = ಕೈ

ಅಂಬರ = ಬಟ್ಟೆ

ಅಂಬುದಶ್ಯಾಮ= ನೀಲವರ್ಣ (ಅಂಬುದ=ಮೋಡ)

ಅಘ = ಪಾಪ

ಅಜಗರ = ಹೆಬ್ಬಾವು

ಅಣುಗ = ಮಗ, ಪ್ರೀತಿಪಾತ್ರ

ಅಣುಗಿ = ಪ್ರಿಯೆ, ಮಗಳು

ಅನಿಶ = ನಿತ್ಯ, ಅಧಿಕ

ಅಪ್ಪಣೆಗಡಿಸು = ಒಪ್ಪಿಸು

ಅರವಿಂದಾನನೆ = ಕಮಲಮುಖಿ

ಅರಿ = ಶತ್ರು

ಅರುಳು = ಕೃಪೆ

ಅವನಿ = ಭೂಮಿ

ಅಹಿ = ಹಾವು

ಆಖ್ಯ = ಸಖಿ, ಸ್ನೇಹಿತ

ಆರ್ಭಕ = ಅರ್ಭಟಿಸುವವನು, ಯಜಮಾನ, ವೀರ

ಆತಪತ್ರ = ಕೊಡೆ, ಆಶ್ರಯ

ಆನತ = ಶರಣಾದ, ಬಾಗಿದ

ಆಪನ್ನರು = ಭಕ್ತರು, ಆರ್ತರು

ಆಲು = ಹಾಲು

ಆಹವ = ಯುದ್ಧ

ಇನ್ನೆಗಂ = ಇಲ್ಲಿಯವರೆಗೆ

ಇಂದೀವರ = ನೀಲಿನೈದಿಲೆ, ಕನ್ನೈದಿಲೆ

ಇನ = ಸೂರ್ಯ

ಇದ = ವಿಧ, ವಿಧಾನ, ರೀತಿ

ಈಪ್ಸಿತ = ಆಸೆಪಟ್ಟು

ಈಯು = ಕೊಡು

ಉಡುಪತಿ = ಚಂದ್ರನಿಗೆ ಒಡೆಯ, ವಿಷ್ಣು

ಉತ್ಸುವ = ಉತ್ಸವ

ಉದಧಿ = ಸಮುದ್ರ

ಉಪಕರಣ = ಪೂಜಾಸಲ ಕರಣೆಗಳು

ಉಪೋಷ್ಯ = ಉಪವಾಸ (?) (ಆಪೋಷನದ ವಿರುದ್ಧ ಪ್ರಯೋಗ?)

ಉರಗೇಂದ್ರ = ನಾಗರಾಜ, ಆದಿಶೇಷ

ಉರೆ = ಅಧಿಕವಾಗಿ

ಉಲಿ = ಧ್ವನಿ

ಊಳಿಗ = ಸೇವೆ, ಶರಣಾಗತಿ
ಎರಗು = ನಮಸ್ಕರಿಸು
ಎಲರು = ಕಂಪು, ಗಾಳಿ
ಏಣಲೋಚನೆ = ಹರಿಣಾಕ್ಷಿ
ಏಣ = ಜಿಂಕೆ
ಏಳೋದು = ಹೇಳುವುದು
ಐದು = ಹೊಂದು, ಸೇರು
ಒರಂತೆ = ಶೋಭಿಸುತ್ತ
ಒಲಂಬನ = ಅವಲಂಬನ, ಆಶ್ರಯ, ಸೇವೆ
ಓವರಿ = ಒಳಮನೆ, ದೇವರಮನೆ
ಔಜುಬಂದಿ = ತೋಳ್ಬಂದಿ, ಆಭರಣ
ಕಂಜ = ತಾವರೆ
ಕಂಜನಯನ = ತಾವರೆಗಣ್ಣು, ಕಮಲಾಕ್ಷ
ಕಂಜನಾಭ = ಕಮಲನಾಭ
ಕಂತುಕ = ಮನ್ಮಥತ್ವ, ಆಸೆ, ಕಾಮ
ಕಡವರ = ಚಿನ್ನ
ಕಡುಗು = ಶಕ್ತಿಗುಂದು
ಕದಂಬ = ಮಿಶ್ರಬಣ್ಣದಕಾಂತಿ
ಕದಿರ = ಸೂರ್ಯ
ಕನ್ನೆ = ಕನ್ಯೆ, ಯುವತಿ
ಕನ್ನ = ಕಿಂಡಿ
ಕಮಠ = ಕೂರ್ಮ
ಕಮನೀಯ = ಸುಂದರ
ಕಮನೀಯವನ =ಸುಂದರವಾದ ಉದ್ಯಾನ, ಬೃಂದಾವನ

ಕರ = ಕೈ
ಕರವಾಳ = ಕತ್ತಿ
ಕರಿ = ಆನೆ
ಕಲ್ಪಭೂಜ = ಕಲ್ಪವೃಕ್ಷ
ಕವೇರಜ = ಬ್ರಹ್ಮ
ಕವಾರಂ = ತಾವರೆ
ಕಳತ್ರ = ಹೆಂಡತಿ
ಕಾಮಪಾಲ = ಕಾಮಧೇನುವಿನ ರಕ್ಷಕ (ಪರಶುರಾಮ)
ಕಾಮ್ನಷ್ಟ = ಮನ್ಮಥನ ತಂದೆ,ವಿಷ್ಣು
ಕಾಮಿತ = ಬಯಕೆ
ಕುಂಜ = ಲತಾಗೃಹ
ಕುಂದದಿ = ದೋಷದಿಂದ, ಕುಂದಿನಿಂದ
ಕುಂದನವನ = ಮಲ್ಲಿಗೆಯವನ
ಕುಂಭಜ = ದ್ರೋಣ
ಕುಃ = ಕೆಟ್ಟದ್ದು
ಕುಕ್ಷಿ = ಹೊಟ್ಟೆ, ಶರೀರ
ಕೇಣಿ = ಪ್ರತಿ, ಏಣಿ, ಭಾಗ
ಕುತ್ತ = ರೋಗ
ಕೇಸರಿ = ಸಿಂಹ
ಕೈರವ = ಬಿಳಿಯ ನೈದಿಲೆ
ಕೊರಡು = ಮರ, ಜಡ
ಕೋದಂಡ = ಅಯುಧ, ಬಿಲ್ಲು
ಕೌಳಿ = ಮೋಸ
ಕ್ಷಿತಿ = ಭೂಮಿ
ಖಲಾಳಿ = ದುಷ್ಟಸಮೂಹ
ಖೇಚರ = ಗಂಧರ್ವ, ದೇವತೆ
ಗಂಗಾಳ = ತಟ್ಟೆ

ಗರಳ = ವಿಷ
ಚಂಚರೀಕ = ದುಂಬಿ, ಭ್ರಮರ
ಚರಣ = ಪಾದ
ಚಾಪಾಂಬು = ಬಿಲ್ಲುಬಾಣ
ಚಾಪ = ಬಿಲ್ಲು
ಚಾರು = ಸುಂದರ
ಛೇದಿಸು = ಸಂಹರಿಸು
ಜಗುಡು = ಜಗುಳು, ಜಾರು
ಜನ್ನ = ದವನ
ಜವ = ಯಮ, ಸಾವು
ಜಾರು ಜಲ್ಲರಿ = ಬಲೆಯಂತಿರುವ ತೆಳುವಾಗಿರುವ ಕುಚ್ಚಗಳು
ಜೀಮೂತ = ಮೋಡ
ಜೀಯ = ಸ್ವಾಮಿ
ಜೊನ್ನ = ಜ್ಯೋತ್ಸ್ನಾ, ಬೆಳದಿಂಗಳು
ಠಕ್ಕು = ಮೋಸ
ಡಂಭ = ಆಡಂಬರ
ತಕ್ರ = ಮಜ್ಜಿಗೆ, ಮೊಸರು
ತರಣಿ = ಸೂರ್ಯ
ತವಮಣಿ = ಅಕ್ಷಯಮಣಿ ತವನಿಧಿಯಂತೆ
ತಾಮರಸ = ತಾವರೆ
ತುರು = ಹಸು, ಗೋವು
ತೆಪ್ಪ = ತೆಪ್ಪೋತ್ಸವಕ್ಕೆ ಸಿದ್ಧಮಾಡುವ ನೀರಿನ ಮೇಲೆ ತೇಲುವ ಅಟ್ಟಣಿಗೆ
ತೇರೈಸು = ತೇರ್ಗಡೆ, ಗೆಲುವು
ತೋಯಜ = ತಾವರೆ
ತೋಷಿಣಿ = ಪ್ರಿಯ, ಸಂತೋಷ=ದಾಯಕ
ದಧಿ = ಮೊಸರು
ದನುಜ = ರಾಕ್ಷಸ
ದರಹಾಸ = ಮಂದಹಾಸ, ಮುಗುಳುನಗೆ
ದಾಂತ = ಸಂಯಮ
ದಿವಿ = ಸ್ವರ್ಗ
ದಿವಿಜ = ದೇವತೆ, ಬ್ರಾಹ್ಮಣ,ಭಕ್ತ
ದಿವಿಯ = ದಿವ್ಯ
ದುಕೂಲ = ಬಟ್ಟೆ
ದುಡಿಗೇಡಿ = ಸೋಮಾರಿ
ದುರಿತ = ಕಷ್ಟ
ದುಶ್ಶೀಲ = ಕೆಟ್ಟ ರೀತಿ, ದುರಾಲೋಚನೆ
ಧವ = ಗಂಡ, ಪತಿ, ಒಡೆಯ
ನಾಡೆ = ಅಧಿಕ, ಸುಂದರ
ನಿಕರ = ಸಮೂಹ
ನಿಶಾಕ = ರಾಕ್ಷಸರು, ರಾತ್ರಿವೇಳೆ ಸಂಚರಿಸುವವರು.
ನಿಶಿಚರ = ನಿಶಾಚರ, ರಾಕ್ಷಸ
ನಿಷ = ಕಿರಾತ, ದುಷ್ಟ
ನುತ್ಯ = ನುತಿಸಲ್ಪಡುವ
ನೇಸರು = ಸೂರ್ಯ
ಪಂಕೇರುಹ = ಕಮಲ
ಪಂಗು = ಕುಂಟು, ಹೆಳವು
ಪಕ್ಷಿರಾಜ = ಗರುಡ
ಪತಿತ = ಪಾಪಿ

ಪರೇಶ = ವಿಷ್ಣು
ಪರೆ = ಬೆಳಕು
ಪ್ರಣವಾಕಾರ = ಓಂಕಾರ
ಪ್ರಶಾಂತನಿಲಯ = ಸಾಯಿಬಾಬ
ಪಾಡಗ = ಕಡಗದ ರೀತಿಯ ಆಭರಣ
ಪಾತಕ = ಪಾಪ
ಪಾರುಗಾಣಿಸು = ಪರಿಹರಿಸು
ಪಾಹಿ = ಶರಣು
ಪಿನಾಕ = ಶಿವ
ಪುಂಜವನ = ಗುಂಪಾಗಿರುವ ಉದ್ಯಾನ
ಪುಂಡರೀಕ = ಬಿಳಿಯತಾವರೆ
ಪುನ್ನಾಗ = ಶ್ರೇಷ್ಠವಾದ ಆನೆ
ಪುಲ್ಲಲೋಚನ = ಹರಿಣಾಕ್ಷ (ಜಿಂಕೆಯ ಕಣ್ಣಿನವನು)
ಪುಳಿನ = ಮರಳಿನದಂಡೆ
ಪೊಂಗಲು = ದೇವರಿಗೆ ಮಾಡುವ ನೈವೇದ್ಯ,
ಪೊಡಮಡು = ನಮಸ್ಕರಿಸು
ಪೊಡವಿಚ = ಅನಾಗರೀಕ, ಮೂರ್ಖ
ಪ್ರೋಕ್ತ = ಸ್ತುತಿಸಲ್ಪಟ್ಟ
ಫಣಿ = ಹಾವು
ಬಟ್ಟಿದ = ಚೆನ್ನಾಗಿರುವ
ಬಧಿರ = ಕಿವಡ
ಬಲೆ = ಸಂಸಾರ
ಬಸಿವಲೆ = ಬಸಿದಬಲೆ– ಖಾಲಿಪಾತ್ರೆ
ಬಾನ್ದಳದ ಬುಡ = ಬದುಕು, ಜೀವನ
ಬಿಸ = ವಿಷ, ನೀರು
ಬಿಸಜ = ತಾವರೆ
ಬೀನ = ವೀಣಾ?
ಬುಧ = ಪಂಡಿತರು
ಬೆಳಕು = ಜ್ಞಾನ, ದೈವ
ಬೇವನು = ಸಂಕಟಕ್ಕೊಳಗಾಗುವವನು (ಬೇಯು)
ಬೇಳಲೆ = ಮರುಳಾಗಿ, ದಡ್ಡನಾಗಿ
ಭಂಜಕ = ಭಕ್ಷಕ
ಭಜಕರು = ಭಕ್ತರು
ಭಜ್ಜರ =
ಭವಬಂಧನ = ಸಂಸಾರಬಂಧನ
ಭಾಸರ = ಭಾಸುರ, ಸುಂದರವಾದ
ಭ್ರಾತಾ = ಸಹೋದರ
ಭೂಜ = ವೃಕ್ಷ
ಭೂಮಿಜಾಪತೆ = ಸೀತಾಪತಿ, ರಾಮ
ಭೃಂಗಕುಂತಳ = ಗುಂಗುರುಕೂದಲು
ಭೃತ್ಯ = ಸೇವಕ
ಮಡಿ = ಶುಭ್ರ
ಮನ್ದಿರ = ಶರೀರ, ದೇಹ, ಮನಸ್ಸು, ನಿವಾಸ
ಮಬ್ಬು = ಮೋಹ, ಮೋಡಿ, ಮಂಕು, ಅಜ್ಞಾನ
ಮರಕತ = ನವರತ್ನಗಳಲ್ಲಿ ಒಂದು
ಮರಾಳ = ಹಂಸ
ಮಾನಸದಿ = ಮನಸ್ಸಿನಲ್ಲಿ

ಮಾನಿನಿ = ಗೌರವಸ್ಥೆ
ಮಾರ = ಸುಂದರ, ಮನ್ಮಥ
ಮಿಸುನಿ = ಚಿನ್ನ
ಮಿಹಿರ = ಸೂರ್ಯ
ಮುದಂದೇಹಿ = ಮುದ, ಸುಖ, ಮುಕ್ತಿಯನ್ನು ನೀಡು
ಮುರಳಿ = ಕೊಳಲು
ಮೌನಿ = ಮುನಿ, ಯತಿ
ರಜ್ಜೆ = ಹಟ, ಗೀಳು
ರದನ = ಹಲ್ಲು, ದವಡೆ
ರವ = ಧ್ವನಿ
ರಸನೆ = ನಾಲಿಗೆ
ರಾಕೇಂದು = ಪೂರ್ಣಚಂದ್ರ
ರಾಜಿ = ಹೊಂದಾಣಿಕೆ
ರಾಜೀವ = ತಾವರೆ
ರುಂದ್ರ = ವಿಸ್ತರವಾದ
ರೋಮ್ಯ = ವರಹಾವತಾರ
ಲೋಚನ = ಕಣ್ಣು
ವನರುಹ = ತಾವರೆ
ವರೂಥ = ರಥ
ವಾಡಿಗ = ಬಿಡಾರ, ಗುಂಪು
ವಾರಣ = ಆನೆ, ಗಜೇಂದ್ರ
ವಾರಾಶಿ = ಸಮುದ್ರ
ವಾರಿ = ಸಮುದ್ರ, ನೀರು
ವಾರಿಜ = ಕಮಲ
ವಾರಿಧಿ = ಸಮುದ್ರ
ವಿತ್ತ = ಹಣ, ಐಶ್ವರ್ಯ
ವಿಧು = ಚಂದ್ರ
ವಿನತ = ನಮ್ರನಾದ
ವಿಸರ = ಹಬ್ಬು, ಸುಗಂಧ (?)

ವೂದಿ = ಬೂದಿ
ವೇಣು = ಕೊಳಲು, ಕೃಷ್ಣ
ವೇತ್ರ = ಬೆತ್ತ, ಕೋಲು, ಶಿಕ್ಷಕ
ವೇಷ್ಟಿ = ವಸ್ತ್ರ
ಶತಪತ್ರ = ತಾವರೆ
ಶಮಿ = ಬನ್ನಿಮರ
ಶರಣರು = ಭಕ್ತರು
ಸಂದಾತೆ = ಒಡತಿ
ಸಟೆ = ಸುಳ್ಳು
ಸಾಜ = ಸಹಜ, ನಿಜ, ನೇರ
ಸಾಮಜ = ಆನೆ
ಸಾರಸನಾಭ = ಪದ್ಮನಾಭ
ಸಾಸಿರ = ಸಾವಿರ, ಅನೇಕ
ಸಿಕ್ಕಲು = ಮನಸ್ತಾಪ
ಸುಕರ = ಸುಲಭ
ಸುಮನಸ = ದೇವತೆ
ಸುರಭೂಜ = ಕಲ್ಪವೃಕ್ಷ
ಸೂಕರ = ವರಾಹ
ಸೂಡು = ಮುಡಿ
ಸೂತ = ಸಾರಥಿ
ಸೂದನ = ನಾಶಕಾರಕ
ಸೂರಿ = ವಿದ್ವಾಂಸ
ಸ್ಮರ = ಮನ್ಮಥ, ಸೌಂದರ್ಯ
ಸ್ಥಾಣು = ಶಿವ, ಸ್ಥಿರ,
ಹರಣ = ನಾಶ
ಹರಿ = ಗಾಳಿ, ಆನೆ
ಹಾಲಾಹಲ = ವಿಷ
ಹೂರ್ಜಿ = ಕುರ್ಜು, ಸಣ್ಣತೇರು, ಬಟ್ಟೆಯತೇರು
ಹೇಮಾಂಬರ = ಪೀತಾಂಬರ

ಅನುಬಂಧ–೨

ಟಿಪ್ಪಣಿಗಳು

೮

ಇಲ್ಲಿರುವ 'ದುರುಳ ಭಸ್ಮಾಸುರ ಉರಿಹಸ್ತ ಪಡೆದಂದು', ಎಂಬಲ್ಲಿ ಮೂಲದಲ್ಲಿ 'ವೃತ್ರಾಸುರ' ಎಂದಿದೆ. ಆದರೆ ವೃತ್ರಾಸುರನ ಸಂಗತಿಗೂ ಈ ಸಾಲುಗಳ ಪ್ರಸಂಗಕ್ಕೂ ಹೊಂದಾಣಿಕೆಯಾಗುವುದಿಲ್ಲವಾದ್ದರಿಂದ ಸಾಲುಗಳಲ್ಲಿ ವ್ಯಕ್ತವಾಗುವ ಸನ್ನಿವೇಶಕ್ಕೆ ಅನ್ವಯವಾಗುವ ಭಸ್ಮಾಸುರನನ್ನು ಇಲ್ಲಿ ಊಹಾಪಾಠವಾಗಿ ಸ್ವೀಕರಿಸಿದೆ.

ವೃತ್ರಾಸುರ ಇಂದ್ರನೊಂದಿಗೆ ಹೋರಾಡಿದ ಮಹಾ ಪರಾಕ್ರಮಿ ದಾನವ. ಇಂದ್ರ ಹಲವು ಬಾರಿ ಇವನೊಡನೆ ಹೋರಾಡಿ ಕೊನೆಗೂ ಸೋಲಿಸಲಾಗದೆ ಸ್ನೇಹದಿಂದ ವರ್ತಿಸುತ್ತ ಒಮ್ಮೆ ಸಮುದ್ರ ತೀರದಲ್ಲಿ ವಿಹರಿಸುತ್ತಿರುವಾಗ ವಾಸುದೇವನನ್ನು ನೆರವಿಗೆ ಧ್ಯಾನಿಸುತ್ತ ನೊರೆಯ ರಾಶಿಯನ್ನು ವೃತ್ರನ ಮೇಲೆ ಎಸೆಯಲು ಆ ನೊರೆಯ ಮೂಲಕ ವಾಸುದೇವ ಅವನನ್ನು ಸಂಹರಿಸುತ್ತಾನೆ, ಎಂದೂ ದೇವತೆಗಳ ಪ್ರಾರ್ಥನೆಯ ಮೇರೆಗೆ ದಧೀಚಿ ಪ್ರಾಣತ್ಯಾಗ ಮಾಡಿ ನೀಡಿದ ಮೂಳೆಯಿಂದ ಬ್ರಹ್ಮ ವಜ್ರಾಯುಧವನ್ನು ಮಾಡಿ ಇಂದ್ರನಿಗೆ ಕೊಡುತ್ತಾನೆ. ಅದರಿಂದ ವೃತ್ರ ಹತನಾಗುತ್ತಾನೆ ಎಂದೂ ಈ ಕಥೆಗಳು ಹೇಳುತ್ತವೆ. ವಜ್ರಾಯುಧದಿಂದ ಹತನಾದ ನಂತರ ಅವನ ಬಳಗವಾದ ಕಾಲೇಯರೆಂಬ ರಾಕ್ಷಸರೆಲ್ಲ ಸಮುದ್ರದಲ್ಲಿ ಆಶ್ರಿತರಾದಾಗ ದೇವತೆಗಳು ಅಗಸ್ತ್ಯನ ನೆರವನ್ನು ಪಡೆದು ಅವನಿಂದ ಸಮುದ್ರದ ನೀರನ್ನೆಲ್ಲ ಹೀರುವಂತೆ ಮಾಡಿಸಿ ರಾಕ್ಷಸರನ್ನು ಸಂಹರಿಸುತ್ತಾರೆ. ಇಂದ್ರನಿಗೆ ಇವನ ಸಂಹಾರದಿಂದ 'ವೃತ್ರಹನ್' ಎಂಬ ಹೆಸರೂ ಬರುವಷ್ಟರ ಮಟ್ಟಿಗೆ ಇಂದ್ರ–ವೃತ್ರರ ಯುದ್ಧಗಳು ವೇದ–ಭಾರತಗಳಲ್ಲಿ ಕಾಣಿಸಿಕೊಂಡಿದೆ. ಈ ಯುದ್ಧಗಳನ್ನು ಸಮೃದ್ಧಿ ಮತ್ತು ಅನಾವೃಷ್ಟಿಗಳ ಘರ್ಷಣೆಯೆಂದೂ ಆತ್ಮ–ಅಜ್ಞಾನಗಳ ಸಂಘರ್ಷವೆಂದೂ ವಿಶ್ಲೇಷಿಸಿದ್ದಾರೆ.

ಆದರೆ ಈ ಸಂಗತಿ 'ಉರಿಹಸ್ತ' ಕ್ಕೆ ಹೊಂದಿಕೆಯಾಗದಿರುವುದರಿಂದ ಪ್ರಸಿದ್ಧವಾದ ಭಸ್ಮಾಸುರ ಸಂಹಾರವೆ ಇಲ್ಲಿ ಸೂಕ್ತವಾಗಿ ಅನ್ವಯವಾಗುತ್ತದೆ.

೧೩

ಶ್ರೀಹರಿಯ ಭಾಗವತೋದ್ಧಾರದ ಸಂಗತಿಗಳನ್ನು ಈ ಕೀರ್ತನೆಯಲ್ಲಿ ಹಿಡಿದಿಟ್ಟಿದ್ದಾರೆ. ಹಲವು ಪುರಾಣ ಪ್ರಸಂಗಗಳನ್ನು ಒಂದೇಕಡೆ ತಂದಿದ್ದಾರೆ. ಧ್ರುವ–ಶುಕಮುನಿ, ಹನುಮ–ಶರಭಂಗಮುನಿ, ಗಜೇಂದ್ರ–ಸುಗ್ರೀವ–ವಿಭೀಷಣ, ಕನಕದಾಸ–ಪ್ರಹ್ಲಾದ, ಶಬರಿ ಇವರ ಉದ್ಧಾರ ಪೂತನಿ, ಕೌರವ, ರಾವಣ, ಕಂಸ, ಕಶಿಪು, ವಾಲಿ ಇವರ ಸಂಹಾರವನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ.

೪೯

ಕನಸಿನ ಪ್ರತಿಮೆಯಲ್ಲಿ ಮಾಂಗಿರಿರಂಗನನ್ನು ಶಿವನಾಗಿ ಬಂದು, ಕೇಶವನೆಂದು ತಿಳಿಸಿ, ಶಿವಚರಿತೆ ಹೇಳೆಂದು, ಗುರುರೂಪದಿಂದ ದರ್ಶವಿತ್ತೆಯೆಂದು ವಿಶಿಷ್ಟದರ್ಶನವಾಗಿ ಕಂಡಿದ್ದಾರೆ. ಶಿವ–ಕೇಶವನ ಏಕೋಭಾವ ಇಲ್ಲಿ ಅತ್ಯಂತ ವಿಶೇಷವಾಗಿದೆ.

.......ಮುನಿಗೆ ಶಿಶುರೂಪದಂತೆ, ಧ್ರುವನಿಗೆ ಕಾಣಿಸಿದಂತೆ, ಸ್ತ್ರೀ ವ್ಯಾಮೋಹದಲ್ಲಿದ್ದ ತೊಂಡರಡಿಪ್ಪೊಡಿಯಾಳ್ವಾರರಿಗೆ ಕರುಣಿಸಿದಂತೆ, ಕಳ್ಳತನದಿಂದಿದ್ದ ತಿರುಮಂಗೈ ಆಳ್ವಾರರಿಗೆ ಅನುಗ್ರಹಿಸಿದಂತೆ, ಘೋರ ರೂಪದಲ್ಲಿದ್ದರೂ ನಾಮಸ್ಮರಣೆಯಿಂದ ಸೌಮ್ಯನಾಗಿ ದರ್ಶನ ತೋರಿಸಿದಂತೆ, ಗೋಪಿಕೆಯರಿಗೆ ಕಂಡ ಒಡೆಯನಂತೆ, ರಂಗನಾಥನೂ ಗಂಗಾಧರನೂ ಮನ್ಮಥನ ತಂದೆಯೂ ಮನ್ಮಥಹರಣನೂ ಆಗಿರುವನೆಂದು ಹಲವು ಪುರಾಣಪ್ರತಿಮೆಗಳ ಮೂಲಕ ಆರಾಧ್ಯದೈವವನ್ನು ಕೇಶವನನ್ನಾಗೇ ಕಂಡಿದ್ದಾರೆ.

ಇಲ್ಲಿ 'ನೂರುಸಾಸಿರಜನರಿಗೆ ತೋರಿದ ದ್ವಿಜರೂಪ,' ಎಂಬ ಸಾಲಿಗೆ ಯಾವ ಪ್ರಸಂಗವೂ ಅನ್ವಯವಾಗದಿರುವುದರಿಂದ ಅದನ್ನು 'ಹದಿನಾರು ' ಎಂದು ಊಹಾಪಾಠವಾಗಿ ಪರಿವರ್ತಿಸಿದೆ. 'ದ್ವಿಜ' ಎಂಬುದಕ್ಕೆ ಕ್ಷತ್ರಿಯ, ಒಡೆಯ ಪತಿ ಎಂಬ ಅರ್ಥವೂ ಇದೆ. 'ಮುನಿಗೆತೋರಿದ ಶಿಶುರೂಪ ' ಯಾವುದೆಂದು ವ್ಯಕ್ತವಾಗುತ್ತಿಲ್ಲ. ದಾಸರು ಹಲವು ಮೂಲಗಳಿಂದ ಅನೇಕ ಅಪರೂಪದ ಪುರಾಣ ಪ್ರತಿಮೆಗಳನ್ನು ಬಳಸಿಕೊಳ್ಳುವುದರ ಮೂಲಕ ಅಪಾರ ಜ್ಞಾನವುಳ್ಳವರಾಗಿದ್ದಾರೆ. ಮುನಿಗೆ ಶಿಶುರೂಪ ಪ್ರತಿಮೆಯಲ್ಲಿ ಪೆರಿಯಾಳ್ವಾರರು ಆರಾಧಿಸುತ್ತಿದ್ದ ವಟಪತ್ರಶಾಯಿ ಮತ್ತು ಅವರ 'ವಾತ್ಸಲ್ಯ ಭಕ್ತಿ' ಯ ಕಲ್ಪನೆ ತಂದಿರುವಂತಿದೆ.

೫೧

ಯಾರು ದೇವರಲ್ಲಿ ಶರಣಾಗುವರೋ ಸೇವೆ ಸಲ್ಲಿಸುವರೋ ಅವರನ್ನು ಭಗವಂತ ಕೈಬಿಡುವುದಿಲ್ಲ, ಪರಮಕರುಣಾಳು ಎಂಬ ಭಕ್ತಿಯ ಸುಲಭೋಪಾಯವನ್ನು ಬಲಿ–ದ್ರೌಪದಿ,

ಗಜೇಂದ್ರ–ಪ್ರಹ್ಲಾದ, ಕುಚೇಲ, ಕುಬ್ಜೆ, ಗೋಪಿಕೆಯರ ಕಥೆಗಳ ನಿದರ್ಶನದ ಮೂಲಕ ಈ ಕೀರ್ತನೆಯಲ್ಲಿ ಹಿಡಿದಿಟ್ಟಿದ್ದಾರೆ.

೫೨

ನೃಸಿಂಹಾವತಾರದ ವಿವರವಾದ ಚಿತ್ರಣ ಇಲ್ಲಿದೆ. ಜಯವಿಜಯರು ಮುನಿಗಳಿಂದ ಪಡೆದ ಶಾಪ ವಿಮೋಚನೆಗಾಗಿ ಹರಿಯನ್ನು ದ್ವೇಷಿಸುವುದರ ಮೂಲಕ ಹರಿಪಾದವನ್ನು ಶೀಘ್ರವಾಗಿ ಸೇರುವ ಮಾರ್ಗವನ್ನು ಯಾಚಿಸಿ ಅದರಂತೆ ಹಿರಣ್ಯಾಕ್ಷ–ಹಿರಣ್ಯಕಶಿಪುಗಳಾಗಿ ಅವತರಿಸಿ ಹಿರಣ್ಯಾಕ್ಷನಿಂದ ಅಪಹರಿಸಲ್ಪಟ್ಟ ಭೂಮಿಯನ್ನು ರಕ್ಷಿಸಲು ವರಾಹನಾಗಿಯೂ ಹಿರಣ್ಯಕಶಿಪುವಿನ ಹರಿದ್ವೇಷಕ್ಕೆ ತುತ್ತಾದ ಮಗ ಪ್ರಹ್ಲಾದನನ್ನು ರಕ್ಷಿಸಲು ನರಸಿಂಹನಾಗಿಯೂ ಅವತರಿಸಿದ ಸಂದರ್ಭದ ಕಥೆಗಳನ್ನು ಈ ಕೀರ್ತನೆಯಲ್ಲಿ ಚಿತ್ರಿಸಲಾಗಿದೆ.

ಇಂತಹ ಮಹಾಮಹಿಮನನ್ನು ಸ್ತುತಿಸಲು ಆದಿಶೇಷನಿಗೇ ಸಾಧ್ಯವಿಲ್ಲದಿರುವಾಗ ಸಾಮಾನ್ಯ ಪಾಮರನಾದ ಈ ದಾಸನಿಗೆ ಹೇಗೆ ಸಾಧ್ಯವೆಂಬ ವಿನಯ ಇಲ್ಲಿದೆ.

೫೩.

ದಶಾವತಾರದ ವರ್ಣನೆಯನ್ನು ಅತ್ಯಂತ ಸರಳವಾದ ಶೈಲಿಯಲ್ಲಿ ಜಾನಪದ ರೀತಿಯಲ್ಲಿ ಹೇಳಿರುವ, ಪುನರಾವರ್ತನೆಯ ಧಾಟಿ ಇಲ್ಲಿದೆ. ಪುನರಾವರ್ತನೆ ಇಲ್ಲಿ ಒಂದು ಲಕ್ಷಣವಾಗಿದೆ.

ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ–ಪರಶು–ಕೃಷ್ಣ ಕಲ್ಕಿಗಳಿಗೆ ಒಂದೊಂದೇ ನಿದರ್ಶನ ಕೊಟ್ಟಿದ್ದರೆ ರಾಮನಿಗೆ ಶಬರಿ, ಮಾರೀಚವಧೆಗಳ ನಿದರ್ಶನಗಳಿವೆ. 'ಗೂಂಜುಗದಾತ'ದಲ್ಲಿ ಬಲರಾಮನ ಚಿತ್ರವಿದ್ದಂತಿದೆ. ಆದರೆ ಪಾಠ ಸ್ಪಷ್ಟವಿಲ್ಲ.

೧೫೭

ಇದು ಅಂಡಾಳ್ ಸ್ತುತಿ. ಶ್ರೀವೈಷ್ಣವ ಗುರುಪರಂಪರೆಯಲ್ಲಿ ಮೊದಲು ೧೨ ಜನ ಆಳ್ವಾರರೂ ಅನಂತರ ಆಚಾರ್ಯರೂ ಬರುತ್ತಾರೆ, ಈ ಆಳ್ವಾರರಲ್ಲಿ ಏಕೈಕ ಭಕ್ತೆ ಆಂಡಾಳ್. ಇವಳ ಕಥೆ ರೋಚಕವಾದುದು ಮತ್ತು ರಂಜನೀಯವಾದುದು. ಪ್ರತಿಯೊಬ್ಬ ಶ್ರೀವೈಷ್ಣವ ಮತೀಯರಿಗೂ ಆಂಡಾಳ್ ವಿಷಯ ಗೊತ್ತಿರುತ್ತದೆ. ಧರ್ಮನಿಷ್ಠರು ಪ್ರತಿನಿತ್ಯದ ದೈವಸ್ತುತಿ ಶ್ಲೋಕಗಳಲ್ಲಿ ಆಂಡಾಳ್ ಶ್ಲೋಕಗಳನ್ನು ಪಠಿಸುತ್ತಾರೆ.

ಇಂತಹ ಪರಮಭಕ್ತೆ ಭಾಗವತೆ ಅಂಡಾಳ್‌ಳನ್ನು ಗೋದಾ, ಗೋದಾದೇವಿ ಎಂದು ಕರೆಯಲಾಗಿದ್ದು ಅಕೆಯು ನಡೆಸಿದ ಭಕ್ತಿ ಕೈಂಕರ್ಯ ಮತ್ತು ಆಮೂಲಕ ಪಡೆದ ಪರಮಸಾಯುಜ್ಯದ ಸ್ತುತಿ ಇದಾಗಿದೆ.

೧೫೬, ೧೫೭, ೧೫೮ನೇ ಕೃತಿಗಳೂ ಆಂಡಾಳನ್ನು ಕುರಿತದ್ದಾಗಿವೆ. ವಿಷ್ಣುಚಿತ್ತರೆಂದರೆ ಇವಳ ತಂದೆ ಪೆರಿಯಾಳ್ವಾರರು. ಈಕೆ ತಾನು ಮುಡಿದ ಹೂವನ್ನು ದೇವರಿಗೆ ಮುಡಿಸುತ್ತಿದ್ದ ಪರಮ ಭಾಗವತೆ.

೧೬೨

'ಶ್ರೀವೈಷ್ಣವ ದರ್ಶನ'ವನ್ನು 'ರಾಮಾನುಜದರ್ಶನ' ಎಂದೇ ಗುರುತಿಸುವ ಪರಮಾಚಾರ್ಯ ರಾಮನುಜಾಚಾರ್ಯರ ಸ್ತುತಿ ಇದಾಗಿದೆ. ಆಚಾರ್ಯರಲ್ಲಿ ಪ್ರಧಾನಾಚಾರ್ಯರಾಗಿರುವ ಈ ಯತಿಗಳಿಗೆ ಶ್ರೀವೈಷ್ಣವರಲ್ಲಿ ಅಗ್ರಪೂಜೆಯಿದೆ. ಈ ಗುರುಗಳ ಸ್ತುತಿ–ವಂದನೆಯ ನಂತರವೇ ಉಳಿದೆಲ್ಲ ಕ್ರಿಯೆಗಳು ಪ್ರಾರಂಭವಾಗುತ್ತವೆ. ಇವರ ಜೀವನಚಿತ್ರ–ಸಾಧನೆಯನ್ನು ಸ್ತುತಿಮಾಡಲಾಗಿದೆ.

ಯಮುನಾಚಾರ್ಯರಿಂದ ಶ್ರೀವೈಷ್ಣವಗುರುದೀಕ್ಷೆ ಪಡೆದ ಇವರು ರಾಮಾಯಣ, ಮಹಾಭಾರತ, ಭಗವದ್ಗೀತಾ ತತ್ವಗಳ ಸಾರವನ್ನು ತಮ್ಮ 'ಶ್ರೀಭಾಷ್ಯ ' ಮತ್ತು 'ರಹಸ್ಯತ್ರಯಸಾರ' ಕೃತಿಗಳಲ್ಲಿ ಹಿಡಿದಿಟ್ಟಿದ್ದಾರೆ. ಆಳ್ವಾರರಲ್ಲಿ ಅಗ್ರರಾದ ನಮ್ಮಾಳ್ವಾರರ –ವಕುಳಾಭರಣ – ಸಂದೇಶಗಳನ್ನು ನಾಲಾಯಿರ ದಿವ್ಯ ಪ್ರಬಂಧಗಳ ಸಾರವನ್ನು ತಮ್ಮ ಕೃತಿಗಳಲ್ಲಿ ಸಂಗ್ರಹಿಸಿ ಅವುಗಳಿಗೆ ವೇದಸಮಾನತೆಯನ್ನು ತಂದಿತ್ತಿದ್ದಾರೆ.

೧೦೧

ಇದು ಮಾಂಗಿರಿರಂಗನ–ಆರಾಧ್ಯದೈವ ಮಾವಿನಕೆರೆ ರಂಗನಾಥನ–ಶಿವ–ಕೇಶವ ಕಲ್ಪನೆಯ ಮೇಲೆ ನಿಂತಿರುವ ನಾಟ್ಯ ಪರಿಭಾಷೆಯ ಕವಿತೆ. ನಾಟ್ಯಕ್ಕೆ ಅನುಗುಣವಾಗಿ ಕೇಶವನಲ್ಲಿ ಮತ್ತು ಶಿವನಲ್ಲಿ ಇರುವ ಗುಣವಿಶೇಷತೆಗಳ ಸಾಮ್ಯವನ್ನು ಇಲ್ಲಿ ಸ್ವಾರಸ್ಯವಾಗಿ ಬಿಡಿಸಿದ್ದಾರೆ.

ಕೇಶವನಲ್ಲಿ–ಲಕ್ಷ್ಮೀ (ಹಣದ) ರವ, ಶಿವನಲ್ಲಿ – ಗೆಜ್ಜೆಯರವ

ಕೇಶವನಲ್ಲಿ–ಮುರಳಿಗಾನ, ಶಿವನಲ್ಲಿ – ದೇವನರ್ತಕರಗಾನ

ಕೇಶವನಲ್ಲಿ–ನಾಟ್ಯಕಲಾವಿದ್ವಾಂಸ, ಶಿವನಲ್ಲಿ – ನಾಟ್ಯನಟನಾಕಲಾವಿದ

ಕೇಶವನಲ್ಲಿ – ನಾರದ ತುಂಬುರರ ಸಮಾವೇಶ, ಶಿವನಲ್ಲಿ –

ಗಣೇಶ ಷಣ್ಮುಖರ ಸಮಾವೇಶ

ಇರುತ್ತದೆಂದು ಪಟ್ಟಿಮಾಡಿ ಚಿತ್ರಿಸಿರುವ ಪರಿ ಸೊಗಸಾಗಿದೆ.

೧೪೬

ಇದು ಶ್ರೀವೈಷ್ಣವ ದೇವತಾ ತಾರತಮ್ಯದಲ್ಲಿ ಶ್ರೀಮನ್ನಾರಾಯಣ ನಂತರದಲ್ಲಿರುವ ಶ್ರೀಲಕ್ಷ್ಮೀ ಸ್ತುತಿ. ಈ ಕೀರ್ತನೆಯಲ್ಲಿ ನಿತ್ಯದೇವತಾ ಅರ್ಚನಾ ವಿಧಾನದ ವಿವರಣೆಯಿದೆ.

ಅರ್ಚನಾ ಕ್ರಮದಲ್ಲಿ ಭಗವನ್ನಾಮಸ್ಮರಣೆ ಸುಂದರವಾಗಿ ಮೂಡಿಬಂದಿದೆ. ಪ್ರಚಲಿತವಿರುವ ಷೋಡಶೋಪಚಾರದ ಅರ್ಚನಾ ಕ್ರಮದಂತೆಯೇ ಕೀರ್ತನೆ ಸಾಗಿದೆ.

ಮೊದಲ ನುಡಿಯ ಎರಡು ಸಾಲುಗಳು ಮೂಲದಲ್ಲಿ ಬಿಟ್ಟು ಹೋಗಿದ್ದು ಅರ್ಥಾನ್ವಯಕ್ಕಾಗಿ ಊಹಾಪಾಠ ಸೇರಿಸಿದೆ.

೧೬೬

ಈ ಗೀತೆಯಲ್ಲಿ ಎಲ್ಲ ದೇವರನ್ನು ಸಮಾನವಾಗಿ ಸ್ತುತಿಸಲಾಗಿದೆ. ಕೃಷ್ಣ ರಾಮ ಶಿವರೊಂದಿಗೆ ಭಕ್ತನಾದ ಮಾರುತಿಯನ್ನು ಈಚಿನ ಸತ್ಯಸಾಯಿಬಾಬನನ್ನು ಸೇರಿಸಿ ಆಧುನಿಕ ಕಾಲದ ಜನರ ದೈವನಂಬಿಕೆಯ ಸ್ವರೂಪವನ್ನು ಹಿಡಿದಿಟ್ಟಿದ್ದಾರೆ. ಹಿಂದೂಗಳಲ್ಲೇ ಪ್ರತ್ಯೇಕತೆ ಕಾಣುತ್ತಿರುವ ಇಂದಿನ ಸಂದರ್ಭದಲ್ಲಿ ದೈವ ಸಮಾನತೆಯನ್ನು ಸಾಧಿಸುವ ಇಂಥ ಪ್ರಯತ್ನಕ್ಕೆ ವಿಶೇಷತೆ ಕಂಡುಬರುತ್ತದೆ.

೨೧೪

ತಂದೆಯಿಂದ ಆಗಬೇಕಾದ ಕೆಲಸಕ್ಕೆ ತಾಯಿಯನ್ನು ಅವಲಂಬಿಸುವಂತೆ ಇದು, ಲಕ್ಷ್ಮಿಗೆ ಹರಿಕರುಣೆಗಾಗಿ ಪ್ರಾರ್ಥಿಸುವ ಮಗನ ಬೇಡಿಕೆಯ ರೂಪದಲ್ಲಿದೆ. ಭಾಗವತಭಕ್ತರಾದ ಧ್ರುವ, ಗಜೇಂದ್ರ, ಅಜಮಿಳರ ನಿದರ್ಶನಗಳಿವೆ. ತಾಯಿ–ಮಗನ ನಡುವಿನ ಸಂಭಾಷಣೆಯ ಸಹಜ ಬಾಂಧವ್ಯ ಪ್ರೀತಿ ಇಲ್ಲಿ ವಿಶೇಷವಾಗಿದೆ. ಶ್ರೀವೈಷ್ಣವ ಸಂಪ್ರದಾಯದಲ್ಲಿ ಮಹಾಲಕ್ಷ್ಮಿಗೆ ದೇವತಾತಾರತಮ್ಯದಲ್ಲಿ ಎರಡನೇ ಸ್ಥಾನವಿದೆ. ಶ್ರೀಹರಿಯ ಪರವಾಗಿ ಲಕ್ಷ್ಮಿಯಲ್ಲಿ ಮೊರೆಯಿಟ್ಟರೆ ಆಕೆ ಶ್ರೀಹರಿಗೆ ಹೇಳಿ ಕರುಣೆಯನ್ನುಂಟುಮಾಡುತ್ತಾಳೆಂಬ ನಂಬಿಕೆಯಿದ್ದು ಅದಕ್ಕನುಗುಣವಾಗಿ ಈ ಕೃತಿಯ ನಿರೂಪಣೆ 'ಅಹವಾಲಿ' ನ ರೂಪದಲ್ಲಿದೆ.

ಶ್ರೀವೈಷ್ಣವ ಧರ್ಮ ವಿಷ್ಣುವಿನಿಂದ ಲಕ್ಷ್ಮಿಗೂ ಲಕ್ಷ್ಮಿಯಿಂದ ವಿಶ್ವಕ್ಸೇನರಿಗೂ (ವಿಶ್ವಕ್ಸೇನ ಶ್ರೀವೈಷ್ಣವರ ಗಣೇಶ. ಶಿವಪುತ್ರಗಣೇಶನ ಪೂಜೆ ಇವರಲ್ಲಿಲ್ಲ.) ವಿಶ್ವಕ್ಸೇನರಿಂದ ಜಗತ್ತಿಗೂ ಉಪದೇಶವಾಯಿತೆಂದು ಶಾಸ್ತ್ರ ಹೇಳುತ್ತದೆ.

೨೧೬

ಅನ್ಯದೈವ ಸ್ತುತಿಯಬಗ್ಗೆ ಪಶ್ಚಾತ್ತಾಪ ಮತ್ತು ಸಹಜ ಶ್ರೀವೈಷ್ಣವ ಸ್ವಭಾವ ಇಲ್ಲಿ ವ್ಯಕ್ತವಾಗಿದೆ. ಅನಿವಾರ್ಯವಾಗಿ ಈ ಸಂದರ್ಭಕ್ಕೆ ಒಳಗಾಗಿದ್ದು ಅದನ್ನು ಮಾಡಿಸಿದವನೂ ನೀನೇ ಎಂಬ, ನೀನೇ ಇದರಿಂದ ಪಾರುಮಾಡಬೇಕೆಂಬ ಶರಣಾಗತಿ ಇಲ್ಲಿದೆ.

ಶ್ರೀವೈಷ್ಣವ ತತ್ವದಲ್ಲಿ ಏಕದೈವ ಕಲ್ಪನೆಯಿದ್ದು ಶ್ರೀಹರಿಯೇ ಸರ್ವಸ್ವ ಅವನನ್ನು ಬಿಟ್ಟರೆ ಅನ್ಯದೈವವಿಲ್ಲ; ಇರುವುದೆಲ್ಲ ಅವನ ಅಧೀನ, ಅವನನ್ನು ನಂಬಿದರೆ, ಅವನಿಗೆ ಶರಣಾದರೆ ಸಾಕು ಇಷ್ಟಾರ್ಥ ಸಿದ್ಧಿಸುತ್ತದೆಂಬ ಪ್ರಬಲವಾದ ನಂಬಿಕೆಯೊಂದಿಗೆ ಅನ್ಯದೈವವನ್ನು ಸ್ತುತಿಸಬಾರದು, ಅನ್ಯ ದೇವತೆ ವ್ರತಗಳನ್ನು ಆಚರಿಸಬಾರದು, ಅದು ಮೋಕ್ಷಪ್ರಾಪ್ತಿಗೆ ಅಡ್ಡಿ, ಭಗವಂತನಿಗೆ ಅಪಚಾರ ಎಂಬ 'ಅಚಾರ' ವೂ ಪ್ರಚಲಿತದಲ್ಲಿದೆ. ಆಧುನಿಕ ಸಮಾಜದಲ್ಲಿ ಇದು ಅಷ್ಟು ಕಟ್ಟುನಿಟ್ಟಾಗಿ ಬಳಕೆಯಲ್ಲಿಲ್ಲದಿದ್ದರೂ ಧರ್ಮನಿಷ್ಠರಲ್ಲಿ ಆಚರಣೆಯಿದೆ. ಇಂದಿಗೂ ಈ ಧರ್ಮೀಯರ ಮನೆಗಳಲ್ಲಿ ವಿಷ್ಣುವಿಗೆ ಹೊರತಾದ ಬೇರೆಯಾದ ದೇವರ ಫೋಟೋಗಳೂ ಕಾಣಸಿಗುವುದಿಲ್ಲ.

೨೨೦

ಕಡೆಯಬಾಗಿಲನ್ನು ಇಲ್ಲಿ 'ದ್ವಾರಬಾಗಿಲು ' ಎಂದು ಕಲ್ಪಿಸಲಾಗಿದೆ. ಅರ್ಚಾಮೂರ್ತಿಯ ಆರಾಧನೆಯು ಶ್ರೀವೈಷ್ಣವ ಪಂಚರೂಪದ ದೈವಕಲ್ಪನೆಯಲ್ಲಿ ಕೊನೆಯದು. ಪರ ವ್ಯೂಹ ವಿಭವಾ ಅಂತರ್ಯಾಮಿ, ಅರ್ಚಾಮೂರ್ತಿಯ ಧ್ಯಾನ-ಆರಾಧನೆಯಲ್ಲಿ ತೊಡುಗುವವರೇ ಪ್ರಪನ್ನರು. ಈ ಪ್ರಪತ್ತಿಯ ಮುಖ್ಯನಂಬಿಕೆ ಫಲಾಪೇಕ್ಷೆಯಿಲ್ಲದಕರ್ಮಾನುಷ್ಠಾನ, ದೈವಸ್ತುತಿ. ಇದನ್ನೇ ೨ನೇ ನುಡಿಯ ೨ನೇ ಸಾಲಿನಲ್ಲಿ ಹೇಳಿರುವುದು.

ಕಡೆಯ ಬಾಗಿಲು ದೇವಾಲಯದ ಗರ್ಭಗುಡಿಯಬಾಗಿಲು, ದೈವದರ್ಶನಕ್ಕೆ ಕೊನೆಯಬಾಗಿಲು. ಅದೇ ಮೊದಲ ಬಾಗಿಲೂ ಹೌದು. ಈ ಎರಡೂ ಅರ್ಥವನ್ನು ಉಚಿತವಾದ ಶ್ಲೇಷೆಯಮೂಲಕ ಇಲ್ಲಿ ಹಿಡಿದಿಟ್ಟಿದ್ದಾರೆ.

೨೨೫

ಕೌಶಿಕನೊಂದಿಗೆ ಯಾಗರಕ್ಷಣೆಗೆ, ಅಹಲ್ಯಾ ಶಾಪವಿಮೋಚನೆ, ಸೀತಾ ಸ್ವಯಂವರ, ಕೈಕೆಯ ಮಾತಿನಂತೆ ವನವಾಸ, ಭಾಮೆಯ ಪ್ರೀತಿ (ಎಂಜಲುತಿನ್ನುವುದು), ಜಟಾಯುಮೋಕ್ಷ, ವಿಭೀಷಣ ಪಟ್ಟಾಭಿಷೇಕದಂತಹ ಬೇರೆದಾಸರಲ್ಲಿ ಕಾಣಸಿಗದ ವಿಶೇಷ ಪ್ರತಿಮೆಗಳನ್ನು ಬಳಸಿಕೊಂಡು ಭಗವಂತನನ್ನು ಪ್ರಾರ್ಥಿಸಿರುವ ದೀನತೆಯ ವಿಶಿಷ್ಟಭಾವ ಇಲ್ಲಿಯ ವಸ್ತು.

೨೩೪

ಆತ್ಮನಿವೇದನೆಯ ಈ ಕೀರ್ತನೆಯಲ್ಲಿ ಮಂತ್ರ–ಯಂತ್ರ–ತಂತ್ರ ಹಾಗೂ ಅಂಬು–ಅಂಬರ–ಅಂಬುಧಿ–ಅಂಬುಜ ಮತ್ತು ಡಕಾರೋಕ್ತಿಯ ವೈಶಿಷ್ಟ್ಯಗಳು ವಿಶೇಷೋಕ್ತಿಯಾಗಿ ಬಂದಿವೆ. ಇಲ್ಲಿ ದಾಸರಿಗಿರುವ ಶಬ್ದೌಚಿತ್ಯ, ಪಾಂಡಿತ್ಯ, ಪ್ರತಿಮಾದರ್ಶನಗಳನ್ನು ಕಾಣಬಹುದು. ದಾಸರು ಹಲವು ಕನ್ನಡ ಕಾವ್ಯಕೃತಿಗಳನ್ನು ರಚಿಸಿರುವುದರಿಂದ ಪದಬಳಕೆ ಬಹಳ ಸರಾಗವಾಗಿದೆಯಲ್ಲದೆ ಅಷ್ಟೇ ಕವಿಪ್ರತಿಭೆಯಿಂದ ಕೂಡಿದೆ.

'ಯಂತ್ರ'–ಆಧುನಿಕ ಪ್ರತಿಮೆಯ ಬಳಕೆಯ ಮೂಲಕ ಸಮಕಾಲೀನ ವಸ್ತುವನ್ನು ದಾಸಸಾಹಿತ್ಯಕ್ಕೆ ಅಳವಡಿಸಿರುವದನ್ನು ಕಾಣಬಹುದು. ಯಾಂತ್ರೀಕೃತ ಜಗತ್ತಿನಲ್ಲಿ ಯಾಂತ್ರೀಕೃತವಾದ ಮನುಷ್ಯ ಜೀವನವನ್ನು ಇಲ್ಲಿ ಸುಂದರವಾಗಿ ಬಿಡಿಸಿದ್ದಾರೆ. ಇನ್ನೊಬ್ಬರು ನಡೆಸಿದಂತೆ ನಡೆಯುವುದು ಯಂತ್ರ, ನಡೆಸುವ ಯಂತ್ರಿ ದೈವ. ಇವನು ನಡೆಸಿದಂತೆ ನಡೆದವನು ಮನುಷ್ಯ. ಯಂತ್ರವೊಂದು ಹೇಗೆ ಅದನ್ನು ನಡೆಸುವವನ ಪೂರ್ಣ ವಶದಲ್ಲಿರುತ್ತದೋ ಹಾಗೆ ಭಕ್ತ ಯಂತ್ರಿಯ ಪೂರ್ಣವಶದಲ್ಲಿರುತ್ತಾನೆ. ಅಂದರೆ ಸಂಪೂರ್ಣ ಶರಣಾಗತಿ. ದೇಹಕ್ಕಾಗಲಿ, ದೇಹದಲ್ಲಿದೆ ಎಂದು ಹೇಳುವ ಆತ್ಮಕ್ಕಾಗಲಿ ಇಲ್ಲಿ ಯಾವ ಸ್ಥಾನವೂ ಇಲ್ಲ. ಯಂತ್ರಿಗೆ ತನ್ನನ್ನು ಒಪ್ಪಿಸಿಕೊಳ್ಳುವುದೇ ಯಂತ್ರದ ಸಾರ್ಥಕತೆ. ಅದೇ ಪುರುಷಾರ್ಥ, ಶ್ರೀವೈಷ್ಣವ ಧರ್ಮದ ತಂತ್ರ ಎಂಬ ತತ್ವ ಇಲ್ಲಡಗಿದೆ.

೨೩೬

ಆತ್ಮನಿವೇದನೆಯ ಅಭಿವ್ಯಕ್ತಿಯ ಈ ಕೃತಿಯಲ್ಲಿ 'ಆಸೂರಿ' ಎಂಬ ಮನೆತನದ ಗೌರವ ಸೂಚಕ ಪದವನ್ನು 'ಆಮನೆ' ಎಂಬ ಶೇಷಾರ್ಥದಲ್ಲಿ ಬಳಸಿದ್ದಾರೆ. ಅದಕ್ಕೆ ಜೋಡಿಯಾಗಿ ತಂದಿರುವ 'ಈಸೂರು' ಈಮನೆ ಮತ್ತು ಏಸೂರು–ಯಾವುದೇ ಮನೆ ಎಂಬ ಪದಗಳಲ್ಲಿ ಸುಂದರ ಧ್ವನಿಯಿದೆ. 'ಆಊರಿನ್ಯೈವತ್ತು ಈವೂರಿನ್ಯೈವತ್ತು ದೈವರ್ಕಗಳಿಗೆ ನಾ ಹರಕೆಹೊತ್ತು' ಎಂಬಲ್ಲಿ ದೈವಗಳನೇಕವನ್ನು ಸ್ತುತಿಸಿದ್ದರೂ ಯಾವುದರಿಂದಲೂ ಪ್ರಯೋಜನವಾಗದೆ ಶ್ರೀಹರಿಯ ಶರಣಾಗತಿಯಲ್ಲಿ ತಮ್ಮ ಸಾರ್ಥಕತೆ ಕಂಡುಕೊಂಡಿರುವ ಧನ್ಯತೆಯಿದೆ. ಈ ಆತ್ಮನಿವೇದನೆಯ ಜೊತೆಗೆ ಇದು ಲೋಕನೀತಿಯಾಗಿಯೂ ನಿಲ್ಲುತ್ತದೆ. ಹಲವು ದೈವಗಳನ್ನು ನಂಬಿ ಅಧೀರರಾಗುವ ಇಂದಿನ ಸಮಾಜದ ಜನರಿಗೆ ಒಂದೇ ದೈವವನ್ನು ನಿಷ್ಠೆಯಿಂದ ನಂಬಿದರೆ ಫಲಪ್ರಾಪ್ತಿ ಸುಲಭವೆಂಬ ಸಾಮಾಜಿಕ ನೀತಿಯೂ ಇದಾಗುತ್ತದೆ.

೨೪೭

ಇಲ್ಲಿ ಕನಕದಾಸ, ಕಬೀರ, ತುಳಸೀದಾಸರ ವಿಶೇಷ ಪ್ರತಿಮೆಗಳಿದ್ದು ನಿರ್ದಿಷ್ಟ ಕಥಾ ಸನ್ನಿವೇಶಗಳನ್ನು ಹೇಳಲಾಗಿದೆ. ಕನಕನ ಕಿಂಡಿಯ ಪ್ರತಿಮೆಯಲ್ಲಿ 'ಪ್ರಾಕಾರದಿ ನಡುನಡುಗಿ ಕಡುನೊಂದು' ಎಂಬ ಹೊಸ ಅಂಶ ಸೇರಿಸಿದ್ದಾರೆ. ಕಬೀರ ಪ್ರತಿಮೆಯಲ್ಲಿ ಪೀತಾಂಬರ ಮಾರಿ ಹಣ ತರಹೇಳಿದ ತಾಯಿಯ ಕಥೆಯ ಸೂಚನೆ–ಕಡುಬಡುತನ ನೀಗಿ ಖ್ಯಾತಿ ತಂದಿದ್ದ ವಿವರಣೆಯಿದೆ. ಸತಿಯ ಪ್ರಾಣಕ್ಕಾಗಿ ಕಾರಿರುಳು ಪರಿತಪಿಸಿದ ತುಳಸಿದಾಸರ ಪ್ರತಿಮೆಯಿದೆ.

೨೫೦

'ನನ್ನ ಕೂಗಿಗೆ ನೀನು ಓಗೊಡದಿದ್ದರೆ ನಿನ್ನ ಬಿರುದಿಗೇ ಭಂಗ ' ವೆನ್ನುವ ಆತ್ಮಪ್ರತ್ಯಯದ ಮೂಲಕ ಶರಣಾಗತಿ ಇಲ್ಲಿಯ ವಸ್ತು.

ಕೇವಲ ಅಲ್ಪ ಕಾಣಿಕೆಗೆ ತೃಪ್ತನಾಗುವ ನೀನು ನನ್ನನ್ನು ಏಕೆ ಇಷ್ಟೊಂದು ಕಾಡಿಸುವೆ ಎಂಬ ಪ್ರಶ್ನೆ ಇಲ್ಲಿ ವಿಶೇಷ. ಮುಪ್ಪು ಅಡರಿದ ಮೇಲೆ ಕಾಲಸರಿದ ಮೇಲೆ ಈ ಪ್ರಪತ್ತಿ ಸಾಧ್ಯವಿಲ್ಲವಾದ್ದರಿಂದ ಈಗಲೇ ಕರುಣಿಸೆಂಬ ಆತ್ಮನಿವೇದನೆ ಇಲ್ಲಿದೆ. ವಿದುರ, ದ್ರೌಪದಿ, ಧ್ರುವ, ಪ್ರಹ್ಲಾದರು, ಗಜೇಂದ್ರರು ತಾವೇ ನಿನ್ನ ಬಳಿ ಬಂದರೇ ? ನಾರದನ ಕೂಗಿಗೆ ನೀನೇಕೆ ಓಗೊಡುವೆ ? ಎಂದು ಪ್ರಶ್ನಿಸುವಲ್ಲಿ ನನ್ನನ್ನೂ ಹಾಗೇ ಕರುಣಿಸೆಂಬ ಒತ್ತಡ ತಂತ್ರವಿದೆ.

ವಿದುರ, ದ್ರೌಪದಿ, ಕುಚೇಲ, ರುಕ್ಮಿಣಿ, ಶಬರಿಯರು ನೀಡಿದ ಒಂದೊಂದೆ ನೈವೇದ್ಯಕ್ಕೆ ತೇಗಿದವನು ನನ್ನ ಆತ್ಮವನ್ನೇ ನೈವೇದ್ಯ ನೀಡಿದರೂ ಏಕೆ ಇನ್ನೂ ಕರುಣಿಸಿಲ್ಲ ಎಂಬ ಆತ್ಮಸಮರ್ಪಣೆಯೂ ಇಲ್ಲಿದೆ.

೨೫೫

ಇಂದಿನ ಔಷಧಿಯ ರೂಪವಾದ ಮಾತ್ರೆಯ ಪ್ರತಿಮೆಯನ್ನು ಬಳಸಿಕೊಂಡಿರುವ ಸುಂದರ ಕೀರ್ತನೆ ಇದಾಗಿದೆ. ಆಧುನಿಕ ಪ್ರತಿಮೆಗಳನ್ನೂ ದಾಸಸಾಹಿತ್ಯಕ್ಕೆ ಅಳವಡಿಸಿರುವ ವೈಶಿಷ್ಟ್ಯತೆ ಇಲ್ಲಿದೆ.

ದೈವನಾಮಗಳೆಂಬ–ಬಿಳುಪು–ಆಕಾರ–ನೀರು–ಮಧು–ಸಕ್ಕರೆಗಳು ಸೇರ್ಪಡೆಯಾದ ಮಾತ್ರೆಯನ್ನು ಕಲ್ಪಿಸಿದ್ದಾರೆ. ಬೆರಳು–ಗುಂಡುಕಲ್ಲುಗಳಿಂದ ಅರೆದರೆ, ಒಡೆದರೆ– ದೈವಸಾಕ್ಷಾತ್ಕಾರವಾಗಿ, ಚಿತ್ತಸ್ವಾಸ್ಥ್ಯವಾಗಿ ದೇಹಬಾಧೆ ಪರಿಹಾರವಾಗುತ್ತದೆನ್ನುತ್ತಾರೆ. ಅರ್ಥ– ಕಾಮಗಳು ಎರಡು ಬೆರಳಾಗಿ ಗುಂಡುಕಲ್ಲು ಧರ್ಮವಾಗಿ ಸುಂದರ ಪ್ರತಿಮಾಸೌಂದರ್ಯ

ಸೃಷ್ಟಿಯಾಗಿದೆ. ಅರ್ಥ, ಕಾಮ ಗಳನ್ನು ಧರ್ಮ ದಲ್ಲಿ ಸವೆಸಿದರೆ ದೊರಕುವ ಶಾಂತಿಯೇ, ಮೋಕ್ಷ ಎಂಬ ಚತುರ್ವರ್ಗದ ಕಲ್ಪನೆಯೂ ಇಲ್ಲಿದೆ.

೨೬೦

ಇಲ್ಲಿ ಪ್ರಪತ್ತಿ ಧರ್ಮವಿದೆ. ಆದರೆ ಈಗಾಗಲೇ ಮಾಡಿರುವ ಅಪರಾಧದ ಕ್ಷಮಾಪಣೆಯಿರುವಂತಿದೆ. ಶ್ರೀವೈಷ್ಣವರಾದವರು ಮೋಕ್ಷದಾಯಕನಾದ ಲಕ್ಷ್ಮೀನಾರಾಯಣನನ್ನೇ ಸಮಸ್ತಫಲಗಳಿಗೂ ಆರಾಧಿಸಬೇಕೆ ವಿನಾ ಅವನ ಅಧೀನರಾದ ಇತರ ದೇವತೆಗಳನ್ನಾಶ್ರಯಿಸುವುದು ಧರ್ಮಬಾಹಿರ ನಡವಳಿಕೆ ಎಂಬ ಪದ್ಧತಿಯದೆ. 'ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ ' ಎಂಬ ಶಾಸ್ತ್ರವಾಕ್ಯವನ್ನನುಸರಿಸಿ ಅನ್ಯದೈವಗಳನ್ನಾರಾಧಿಸಿದರೆ 'ಭಗವಂತನಿಗೆ ಮುಟ್ಟಿದರೂ ಅವನು ಸಂಪ್ರೀತನಾಗುವುದಿಲ್ಲ, ಮೋಕ್ಷಪ್ರಾಪ್ತಿಯಿಲ್ಲ ' ಎಂಬಂತಹ ಕಟ್ಟುನಿಟ್ಟಿನ ಆಚರಣೆಗಳಿರುವುದರಿಂದ ಇದರ ಹಿನ್ನೆಲೆಯಲ್ಲಿ ಈ ಕೃತಿ ನಿರ್ಮಾಣವಾಗಿರುವಂತೆ ತೋರುತ್ತದೆ. ಶಿವ, ಪಾರ್ವತಿ, ಗಣೇಶ, ರಾಘವೇಂದ್ರ, ಸಾಯಿ ಮುಂತಾದ ಸರ್ವದೈವ ಸ್ತುತಿಗಳನ್ನು ದಾಸರು ಮಾಡಿರುವುದನ್ನು ಇಲ್ಲಿ ಗಮನಿಸಬಹುದು.

೨೬೧

ಶಿವ–ಹರಿ ರೂಪದ ಮಾಂಗಿರಿರಂಗನ ಸ್ಥಳೀಯ ಪ್ರಚಲಿತ ಭಾವದ ಮೂಲಕವೇ ದೈವಧ್ಯಾನಕ್ಕೆ ನಿಷ್ಠೆ ಮುಖ್ಯವೆನ್ನುವ, ವಿವಿಧರೂಪದಲ್ಲಿ ಆ ದೈವವಿರುತ್ತಾನೆನ್ನುವ ಭಾವ ಇಲ್ಲಿದೆ.

ಪ್ರಹ್ಲಾದ ಮತ್ತು ವಿಪ್ರನಾರಾಯಣ ಎನ್ನುವ ತೊಂಡರಪ್ಪಡಿ ಆಳ್ವಾರ ಕತೆಯ ಮೂಲಕ ಅರಿಯದವರಿಗೂ, ಪಾಪಕರ್ಮಗಳಲ್ಲಿದ್ದು ಪಶ್ಚಾತ್ತಾಪಗೊಂಡವರಿಗೂ, 'ಘೋರರೂಪವನಳಿಸಿ ನಾರಾಯಣ ಎಂದವರಿಗೆ ತೋರಿದ ಸೌಮ್ಯರೂಪ–(ನರಸಿಂಹ) ಎಂಬುದರ ಮೂಲಕ ಸ್ತುತಿಗೆ ಒಲಿಯುತ್ತಾನೆನ್ನುತ್ತಾರೆ. ನೂರುಸಾಸಿರ ಜನರ ಗುಂಪೊಂದಲ್ಲೆ ತಂದು ತೋರಿದಾ ದ್ವಿಜರೂಪ (?) ಎಂಬ ಪ್ರತಿಮೆಯಲ್ಲಿ ಸಂದರ್ಭ ಸೂಚಿ ಸ್ಪಷ್ಟವಾಗಿ ತೋರುತ್ತಿಲ್ಲ. ನೂರು ಎಂಬುದು ಹದಿನಾರು ಎಂದಾದರೆ ಸರಿಹೊಂದಬಹುದಾದರೂ 'ದ್ವಿಜ' ದಲ್ಲಿ ಗೊಂದಲವಿದೆ. ದ್ವಿಜ ಎಂಬುದಕ್ಕೆ 'ಕ್ಷತ್ರಿಯ' ಅರ್ಥವೂ ಇದ್ದು ಆ ಅರ್ಥದಲ್ಲಿ ಗ್ರಹಿಸಬಹುದಾದರೆ ಅದಕ್ಕೆ ಪರ್ಯಾಯ ಅರ್ಥಗಳಾಗಿ ರಾಜ–ಒಡೆಯ–ಪತಿ ಎಂದು ವಿಸ್ತರಿಸಿ ಹದಿನಾರು ಸಾವಿರ ನಾರಿಯರ (ನರಕಾಸುರನಿಂದ ಬಿಡಿಸಲ್ಪಟ್ಟವರು) ಒಡೆಯ ಎನ್ನಬಹುದು. ಇದೇ ಪ್ರತಿಮೆ ೪೯ನೇ ಕೀರ್ತನೆಯಲ್ಲೂ ಬಂದಿದೆ.

೨೬೮

ಧ್ಯಾನವನ್ನು ಮಾತ್ರ ಬೇಡುವ ಅನನ್ಯ ಶರಣಾಗತಿ ಇಲ್ಲಿದೆ. ಬೇಡದಿರುವುದನ್ನು ಕೊಟ್ಟು ಬೇಕಾದುದನ್ನು ಬಚ್ಚಿಟ್ಟಿರುವ ಪರಿ ಸರಿಯೇ ಎಂಬ ಒಲುಮೆಯ ಸಲಿಗೆಯಿದೆ. ಒಂದ್ಹಿಡಿ ಅವಲಕ್ಕಿಯ ಕುಚೇಲನಿಗೆ ಒಲಿದವ, ಮುಸುರೆಯ ದ್ರೌಪದಿಗೆ ಒಲಿದವ, ಭಕ್ತರ ನೂರಾರು ತಪ್ಪುಗಳ ಮನ್ನಿಸುವವ ನನಗೂ ನಿನ್ನ ನಾಮಭಜನೆಯ ಕರುಣಿಸು ಎಂದು ಕೇಳುವ ರೀತಿಯಲ್ಲಿ ಫಲಾಪೇಕ್ಷೆಯಿಲ್ಲದ ಕರ್ಮದ ತತ್ವವಿದೆ

ಪಾಪದಲ್ಲೇ ಇದ್ದ ಅಜಮಿಳ ಕೊನೆಗಾಲದಲ್ಲಿ ಮಗನ ಹೆಸರು ಕರೆದರೆ ನೀನೋಡಿದೆ, ಮಲತಾಯಿ ತಿರಸ್ಕರಿಸಿದ ಧ್ರುವನಿಗೊಲಿದೆ, ಗಜೇಂದ್ರನನ್ನು ಮೊಸಳೆಯಿಂದ ಮೋಕ್ಷಿಸಿದೆ, ನನ್ನನ್ನು ಕರುಣಿಸಲಾರೆಯಾ. ನನಗಿನ್ನೇನೂ ಬೇಡ ನಿನ್ನ ನಾಮ ಸ್ಮರಣೆವಿನಾ ಎಂಬ ಶರಣಾಗತಿಯ ಸತ್ವ ಇಲ್ಲಿದೆ.

೨೮೩

ಶ್ರೀವೈಷ್ಣವ ತತ್ವದ ಪರಮಾನುಸಂಧಾನವಾದ ಶ್ರೀಮನ್ ನಾರಾಯಣನೇ ಸರ್ವಸ್ವ, ಅವನನ್ನು ಬಿಟ್ಟು ಅನ್ಯರಿಲ್ಲ. ರಕ್ಷಿಸುವವನು, ಕೊಡುವವನು, ಏಕೆ ಈ ಜೀವನೂ ಅವನೇ, ದೈವನೂ ಅವನೇ, ಈ ಜಗತ್ತೂ ಅವನೇ, ಬಂಧು ಬಳಗ, ತಂದೆ ಎಲ್ಲವೂ ಅವನೇ. ಅವನೊಬ್ಬನನ್ನು ನಂಬಿದರೆ ಸಾಕು ಮೋಕ್ಷ ಪ್ರಾಪ್ತಿ ಎಂಬುದನ್ನು ಇಲ್ಲಿ ಮುಖ್ಯವಾಗಿ ಪ್ರಸ್ತಾಪಿಸಿದ್ದಾರೆ.

ಈ ಕೃತಿಯಲ್ಲಿ 'ಎಂದೈ ' ಎಂಬ ತಮಿಳಿನ ಪ್ರಬಂಧಗಳಲ್ಲಿ (ಆಳ್ವಾರರ ಕೃತಿಗಳಲ್ಲಿ) ಬಳಕೆಯಾಗಿರುವ ವಿಶಿಷ್ಟ 'ತಂದೆ ' ಅರ್ಥದ ಪದವನ್ನು ಪ್ರಾಸದ ಸೌಕರ್ಯಕ್ಕಾಗಿ ಮತ್ತು ಅರ್ಥವಿಸ್ತಾರಕ್ಕಾಗಿ ಊಹಾಪಾಠವಾಗಿ ಬಳಸಿದೆ. ಮೂಲದಲ್ಲಿ 'ಎನ್ ' ಇತ್ತು; ಇದು ಪೂರ್ಣಪ್ರಾಸ ರೂಪವಾಗಿರಲಿಲ್ಲ. ತಮಿಳಿನಲ್ಲಿ 'ತಂದೆ' ಪದಕ್ಕೆ ಭಿನ್ನ ಅರ್ಥಛಾಯೆಯ ಮೂರು ಬಳಕೆಯ ರೂಪಗಳಿವೆ. ಮೂರು ಪುರುಷಗಳಿಗೂ ಪ್ರತ್ಯೇಕ ಪದಗಳಿವೆ. ಇಲ್ಲಿ ಬಳಕೆ ಅಗಿರುವುದು ಪ್ರಥಮ ಪುರುಷರೂಪ ಎಂದೈ (ನನ್ನ ತಂದೆ). ಮಧ್ಯಮ ಪುರುಷಕ್ಕೆ 'ಉಂದೈ' (ನಿನ್ನ ತಂದೆ) ಎಂದೂ ಉತ್ತಮ ಪುರುಷಕ್ಕೆ 'ತಂದೈ' (ಅವನ ತಂದೆ) ಎಂದೂ ಇದೆ. ಇವು ಮೂಲದ್ರಾವಿಡದಲ್ಲಿದ್ದ ರೂಪಗಳು. ಕನ್ನಡದಲ್ಲೂ ಇವು ಬಳಕೆಯಲ್ಲಿದ್ದು ಕ್ರಮೇಣ ಇಂದಿನ 'ತಂದೆ' ಎಂಬ ಒಂದೇ ರೂಪಕ್ಕೆ ಬಂದು ನಿಂತಿದೆ.

೨೮೯

ಸೊಗಸಾದ ನಿಂದಾಸ್ತುತಿ. ಭಗವಂತನನ್ನು ಸ್ತುತಿಮಾಡಲು ಭಕ್ತರು ಅನುಸರಿಸಿದ ಕ್ರಮಗಳನ್ನೇ ನಿಂದೆಯನ್ನಾಗಿ ಕಲ್ಪಿಸಿ, ನನ್ನ ಅಪರಾಧವೇನೂ ಇಲ್ಲ ಎನ್ನುತ್ತಲೇ ಭಕ್ತರ, ಪುರಾಣ ವ್ಯಕ್ತಿಗಳ ಭಾಗವತಾಪಚಾರಗಳನ್ನು ಪಟ್ಟಿ ಮಾಡಿರುವುದು ಇಲ್ಲಿಯ ವೈಶಿಷ್ಟ್ಯ.

ದೂರ್ವಾಸನಂತೆ ಒದೆವುದಿಲ್ಲ, ಗೋಪಿಯರಂತೆ ಒರಳಿಗೆ ಕಟ್ಟಿಲ್ಲ, ಶಿಶುಪಾಲನಂತೆ ಬೈದಿಲ್ಲ, ಭೀಷ್ಮನಂತೆ ಬಾಣಹೂಡಿಲ್ಲ. ಗೋಪಿಯರಂತೆ ಜಾರಚೋರನೆಂದು ದೂರಿಲ್ಲ, ಕೌರವನಂತೆ ಕಂಬಕ್ಕೆ ಕಟ್ಟಿಲ್ಲ, ಸತ್ರಾಜಿತನಂತೆ ಶಮಂತಕ ಮಾಲೆಯ ಅಪರಾಧ ಹೊರಿಸಿಲ್ಲ, ರುಕ್ಮನಂತೆ ನಾರೀಚೋರನೆಂದಿಲ್ಲ ಎಂದು ಹೇಳುತ್ತ ಸಹಜ ಭಕ್ತಿರೂಪದ ಸ್ತುತಿಗಳನ್ನೇ ನಿಂದೆಯ ರೂಪದಲ್ಲಿ ಕಲ್ಪಿಸಿ ಶ್ರೀಹರಿಯನ್ನು ಆಶ್ರಯಿಸುವ ಪರಿ ವಿಶೇಷವಾಗಿದೆ.

೨೯೦

ನಿಂದಾಸ್ತುತಿಯಂತಿದೆ. ಈ ಕೃತಿ ದಾಸರು ಸಾಧಿಸಿರುವ ಹರಿಕರುಣದ ಹಿನ್ನೆಲೆಯಲ್ಲಿ ಹರಿಯನ್ನು ಅಧಿಕಾರಯುತವಾಗಿ ಸಂಭಾಷಿಸುವ ಸಾಧನೆಯಾಗಿದೆ. ಏಕಾಂತದಲ್ಲಿ ನಾನು ಹೇಳುವ ಆಪ್ತ ವಚನಗಳನ್ನು ಕೇಳಲಾರದೆ ಏಕೆ ಹೋಗುವೆ ಎಂಬ ಪ್ರಶ್ನೆ ಆಕರ್ಷಣೀಯವಾಗಿದೆ.

ನಿಷೇಧಾರ್ಥ ನಿರ್ವಹಣೆಯ ಮೂಲಕ ಹರಿಸ್ತುತಿ ಅತ್ಯಂತ ಔಚಿತ್ಯಪೂರ್ಣವಾಗಿ ಮೂಡಿಬಂದಿದೆ. ಅಹಲ್ಯೆ, ಪ್ರಹ್ಲಾದ, ಗಜೇಂದ್ರ, ವರಾಹ, ಕೃಷ್ಣ, ಸಮುದ್ರಮಥನ, ವಾಮನ, ಪರಶುರಾಮ, ರಾಮ, ರಾವಣ, ತ್ರಿಪುರ ಸಂಹಾರಕ, ಕಲ್ಕಿ ಪ್ರತಿಮೆಗಳನ್ನು ನಿರ್ವಹಿಸುವಲ್ಲಿ ಜಾಣ್ಮೆ, ನಾಟಕೀಯತೆ, ಸೌಂದರ್ಯವಿದೆ.

೨೯೩

ನಿನ್ನ ತಂತ್ರಗಳೆಲ್ಲ ಬಯಲಾಯ್ತೊ–ಕೃತಿಯಲ್ಲಿ ನಿಂಗಾಸ್ತುತಿಯು ಸಮರ್ಥ ನಿರ್ವಹಣೆಯಿದೆ. ಜಾಣ್ಮೆಯ ಹೊಂದಾಣಿಕೆಯಿದೆ. ಸಮುದ್ರ ಮಥನ..ಲ್ಲಿ ಹುಟ್ಟಿದ ವಿಷವನ್ನು ಶಿವ ಕುಡಿವಂತೆಮಾಡಿದ್ದು, ವಾಮನನಾಗಿ ಬಲಿಯನ್ನು ತುಳಿದದ್ದು, ಪರಶುರಾಮನಾಗಿ ತಾಯಿಯನ್ನು ಕೊಂದದ್ದು, ಕೃಷ್ಣಾವತಾರದಲ್ಲಿ ಗೋಪಿಕೆಯರೊಡನಾಡಿದ ಕಲ್ಪನೆಗಳು. ಅಮೃತದಿಂದ ರಾಕ್ಷಸರನ್ನು ವಂಚಿಸಿದ್ದು. ಮೋಹಿನಿ ರೂಪದ ಚಿತ್ರಗಳೊಂದಿಗೆ ಮಧುರುಚಿ ಯರಿತನ ಚಕ್ರದಿಂತರಿದೆ (?) ಎಂಬ ಸಾಲಿನಲ್ಲಿ ಒಬ್ಬ ದಾನವನ ಸಂಹಾರದ ಚಿತ್ರವಿದ್ದು , ಮಧುವನ್ನು ಯಜ್ಞದ ಹವಿಸ್ಸೆಂದು ಭಾವಿಸಿದರೆ ಶಿಶುಪಾಲನ ವಧೆಯ ಚಿತ್ರವಾಗುತ್ತದೆ.

ದುರ್ಯೋಧನನನ್ನು ಬಿಟ್ಟು ಅರ್ಜುನನಿಗೆ ಸಾರಥ್ಯ ವಹಿಸಿದ್ದು, ಕರ್ಣವಧೆಗಳನ್ನು ಶ್ರೀಹರಿಮಹಿಮೆಯಲ್ಲಿ ಪಟ್ಟಿಮಾಡಿರುವುದು ವಿಶೇಷವಾಗಿದೆ.

೨೯೫

ಹಿರಣ್ಯಾಕ್ಷ–ಹಿರಣ್ಯಕಶಿಪು–ಬಲಿ–ಶಿಶುಪಾಲ–ದೂರ್ವಾಸ ಇವರುಗಳ ಪ್ರಸಂಗಗಳನ್ನು ಬಳಸಿಕೊಂಡು ಇಂಥವರಿಗೇ–ನಿಂದಿಸುವವರಿಗೇ–ನೀನೊಲಿಯುವದು ನಮ್ಮಂತಹ ಸಾತ್ವಿಕರಿಗಲ್ಲ ಎಂಬ ಧೋರಣೆಯ ಆತ್ಮೀಯಭಾವದ ನಿಂದಾ ಸ್ತುತಿವಿಶೇಷವಾಗಿದೆ.

೨೯೬

ಭಕ್ತ–ಭಗವಂತನಲ್ಲಿ ಕೊಡು–ಕೊಳು ವ್ಯವಸ್ಥೆಯಿದ್ದು ಭಕ್ತನಿಗೆ ಏನಾದರೂ ಬೇಕಾದರೆ ಭಗವಂತನಿಗೆ ಏನನ್ನಾದರೂ ಕೊಡಬೇಕು ಎಂಬ ಭಾವ ಇಲ್ಲಿದೆ. ನಾನು ಎಂಬ ಅಹಂ ನಿರಾಕರಣೆಯಿದೆ. ಭಾಗವತ ಪ್ರತಿಮೆಗಳ ಸಮರ್ಥನೆಯ ಮೂಲಕ ಈ ತತ್ವವನ್ನು ಸಂಗ್ರಹಿಸಿದ್ದಾರೆ. ಕುಚೇಲ–ಗೋಪಿಕೆಯರು–ಗಜೇಂದ್ರರ ನಿದರ್ಶನಗಳಿವೆ. ರಾಮಾನುಜರು ಸದಾ ದೇವರ ಸಂಪುಟವನ್ನು ತಮ್ಮೊಂದಿಗೆ ಹೊಂದಿರುತ್ತಿದ್ದುದನ್ನು 'ಭುಜದ ಮೇಲೆನಿನ್ನನನುಜ ಪೊತ್ತು ತಿರುಗಲು' ಎಂಬ ಮಾತಿನಲ್ಲಿ ಧ್ವನಿಸಿದ್ದಾರೆ. 'ಮಡದಿಮಣಿ ತಾನುಡದ ಪೀತಾಂಬರ ದೆಡ್ಡೆಯ ಹರಿದು ನಿನ್ನಡಿಗೆ ಕಟ್ಟಲು ಅಕ್ಷಯದುಡುಗೆಯಾನಿತ್ತೆ' – ಈ ಪ್ರತಿಮೆ ದ್ರೌಪದಿಯನ್ನು ಕುರಿತದ್ದು. 'ಜಗಜಟ್ಟಿಹನುಮ ನಿನ್ನಯದುಗುಡುವ ಬಿಡಿಸಿದ ಬಗೆ' ಯಲ್ಲಿ ಹಲವು ಸಂದರ್ಭಗಳಲ್ಲಿ ಹನುಮನಿಂದ ರಾಮ ನೆರವು ಪಡೆದು ಕಷ್ಟ ಕಳೆದುಕೊಂಡ ಸಂದರ್ಭಗಳನ್ನು ಈ ಮಾತು ಧ್ವನಿಸುತ್ತದೆ.

೩೦೦

ಅತ್ಯಂತ ಸುಂದರ ಸಖೀಗೀತೆ–ಆತ್ಮೀಯತೆ, ಮಾನ್ಯತೆ, ಸಹಜತೆ ಇಲ್ಲಿದೆ. ಅಕ್ಕತಂಗಿಯರ ಮಾತುಕತೆಯ ಧಾಟಿಯಲ್ಲಿ ಕೃಷ್ಣನ ಸುದ್ದಿ–ಸಂಗತಿ ಅಡಗಿದೆ. ಆಭರಣವರ್ಣನೆ, ಶರೀರವರ್ಣನೆಗಳು, ನಡೆನುಡಿ ವರ್ಣನೆ, ಸಾಹಸಗಳ ವರ್ಣನೆಗಳ ಮೂಲಕ ಶರಣಾಗತರಕ್ಷಕನನ್ನಾಗಿ ಕೃಷ್ಣನನ್ನು ಸ್ತುತಿಸಲಾಗಿದೆ.

೩೦೫

'ಹೆತ್ತ ತಾಯಿಯ ಮುಂದಾಡದೆ ಇನ್ನೆತ್ತ ಯಾರಿಗೆ ಲೀಲೆ ತೋರುವೆ' ಎಂಬರ್ಥದಲ್ಲಿ ಪ್ರಶ್ನಿಸುವುದು ಚೆನ್ನಾಗಿ ಮೂಡಿಬಂದಿದೆ. ಮಗುವಿಗೆ ಸುತ್ತಲಿನವರು ಮುತ್ತಿಡುವ ಚಿತ್ರ. ಬಿಲ್ಲು ಹಬ್ಬ–ಕಾಮನ ಹುಣ್ಣಿಮೆಯ ಸಡಗರ (ಇದೇ ಹಬ್ಬಕ್ಕೇ ಕಂಸನಿಂದ ಆಮಂತ್ರಣ ಬಂದಾಗ

ಹೋಗಿ ಅವನ ಸಂಹಾರವಾದದ್ದು) ಕನ್ಯೆಯರು ಸುತ್ತಲೂ ಇದ್ದರೂ ಯಾರನ್ನೂ ಒಲಿಸದೆ ಇನ್ನೊಬ್ಬಳನ್ನು–ರುಕ್ಮಿಣಿ–ಕದ್ದಸೂಚನೆ, ಚೇಡನೆಗಳು ಅತ್ಯಂತ ಸಹಜವಾಗಿ ಬಂದಿದ್ದು ಉತ್ತಮ ಕೃತಿಯಾಗಿದೆ.

೩೦೭

ಬಾಲಲೀಲೆಯಲ್ಲಿ ರಾಧಾ–ಕೃಷ್ಣರ ಒಡನಾಟ–ಓಡಾಟ ಸುದ್ದಿಯಾಗಿ ಕೇಳುವ ರೀತಿಯಲ್ಲಿ ಕೃಷ್ಣಾವತಾರದ ತತ್ವವನ್ನು ವಿಸ್ತರಿಸಲಾಗಿದೆ. ಕೃಷ್ಣನೇ ರಾಧೆಯಾಗಿ ಅವತರಿಸಿ ನಟನೆ ಮಾಡುತ್ತಿರುವಂತೆ 'ಏಕೋಭಾವ ' ಗೊಳಿಸಿದ ಮೂಲತತ್ವ 'ಶರಣಾಗತಿ ' ಯೂ ಇದೆ. ಶರಣಾಗತಿಯ ಪರಮ ಗುರಿ ಈ ಐಕ್ಯತೆಯೇ ಆಗಿರುತ್ತದೆ.

೩೧೭

ಇದು ಇನ್ನೊಂದು ಬಗೆಯ ಕೃಷ್ಣಲೀಲೆ ಸಹಜ ಸೌಂದರ್ಯದಿಂದ ಕೂಡಿದೆ. ತಾವರೆ ಬಳಿಯಿರುವ ಹಂಸಕ್ಕೆ ಗೋಪಿಕೆಯೊಬ್ಬಳು ಕೃಷ್ಣ ಬರುವ ಸುದ್ದಿ ತಿಳಿಸೆನ್ನುವ ಭಾವವಿದೆ. ಒಡನೆ ಅದು ಮರಳಿನ ದಂಡೆಯ ಕೊಳದ ಬಳಿ ಕಾಯುತ್ತಿರುವ ಗೆಳತಿ ರಾಧೆಯನ್ನು ಕೇಳೆನ್ನುವ ಚಿತ್ರವೂ ತುಂಬ ಸೊಗಸಾಗಿದೆ. ಅವನಿರುವ ಜಾಗ ಮರದ ನೆರಳು, ಹಸುಗಳ ಗುಂಪು, ಕರುಗಳ ಜೊತೆ, ಹೂ ಪರಿಮಳದ ಭರದಿಂದ ನೆಲಕ್ಕಪ್ಪಿರುವ ಲತೆಗಳ ಬಳಿ ಎಂದು ಸೂಚನೆ ಕೊಡುತ್ತಾಳೆ. ಮುರಳಿನಾದ, ತರುಣಿಯರ ಬಗೆತಿಳಿದವ ಪೀತಾಂಬರಚೆಲುವ, ಶರಣಾಗತರಕ್ಷಕ ಹಾಡಿ ಹೊಗಳಿದರೆ ಜತೆ ನರ್ತನ ಮಾಡುತ್ತಾನೆ ಎಂದು ಅವನ ಗುರುತು ಹೇಳುತ್ತಾರೆ. ಸುಂದರ ನರ್ತನ ನೋಡುವನು, ವರ ನೀಡುವನು, ಒಡನೆ ಸೇರುವನು ಎಂಬ ತನ್ನ ಅವನ ಗುಣಸ್ವಭಾವವನ್ನು ಅನುಭವದಿಂದ ಹೇಳುತ್ತಾಳೆ. ಬೆಳದಿಂಗಳನ್ನು ಮೀರಿಸಿದ ಚೆಲುವನು ನಿನ್ನೆಡೆ ಬರುವ, ಆಗ ನೀನು ನನ್ನನ್ನು ಕರೆವ ಸನ್ನೆ ಮಾಡು, ಕೂಡಲೆ ಬಂದು ಚರಣ ಪಿಡಿವೆ ಎಂದು ಹೇಳುತ್ತ ಕೋಲಾಟಗಾರ–ನೀಲಾಂಬರ ಶ್ಯಾಮಸುಂದರ ಸುಂದರ ವನಮಾಲಾಧರ ಮಾಂಗಿರಿಗೆ ಬಾರೆನ್ನುವ ಎಂದು ಕನಸು ಕಾಣುವ ಕಲ್ಪನೆ ಅತ್ಯಂತ ರೋಚಕವಾಗಿದೆ. ಸಖೀಭಾವ ತುಂಬ ಸುಂದರವಾಗಿದೆ, ಇದು ದೈವಭಕ್ತರ ಸಮರ್ಪಣೆಯ ತಾದಾತ್ಮ್ಯತೆಯ ದ್ಯೋತವಾಗಿದೆ.

೩೨೨

ಜಾನಪದ ಶೈಲಿಯಲ್ಲಿ ಆತ್ಮೀಯವಾಗಿ ಕೃಷ್ಣಲೀಲೆಯನ್ನು ಹೊಸ ದೃಷ್ಟಿಯಲ್ಲಿ ನೋಡಿದ್ದಾರೆ. ಗೋಪಿ–ರಾಧೆ ಯಶೋದೆಯರ ಸುತ್ತಲೂ ಇದ್ದ ಕೃಷ್ಣಲೀಲಾ ಚಿತ್ರ ವಾಸ್ತವಕ್ಕೆ ಬಂದು ಸುತ್ತಲಿನ–ಇಂದಿನ ಜನರ ದೃಷ್ಟಿಯಲ್ಲಿ ಆಡುಮಾತಿನಲ್ಲಿ ವರ್ಣಿಸಲಾಗಿದೆ. ತೊಟ್ಟಿಲಲ್ಲಿ

ಆಡುವ ಮಗುವಿನ ಸಹಜ ಚಿಹ್ನೆಗಳನ್ನು, ಮಗುವಿನ ಚೆಲುವಿನ ಅಂದ. ಅವನ ಪೂಜೆಗೆ ಹಣ್ಣು ಹೂ ತಟ್ಟೆ ತಂದ ಧನ್ಯತೆ, ಅವನ ಆಭರಣ ಅಲಂಕಾರದ ಸಹಜತೆ ಮತ್ತು ಎಲ್ಲ ದೈವದ ಏಕೀಭಾವ-ಸರಳವಾಗಿ ಚಿತ್ರಿತವಾಗಿದೆ.

೩೨೩

ಸುಂದರವಾದ ಕೃಷ್ಣಲೀಲೇಯ ಸ್ತುತಿ, ಯಶೋದೆ ಕೃಷ್ಣನ ಬಾಲಲೀಲೆಗಳನ್ನು ಎಷ್ಟು ನೋಡಿದರೂ ಎಷ್ಟು ಸ್ತುತಿಸಿದರೂ ಸಾಲದು, ಅವಳಿಗೆ ದಣಿವೆಂಬುದೇ ಇಲ್ಲ ಎಂಬ ಭಾವ ಇಲ್ಲಿ ಮಡುಗಟ್ಟಿದೆ.

ಬಾಯಿಯಲ್ಲಿ ವಿಶ್ವರೂಪ ದರ್ಶನ, ಪೂತನಿ, ಶಕಟ, ಬಕ, ಕಾಳಿಂಗರ ಸಂಹಾರ, ಗೋವರ್ಧನಧಾರತ್ವ – ಮುರಳೀನಾದದ ಮೋಹಕತ್ವಗಳ ಮೂಲಕ ಭೂಮಿಯನ್ನೇ ಸ್ವರ್ಗವಾಗಿ ಮಾಡಿದ ಕೃಷ್ಣನ ಅಂಗಸೌಷ್ಠವಕ್ಕೆ ಮರುಳಾದ ಗೋಪಿ, ಯಶೋದೆಯ ಸುಂದರ ಚಿತ್ರ ಇಲ್ಲಿದೆ.

೩೨೪

ಇದೂ ಸುಂದರ ಕೃಷ್ಣಲೀಲಾ ವರ್ಣನೆಯಾಗಿದೆ. 'ಹಸುಕರೆವುದು ಸಾಕು,' ಬೆಣ್ಣೆಬೇಕು, 'ಏಕೆಮರೆಯಲ್ಲಿರುವೆ ' ಎಂಬ ಸಹಜ ಸಂಭಾಷಣಶೈಲಿಯ ಸುಂದರ ಚಿತ್ರಣ ಇಲ್ಲಿದೆ. ಶರಣಾಗತಿಯನ್ನು 'ನೀಕೊಡೆ ನಾಬಿಡೆ' ತತ್ವದ ಮೂಲಕ ಧ್ವನಿಸಿದ್ದಾರೆ. ಮೊಸರು ಕಡೆವಾಗ ಹಸಿವು ಆದರೆ ಬೆಣ್ಣೆ ಬದಲು ಅನ್ನ ಕೊಡಲು ಹಸುವಿಗಿಡುವ ಮೊಸರು ಮೆದ್ದು ಓಡುವ ಹಾಗೂ ಬೆಣ್ಣೆ ತೆಗೆವಾಗ ತಣ್ಣೀರೆರಚಿ ಕಣ್ಣು ಮುಚ್ಚಲು ಮೆಲುವ, ಓಡಿ ಹೆಣ್ಣುಗಳೆಡೆ ನಗುತ ಹುದುಗುವ ಸಹಜ ಸುಂದರ ಬಾಲಲೀಲೆಗಳನ್ನು ಕಲ್ಪಿಸಿದ್ದಾರೆ.

೩೨೫

ಇನ್ನೊಂದು ಬಗೆಯ ಸುಂದರವಾದ ಸಖೀಗೀತೆ ಈ ಕೃತಿ. ಮಕ್ಕಳನ್ನು ಕೊಲ್ಲುತ್ತಿರುವ ಪೂತನಿಯ ಸುದ್ದಿಯನ್ನು ಕೃಷ್ಣನಿಗೆ ತಿಳಿಸಿದರೆ ಓಡಿಬರುತ್ತಾನೆ, ನಿನಗೆ ಹಾರ ಬಹುಮಾನ ಕೊಡುತ್ತೇನೆಂದು ಸಖಿಗೆ ಪುಸಲಾಯಿಸುವ ಗೋಪಿಕೆಯ ಚಿತ್ರ ಸಹಜವಾಗಿದೆ. ಗಜೇಂದ್ರ, ಧ್ರುವ, ಪ್ರಹ್ಲಾದ-ಪಾಂಚಾಲಿಯರ ಕೂಗು ತಿಳಿಸು, ಕಾಳಿಂಗನ ವಿಷ ಬಿತ್ತರದಿಂದ ಹಸುಕರುಗಳ ಸಾವಿನ ಸುದ್ದಿ ತಿಳಿಸು, ಜೊತೆ ಬರದಿದ್ದರೆ ಗೋಪಿಯರು ಪೀಡಿಸುವರೆಂದೂ ಹೇಳು ಅವನು ಮಹಾ ಇಂಗಿತಜ್ಞ ಕೂಡಲೆ ಓಡಿಬರುವ ಎಂದು ಹೇಳುವಲ್ಲಿ ಕೃಷ್ಣನ ಸಾಹಸಗಳ-ರಸಿಕತೆಯ ವರ್ಣನೆ ಒಂದೆಡೆಯಿದ್ದರೆ ಗೋಪಿಕೆಯರ ಪ್ರೀತಿ-ಭಕ್ತಿಯ ಸೆಳೆತ ಇನ್ನೊಂದೆಡೆಯಿದೆ.

೩೩೩

ಭಗವಂತನನ್ನು ಕಂಡಿರುವ ಭಕ್ತ ತನ್ನನ್ನು ಏಕೆ ಕರೆದುಕೊಳ್ಳುತ್ತಿಲ್ಲವೆಂಬ ಆತ್ಮವಿಮರ್ಶೆ ಇಲ್ಲಿದೆ. ೧ನೆ ನುಡಿಯಲ್ಲಿ ಚಿಣ್ಣ, ಚಿಣ್ಣರು, ಸಣ್ಣಕೊಳಲು, ಆಟ, ಕರೆವ ಕಣ್ಣನ್ನೆ–ಪದಗಳ ಮೂಲಕ ಅತ್ಮೀಯತೆ ಸಹಜತೆ ಬಂದಿದೆ. ಮುಂದಿನ ನುಡಿಗಳಲ್ಲಿ 'ಪೊಡವಿ ದೇವಿಯ ತಂದು ನೊಂದುದಾಯ್ತು ' ಎಂಬಲ್ಲಿ ವರಾಹ ಕಲ್ಪನೆಯದೆ. 'ಪ್ರಹ್ಲಾದನು ಕರೆಯದೆಯೆ' ಎಂಬ ಆತ್ಮೀಯ ಚಿತ್ರವನ್ನು ಬಿಡಿಸುವುದರ ಮೂಲಕ ಕಾಣುತ್ತಿರುವ ದೈವವನ್ನು ಹಿಡಿಯುವ ವೈಶಿಷ್ಟ್ಯವಿದೆ. ಆದರೆ ದೈವಾಪಚಾರವನ್ನು ಮಾಡಕೂಡದು–ಕೇಳಬಾರದು–ನೋಡಲೂ ಬಾರದು ಎಂದೂ ಒಂದುವೇಳೆ ಹಾಗಾದರೆ ದೈವಸಾಕ್ಷಾತ್ಕಾರ ಸಾಧ್ಯವಾಗದು ಎಂಬ ಶ್ರೀವೈಷ್ಣವ ಧಾರ್ಮಿಕ ನಿಷ್ಠೆಯ ಅರಿವನ್ನು ಹೊಂದಿ ಆರ್ತತೆ, ನಿವೇದನೆಯ ಶರಣಾಗತಿಯನ್ನು ವ್ಯಕ್ತಪಡಿಸಿದಂತಿದೆ. ಭಕ್ತನೊಬ್ಬ ತನ್ನಭಕ್ತೆಯಲ್ಲಿ ವ್ಯಕ್ತಪಡಿಸಬೇಕಾಗಿರುವ ಪ್ರಾಮಾಣಿಕತೆಯನ್ನು ಇದು ತಿಳಿಸುತ್ತದೆ.

೩೩೮

ಏಕಾದಶಿವ್ರತದ ಮಹತ್ವದ ವರ್ಣನೆಯ ಜೊತೆಜೊತೆಗೇ ದಾಸರ ಪದಗಳ ಮಹತ್ವವನ್ನೂ ಇದು ಹೇಳುತ್ತದೆ. ಶ್ರೀವೈಷ್ಣವ ಧರ್ಮೀಯರಿಗೆ ಏಕಾದಶೀ ಬಹಳ ಪ್ರಮುಖವಾದ ಆಚರಣೆ. 'ಹರಿಭಜನೆ ತಾಳಮೇಳಗಳನ್ನು ಕಾಯುವಾಗತ್ಯವಿಲ್ಲ. ಹಾಗೆಯೇ ಸಂಗೀತ ಕೋವಿದರಿಹರೆಂದು ದಾಸರ ಪದದ ನಿರ್ಲಕ್ಷ್ಯ ಸಲ್ಲ. ಅದಕ್ಕಾಗಿ ಕಾಯುತ್ತಿದ್ದರೆ ಕಾಲ ನಿಲ್ಲುವುದಿಲ್ಲ. ಇರುವುದನ್ನು ಹೊಂದಿಸಿಕೊಂಡು ದೈವಸ್ತುತಿಮಾಡಬೇಕು. ದಾಸರ ಪದಗಳಲ್ಲೂ ಮಹತ್ವದ ಸಾರವಿದೆ, ಶಾಸ್ತ್ರೀಯ ಕೃತಿಗಳಲ್ಲಿಲ್ಲ ಎಂಬುದನ್ನು ಹೇಳುವುದರ ಮೂಲಕ ದಾಸರ ಪದಗಳ ಬಗ್ಗೆ ಸಂಗೀತ ತಜ್ಞರಲ್ಲಿ ಇರುವ ಭೇದಭಾವವನ್ನು ಸೂಕ್ಷ್ಮವಾಗಿ ಸೆರೆಹಿಡಿದಿದ್ದಾರೆ. ಇಂದಿಗೂ ಈ ಅನಾದರಣೆ ಇರುವುದನ್ನು ಗಮನಿಸಬಹುದು.

೩೩೯

ಆಧುನಿಕ ಸಮಾಜದಲ್ಲಿ ಛಿದ್ರಗೊಂಡಿರುವ ಕೌಟುಂಬಿಕ ವ್ಯವಸ್ಥೆಯ ಮೇಲೆ ಬೆಳಕು ಬೀರುವ ಈ ಕೀರ್ತನೆ ಉತ್ತಮವಾದ ಲೋಕದರ್ಶನವಾಗಿದೆ. ವಿಧವೆಗೊಂದು ವಿಧುರಗೊಂದು ನೀತಿ, ಕುರುಡಗೆ ಅಣಕು, ಕಿವುಡಗೆ ಬೈಗುಳ, ಮುದುಕಗೆ ಹೀಯಾಳಿಕೆ, ಮುದುಕನ ಕೊರಗು, ಇತ್ತ ಅತ್ತ ಎತ್ತಹೋದರೂ ತುತ್ತಿಗೆ ದುಸ್ಥಿತಿ, ಸೊಸೆಯ ಬಿರುನುಡಿ, ಮಗನ ಕಳ್ಳಕಪಟ (ಹೆಂಡತಿ ಭಯಕ್ಕೆ) ಗಳನ್ನೆಲ್ಲ ಹೇಳುತ್ತ, ಮದ್ದಿಲ್ಲವಿದಕೆ, ಎನ್ನುವ ಮೂಲಕ ಈ ಕಲಿಗಾಲದ ಬಾಂಧವ್ಯದ ಪ್ರೀತಿಯ ಅಣಕನ್ನು ಸುಂದರವಾಗಿ ಚಿತ್ರಿಸಿದ್ದಾರೆ.

೩೪೫

ಸುಂದರವಾದ ಲೋಕನೀತಿಯ ಈ ಕೃತಿ 'ಜಾತಿ ಕುಲ ಗೋತ್ರಗಳ ಖ್ಯಾತಿಗಿಂತ ನೀತಿ ನಯ ಭಕ್ತಿಯೇ ಹಿರಿ'ದೆಂಬ ಸತ್ಯವನ್ನು ಸಾರಿದೆ. ಗುಣವನ್ನು ಪರಿಗಣಿಸಬೇಕೆ ವಿನಾ ಅನ್ಯವನ್ನಲ್ಲ ಎಂಬುದನ್ನು ದ್ವಿಜನಾಗಿದ್ದರೂ ದ್ವಿಜಾಚರಣೆಯಿಲ್ಲದಿದ್ದಲ್ಲಿ ದ್ವಿಜನಾಗುವುದಿಲ್ಲ; ಹರಿಜನನಾಗಿದ್ದರೂ ಹರಿನಾಮಸ್ಮರಣೆ ಮಾಡಿದರೆ ದ್ವಿಜಸಮಾನ ಎಂಬ ಹೇಳಿಕೆಯಲ್ಲಿ ಸಮರ್ಥಿಸಿರುವ ಸಮಾನತೆಯ ಭಾವವನ್ನು ಕಾಣಬಹುದು. ಕೇವಲ ತೋರಿಕೆಯ ಬ್ರಾಹ್ಮಣ್ಯವಾಗಲಿ ಹಣದಾಸೆಯ ಅಚರಣೆಯಾಗಲಿ ಹರಿಕೃಪೆಗೆ ಬರುವುದಿಲ್ಲವೆಂಬಲ್ಲಿ ಇಂದಿನ ಬ್ರಾಹ್ಮಣ್ಯದ ಪರಿಸ್ಥಿತಿಗೆ ಕನ್ನಡಿ ಹಿಡಿದಿದೆ.

೩೪೭

ಈ ಕೀರ್ತನೆಯಲ್ಲಿ 'ತಾಳ' ಪದವನ್ನು 'ರಾಗಿ' ಪದದಂತೆ ಜಾಣತನದ ಶ್ಲೇಷಾರ್ಥದಲ್ಲಿ ಬಳಸಿದ್ದಾರೆ. ಪದಗಳು 'ತಾಳ' ವಿಶೇಷಣದಿಂದ ವಿಶೇಷಾರ್ಥದಿಂದ ಕೂಡಿದೆ, ತಾಳುವಿಕೆ–ರಾಗದತಾಳ ಎರಡರ ಬಳಕೆಯೂ ಅನನ್ಯವಾಗಿದೆ, ಸುಂದರವಾಗಿದೆ. ಹರಿದಾಸನಿಗೆ ಇರಬೇಕಾದ ತಾಳ್ಮೆಯನ್ನೂ ದೇವರನ್ನು ಸ್ತುತಿಸುವ ಉಪಾಯ–ಹೊಂದಾಣಿಕೆಯ ತಾಳವನ್ನೂ ಅತ್ಯಂತ ಔಚಿತ್ಯಪೂರ್ಣವಾಗಿ ನಿರೂಪಿಸಿದ್ದಾರೆ.

೩೪೮

ಸಂಸಾರದಲ್ಲಿದ್ದೂ ಪ್ರಪತ್ತಿ ಸಾಧಿಸುವ ಶ್ರೀವೈಷ್ಣವ ಭಕ್ತನ ಚಿತ್ರ ಇಲ್ಲಿದೆ. ಶರಣಾಗತಿ ಮತ್ತು ಆಸೆಗಳು ತದ್ವಿರುದ್ಧವಾಗಿದ್ದು ಅದರ ಹೊಂದಾಣಿಕೆಯನ್ನು ಸುಂದರವಾಗಿ ಇಲ್ಲಿ ನಿರೂಪಿಸಿದ್ದಾರೆ. ಅತಿಮಾತಿನಸತಿ–ಕೋಪಿಷ್ಟನೆಂಟರು–ಅಹಿತಸುತರು ಇವರನ್ನೆಲ್ಲ ಸಹಿಸಿ ಭಜನೆಗೈಯುವ ದಾಸನಾಗುವ ಹಂಬಲದಲ್ಲಿ ಆಸೆಯನ್ನು ಮೆಟ್ಟಿ ಶರಣಾಗತನಾಗುವ ಆತ್ಮಸ್ಥೈರ್ಯದ ಚಿತ್ರವಿದೆ. ಬಂಧುಗಳ ಅತಿಯಾಸೆ, ಕಾಡುವ ಅಳಿಯಂದಿರು, ಋಣಬಾಧೆಗಳಂತಹ ಅಣುಅಣುಕಾಡುವ ಸಂಸಾರ–ಕುಟುಂಬದ ನಡುವೆಯೇ ದಾಸನಾಗಬೇಕು ಎಂಬ ಮನೋನಿಗ್ರಹ ಬದುಕಿನ ಜಂಜಡದಲ್ಲಿದ್ದುಕೊಂಡೇ ಚಿತ್ತಶಾಂತಿ ಹೊಂದುವುದು ಶರಣಾಗತಿ ಸಾಧನೆಯ ಲಕ್ಷಣವಾಗಿದೆ.

೩೫೩

'ಬೇಡುವಿಕೆಯ ' ಸುಂದರ ನಿರೂಪಣೆ ಇಲ್ಲಿದೆ. 'ಬೇಡುವುದು ರೋಗ ' ಎನ್ನುವ ಮೂಲಕ ಅದನ್ನು ಸಮಾಜಕಂಟಕವಾಗಿ ಕಂಡಿದ್ದಾರೆ. ಬೇಡುವವನ ಚಿತ್ರಹಿಂಸೆ,

'ದುಡಿಗೇಡಿ'ಲಕ್ಷಣ, ಮಾನಭಂಗಗಳನ್ನು ಬಿಡಿಸಿಟ್ಟು ಅವಮಾನವೆನಿಸಿದ್ದಾರೆ. ತಪ್ಪಿಸಲು ಹರಿನಾಮದ ದಾರಿ ತೋರಿದ್ದಾರೆ. ' ದುಡಿಗೇಡಿ' ಅರ್ಥಪೂರ್ಣವಾದ ನೂತನ ಪ್ರಯೋಗ.

ಹರಿದಾಸನ ವೃತ್ತಿಮೌಲ್ಯ ಕಾಲಕಾಲಕ್ಕೆ ಬದಲಾಗುವುದರ ಇಂಗಿತವನ್ನು ಇಲ್ಲಿ ದಾಸರು ಹೇಳಿದ್ದಾರೆ. ದಾಸಸಾಹಿತ್ಯದಲ್ಲಿ ಹರಿದಾಸರ ಒಂದು ಮುಖ್ಯ ಲಕ್ಷಣವಾಗಿ 'ಉಪಾದಾನ', 'ಊಂಛ ವೃತ್ತಿ' ಯನ್ನು ನೋಡುತ್ತೇವೆ. ಆ ಕಾಲಕ್ಕೆ ಅದರ ಅಗತ್ಯವಿತ್ತೆಂದೂ ಎಲ್ಲಕಾಲದ ದಾಸರೂ ಅದನ್ನು ಅನುಸರಿಸಬೇಕೆಂದಾಗಲೀ ಅನುಸರಿಸದವರನ್ನು ದಾಸರಲ್ಲವೆಂದಾಗಲೀ ಹೇಳುವ ಅಭಿಪ್ರಾಯಗಳಿಗೆ ಅರ್ಥವಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

೧೭ನೇ ಶತಮಾನದ ನಂತರದ ದಾಸರುಗಳಲ್ಲಿ ಈ ವೃತ್ತಿ ಅನಿವಾರ್ಯವಾಗಿ ಎಲ್ಲರಲ್ಲೂ ಕಂಡು ಬರದಿರುವುದನ್ನು ಇದು ಎತ್ತಿಹಿಡಿಯುತ್ತದೆ. ಕಾಲ ಬದಲಾದಂತೆಲ್ಲ ಈ ಮೌಲ್ಯವೂ ಬದಲಾಗಿದೆ. ಈ ಕಾಲದಲ್ಲಂತೂ ಇದು ನಿಷೇಧವಾಗುವಷ್ಟು ಸಮಾಜ ಕಂಟಕದೋಷವಾಗಿರುವುದು ಬಹಳ ಮುಖ್ಯ ಸಂಗತಿ. ಪ್ರಾಯೋಗಿಕವಾಗಿ ಬೇಡುವ ವೃತ್ತಿ ಈಚಿನ ದಾಸರಲ್ಲಿ ಇಲ್ಲದಿದ್ದರೂ ಈ ಪ್ರತಿಮೆಯನ್ನು ಪುರಂದರದಾಸರಷ್ಟೇ ಸಮರ್ಥವಾಗಿ ಬಳಸಬಲ್ಲರೆಂಬುದಕ್ಕೆ ಈ ಕೃತಿಯನ್ನು ನೋಡಬಹುದು.

೩೫೭

ಪುರಂದರ ದಾಸರ 'ರಾಗೀ ತಂದೀರಾ.....?' ಕೀರ್ತನೆಯ ಅನುಕರಣೆಯಂತೆ ಮೇಲ್ನೋಟಕ್ಕೆ ಕಂಡರೂ ಅದಕ್ಕಿಂತ ಭಿನ್ನವಾಗಿದ್ದು ಸುಂದರ ನಿರೂಪಣೆಯಿದೆ. 'ರಾಗಿ ತರುವ' ಪದದ ಜಾಣ್ಮೆ ಪುರಂದರರಲ್ಲಿದ್ದರೆ 'ರಾಗಿ ಬೆಳೆಯುವ' ಪದದ ಜಾಣ್ಮೆ ಇವರಲ್ಲಿದೆ. ರಾಗಿಯನ್ನು ಬೆಳೆದು ಸೇವಕರಾಗಿ, ಭಾವುಕರಾಗಿ ನಿರ್ಮಲರಾಗಲು ಕರೆಯಿದೆ. 'ಹಿರಿಯರೆಲ್ಲ ಕಿರಿಯರಾಗಿ ಕಿರಿಯರೆಲ್ಲ ಗೆಳೆಯರಾಗಿ', ಎಂಬಂತಹ ಸುಂದರ ಸೂಕ್ತಿಗಳಿಂದ ಕೂಡಿ ಹೊಸತನವನ್ನು ಪಡೆದಿದೆಯಲ್ಲದೆ ಅಲ್ಲಿಯ ಯಾವೊಂದು ಪದವೂ ಪುನರಾವರ್ತನೆಯಾಗದ ಎಚ್ಚರಿಕೆ ಮತ್ತು ಸಹಜತೆಯಿಂದ ಕೂಡಿದೆ.

೩೬೦

ಇದು ಹಣದ ಪ್ರಭಾವ, ಗುಣದ ಕೊರತೆಯನ್ನು ಹೇಳುವ ಲೋಕನೀತಿಯ ಕೃತಿ. ಇಂದಿನ ನೀಡುವವರ ಬೇಡುವವರ ಹೆಚ್ಚಳಕ್ಕೆ ನಿಬ್ಬೆರಗಿದೆ. ಕಲಿಯುಗದ ನೀತಿಯಾಗಿ ದುರಾಸೆ, ಅಸೂಯೆ, ದುರ್ನೀತಿಗಳು ಮಾರ್ಪಡುತ್ತಿರುವ ಬಗ್ಗೆ ಕಳವಳವಿದೆ. ಇದರ ನಡುವೆ 'ಈ ದುರುಳ ಪ್ರವಾಹಕ್ಕೆನ್ನ ನೂಕಬೇಡ' ಎಂಬ ಎಚ್ಚರವೂ ಇದೆ. ದಾಸರು ಸಮಾಜವನ್ನು ಎಷ್ಟು ಸೂಕ್ಷ್ಮವಾಗಿ ಗ್ರಹಿಸುತ್ತಾರೆ ಎಂಬುದಕ್ಕೆ ಇದು ಉತ್ತಮ ನಿದರ್ಶನವಾಗಿದೆ.

೩೬೧

ಅರ್ಚನಾವೃತ್ತಿಯ ವಿಡಂಬನೆಯ ಸ್ಪಷ್ಟಚಿತ್ರಣವನ್ನು ಇಲ್ಲಿ ಕಾಣಬಹುದು. ಶ್ರೀವೈಷ್ಣವರ ಲಾಂಛನವಾದ ಹಣೆಯಲ್ಲಿ ಧರಿಸುವ ಊರ್ಧ್ವ ಪುಂಡ್ರದಿಂದ ಅವರನ್ನು ತಿರುನಾಮಧಾರಿಗಳು ಎಂದು ಕರೆದಿದೆ. ಪ್ರಧಾನವಾಗಿ ಇವರ ವೃತ್ತಿ ಅರ್ಚನೆ. ಈ ವೃತ್ತಿಯಲ್ಲಿ ಕೆಲವರು ತೋರುವ ಆಶೆಬುರುಕತನ ಲೌಕಿಕತೆಯನ್ನು ಇಲ್ಲಿ ನಿರೂಪಿಸಲಾಗಿದೆ.

ವಿಷ್ಣುವನ್ನು ಪರ-ವ್ಯೂಹ-ವಿಭವ ಎಂಬ ಮೂರು ಮುಖ್ಯ ಸ್ಥಿತಿಗಳಲ್ಲಿ ಶ್ರೀವೈಷ್ಣವ ತತ್ವ ಗುರುತಿಸುತ್ತದೆ. ಪರದಲ್ಲಿ ವಾಸುದೇವನನ್ನು ವ್ಯೂಹದಲ್ಲಿ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಮತ್ತು ದ್ವಾದಶನಾಮಗಳನ್ನು ವಿಭವದಲ್ಲಿ ದಶಾವತಾರಗಳನ್ನು ಮತ್ತು ಇತರ ಅವತಾರಗಳನ್ನೂ ಗುರುತಿಸಲಾಗಿದೆ. ಪರದಲ್ಲಿನ ವಿಷ್ಣುವಿನ ಪರವಾಸುದೇವನ ಸ್ಮರಣೆಯನ್ನು ಇಲ್ಲಿ ತರಲಾಗಿದೆ.

ದೇವಾಲಯಗಳಲ್ಲಿ ಭಕ್ತಾದಿಗಳು ನೀಡುವ ದಕ್ಷಿಣೆಯತ್ತಲೇ ಮನಸ್ಸಿಟ್ಟಿರುವ ಬೂಟಾಟಿಕೆಯ ಅರ್ಚನೆಯನ್ನು ಇಲ್ಲಿ ಛೇಡಿಸಲಾಗಿದೆ. ಅರ್ಚನೆಯೆಂಬುದು ಉದರಪೋಷಣೆಯ ಮಾರ್ಗವಲ್ಲ ಎಂಬುದನ್ನು ಅತ್ಯಂತ ಮಾರ್ಮಿಕವಾಗಿ ನಿರ್ವಹಿಸಿದ್ದಾರೆ.

೩೬೨

ಇದು ಮಾಂಗಿರಿರಂಗನ ವಿವರಣೆಯ ಇನ್ನೊಂದು ಕೃತಿ, ತಿರುಪತಿ ವೆಂಕಟೇಶನ ಅವತಾರ ಎಂಬ ಕಲ್ಪನೆ, ಹರ-ಹರಿರೂಪದಲ್ಲಿ ಗುಂಡು-ಒರಳ ಮೂರ್ತಿಯಾಗಿರುವ ಐತಿಹ್ಯದ ಉಲ್ಲೇಖ, ಶರಣಾಗತರಕ್ಷಕನ ಶರಣಾಗತಿ ತತ್ವಗಳೊಂದಿಗೆ ಇನ್ನೊಂದು ಐತಿಹ್ಯವನ್ನು ದಾಖಲಿಸಿದ್ದಾರೆ. 'ತನಯನೊರ್ವನನೆ'-ಎಂಬುದು ಸ್ಥಳದಲ್ಲಿ ಪ್ರಚಲಿತವಿರುವ ದಂತಕಥೆ - ಸ್ಥಳಪುರಾಣವಾಗಿದೆ.

೩೬೬

'ಭೂಮಿಯಲ್ಲಿ ಶರೀರ ಸಾರತರವಾದ ಒಂದು ವೃಕ್ಷ' ಎಂದು ಭಾವಿಸಿರುವ ಅದ್ಭುತಕಲ್ಪನೆ ಈ ಕೃತಿ. ವೃಕ್ಷದ ಪೋಷಣೆಗೆ ಬೇಕಾದವುಗಳನ್ನೆಲ್ಲ ಪ್ರತಿಮಾವಿಧಾನದಿಂದ ಸಂಕಲಿಸಿದ್ದಾರೆ. ಅದಕ್ಕೆ ತ್ರಿಕರಣದಬೇರು, ಚತುರ್ವರ್ಗದ ರಸ, ಪಂಚೇಂದ್ರಿಯದ ಬಿಳಲು, ತಾಪತ್ರಯದ ಕೊನೆ, ಸಪ್ತಧಾತುಗಳ ತೊಗಟೆ, ಅಷ್ಟಮದಗಳ ಕೊಂಬೆಗಳಿರುತ್ತವೆ. ಅದರಿಂದ ಪಾಪಪುಣ್ಯದ ಎರಡು ಗಳಿಕೆಗಳಿರುತ್ತವೆ. ಈ ದೇಹವನ್ನು ಸಕ್ರಮಗೊಳಿಸಿದಲ್ಲಿ ಅಷ್ಟಾಕ್ಷರಿಯ ರಂಧ್ರಪರ್ಣಗಳು ಲಕ್ಷ್ಮೀ ಶ್ರೀವಿಷ್ಣುವಿನಾಕಾರ ಎರಡು ಮತ್ತು ಷಡ್ರಸದ ಫಲಗಳು ದೊರಕುತ್ತವೆ. ಕೊನೆಯಲ್ಲಿ ಶ್ರೀಹರಿಪಕ್ಷಿದರ್ಶನವಾಗುತ್ತದೆ.

ಈ ಶ್ರೀಹರಿಪಕ್ಷಿಗೆ ಭಕ್ತನು, ಕೃಪೆ ಎಂಬ ಶರಣಾಗತಿಯನ್ನು ಕೊಟ್ಟರೆ ಅದರಲ್ಲಿ ಲೀನವಾಗಿ ಒಂದೇ ಪಕ್ಷಿ ಎನಿಸಿ ಆತ್ಮ ಒಂದಾಗಿ ದೇಹ ಗೆಲ್ಲುತ್ತ ಮೋಕ್ಷಸಾಧನೆಯಾಗುತ್ತದೆ.

ಶ್ರೀ ವೈಷ್ಣವ ತತ್ವದ ಪ್ರತಿಪಾದನೆ ಇಲ್ಲಿ ಬಹಳ ಸ್ಪಷ್ಟವಾಗಿ ಪಡಿಮೂಡಿದೆ. ವಿಶಿಷ್ಟಾದ್ವೈತದ ಪರಮಪದ ಪುರುಷಾರ್ಥಸಾಧನೆ. ಮನುಷ್ಯನ ಮುಕ್ತಿ ಶರಣಾಗತಿಯಲ್ಲೇ ಇದೆ. ಭಗವಂತನಲ್ಲಿ ಸಂಪೂರ್ಣ ಶರಣಾದರೆ ಅವನಲ್ಲೇ ಲೀನವಾಗಿ ಮುಮುಕ್ಷುವಾಗುತ್ತಾನೆ. ಶ್ರೀವೈಷ್ಣವ ಭಕ್ತೆ ಆಂಡಾಳ್ ಕಥೆ ಇದೇ ತತ್ವದ ಮೇಲೆ ನಿಂತಿದೆ.

೩೬೭

ದಿವ್ಯಯೋಗಗಳ ಸಾಧಕಮೂರ್ತಿಯನ್ನಾಗಿ ಭವ್ಯಾವಯವಸೌಂದರ್ಯದೀಪ್ತಿಯನ್ನಾಗಿ ಶ್ರೀಲೋಲನನ್ನು ಕಲ್ಪಿಸಿದ್ದಾರೆ. ಕರ್ಮಯೋಗ, ಭಕ್ತಿಯೋಗ, ಹಟಯೋಗ, ರಾಜಯೋಗ, ಜ್ಞಾನಯೋಗಗಳನ್ನೆಲ್ಲ ತಿಳಿಸಿ ಪಾಮರನಿಗೆ ಇವುಗಳ ಅಸಾಧ್ಯತೆಯಿಂದ ಪ್ರಪತ್ತಿಯೋಗವನ್ನು ಸಾಧಿಸುವ 'ಕೈಂಕರ್ಯ ಶೀಲತೆ' ಇಲ್ಲಿ ವ್ಯಕ್ತವಾಗಿದೆ. ಉಳಿದ ಯೋಗಗಳನ್ನು ಜ್ಞಾನಿಗಳು. ತಪಸ್ವಿಗಳು, ಯತಿಗಳು ಕೈಕೊಂಡರೆ ಪ್ರಪತ್ತಿಯೋಗವನ್ನು ಪಾಮರನು ಸುಲಭವಾಗಿ ಅನುಸರಿಸಬಹುದಾದ ಸರಳ ಸೂತ್ರ, ಶ್ರೀವೈಷ್ಣವ ಧರ್ಮದ ಪರಮ ಉಪಾಯ. ಈ ಉಪಾಯವನ್ನು ಕಂಡು ಧನ್ಯರಾಗಿರುವ ದಾಸರ ಆತ್ಮೋಪಮೆ ಇಲ್ಲಿದೆ.

೩೬೮

ಮನುಷ್ಯನ 'ನಾನು' ಎಂಬ ಅಹಂಕಾರವನ್ನು ಕುರಿತು ಇಲ್ಲಿ ಮಾರ್ಮಿಕವಾಗಿ ಹೇಳಲಾಗಿದೆ. ಶರೀರವನ್ನು ಧ್ಯಾನಮಂಟಪವೆಂದು ಕರೆದು ಅದರಲ್ಲಿ ಮನಸ್ಸನ್ನು ಸ್ಥಿರಗೊಳಿಸಬೇಕೆಂದೂ ಅದನ್ನು ಸುತ್ತಿಸಿರುವ ಸಂಸಾರವೆಂಬ ಕಲುಷಿತವಾದ ಬಲೆಯನ್ನು ಕಿತ್ತೆಸೆಯಬೇಕೆಂದೂ ಭಗವಂತನನ್ನು ಶರಣಾಗಬೇಕೆಂದೂ ಹೇಳುತ್ತ, ಬಲೆಯನ್ನು ಕಿತ್ತೊಗೆಯಬೇಕಾದ ಪರಿಯನ್ನು ಪ್ರತಿಮಾ ವಿಧಾನದಿಂದ ಹೇಳಲಾಗಿದೆ.

ಅರಿಷಡ್ವರ್ಗಗಳನ್ನು ತಾಪತ್ರಯಗಳನ್ನು ಪಂಚೇಂದ್ರಿಯಗಳ ದಾಸನಾಗಿ ಗೆಲ್ಲುವೆನೆಂಬ ಧೀರತನದಲ್ಲಿ 'ನಾನು, ನನ್ನಿಂದಲೇ ಎಲ್ಲ ' ಎಂಬ ಗರ್ವಕ್ಕೆ ಮರುಳನಂತೆ ಒಳಗಾಗಬೇಡ; 'ನನ್ನ ನಡೆಯೇ ಸತ್ಪಥ, ನುಡಿಯೇ ಧರ್ಮ' ಎಂದು ಕುಡುಕನಂತೆ ತೂರಾಡುವ 'ಅಹಂ' ಹೊಂದಬೇಡ ; ಈ ಕೇಡಿನಿಂದಲೇ ಅಧಃಪತನವಾಗಬೇಡ; ಕೆಡುವ ಮೊದಲು 'ನಾನು ' ಎಂಬುದನ್ನು ಬಿಟ್ಟು ಶರಣಾಗತನಾಗು' ಭಗವಂತನ ಪಾದವನ್ನಾಶ್ರಯಿಸು, ಶಾಶ್ವತ ಮುಕ್ತಿ ದೊರಕುತ್ತದೆಂಬ ಶರಣಾಗತಿಯ ತತ್ವವನ್ನು ಪ್ರತಿಪಾದಿಸಿದ್ದಾರೆ

೩೭೮

ಯಶಸ್ವೀ ಶರಣಾಗತಿ ತತ್ವದ ಪ್ರತಿಪಾದನೆ ಇಲ್ಲಿದೆ. 'ನಾನು-ನೀನು ಬೇರಲ್ಲ, ನೀನೇ ನಾನು-ನಾನೇ ನೀನು' ಎಂದು ಹೇಳುವ ಮೂಲಕ ಶ್ರೀವೈಷ್ಣವ ಭಕ್ತನಿಗೆ 'ಎನ್ನದೆಂಬುದೆಲ್ಲ ನಿನ್ನದಾಗಿರುವಾಗ ನನ್ನದೇನುಂಟಯ್ಯ ಪನ್ನಗಾಧೀಶ. ನಿನ್ನವನು ನಾನಯ್ಯ ನನ್ನವನು ನೀನಾದೊಡಿನ್ನೇನೂ ನಾನೀನು ಎನ್ನುವಂತಿಲ್ಲ.' ಎಂಬಲ್ಲಿ 'ಪ್ರಪತ್ತಿ'ಯ ದರ್ಶನ ಮೇಳವಿಸಿದೆ. ಆತ್ಮಸಮರ್ಪಣೆ ಅಹಂನಿವೃತ್ತಿಯ ಪರಮೋಚ್ಚಗುಣಗಳನ್ನು ಬಹಳ ಜಾಣತನದಿಂದ ಸಂಖ್ಯಾಪದಗಳ ಮೂಲಕ ತಾತ್ವಿಕ ಛಾಯೆನ್ನು ಬೆರೆಸಿ ತಿಳಿಸಿದ್ದಾರೆ. ಇಲ್ಲಿಯ ಸಂಖ್ಯಾಪದಗಳದ್ದೇ ಒಂದು ಅದ್ಭುತ ವಿವರಣೆಯಾಗುತ್ತದೆ.

೩೮೨

ಅತ್ಯಂತ ಸರಳವಾಗಿ ಭಕ್ತಿಯ, ಶರಣಾಗತಿಯ ತತ್ವವನ್ನು ಇಲ್ಲಿ ನಿರೂಪಿಸಲಾಗಿದೆ. ಭಕ್ತನೊಬ್ಬ ಬದುಕಿನಿಂದ ನಿವೃತ್ತನಾಗುವುದನ್ನು ಕೀರ್ತನಕಾರರು ಸ್ವಾನುಭವ ನಿರೂಪಣೆಯಲ್ಲಿ ಹೇಳಿದ್ದಾರೆ.

ಇಲ್ಲಿ ಬೆಳಕನ್ನು ಭಕ್ತಿ ದೈವ, ಜ್ಞಾನವನ್ನಾಗಿಯೂ ಮಂದಿರ, ಮನೆಯನ್ನು ಮನಸ್ಸು, ಶರೀರವನ್ನಾಗಿಯೂ ಕಲ್ಪಿಸಲಾಗಿದೆ. ಭಕ್ತಿ ಶರೀರದೊಳಗಿದ್ದರೆ ಪಂಚೇಂದ್ರಿಯಗಳು ಹತೋಟಿ ತಪ್ಪುವುದಿಲ್ಲ, ಲಗ್ಗೆ ಹಾಕುವುದಿಲ್ಲ, ನಿಯಂತ್ರಣದಲ್ಲಿರುತ್ತವೆ; 'ನೇಮಯುತವಾಗಿ ಸೊಗಬಾಳ್ವರು.'

ದೈವಕೃಪೆ ಇಲ್ಲದಿದ್ದರೆ ಶರೀರ ಕತ್ತಲೆ (ಅಜ್ಞಾನದ)ಕೋಣೆಯಾಗಿರುತ್ತದೆ. ಆದ್ದರಿಂದ ದೈವಕೃಪೆಯೇ ಭಕ್ತನ ಬಯಕೆ. ಅದಕ್ಕಾಗಿಯೇ ಸಂಪೂರ್ಣವಾಗಿ ಶರಣಾಗಬೇಕು. ದೈವವಿಲ್ಲದೆ ಭಕ್ತನಿಲ್ಲ ಎಂಬುದನ್ನು ಇಲ್ಲಿ ನಿರೂಪಿಸಲಾಗಿದೆ. ಇದು ಭಕ್ತ ದೈವದತ್ತ ವಾಲುತ್ತಿರುವುದರ ಸೂಚನೆ. ಇದರ ಮುಂದಿನ ಹಂತವೇ ದೈವದೊಂದಿಗೆ ಸಮಾಗಮ.

೩೮೧

ಮನಸ್ಸನ್ನು ಕುದುರೆಗೆ ಹೋಲಿಸಿರುವ ಪರಿ ಅನನ್ಯವಾಗಿದೆ. ಕಾಮಕ್ರೋಧ-ಕಣ್ಣುಗಳು; ವ್ಯಾಮೋಹ-ಕಿವಿಗಳು; ದುರ್ಮದ-ಪುಚ್ಚ; ಮಾತ್ಸರ್ಯ-ಮೂಗು; ಮೃಡ-ಕಡಿವಾಣ; ದೃಢಭಕ್ತಿ-ಪಾಶ(ಕೊರಳಲ್ಲಿ) ಎಡಗೈಲಿ; ಹರಿ-ಕೋಲು ಹಿಡಿದು ಓಡುವ ಮನದ ತಡೆ ಎಂಬ ಪ್ರತಿಮಾ ಕಲ್ಪನೆ ದಾರ್ಶನಿಕವಾಗಿದೆ. ಆಡಲು ನಿಲ್ಲದೆ, ನೋಡಿ ನಲಿಯದೆ, ಓಡಾಡಿ ತುರಗವ ಹಿಡಿಯದಿದ್ದರೆ ಕಾಡಿನಲ್ಲಿ (ಸಂಕಷ್ಟ) ದೊಡ್ಡಮಡುವಿನಲ್ಲಿ ಪಾಪಕೂಪದಲ್ಲಿ ತುಡುಗುವ ಕುದುರೆಯ ಕಾಟ ಅಧಿಕವಾಗುತ್ತದೆ. ಹರಿನಾಮಕುಣಿಕೆ-ಕಡಿವಾಣಹಿಡಿದು ಭಕ್ತಿ ಪಾಶದಿಂದ

ತುರುಗವ ಹಿಡಿದು ಸೆರೆಯಿಟ್ಟು ನಾರಾಯಣ ನೀರು, ಶ್ರೀರಮಣ–ಹುರುಳಿ, ಮಾರಮಣ–ಹುಲ್ಲು ಹಾಕಿ ಸಾಕಿದರೆ ಅದು ನಮ್ಮ ಹಿಡಿತದಲ್ಲಿರುತ್ತದೆ. ಈ ಪ್ರತಿಮೆಗಳಲ್ಲಿ ಕುದುರೆಯ ಓಟ–ನಡೆಯನ್ನು ಸಂಸಾರಕ್ಕೂ ಅದನ್ನು ನಿಯಂತ್ರಿಸುವ ಮನಸ್ಸಿನ ಸ್ಥಿತಿಯನ್ನು ನಾಯಕತ್ವಕ್ಕೂ ಅತ್ಯುತ್ತಮವಾಗಿ ಹೋಲಿಸಿದೆ. ಅಲ್ಲಮ ಪ್ರಭುವಿನ 'ಕೊಟ್ಟ ಕುದುರೆ------ ವಚನದಂತೆಯೇ ಈ ಕೀರ್ತನೆಯೂ ಅತ್ಯುತ್ತಮ ಪ್ರತಿಮಾವಿಧಾನದಲ್ಲಿ ರೂಪಗೊಂಡಿದೆ.

೩೮೪

ಇದನ್ನು ಕೀರ್ತನಕಾರರು 'ಯೋಗದ ಪೂಜೆಯ ಹಾದಿ' ಎಂದು ಕರೆದಿದ್ದಾರೆ. ಜಾನಪದ ಧಾಟಿಯಲ್ಲಿ ತಾತ್ವಿಕ ನೀತಿಯನ್ನು ಸುಂದರವಾಗಿ ನಿರೂಪಿಸುತ್ತ, ಅಂತಿಮ ಮೋಕ್ಷ ಸ್ಥಿತಿಯನ್ನು ಯೋಗಪೂಜೆ ಎಂದಿದ್ದಾರೆ.

ಯೋಗಕ್ಕೆ ಬೇಕಾಗಿರುವುದು ಅಚಲ ನಿಷ್ಠೆ, ಅದಮ್ಯ ವಿರಕ್ತಿ, ಅಗಾಧ ಸ್ಥಿತಪ್ರಜ್ಞತೆ ಮತ್ತು ಪರಮ ಶರಣಾಗತಿ. ಇವುಗಳನ್ನು ಇಲ್ಲಿ ಅತ್ಯಂತ ಸರಳವಾಗಿ ಅಷ್ಟೇ ಸೊಗಸಾಗಿ ನಿರೂಪಿಸಿದ್ದಾರೆ.

ಓಂಕಾರ ಮಾಡುವವನ ಮನಸ್ಸು ಗಡಿಯಾರದಂತೆ ಸ್ಥಿತಪ್ರಜ್ಞವಾಗಿರಬೇಕೆಂಬ ಪ್ರತಿಮೆ ಇಲ್ಲಿ ವಿಶಿಷ್ಟ. ಗಡಿಯಾರಗಳಲ್ಲಿರುವ ಗೆರೆಗಳು ಮನಸ್ಸಿಗೆ ಹಾಕಿಕೊಳ್ಳುವ ಕಟ್ಟು, ಮಿತಿ, ಏಕಾಂತ. ವಾಚಿನ ಹೊಳಪು ಮನಸ್ಸಿನ ಚೈತನ್ಯ, ಸ್ಫೂರ್ತಿ, ಉತ್ಸಾಹ, ಅರಳಿದ ತಾವರೆಯ ಹೂವಿನಾಕಾರ ವಾಚಿನ ಡಯಲ್ (ಒಳಚಿತ್ರ), ದಿವ್ಯದರ್ಶನದ ಸೂಚನೆ, ದೈವ ಸಾಕ್ಷಾತ್ಕಾರದ ಕನಸಿನ ನೀರಿಕ್ಷೆ, ವಾಚಿನ ಮುಳ್ಳುಗಳು ಶ್ರೀಪಾದ ದರ್ಶನ. ಭಗವಂತನ ಎರಡು ಪಾದ ಚರಣಗಳ ಸಾಕ್ಷಾತ್ಕಾರ.

ಪ್ರಪತ್ತಿಮಾರ್ಗ ಏಕ ಚಿತ್ತದಿಂದಿರಬೇಕು, ಯಾವುದಕ್ಕೂ ಬದಲಾಗಬಾರದು, ಎಂಬುದಕ್ಕೆ ನೀಡಿರುವ ವಾಚಿನ ನಡೆಯಂತೆ ಸರಳ ಸೂತ್ರ ವಿಶೇಷ ಪ್ರತಿಮಾ ವಿಧಾನದಿಂದ ಕೂಡಿದೆ. ಆಧುನಿಕ ದಿನಬಳಕೆಯ ಯಂತ್ರವನ್ನು ಬಳಸುವ ಮೂಲಕ ಹರಿದಾಸರ ಸಾಮಾಜಿಕ ಬದ್ಧತೆಯನ್ನೂ ಅನುಭಾವದ ವಿಸ್ತಾರವನ್ನ ದಾಖಲಿಸಿದ್ದಾರೆ.

ಭಗವಂತನ ಸಾಕ್ಷಾತ್ಕಾರ ಪಡೆದ ಯೋಗಸ್ಥಿತಿ, ಅನುಭವಿಸುವ ಮನಸ್ಸು, ಭಗವಂತನಗುಣಗಾನ ಮಾಡುತ್ತ ನೋಡಿ ತಣಿಯುತ್ತ ಸಂಪೂರ್ಣ ಶರಣಾಗತಿಗೊಳಗಾಗಿ, 'ನಾನು' ಎಂಬುದನ್ನು ಮರೆತು ಭೋಗಾನಂದವನ್ನು ಪಡೆಯುತ್ತದೆ ಎಂಬ ಭಾವ ಸುಂದರವಾಗಿ ಮೂಡಿಬಂದಿದೆ. ಇಲ್ಲಿಯ ಭೋಗ ಭಗವಂತನನ್ನು ಕಾಣುವ ಕಾಣ್ಕೆಯ ಆಧ್ಯಾತ್ಮ ಸುಖದ ಭೋಗ, ಲೌಕಿಕ ಸುಖಭೋಗವಲ್ಲ.

ಇದನ್ನು ಹೇಳಲು ಗ್ರಾಮ್ಯ ಪರಿಭಾಷೆಯನ್ನು ಜಾನಪದ ದಾಟಿಯನ್ನೇ ಬಳಸಿ ಮನದಟ್ಟು ಮಾಡುತ್ತಾರೆ. ಹಲವು ಪದಗಳಿಗೆ ಗ್ರಾಮೋಚ್ಚಾರದ ಮೆರುಗನ್ನು ನೀಡಿದ್ದಾರೆ. ಅದ್ದರಿಂದ ಅವು ಅಶುದ್ಧ ರೂಪಗಳಲ್ಲ. ಸರಿರೂಪದಲ್ಲೇ ಗ್ರಹಿಸಬೇಕು. ಈ ಗ್ರಾಮ್ಯ ಶೈಲಿಯಲ್ಲಿಯೇ ಈ ಕೀರ್ತನೆಯ ವೈಶಿಷ್ಟ್ಯವಿರುವುದು.

೩೯೩

'ಓಂನಮೋನಾರಾಯಣಾಯ ' ಶ್ರೀವೈಷ್ಣವ ರಹಸ್ಯಮಂತ್ರ (ಇದನ್ನೇ ರಾಮಾನುಜರು ಸರ್ವವೇದ್ಯವಾಗಲೆಂದು ಗಿರಿಂಪು ಮೇಲಿನಿಂದ ಘೋಷಿಸಿದ್ದು) ಇದನ್ನು ಶ್ರೀವೈಷ್ಣವಧರ್ಮೀಯರು ದಿನವೂ ಅನುಸಂಧಾನ ಮಾಡುತ್ತಾರೆ.

ಈ ಅಷ್ಟಾಕ್ಷರಿ ಮಹಿಮೆಯಲ್ಲಿ 'ರಾಮಾ'ಕ್ಷರದ ಗರಿಮೆಯನ್ನು ಇಲ್ಲಿ ಶಬ್ದ-ಅಕ್ಷರ ಚಮತ್ಕಾರದ ಮೂಲಕ ಬಿಡಿಸಿದೆ. ಇದರಲ್ಲಿ 'ರಾ'ಅಕ್ಷರ ಇಲ್ಲದಿದ್ದರೆ ಅಷ್ಟಾಕ್ಷರಿಯಾಗದು. 'ಮ' ಅಕ್ಷರವಿಲ್ಲದಿದ್ದರೆ ಪಂಚಾಕ್ಷರಿಯಾಗದು 'ಈ ಎರಡು ಅಕ್ಷರ'ಗಳುಇದ್ದರೆ ಮಾತ್ರ ರಾಮಾದ್ವ್ಯಕ್ಷರ ಇರುತ್ತದೆ, ಮಾನ್ಯವಾಗುತ್ತದೆ. ಎಂಬುದನ್ನು ತೋರಿಸುತ್ತ ರಾಮ ತಾರಕದಿಂದ ಅಷ್ಟಾಕ್ಷರಿ ಮಂತ್ರದ ಔನ್ನತ್ಯವನ್ನೂ ಪಡೆದಿದೆ: ಅಷ್ಟಾಕ್ಷರಿಯಷ್ಟೇ ರಾಮತಾರಕ ಮಂತ್ರವೂ ಮಹತ್ವವನ್ನು ಪಡೆಯುತ್ತದೆ ಎಂಬುದನ್ನೂ ಸಾಧಿಸಿದ್ದಾರೆ.

೩೯೬

ಭಾಗವತಶ್ರೇಷ್ಠ ನಾರದನಿಂದ ಸ್ತುತಿಸಲ್ಪಟ್ಟು ಮನ್ಮಥಹರನಾದ ಶಿವನಿಂದ ಜಪಿಸಲ್ಪಟ್ಟ. ಶ್ರೀಹರಿಯ ನಾಮವನ್ನು ಇಲ್ಲಿ ಸ್ತುತಿಸಲಾಗಿದೆ. ವಿಷ್ಣುವು ಶಿವನಿಂದಲೂ ಸ್ತುತಿಸಲ್ಪಡುವನೆನ್ನುವ ಶ್ರೀವೈಷ್ಣವ ತತ್ವ ಶ್ರೀಹರಿಏಕನಿಷ್ಠೆ ಇಲ್ಲಿ ವ್ಯಕ್ತವಾಗಿದೆ.

ಅಹಲ್ಯಾ ಶಾಪವಿಮೋಚನೆಯು, ಸೀತಾಸ್ವಯಂವರದಲ್ಲಿ ಧನಸ್ಸು ಮುರಿದ. ಸೀತಾವಿರಹದಿಂದ ರಾವಣನನ್ನು ಸಂಹರಿಸಿದ ರಾಮನನ್ನೂ ನಂದ ಯಶೋದೆಯರ ಕಂದನಾಗಿ ಕಂಸಾದಿ ಅಸುರರನ್ನು ಸಂಹರಿಸಿದ ಗೋಪಿಯರನ್ನು ಒಲಿದ ಕೃಷ್ಣನನ್ನೂ ಇಲ್ಲಿ ಕೀರ್ತಿಸಲಾಗಿದೆ.

೩೯೮

ದಶಾವತಾರದಲ್ಲಿ ನಿಂದಾ ಸ್ತುತಿ ಅತ್ಯುತ್ತಮವಾಗಿ ಮೂಡಿಬಂದಿದೆ. ಒಂದೊಂದು ಅವತಾರವನ್ನೂ ತೆಗಳಿಕೆಯಾಗಿ ಕಲ್ಪಿಸಿದೆ. ಹನ್ನೊಂದನೆಯದಾಗಿ ಹರಿಹರ ಅವತಾರವೂ ಸೇರಿದೆ. ಇದಕ್ಕೆ ಮಾಂಗಿರಿ ರಂಗನಾಥನಿಗಿರುವ ಶಿವ-ಕೇಶವದ ಐತಿಹ್ಯದ ಪ್ರಭಾವವಿರುವಂತಿದೆ.

೪೦೩

ಶ್ರೀವೈಷ್ಣವ ಧರ್ಮದ ಮುಖ್ಯತತ್ವ ರಹಸ್ಯತ್ರಯದ ಅನುಷ್ಠಾನ. ಅದೇ ಶರಣಾಗತಿ, ಪ್ರಪತ್ತಿ. ಇದರ ಸಾರಸರ್ವಸ್ವ ಭಗವದ್ಗೀತೆಯಲ್ಲಿದೆ. ಆ ಭಗವದ್ಗೀತಾರ್ಥ–ಶರಣಾಗತಿ ತತ್ವ ಪ್ರತಿಪಾದನೆಯೇ ರಾಮಾನುಜಾಚಾರ್ಯರ 'ಶ್ರೀ ಭಾಷ್ಯ' 'ರಹಸ್ಯತ್ರಯಸಾರ' ಕೃತಿಗಳಾಗಿವೆ.

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾಂ ಸರ್ವಪಾಪೇಭ್ಯೋ ಮೋಕ್ಷೈಶ್ಯಾಮಿ ಮಾಶುಚಃ ॥

ಭಗವದ್ಗೀತೆಯ ಈ ಶ್ಲೋಕವೇ 'ರಹಸ್ಯತ್ರಯದ' ಚರಮಶ್ಲೋಕ–ಮೂರನೆಯದು, ಇದರ ಅರ್ಥದ ಪ್ರತಿಪಾದನೆ ಈ ಕೃತಿಯಲ್ಲಡಗಿದೆ.

ಈ ಶರಣಾಗತಿಯ ಮೂಲಕ ಸಾಯುಜ್ಯಪದವಿ ಪಡೆದ ಭಾಗವತ ಶ್ರೇಷ್ಠರಾದ ಭೀಷ್ಮ, ವಿಭೀಷಣ, ಜಟಾಯುಗಳ ಪ್ರತಿಮೆಯ ವಿವರಣೆಯ ಜೊತೆಗೆ ಗುರೂಪದೇಶದ ಮೂಲಕ ಈ ರಹಸ್ಯತ್ರಯವನ್ನು ಅನುಸಂಧಾನ ಮಾಡುವ ಶ್ರೀವೈಷ್ಣವ ಧರ್ಮೀಯರ ದೀಕ್ಷಾಪದ್ಧತಿಯನ್ನು ಇಲ್ಲಿ ಉಲ್ಲೇಖಿಸಿದ್ದಾರೆ.

೪೧೩

ಇದರಲ್ಲಿ ಮೇಲುಕೋಟೆ ಖಾದ್ರಿ, ಸಾವನದುರ್ಗ, ಶೀಬೀನಗರಗಳ ನರಸಿಂಹನನ್ನು ಕ್ರಮವಾಗಿ ಸ್ತುತಿಸಲಾಗಿದೆ. ಕನ್ನಡ ನಾಡಿನ ಊರು ಊರುಗಳಲ್ಲಿರುವ ಕಂಬದ ನರಸಿಂಹನನ್ನು ವಿಶೇಷವಾಗಿ ಉಲ್ಲೇಖಿಸಿದ್ದಾರೆ. ಕರ್ನಾಟಕದಲ್ಲಿ ವಿಗ್ರಹರೂಪದ ನರಸಿಂಹ ದೇವಾಲಯಗಳಿಗಿಂತ ಕಂಬದಲ್ಲೇ ನರಸಿಂಹನಿರುವ ದೇವಾಲಯಗಳೇ ಅಧಿಕವಾಗಿವೆ.

೪೧೯

ಆರಾಧ್ಯದೈವ ಮಾವಿನಕೆರೆಯ ರಂಗನಾಥನನ್ನು ಕುರಿತ ಸುಂದರಗೀತೆ. 'ದೀನಜನರಿಗ್ವೆದರಿ ಕಾನನ ಕ್ವೋದೆಯೋ' ಎಂಬಲ್ಲಿ ಇಂದಿನ ದೈವಭಕ್ತರ ಬಾಹುಳ್ಯ ಹೇಳಿದರೆ 'ಜನನಿಬಿಡ ಬೇಸರವೇ ಜನರ ದುಷ್ಕಾರ್ಯಕ್ಕೆ ಬೇಸರವೇ' ಎಂಬಲ್ಲಿ ಆ ಬಾಹುಳ್ಯ ಸತ್ಪಾತ್ರವಾಗಿಲ್ಲ, ದುಷ್ಕೃತ್ಯಗಳಿಗೆಡೆಯಾಗಿದೆ ಎಂಬ ಲೋಕನೀತಿ ಇದೆ. 'ರಹಸ್ಯ ತತ್ವಾರ್ಥದ ಸಾರ್ಥಕತೆಗಾಗಿ ಗಿರಿಏರಿಸುವೆಯಾ' ಎಂಬಲ್ಲಿ ಶ್ರೀವೈಷ್ಣವ ತತ್ವದ ಭಕ್ತಿಯ ಅಭಿವ್ಯಕ್ತಿಯಿದೆ. 'ಬೇವಿನಲ್ಲಿ ಮಾವನು ಬೆಳೆಸಿ ಶಿವ–ಕೇಶವ ತತ್ವಸಾಧಿಸಿದೆಯಾ' ಎಂಬಲ್ಲಿ ರಂಗನಾಥನ ಬಗೆಗಿನ ಸ್ಥಳೀಯ ಐತಿಹ್ಯದ ಸೂಚನೆಯಿದೆ. 'ಹನುಮದೇವನ ಪೂಜಿಸಿ ಮಾನ ಒಲಿಸಿದೆ ?' ಎಂಬಲ್ಲಿಯೂ ಸ್ಥಳೀಯ

ಐತಿಹ್ಯದ ಸೂಚನೆಯೇ ಇವೆ. ಅನ್ಯದೈವ ಸ್ತುತಿಯನ್ನು ಶಾಸ್ತ್ರ ನಿಷಿದ್ಧವೆಂದಿರುವ ಈ ಧರ್ಮದಲ್ಲಿಯೂ ದಾಸರು ಧರ್ಮ ಸಮನ್ವಯವನ್ನು ಸಾರಿದ್ದಾರೆ.

೪೨೧

ಆರಾಧ್ಯದೈವದಲ್ಲಿ ತೋಡಿಕೊಳ್ಳುವ ಆತ್ಮನಿವೇದನೆಯ ಈ ಕೃತಿಯಲ್ಲಿ ಆ ದೇವರ ಬಗ್ಗೆ ಇರುವ ಐತಿಹ್ಯಗಳನ್ನೆಲ್ಲಾ ಸೆರೆಹಿಡಿದ್ದಾರೆ.

'ಗಿರಿಯಲ್ಲಿ ವಾಸ, ನರರ ಹಂಗಿಲ್ಲ', 'ಹರನಂತೆ ಭಾಸ ಎಂದೆನಿಸಬೇಡವೆಂಬ ಸಲಹೆ ರಂಗನಾಥನ ಬಗ್ಗೆ ಜನರಲ್ಲಿದ್ದ ಕೇಶವ–ಶಿವರ ಐತಿಹ್ಯವಾಗಿದೆ.

ಗಿರಿಯಾದರೂ ಸುರಲೋಕಕ್ಕೂ ಪೂಜ್ಯ. ಹರನಾದರೇನು ನೀನು ಆ ಹರನಿಗೆ ಪಿತ ಮಹಾವಿಷ್ಣು ಎಂಬಲ್ಲಿ ಶ್ರೀವೈಷ್ಣವ ತತ್ವದ ಏಕದೈವನಿಷ್ಠೆಯಿದೆ,

'ಶ್ಯಾಮಜೋಯಿಸರು ನಿನ್ನ ಅರ್ಚಕರು ' ಎಂಬುದು ದಾಸರಿದ್ದ ಕಾಲದ ಜ್ಯೋತಿಷ್ಯವಿದ್ವಾಂಸರೂ 'ಪೂನಾಶಾಸ್ತ್ರಿಗಳೆಂದು' ಪ್ರಸಿದ್ಧರೂ ಆಗಿದ್ದ ದೇವಾಲಯದ ಅರ್ಚಕರ ಹೆಸರು.

೪೨೪

ದಾಸರ ಆರಾಧ್ಯ ದೈವ ಮಾವಿನಕೆರೆಯ ರಂಗನಾಥನ ಬಗೆಗಿನ ಐತಿಹ್ಯ ಇಲ್ಲಿದೆ. 'ಅಡಗಿಸಿದ ದೇಹವನು ಒರಳಿನಲಿ' ಎಂಬುದು ಅಲ್ಲಿಯ ದೇವರು ಒರಳಿನಾಕಾರದ ಕಲ್ಲಿನಲ್ಲಿ ಗುಂಡಿನ ರೂಪದಲ್ಲಿರುವುದರ ಸೂಚನೆಯಾಗಿದೆ.

೪೨೯

ಸಂಪ್ರದಾಯದ ಹಾಡಿನ ರೂಪದಲ್ಲಿರುವ ಸುಪ್ರಭಾತದ ಈ ಕೀರ್ತನೆಯಲ್ಲಿ–ಸರಸ ಸಲಿಗೆಯ ಭಾವದಲ್ಲಿ ದೇವನನ್ನೇಳಿಸುವ ಪರಿ ಸೊಗಸಾಗಿದೆ. ಹಲವು ಕೆಣಕುವ ಪ್ರಶ್ನೆಗಳಿವೆ.

೧. ನಿದ್ದೆಯಲ್ಲಿ ಬರಬೇಕು ಜಗವ ಪೋಷಿಪ ಚಿಂತೆಯಲ್ಲಿ ಏಳು ನಾಟಕಬೇಡ ?

೨. ನಿದ್ದೆಗೆಡಿಸುವ ಪಾಪ ನನಗೆ ಬಂದರೂ ಪರವಾಗಿಲ್ಲ; ಭಕ್ತರ ಕುಣಿತ–ಭಜನೆಗಳಲ್ಲಿ ನಿಶ್ಯಬ್ದ ಎಲ್ಲಿ?

೩. ಎಚ್ಚರಿಸಿದ ದೂರ್ವಾಸನಿಗೆ ಪಾಪವೆಲ್ಲಿಯದು?

'ಬೆಲ್ಲಕ್ಕೆ ಇರುವೆ ಮುತ್ತುವಂತೆ' ಭಕ್ತರು ನಿನ್ನನ್ನು ಬಂದು ಮುತ್ತುತ್ತಿದ್ದಾರೆ. ಭಕ್ತಿಯ ಬೆಲ್ಲ ನನಗೂ ನೀಡು ಎಂದು ಬೇಡಿಕೊಳ್ಳುವುದರ ಮೂಲಕ ದೈವ ಧ್ಯಾನದಲ್ಲೇ ತೊಡಗಿರುವ ಭಕ್ತ ತಾದಾತ್ಮ್ಯತೆಯಿಂದ ದೇವರೊಂದಿಗೆ ಹೇಗೆ ಸಂಭಾಷಿಸಲು ಬಲ್ಲ, ದೈವದರ್ಶನವನ್ನು ಹೇಗೆ ಕಲ್ಪಿಸಿಕೊಳ್ಳ ಬಲ್ಲ ಎಂಬ ಆಧ್ಯಾತ್ಮಿಕ ಮನೋಬಲಕ್ಕೆ ಇದು ಸಾಕ್ಷಿಯಾಗಿದೆ.

೪೪೨

ಇದೊಂದು ದಶಾವತಾರ ವರ್ಣನೆಯ ಕೃತಿ, ಜಾನಪದ ಶೈಲಿಯಲ್ಲಿ ನಿರೂಪಿಸಲಾಗಿದೆ. ನೀರಲ್ಲಿ ನಿಂತವ್ನೆ-ಮತ್ಸ್ಯ, ಗಟ್ಟಿಬೆನ್ನಿನಮ್ಯಾಗೆ ಬೆಟ್ಟವ ಹೊತ್ತವ್ನೆ-ಕೂರ್ಮ; ಮೊಳ...... ಭೂಮಿಯ ಹೊತ್ತವ್ನೆ-ವರಾಹ, ನರಸಿಂಹನಾಗವ್ನೆ-ನರಸಿಂಹ, ಗಿಡ್ಡಹಾರುವ-ವಾಮನ; ಕೈಯಲ್ಲಿ ಹಿಡಿದವ್ನೆ ಗಂಡುಗೊಡಲಿ-ಪರುಶುರಾಮ; ರಾವಣನ ತರಿದವ್ನೆ-ರಾಮ; ಕಾಳಿಂಗನ ತುಳಿದವ್ನೆ-ಕೃಷ್ಣ; ಬೆತ್ತಲೆ ನಿಂತವ್ನೆ-ತ್ರಿಪುರ ಸಂಹಾರಾಂತಕ; ಕುದುರೆಯಮಾಲ್ಕುಂತು-ಕಲ್ಕಿ. ಸಾಮಾನ್ಯವಾಗಿ ಬುದ್ಧನನ್ನು ಕಲ್ಪಿಸುವ ೯ನೇ ಅವತಾರ ಶ್ರೀವೈಷ್ಣವ ಪರಂಪರೆಯಲ್ಲಿ ಬಲರಾಮನಾದರೂ ಇಲ್ಲಿ ವಿಷ್ಣುವಿನ ನಿರ್ವಾಣದ ಪ್ರಸಂಗವನ್ನು ತಂದಿದ್ದಾರೆ. ಬುದ್ಧಾವತಾರವನ್ನು ನಿರಾಕರಿಸುವ ಶ್ರೀವೈಷ್ಣವ ತತ್ವವೇ ಇಲ್ಲಿಯೂ ಇರುವುದನ್ನು ಗಮನಿಸಬಹುದು.

'ರಾಮದಾಸನ ಮನದೊಳು ಮನೆಮಾಡವ್ನೆ ' ಎಂಬಲ್ಲಿಯ 'ರಾಮದಾಸ ' ಸ್ವತಃ ಕವಿನಾಮದ ಅಂಕಿತವಾಗಿದೆ. ಇನ್ನೂ ಹಲವಾರು ಕೀರ್ತನೆಗಳಲ್ಲಿ 'ರಾಮದಾಸ ' ಉಲ್ಲೇಖ ಕಂಡುಬರುತ್ತದೆ. ದಾಸರ 'ಮಾಂಗಿರೀಶ ' ದ ಜೊತೆಗೆ ರಾಮದಾಸನುತ' 'ರಾಮದಾಸಾರ್ಚಿತ ಅಂಕಿತಗಳನ್ನು ಬಳಸಿದ್ದಾರೆ. ದಾಸರು ಕವಿ, ಕೀರ್ತನಕಾರರಾಗಿ ರಾಮದಾಸ ಹೆಸರಿನಿಂದ ಗುರುತಿಸಿಕೊಂಡಿದ್ದಾರೆ.

೪೪೪

ಸಂಪ್ರದಾಯದ ಹಾಡಿನಂತಿರುವ ಈ ಕೃತಿ ಮಾವಿನಕೆರೆಯ ರಂಗನಾಥನ ಉದ್ಭವರೂಪವನ್ನು ಕುರಿತ ವಿಶೇಷ ಹಾಡು. ರಂಗನಾಥನ ಉದ್ಭವ ಮೂರ್ತಿ ಒರಳುಕಲ್ಲಿನಾಕಾರದ ಪಾಣಿಪೀಠದಲ್ಲಿರುವ ಗುಂಡುಕಲ್ಲಿನಾಕಾರದ ಗುಂಡು. ಇದನ್ನು ಹಿನ್ನೆಲೆಯಾಗಿಟ್ಟುಕೊಂಡು ಇದರ ದೈವೀಭಾವದ ಜೊತೆಜೊತೆಗೆ ಜನಪದೀಯರಿಗೆ ನಿತ್ಯ ಬದುಕಿನ ಹಲವು ಸಂದರ್ಭಗಳಲ್ಲಿ ಬೇಕಾಗುವ ಗುಂಡುಕಲ್ಲಿನ ಅವಶ್ಯಕತೆಯನ್ನು ಹೇಳುತ್ತ ಜನರ ಜೀವನದೊಂದಿಗೆ ದೈವ ಹೇಗೆ ಹಾಸುಹೊಕ್ಕಾಗಿದೆ ಎಂಬುದನ್ನು ಪ್ರತಿಮಾರೂಪದಲ್ಲಿ ಚಿತ್ರಿಸಿದ್ದಾರೆ. ಗುಂಡು ಸರ್ವಜನೋಪಯೋಗಿ, ನಿತ್ಯೋಪಯೋಗಿ. ಆಪದ್ಬಾಂಧವ ಹೇಗೋ ಹಾಗೇ ದೈವವೂ ಕೂಡ ಎಂಬುದೇ ಇದರಭಾವ.

೪೪೫

ಇದೊಂದು ವಿಶೇಷ ಸಂದರ್ಭದ ಹಾಡು. ಮಾವಿನಕೆರೆಯ ರಂಗನಾಥನ ತೇರನ್ನು ಕುರಿತದ್ದು. ರಂಗನಾಥನ ತೇರಿನ ಸಂದರ್ಭದಲ್ಲಿ ಬಾರಿಸುವ ನಗಾರಿ, ಸಾರಿಕ್ಕುವ ತಮಟೆಯ ಶಬ್ದಕ್ಕೆ ವಿಶೇಷ ಪ್ರತಿಧ್ವನಿ ಅರ್ಥವನ್ನು ಕಲ್ಪಿಸುವುದರ ಮೂಲಕ ಧರ್ಮಸಮಾನತೆಯನ್ನೂ ಸಾಮಾಜಿಕ ತಿಳುವಳಿಕೆಯನ್ನೂ ಸಾರಿದ್ದಾರೆ.

ಮಾವಿನಕೆರೆಯ ರಂಗನಾಥನ ಶಿವ–ಕೇಶವ ಐತಿಹ್ಯವನ್ನು ಬಳಸಿ ಜನ ಏನಂದರೂ ಒಂದೇ, ಅವೆಲ್ಲ ದೇವರಿಗಿರುವ ನೂರೆಂಟು ನಾಮಗಳಷ್ಟೇ ಎಂದು ದೈವ ಸಮಾನತೆಯನ್ನು ಹೇಳುವುದರ ಜೊತೆಗೇ ಕಂದಾಚಾರವನ್ನೂ ಹತ್ತಿಕ್ಕುತ್ತಾರೆ. ದೈವಾರಾಧನೆಯ ಉತ್ಸಾಹದಲ್ಲಿ ಹಿಂದಿನಿಂದಲೂ ರೂಢಿಗತವಾಗಿ ಬಂದಿರುವ ಪ್ರಾಣಿಬಲಿ ಸಂಪ್ರದಾಯವನ್ನು ಉಪಾಯವಾಗಿ ಜನರಿಂದ ದೂರವಾಗಿಸಲು ಪ್ರಯತ್ನಿಸಿದ್ದಾರೆ. ಬರಿಯ ಭಕ್ತಿಯೊಂದಿದ್ದರೆ ಸಾಕು ಆ ದೇವನಿಗೆ ಇನ್ನೇನೂ ಆಮಿಷಗಳ ಅಗತ್ಯವಿಲ್ಲ, ಎಂಬ ಸರಳ ಭಕ್ತಿಯ ಸ್ವರೂಪವನ್ನು ನಿರೂಪಿಸಿದ್ದಾರೆ.

೪೪೬

ಇದೂ ಸಹ ಮಾವಿನಕೆರೆಯ ರಂಗನಾಥನ ತೇರಿನ ವಿಶೇಷ ಸಂದರ್ಭದ ಹಾಡಾಗಿದೆ. ಇಲ್ಲಿ ದಾಸರ ಆರಾಧ್ಯದೈವ ಮಾವಿನಕೆರೆಯ ರಂಗನಾಥನ ತೇರಿನ ವರ್ಣನೆ ಸೊಗಸಾಗಿ ಮೂಡಿಬಂದಿದೆ. ಈ ಉತ್ಸವ ಸುತ್ತಮುತ್ತಲೆಲ್ಲ ಜನಾನುರಾಗವಾಗಿದ್ದು ಒಂದು ಪ್ರಸಿದ್ಧ ಜಾತ್ರೆಯೆನಿಸಿದೆ. ದಾಸರ ಪ್ರತ್ಯಕ್ಷಾನುಭವದ ವರ್ಣನೆಯಾಗಿದೆ. ಸಾಮಾನ್ಯವಾಗಿ ರಥ ಕೆತ್ತನೆಯಿಂದ ಕೂಡಿ ಕಲಾತ್ಮಕವಾಗಿದ್ದು ಮರದಲ್ಲಿ ವಿಶಿಷ್ಟವಾಗಿ ಶಾಶ್ವತವಾಗಿ ನಿರ್ಮಿಸಲಾಗಿರುತ್ತದೆ. ಆದರೆ ತೇರು ಹಾಗಲ್ಲ. ಸ್ಥಳೀಯ ಕಲಾವಿದರಿಂದ ಪ್ರತಿಬಾರಿಯೂ ನಿರ್ಮಾಣಗೊಳ್ಳುತ್ತದೆ. ಮರದ ಗೋಪುರಾಕಾರದ ಅಟ್ಟಣೆಗಳಿಗೆ ಬಣ್ಣಬಣ್ಣದ ಬಟ್ಟೆಯ ತೋರಣಗಳನ್ನು ಚಿತ್ತಾರದಿಂದ ಎತ್ತರವಾಗಿ ಕಟ್ಟಲಾಗುತ್ತದೆ. ಇಂತಹ ತೇರಿನ ಸುಂದರ ವರ್ಣನೆ ಇಲ್ಲಿದೆ. ಇದಕ್ಕೆ 'ಕುರ್ಜು' ಎಂದು ಸ್ಥಳೀಯವಾಗಿ ಕರೆಯುವುದನ್ನೇ ದಾಸರು 'ಹೂರ್ಜಿ' ಎಂದು ಹೆಸರಿಸಿದ್ದಾರೆ.

ಜಾತ್ರೆಯ ವೈಭವ, ಉತ್ಸವದ ರಂಗು, ಜನರ ಉತ್ಸಾಹ, ಅಲ್ಲಿನ ಚಟುವಟಿಕೆಗಳು ಇವನ್ನೆಲ್ಲ ಕಣ್ಣಿಗೆ ಕಟ್ಟುವಂತೆ (ಅಕೋ ಬಂತು, ತಕೋ ಹಣ್ಣುಕಾಯಿ) ಚಿತ್ರಿಸಿದ್ದಾರೆ.

೪೪೭

ಇದೊಂದು ತತ್ವಪದವಾಗಿ ಕಂಡುಬರುತ್ತದೆ. ಧಾಟಿಯೂ ಹಾಗೇ ಇದೆ, 'ಹಿಂಗು' ಮತ್ತು 'ಹಂಗು' ಪದಗಳನ್ನು ಇಲ್ಲಿ ಶ್ಲೇಷಾರ್ಥದಲ್ಲಿ ಬಳಸಲಾಗಿದೆ. ಗ್ರಾಮಸ್ಥರು ಉಚ್ಚರಿಸುವ

ಸಾಮಾನ್ಯಾರ್ಥದ ಹೀಗೆ ಹಾಗೆ ಎಂಬ ಪದಗಳಷ್ಟೇ ಆಗದೆ ತಾತ್ವಿಕ ಪದಗಳಾಗಿಯೂ ನಿಲ್ಲುತ್ತವೆ. ಹಿಂಗಿಪ್ಪವನು ತಾಳ್ಮೆ ಸಹನೆ, ಇರುವವನು; ಗರ್ವವನ್ನು ಹಿಂಗಿಸಿದವನು; ಹಂಗಿಪ್ಪವನು: ಹಂಗಬಿಟ್ಟವನು–ಆಸೆಬಿಟ್ಟವನು, ಲೌಕಿಕ ಸಂಬಂಧಬಿಟ್ಟವನು ಎಂಬ ವಿಶೇಷ ಅರ್ಥಗಳನ್ನು ಪಡೆಯುತ್ತವೆ. ಮುಳ್ಳಿನಹಾದಿ–ಕಳ್ಳಿಯಬೇಲಿಗಳನ್ನು ಸಂಸಾರತಾಪತ್ರಯಗಳನ್ನಾಗಿ ಪರಿಭಾವಿಸಲಾಗಿದೆ. ಮೂರಂಗಕ್ಕೆ ತ್ರಿಕರಣ (ಮಾತು, ಮನಸ್ಸು, ಕೃತಿ) ಎಂದೂ ಹಂಸತಾವರೆಯಂತಿರಬೇಕು ಎಂಬುದಕ್ಕೆ ನೀರಿನಲ್ಲಿ ಇದ್ದೂ ಇವು ಹೇಗೆ ನಲಿಯುತ್ತಿರುತ್ತವೆ ಅಥವಾ ನೀರಿನಲ್ಲಿ ಮುಳುಗದೆ, ಅಂಟದೆ ತೇಲುತ್ತಿರುತ್ತವೆ, ಇದ್ದೂ ಇಲ್ಲದಂತೆ ಎಂದೂ ಹೇಳಬಹುದು. ಹೀಗೆ ಹಲವು ವಿಶಿಷ್ಟ ಅರ್ಥಗಳ ಮೂಲಕ ಜೀವನವನ್ನೂ ತಾತ್ವಿಕ ಚಿಂತನೆಯಕಡೆಗೆ ಈ ಕೀರ್ತನೆ ಒಯ್ಯುತ್ತದೆ.

ಅನುಬಂಧ – ೩

ಪುರಾಣ ಪ್ರತಿಮೆಗಳು

ಶ್ರೀವೈಷ್ಣವ ಹರಿದಾಸರೂ ಇತರ ಹರಿದಾಸರಂತೆ ಪುರಾಣ ಪ್ರತಿಮೆಗಳನ್ನು ವಿಶೇಷವಾಗಿ ಬಳಸಿದ್ದಾರೆ. ವಿಶಿಷ್ಟಾದ್ವೈತವೂ ವೇದಮೂಲವೇ ಆಗಿದ್ದು ಅದರ ಸಾರಸಂಗ್ರಹವಾಗಿರುವ. ತಮಿಳು ಪ್ರಬಂಧಗಳ ಆಧಾರದ ಮೇಲೆ ನಿಂತಿದ್ದರೂ ಈಶ, ಪ್ರಶ್ನ, ಕಠ, ಕೇನ, ಮಂಡೂಕ, ತೈತ್ತಿರೀಯ, ಛಾಂದೋಗ್ಯ, ಬೃಹದಾರಣ್ಯಕ ಮುಂತಾದ ಉಪನಿಷತ್ತುಗಳ ಸಾರವೂ ಆಗಿದೆ. ಈ ವೇದ ಉಪನಿಷತ್ತುಗಳ ಆಧಾರದ ಮೇಲೆ ಬಂದಿರುವ ಪುರಾಣಗಳು ಹೆಚ್ಚು ಜನಪ್ರಿಯವಾಗಿದ್ದು ಅನೇಕ ಪುರಾಣಗಳ ಪ್ರಸಂಗಗಳನ್ನು ವಿಶೇಷವಾಗಿ ಭಾಗವತ ಪ್ರಸಂಗಗಳನ್ನು ಶ್ರೀವೈಷ್ಣವ ಹರಿದಾಸರೂ ಉಲ್ಲೇಖಿಸುತ್ತಾರೆ. ಹೀಗೆ ಉಲ್ಲೇಖಿಸುವ ಸಂಗತಿ–ಸನ್ನಿವೇಶಗಳೆಲ್ಲ ಶ್ರೀವೈಷ್ಣವತತ್ತ್ವಕ್ಕೆ ಅನುಗುಣವಾದ ಶರಣಾಗತಿ ಧರ್ಮವನ್ನು ಸಾರುವ ಸಂದರ್ಭಗಳೇ ಆಗಿರುತ್ತವೆಂಬುದನ್ನು ಗಮನಿಸಬೇಕು.

ಶ್ರೀವೈಷ್ಣವತತ್ತ್ವವು ಶ್ರೀಹರಿಯನ್ನು ಪರ–ವ್ಯೂಹ–ವಿಭವ–ಅಂತರ್ಯಾಮಿ ಮತ್ತು ಅರ್ಚಾ ಎಂಬ ಐದು ವಿಭಾಗಗಳಲ್ಲಿ ಸೃಷ್ಟಿಸಿಕೊಂಡು ಸ್ತುತಿಸುತ್ತದೆ. ಪರದಲ್ಲಿ 'ವಾಸುದೇವ'ನೊಬ್ಬನೇ ಶ್ರೀಮನ್ನಾರಾಯಣ ರೂಪನಾಗಿರುತ್ತಾನೆ. ವ್ಯೂಹದಲ್ಲಿ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರನ್ನಾಗಿ ನಾರಾಯಣನನ್ನು ಕಲ್ಪಿಸಿ ಇವರುಗಳ ಬೇರೆ ಬೇರೆ ರೂಪಗಳನ್ನೇ 'ದ್ವಾದಶ ನಾಮಗಳಲ್ಲಿ' ಸ್ತುತಿಸಿದೆ. ಈ ದ್ವಾದಶ ನಾಮಗಳಾದ ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ್ನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶ, ಪದ್ಮನಾಭ, ದಾಮೋದರನ ನಾಮಗಳು ಶ್ರೀವೈಷ್ಣವರಿಗೆ ಪರಮ ಪೂಜ್ಯವಾದವುಗಳಾಗಿವೆ. ನಿತ್ಯಾನುಸಂಧಾನದಲ್ಲಿ ತಪ್ಪದೆ ಉಚ್ಚರಿಸುವ ಈ ನಾಮಗಳಲ್ಲೇ ಭಗವಂತನನ್ನು ಸ್ತುತಿಸುವುದರಲ್ಲಿ ಇವರಿಗೆ ವಿಶೇಷವಾದ ಆಸಕ್ತಿ.

ವಿಭವದಲ್ಲಿ ಅವತಾರಗಳ ಕಲ್ಪನೆಯಿದ್ದು ಭಗವಂತನ ದಶಾವತಾರವೂ ಸೇರಿ ಒಟ್ಟು ೩೯ ಅವತಾರಗಳನ್ನು ವಿಶಿಷ್ಟಾದ್ವೈತ ಪ್ರತಿಪಾದಿಸುತ್ತದೆ. ಈ ಅವತಾರಗಳನ್ನೆಲ್ಲ ಉಪನಿಷತ್ತು–ಪುರಾಣಗಳಿಂದ ತೆಗೆದುಕೊಳ್ಳಲಾಗಿದೆ. ಉಳಿದ ಅವತಾರಗಳಿಗಿಂತ ದಶಾವತಾರದ ವರ್ಣನೆ ಹರಿದಾಸರಿಗೆ ಹೆಚ್ಚು ಪ್ರಿಯ. ಅದರಲ್ಲೂ ರಾಮ ಕೃಷ್ಣರ ವರ್ಣನೆ ಅದ್ವಿತೀಯವಾಗಿದೆ. ಶ್ರೀವೈಷ್ಣವ

ದಶಾವತಾರ ಕಲ್ಪನೆಯಲ್ಲಿ ಬುದ್ಧಾವತಾರವಿಲ್ಲ. ಅದರ ಬದಲಿಗೆ ಬಲರಾಮನನ್ನು ತಪ್ಪಿದರೆ ತ್ರಿಪುರಸಂಹಾರಕನನ್ನು ಚಿತ್ರಿಸಲಾಗಿದೆ. ಉಳಿದಂತೆ ವಾಮನ ನರಸಿಂಹರನ್ನು ಅಧಿಕವಾಗಿಯೂ ಉಳಿದವುಗಳನ್ನು ಕ್ವಚಿತ್ತಾಗಿಯೂ ಸ್ತುತಿಸಿದ್ದಾರೆ. ಇತರೆ ಅವತಾರಗಳಲ್ಲಿ ನಾರದ, ನರನಾರಾಯಣ, ಮೋಹಿನಿ, ಅವತಾರಗಳನ್ನು ಹೆಚ್ಚಾಗಿ ಉಲ್ಲೇಖಿಸುತ್ತಾರೆ.

'ಅಂತರ್ಯಾಮಿ' ಧ್ಯಾನಮೂರ್ತಿಯಾಗಿದ್ದು 'ಅರ್ಚಾ'ದಲ್ಲಿ ಆರಾಧನಾಮೂರ್ತಿಗಳಿವೆ. ವಿವಿಧ ಕ್ಷೇತ್ರ ದೇವತೆಗಳ ಸ್ತುತಿಯು ಇಲ್ಲಿ ಕಂಡುಬರುತ್ತದೆ. ಭಕ್ತ–ಭಾಗವತರನ್ನು ಕುರಿತಂತೆ ಅನೇಕ ಪುರಾಣ ಮತ್ತು ಮತೀಯ ಸಂದರ್ಭ–ಸನ್ನಿವೇಶಗಳನ್ನು ಚಿತ್ರಿಸಿದ್ದಾರೆ. ಕೃಷ್ಣಾವತಾರ ಮತ್ತು ರಾಮಾವತಾರಕ್ಕೆ ಸಂಬಂಧಿಸಿದ ಭಾಗವತಭಕ್ತರ ಪ್ರಸಂಗಗಳೇ ಅಧಿಕವಾಗಿ ಕಾಣಿಸಿಕೊಂಡಿವೆ. ಶಿಷ್ಟ ಪರಿಪಾಲನೆಯ ಭಕ್ತೋದ್ಧಾರದ ಸಂದರ್ಭ ಎಷ್ಟು ಪ್ರಿಯವೋ ದುಷ್ಟನಿಗ್ರಹದ ದುಷ್ಟರ ಸಂಹಾರದ ಸಂದರ್ಭಗಳೂ ನಮ್ಮ ದಾಸರಿಗೆ ಅಷ್ಟೇ ಪ್ರಿಯವಾಗಿರುವುದು ವಿಶೇಷ. ವಾಲಿ, ರಾವಣ, ಕಂಸ, ಕೌರವ, ಪೂತನಿ, ಶಿಶುಪಾಲ, ತ್ರಿಪುರ, ಕೇಶಿ, ಮಧುಕೈಟಭರು, ಧೇನುಕ ಹೀಗೆ ಹಲವು ದುಷ್ಟರ ನಿಗ್ರಹದ ಚಿತ್ರಗಳು ಬರುತ್ತವೆ.

ಭಾಗವತ ಭಕ್ತರಲ್ಲಿ ಅಗ್ರೇಸರರಾಗಿರುವ ವಾಹನ ದೇವತೆಗಳಾದ ಶೇಷ (ನಾಗರಾಜ)ನನ್ನೂ ಪೆರಿಯತಿರುವಡಿ – ಕಿರಿಯತಿರುವಡಿ ಎನಿಸಿರುವ ಗರುಡ–ಹನುಮಂತರನ್ನೂ ವಿಶೇಷವಾಗಿ ಸ್ತುತಿಸಿರುವುದು ಕಂಡುಬರುತ್ತದೆ. ಹನುಮಂತನನ್ನು ಕುರಿತು ಸ್ವತಂತ್ರ ಕೃತಿಗಳೇ ಇವೆ. ಪದೇ ಪದೇ ಉಲ್ಲೇಖಗೊಳ್ಳುವ ಧ್ರುವ, ಪ್ರಹ್ಲಾದ, ಗಜೇಂದ್ರ ಮೋಕ್ಷ, ಅಹಲ್ಯೆ, ಬಲಿ, ಈ ಪುರಾಣ ಪ್ರತಿಮೆಗಳ ಜೊತೆಗೆ ಅಂಬರೀಷ, ಅಜಾಮಿಳ, ಅಕ್ರೂರ, ಶಬರಿ, ದ್ರೌಪದಿ, ರುಕ್ಮಿಣಿ, ಭಾಮೆ, ಕೈಕೇಯಿ, ಸುಗ್ರೀವ ಮುಂತಾದವರೂ ಬರುತ್ತಾರೆ.

ವಿಶಿಷ್ಟಾದ್ವೈತ ದಾಸರೆಲ್ಲ ಈಚಿನವರಾಗಿರುವುದರಿಂದ ಅವರ ಹಿಂದಿನ ಹರಿದಾಸರನ್ನು ಭಾಗವತ ಭಕ್ತರನ್ನಾಗಿ ಸ್ಮರಿಸಿರುವುದು ವಿಶೇಷವಾಗಿ ಕಂಡುಬರುವ ಸಂಗತಿ. ಪುರಂದರ–ಕನಕ–ಲಕ್ಷೀಶ ಇವರುಗಳ ಉಲ್ಲೇಖಗಳು ವಿರಳವಾಗಿಯಾದರೂ ಕಾಣಿಸಿಕೊಂಡಿದೆ.

ಶ್ರೀವೈಷ್ಣವ ಹರಿದಾಸರ ಇನ್ನೊಂದು ವಿಶೇಷ ಅಂಶವೆಂದರೆ ಮತಾಚಾರ್ಯರನ್ನು ಮತೀಯ ಭಕ್ತೋತ್ತಮರಾದ ಆಳ್ವಾರರನ್ನು ಅವರ ಜೀವನ ಪ್ರಸಂಗಗಳನ್ನು ಅಷ್ಟೇ ಸಹಜವಾಗಿ ಪುರಾಣ ಪ್ರತಿಮೆಗಳಂತೆ ಕಂಡರಿಸಿರುವುದು, ಆಳ್ವಾರರಲ್ಲಿ ಪ್ರಧಾನಾಳ್ವಾರರಾದ ನಮ್ಮಾಳ್ವಾರರನ್ನು ಮತ್ತು ಭಕ್ತೆ ಆಂಡಾಳ್‌ರನ್ನು ಆಚಾರ್ಯರಲ್ಲಿ ಪ್ರಧಾನಾಚಾರ್ಯರಾದ ರಾಮಾನುಜರನ್ನು ಎಲ್ಲ ಶ್ರೀವೈಷ್ಣವ ಹರಿದಾಸರೂ ಸ್ಮರಿಸಿದ್ದಾರೆ. ಉಳಿದಂತೆ ತೊಂಡರಡಿಪ್ಪೊಡಿಯಾಳ್ವಾರ್, ತಿರುಪ್ಪಾಣಾಳ್ವಾರ್ ಮತ್ತು ತಿರುಮಂಗೈ ಆಳ್ವಾರರ ಜೀವನ ಸಂಗತಿಗಳು ಕುತೂಹಲ ಸಂಗತಿಗಳಿದ ಕೂಡಿರುವುದರಿಂದ ಅವುಗಳನ್ನು ಉಲ್ಲೇಖಿಸುತ್ತಾರೆ. ಇತರ ಆಳ್ವಾರರನ್ನೂ ಆಚಾರ್ಯತ್ರಯರಲ್ಲಿ

ಉಳಿದಿಬ್ಬರು ಆಚಾರ್ಯರನ್ನೂ (ನಾಥ ಮತ್ತು ಯಾಮುನ) ಕ್ವಚಿತ್ತಾಗಿ ಸ್ತುತಿಸಿರುವುದು ಕಂಡುಬರುತ್ತದೆ.

ಈ ಎಲ್ಲಾ ಪುರಾಣ ಮತ್ತು ಮತೀಯ ಸಂಗತಿಗಳು ಹಲವು ಕೀರ್ತನೆಗಳಲ್ಲಿ ಬೇರೆ ಬೇರೆ ವಿವರಣೆಗಳಲ್ಲಿ ಪದೇಪದೇ ಕಾಣಿಸಿಕೊಳ್ಳುವುದರಿಂದ ಕೀರ್ತನೆಗಳ ಟಿಪ್ಪಣಿಗಳಲ್ಲಿ ಮತ್ತೆ ಮತ್ತೆ ಪುನರಾವರ್ತನೆಯಾಗುವುದನ್ನು ತಪ್ಪಿಸಲು ಆಯಾ ಭಕ್ತರ ಹೆಸರನ್ನಷ್ಟೇ ಅಲ್ಲಿ ಸೂಚಿಸಿ ಇಲ್ಲಿ ಪ್ರತ್ಯೇಕವಾಗಿ ಅಕಾರಾದಿಯಾಗಿ ಅವರ ಪ್ರಸಂಗದ ವಿಶೇಷತೆಯನ್ನೂ ದಾಸರ ಕೃತಿಗಳಲ್ಲಿ ಚಿತ್ರಿತವಾಗಿರುವ ಸಂಗತಿಯ ವಿವರಗಳನ್ನೂ ಸಂಕ್ಷಿಪ್ತವಾಗಿ ಪಟ್ಟಿಮಾಡಲಾಗಿದೆ. ಈಗಾಗಲೆ ಇತರ ದಾಸರುಗಳ ಮೂಲಕ ಉಲ್ಲೇಖಗೊಂಡಿರುವ ಪ್ರಸಿದ್ಧ ಪುರಾಣಪ್ರಸಂಗಗಳನ್ನು ಬಿಟ್ಟು ನೂತನ ಮತ್ತು ವಿಶೇಷ ಸಂಗತಿಗಳನ್ನುಳ್ಳ ಪ್ರಸಂಗಗಳನ್ನು ಮಾತ್ರ ಇಲ್ಲಿ ನೀಡಿದೆ.

ಅಂಬರೀಷ

ಏಕಾದಶೀ ವ್ರತನಿಷ್ಠ ಭಾಗವತಭಕ್ತ. ಒಂದು ಏಕಾದಶೀ ವ್ರತದಲ್ಲಿ ಪಾರಣೆ ಊಟಕ್ಕಾಗಿ (ಪಾರಣೆ ಊಟವೆಂದರೆ ಉಪವಾಸದ ಮಾರನೆದಿನದ ಹಬ್ಬದಅಡಿಗೆಯ ಊಟ) ದೂರ್ವಾಸರನ್ನು ಆಮಂತ್ರಿಸುತ್ತಾನೆ. ಅವರು ಬರುವುದು ತಡವಾದಾಗ ಸೂರ್ಯಾಸ್ತ ಸಮೀಪಿಸಲು ಬರುವುದಿಲ್ಲವೆಂದು ಭಾವಿಸಿ ಊಟಕ್ಕೆ ಕುಳಿತು ಆಪೋಷನ ಹಾಕಿ ಎನ್ನುತ್ತಾನೆ. (ಆಪೋಷನ ಎಂದರೆ ತೀರ್ಥಸೇವನೆ ಹಾಕುವುದು, ಆಪೋಷನ ಹಾಕಿದರೆ ಊಟಮಾಡುವುದು ಎಂದೇ ಅರ್ಥ (ಭಾಗವತರಲ್ಲಿ ಊಟಮಾಡುವುದೂ ಒಂದು ಶಿಸ್ತು. ಎಲ್ಲ ಪದಾರ್ಥಗಳನ್ನು ಬಡಿಸುವವರೆಗೆ ಏನನ್ನೂ ಮುಟ್ಟುವಂತಿಲ್ಲ ಅಂದರೆ ತಿನ್ನುವಂತಿಲ್ಲ. ಬಡಿಸಿಯಾದ ಮೇಲೆ ತೊವ್ವೆ-ತುಪ್ಪ ಹಾಕಿದ ಮೇಲೆ ನೀರನ್ನು ಅಂಗೈಯಲ್ಲಿ ಹಾಕಿಕೊಂಡು ಎಲೆಯ ಸುತ್ತಲೂ ಬಿಟ್ಟುಕೊಂಡು ಅನಂತರ ದೇವರ ತೀರ್ಥಸೇವನೆ ಮಾಡಿ ಆಮೇಲೆ ಊಟಮಾಡಬೇಕು. ಇಡೀ ಪಂಕ್ತಿಯಲ್ಲಿ ಈ ಶಿಸ್ತು ಇರುತ್ತದೆ. ಇದನ್ನೇ ಆಪೋಷನ ಎನ್ನಲಾಗುತ್ತದೆ). ಅನಂತರ ಬಂದ ದೂರ್ವಾಸಮುನಿ ಕೋಪಗೊಂಡು ಅವನ ನಾಶಕ್ಕೆ ಕೃತ್ಯೆಯೊಂದನ್ನು ನಿರ್ಮಿಸಿ-ಬಿಡುತ್ತಾನೆ. ವ್ರತ ನಿಷ್ಠನಾದ ಅಂಬರೀಷ ತನ್ನ ರಕ್ಷಣೆಗೆ ಶ್ರೀಕೃಷ್ಣನ ಮೊರೆಹೋಗುತ್ತಾನೆ. ಭಕ್ತರಬಂಧು ಕೃಷ್ಣ ಚಕ್ರಾಯುಧದಿಂದ ಕೃತ್ಯೆಯನ್ನು ಸಂಹರಿಸಿ ಅಂಬರೀಷನನ್ನು ರಕ್ಷಿಸುತ್ತಾನೆ. ವ್ರತನಿಷ್ಠೆ, ಆಚಾರಪಾಲನೆಯ ಸಂದರ್ಭಕ್ಕೆ ಈ ಅಂಬರೀಷನ ಉಲ್ಲೇಖ ಪದೇ ಪದೇ ಬರುತ್ತದೆ.

ಈ ಅಂಬರೀಷನೊಂದಿಗೆ ಇನ್ನೊಬ್ಬ ಅಂಬರೀಷನೂ ಇದ್ದ ಉಲ್ಲೇಖವೂ ಇಲ್ಲಿ ಬಂದಿದೆ. ನಾರದ ಮತ್ತು ಪರ್ವತೇಶ್ವರರ ಗರ್ವಭಂಗಕ್ಕಾಗಿ ತಾನೇ ವಿವಾಹವಾಗುವ 'ಶ್ರೀಮತಿ' ಯ ತಂದೆಯಾಗಿ ಈ ಅಂಬರೀಷನ ಉಲ್ಲೇಖವಿದೆ.

ಇಕ್ಷ್ವಾಕು ವಂಶದ ರಾಜನಾದ ಈತನ ಮಗಳು ಶ್ರೀಮತಿಯ ವಿವಾಹಕ್ಕೆ ನಾರದ, ಪರ್ವತರು ಪೈಪೋಟಿಯಾಗಿ ಮಧ್ಯಸ್ಥಿಕೆಗಾಗಿ ಶ್ರೀವಿಷ್ಣುವಿನ ಮೊರೆ ಹೋಗುತ್ತಾರೆ. ಸ್ವಯಂವರ ಕಾಲದಲ್ಲಿ ಇಬ್ಬರೂ ಪರಸ್ಪರ ವಿಕಾರಮುಖಕ್ಕೆ ವರ ಬೇಡುತ್ತಾರೆ. ವಿಷ್ಣುವೇ ಮಧ್ಯೆ ಕಾಣಿಸಿಕೊಂಡು ವಿವಾಹವಾಗಿ ಕಪಿ–ಕೋಡಗ ರೂಪದಿಂದ ನಾರದ –ಪರ್ವತರ ಮುಖಭಂಗ, ಗರ್ವಭಂಗವಾಗುತ್ತದೆ.

ಅಕ್ರೂರ

ಕಂಸನ ಪಾಳಯದಲ್ಲಿದ್ದ ಕ್ಷತ್ರಿಯರಾಜ. ಕಂಸನ ಅಪ್ಪಣೆಯಂತೆ ಕೃಷ್ಣ ಬಲರಾಮರನ್ನು ಮಧುರೆಗೆ ಕರೆದುಕೊಂಡು ಹೋಗುವವನಾಗಿ ಕಾಣಿಸಿಕೊಳ್ಳುತ್ತಾನೆ. ಕೃಷ್ಣನ ಬಗ್ಗೆ ಅಭಿಮಾನ–ಭಕ್ತಿಯುಳ್ಳವನಾಗಿದ್ದುದರಿಂದ ಮಾರ್ಗಮಧ್ಯದಲ್ಲಿ ಕೃಷ್ಣ ಇವನಿಗೊಲಿದು ಯಮುನಾ ತೀರದಲ್ಲಿ ತನ್ನ ದಿವ್ಯರೂಪದರ್ಶನ ಮಾಡಿಸುತ್ತಾನೆ. ಆದ್ದರಿಂದಲೇ ಕೃಷ್ಣನನ್ನು 'ಅಕ್ರೂರ ವರದ ' ಎಂದು ಕರೆದಿದೆ. ಮುಂದೆ ಶ್ರೀಕೃಷ್ಣ ಇವನಿಗೆ ಶ್ಯಮಂತಕಮಣಿಯನ್ನು ಕೊಡುತ್ತಾನೆ. ಇದರಿಂದ ಅಕ್ರೂರ ಕೀರ್ತಿವಂತನಾಗುತ್ತಾನೆ

ಅಜಾಮಿಳ

ಪರಮ ಭಾಗವತ ಎಂದು ಪ್ರಸಿದ್ಧನಾಗಿರುವ ಇವನು ಕನೂಜದ ಒಬ್ಬ ಭಾಗವತ ಬ್ರಾಹ್ಮಣ. ಅಂತ್ಯಕಾಲದಲ್ಲಿ ನಾರಾಯಣ ಎಂದು ಕೂಗಿದ್ದರಿಂದ ಮೋಕ್ಷ ಪಡೆದನೆಂದೂ ಶ್ರೀಹರಿಯ ನಾಮಸ್ಮರಣೆಯೊಂದರಿಂದಲೇ ದೇವರನ್ನು ಒಲಿಸಿಕೊಳ್ಳಬಹುದಾದಷ್ಟು ಸುಲಭವೆಂದೂ ಪ್ರತಿಪಾದಿಸಲು ಈ ಕಥೆಯನ್ನು ಉಲ್ಲೇಖಿಸಲಾಗುತ್ತದೆ.

ಇವನು ಜೀವನವೆಲ್ಲ ಹೊಲತಿಯೊಂದಿಗೆ ಸಂಸಾರ ಮಾಡಿದರೂ ಮಕ್ಕಳಿಗೆಲ್ಲ ಹರಿನಾಮದ ಹೆಸರುಗಳನ್ನೇ ಇಟ್ಟು ಸಂಸಾರ ಸುಖದಲ್ಲಿ ತಲ್ಲೀನನಾಗಿರುತ್ತಾನೆ. ಸಾಯುವ ಕಾಲದಲ್ಲಿ ಯಮದೂತರು ಬಂದೆಳೆವಾಗ, ತನ್ನ ಕಿರಿಯ ಮಗನನ್ನು ಹೆಸರಿಡಿದು 'ನಾರಾಯಣಾ' ಎಂದು ಕರೆದಾಗ ಪರಮಾತ್ಮನೇ ಪ್ರತ್ಯಕ್ಷನಾಗಿ ವೈಕುಂಠಕ್ಕೆ ಕೊಂಡೊಯ್ಯುತ್ತಾನೆಂದು ಭಾಗವತದಲ್ಲಿ ಇವನ ಕಥೆಯಿದೆ.

ಅದಿತಿ

ಇಂದ್ರ ದೇವತೆಗಳು ದ್ವಾದಶಾದಿತ್ಯರುಗಳ ತಾಯಿ. ಕಶ್ಯಪಮುನಿ ಪತ್ನಿ, ದಕ್ಷಪತಿರಾಜನ ಮಗಳು. ಕೃಷ್ಣನು ನರಕಾಸುರನನ್ನು ಕೊಂದು ಅವನಲ್ಲಿದ್ದ ಅದಿತಿಯ ಕುಂಡಲವನ್ನು ಕೊಡಲು

ಅವಳ ಬಳಿಗೆ ಭಾಮೆಯೊಂದಿಗೆ ಹೋಗಿದ್ದಾಗ, ಭಾಮೆಗೆ, ಅವಳು ಶ್ರೀಕೃಷ್ಣ ಭೂಮಿಯ ಮೇಲಿರುವವರೆಗೂ ಸುಗಂಧವತಿಯಾಗಿ ಯುವತಿಯಾಗಿ ಇರು ಎಂದು ವರ ನೀಡಿದ್ದಳು.

ಅಷ್ಟಾಕ್ಷರಿ

ಶ್ರೀವೈಷ್ಣವರು ಅನುಸಂಧಾನ ಮಾಡುವ ರಹಸ್ಯತ್ರಯದಲ್ಲಿ ಮೊದಲನೆಯದು. ಅದೇ 'ಓಂ ನಮೋ ನಾರಾಯಣಾಯ'. ಈ ನಾಮೋಚ್ಚಾರಣೆಯೊಂದರಿಂದಲೂ ಭಗವಂತನನ್ನು ಕಾಣಲು, ಮೋಕ್ಷ ಪ್ರಾಪ್ತಿಯಾಗಲು ಸಾಧ್ಯ; ಇದಕ್ಕಿಂತ ಸುಲಭೋಪಾಯವಿಲ್ಲ ಎಂಬ ತತ್ವ ಇದರಲ್ಲಿದೆ. ಸಾಧಕನಿಗೆ ಪ್ರಪತ್ತಿಧರ್ಮದ ಅನುಷ್ಠಾನದಲ್ಲಿ ಇದೊಂದು ಮುಖ್ಯ ಸಾಧನವಾಗಿ ಕಾರ್ಯ ನಿರ್ವಹಿಸುತ್ತದೆ. ಇದರ ಬಗ್ಗೆ ರಾಮಾನುಜಾಚಾರ್ಯರಿಂದ ಮೊದಲುಗೊಂಡು ಅನೇಕ ಆಚಾರ್ಯರು, ಮತನಿಷ್ಠರು ದೀರ್ಘವಾದ ವ್ಯಾಖ್ಯಾನಗಳನ್ನೇ ಮಾಡಿದ್ದಾರೆ. ರಾಮಾನುಜರ 'ರಹಸ್ಯತ್ರಯಸಾರ'ಕೃತಿಯ ಮುಖ್ಯವಸ್ತುವೇ ಇದು ಮತ್ತು ರಹಸ್ಯತ್ರಯದ ಇನ್ನೆರಡು ಧ್ಯಾನಶ್ಲೋಕಗಳಾದ ದ್ವಯಮಂತ್ರ ಹಾಗೂ ಚರಮಶ್ಲೋಕಗಳ ವ್ಯಾಖ್ಯಾನವಾಗಿದೆ. ಈ ಅಷ್ಟಾಕ್ಷರಿಯನ್ನು 'ಮೂಲಮಂತ್ರ' 'ಮಹಾಮಂತ್ರ' ಮಂತ್ರರಾಜ' ಎಂದೆಲ್ಲ ಕರೆಯಲಾಗಿದೆ.

ಅಂಡಾಳ್

ಶ್ರೀವೈಷ್ಣವ ಆಳ್ವಾರರಲ್ಲಿ ಬರುವ ಏಕೈಕ ಭಕ್ತೆ ಈ ಆಂಡಾಳ್. ಪೆರಿಯಾಳ್ವಾರರ ಮಗಳು. ಶ್ರೀವಿಲ್ಲಿಪುತ್ತೂರಿನ ವಟಪತ್ರಶಾಯಿಯ ಆರಾಧಕರಾಗಿದ್ದ ಪೆರಿಯಾಳ್ವಾರರು ಹೂದೋಟ ನಿರ್ಮಿಸಿ ಪ್ರತಿನಿತ್ಯ ದೇವರಿಗೆ ಹೂಮಾಲೆಯಲ್ಲಿ ಅಲಂಕರಿಸುವುದರಲ್ಲಿ ತಲ್ಲೀನರಾಗಿರುತ್ತಿದ್ದ ಪರಮಭಕ್ತರು. ಇವರಿಗೆ ಹೂದೋಟದಲ್ಲಿ ಸಿಕ್ಕಿದ ಮಗಳೇ ಈ ಆಂಡಾಳ್. ಇವಳೂ ತಂದೆಯಂತೆ ಕೃಷ್ಣನಲ್ಲಿ ಮನಸ್ಸಿಟ್ಟು ಸದಾ ಕೃಷ್ಣಧ್ಯಾನದಲ್ಲೇ ನಿರತಳಾಗಿರುತ್ತಿದ್ದಳು. ತಂದೆ ಕಟ್ಟಿಡುತ್ತಿದ್ದ ದೇವರ ಹಾರವನ್ನು ತಂದೆಗೆ ಕಾಣದಂತೆ ತಾನೊಮ್ಮೆ ಧರಿಸಿ ಚೆನ್ನಾಗಿ ಕಾಣುತ್ತದೆಯೇ ಎಂದು ನೋಡಿಕೊಂಡು ತೆಗೆದಿಡುತ್ತಿದ್ದಳು. ಒಮ್ಮೆ ಪೆರಿಯಾಳ್ವಾರರು ಇದನ್ನು ನೋಡಿ ಪರಮಾಪಚಾರವಾಯಿತೆಂದು ಮನನೊಂದು ಮತ್ತೆ ಹೂ ತಂದು ಕಟ್ಟಿ ದೇವರಿಗೆ ಕೊಂಡೊಯ್ದರು. ತಡವಾಗಿದ್ದಕ್ಕೆ ಕ್ಷಮೆಯಾಚಿಸಿದರು. ದೇವರು ಈ ಹಾರ ಬೇಡ ನಿಮ್ಮ ಮಗಳು ಧರಿಸಿದ್ದ ಹಾರವನ್ನು ತನ್ನಿ. ಅದೇ ನನಗೆ ಪ್ರಿಯವೆಂದು ಅಪ್ಪಣೆ ಕೊಡಿಸಿದುದನ್ನು ಕೇಳಿ ಮಗಳ ಭಕ್ತಿಗೆ ಮೆಚ್ಚಿ ತನಗೊಲಿಯದ ದೈವ ಮಗಳಿಗೆ ಒಲಿದುದನ್ನು ಕಂಡು ಆನಂದಿತರಾಗಿ ಪ್ರತಿನಿತ್ಯ ತಾವೇ ಮಗಳಿಗೆ ತೊಡಿಸಿ ನಂತರ ದೇವರಿಗರ್ಪಿಸುತ್ತಿದ್ದರು. ಈ ಕಾರಣದಿಂದ ಆಂಡಾಳಳನ್ನು 'ಸೂಡಿಕೊಡುತ್ತ ನಾಚ್ಚಿಯಾರ್' ಎಂದು ಕರೆಯಲಾಗಿದೆ. ಎಂದರೆ 'ಮುಡಿದು ಕೊಡುವ ಭಕ್ತೆ' ಎಂದರ್ಥ.

ಆಂಡಾಳ್ ಪರಮಾತ್ಮನನ್ನು ಒಲಿಸಿಕೊಳ್ಳುವುದಕ್ಕಾಗಿ ಒಂದು ವ್ರತವನ್ನು ಧನುರ್ಮಾಸದ ಕಾಲದಲ್ಲಿ ಮಾಡಿ ಪ್ರತಿದಿನವೂ ತಾನೇ ರಚಿಸಿದ ಒಂದೊಂದು ಪದ್ಯಗಳಿಂದ ತನ್ನ ಸಖಿಯರೊಡಗೂಡಿ ಬೆಳಗಿನಜಾವ ಚಳಿಯಲ್ಲಿ ತಣ್ಣೀರಲ್ಲಿ ಮಿಂದು ದೇವರನ್ನು ಸ್ತುತಿಸಿದ್ದಾಳೆ.

ಈ ೩೦ ಪದ್ಯಗಳ ಮಾಲೆಯೋ ತಿರುಪ್ಪಾವೈ ವ್ರತ ಶ್ರೀವೈಷ್ಣವರಲ್ಲಿ ಇಂದಿಗೂ ಪ್ರಚಲಿತವಾಗಿದೆ. ಈ ವ್ರತವನ್ನು ಮಾಡಿದ್ದರಿಂದಲೇ ಆಂಡಾಳ್ ರಂಗನಾಥನನ್ನು ಮದುವೆಯಾದಳು ಎಂಬ ಘಟನೆಯೂ ಇವಳ ಕಥೆಯೊಂದಿಗೆ ಸೇರಿದೆ. ರಂಗನಾಥನು ಮದುಮಗನಾಗಿ ದೇವತೆಗಳೊಂದಿಗೆ ಬಂದು ಪೆರಿಯಾಳ್ವಾರರಿಂದ ಧಾರಾಪೂರ್ವಕವಾಗಿ ಆಂಡಾಳಳನ್ನು ಕನ್ಯಾದಾನ ಪಡೆದು ಶಾಸ್ತ್ರೋಕ್ತವಾಗಿ ಮದುವೆಯಾದ ಚಿತ್ರವಿದೆ. ಇದು ಆಂಡಾಳ್ ಬರೆದಿರುವ 'ನಾಚ್ಚಿಯಾರ್ ತಿರುಮೊಳಿ' ಗ್ರಂಥದಲ್ಲಿದೆ.

ತಿರುಪ್ಪಾವೈ ಹೆಸರಿನಲ್ಲೇ ಆ ವ್ರತದ ಪದ್ಯಗಳು ಪ್ರಸಿದ್ಧಿಯಾಗಿವೆ. ಇದರ ಬಗ್ಗೆ ಅನೇಕ ಅನುವಾದ – ವ್ಯಾಖ್ಯಾನ ಉಪನ್ಯಾಸಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ಇದೊಂದು ಸರ್ವಶ್ರೇಷ್ಠ ಕೃತಿ, ಅತ್ಯುತ್ಕೃಷ್ಟ ಸಾಹಿತ್ಯ ಕೃತಿ ಎಂದೆಲ್ಲ ವಿದ್ವಾಂಸರು ಮೆಚ್ಚಿದ್ದಾರೆ. ಸುಂದರವಾದ ಪ್ರಕೃತಿವರ್ಣನೆಗೆ, ಸತಿಪತಿಭಾವಕ್ಕೆ, ಅತ್ಮೀಯತೆಯ ಸಹಜ ಸಂಭಾಷಣ ಶೈಲಿಗೆ ಈ ಕೃತಿ ಹೆಸರಾಗಿದೆ.

ಈ ಧನುರ್ಮಾಸದ ವ್ರತಾಚರಣೆಯ ಸಂಕೇತವಾಗಿಯೇ ಇಂದಿಗೂ ದಕ್ಷಿಣಭಾರತದಲ್ಲಿ ಒಂದು ಮುಖ್ಯ ಸಾಮಾಜಿಕ ಚಟುವಟಿಕೆಯಾಗಿ, ಜಾನಪದ ಸಂಸ್ಕೃತಿಯಾಗಿ ಆಚರಣೆಯಲ್ಲಿರುವ 'ಬೆಳಗಿನ ಜಾವದ ಭಜನೆ' ಕಂಡುಬರುತ್ತದೆ. ಧನುರ್ಮಾಸದಲ್ಲೇ ಅಂದರೆ ಡಿಸೆಂಬರ್ ೧೫ರಿಂದ ಜನವರಿ ೧೪ರವರೆಗೆ ಸಂಕ್ರಾಂತಿ ಹಬ್ಬದವರೆಗೆ ಎಲ್ಲ ವಿಷ್ಣುದೇವಾಲಯಗಳಲ್ಲೂ ಬೆಳಗಿನ ಜಾವದ ಪೂಜೆ, ಊರಿನ ಬೀದಿಗಳಲ್ಲಿ ಭಜನೆ ಇರುತ್ತದೆ ಶ್ರೀವೈಷ್ಣವರಿಗೆ ಈ ಹಬ್ಬ 'ಪೊಂಗಲ್' ಎಂದೇ ಪ್ರಸಿದ್ಧವಾಗಿದೆ.

ಆಳ್ವಾರರು

ಶ್ರೀವೈಷ್ಣವ ಭಕ್ತರಾದ ಆಳ್ವಾರ್ ಪರಂಪರೆಯಲ್ಲಿ ಆಂಡಾಳ್ ಎಂಬ ಭಕ್ತೆಯೂ ಸೇರಿ ೧೨ಜನ ಆಳ್ವಾರರು ಬರುತ್ತಾರೆ. ಅವರೆಂದರೆ

ಪೊಯ್‌ಗೈಯಾಳ್ವಾರ್, ಪೂದತ್ತಾಳ್ವಾರ್, ಪೇಯಾಳ್ವಾರ್, ತಿರುಮಳಿಶೈಯಾಳ್ವಾರ್, ಕುಲಶೇಖರಾಳ್ವಾರ್, ಪೆರಿಯಾಳ್ವಾರ್, ಆಂಡಾಳ್, ತೊಂಡರಡಿಪ್ಪೊಡಿಯಾಳ್ವಾರ್, ತಿರುಪ್ಪಾಣಾಳ್ವಾರ್, ತಿರುಮಂಗೈಯಾಳ್ವಾರ್, ನಮ್ಮಾಳ್ವಾರ್ ಮತ್ತು ಮಧುರಕವಿಯಾಳ್ವಾರ್. ಈ ಕ್ರಮದಲ್ಲಿ ಭಿನ್ನತೆಗಳಿವೆ. ಈ ಆಳ್ವಾರರಲ್ಲಿ ಯಾರಾದ ಮೇಲೆ ಯಾರು ಎಂಬ ಬಗ್ಗೆ ಹಲವು ಅಭಿಪ್ರಾಯಗಳಿವೆ. ಬಹುಜನಶ್ರುತವಾದ ಗುರುಪರಂಪರಾ ಕ್ರಮವನ್ನು ಇಲ್ಲಿ

ಅನುಸರಿಸಿದೆ. ಈ ಆಳ್ವಾರರೆಲ್ಲರೂ ತಮಿಳುನಾಡಿನ ವಿವಿಧ ಸ್ಥಳಗಳಲ್ಲಿ ಕಾಣಿಸಿಕೊಂಡಿರುವ ವಿಷ್ಣುಭಕ್ತರು. ಇವರಲ್ಲಿ ಎಲ್ಲ ಜಾತಿಯವರೂ ಇದ್ದಾರೆ. ಬ್ರಾಹ್ಮಣ, ಕ್ಷತ್ರಿಯ, ಅಂತ್ಯಜ, ಕಳ್ಳ ಇತ್ಯಾದಿ. ಇವರು ಪಾಲಿಸಿದ ಪ್ರಪತ್ತಿ ಧರ್ಮದ ಕಾರಣದಿಂದ ಭಗವದ್ಭಕ್ತರಾಗಿ ಶ್ರೀವೈಷ್ಣವ ಸಾಧುಸಂತರ, ಜ್ಞಾನಿಗಳ, ಭಕ್ತರ ಪರಂಪರೆಯಲ್ಲಿ ಅನನ್ಯಸ್ಥಾನವನ್ನು ಪಡೆದಿದ್ದಾರೆ.

ಚರಿತ್ರೆಯ ದೃಷ್ಟಿಯಿಂದ ಇವರೆಲ್ಲ ಪಲ್ಲವರ ಕಾಲಕ್ಕೆ ಅಂದರೆ ಕ್ರಿ.ಶ ೭ನೇ ಶತಮಾನದಿಂದ ೯ನೇ ಶತಮಾನಕ್ಕೆ ಸೇರಿದವರೆನ್ನಬಹುದು. ಇವರೊಬ್ಬೊಬ್ಬರ ಬಗೆಗೂ ರಂಜನೀಯವಾದ ಕಥೆಗಳಿವೆ. ಅವುಗಳನ್ನು ಇವರು ರಚಿಸಿರುವ ಕೃತಿಗಳಾದ 'ನಾಲಾಯಿರ ದಿವ್ಯಪ್ರಬಂಧಗಳನ್ನೂ' ಶ್ರೀವೈಷ್ಣವರು ಭಯಭಕ್ತಿಯಿಂದ ದೈವಸ್ತುತಿಗೆ, ಭಗವನ್ನಾಮಸ್ಮರಣೆಗೆ ಅನುಸಂಧಾನ ಮಾಡುತ್ತಾರೆ. ಅವರ ಆಚರಣೆ-ಅರ್ಚನೆ-ಆರಾಧನೆಗಳೆಲ್ಲ ಈ ಆಳ್ವಾರರ ಸಂದೇಶಕ್ಕೆ ಅನುಗುಣವಾಗಿವೆ.

ಸ್ತ್ರೀ-ಪುರುಷ, ಜಾತಿಭೇದ, ವೃತ್ತಿ-ಸ್ಥಾನಗಳಾಚೆ ನಿಂತು ಪರಿಶುದ್ಧ ಮಾನವರಾಗಿ ಭಕ್ತಿಯೇ ಮುಕ್ತಿಗೆದಾರಿ, ಭಕ್ತಿಗೆ ಎಲ್ಲರೂ ಅಧಿಕಾರಿಗಳು, ಶರಣಾಗತಿ ಮುಕ್ತಿಯಸುಲಭೋಪಾಯ ಎಂಬ ಶ್ರೀವೈಷ್ಣವ ತತ್ವಕ್ಕೆ ಅಳ್ವಾರರು ಮೂಲ ಸಾಧಕರಾಗಿದ್ದಾರೆ.

ಕಾರ್ತವೀರ್ಯಾರ್ಜುನ

ಪರಶುರಾಮನಿಂದ ಹತನಾದ ಸಹಸ್ರಬಾಹುಗಳ ರಾಜ. ದತ್ತಾತ್ರೇಯನಿಂದ ಯುದ್ಧಕಾಲದಲ್ಲಿ ಸಹಸ್ರಬಾಹುಗಳಿರಲೆಂದು ವರ ಪಡೆದಿದ್ದು, ಅಗ್ನಿಯ ಹಸಿವಿಗಾಗಿ ಇಡೀ ಭೂಮಿಯನ್ನೇ ಭಿಕ್ಷೆ ನೀಡಿದ್ದನು. ಅಗ್ನಿ ವಸಿಷ್ಟನ ಆಶ್ರಮ ದಹಿಸಿದಾಗ ಪರಶುರಾಮನಿಂದ ಸಾವಿನ ಶಾಪಕ್ಕೆ ಒಳಗಾಗಿ ಜಮದಗ್ನಿಯ ಆಶ್ರಮದ ಕಾಮಧೇನುವಿನ ಅಪಹರಣದಿಂದ ಹತನಾದನು ಎಂಬ ಸಾಮಾನ್ಯ ಸಂಗತಿಯೊಂದಿಗೆ ಇಲ್ಲಿ ವಿಷ್ಣುಪರವಾದ ಇನ್ನೊಂದು ವಿಶೇಷ ಸಂಗತಿಯನ್ನು ದಾಖಲಿಸಲಾಗಿದೆ.

ವಿಷ್ಣುವಿನ ಚಕ್ರಾಯುಧಕ್ಕೆ ಗರ್ವವುಂಟಾಗಲು ಪರೀಕ್ಷಾರ್ಥವಾಗಿ ವಿಷ್ಣು ತನ್ನ ಚಕ್ರಕ್ಕೆ ಕಾರ್ತವೀರ್ಯನಾಗಿ ಹುಟ್ಟಲು ಹೇಳಿ ತಾನು ಪರಶುರಾಮನಾಗಿ ಹುಟ್ಟಿ ಅವನ ಸಹಸ್ರಬಾಹುಗಳನ್ನು ಕಡಿದು ಅದರ ಗರ್ವಭಂಗ ಮಾಡುವ ಮೂಲಕ ಹರಿಪಾರಮ್ಯ-ಅವತಾರ ವೈಶಿಷ್ಟ್ಯದ ಸೂಚನೆಯದೆ.

ಕುಚೇಲ–ಸುದಾಮ

ಈ ಎರಡೂ ಹೆಸರುಗಳಿಂದ ಪ್ರಸಿದ್ಧನಾಗಿರುವ ಈ ಭಾಗವತಭಕ್ತ ಶ್ರೀಕೃಷ್ಣನ ಸಹಪಾಠಿ, ಬಹಳ ಬಡತನದಲ್ಲಿದ್ದವನು. ಪತ್ನಿಯ ಸಲಹೆಯಂತೆ ಒಮ್ಮೆ ಕೃಷ್ಣನ ದರ್ಶನಕ್ಕಾಗಿ ಅವನಿಗೆ ಪ್ರಿಯವಾಗಿದ್ದ ಒಂದೇ ಹಿಡಿ ಅವಲಕ್ಕಿಯೊಂದಿಗೆ ಹೋಗಿದ್ದಾಗ ಕೃಷ್ಣ ಅವಲಕ್ಕಿ ತಿಂದು ಅವನನ್ನು ಶ್ರೀಮಂತನನ್ನಾಗಿ ಮಾಡಿದ ಪ್ರಸಂಗದ ಕಥೆ. ಭಾಗವತರಿಗೆ ಅತ್ಯಂತ ಪ್ರಿಯವಾದುದು.

ಕುಬ್ಜೆ

ಕಂಸನ ಅಂತಃಪುರದ ದಾಸಿ, ವಕ್ರರೂಪಿ. ಬಲರಾಮ ಕೃಷ್ಣರು ಕಂಸನ ಆಮಂತ್ರಣದಂತೆ ಮಧುರೆಗೆ ಬರುವಾಗ ದಾರಿಯಲ್ಲಿ ಗಂಧದ ಬಟ್ಟಲು ಹಿಡಿದು ಇವಳು ಸಂಧಿಸುತ್ತಾಳೆ. ಇವಳು ನೀಡಿದ ಗಂಧದಿಂದ ಸಂಪ್ರೀತನಾದ ಕೃಷ್ಣ ಇವಳ ಪಾದಮೆಟ್ಟಿ ಗದ್ದಮೇಲೆತ್ತಿ ಗೂನು ಹೋಗಲಾಡಿಸಿ ಸುಂದರಿಯನ್ನಾಗಿಸುತ್ತಾನೆ.

ಕೇಶಿ

ಕಂಸಪರಿವಾರದಲ್ಲಿದ್ದ ರಾಕ್ಷಸ. ಕುದುರೆಯ ರೂಪದಲ್ಲಿ ಗೋಕುಲಕ್ಕೆ ಬಂದು ಜನರನ್ನು ಪೀಡಿಸುತ್ತಿರುವುದನ್ನು ಗಮನಿಸಿ ಶ್ರೀಕೃಷ್ಣನು ಇವನನ್ನು ಸಂಹರಿಸುತ್ತಾನೆ. ಆದ್ದರಿಂದಲೇ ಇವನು 'ಕೇಶವ 'ನಾಗುತ್ತಾನೆ.

ಗಜೇಂದ್ರ ಮೋಕ್ಷ :

ಶ್ರೀವೈಷ್ಣವ ಭಕ್ತರಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಭಾಗವತ ಕಥೆ. ಆನೆಯೊಂದರ ಕಾಲನ್ನು ಮೊಸಳೆ ಹಿಡಿದಾಗ ಆನೆ ಸೊಂಡಿಲಲ್ಲಿ ಕಮಲವನ್ನು ಹಿಡಿದು ಶ್ರೀ ಹರಿಯನ್ನು ಮೊರೆಹೋಗಲು ಆಕ್ಷಣವೇ ಗರುಡ ವಾಹನನಾಗಿ ಬಂದು ಮೊಸಳೆಯನ್ನು ಚಕ್ರದಿಂದ ತರಿದು ಆನೆಯನ್ನು ರಕ್ಷಿಸುವ ಕಥೆ. ಭಾಗವತದಲ್ಲಿ ಈ ಆನೆ ಪೂರ್ವಜನ್ಮದಲ್ಲಿ ಪಾಂಡ್ಯ ದೇಶದಲ್ಲಿ ಇಂದ್ರದ್ಯುಮ್ನ ಎಂಬ ವೈಷ್ಣವರಾಜನಾಗಿದ್ದು ಅಗಸ್ತ್ಯನ ಶಾಪದಿಂದ ಆನೆಯಾಗಿದ್ದನೆಂದೂ ಮೊಸಳೆಯದೂ ಇದೇ ಬಗೆಯ ಶಾಪ ಜನ್ಮವೆಂದೂ ಇದೆ.

ಗರುಡ :

ಶ್ರೀವಿಷ್ಣುವಿನ ವಾಹನ. ವಿಷ್ಣುವು ಗರುಡನ ಶಕ್ತಿ ಸಾಮರ್ಥ್ಯಕ್ಕೆ ಮೆಚ್ಚಿ ತನ್ನ ವಾಹನವನ್ನಾಗಿಸಿಕೊಂಡನೆಂಬ ಭಾಗವತ ಕಥೆಯಿದೆ. ಶ್ರೀವೈಷ್ಣವ ಭಾಗವತರಲ್ಲಿ ಗರುಡನಿಗೆ ವಿಷ್ಣುವಿನ ವಾಹನ ದೇವತೆಗಳಲ್ಲಿ ಆದ್ಯ ಸ್ಥಾನವಿದೆ. ಗರುಡನನ್ನು 'ಪೆರಿಯ ತಿರುವಡಿ'

ಎಂದು ಕರೆಯಲ್ಪಟ್ಟಿದ್ದು ಶ್ರೀವೈಷ್ಣವ ದೇವಾಲಯಗಳಲ್ಲಿ ಉತ್ಸವ ಕಾಲದಲ್ಲಿ ಗರುಡ ವಾಹನವೇ ವಿಶೇಷವಾಗಿ ಬಳಕೆಯಲ್ಲಿರುವುದು.

ತಿರುಪ್ಪಾಣಾಳ್ವಾರ್

೧೨ಜನ ಆಳ್ವಾರರ ಗುಂಪಿನಲ್ಲಿ ಅಂತ್ಯಜರಾಗಿ ಕಾಣಿಸಿಕೊಳ್ಳುವ ಈ ಆಳ್ವಾರರು ಉರೈಯೂರಿನವರು. ಶ್ರೀರಂಗದಲ್ಲಿ ಕಾವೇರಿಯ ದಕ್ಷಿಣ ತೀರದಲ್ಲಿ ನೆಲೆಸಿ ಅಲ್ಲಿಂದಲೇ ದೇವರ ಕಡೆ ಮುಖಮಾಡಿ ಧ್ಯಾನಾಸಕ್ತರಾಗಿ ಕುಳಿತು ಭಗವಂತನನ್ನು ಹಲವು ಕೀರ್ತನೆಗಳ ಮೂಲಕ ಸುಮಧುರವಾಗಿ ಹಾಡುತ್ತಾ ಮೈಮರೆಯುತ್ತಿದ್ದರು. ಇವರನ್ನು ಗುರುಪರಂಪರಾ ಪ್ರಭಾವರಲ್ಲಿ 'ಭಗವದ್ಗಾನವಿದ್ಯಾ ಸಾರ್ವಭೌಮ' ಎಂದು ಸ್ತುತಿಸಲಾಗಿದೆ.

ದೇವಾಲಯದ ಪ್ರಧಾನ ಅರ್ಚಕರಾಗಿದ್ದ ವಿಪ್ರೋತ್ತಮ ಲೋಕಸಾರಂಗರೆಂಬುವವರು ಪ್ರತಿನಿತ್ಯ ಕಾವೇರಿಯಿಂದ ದೇವರಿಗೆ ಮಡಿನೀರು ಕೊಂಡೊಯ್ಯುತ್ತಿದ್ದವರು ಒಂದು ದಿನ ಆಳ್ವಾರರುಕುಳಿತ ದಾರಿಯಲ್ಲಿ ಬಂದು ಅವರನ್ನು ಎಬ್ಬಿಸಲು ಒಂದು ಕಲ್ಲನ್ನು ಇವರ ಮೇಲೆ ಎಸೆಯುತ್ತಾರೆ. ಆದಿನ ರಾತ್ರಿ ಭಗವಂತ ಲೋಕಸಾರಂಗರ ಕನಸಿನಲ್ಲಿ ಬಂದು

'ಭಾಗವತಾಪಚಾರ ಮಾಡಿದವರು ತಿರುಪ್ಪಾಣರಲ್ಲ ನೀನು' ನನ್ನ ಭಕ್ತನಿಗೆ ಹೀಗೆ ಅಪಚಾರ ಮಾಡಬಹುದೇ ಕೂಡಲೇ ಹೋಗಿ ಅವರನ್ನು ನಿನ್ನ ಹೆಗಲಮೇಲೆ ಹೊತ್ತು ನನ್ನ ಸನ್ನಿಧಿಗೆ ಕರೆತಾ' ಎಂದು ಹೇಳಿದಂತಾಗಿ ಬೆಚ್ಚಿಬಿದ್ದು ತಮ್ಮ ತಪ್ಪಿನ ಅರಿವಾಗಿ ಬೆಳಗಾಗುತ್ತಲೇಓಡಿ ಬಂದು ತಿರುಪ್ಪಾಣರು ಬೇಡಬೇಡವೆಂದರೂ ಕೇಳದೆ ಅವರನ್ನು ರಂಗನಾಥನ ಸನ್ನಿಧಿಗೆ ಹೊತ್ತು ತರುತ್ತಾರೆ. ಜನರೆಲ್ಲ ನಿಬ್ಬೆರಗಾಗುತ್ತಾರೆ. ಭಗವಂತನ ಅರ್ಚಾಮೂರ್ತಿಯನ್ನು ಕಾಣುವ ಭಾಗ್ಯವೇ ಇಲ್ಲದಿದ್ದ ತಿರುಪ್ಪಾಣರಿಗೆ ಕಣ್ತುಂಬ ನೋಡುವ ಸುಸಮಯದಿಂದ ಧನ್ಯರಾಗಿ ಭಾವಪರವಶರಾಗಿ ಹಾಡಿದ ಹಾಡೇ ಅವರ ಕೃತಿ ' ಅಮಲನಾದಿ ಪಿರಾನ್', 'ಭಗವಂತನ ದರ್ಶನ' ಅವನ ಭಕ್ತರಿಗೆ ಸುಲಭಾತಿಸುಲಭ ಎಂಬುದಕ್ಕೆ ತಿರುಪ್ಪಾಣರು ಆದರ್ಶ. ಭಕ್ತರಿಗೆ ಜಾತಿ–ಕುಲ–ಸ್ಥಾನಗಳ ಅಡ್ಡಿಯಿಲ್ಲ ಎಂಬ ತತ್ವವೂ ಇದರಲ್ಲಡಗಿದೆ. ಇವರನ್ನು 'ತಿರುಪ್ಪಾಣಿ' ಎಂದೂ ಕರೆಯುತ್ತಾರೆ.

ತಿರುಮಂಗೈ ಆಳ್ವಾರ್

ಶ್ರೀವೈಷ್ಣವ ಆಳ್ವಾರರಲ್ಲಿ ಹತ್ತನೆಯವರು. ನೀಲ ಹೆಸರಿನ ಇವರು ಕಳ್ಳರ ಜಾತಿಗೆ ಸೇರಿದವರಾಗಿದ್ದು ಚೋಳರ ಸೈನ್ಯದಲ್ಲಿ ಸೈನ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಶ್ರೀವೈಷ್ಣವ ಕನ್ಯೆಯಾದ ಕುಮುದವಲ್ಲಿಯನ್ನು ಮೋಹಿಸಲಾಗಿ ಆಕೆಯನ್ನು ಪಡೆಯಲು

ಆಕೆಯ ಆಶಯದಂತೆ ವೈಷ್ಣವದೀಕ್ಷೆ ಕೈಗೊಂಡು ಪ್ರತಿನಿತ್ಯ ಭಾಗವತ ತದಿಯಾರಾಧನೆ (ವೈಷ್ಣವರಿಗೆ ಭೋಜನ) ನಡೆಸಬೇಕೆಂಬ ವ್ರತ ಕೈಗೊಂಡನು. ಪಾಳೆಯದ ಖಜಾನೆಯನ್ನೆಲ್ಲ ಬಳಸಿ ಬರಿಗೈಯಾಗಿ ಕೊನೆಗೆ ವ್ರತನಿಷ್ಠೆಗಾಗಿ ಕಳ್ಳತನಕ್ಕೂ ಇಳಿದು ದಾರಿಹೋಕರನ್ನು ಸುಲಿಯುತ್ತಿದ್ದನು. ಪರೀಕ್ಷಾರ್ಥವಾಗಿ ಲಕ್ಷ್ಮೀನಾರಾಯಣರೇ ನವದಂಪತಿಗಳಾಗಿ ಬಂದರೂ ತಿಳಿಯದೆ ಅವರನ್ನು ದೋಚಿ ವಡವೆವಸ್ತ್ರ ಗಂಟುಕಟ್ಟಿ ಎತ್ತಲಾಗದೆ, ಇವನಾರೋ ಮಾಯಾಕಾರನೆಂದು ಅವನನ್ನು ಕೊಲ್ಲಲೂ ಹವಣಿಸಲಾಗಿ ವಿಷ್ಣು 'ಅಷ್ಟಾಕ್ಷರಿ' ಮಂತ್ರೋಪದೇಶ ಮಾಡಿದಮೇಲೆ ಮೂಟೆ ಹಗುರವಾದದ್ದನ್ನು ಕಂಡು ತಿರುಮಂಗೈ ಲಕ್ಷ್ಮೀನಾರಾಯಣರೇ ಬಂದವರೆಂದು ತಿಳಿದು ಸಾಷ್ಟಾಂಗವೆರಗಿ ಶರಣಾಗತನಾಗಿ ಭಗವಂತನ ಸೇವೆಗೆ ಮುಡುಪಾದನು. ಭಗವಂತನನ್ನು ಸ್ತುತಿಸಿರುವ 'ಪೆರಿಯ ತಿರುಮೊಳಿ', 'ಶಿರಿಯ ತಿರುಮಡಲ್' ಮುಂತಾದ ಹಲವು ಭಕ್ತಿಗೀತೆಗಳ ಪ್ರಬಂಧಗಳನ್ನು ಇವರು ರಚಿಸಿದ್ದಾರೆ.

ತಿರುಮಣಿ

ಶ್ರೀವೈಷ್ಣವರು ಹಣೆಯ ಮೇಲೆ ಧರಿಸುವ ಚಿನ್ಹೆ, ನಾಮ, ಇದನ್ನು ಪುಂಡ್ರ ಊರ್ಧ್ವ ಪುಂಡ್ರ, ತಿರುನಾಮ, ಪಂಗನಾಮ, ಮೂರುನಾಮ ಎಂದೂ ಕರೆಯುತ್ತಾರೆ. ಎರಡು ಬಿಳಿಯ ನಾಮಗಳ ನಡುವೆ ಒಂದು ಕೆಂಪುನಾಮ, ಇವುಗಳನ್ನು ಸೇರಿಸುವ ಮೂಗಿನ ಭಾಗದಲ್ಲಿ 'ವೈ' ಆಕಾರದಲ್ಲಿದ್ದರೆ ತೇಂಗಲೆ ಸಂಪ್ರದಾಯವೆಂದೂ 'ಯು' ಆಕಾರದಲ್ಲಿದ್ದರೆ ವಡಗಲೆ ಸಂಪ್ರದಾಯವೆಂದೂ ಗ್ರಹಿಸಲಾಗುತ್ತದೆ. ಬಿಳಿಯನಾಮಗಳನ್ನು ಶ್ರೀಮನ್ನಾರಾಯಣನ ಪಾದಗಳೆಂದೂ, ಕೆಂಪುನಾಮವನ್ನು ಶ್ರೀ ಮಹಾಲಕ್ಷ್ಮಿ ಎಂದೂ ಭಾವಿಸಲಾಗುತ್ತದೆ. ದಾರ್ಶನಿಕವಾಗಿ ಬಿಳಿನಾಮಗಳು ಕುಂಡಲಿನಿ ಶಕ್ತಿಯು ಹರಿಯುವ ಇಡಾ, ಪಿಂಗಳಾ ನಾಡಿಗಳನ್ನೂ, ಕೆಂಪುನಾಮ ಸುಷುಮ್ನ ನಾಡಿಯನ್ನೂ ಸೂಚಿಸುತ್ತದೆನ್ನಲಾಗಿದೆ. ಈ ನಾಮವನ್ನು ಯತಿಗಳು, ಗುರುಗಳು, ಧರ್ಮನಿಷ್ಠರು ಮತ್ತು ಇತರರೂ ವಿಶೇಷ ಸಂದರ್ಭಗಳಲ್ಲಿ ದೇಹದ ೧೨ ಭಾಗಗಳಲ್ಲಿ ಧರಿಸುವುದರಿಂದ 'ದ್ವಾದಶನಾಮ' ಎಂದೂ ಕರೆಯುತ್ತಾರೆ.

ಈ ನಾಮಕ್ಕೆ ಬಳಸುವ ಬಿಳಿ ಬಣ್ಣವನ್ನೇ ಪ್ರತ್ಯೇಕವಾಗಿ 'ತಿರುಮಣಿ' ತಿರುಮಣ್ಣು, ಬಿಳಿನಾಮ ಎಂದೂ ಕರೆಯುವ ವಾಡಿಕೆಯಿದೆ.

ತಿರುವಲ್ಲಿಕ್ಕೇಣಿ

ಮದರಾಸಿನ (ಚೆನ್ನೈ) ಮಧ್ಯಭಾಗದ ಹೆಸರು, 'ಟ್ರಿಪ್ಲಿಕೇನ್' ಎಂದೂ ಹೆಸರಿದೆ. ಹಿಂದಿನ ಬೃಹದಾರಣ್ಯ ಕ್ಷೇತ್ರವೆಂದು ಪ್ರತೀತಿ. ಐದು ದೇವಾಲಯಗಳಿದ್ದು ಪಾರ್ಥಸಾರಥಿ (ಉತ್ಸವರ್)

ದೇವಸ್ಥಾನ ಪ್ರಸಿದ್ಧಿಯಾಗಿದೆ. ಇದರೊಂದಿಗೆ ರಂಗನಾಥ (ಮನ್ನಾರ್) ನರಸಿಂಹ (ಅಳಹಿಯಸಿಂಗರ್) ಶ್ರೀರಾಮ (ಚಕ್ರವರ್ತಿತಿರುಮಗನ್) ಮತ್ತು ಗರುಡಾರೂಢ ವಿಷ್ಣು (ದೇವಪೆರುಮಾಳ್) ದೇವಾಲಯಗಳೂ ಇವೆ. ಪಾರ್ಥಸಾರಥಿ ದೇವರಿಗೆ ಇದು ಪ್ರಸಿದ್ಧವಾಗಿದೆ.

ತುಳಸಿ

ಸಮುದ್ರಮಂಥನ ಕಾಲದಲ್ಲಿ ಹುಟ್ಟಿದ ಅಮೃತಕಲಶದಿಂದ ಆನಂದಭರಿತನಾದ ವಿಷ್ಣುವಿನ ಕಣ್ಣಿಂದ ಬಿದ್ದ ಆನಂದಬಾಷ್ಪದಿಂದ ಹುಟ್ಟಿದ ಗಿಡ. ಲಕ್ಷ್ಮಿಯೊಂದಿಗೆ ವಿಷ್ಣುವು ಈ ಗಿಡವನ್ನು ವಿವಾಹವಾಗುವನು ಎಂಬ ಉಲ್ಲೇಖದ ಜೊತೆಗೆ ಇನ್ನೊಂದು ಉಲ್ಲೇಖವೂ ಕಂಡುಬರುತ್ತದೆ.

ಶ್ರೀ ಲಕ್ಷ್ಮಿಯ ಅಂಶದಿಂದ ಹುಟ್ಟಿದ ಧರ್ಮಧ್ವಜ–ಮಾಧವಿಯರ ಪುತ್ರಿ. ಬಾಲ್ಯದಲ್ಲಿ ಬ್ರಹ್ಮನಿಂದ ವಿಷ್ಣುಪತ್ನಿಯಾಗುವ ವರ ಪಡೆದಳಾದರೂ ತಾನು ಗಿಡವಾಗುವ ಸೂಚನೆಯನ್ನೂ ಪಡೆದಿದ್ದಳು. ನಾರದರ ಸೂಚನೆಯಂತೆ ಶಂಖಚೂಡನೆಂಬ ಪ್ರಬಲದೇವತೆಗಳ ವಿರೋಧಿನಾಯಕನ ಹೆಂಡತಿಯಾದಳು. ದೇವತೆಗಳ ಹೋರಾಟದಲ್ಲಿ ಸತ್ತ ಶಂಖಚೂಡನ ವೇಷದಿಂದ ವಿಷ್ಣು ಇವಳ ಬಳಿ ಬಂದಾಗ ಈತನ ನಿಜರೂಪ ತಿಳಿದು ಗಿಡವಾಗಿ ಅವನನ್ನು ಸೇರಿದಳು. ಈ ತುಳಸಿಯ ಪೂಜೆಯೇ ಬೃಂದಾವನ ಪೂಜೆಯೆನಿಸಿದೆ. ತುಳಸೀದಳ ವಿಷ್ಣುವಿಗೆ ಅತ್ಯಂತ ಪ್ರಿಯ.

ತ್ರಿಪುರಾಸುರ

ತಾರಕಾಸುರನ ಮಕ್ಕಳಾದ ತಾರಕಾಕ್ಷ ಕಮಲಾಕ್ಷ ವಿದ್ಯುನ್ಮಾಲಿ ಎಂಬ ಮೂವರು ರಾಕ್ಷಸರಾಜರು ಬ್ರಹ್ಮನಿಂದ ಯಾರಿಂದಲೂ ಭೇದಿಸಲಾಗದ ಪಟ್ಟಣ ರಚಿಸುವ ಸಾಮರ್ಥ್ಯದ ವರ ಪಡೆದು, ಕ್ರಮವಾಗಿ ಸ್ವರ್ಗದಲ್ಲಿ ಸುವರ್ಣನಗರಿ, ಅಂತರಿಕ್ಷದಲ್ಲಿ ರಜತನಗರಿ, ಭೂಮಿಯಲ್ಲಿ ಕಬ್ಬಿಣ ನಗರಿಗಳನ್ನು ದೇವಶಿಲ್ಪಿಯಿಂದ ನಿರ್ಮಿಸಿಕೊಂಡಿದ್ದು ಮೂರು ಲೋಕಗಳಿಗೂ ಕಂಟಕರಾಗಿದ್ದರು.

ದೇವತೆಗಳ ಕೋರಿಕೆ ಮೇರೆಗೆ ಶಿವನು ಆ ಮೂರು ಲೋಕಗಳು ಒಟ್ಟಿಗೆ ಕೂಡುವ ಸಮಯದಲ್ಲಿ (ಇದು ಅಂತರಿಕ್ಷದಲ್ಲಿ ಒಂದೇ ಕಕ್ಷೆಯಲ್ಲಿ ಗ್ರಹಗಳು ಕೂಡುವ ಖಗೋಳ ವಿಜ್ಞಾನದ ಸೂಚನೆಯಂತಿದೆ) ಭೂಮಿಯೇ ರಥವಾಗಿ, ವೇದಗಳೇ ಕುದುರೆಯಾಗಿ, ಬ್ರಹ್ಮಸಾರಥಿಯಾಗಿ, ಸೂರ್ಯ ಚಂದ್ರರು ಚಕ್ರಗಳಾಗಿ, ಮೇರುಪರ್ವತವನ್ನೇ ಬಿಲ್ಲಾಗಿ ಮಾಡಿಕೊಂಡು ವಿಷ್ಣುವನ್ನು ಆಹ್ವಾನಿಸಿದಾಗ ಅವನು ಬಾಣವಾಗಿ ಬಂದು ತ್ರಿಪುರರನ್ನು ಸಂಹಾರ ಮಾಡುತ್ತಾನೆ. ತ್ರಿಪುರರ ಸಂಹಾರವಾಗಬೇಕಾದರೆ ಅವನ ಮಡದಿಯ ವ್ರತಭಂಗವಾಗುವ ಶರತ್ತಿದ್ದುದರಿಂದ ಶ್ರೀಹರಿ ಬೆತ್ತಲೆಯಾಗಿ ವ್ರತನಿಷ್ಠಳಾದ ತ್ರಿಪುರನ ಹೆಂಡತಿಯ

ಮುಂದೆ ಬಂದನೆಂದೂ ಅವಳು ವಿಚಲಿತಳಾಗಿ ವ್ರತಭಂಗವಾಯಿತೆಂದೂ ಅದರಿಂದ ತ್ರಿಪುರ ದಹನವಾಯಿತೆಂದೂ ಕಥೆ ಇದೆ.

ದಶಾವತಾರಗಳಲ್ಲಿ ಕೆಲವೆಡೆ ಬಲರಾಮನ ಬದಲು ತ್ರಿಪುರ ಸಂಹಾರಕನನ್ನಾಗಿ ಬೆತ್ತಲೆ ಮೂರ್ತಿಯಾದ ಹರಿಯನ್ನು ತರುತ್ತಾರೆ. ತ್ರಿಪುರರನ್ನು ಹರನೇ ಸಂಹಾರ ಮಾಡಿದ್ದರೂ ಅದು ವಿಷ್ಣುವಿನ ಕಾರಣದಿಂದ ಆದುದರಿಂದ ಹರಿಯೇ ಸಂಹಾರ ಮಾಡಿಸಿದನು ಎಂಬ ಹರಿಪಾರಮ್ಯ ಇಲ್ಲಿದೆ.

ತ್ರಿಶಿರ

ಖರನ ಸೇನಾಪತಿಯಾಗಿದ್ದು, ಖರದೂಷಣರೊಂದಿಗೆ ಶ್ರೀರಾಮನಿಂದ ಹತನಾದ ರಾಕ್ಷಸ. ಸಜ್ಜನರಿಗೆ ಉಪಟಳ ಕೊಡುತ್ತಿದ್ದ ಖರದೂಷಣ, ತ್ರಿಶಿರ ಮತ್ತು ಹದಿನಾಲ್ಕು ಸಾವಿರ ಸೈನಿಕರನ್ನು ಶ್ರೀರಾಮಲಕ್ಷ್ಮಣರು ವನವಾಸ ಕಾಲದಲ್ಲಿ ಈ ಗುಂಪಿನ ಶೂರ್ಪಣಕಿಯ ಕಿವಿ–ಮೂಗು ಕೊಯ್ದ ನೆಪದಿಂದ ಸಂಹರಿಸಿದರು

ದೂರ್ವಾಸ

ಬಹಳ ಕೋಪಿಷ್ಠ ಮುನಿ ಎಂಬ ಹೆಸರಿಗೆ ಪಾತ್ರನಾಗಿರುವ ಈ ದೂರ್ವಾಸಮುನಿಯ ಹಲವು ಸಂದರ್ಭಗಳನ್ನು ಉಲ್ಲೇಖಿಸಲಾಗಿದೆ. ಅವುಗಳಲ್ಲಿ ವಿಶೇಷವಾದದ್ದು ಭಾಗವತ ಭಕ್ತ ಅಂಬರೀಷನ ನಾಶಕ್ಕಾಗಿ ಕೃತ್ಯೆಯೊಂದನ್ನು ಬಿಟ್ಟು ಅವನು ಕೃಷ್ಣನ ಮೊರೆ ಹೊಕ್ಕಾಗ ಕೃಷ್ಣನ ಸುದರ್ಶನ ಚಕ್ರಕ್ಕೆ ಹೆದರಿ ಅಂಬರೀಷನನ್ನೇ ಮೊರೆಹೊಕ್ಕ ಅಪರೂಪದ ಸಂಗತಿಯ ಮತ್ತು ವಿಷ್ಣುವಿಗೆ ಬರೆದ ಪ್ರಸಂಗದ ಉಲ್ಲೇಖ ಇಲ್ಲಿದೆ.

ದ್ರೌಪದಿ

ದೌಪದಿಯ ಅಕ್ಷಯವಸ್ತ್ರ ಮತ್ತು ಅಕ್ಷಯಾನ್ನಗಳ ಪ್ರಸಂಗಗಳನ್ನು ಇಲ್ಲಿ ವಿಶೇಷವಾಗಿ ಸ್ಮರಿಸಲಾಗಿದೆ. ಅಕ್ಷಯ ವಸ್ತ್ರವನ್ನು ಕೃಷ್ಣ ಆಪತ್ಕಾಲದಲ್ಲಿ ನೀಡಿ ಮಾನ ಕಾಪಾಡಲು, ದ್ರೌಪದಿಯ ಆರ್ತನಾದ, ಸ್ತುತಿ, ನಾಮಸ್ಮರಣೆಯಷ್ಟೇ ಅಲ್ಲದೆ ಉಪಕಾರ ಸ್ಮರಣೆಯೂ ಕಾರಣವಾಗಿದೆ ಎಂಬ ವಿಶೇಷ ಅಂಶವನ್ನು ದಾಸರು ಇಲ್ಲಿ ಉಲ್ಲೇಖಿಸುತ್ತಾರೆ.

ವಿವಾಹಪೂರ್ವದಲ್ಲಿ ಒಮ್ಮೆ ಕೃಷ್ಣ ಇವಳ ಮನೆಗೆ ಬಂದಿದ್ದಾಗ ಆಕಸ್ಮಿಕವಾಗಿ ಆದ ಕಾಲಿನ ಗಾಯಕ್ಕೆ ದ್ರೌಪದಿ ತಾನು ಉಡದಿದ್ದ ಹೊಸ ಪೀತಾಂಬರದ ಬಟ್ಟೆ ಕಟ್ಟಿದ್ದರಿಂದ ಪ್ರತಿ ಉಪಕಾರಕ್ಕಾಗಿ ಅವಳ ಆಪತ್ಕಾಲದಲ್ಲಿ ವಸ್ತ್ರದಾನ ಮಾಡಿದನೆಂದು ಉಲ್ಲೇಖಿಸುತ್ತಾರೆ. ಇದಕ್ಕೆ ಭಾಗವತದ ಒಂದು ಆವೃತ್ತಿಯಲ್ಲಿ (ಮುನ್ಷಿಯವರ ಕೃಷ್ಣಾವತಾರ) ಆಧಾರವಿದೆ.

ಅಕ್ಷಯಾನ್ನವೂ ಕೃಷ್ಣನ ಆಪತ್ಕಾಲದ ನೆರವೇ ಆಗಿದೆ. ಪಾಂಡವರ ಪರೀಕ್ಷೆಗಾಗಿ ವನವಾಸ ಕಾಲದಲ್ಲಿ ದುರ್ಯೋಧನನ ಕೋರಿಕೆ ಮೇರೆಗೆ ಬಂದಿದ್ದ ದೂರ್ವಾಸಾತಿಥ್ಯಕ್ಕಾಗಿ ದ್ರೌಪದಿ ಕೃಷ್ಣನ ಮೊರೆ ಹೋದಾಗ ಕೃಷ್ಣ ಕಾಣಿಸಿಕೊಂಡು ತೊಳೆದಿಟ್ಟಿದ್ದ ಪಾತ್ರೆಯಲ್ಲಿ ಅಂಟಿಕೊಂಡಿದ್ದ ಒಂದೇ ಅಗುಳನ್ನು ತಿಂದು ಅತಿಥಿಗಳೆಲ್ಲ ತಿಂದುತೇಗುವಂತಹ ಸಮೃದ್ಧಿ ಸೃಷ್ಟಿಸುತ್ತಾನೆ. ದ್ರೌಪದಿಯನ್ನು ಕೃಷ್ಣನ ಕೃಪೆಗೆ ಪಾತ್ರಳಾದ ಪರಮ ಭಕ್ತೆಯನಾಗಿ ಶ್ರೀ ವೈಷ್ಣವ ಸಂಪ್ರದಾಯ ಕಲ್ಪಿಸಿದೆ.

ಧೇನುಕಾಸುರ

ಕಂಸನ ಪಾಳೆಯದಲ್ಲಿದ್ದ ಒಬ್ಬ ರಾಕ್ಷಸ. ಶ್ರೀಕೃಷ್ಣನನ್ನು ಸಂಹರಿಸಲು ಕಂಸ ಕಳಿಸಿದ ಈ ರಾಕ್ಷಸ ಕತ್ತೆಯ ರೂಪತಾಳಿ ಶ್ರೀಕೃಷ್ಣ ಬಲರಾಮ ಗೋಪರು ತಾಳೆವನದಲ್ಲಿ ತಾಳೆಹಣ್ಣುಗಳನ್ನುದುರಿಸಿ ತಿನ್ನುತ್ತಿರುವಾಗ ಮೇಲೆ ಬಂದು ಬೀಳುತ್ತಾನೆ. ಬಲರಾಮ ಇವನ ಹಿಂಗಾಲುಗಳನ್ನು ಹಿಡಿದು ಗರಗರ ತಿರುಗಿಸಿ ತಾಳೆಮರಕ್ಕೆ ಹೊಡೆದು ಕೊಲ್ಲುತ್ತಾನೆಂದು ಭಾಗವತ ಉಲ್ಲೇಖವಿದೆ. ಆದರೂ ಕೃಷ್ಣನನ್ನೇ ಧೇನುಕಾಸುರಮಥನ ಎಂದು ಹೇಳಲಾಗಿದೆ ದಾಸರ ಕೃತಿಗಳೂ ಇವೆ.

ನಮ್ಮಾಳ್ವಾರ್

ಇವರು ಅಂತ್ಯಜ ಕುಲದ ವೆಳ್ಳಾಳಜಾತಿಗೆ ಸೇರಿದ್ದು ಹನ್ನೊಂದನೇ ಆಳ್ವಾರರಾಗಿ ಕಾಣಿಸುತ್ತಾರೆ. ತಾಮ್ರಪರ್ಣಿನದಿ ತೀರದ ಕುರುಂಗೂರಿನಲ್ಲಿ ಹುಟ್ಟಿದ ಇವರು ಹುಟ್ಟಿದಾರಭ್ಯ ಕಣ್ಣುಬಿಡದ, ಮಾತನಾಡದ, ಮಿಸುಕಾಡದ ಈ ಮಗುವನ್ನು ಹೆತ್ತವರು ನಿರಾಕರಿಸಿ ಊರ ಹೊರಗೆ ಇದ್ದ-ಹುಣಸೆಮರದ ಪೊಟರೆಯಲ್ಲಿಡುತ್ತಾರೆ. ಅಲ್ಲಿ ಅದೇ ಸ್ಥಿತಿಯಲ್ಲಿ ನೀರು ಆಹಾರಗಳಿಲ್ಲದೆ ಹದಿನಾರು-ವರ್ಷದವರೆಗೂ ಯೋಗನಿದ್ರೆಯಲ್ಲಿದ್ದರೆಂದು ಐತಿಹ್ಯವಿದೆ.

ಹನ್ನೆರಡನೇ ಆಳ್ವಾರರಾದ ದ್ವಿಜೋತ್ತಮ ಮಧುರಕವಿಯಾಳ್ವಾರರು ಯಾತ್ರೆಯಲ್ಲಿರುವಾಗ ಕಾಣಿಸಿದ ದಿವ್ಯಜ್ಯೋತಿಯನ್ನು ಅರಸುತ್ತಾ ಬಂದಾಗ ಅದು ನಮ್ಮಾಳ್ವಾರರ ಬಳಿ ಕರೆತಂದಿತು. ಅವರ ದಿವ್ಯಯೋಗವನ್ನು ಕಂಡು ಎಚ್ಚರಿಸಿದನಂತರ ಅವರ ಅಗಾಧ ತತ್ವಜ್ಞಾನಕ್ಕೆ ಮಾರು ಹೋಗಿ ತಮ್ಮ ಆಚಾರ್ಯರನ್ನಾಗಿ ಸ್ವೀಕರಿಸಿದರು. ನಂತರ ನಮ್ಮಾಳ್ವಾರರು ಜೀವನ ಪೂರ್ತಿ ಭಗವಂತನ ಸ್ತುತಿಯಲ್ಲೇ ಕಾಲಕಳೆದರು. ಸತಿ-ಪತಿ ಭಾವದಲ್ಲಿ ಭಗವಂತನನ್ನು ಕಂಡು ಧನ್ಯರಾದ, ತಾವು ಕಂಡ ದರ್ಶನವನ್ನು ಕೃತಿಗಳ ಮೂಲಕ ಹಾಡಿದ ನಮ್ಮಾಳ್ವಾರರು 'ತಿರುವಾಯ್‌ಮೊಳಿ' 'ತಿರುವಿರುತ್ತಮ್' ಮೊದಲಾದ ನಾಲ್ಕು ಕೃತಿಗಳನ್ನು ರಚಿಸಿದ್ದಾರೆ. ಅತ್ಮನಿವೇದನೆ, ಕ್ಷೇತ್ರವರ್ಣನೆ, ಪ್ರಕೃತಿಸೌಂದರ್ಯ, ಇಷ್ಟದೇವತಾಸ್ತುತಿಗಳು ಈ ಕೃತಿಗಳಲ್ಲಿ ಭಾವಗೀತಾತ್ಮಕವಾಗಿ ಹೊರಹೊಮ್ಮಿವೆ. ಮಧುರಕವಿಯಾಳ್ವಾರರು ಈ ಗುರುದರ್ಶನದ ಪ್ರಚಾರ ಕೈಂಕರ್ಯವನ್ನು ನಿಷ್ಠೆಯಿಂದ ಮಾಡಿದ್ದಾರೆ.

ಆಳ್ವಾರರಲ್ಲೆಲ್ಲಾ ನಮ್ಮಾಳ್ವಾರರನ್ನು ಪ್ರಧಾನ ಆಳ್ವಾರರನ್ನಾಗಿ ಸ್ತುತಿಸಲಾಗಿದೆ. ಶ್ರೀವೈಷ್ಣವ ಸಂಪ್ರದಾಯ ನಮ್ಮಾಳ್ವಾರರ ಸ್ಮರಣೆಯಿಂದ ತುಂಬಿಹೋಗಿದೆ. ದೇವಾಲಯಗಳಲ್ಲಿ, ಭಕ್ತರ ತಲೆಯ ಮೇಲಿಡುವ ಭಗವಂತನ ಪಾದ, ಮುದ್ರಿಕೆ ಎನಿಸಿರುವ 'ಶಠಗೋಪ' ನಮ್ಮಾಳ್ವಾರರ ಸಂಕೇತ. ಇವರಿಗೆ 'ಶಠಗೋಪ' ಎಂಬ ಹೆಸರೂ ಇದೆ.

ನರಕಾಸುರ

ಭೂದೇವಿಯ ಪುತ್ರನಾದ ಅಸುರ. ವರಾಹಾವತಾರ ಕಾಲದಲ್ಲಿ ವಿಷ್ಣುವಿನ ಶರೀರದಿಂದ ಬಿದ್ದ ಬೆವರಿನಿಂದ ಭೂಮಿ ಪುತ್ರನಾಗಿ ಜನಿಸಿ ಭೌಮ್ಯಾಸುರನೆಂದೂ ಹೆಸರಿದೆ. ಭೂದೇವಿಯ ಕೋರಿಕೆಯಂತೆ ತನ್ನ ದಾಡೆಯನ್ನೇ ಮುರಿದು ಪ್ರಬಲ ವೈಷ್ಣವಾಸ್ತ್ರವಾಗಿ ಮಾಡಿ ಮಗನಿಗೆ ಕೊಟ್ಟಿರುತ್ತಾನೆ. ದೇವತೆಗಳನ್ನು ಕಾಡುತ್ತಿರುತ್ತಾನೆ.

ಕೃಷ್ಣಾವತಾರದವರೆಗೂ ಇವನ ಉಪಟಳ ಇರುತ್ತದೆ. ಬೇಸತ್ತ ದೇವತೆಗಳು ಕೃಷ್ಣನಿಗೆ ಮೊರೆ ಹೋದಾಗ ಅವನು ಭೂದೇವಿ ಅಂಶಳಾದ ಸತ್ಯಭಾಮೆಯೊಡನೆ ನರಕಾಸುರನಗರ ಪ್ರಾಗ್ಜ್ಯೋತಿಷಪುರಕ್ಕೆ ಬಂದು; ಗಿರಿ, ಜಲ, ಅಗ್ನಿ, ಶಸ್ತ್ರ, ವಾಯು ಮಾರ್ಗಗಳನ್ನು ಭೇದಿಸಿ ಮುರನಿರ್ಮಿತ ಸಹಸ್ರಬಾಹು (ಪಾಶ)ಗಳನ್ನು ಭೇದಿಸಿ ಮುರನನ್ನು ಸಂಹರಿಸಿ, ನರಕಾಸುರನನ್ನು ಚಕ್ರಾಯುಧದಿಂದ ಕತ್ತರಿಸಿ, ಅವನ ಸೈನ್ಯ ಸಮಸ್ತವನ್ನೂ ನಾಶಮಾಡಿ ಅವನು ದೇವತೆಗಳಿಂದ ವಶಪಡಿಸಿಕೊಂಡಿದ್ದ ಅಮೂಲ್ಯ ವಸ್ತುಗಳನ್ನೆಲ್ಲ ಅವರವರಿಗೆ ಹಿಂತಿರುಗಿಸುತ್ತಾನೆ. (ಆಗಲೇ ಅದಿತಿಯಿಂದ ಸತ್ಯಭಾಮೆ ಚಿರಯೌವನದ ವರ ಪಡೆಯುವುದು) ನರಕಾಸುರನ ಮಗ ಭಗದತ್ತನಿಗೆ ರಾಜ್ಯ ಒಪ್ಪಿಸಿ ಆಶೀರ್ವದಿಸುತ್ತಾನೆ. (ಇವನೇ ಮುಂದೆ ಯುದ್ಧದಲ್ಲಿ ಅರ್ಜುನನ ಮೇಲೆ ತಂದೆಯಿಂದ ಬಂದಿದ್ದ ಅಸ್ತ್ರ ಪ್ರಯೋಗಿಸಿದಾಗ ಕೃಷ್ಣನೇ ಉಪಶಮನ ಮಾಡುತ್ತಾನೆ.) ನರಕಾಸುರನ ಸೆರೆಯಲ್ಲಿದ್ದ ಅರವತ್ತು ಸಾವಿರ ರಾಜಕನ್ಯೆಯರನ್ನು ಬಿಡಿಸುತ್ತಾನಲ್ಲದೆ ಅವರನ್ನೆಲ್ಲ ದ್ವಾರಕೆಗೆ ಕರೆತರುತ್ತಾನೆ. ನರಕನ ಅಂತಃಪುರದಲ್ಲಿದ್ದ ಹದಿನಾರುಸಾವಿರದ ನೂರು ರಾಣಿಯರನ್ನು ವಿವಾಹವಾಗಿ ತನ್ನ ರಾಣಿಯರನ್ನಾಗಿ ಮಾಡಿಕೊಳ್ಳುತ್ತಾನೆ.

ನರನಾರಾಯಣ

ಶ್ರೀ ಹರಿಯ ಅವತಾರಗಳಲ್ಲಿ ಒಂದು, ಸಹೋದರ ರೂಪ, ಹಿರಣ್ಯಕಶಿಪುವಿನ ವಧೆಯ ನಂತರ ನರಸಿಂಹನ ನರಾಕಾರ ನರಮುನಿಯಾಗಿಯೂ ಸಿಂಹಾಕಾರ ನಾರಾಯಣ ಮುನಿಯಾಗಿಯೂ ಅವತರಿಸುತ್ತಾರೆ. ಧರ್ಮ ಮತ್ತು ಮೂರ್ತಿ ದಂಪತಿಮುನಿಗಳಿಗೆ ಅವರ ಇಚ್ಛೆಯಂತೆ ನಾರಾಯಣನೇ ಅವಳಿ ಮಕ್ಕಳಾಗಿ ಹುಟ್ಟಿದ ರೂಪವೆಂದೂ ಭಿನ್ನ ಕಥೆಗಳಿವೆಯಾದರೂ ನಿರೂಪಣೆಯಲ್ಲಿ ಹೋಲಿಕೆಯಿದೆ.

ಸಾವಿರವರ್ಷ ತಪಸ್ಸು ಮಾಡಿದವರಿಂದ ಮಾತ್ರ ಮರಣವಾಗಲೆಂಬ ವರ ಪಡೆದಿದ್ದ ಸಹಸ್ರಕವಚನೆಂಬ ರಾಕ್ಷಸನ ಸಂಹಾರಕ್ಕಾಗಿ ಈ ಅವತಾರ ಮಾಡಿ ಬದರಿಕಾಶ್ರಮದಲ್ಲಿ ಸಾವಿರ ವರ್ಷದ ತಪಸ್ಸಿಗೆ ಕುಳಿತಿರುತ್ತಾರೆ. ಇವರ ಘೋರ ತಪಸ್ಸಿಗೆ ಹೆದರಿದ ಇಂದ್ರಾದಿಗಳು ತಪೋಭಂಗ ಮಾಡಲು ಅಪ್ಸರೆಯರನ್ನು ಕಳಿಸುತ್ತಾರೆ. ಇವರೇ ಸೃಷ್ಟಿಸಿದ-ಊರ್ವಶಿ ತ್ರಿಲೋಕಸುಂದರಿಯರನ್ನು ಕಂಡು ಬೆರಗಾಗಿ ಅಪ್ಸರೆಯರೆಲ್ಲ ಹಿಂತಿರುಗುತ್ತಾರೆಂದೂ ಪ್ರಹ್ಲಾದನು ಇವರನ್ನು ಕೆಣಕಿ ಪರಾಜಿತನಾಗಿ ಶ್ರೀಹರಿಯಿಂದಲೇ ಅವರ ಅವತಾರಾಂಶ ತಿಳಿಯಿತೆಂದೂ ಉಲ್ಲೇಖವಿದೆ.

ತಪಸ್ಸು ಮಾಡುತ್ತಲೇ ಇವರು ಸರದಿಯ ಮೇಲೆ ಒಬ್ಬರಿಗೆ ಆಯಾಸವಾದರೆ ಇನ್ನೊಬ್ಬರಂತೆ ಸಹಸ್ರಕವಚನೊಂದಿಗೆ ಯುದ್ಧಮಾಡುತ್ತ ಅವನ ೯೯೯ ಕವಚಗಳನ್ನು ಸಂಹರಿಸುತ್ತಾರೆ. ಹೆದರಿದ ಸಹಸ್ರಕವಚ ಸೂರ್ಯನ ಮೊರೆಹೊಕ್ಕು ಪಾರಾಗುತ್ತಾನೆ. ಮುಂದೆ ಈ ನರನಾರಾಯಣರೇ ಅರ್ಜುನ ಕೃಷ್ಣರಾಗಿ ಹುಟ್ಟಿ ಕರ್ಣನಾಗಿ ಹುಟ್ಟಿದ ಸಹಸ್ರಕವಚನಿಂದ ಉಳಿದಿದ್ದ ಕೊನೆಯ ಕವಚವನ್ನು ಕೃಷ್ಣ ಯುದ್ಧಭೂಮಿಯಲ್ಲಿ ದಾನವಾಗಿ ಪಡೆಯುವ ಮೂಲಕ ಪೂರ್ಣಮಾಡುತ್ತಾರೆ.

ಪುರುಹೂತ

ಇಂದ್ರನ ಹೆಸರು. ಅಂತರಿಕ್ಷಲೋಕದ ಕೋಟಿ ದೇವತೆಗಳ ಪ್ರಧಾನ ದೇವತೆ. ಕಶ್ಯಪ-ಅದಿತಿಯರ ಮಗ. ಇಂದ್ರರು ಹದಿನಾಲ್ಕು ಮಂದಿಯೆಂದೂ (ಯಜ್ಞ, ರೋಚನ, ಸತ್ಯಜಿತ್, ತ್ರಿಶಿಖ, ವಿಭು, ಮಂತ್ರದ್ರುಮ, ಪುರಂದರ, ಬಲಿ, ಅದ್ಭುತ, ಶಂಭು, ವೈವೃತಿ, ಋತಧಾಮ, ದಿವ್ಯಸ್ತುತಿ, ಶುಭ) ಚತುರ್ಮುಖನ ಒಂದು ಹಗಲಲ್ಲಿ ಇವರು ಆಳುವರೆಂದೂ ಈಗ ಆಳುತ್ತಿರುವವನು ಏಳನೆಯವನೆಂದೂ ಇವನಿಗೆ ಪುರಂದರ, ಪುರದರ, ಪುರುಹೂತ ಎಂದೆಲ್ಲ ಹೆಸರುಗಳಿವೆಯೆಂದೂ ಭಾಗವತ ಪುರಾಣದಲ್ಲಿದೆ.

ಇವನು ಶ್ರೀಕೃಷ್ಣನ ಸಾಮರ್ಥ್ಯವರಿಯದೆ ಮಳೆಗರೆಸಿದಾಗ ಕೃಷ್ಣ ಮಂದರ ಪರ್ವತವನ್ನೇ ಕಿರುಬೆರಳಲ್ಲಿ ಎತ್ತಿ ಅದರಡಿಯಲ್ಲಿ ಗೋಕುಲವನ್ನು ರಕ್ಷಿಸಿ ಮಂದರೋದ್ಧಾರ ಎನಿಸುತ್ತಾನೆ.

ಪೂದತ್ತಾಳ್ವಾರ್

ಹನ್ನೆರಡು ಜನ ಆಳ್ವಾರರಲ್ಲಿ ಮೊದಲ ಮೂವರು ಆಳ್ವಾರರ ಜೀವನ ವಿವರಗಳು ಲಭ್ಯವಿಲ್ಲ. ಇವರನ್ನು ಪುಷ್ಪಜಾತರೆಂದು ಕಲ್ಪಿಸಲಾಗಿದೆ. ಇವರಲ್ಲಿ ಒಬ್ಬರಾಗಿರುವ ಪೂದತ್ತಾಳ್ವಾರರು ಮಾಧವಿ ಕುಸುಮೋದ್ಭವರೆಂದು ಪ್ರತೀತಿ. ಹುಟ್ಟುತ್ತಲೇ ಜ್ಞಾನ-ಭಕ್ತಿ-ವೈರಾಗ್ಯ ಸಂಪನ್ನರಾಗಿ ಈ ಮೂವರು ಒಂದೊಂದು ಗ್ರಾಮದಲ್ಲಿ ಒಂದೊಂದೇ ರಾತ್ರಿ ಇರುತ್ತಿದ್ದರೆಂದೂ ಒಂದು ದಿನ ರಾತ್ರಿ ತಿರುಕ್ಕೋವಿಲೂರಿನಲ್ಲಿದ್ದಾಗ ಭಾರಿಮಳೆಯುಂಟಾಗಿ

ಆಶ್ರಯಕ್ಕಾಗಿ ಒಂದೇ ಜಗುಲಿಯಲ್ಲಿ ಈ ಮೂವರೂ ಬಂದು ಸೇರಿದರೆಂದೂ ನಿಲ್ಲುವಷ್ಟೇ ಜಾಗದಲ್ಲಿ ಒತ್ತಟ್ಟಿಗೆ ನಿಂತಿದ್ದಾಗ ಇವರಿಗರಿವಿಲ್ಲದಂತೆ ಭಗವಂತ ಇವರ ಮಧ್ಯೆ ಬಂದು ಸೇರಿ ಇನ್ನಷ್ಟು ಒತ್ತುತ್ತಿರುವಾಗ ಯೋಗದೃಷ್ಟಿಯ ಈ ಭಕ್ತರು ಭಗವಂತನನ್ನು ಕಂಡು ಆನಂದ ತುಂದಿಲರಾಗಿ ಮೈಮರೆತು 'ತಿರುವಂದಾದಿ' ಎಂಬ ಮೂರುನೂರು ಪಾಶುರ ಪದ್ಯಗಳ ಕೃತಿಯನ್ನು ಹಾಡುತ್ತಾರೆಂದು ಇವರ ಬಗ್ಗೆ ಕಥೆಯಿದೆ. ಈ ತಿರುವಂದಾದಿಯಲ್ಲಿ ಎರಡನೆಯ ನೂರುಪಾಶುರ ಪೂದತ್ತಾಳ್ವಾರರದೆಂದು ಗುರುಪರಂಪರೆ ಹೇಳುತ್ತದೆ.

ಪೆರಿಯಾಳ್ವಾರ್

ಶ್ರೀವೈಷ್ಣವ ಪುರಾತನ ಭಕ್ತರಾದ ೧೨ಜನ ಆಳ್ವಾರರ ಪರಂಪರೆಯಲ್ಲಿ ೬ನೆಯವರಾಗಿ ಕಾಣಿಸಿಕೊಳ್ಳುವ ಇವರು ಆಂಡಾಳ ತಂದೆಯೂ ಆಗಿದ್ದಾರೆ. ಶ್ರೀವಿಲ್ಲಿಪುತ್ತೂರಿನ ಭಾಗವತ ಬ್ರಾಹ್ಮಣರಾಗಿದ್ದ ಇವರು ಅಲ್ಲಿಯ ಆರಾಧ್ಯದೈವ ವಟಪತ್ರಶಾಯಿ (ಆಲದೆಲೆಯ ಮೇಲೆ ಮಲಗಿರುವ ಶಿಶುರೂಪಿ ಕೃಷ್ಣ) ಗೆ ಪ್ರತಿದಿನ ತಾವೆ ಪೋಷಿಸುತ್ತಿದ್ದ ಹೂತೋಟದಿಂದ ವಿವಿಧ ಹೂಗಳನ್ನು ಬಿಡಿಸಿ ತಂದು ಕಟ್ಟಿ ಹಾರವಾಗಿ ಅರ್ಪಿಸಿ ಆನಂದ ಪಡುತ್ತಿದ್ದ ಪರಮಭಕ್ತರು.

ಇವರ ಭಕ್ತಿಯನ್ನು 'ವಾತ್ಸಲ್ಯಭಕ್ತಿ ' ಎಂದು ಕರೆದಿದ್ದಾರೆ. ತಾಯಿಮಗುವಿನ ಸಂಬಂಧದ ಭಕ್ತಿ. ಭಗವಂತನನ್ನು ಮಗುವನ್ನಾಗಿ ಕಲ್ಪಿಸಿ ತಾವು ತಾಯಿಯಾಗಿ ಸದಾ ಆ ಮಗುವಿನ ರಕ್ಷಣೆಯನ್ನೇ ಬಯಸುತ್ತಿದ್ದರು. ಜಗತ್ತಿನ ಪಾಲನೆಯನ್ನೇ ಹೊತ್ತಿರುವ ಜಗದೀಶ್ವರನಿಗೆ ಯವಾಗ ಎಲ್ಲಿ ಯಾರಿಂದ ಏನು ಕೇಡು ಸಂಭವಿಸುವುದೋ ಎಂಬ ಆತಂಕದಲ್ಲೇ ಆ ಮಗುರೂಪಿಯನ್ನು ಆರೈಕೆ ಮಾಡುತ್ತಿದ್ದ ತಾಯಿ ಹೃದಯ ಅವರ ಕೃತಿಗಳಲ್ಲಿದೆ. ಅವರ 'ತಿರುಪ್ಪಲ್ಲಾಂಡು' ದೇವರಿಗೇ ಆಶೀರ್ವಾದ ಮಾಡುವ ಭಾವದ ಅಪೂರ್ವ ಸ್ತುತಿರೂಪ. ಆ ಅರ್ಹತೆಯೂ ಅವರಿಗಿತ್ತು. (ಮಗುವಿನ ರೂಪದ ದೇವರ ಅರಾಧನೆ ಮತ್ತು ಮಗಳನ್ನು ಆ ರಂಗನಾಥನಿಗೇ ಕೊಟ್ಟು ಮದುವೆ ಮಾಡಿದ ' ಮಾವ 'ನೂ ಆಗಿದ್ದುದು) ಈ 'ತಿರುಪ್ಪಲ್ಲಾಂಡು ' ಶ್ರೀವೈಷ್ಣವ ನಿತ್ಯಾನುಸಂಧಾನದಲ್ಲಿ ಅತಿಮುಖ್ಯ ಸ್ಥಾನ ಪಡೆದಿದೆ. ಪ್ರಬಂಧಗಳ ಪಠಣ ಇದರಿಂದಲೇ ಆರಂಭವಾಗಿ ಇದರಿಂದಲೇ ಮುಕ್ತಾಯವಾಗುತ್ತದೆ. ದೇವತಾರಾಧನೆಯ ಮಂಗಳಾರತಿಯಲ್ಲಿ (ಶ್ರೀವೈಷ್ಣವ ಸಂಪ್ರದಾಯದಲ್ಲಿ ಇದನ್ನು ಶಾತ್ತುಮೋರೆ ಎಂದು ಕರೆದಿದ್ದು ಇದಕ್ಕೆ 'ಮಂಗಳಾಶಾಸನ ' ಎಂದೂ ಹೆಸರಿದೆ. ಇದರಲ್ಲಿ ಆಳ್ವಾರರ ಪ್ರಬಂಧಗಳಿಂದಾಯ್ದ ನಿರ್ದಿಷ್ಟ ಪಾಶುರ ಶ್ಲೋಕಗಳ ಸಾಮೂಹಿಕ ಪಠನವಿರುತ್ತದೆ.) ಇದರ ಪಠನ ಕಡ್ಡಾಯವಾಗಿರುತ್ತದೆ.

ಭಗವಂತನು ಇವರಿಗೆ ಕನಸಿನ ರೂಪದಲ್ಲಿ ಶಿಶುರೂಪದಲ್ಲೇ ದರ್ಶನವಿತ್ತಿದ್ದನೆಂದೂ ಅದರ ಲಾಲನೆ–ಪಾಲನೆಯಲ್ಲಿ ಭಾವಪೂರ್ಣರಾಗಿ ಮೈಮರೆಯುತ್ತಿದ್ದರೆಂದೂ ಇವರ ಕಥೆಯಲ್ಲಿ ಬರುತ್ತದೆ. ಈ ಸಂಗತಿಯನ್ನು ಇಲ್ಲಿ ಪ್ರತಿಮೆಯಾಗಿ ಬಳಸಿದ್ದಾರೆ.

ಪ್ರಬಂಧ

ಆಳ್ವಾರರ ಕೃತಿಗಳನ್ನು ' ಪ್ರಬಂಧಗಳು ' ಎಂದು ಕರೆಯಲಾಗುತ್ತದೆ. ೧೨ ಜನ ಆಳ್ವಾರರ ನಾಲ್ಕು ಸಾವಿರ ಪದ್ಯಗಳನ್ನು ಈ ಪ್ರಬಂಧಕೃತಿಗಳಲ್ಲಿ ರಚಿಸಿದ್ದು ಶ್ರೀವೈಷ್ಣವ ಮತೀಯರು ಇವನ್ನು 'ನಾಲಾಯಿರ ದಿವ್ಯಪ್ರಬಂಧ ' ಗಳು ಎಂದು ಹೆಸರಿಸಿರುವ ಸಂಪ್ರದಾಯವಿದೆ. ಈ ಪದ್ಯಗಳನ್ನು 'ಪಾಶುರ' ಗಳು ಎಂದು ಕರೆಯಲಾಗುತ್ತದೆ. ತಮ್ಮ ನಿತ್ಯಾನುಸಂಧಾನದಲ್ಲಿ ಈ ಪಾಶುರಗಳನ್ನು ಪಠಿಸುವ, ದೈವಾರಾಧನೆಯಲ್ಲಿ ಅತಿಮುಖ್ಯವಾಗಿ ಬಳಸುವ ಕ್ರಮವಿದೆ. ವೇದಗಳಿಗೆ ಸಮಾನವಾಗಿ ಈ ಪ್ರಬಂಧಗಳನ್ನು ಗುರುತಿಸಲಾಗಿದೆ. ಶ್ರೀವೈಷ್ಣವ ಮತಸಿದ್ಧಾಂತಕ್ಕೆ ಇದನ್ನು ಒಂದು ಪ್ರಮಾಣವಾಗಿ ರಾಮಾನುಜಾಚಾರ್ಯರು ಸ್ವೀಕರಿಸಿದ್ದಾರೆ.

ಬಲರಾಮ

ಶ್ರೀಕೃಷ್ಣನ ಅಣ್ಣನಾಗಿ ಬಾಲಲೀಲೆಯಲ್ಲಿ ಮತ್ತು ಇತರೆಡೆಗಳಲ್ಲೂ ಅಲ್ಲಲ್ಲೇ ಇವನ ಉಲ್ಲೇಖ ಬರುತ್ತದಾದರೂ ಶ್ರೀವೈಷ್ಣವ ಧರ್ಮದಲ್ಲಿ ಬಲರಾಮನನ್ನು ಮುಖ್ಯವಾಗಿ 'ದಶಾವತಾರ ' ದ ಒಂದು ಅವತಾರವನ್ನಾಗಿ ಕಲ್ಪಿಸಿಲಾಗಿದೆ. ಸಾಮಾನ್ಯವಾಗಿ ಪ್ರಚಲಿತವಿರುವ 'ಬುದ್ಧಾವತಾರ' ' ಈ ಸಂಪ್ರದಾಯದ ದೇವತಾ ತಾರತಾಮ್ಯದಲ್ಲಿಲ್ಲ.

ಮಧು–ಕೈಟಭರು

ಅಣ್ಣತಮ್ಮಂದಿರು, ವಿಷ್ಣುವಿನ ಕಿವಿಯ ಗುಗ್ಗೆಯಿಂದ ಜನಿಸಿದ ರಾಕ್ಷಸರು. ಬ್ರಹ್ಮನನ್ನು ಪೀಡಿಸಲು, ಬ್ರಹ್ಮ ವಿಷ್ಣುವಿನ ಮೊರೆಹೋಗಲು, ವಿಷ್ಣು ಇವರೊಡನೆ ಹೋರಾಡುತ್ತಿರುವಾಗ ಈ ರಾಕ್ಷಸರು ವಿಷ್ಣುವಿನ ಪರಾಕ್ರಮಕ್ಕೆ ಮೆಚ್ಚಿ 'ವರ ' ಕೇಳಲು ವಿಷ್ಣು ನೀವು ನನ್ನಿಂದ ವಧ್ಯರಾಗಬೇಕೆಂದು ಕೇಳಲು ಅವರು 'ನೀರಿಲ್ಲದ ಭೂಮಿಯಲ್ಲಿ ಕೊಲ್ಲು 'ಎಂದು ವರ ನೀಡುತ್ತಾರೆ. ಆದರೆ ಎಲ್ಲೆಡೆಯೂ ನೀರಿರುವುದರಿಂದ ಸಾಧ್ಯವಾಗದೆ ವಿಷ್ಣು ಕೊನೆಗೆ ತನ್ನ ತೊಡೆಯಮೇಲೆ ಕೆಡೆದುಕೊಂಡು ಕೊಲ್ಲುತ್ತಾನೆಂದು ಭಾಗವತ ಉಲ್ಲೇಖವಿದೆ. ಈ ದುಷ್ಟಸಂಹಾರದ ಚಿತ್ರ ದಾಸರಲ್ಲಿ ಪದೇ ಪದೇ ಕಂಡುಬರುತ್ತದೆ.

ಮಾನಗಿರಿ–ಮಾಂಗಿರಿ

ದಾಸರ ಆರಾಧ್ಯದೈವವಿರುವ ಮಾವಿನ ಕೆರೆಯ ರಂಗನಾಥನ ಸನ್ನಿಧಿ. ಹಾಸನ ಜಿಲ್ಲೆಯ ಹೊಳೆನರಸಿಪುರ ತಾಲ್ಲೂಕಿನಲ್ಲಿ ಹೇಮಾವತಿ ನದಿ ತೀರದಲ್ಲಿ ಬೆಟ್ಟದ ಮೇಲೆ ಇದೆ. ಅನೇಕ ಭಕ್ತಾದಿಗಳನ್ನು ಹೊಂದಿರುವ, ಜನವರಿ ಸಮಯದಲ್ಲಿ ವಿಶೇಷಜಾತ್ರೆ ನಡೆಯುವ ಸ್ಥಳೀಯ ಪ್ರಸಿದ್ಧ ದೇವರ ಕ್ಷೇತ್ರವೆನಿಸಿದೆ.

ದಾಸರು ಪರಿಪರಿಯಾಗಿ ಮಾವಿನಕೆರೆರಂಗನಾಥನನ್ನು ಸ್ತುತಿಸಿದ್ದಾರೆ. ಜಾತ್ರೆಯನ್ನು, ಅದರ ವೈಭವವನ್ನು, ತೇರನ್ನು ಕುರಿತು ವರ್ಣಿಸಿದ್ದಾರೆ. ಈ ರಂಗನಾಥನನ್ನು ಅಲ್ಲಿಯ ಐತಿಹ್ಯದ ಹಿನ್ನೆಲೆಯಲ್ಲಿ ಶಿವ-ಕೇಶವನ ಐಕ್ಯತೆಯ ಸಂಕೇತವನ್ನಾಗಿ ಸಾರಿದ್ದಾರೆ. ಈ ಮೂಲದೇವರು ಒರಳು ಗುಂಡಿನರೂಪದಲ್ಲಿದೆ.

ಸ್ಥಳಪುರಾಣದ ಪ್ರಕಾರ ಮೊದಲು ಈ ರಂಗನಾಥನನ್ನು ಶಿವ ಎಂದೂ ಪೂಜಿಸಲಾಗುತ್ತಿತ್ತು. ಭಕ್ತಾದಿಗಳಲ್ಲಿ ರಂಗನಾಥನೇ ಶಿವನೇ ಎಂದು ಪಂಥವೇರ್ಪಟ್ಟು ದೇವರಿಗೇ ಅದರ ನಿರ್ಧಾರಕ್ಕೆ ಬಿಟ್ಟು ಒಂದು ದಿನ ಶಿವನಾದರೆ ನಂದಿ ರಂಗನಾಥನಾದರೆ ಹನುಮಂತ ಕಾಣಿಸಿಕೊಳ್ಳಲಿ ಎಂದು ಬಾಗಿಲು ಭದ್ರಪಡಿಸಿ ಊರಿಗೆ ಬಂದು ಮಾರನೆ ದಿನ ಹೋಗಿ ನೋಡಲಾಗಿ ಒಂದು ಬಂಡೆಯಲ್ಲಿ ಮಾರುತಿಯ ರೂಪ ಗೋಚರವಾಗಿ ಅಂದಿನಿಂದ ರಂಗನಾಥ ಕ್ಷೇತ್ರ ಎಂದೇ ಪ್ರಸಿದ್ಧವಾಗಿದೆ. ರಂಗನಾಥನ ಅಸ್ತಿತ್ವಕ್ಕೆ ಕಾರಣನಾದ ಹನುಮಂತನೂ ಅಲ್ಲಿ ಪೂಜೆಗೊಳ್ಳುತ್ತಿದ್ದಾನೆ. ದೇವರ ಪ್ರಸಿದ್ಧಿಗೆ ಪೂರಕವಾದ ದಂತಕತೆಯೂ ಪ್ರಚಲಿತದಲ್ಲಿದೆ. ಭಕ್ತಾದಿ ದಂಪತಿಗಳೊಬ್ಬರು ಮಕ್ಕಳಿಗಾಗಿ ಬೆಟ್ಟದ ದೇವರನ್ನು ಪ್ರಾರ್ಥಿಸಿ ಹರಸಿಕೊಂಡು ಹೋಗಲು ಮಗನುದಯಿಸಿದ ಮೇಲೆ ಹರಕೆಯನ್ನು ನಿರ್ಲಕ್ಷಿಸಿದ್ದರಿಂದ ತೊಂದರೆಯುಂಟಾಗಿ ಕ್ಷಮಾಪಣೆಗಾಗಿ ಬಂದ ವನಿತೆಯಿತ್ತ ಪೊಂಗಲನ್ನು ಸ್ವೀಕರಿಸಿ ಕಷ್ಟ ನಿವಾರಿಸಿದ ಪ್ರಸಂಗವನ್ನು ಸ್ಥಳೀಯರು ಹೇಳುತ್ತಾರೆ.

ದಾಸರು ತಮ್ಮ ಕೃತಿಗಳಲ್ಲಿ ಈ ಎಲ್ಲ ಐತಿಹ್ಯಗಳನ್ನೂ ದಾಖಲಿಸಿದ್ದಾರೆ.

ಮಾವಳಿಪುರ–ಮಹಾಬಲಿಪುರ

ಪಾಂಡವರ ದೇವಾಲಯಗಳೆಂದು ಹೇಳುವ ಗುಹಾಂತರ್ದೇವಾಲಯಗಳಿರುವ ಐತಿಹಾಸಿಕ ಸ್ಥಳ. ಶ್ರೀವೈಷ್ಣವರಿಗೆ 'ಆಳ್ವಾರಪಾಟ್ಟಿಲ್ ಕ್ಷೇತ್ರ' ಎಂದರೆ ಆಳ್ವಾರರು ಸ್ತುತಿಸಿರುವ ಪವಿತ್ರ ಸ್ಥಳ. ಪೂದತ್ತಾಳ್ವಾರರು ಅವತರಿಸಿದ ಪುಣ್ಯಭೂಮಿ.

ಮೂಲತತ್ವ

ಪ್ರಪಂಚದ ಮೂರುತತ್ವಗಳಾದ ಚಿತ್–ಅಚಿತ್–ಈಶ್ವರ ಅಥವಾ ಪುರುಷ–ಪ್ರಕೃತಿ–ಪರಮಾತ್ಮ ಅಥವಾ ಜೀವ–ಜಗತ್ತು–ಜಗನ್ನಿಯಾಮಕ ಅಥವಾ ಚೇತನ–ಅಚೇತನ–ಚಿರಚೇತನ ಈ ಮೂರನ್ನು ವಿವರಿಸಿ ಪರಸ್ಪರ ಸಂಬಂಧ ಅರ್ಥಗಳನ್ನು ತಿಳಿಸುವುದೇ ಎಲ್ಲ ದರ್ಶನಗಳ ಗುರಿ. ಇದರ ಜಿಜ್ಞಾಸೆಯೇ ಅನೇಕ ಸಿದ್ಧಾಂತಗಳ, ಮತಗಳ – ಪಂಥಗಳ ಹುಟ್ಟಿಗೆ ಕಾರಣವಾಗಿದೆ. ದ್ವೈತ – ಅದ್ವೈತ –ವಿಶಿಷ್ಟಾದ್ವೈತಗಳೂ ಇದರ ಫಲವೇ.

ವಿಶಿಷ್ಟಾದ್ವೈತ ಈ ಮೂಲ ತತ್ವವನ್ನು ಹೇಗೆ ಸಿದ್ಧಾಂತಮಾಡಿ ವಿವರಿಸುತ್ತದೆ ಎಂಬುದೇ ವಿಶಿಷ್ಟಾದ್ವೈತದ ಮೂಲತತ್ವವಾಗಿರುತ್ತದೆ. ಎಲ್ಲ ಪಂಥಗಳವರಿಗೂ ಇದರ ವಿಶ್ಲೇಷಣೆಗೆ ಬಳಸಿರುವ ಆಕರಗಳೆಂದರೆ ಉಪನಿಷತ್ತು, ಬ್ರಹ್ಮಸೂತ್ರ, ಮತ್ತು ಭಗವದ್ಗೀತೆ. ಈ ಮೂರನ್ನು ಈ ಕಾರಣದಿಂದ ಪ್ರಸ್ಥಾನತ್ರಯಗಳೆಂದು ಕರೆಯಲಾಗಿದೆ. ಆದರೆ ಶ್ರೀವೈಷ್ಣವ ಧರ್ಮಕ್ಕೆ ಆಳ್ವಾರರ ದಿವ್ಯಪ್ರಬಂಧಗಳೂ ಒಂದು ಸೇರಿ ಪ್ರಸ್ಥಾನಚತುಷ್ಟಯವೆನಿಸಿದೆ.

ಸಾಮಾನ್ಯವಾಗಿ ಎಲ್ಲ ಮತಗಳೂ ದುಃಖವನ್ನು ದೂರಮಾಡಿ ಸುಖಾಪೇಕ್ಷೆಯ ವಸ್ತುವಾದ 'ತತ್ವ', ಅದರಿಂದ ಪಡೆಯಬೇಕಾದ ಫಲವಾದ 'ಪುರುಷಾರ್ಥ' ಮತ್ತು ಅದಕ್ಕಾಗಿ ಅನುಸರಿಸಬೇಕಾದ ಮಾರ್ಗವಾದ 'ಹಿತ' ಈ ಮೂರು ಅಂಶಗಳನ್ನೇ ಸಿದ್ಧಾಂತವಾಗಿ ಚರ್ಚಿಸುತ್ತವೆ. ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಇವುಗಳನ್ನು ಪ್ರತ್ಯೇಕವಾಗಿ ಚರ್ಚಿಸದೆ ಒಂದೊಂದಕ್ಕೂ ಮಾರ್ಗೋಪಾಯ ಹುಡುಕದೆ ಇವುಗಳಿಗೆಲ್ಲ ಕಾರಣನಾದ, ಇವುಗಳನ್ನೆಲ್ಲ ತಾನೆ ಹೊಂದಿರುವ ಜಗನ್ನಿಯಾಮಕನಾದ ಶ್ರೀಮನ್ನಾರಾಯಣ ಒಬ್ಬನನ್ನೇ ಅವಲಂಬಿಸಿದರೆ, ಧ್ಯಾನಿಸಿದರೆ, ಶರಣಾದರೆ, ಇವೆಲ್ಲ ಸುಲಭವಾಗಿ ಪ್ರಾಪ್ತಿಯಾಗುತ್ತದೆಂಬ ಸರಳ ಉಪಾಯವನ್ನು ಈ ಮೂಲತತ್ವ ಹೊಂದಿದೆ. ಜೀವ-ಜಗತ್ತುಗಳು ಬೇರೆಬೇರೆಯಾದರೂ ಅವು ನಾರಾಯಣನ ದೇಹ ಮತ್ತು ಪ್ರಕಾರಗಳೇ ಆಗಿವೆ. ಇವುಗಳ ಚಟುವಟಿಕೆ ಅವನ ಒಂದು ಗುಣವಿಶೇಷವೇ ಆಗಿದೆ. ಪರಮಾತ್ಮ-ಜೀವ-ಜಗತ್ತುಗಳ ಸಂಬಂಧ ಒಂದನ್ನೊಂದು ಬಿಡದ ಅಪೃಥಕ್ ಸಂಬಂಧವಾಗಿದೆ. ತನ್ನ ದೇಹವೆನಿಸಿದ ಈ ಜಗತ್ತಿನ ಸಕಲ ಜೀವಿಗಳೂ 'ಏಕದೇಹಾವಯವನ್ಯಾಯ ' ದಂತೆ ಐಕಮತ್ಯದಿಂದ ಕೂಡಿರಬೇಕೆಂಬ 'ವಸುಧೈವ ಕುಟುಂಬಕಂ ' ಎಂಬ ಸಮಾನತಾತತ್ವ ಈ ಮೂಲತತ್ವದ ತಿರುಳೆನಿಸಿದೆ.

ಯದುಗಿರಿ

ಯಾದವಾದ್ರಿ, ತಿರುನಾರಾಯಣಪುರ ಎಂದೆಲ್ಲ ಕರೆಸಿಕೊಳ್ಳುವ ಶ್ರೀವೈಷ್ಣವ ತೀರ್ಥಕ್ಷೇತ್ರವಾದ ಮೇಲುಕೋಟೆ. ರಾಮಾನುಜರು ಕರ್ನಾಟಕದಲ್ಲಿ ಶ್ರೀವೈಷ್ಣವ ಧರ್ಮವನ್ನು ಪ್ರಸಾರ ಮಾಡಲು ಮಾಡಿಕೊಂಡಿದ್ದ ಕೇಂದ್ರಸ್ಥಾನ ಇದು. ರಾಮಾನುಜರ ಕಾರಣದಿಂದಲೇ ಭೂಗತವಾಗಿದ್ದ ಚೆಲುವನಾರಾಯಣ ಸ್ವಾಮಿಯ ದೇವಾಲಯ ಜೀರ್ಣೋದ್ಧಾರವಾಗಿ ಭವ್ಯವಾಗಿ ನಿರ್ಮಾಣವಾಯಿತು. ಬೆಟ್ಟದ ಮೇಲೆ ಯೋಗಾನರಸಿಂಹಸ್ವಾಮಿ ದೇವಾಲಯವೂ ಅಭಿವೃದ್ಧಿ ಹೊಂದಿತು. ಶ್ರೀವೈಷ್ಣವ ಪ್ರಮುಖ ನಾಲ್ಕು ದಿವ್ಯಕ್ಷೇತ್ರಗಳಲ್ಲಿ ಕರ್ನಾಟಕದಲ್ಲಿರುವ ಒಂದು ಕ್ಷೇತ್ರವಾಗಿದ್ದು ಪವಿತ್ರ ಸ್ಥಳವಾಗಿದೆ. ಇಲ್ಲಿ ನಡೆಯುವ ವೈರಮುಡಿ (ವಜ್ರಕಿರೀಟ) ಮಹೋತ್ಸವ ಅತ್ಯಂತ ಜನಪ್ರಿಯ. ರಾಮಾನುಜರಿಂದಲೇ ಈ ಕ್ಷೇತ್ರವಾಗಿರುವುದೆಂದು ಪ್ರತೀತಿ.

ರಹಸ್ಯತ್ರಯ

ಶ್ರೀವೈಷ್ಣವ ಧರ್ಮದ ಸಾರ, ತಿರುಳೇ, ಈ ರಹಸ್ಯತ್ರಯ. ಹೀಗೆಂದರೆ ಮೂರು ರಹಸ್ಯಮಂತ್ರಗಳು. ಇವುಗಳೆಂದರೆ

೧. ಮೂಲಮಂತ್ರ : 'ಓಂ ನಮೋ ನಾರಾಯಣಾಯ'

೨. ದ್ವಯಮಂತ್ರ : 'ಶ್ರೀಮನ್ನಾರಾಯಣ ಚರಣೌ ಶರಣಂ ಪ್ರಪದ್ಯೆ ಶ್ರೀಮತೇ ನಾರಾಯಣಾಯ'

೩. ಚರಮಶ್ಲೋಕ : ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ಅಹಂತ್ವಾಂ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚ ಃ

ಮೋಕ್ಷವನ್ನು ಬಯಸುವ ಮುಮುಕ್ಷುವಿಗೆ ಶ್ರೀವೈಷ್ಣವ ಮೂಲತತ್ವ-ಹಿತ-ಪುರುಷಾರ್ಥಗಳ ಸ್ವರೂಪವನ್ನು ಸಂಶಯ ವಿಪರ್ಯಾಸಗಳಿಗೆ ಆಸ್ಪದವಿಲ್ಲದಂತೆ ಯಥಾವತ್ತಾಗಿ ಮನದಟ್ಟು ಮಾಡಿಕೊಡುವ : ಸದಾಚಾರ್ಯಾಭಿದಾನ ಪೂರ್ವಕವಾದ ಉಪದೇಶ ಮಾತ್ರದಿಂದ ಪ್ರಾಪ್ತವಾಗುವ ವಿಶೇಷ ಜ್ಞಾನ ಎಂದು ಇದನ್ನು ಕರೆಯಲಾಗಿದೆ.

ಪ್ರತಿಯೊಬ್ಬ ಶ್ರೀವೈಷ್ಣವ ವಟುವಿಗೂ ಉಪನಯನ ಕಾಲದಲ್ಲಿ ಈ ರಹಸ್ಯತ್ರಯ ಮಂತ್ರಗಳನ್ನು ಕಿವಿಯಲ್ಲಿ ರಹಸ್ಯವಾಗಿ ಉಪದೇಶಿಸಲಾಗುತ್ತದೆ. ಆದ್ದರಿಂದಲೇ ಇದನ್ನು ರಹಸ್ಯತ್ರಯ ಎಂದು ಕರೆಯಲಾಗಿದೆ. ಇದನ್ನೇ ರಾಮಾನುಜರು ತಮಗೆ ತಮ್ಮ ಗುರುಗಳಿಂದಾದ ಉಪದೇಶ ಕಾಲದಲ್ಲಿ ಇದರ ಫಲ ಸರ್ವಜನರಿಗೂ ತಿಳಿಯಬೇಕೆಂಬ ಜನಾನುರಾಗದಿಂದ ಗಿರಿಯ ಮೇಲೆ ಏರಿ ಜನರೆನ್ನಲ್ಲ ಒಟ್ಟುಮಾಡಿ ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಉದ್ಘೋಷಿಸುತ್ತಾರೆಂದು ಅವರ ಜೀವನ ವೃತ್ತಾಂತದಲ್ಲಿ ಮುಖ್ಯ ಸಂಗತಿಯಾಗಿ ಬರುತ್ತದೆ. ಈ ಮೂರು ಮಂತ್ರಗಳ ವ್ಯಾಖ್ಯಾನ ಗ್ರಂಥವೇ ರಾಮಾನುಜರ 'ರಹಸ್ಯತ್ರಯಸಾರ' ಗ್ರಂಥ.

ರಾಮಾನುಜಾಚಾರ್ಯ

ಶ್ರೀವೈಷ್ಣವ ಮತಸ್ಥಾಪಕರೆನಿಸಿರುವ ಇವರನ್ನು 'ಯತಿರಾಜ' 'ಎಂಬೇರುಮಾನಾರ್' 'ಲಕ್ಷ್ಮಣಮುನಿ' 'ಉಡೈಯರ್' ಭಾಷ್ಯಕಾರ ಮುಂತಾದ ಹಲವು ಹೆಸರುಗಳಿಂದ ಕರೆಯಲಾಗಿದೆ. ಶ್ರೀವೈಷ್ಣವ ಸಿದ್ಧಾಂತವನ್ನು 'ರಾಮಾನುಜದರ್ಶನ' ಎಂದೇ ಹೆಸರಿಸುತ್ತಾರೆ.

ವಿಶಿಷ್ಟಾದ್ವೈತದ ವೈಶಿಷ್ಟ್ಯಗಳನ್ನು ಆಳ್ವಾರರ ಪ್ರಬಂಧ ಪ್ರಮಾಣವನ್ನು ಮುಖ್ಯವಾಗಿ ಪರಿಗಣಿಸಿ ನಾರಾಯಣನೇ ಪರತತ್ವ, ಅವನಲ್ಲಿ ಶರಣಾಗತವೇ ಹಿತ, ಅವರ ಕೈಂಕರ್ಯವೇ

ಪುರುಷಾರ್ಥ ಎಂಬ ರಾಗರಹಿತ ಫಲರಹಿತ ಕರ್ಮಾನುಷ್ಠಾನದ ಭಗವದ್ಗೀತೆಯ ಸಾರವನ್ನು ಜಗತ್ತಿಗೆ ಸಾರಿದ ಯತಿಗಳಾಗಿದ್ದಾರೆ. ಮಿಕ್ಕ ಮತಗಳಿಗಿಲ್ಲದ ದೇಶೀಮೂಲದ ಚಿಂತನೆಯಿಂದ ಪ್ರದೇಶ ಭಾಷೆಯೊಂದನ್ನು ವೇದ ಸಮಾನಗೊಳಿಸುವ ಮೂಲಕ ವಿಶಿಷ್ಟಾದ್ವೈತಕ್ಕೆ 'ಉಭಯವೇದಾಂತ ' ವೆಂಬ ಹೆಸರನ್ನು ತಂದುಕೊಟ್ಟು ತಾವು 'ಉಭಯವೇದಾಂತ ಸಿಂಹಾಸನಾಧಿಪತಿ ' ಎನಿಸಿದ ಆಚಾರ್ಯ ಪುರುಷರು.

೧೦೧೭–೧೧೩೭ರ ಅವಧಿಯಲ್ಲಿದ್ದ ರಾಮಾನುಜರು ಯಾದವ ಪ್ರಕಾಶಕರ ಶಿಷ್ಯರಾಗಿ ನಂತರ ನಾಥಮುನಿಗಳು ಯಾಮುನಾಚಾರ್ಯರ ಮೂಲಕ ವಿಶಿಷ್ಟಾದ್ವೈತ ಪೀಠದ ಗುರುಗಳಾಗಿ ಆಳ್ವಾರರ ನಂತರ ಪ್ರಬಂಧದ ಪ್ರಚಾರ, ಮತಸ್ಥಾಪನೆಯ ಗುರುತರ ಕಾರ್ಯ ಕೈಗೊಂಡರು. ಚೋಳರಾಜರ ಶಿವಭಕ್ತಿಯ ಉಪಟಳಕ್ಕೆ ಒಳಗಾಗಿ ಕರ್ನಾಟಕಕ್ಕೆ ಬಂದು ತಮ್ಮ ಕಾರ್ಯಕ್ಷೇತ್ರ ಮುಂದುವರಿಸಿದರು. ಹೊಯ್ಸಳ ವಿಷ್ಣುವರ್ಧನನ ಆಶ್ರಯದಲ್ಲಿ ತೊಂಡನೂರು–ಮೇಲುಕೋಟೆಯಲ್ಲಿ ನೆಲೆಯೂರಿ ಶ್ರೀವೈಷ್ಣವಧರ್ಮವನ್ನು ದಕ್ಷಿಣ ಭಾರತದಾದ್ಯಂತ ವಿಸ್ತರಿಸಿದರು. ತಿರುಪತಿ–ಕಂಚಿ–ಶ್ರೀರಂಗ–ಮೇಲುಕೋಟೆಗಳನ್ನು ಶ್ರೀವೈಷ್ಣವ ದಿವ್ಯ ಕ್ಷೇತ್ರಗಳಾಗಿ ಅಭಿವೃದ್ಧಿಪಡಿಸಿದರು. ತಮ್ಮ ನಂತರವೂ ಈ ಧರ್ಮ ಅನೂಚಾನವಾಗಿ ಬೆಳೆದುಕೊಂಡು ಹೋಗಲು ಪೀಠಗಳನ್ನು ಸ್ಥಾಪಿಸಿ ವಿಶಿಷ್ಟಾದ್ವೈತ ಮಠಗಳನ್ನು ಹುಟ್ಟುಹಾಕಿದರು.

ಶ್ರೀಭಾಷ್ಯ (ಭಗವದ್ಗೀತೆಯ ವ್ಯಾಖ್ಯಾನ) ರಹಸ್ಯತ್ರಯರ ಸಾರ (ವಿಶಿಷ್ಟಾದ್ವೈತ ತತ್ವದ ವ್ಯಾಖ್ಯಾನ) ಮುಂತಾದ ಪ್ರಮುಖ ಆಕರ ಗ್ರಂಥಗಳನ್ನು ತಾವೂರಚಿಸಿ ಶಿಷ್ಯರಿಂದಲೂ ಕೆಲವನ್ನು ಬರೆಸಿ ಶ್ರೀವೈಷ್ಣವ ಧರ್ಮವನ್ನು ಶಾಶ್ವತಗೊಳಿಸಿದ ಮತಾಚಾರ್ಯರು.

ಶರಭಂಗ ಮುನಿ

ಶ್ರೀರಾಮಾವತಾರ ಕಾಲದಲ್ಲಿ ವನವಾಸ ಕಾಲದಲ್ಲಿ ಕಾನನದಲ್ಲಿ ತಮ್ಮ ಆಶ್ರಮದ ಬಳಿಬಂದ (ಗೋದಾವರಿತೀರದ ದಂಡಕಾರಣ್ಯದಲ್ಲಿ) ಶ್ರೀರಾಮನನ್ನು ಸಂದರ್ಶಿಸಿ ಕೃತಾರ್ಥರಾಗಿ ದೇಹತ್ಯಾಗ ಮಾಡುತ್ತಾರೆ. ರಾಮನಿಂದ ಮೋಕ್ಷ ಪ್ರಾಪ್ತರಾದ ಮುನಿಗಳಾಗಿ ಉಲ್ಲೇಖಿತರಾಗಿದ್ದಾರೆ.

ವಿಪ್ರನಾರಾಯಣ

ತೊಂಡರಡಿಪ್ಪೊಡಿಯಾಳ್ವಾರ್ ಎಂಬ ಆಳ್ವಾರರಿಗಿರುವ ಹೆಸರು 'ಭಕ್ತಾಂಘ್ರಿರೇಣು ' ಎಂದೂ ಇವರನ್ನು ಗುರುತಿಸುತ್ತಾರೆ. ಪಾಂಡ್ಯ ದೇಶದ ಮಂಡುಗುಡಿಯಲ್ಲಿ ಜನಿಸಿದ ಈ ಬ್ರಾಹ್ಮಣೋತ್ತಮ ಶ್ರೀರಂಗದ ಬಳಿ ತಿರುಕ್ಕರೆಂಬನೂರ್ ಎಂಬ ಊರಿನಲ್ಲಿ ನೆಲೆನಿಂತು ಹೂವಿನ ತೋಟ ಮಾಡಿಕೊಂಡು ಹೂವಿನ ಕೈಂಕರ್ಯವನ್ನು ಶ್ರೀರಂಗನಾಥನಿಗೆ ಸಲ್ಲಿಸುತ್ತ ವೇದಗಳ

ಅಧ್ಯಯನದಲ್ಲಿ ನಿರತರಾಗಿ ಶುದ್ಧ ಬ್ರಹ್ಮಚರ್ಯ ವ್ರತನಿಷ್ಠರಾಗಿದ್ದರು. ಆ ಊರಿನ ವೇಶ್ಯೆ ದೇವದೇವಿಯೆಂಬವರಿಗೆ ಇವರ ಮೇಲೆ ಮೋಹವುಂಟಾದರೂ ಇವರ ದಿವ್ಯನಿರ್ಲಕ್ಷ್ಯಕ್ಕೆ ಹಟತೊಟ್ಟು ಒಲಿಸಿಕೊಳ್ಳಲು ನಿರ್ಧರಿಸಿ ಕಪಟವೈರಾಗ್ಯ ಪ್ರದರ್ಶಿಸಿ ಅವರ ಅನುಮತಿ ಪಡೆದು ಅವರಿಗೆ ತೋಟದಲ್ಲಿ ಸಹಾಯಕಿಯಾಗಿ ನಿಂತಳು. ಒಂದು ದಿನ ಮಳೆಯಲ್ಲಿ ಸಿಕ್ಕಿ ಅವರ ಮನೆಯಲ್ಲಿ ಉಳಿಯಬೇಕಾಗಿ ಬಂದಾಗ ಅವಳ ಸೌಂದರ್ಯಕ್ಕೆ ಮರುಳಾಗಿ ಮನೋನಿಗ್ರಹ ಸೋತು ಅವಳ ವಶವಾದರು. ಅಂದಿನಿಂದ ಭಗವಂತನ ಮೇಲಿನ ಪ್ರೇಮ ವೇಶ್ಯೆಯ ಕಡೆ ತಿರುಗಿತು. ಲೋಕನಿಂದನೆಗೂ ತಲೆಕೊಡಲಿಲ್ಲ. ಅದರೆ ದೇವದೇವಿಗೇ ಇವರ ಅಸ್ತಿಯೆಲ್ಲ ಕರಗಿ ಬರಿಗೈಯಿಂದಾಗಿ ಇವರಲ್ಲಿ ಬೇಸರವುಂಟಾಗಿ ಇವರನ್ನು ಅರಮನೆಯ ಚಿನ್ನದ ಬಟ್ಟಲು ಕದ್ದ ಅಪವಾದಕ್ಕೆ ಈಡುಮಾಡಿದಳು. ಈ ಪರಿಸ್ಥಿತಿಯಲ್ಲಿ ಪಶ್ಚಾತ್ತಾಪಕ್ಕೊಳಗಾದ ವಿಪ್ರನಾರಾಯಣರು ಮತ್ತೆ ತಮ್ಮ ಪ್ರೇಮವನ್ನು ದೇವರಲ್ಲಿ ಸ್ಥಿರಗೊಳಿಸಿದರು. ಭಾಗವತ ದಾಸರಾಗಿ ತಮ್ಮ ಪಾಪ ಕಳೆಯಲೆತ್ನಿಸಿ ಕೃಪೆಗೆ ಪಾತ್ರರಾದರು. ನಂತರ ದೇವದೇವಿಯೂ ಇವರ ಸಹವಾಸದ ಕಾರಣದಿಂದ ನಿಜವೈರಾಗ್ಯಕ್ಕೆ ಒಳಗಾಗಿ ಇವರ ನೆರಳಾಗಿ ಆಶ್ರಯಿಸಿದಳು. ಇವರು 'ತಿರುಮಾಲೆ' 'ತಿರುಪ್ಪಳ್ಳಿಯಳುಚ್ಚಿ' ಎಂಬ ಎರಡು ಕೃತಿಗಳನ್ನು ರಚಿಸಿ ಭಗವಂತನನ್ನು ಸ್ತುತಿಸಿದ್ದಾರೆ.

ವಿರಾದ

ತುಂಬುರನೆಂಬ ಗಂಧರ್ವ. ಕಶ್ಯಪ–ಅರಿಷ್ಟೆಯರ ಮಗ, ಕುಬೇರನ ಬಳಿಗೆ ಹೋಗಲಿದ್ದ ರಂಭೆ ಅಪ್ಸರೆಯರನ್ನು ಕೆಣಕಿದ ಕಾರಣದಿಂದ ಕುಬೇರನಿಂದ ರಾಕ್ಷಸನಾಗಿ ಹುಟ್ಟುವ ಶಾಪಕ್ಕೆ ಕಾರಣನಾಗಿದ್ದವನು. ನಂತರ ದಂಡಕಾರಣ್ಯದಲ್ಲಿ ಅರಣ್ಯವಾಸಿಗಳಾಗಿದ್ದು ಸೀತಾರಾಮಲಕ್ಷ್ಮಣರ ದರ್ಶನ ಪಡೆದು ಶಾಪವಿಮೋಚನೆ ಪಡೆದವನು. ರಾಮನಿಂದ ಹತನಾದ ರಾಕ್ಷಸನೆನಿಸಿದನು.

ವಿಶಿಷ್ಟಾದ್ವೈತ

ಶ್ರೀವೈಷ್ಣವ ಮತವು 'ಶ್ರೀವೈಷ್ಣವಸಿದ್ಧಾಂತ ' 'ರಾಮಾನುಜ ದರ್ಶನ ' 'ಭಗವದ್ರಾಮಾನುಜೀಯ' 'ಉಭಯ ವೇದಾಂತ' 'ಸವಿಶೇಷಾದ್ವೈತ' ಮುಂತಾದ ಹೆಸರುಗಳಲ್ಲಿ ಪ್ರಚಲಿತವಾಗಿರುವ ಧರ್ಮ. ವಿಶೇಷಣಗಳಿಂದ ಕೂಡಿದ ದ್ವೈತವಾಗಿರುವುದರಿಂದ ವಿಶಿಷ್ಟಾದ್ವೈತವೆನಿಸಿದೆ.

ಜಗತ್ ಸ್ವರೂಪಿಯಾದ ದೇವರನ್ನು 'ಪುರುಷ' 'ಬ್ರಹ್ಮ' ಎಂದು ಕರೆದು ಅವನಲ್ಲಿ 'ಚಿತ್' 'ಅಚಿತ್' ಎಂಬ ಎರಡು ವಿಶೇಷಣಗಳಿವೆ ಎಂದೂ ಈ ಎರಡೂ ಬೇರೆ ಬೇರೆಯಲ್ಲ ಒಂದೇ, ಪರಮಾತ್ಮನ ವಿನಾ ಬೇರೆವಸ್ತುವಿಲ್ಲ ಪರಮಾತ್ಮನೊಬ್ಬನೇ ಎಂದು ಪ್ರತಿಪಾದಿಸುವ ತತ್ವ. ' ಅದ್ವೈತವಾದರೆ ಈ ಎರಡೂ ಭಿನ್ನವಾದವುಗಳು ಪರಮಾತ್ಮ ಮತ್ತು ವಸ್ತುಗಳು ಬೇರೆ ಎಂದು ಪ್ರತಿಪಾದಿಸುವ ತತ್ವ ದ್ವೈತವೆನಿಸಿದೆ. ವಿಶಿಷ್ಟಾದ್ವೈತ ಈ ಚಿಂತನೆಯನ್ನೇ

ವಿಸ್ತರಿಸಿ ಚೇತನ ಅಚೇತನಗಳು ಪರಮಾತ್ಮನಿಗಿಂತ ಬೇರೆಯಾದರೂ ಅವು ಪರಮಾತ್ಮನಿಗೆ ಶರೀರವಾಗಿರತಕ್ಕವು, ವಿಶೇಷಣಗಳು, ಪರಮಾತ್ಮನಿಲ್ಲದೆ ಇವುಗಳು ಇಲ್ಲ. ಆದ್ದರಿಂದ ಈ ವಿಶೇಷಣಗಳಿಂದ ಕೂಡಿದ ಪರಮಾತ್ಮನೊಬ್ಬನೇ ದೈವ ಎಂದು ಅಂಗೀಕರಿಸಿರುವ ಮತವಾಗಿ ವಿಶಿಷ್ಟಾದ್ವೈತವೆನಿಸಿದೆ.

ಶಂಬರ

ಈ ಹೆಸರಿನ ರಾಕ್ಷಸನು ಇಂದ್ರನೊಂದಿಗೆ ಮಾಡುವ ಯುದ್ಧದಲ್ಲಿ ಇಂದ್ರನಿಗೆ ದಶರಥ ಸಹಾಯ ಮಾಡುತ್ತಾನೆಂದು ಉಲ್ಲೇಖವಿದೆ ದನುವಿನ ಮಗನಾದ ರಾಕ್ಷಸ ಎಂಬ ಇನ್ನೊಂದು ಉಲ್ಲೇಖವಿದ್ದ ಇವನು ಮಾಯಾವಿ. ಕೃಷ್ಣಪುತ್ರ ಪ್ರದ್ಯುಮ್ನನಿಂದ ವಧೆಯಾಗುತ್ತಾನೆ.

ಶಿಶುಪಾಲ

ಯದುವಂಶದ ದೊರೆ. ಇವನು ಹುಟ್ಟಿದಾಗ ನಾಲ್ಕು ಕೈಗಳು ಮೂರುಕಣ್ಣುಗಳಿದ್ದು ಯಾರು ಇವನನ್ನು ಸ್ಪರ್ಷಿಸಿದಾಗ ಹೆಚ್ಚಿನ ಅಂಗಗಳು ಕಳಚುತ್ತವೋ ಅವನೇ ಇವನ ಮೃತ್ಯುವಾಗುತ್ತಾನೆ ಎಂಬ ಆಶರೀರವಾಣಿ ಇರುತ್ತದೆ. ಇವರ ತಾಯಿ ಶ್ರೀಕೃಷ್ಣನ ಸೋದರತ್ತೆ ಶ್ರುತಶ್ರವೆಯಾಗಿದ್ದುದರಿಂದ ಒಮ್ಮೆ ಮನೆಗೆ ಬಂದಿದ್ದ ಕೃಷ್ಣ ಈ ಬಾಲಕನನ್ನು ಎತ್ತಿಕೊಳ್ಳಲಾಗಿ ಹೆಚ್ಚಿನ ಅಂಗಗಳು ಬೀಳುತ್ತವೆ. ಇದರಿಂದ ಹೆದರಿದ ತಾಯಿ ಮಗನನ್ನು ಉಳಿಸಿಕೊಳ್ಳಲು ಶ್ರೀಕೃಷ್ಣನನ್ನು ಪ್ರಾರ್ಥಿಸುತ್ತಾಳೆ. ಆಗ ಕೃಷ್ಣ ಇವನ ನೂರು ತಪ್ಪಿನವರೆಗೆ ಕ್ಷಮಿಸುವುದಾಗಿ ವಾಗ್ದಾನ ಮಾಡುತ್ತಾನೆ. ಪಾಂಡವರ ರಾಜಸೂಯ ಯಾಗಕಾಲದಲ್ಲಿ ಭೀಮನಿಂದ ಸೋತಿದ್ದ ಶಿಶುಪಾಲನೂ ಬಂದಿದ್ದು ಯಜ್ಞದ ಹವಿಸ್ಸನ್ನು ಕೃಷ್ಣನಿಗೆ ಅರ್ಪಿಸಲು ನಿರ್ಧರಿಸಿದಾಗ ಶಿಶುಪಾಲ ಪ್ರತಿಭಟಿಸಿ ಕೃಷ್ಣನನ್ನು ನಿಂದಿಸುತ್ತಾನೆ. ಆ ವೇಳೆಗೆ ನೂರು ತಪ್ಪು ದಾಟಿದ್ದ ಶಿಶುಪಾಲನನ್ನು ಕೃಷ್ಣ ತನ್ನ ಚಕ್ರಾಯುಧದಿಂದ ಸಂಹರಿಸುತ್ತಾನೆ.

ಶುಂಭ

ನಿಶುಂಭನೆಂಬ ರಾಕ್ಷಸನ ಅಣ್ಣ. ತಪಸ್ಸಿನಿಂದ ಬ್ರಹ್ಮನನ್ನು ಒಲಿಸಿಕೊಂಡು ಅಯೋನಿಜೆ ಕನ್ಯೆಯಿಂದಲ್ಲದೆ ಇತರರಿಂದ ಮರಣವಾಗಬಾರದೆಂಬ ವರ ಪಡೆದು ದೇವತೆಗಳನ್ನು ಪೀಡಿಸುತ್ತಿರುತ್ತಾನೆ. ದೇವತೆಗಳು ಆದಿಶಕ್ತಿಗೆ ಮೊರೆಹೋಗಲು ಆಕೆ ಕಾಶಿಕ ಎಂಬ ಕನ್ಯೆಯನ್ನು ಸೃಷ್ಟಿಸಿಬಿಡಲು ಆಕೆಯ ರೂಪಕ್ಕೆ ಮರುಳಾದ ಶುಂಭನಿಶುಂಭರು ಆಕೆಯನ್ನು ಮೋಹಿಸಲು ತನ್ನನ್ನು ಗೆದ್ದವರನ್ನು ಮಾತ್ರ ವರಿಸುವುದಾಗಿ ಹೇಳಿದ ಅವಳ ಪಂಥಕ್ಕೆ ಇಬ್ಬರೂ ಸೈನಿಕರೊಂದಿಗೆ ಹೋರಾಡಿ ಮಡಿಯುವರು.

ಸತ್ರಾಜಿತ

ಯದುವಂಶದ ಒಬ್ಬರಾಜ, ಸೂರ್ಯನಿಂದ ಅಪರೂಪದ ಶ್ಯಮಂತಮಣಿಯನ್ನು ಪಡೆದಿದ್ದ. ಇದನ್ನು ಧರಿಸಿದವರಿಗೆ ಇದರ ತೂಕದ ಎಂಟುಪಟ್ಟು ಚಿನ್ನವನ್ನು ಇದು ಕೊಡುತ್ತಿತ್ತಲ್ಲದೆ ಇದನ್ನು ಅಶುಚಿಯಾಗಿದ್ದಾಗ ಧರಿಸಿದರೆ ಅಂಥವರನ್ನು ಕೊಲ್ಲುವ ಶಕ್ತಿ ಇದಕ್ಕಿತ್ತು.

ಕೃಷ್ಣನು ಈ ರತ್ನವನ್ನು ಉಗ್ರಸೇನನಿಗೆ ಕೋಡಬೇಕೆಂದೂ ಆತನೇ ಇದಕ್ಕೆ ಯೋಗ್ಯನೆಂದೂ ಸತ್ರಾಜಿತನಿಗೆ ಹೇಳಿದ್ದನಾದರೂ ಆತ ತನ್ನ ತಮ್ಮನಿಗೆ ಕೊಟ್ಟಿದ್ದನು. ತಮ್ಮ ಪ್ರಸೇನಜಿತ್ತನು ಬೇಟೆಗೆ ಹೋಗಿದ್ದಾಗ ಸಿಂಹವೊಂದರಿಂದ ಹತನಾಗಿ ಜಾಂಬವಂತನಿಗೆ ಆ ಹಾರ ದೊರಕಿ ಮಗಳು ಜಾಂಬುವತಿಯ ಬಳಿಯಿತ್ತು.

ಪ್ರಸೇನನು ಬೇಟೆಯಿಂದ ಹಿಂತಿರುಗದಿರಲು ಕೃಷ್ಣನೇ ಅವನನ್ನು ಕೊಂದು ಶ್ಯಮಂತಕಮಣಿಯನ್ನು ಅಪಹರಿಸಿದ್ದಾನೆಂದು ಸತ್ರಾಜಿತನು ದೂರುತ್ತಾನೆ. ಕೃಷ್ಣ ನಿರಪರಾಧಿ ಎಂದು ತಿಳಿದ ಮೇಲೆ ತನ್ನ ಮಗಳು ಸತ್ಯಭಾಮೆಯನ್ನು ಕೃಷ್ಣನಿಗೆ ಕೊಟ್ಟು ಸತ್ರಾಜಿತ ಬಂಧುವಾಗುತ್ತಾನೆ.

ಮುಂದೆ ಶತಧನ್ವನು ಸತ್ರಾಜಿತನನ್ನು ಕೊಂದು ಶಮಂಕತಮಣಿಯುನ್ನು ಅಪಹರಿಸಿದ್ದರಿಂದ ಕೃಷ್ಣ ಬಲರಾಮರು ಅವನನ್ನು ಬೆನ್ನಟ್ಟಲು ಶತಧನ್ವನು ಅಕ್ರೂರನ ಆಶ್ರಯ ಬೇಡಿದಾಗ ಅಕ್ರೂರ ನಿರಾಕರಿಸುತ್ತಾನೆ. ಅಕ್ರೂರ ಕೃಷ್ಣನಿಗೆ ನೆರವಾದ್ದರಿಂದ ಕೃಷ್ಣ ಶತಧನ್ವನ ಸಂಹಾರ ಮಾಡಿ ಆ ಮಣಿಯನ್ನು ಪಡೆದು ಅಕ್ರೂರನಿಗೇ ಕೊಟ್ಟು ಅಕ್ರೂರವರದನಾಗುತ್ತಾನೆ.

ಹನುಮಂತ

ಶ್ರೀವೈಷ್ಣವ ಭಾಗವತದಲ್ಲಿ 'ಕಿರಿಯ ತಿರುವಡಿ' ಎಂದು ಪ್ರಚಲಿತನಾಗಿರುವ ಭಾಗವತ ಭಕ್ತ, ಶ್ರೀರಾಮಭಂಟನಾಗಿ ವಾಹನನಾಗಿ ಭಕ್ತಾಗ್ರೇಸರ ಎನಿಸಿಕೊಂಡಿದ್ದಾನೆ. ರಾಮಾವತಾರದಲ್ಲಿ ಶ್ರೀರಾಮನಿಗೆ ಸಹಾಯ ಮಾಡಿದ ಅನೇಕ ಪ್ರಸಂಗಗಳ ಮೂಲಕ ಇವನ ಉಲ್ಲೇಖ ಬರುತ್ತದೆ. ದ್ವೈತ ಸಂಪ್ರದಾಯದಲ್ಲಿ ಇವನನ್ನು ಪ್ರಾಣದೇವರು ಎಂದು ಗುರುತಿಸಿದೆಯಾದರೂ ವಿಶಿಷ್ಟಾದ್ವೈತ ಸಂಪ್ರದಾಯದಲ್ಲಿ ಆ ಹೆಸರಿನ ಉಲ್ಲೇಖವಿಲ್ಲ. ಇವನನ್ನು ಪರಮ ಭಾಗವತ ಭಕ್ತನನ್ನಾಗಿ ಕಲ್ಪಿಸಿ ಸ್ಮರಣೆ–ಸ್ತುತಿ–ಆರಾಧನೆಗಳಲ್ಲಿ ಪ್ರಧಾನವಾಗಿ ಪರಿಗಣಿಸಿದ್ದರೂ ಹನುಮಂತ ಅಥವ ಅದಕ್ಕೆ ಪರ್ಯಾಯವಾದ ಮಾರುತಿ, ಆಂಜನೇಯ, ಪವನಸುತ, ವಾಯುಪುತ್ರ ಇತ್ಯಾದಿ ಯಾವುದೇ ಹೆಸರನ್ನು ಶ್ರೀವೈಷ್ಣವ ಮತೀಯರು ತಮ್ಮ ಹೆಸರುಗಳಲ್ಲಿ ಬಳಸುತ್ತಿಲ್ಲ ಎಂಬುದೊಂದು ವಿಶೇಷ ಅಂಶವಾಗಿದೆ. (ಇತರೆ ವಾಹನ ದೇವತೆಗಳಾದ ಶೇಷ (ಸರ್ಪ) ಗರುಡನ ಹೆಸರುಗಳು ಬಳಕೆಯಲ್ಲಿವೆ).

ಅನುಬಂಧ – ೪

ಅಂಕಿತಪದ ಸೂಚಿ

ನಂದಿ
ನರಕ
ನರಕೇಸರಿ
ನರಹರಿ
ನಾರದ ೨೪೪೪
ನಾರಾಯಣ
ನಾವಿಕ
ನಿಶಾಚರಾಳಿಕುಲಿ
ನೀಲಕಂಠ
ಪರ್ತಿ–ಪತ್ರಿ(ಪುಟ್ಟಪರ್ತಿ)
ಪದ್ಮನಾಭ
ಪರಮೇಶ್ವರ
ಪರಮೇಶ್ವರಿ
ಪರವಾಸುದೇವ (ವಿಷ್ಣು)
ಪರಶಿವ
ಪರಾತ್ಪರ
ಪರಿಮಳಾಚಾರ್ಯ
ಪವನ
ಪವನಾತ್ಮಜ–ಸುತ
ಪಾಂಚಜನ್ಯ
ಪಾಂಚಾಲಿ
ಪಾಂಡವ
ಪಾಂಡುರಂಗ
ಪಾರ್ಥ
ಪಾರ್ಥಸೂತ
ಪಾರ್ಥಸಾರಥಿ
ಪಾರ್ವತಿ
ಪುಂಡರೀಕ
ಪಿನಾಕಿ
ಪುರಂದರ
ಪುರುಹೂತ
ಪೂತನಿ

ಪೊಡವಿದೇವಿ
ಪ್ರಶಾಂತನಿಲಯ
ಪ್ರಹ್ಲಾದ
ಫಣಿ
ಫಲ್ಗುಣ
ಫಾಲಾಕ್ಷ
ಬಕ
ಬಲಭದ್ರ–ರಾಮ
ಬಲಿ
ಬೀರಪ್ಪ
ಬುದ್ಧ
ಬೃಂದಾವನ
ಬೃಂದೆ
ಬೇಲೂರ ಚೆನ್ನಿಗ
ಬೊಮ್ಮಪ್ಪ
ಭಟ್ಟರು
ಭದ್ರೆ
ಭರತ
ಭವಾನಿ
ಭಸ್ಮಾಸುರ
ಭುವನೇಶ್ವರ
ಭಾಗವತ
ಭಾಗೀರಥಿ
ಭಾಸ್ಕರ
ಭಾಮಾ
ಭೀಮಾ
ಭೀಷ್ಮ
ಭೈರವಿ
ಭೋರಪ್ಪ
ಮಂತ್ರನಿಲಯ
ಮಂತ್ರಾಲಯ
ಮಂದರಗಿರಿ

ಶ್ರೀಶೈಲ
ಷಣ್ಮುಖ
ಸಂಕರ್ಷಣ
ಸಂಪಾತಿ
ಸತ್ಯಸಾಯಿಬಾಬ
ಸತ್ರಾಜಿತ
ಸತ್ಯಸಾಯೀಶ್ವರ
ಸದಾಶಿವ
ಸನಕ ಸನಂದನ
ಸರಸ್ವತಿ
ಸಾಂಬಶಿವ
ಸಾಕೇತ
ಸಾಕೇಶ್ವರ
ಸಾವನದುರ್ಗ
ಸೀತಾ
ಸೀತಾರಾಮ
ಸುಗ್ರೀವ
ಸುಬ್ರಹ್ಮಣ್ಯ
ಸೂರಿದಾಸ
(ಕವಿ, ಆಸೂರಿ, ರಾಮಸ್ವಾಮಿ ಅಯ್ಯಂಗಾರ್)
ಸೂಕರ (ವರಾಹ)
ಸೋಮಶೇಖರ
ಸೌಮಿತ್ರಿ
ಸ್ಮರ
ಹಂಪಿ
ಹನುಮ ೨೪೪
ಹನುಮಂತ
ಹನುಮಾನ್
ಹರ
ಹರಿ
ಹರಿಹರ
ಹಲಾಂಕ–ಹಲಧರ (ಪರಶುರಾಮ)
ಹಿಮಗಿರಿ
ಹಿರಣ್ಯಕ (ಹಿರಣ್ಯಾಕ್ಷ)
ಹಿರಣ್ಯಕಶಿಪು
ಹೇಮಾದ್ರಿ
ಹೈಮವತಿ

ಅನುಬಂಧ - ೫

ವಿಶಿಷ್ಟ ಪದ ಸೂಚಿ

ಅಗರು
ಅವಲಕ್ಕಿ
ಅಳಿಯ, ಸೊಸೆ
ಅಷ್ಟಾಕ್ಷರಿ
ಆಂಡಾಳ್
ಆಗಮ
ಆಲದೆಲೆ
ಎಣ್ಣೆ
ಏಕಾದಶಿ
ಏಲಕ್ಕಿ
ಒಬ್ಬಿಟ್ಟು
ಒರಳು
ಔಷಧ
ಕರ್ಮಯೋಗ
ಕಾಯಿ
ಕುಡಗೋಲು
ಕೊಂಬು (ವಾದ್ಯ)
ಕುರಿ
ಕೊಡಲಿ
ಕೊಡೆ
ಕೋಣ
ಕೌಸ್ತುಭಮಣಿ
ಗುಂಡು
ಗೋದಾ
ಗೋಕ್ಷೀರ
ಜನಿವಾರ
ಜ್ಞಾನಯೋಗ
ತಾರಕನಾಮ
ತಾಳಮೇಳ
ತಿರುನಾರಾಯಣ
ತಿರುನಾಮದವರು (ಶ್ರೀವೈಷ್ಣವರು)
ತಿರುಮಣಿ
ತೊಂಡರಡಿಪ್ಪೊಡಿ ಆಳ್ವಾರ್
ದಾಸರ ಪದಗಳು
ದೋಸೆ
ದ್ವ್ಯಕ್ಷರಿ
ದ್ವಾದಶನಾಮ
ದ್ವೈತ
ಧ್ಯಾನಮಂಟಪ
(ಶರೀರ, ದೇಹ, ಮನಸ್ಸು)
ನವನೀತ
ನಾಟ್ಯನರ್ತನ
ನಾಗಮಾಗಮ
ನೈವೇದ್ಯ
ಪಂಗನಾಮ
ಪಂಚಾಕ್ಷರಿ
ಪಾಂಚರಾತ್ರ
ಪಾಮಾಲೆ–ತಿರುಪ್ಪಾವೈ
ಪೊಂಗಲು (ನೈವೇದ್ಯ)
ಪ್ರಬಂಧ

(ಆಳ್ವಾರರ ಕೃತಿಗಳು, ಮಂತ್ರಗಳು)
ಪಾಡ್ಯದ ಹಬ್ಬ
ಪ್ರಾಣಾಯಾಮ
ಪೂದತ್ತ (ಆಳ್ವಾರ್)
ಬಾಗಿಲು
ಬಿಲ್ಲುಹಬ್ಬ (ಬೀರಪ್ಪ)
ಬೆಣ್ಣೆ
ಬೇವು-ಮಾವು
ಭಕ್ತಿಯೋಗ
ಮಂತ್ರ
ಮಂತ್ರಿ
ಮಹೀಸುರ
ಮಾತ್ರೆ
ಮಾರ (ಮನ್ಮಥ)
ಮೀನು
ಮುಮುಕ್ಷು
ಮೂಲತತ್ವ (ರಹಸ್ಯತ್ರಯಸಾರ)
ಮೂಲತಂತ್ರ
ಯಂತ್ರ
ಯಂತ್ರಿ
ಯೋಗ
ಯೋಗದ ಪೂಜೆ
ರತ್ನ
ರಹಸ್ಯತತ್ವಾರ್ಥ
ರಾಗಿ
ರಾಜಯೋಗ
ರಾಮತಾರಕ
ರಾಮಾಯಣ
ರಾಸಕ್ರೀಡೆ
ಲಿಂಗ
ವಟಪತ್ರ (ಆಲದೆಲೆ)
ವಾಸ್ತು
ವಿಮಾನ
ವೈಷ್ಣವ
ಶಂಖಚಕ್ರ
ಶರಣಾಗತಿ
ಶ್ರೀಕಾರ
ಶ್ರೀಪಾದ
ಶ್ರೀಪ್ರಬಂಧ
ಸಂಗೀತ
ಸಕ್ಕರೆ
ಸಕ್ಕರೆ ಮಿಠಾಯಿ
ಸಾಹಿತ್ಯ
ಸುಜ್ಞಾನಚಿತ್ತು
ಹಟಯೋಗ
ಹರಿಪಾದತೀರ್ಥ (ಶ್ರೀಪಾದತೀರ್ಥ)
ಹಾರುವ (ಬ್ರಾಹ್ಮಣ)
ಹುರ್ಜಿ(ಬಟ್ಟೆಯ ತೇರು, ಕೂರ್ಜು)

ಅನುಬಂಧ – ೬

ಸಂಖ್ಯಾಪದ ಸೂಚಿ

ಅರಿಷಡ್ವರ್ಗ	:	ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ
ಆಕಾರ ಎರಡು	:	ಮಹಾಲಕ್ಷ್ಮಿ–ವಿಷ್ಣು
ಅರುಮಂತ್ರಿ	:	ಅರಿಷಡ್ವರ್ಗ
ಆರುದಿನಬಾಳು	:	ಅಲ್ಪಬಾಳು
ಈರೈದವತಾರ	:	ಎರಡು+ಐದು=ಹತ್ತು (ದಶಾವತಾರ)
ಈರೈದು ಮುನಿವರರು	:	೧.ಪಂಚೇಂದ್ರಿಯ ೨. ಪಂಚಮಹಾಪಾತಕ
ಎನಗೆತನಗೆಂದಿಬ್ಬರು	:	ತನು, ಧನ
ಎರಡುಕಂಬ	:	ಕಾಲುಗಳು
ಐದರಿಮ್ಮಡಿ	:	೧.ಪಂಚೇಂದ್ರಿಯ ೨. ಪಂಚಮಹಾಪಾತಕ (ಬ್ರಹ್ಮಹತ್ಯೆ, ಸುರಾಪಾನ, ಹಣಗಳಿಕೆ, ಕಳ್ಳತನ, ಪರನಾರೀ ಸಹವಾಸ)
ಐದು ಬಿಳಲು	:	ಪಂಚೇಂದ್ರಿಯ
ಐದುಗೆಳೆಯರು	:	ಪಂಚೇಂದ್ರಿಯ
ಒಂದಿಲ್ಲದಮೇಲೆರಡುಂಟೆ	:	ಒಂದು–ಭಕ್ತಿ, ಎರಡು–ಶ್ರೀಲಕ್ಷ್ಮೀ ಮತ್ತು ಶ್ರೀಮಹಾವಿಷ್ಣು
ಒಡಲೆರಡು ಅಸುವೊಂದು	:	ರಾಧಾಕೃಷ್ಣ ಶರಣಾಗತಿ ತತ್ವದ ಉತ್ಕೃಷ್ಟ ಸ್ಥಿತಿ, ಜೀವ–ಪರಮಾತ್ಮ ಒಂದೇ ಆಗುವ ಭಕ್ತಿಯ ಸಾಯುಜ್ಯ ಪದವಿ
ಕರಿಯಮ್ಮೆಯವನೊಬ್ಬ	:	ಚತುರ್ವರ್ಗದಲ್ಲಿ ಒಂದು – ಲೋಭ ಪರಿವಾರತೋರುವವ – ಮೋಹ, ಸನ್ನೆ ಮಾಡುತಿಬ್ಬರು – ಮದ, ಮತ್ಸರ
ಕೊಂಬೆಗಳೆಂಟು	:	ಅಷ್ಟಮದ (ಧನ, ಕುಲ, ವಿದ್ಯಾ, ರೂಪ, ಯೌವನ, ಬಲ, ಪರಿವಾರ, ಅಧಿಕಾರ)

ಕೊನೆ ಮೂರು	:	ತಾಪತ್ರಯ
ಘನಮೌನಿಯಂತೊಬ್ಬ	:	ಮನಸ್ಸು
ತ್ರಿಕಾಲ	:	ಪ್ರಾತಃ, ಮಧ್ಯಾಹ್ನ, ಸಂಧ್ಯಾ
ತ್ರಿಗುಣ	:	ಸೃಷ್ಟಿ–ಸ್ಥಿತಿ–ಲಯ
ತ್ರಿಲೋಕ	:	ಮೂರು ಲೋಕಗಳು: ಭೂಲೋಕ, ಅಂತರಿಕ್ಷ ಲೋಕ, ದ್ಯುಲೋಕ
ನಾಲ್ಕು ಮಕ್ಕಳು	:	ಚತುರ್ವೇದಗಳು
ನೂರಾರು ಕೈಯವ	:	ನರಕಾಸುರನ ಸಂಹಾರ ಸಂದರ್ಭದಲ್ಲಿ ಪಾಶಗಳನ್ನು ನಿರ್ಮಿಸಿ ಅಡ್ಡಿಪಡಿಸುತ್ತಿದ್ದ ಮುರಾಸುರ(?)
ನೂರುಮಂದಿ	:	ಕೌರವರು
ನೂರು ಯೋಜನ	:	ಹೆಚ್ಚು ದೂರ
ನೂರುಸಾಸಿರಜನರು	:	ನರಕಾಸುರನಿಂದ ಬಿಡಿಸಿದ ಕನ್ಯೆಯರು
ನೂರೆಂಟು	:	ರೂಢಿಮಾತು, ಲೋಕದ ಜನರು, ಉದರ ಪೋಷಣೆಗಾಗಿ ತೋರುವ ವ್ಯಕ್ತಿತ್ವಗಳು, 'ದಶಾವತಾರದಂತಹದಂತೆ ನೂರೆಂಟವತಾರ', ನುಡಿಗಟ್ಟಾಗಿ ಬಳಕೆಯಾಗಿದೆ.
ನೂರೆಂಟು ಕನ್ಯೆಯರು	:	ಗೋಪಿಕೆಯರು
ನೂರೆಂಟು ತಿರುಪತಿ	:	ಶ್ರೀವೈಷ್ಣವ ದಿವ್ಯಕ್ಷೇತ್ರಗಳು–ಶ್ರೀರಂಗ, ಕಂಚಿ, ತಿರುಪತಿ, ಮೇಲುಕೋಟೆ ಈ ಮುಖ್ಯ ನಾಲ್ಕು ಕ್ಷೇತ್ರಗಳನ್ನು ಒಳಗೊಂಡಿರುವ ಚೋಳನಾಡು 'ತಿರುಪತಿಗಳು ೪೦, ಪಾಂಡ್ಯನಾಡು ತಿರುಪತಿಗಳು ೧೮, ಮಲೆನಾಡು ತಿರುಪತಿಗಳು ೧೩ ನಡುನಾಡು ತಿರುಪತಿಗಳು ೨ ತೆಂಕನಾಡು ತಿರುಪತಿಗಳು ೨೨, ವಡನಾಡು ತಿರುಪತಿಗಳು ೧೨ (ಇವೆಲ್ಲ ತಮಿಳು ನಾಡಿನಲ್ಲಿವೆ, ಆಂಧ್ರದಲ್ಲಿ ಕೆಲವಿವೆ)
ಪಂಚೇಂದ್ರಿಯ	:	ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ
ಪಂಚಭೂತಗಳು	:	ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ
ಪರೆವಿಳು	:	ಸಪ್ತಧಾತುಗಳು (ರಸ, ರಕ್ತ, ಮಾಂಸ, ಮೇಧಸ್ಸು, ಮಜ್ಜೆ, ಅಸ್ತಿ, ಶುಕ್ಲ)
ಪಕ್ಷಿಯೊಂದು	:	ಶ್ರೀಮನ್ನಾರಾಯಣ

ಫಲವೆರಡು : ಪಾಪ, ಪುಣ್ಯ
ಬಾಲರಿಬ್ಬರು : ಧ್ರುವ, ಪ್ರಹ್ಲಾದ
ಬೇರುಗಳು ಮೂರು : ತ್ರಿಕರಣ (ತನು, ಮನ, ಧನ)
ಮದವೆಂಟು : ಅಷ್ಟಮದ (ಧನ, ಕುಲ, ವಿದ್ಯಾ, ರೂಪ, ಯೌವನ, ಬಲ, ಪರಿವಾರ, ಅಧಿಕಾರ)
ಮೂವತ್ತು ಮೂರು ಕೋಟಿ : ದೇವತೆಗಳು, ಮೂವತ್ತಮೂರು ಮುಖ್ಯ ದೇವತೆಗಳು ಮತ್ತು ಅವರ ಪರಿವಾರ ಭೂಲೋಕ, ಅಂತರ್ಲೋಕ, ದ್ಯುಲೋಕ ಎಂದು ವಿಶ್ವವನ್ನು ಮೂರಾಗಿಸಿ ಅನುಕ್ರಮವಾಗಿ ಅಗ್ನಿ, ಇಂದ್ರ, ಸೂರ್ಯರನ್ನು ನಾಯಕರನ್ನಾಗಿಸಿ ಒಂದೊಂದು ಲೋಕಕ್ಕೂ ಹನ್ನೊಂದು ಮುಖ್ಯ ದೇವತೆಗಳನ್ನು ಕಲ್ಪಿಸಿ ಅವರ ಒಟ್ಟು ಸಂಖ್ಯೆ ಮೂವತ್ತಮೂರು ಎಂದಿದೆ. (ಹನ್ನೊಂದು ರುದ್ರರು, ಹನ್ನೆರೆಡು ಆದಿತ್ಯರು, ಎಂಟು ವಸುಗಳು, ದ್ಯು, ಪೃಥಿವೀ) ಈ ಒಬ್ಬೊಬ್ಬರಿಗೂ ಒಂದೊಂದು ಕೋಟಿ ಪರಿವಾರ ದೇವತೆಗಳ ಸಂಖ್ಯೆಯಿದೆ.
ಮೂರುಮುಮ್ಮಡಿ : ತಾಪತ್ರಯ
ತ್ರಿದೋಷ (ಕಫ, ವಾತ, ಪಿತ್ಥ)
ತ್ರಿವರ್ಗ (ಧರ್ಮ, ಅರ್ಥ, ಕಾಮ)
ಮೂರಂಗ : ತ್ರಿಕರಣ (ಮಾತು, ಕೃತಿ, ಮನಸ್ಸು)
ಮೂರುದುರ್ಗ : ತಾಪತ್ರಯುಗಳು ಆಧ್ಯಾತ್ಮಿಕ (ದೇಹಬಾದೆ), ಆಧಿಭೌತಿಕ (ದುರ್ಜನಬಾಧೆ), ಆಧಿದೈವಿಕ (ಪ್ರಕೃತಿವಿಕೋಪಬಾಧೆ)
ಮೂರು ಮತ್ತೆರಡಶ್ವ : ಪಂಚೇಂದ್ರಿಯ
ಮೂರುರೂಪ : ಮತ್ಸ್ಯ, ಕೂರ್ಮ, ವರಾಹ
ಮೂರುಹರಿದಾರಿ : ಕಡಮೆದೂರ
ಮೂರು ಹೊನ್ನು : ಬಡವರ ಕಡಿಮೆವೆಚ್ಚ
ಷಡ್ರಸಗಳು : ಸಿಹಿ, ಹುಳಿ, ಉಪ್ಪು, ಕಾರ, ಒಗರು, ಕಹಿ
ಮೂರೆರಡು ಮೂರೇಳವತಾರ : ಮೂರು+ಏಳು=ಹತ್ತು (ದಶಾವತಾರ)

ರಸವುನಾಲ್ಕು	: ಚತುರ್ವರ್ಗ ಧರ್ಮ, ಅರ್ಥ, ಕಾಮ, ಮೋಕ್ಷ
ಲಕ್ಷಜನ್ಮ	: ಜನ್ಮಾಂತರಕಲ್ಪನೆ
ಲಕ್ಷಜೀವಿ ೨೩೧	: ಜನ್ಮಾಂತರಕಲ್ಪನೆ
ವೀರರೈವರು	: ಪಾಂಡವರು
ಷಡಾನನ	: ಸುಬ್ರಹ್ಮಣ್ಯ
ಷಡ್ಗುಣ	: ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ, ತೇಜಸ್ಸು
ಷಣ್ಮುಖ	: ಸುಬ್ರಹ್ಮಣ್ಯ
ಶತಪತ್ರ	: ತಾವರೆ
ಸಾವಿರನಾಮನು	: ವಿಷ್ಣು
ಸಾಸಿರನಾಮ – ನೇತ್ರ–ಗಾತ್ರ	: ವಿಷ್ಣು
ಹದಿನಾರು ಸಾವಿರ ಸುದತಿ	
ಮಣಿಯರು, ಸವತಿಯರು	: ಶ್ರೀಕೃಷ್ಣನ ಹೆಂಡತಿಯರು
ಹದಿನೆಂಟು ಸಾವಿರ ಉದರ	: ಜನ್ಮಾಂತರಕಲ್ಪನೆ

ಅನುಬಂಧ–೭

ಕೀರ್ತನೆಗಳ ಅಕಾರಾದಿ

ಕ್ರಮ ಸಂಖ್ಯೆ	ಕೀರ್ತನೆಯ ಮೊದಲಸಾಲು	ಕೀರ್ತನೆ ಸಂಖ್ಯೆ
೧.	ಅಂದವ ಜರೆವರಾರು ರಂಗ ನಿನ್ನ	೫೩
೨.	ಅಂಬಾ ಮನೋನಾಯಕಾ	೧೭೯
೩.	ಅಕ್ಕಾ ಚಿಕ್ಕಮಕ್ಕಳನಡುವೆ ನಕ್ಕು ನಲಿವ ಬಾಲ ಇವನಾರೆ	೨೯೮
೪.	ಅಕ್ಷಯಾತ್ಮ ಹರಿ ಜೈ ಜೈ ರಂಗ	೧೩೮
೫.	ಅದೋ ಬರುವ ರಂಗ ಅದೋ ಬರುವ	೯೭
೬.	ಅನಂತ ಮಾಧವ ಗೋವಿಂದಾ ಹರೆ	೪೧
೭.	ಅನಿಲಜ ಸನ್ನುತ ವನಜಭವಾನುತ	೨೦೦
೮.	ಅನುಭವಿಸುವುದೆನ್ನದೇ ನೀನಿತ್ತುದ	೨೦೧
೯.	ಅಪರೋಕ್ಷ ಜ್ಞಾನ ಸಂಚಯೇ	೧೪೫
೧೦.	ಅಮ್ಮ ನೀನಾದರೂ ನಮ್ಮಯ್ಯಗುಸಿರದೆ ಸುಮ್ಮನಿಹುದು	೨೧೨
೧೧.	ಅರವಿಂದ ನೇತ್ರಾನಂದ ಗೋವಿಂದಾ	೫೫
೧೨.	ಅಲ್ಲಿ ಇಲ್ಲಿ ಮೊಸರನು ಚೆಲ್ಲಿ	೨೯೯
೧೩.	ಅಹುದೋ ದೇವ ನೀ ದಯಯುತನೆಂಬುದು	೨೧೩
೧೪.	ಅಳುವವರಿಲ್ಲದ ಜಗವಿಲ್ಲ	೩೩೫
೧೫.	ಆಡುವ ಬಾರೊ ಕೃಷ್ಣ ಓಡಿ ಬಾರೋ	೩೦೦
೧೬.	ಆದಿದೇವ ಕರುಣ ಕಾರಣ	೩೦
೧೭.	ಆದಿದೇವ ನಿನ್ನೊಲುಮೆಯೊಂದಾದರೆ	೩೬೨
೧೮.	ಆನಂದ ಗಂಭೀರ ನೀಲಾಂಗ ರಂಗ	೯೮
೧೯.	ಆನಂದ ಚಂದಿರನೇ ದಾಸನನೇಕಿಂತು ಮರೆವೆ	೨೬

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು